ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ ಆನಂದರಾಮಾಯಣಂ

ಆರನೆಯ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಮನೋಹರಕಾಂಡಃ (ಉತ್ತರಾರ್ಧಃ)

(೧—೯ ಸರ್ಗಗಳು)

ಅನುವಾದಕ :

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ,

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸ್)

ಶ್ರೀ ಹನುಮಾನ್ ಪವರ್ ಪ್ರೆಸ್, ಮೈಸೂರು.

೧೯[illegible]೦

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೪೨



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀ
ಆನಂದರಾಮಾಯಣಂ

ಆರನೆಯ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಮನೋಹರಕಾಂಡಃ (ಉತ್ತರಾರ್ಧಃ)

(೧—೯ ಸರ್ಗಗಳು)

ಅನುವಾದಕ :

ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ,

ಸಾಹಿತ್ಯ ವಿದ್ವಾನ್

ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸ್)

ಶ್ರೀ ಹನುಮಾರ್ನ ಪವರ್ ಪ್ರೆಸ್, ಮೈಸೂರು.

೧೯೫೦

॥ ಶ್ರೀರಸ್ತು ॥

ಮುನ್ನುಡಿ

ಕ್ರಮವಾಗಿ ಪ್ರಕಟವಾಗುತ್ತಿರುವ ಆನಂದರಾಮಾಯಣದಲ್ಲಿ ಇದು ಆರನೆಯ ಭಾಗವಾಗಿರುವುದು. ಇದರಲ್ಲಿ ಮನೋಹರ ಕಾಂಡದ ಒಂಭತ್ತು ಸರ್ಗಗಳು ಮಾತ್ರ ಅಡಕವಾಗಿವೆ. ಈ ಮನೋಹರ ಕಾಂಡದಲ್ಲಿ ಹದಿನೆಂಟು ಸರ್ಗಗಳಿರುವುದರಿಂದ ಎಲ್ಲ ಸರ್ಗಗಳನ್ನೂ ಒಂದುಗೂಡಿಸಿದ ಪುಸ್ತಕವನ್ನಾಗಿ ಮಾಡಿದರೆ ಓದುಗರಿಗೆ ಪುಸ್ತಕವು ದೊಡ್ಡದಾದೀತೆಂಬ ಆಶಯದಿಂದ ಬೇರ್ಪಡಿಸಲಾಗಿದೆ.

ಒಂಭತ್ತು ಸರ್ಗಗಳು ಅಡಕವಾಗಿರುವ ಈ ಪುಸ್ತಕದಲ್ಲಿ ಸಂಗ್ರಹ ರಾಮಾಯಣವು ರಾಮಾಯಣ ಪಾರಾಯಣ ಮಾಡುವವರಿಗೆ ಸುಲಭ ರೀತಿಯಲ್ಲಿ ಉಕ್ತವಾಗಿದೆ.

ಶ್ರೀರಾಮನು ಧರ್ಮವನ್ನೂ ಔಚಿತ್ಯವನ್ನೂ ಮೀರದೆ ಪ್ರಜೆಗಳಿಗೂ ತಾಯಂದಿರಿಗೂ ಮಾಡಿರುವ ಮೋಕ್ಷೋಪಯೋಗಿಯಾದ ಉಪದೇಶವು ಜನಗಳಿಗೆ ನೀತಿಬೋಧಕವಾಗಿರುವುದಲ್ಲದೆ ಯುಕ್ತಿಯುಕ್ತವಾಗಿದೆ. ಇಲ್ಲಿ ವಿವರಿಸಿರುವ ರಾಮ ಕೈಕೇಯಿಯರ ಭಾಷಣವನ್ನು ನೋಡಿದರೆ ಕೈಕೇಯಿಯು ದುಷ್ಟಳು ಎಂಬ ಲೋಕಾಪವಾದವು ನಿರಾಧಾರವಾದುದು. ಅಲ್ಲದೆ ಪಾಮರರ ಪವಾಡವೆಂಬುದು ವ್ಯಕ್ತವಾಗದೆ ಇರಲಾರದು.

ಶ್ರೀರಾಮನಿಗೆ ಲಘುಪೂಜೆ ಮಹಾಪೂಜೆಗಳೆಂಬ ಎರಡು ರೀತಿಯ ಪೂಜೆಗಳನ್ನು ವಿವರಿಸುತ್ತ ಅವುಗಳ ಸಾಮಗ್ರಿಗಳನ್ನೂ ಕಾಲವನ್ನೂ ವಿಶೇಷ ರೀತಿಯಿಂದ ವಿವರಿಸಿರುವನು.

ಇಲ್ಲಿ ಹೇಳಿರುವ ರಾಮನಾಥಪುರದ ಬ್ರಾಹ್ಮಣರಿಗೆ ಕೊಟ್ಟ ದರ್ಶನವು, ರಾಮನು ಎಲ್ಲಡೆಯಲ್ಲಿಯೂ ಇರುವ ಪರಮಾತ್ಮನು ಎಂಬುದನ್ನು ದೃಢಪಡಿಸ ತಕ್ಕದ್ದಾಗಿರುತ್ತದೆ.

ರಾಮನೇ ಎಲ್ಲ ಉಪನಿಷತ್ತುಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿರತಕ್ಕವನು ಎಂಬುದನ್ನು ವಿವರಿಸುತ್ತ "ತತ್ವಮಸಿ" ಎಂಬ ಸೂತ್ರಾರ್ಥವನ್ನು ಬಹು ಹೃದಯಂಗಮವಾಗಿ ವರ್ಣಿಸಿರುವನು.

ರಾಜ್ಯಕಾಂಡದಲ್ಲಿ ರಾಮತೋಭದ್ರಕ್ಕೆ ದಿಗ್ದರ್ಶನವನ್ನು ಮಾಡಿರುವನಷ್ಟೆ! ಇಲ್ಲಿ ಅವು ಎಷ್ಟು ಬಗೆಯಾಗಿರುವುವು ಎಂಬುದನ್ನು ವಿಸ್ತರಿಸಿದ್ದಾನೆ. ಆ ರಾಮತೋಭದ್ರಕ್ಕೆ ದೇವತೆ ಅಧಿದೇವತೆಗಳನ್ನು ವಿವರಿಸಿ, ಆ ರಾಮಚಂದ್ರನಿಗೆ ತೃಪ್ತಿಯನ್ನುಂಟುಮಾಡುವ ಫಲಪುಷ್ಪಗಳನ್ನು ವಿವರಿಸಿರುವನು

ಶ್ರೀರಾಮನ ನವಮೀ ವ್ರತವು ಉತ್ತಮವಾದುದೆಂದೂ ಅದನ್ನು ಮಾಡಿಯೇತೀರಬೇಕೆಂದೂ ಹೇಳುತ್ತ ಉದಾಹರಣೆಯನ್ನು ಕೊಡುತ್ತ ಸ್ತ್ರೀ ಮಲೆಯಾಳವು ಹೇಗಾಯಿತು? ಅಲ್ಲಿ ಪುರುಷರೇಕೆ ವೃದ್ಧಿಗೊಳ್ಳುವುದಿಲ್ಲವೆಂಬುದನ್ನು ಪೌರಾಣಿಕ ರೀತಿಯಿಂದಲೂ, ಲೌಕಿಕ ರೀತಿಯಿಂದಲೂ ವಿವರಿಸಿರುವನು. ರಾಮನಾಮದ ಮಹಿಮೆಯನ್ನು ಹೇಳುತ್ತ ಮಾರುತಿಯನ್ನು ಉದಾಹರಣೆಯನ್ನಾಗಿ ತೆಗೆದುಕೊಂಡು ಆ ಮಹಿಮೆಯು ಮನದಟ್ಟಾಗುವಂತೆ ವಿವರಿಸಿರುವನು.

ರಾಮನಾಮಗಳನ್ನು ಬರೆಯುವುದು ಒಂದು ವ್ರತಕ್ಕೆ ಸೇರಿದೆ ಎಂದು ವಿವರಿಸಿ ಅದರ ಪೂಜೆ ವ್ರತಗಳನ್ನು ವಿವರಿಸಿರುವನು.

ಈ ರಾಮನಾಮದ ಫಲವನ್ನು ಹೇಳುತ್ತ ವೇದಶಾಸ್ತ್ರ ಪುರಾಣಗಳ ಫಲವನ್ನು ಪ್ರಸಂಗದಿಂದ ಹೇಳುವನು.

ಕೊನೆಯಲ್ಲಿ ರಾಮನನ್ನು ಎಷ್ಟು ಕಾಲಗಳಲ್ಲಿ ಪೂಜಿಸಬೇಕೆಂಬುದನ್ನೂ ಎಷ್ಟು ವಿಧಗಳಲ್ಲಿ ಪೂಜಿಸಬಹುದೆಂಬುದನ್ನೂ ವಿವರಿಸುವನು.

ಕಡೆಯದಾಗಿ ದಾನ ತೆಗೆದುಕೊಳ್ಳಬೇಕಾದರೆ ಅವನಿಗೆ ಇರಬೇಕಾದ ಯೋಗ್ಯತೆಯನ್ನು ಗೊತ್ತುಮಾಡಿರುವುದು ಗಮನಾರ್ಹವಾದ ವಿಷಯ.

ಇಂತಹ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕನ್ನಡಿಗರು ಓದಿ ವಿಷಯಗಳನ್ನು ಗ್ರಹಣಮಾಡಿ ಸಾಧ್ಯವಾದಷ್ಟನ್ನಾದರೂ ಆಚರಿಸಿ ಕೃತಾರ್ಥರಾಗುವಂತೆ ಮಾಡುತ್ತಿರುವ ನಮ್ಮ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.** ಮಹಾಪ್ರಭುಗಳರವರಿಗೆ ಶ್ರೀರಾಮಚಂದ್ರನು ಪುತ್ರಪೌತ್ರಾದಿ ಸಕಲ ಸೌಭಾಗ್ಯಗಳನ್ನು ಕೊಟ್ಟು ಸಲಹಲೆಂದು ಅನನ್ಯಮನಸ್ಸಿನಿಂದ ಆ ಶ್ರೀರಾಮಚಂದ್ರನನ್ನು ಪ್ರಾರ್ಥಿಸುತ್ತೇನೆ.

ಮೈಸೂರು,
10—2—1950

ಅನುವಾದಕ,
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡದ

ವಿಷಯಾನುಕ್ರಮಣಿಕೆ

॥ ಶ್ರೀರಸ್ತು ॥

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಾನಂದರಾಮಾಯಣಂ

॥ ಮನೋಹರಕಾಂಡಃ ॥

ಪ್ರಥಮಃ ಸರ್ಗಃ

॥ ವಿಷ್ಣುದಾಸ ಉವಾಚ ॥

ಗುರೋ ತೇ ಪ್ರಷ್ಟುಮಿಚ್ಛಾಮಿ ಯತಸ್ತ್ವಂ ವಕ್ತುಮಿಚ್ಛಸಿ ।
ವೇದವಾಕ್ಯೈಃ ಪುರಾ ಪ್ರೋಕ್ತಂ ನಾರದೇನ ಮಹಾತ್ಮನಾ ॥ ೧ ॥

ರಾಮಾಯಣಂ ವಾಲ್ಮೀಕಯೇ ಸಂಕ್ಷೇಪಾಚ್ಚೇತಿ ತೇಽಕಥಿ ।
ತಾವದೇವಾರ್ಥಮಾದಾಯ ಶ್ಲೋಕರೂಪಂ ವದಸ್ವ ಮಾಂ ॥ ೨ ॥

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡವು ಮೊದಲನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು-ಎಲೈ ಗುರುವೇ! ನೀನು ನನಗೆ ತತ್ವೋಪದೇಶವನ್ನು ಮಾಡುತ್ತಿರುವುದರಿಂದ ನಿನ್ನಲ್ಲಿ ಒಂದು ವಿಷಯವನ್ನು ಕೇಳಲಿಚ್ಛಿಸುತ್ತೇನೆ. ನಾರದನು ವಾಲ್ಮೀಕಿಗೆ ರಾಮಾಯಣವನ್ನು ವೇದವಾಕ್ಯಗಳಿಂದ ಹೇಳಿದನು. ಎಂದು ಹೇಳಿದೆಯಷ್ಟೆ.

೨. ಅದರಲ್ಲಿಯೂ ಆ ರಾಮಾಯಣವನ್ನು ಬಹು ಸಂಕ್ಷೇಪವಾಗಿ ಅದೇ ರೀತಿಯಾದ ಅರ್ಥವನ್ನು ತೆಗೆದುಕೊಂಡು ಶ್ಲೋಕರೂಪದಲ್ಲಿ ಹೇಳಿದನು ಎಂದೂ ಹೇಳಿದ್ದೀಯೆ. ಅದನ್ನು ನನಗೆ ಹೇಳು.

|| ಶ್ರೀ ರಾಮದಾಸ ಉವಾಚ ||

ಸಮ್ಯಕ್ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು ।
ಯತ್ಪೃಷ್ಟಂ ಚ ತ್ವಯಾ ಸರ್ವಂ ತದ್ವದಾಮಿ ತವಾಗ್ರತಃ || ೩ ||

ನಾರದಾದ್ವೇದವಾಕ್ಯೈಶ್ಚ ಯಥಾ ವಾಲ್ಮೀಕಿನಾ ಶ್ರುತಂ ।
ತಾವದೇವಾರ್ಥಮಾದಾಯ ತೇನ ವಾಲ್ಮೀಕಿನಾ ಪುರಾ || ೪ ||

ಶತಶ್ಲೋಕಮಿತಂ ರಾಮಚರಿತಂ ಪಾಪನಾಶನಂ ।
ಶತಕೋಟಿಮಿತಾಯಾಂ ಸ್ವಕವಿತಾಯಾಂ ಮನೋರಮಂ || ೫ ||

ಆದಾವೇವೋಕ್ತಮೇವಾಸ್ತಿ ತತ್ತವಾಗ್ರೇ ವದಾಮ್ಯಹಂ ।
ಶತಶ್ಲೋಕಮಿತಂ ರಮ್ಯಂ ಲಘುರಾಮಾಯಣಾಹ್ವಯಂ || ೬ ||

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಂ || ೭ ||

---

೩. ಶ್ರೀರಾಮದಾಸನು ಹೇಳಿದನು–ಎಲೈ ಶಿಷ್ಯನೇ ! ನೀನು ಕೇಳಿದುದು ಸರಿಯಾಗಿದೆ. ಮನಸ್ಸಿಟ್ಟು ಕೇಳು. ನೀನು ಕೇಳಿದುದೆಲ್ಲವನ್ನೂ ನಿನ್ನೆದುರಿಗೆ ಹೇಳುತ್ತೇನೆ.

೪–೫. ನಾರದನು ವೇದವಾಕ್ಯಗಳಿಂದ ಹೇಳಿದುದನ್ನು ವಾಲ್ಮೀಕಿಯು ಕೇಳಿದನೆಂದು ಹೇಳಿದನಷ್ಟೆ, ಅದೇ ಅರ್ಥವನ್ನು ತೆಗೆದುಕೊಂಡು ವಾಲ್ಮೀಕಿಯು ನೂರುಶ್ಲೋಕಗಳಲ್ಲಿ ಮಾಡಿರುವನು. ಅದನ್ನು ತನ್ನ ಆ ಶತಕೋಟಿ ರಾಮಾಯಣದಲ್ಲಿಯೇ ಸೇರಿಸಿರುವನು. ಮನೋಹರವಾಗಿರುವುದು.

೬. ಅದನ್ನು ಮೊದಲಿನಲ್ಲಿಯೇ ಹೇಳಿರುವನು. ಅದನ್ನೇ ನಿನ್ನೆದುರಿಗೆ ಹೇಳುತ್ತೇನೆ. ಶತಶ್ಲೋಕಗಳಿಂದ ಕೂಡಿರುವ ಆ ರಾಮಾಯಣಕ್ಕೆ ಲಘು ರಾಮಾಯಣವೆಂದು ಹೆಸರು.

೭. ರಾಮ ರಾಮ ಎಂಬದಾಗಿ ಮಧುರವಾಗಿರುವ ಅಕ್ಷರಗಳನ್ನು ಕವಿತಾ ಎಂಬ ಮರವನ್ನು ಹತ್ತಿ ಕೂಗುತ್ತಿರುವ ವಾಲ್ಮೀಕಿಯೆಂಬ ಕೋಗಿಲೆಯನ್ನು ನಮಸ್ಕರಿಸುತ್ತೇನೆ.

ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ ।
ಶ್ರುಣ್ವನ್ರಾಮಕಥಾನಾದಂ ಕೋ ನ ಯಾತಿ ಪರಾಂ ಗತಿಂ ॥ ೮ ॥

ಯಃ ಪಿಬನ್ಸತತಂ ರಾಮಚರಿತಾಮೃತಸಾಗರಂ ।
ಅತೃಪ್ತಸ್ತಂ ಮುನಿಂ ವಂದೇ ಪ್ರಾಚೇತಸಮಕಲ್ಮಷಂ ॥ ೯ ॥

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಂ ।
ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಂ ॥ ೧೦ ॥

ಅಂಜನಾನಂದನಂ ವೀರಂ ಜಾನಕೀಶೋಕನಾಶನಂ ।
ಕಪೀಶಮಕ್ಷಹಂತಾರಂ ವಂದೇ ಲಂಕಾಭಯಂಕರಂ ॥ ೧೧ ॥

---

೮. ಕವಿತೆ ಎಂಬ ವನದಲ್ಲಿ ಸಂಚರಿಸುತ್ತಿರುವ ವಾಲ್ಮೀಕಿಯೆಂಬ ಮುನಿಸಿಂಹನ ರಾಮಕಥೆಯೆಂಬ ಧ್ವನಿಯನ್ನು ಕೇಳಿದರೆ ಯಾವನು ತಾನೇ ಉತ್ತಮಗತಿಯನ್ನು ಹೊಂದುವುದಿಲ್ಲ!

೯. ರಾಮಚರಿತ್ರೆಯೆಂಬ ಅಮೃತದ ಸಮುದ್ರದಲ್ಲಿಯೇ ಇದ್ದು ಅದನ್ನೇ ಕುಡಿಯುತ್ತಿದ್ದರೂ ಯಾವ ವಾಲ್ಮೀಕಿಗೆ ತೃಪ್ತಿಯೇ ಉಂಟಾಗಿರುವುದಿಲ್ಲವೋ ಅಂತಹ ಪಾಪರಹಿತನಾದ ವಾಲ್ಮೀಕಿಯನ್ನು ನಮಸ್ಕರಿಸುತ್ತೇನೆ.

೧೦. ಸಮುದ್ರವನ್ನು ಒಂದು ಹಸುವಿನ ಪಾಚದಷ್ಟು ಅಗಲವಿರುವಂತೆ ತಿಳಿದು ಅದನ್ನು ಸುಲಭವಾಗಿ ದಾಟಿದ, ರಾವಣನೆಂಬ ಮಹಾರಾಕ್ಷಸನನ್ನೂ ಕೂಡ ಸೊಳ್ಳೆಗಿಂತಲೂ ಕಡೆಯಾಗಿ ನಿರ್ಲಕ್ಷಿಸಿದ, ರಾಮಾಯಣವೆಂಬ ದೊಡ್ಡ ಮಾಲೆಗೆ ರತ್ನದಂತಿರುವ ವಾಯುಪುತ್ರನಾದ ಹನುಮಂತನನ್ನು ನಮಸ್ಕರಿಸುತ್ತೇನೆ.

೧೧. ಅಂಜನೆಯ ಮಗನಾದ, ವೀರನಾದ, ಜಾನಕಿಯ ಶೋಕವನ್ನು ನಾಶಮಾಡಿದ, ಕಪಿಗಳಿಗೆ ಒಡೆಯನಾದ, ಅಕ್ಷನನ್ನು ಕೊಂದ, ಲಂಕೆಗೆ ಭಯಂಕರನಾದ, ಹನುಮಂತನನ್ನು ನಮಸ್ಕರಿಸುತ್ತೇನೆ.

ಉಲ್ಲಂಘ್ಯ ಸಿಂಧೋಸ್ಸಲಿಲಂ ಸಲೀಲಂ
ಯಶ್ಶೋಕವಹ್ನಿಂ ಜನಕಾತ್ಮಜಾಯಾಃ।
ಆದಾಯ ತೇನೈವ ದದಾಹ ಲಂಕಾಂ
ನಮಾಮಿ ತಂ ಪ್ರಾಂಜಲಿರಾಂಜನೇಯಂ ॥ ೧೨ ॥

ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಂ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಮನಸಾ ಸ್ಮರಾಮಿ ॥ ೧೩ ॥

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥ ೧೪ ॥

ಜಿತಂ ಭಗವತಾ ತೇನ ಹರಿಣಾ ಲೋಕಧಾರಿಣಾ ।
ಅಜೇನ ವಿಶ್ವರೂಪೇಣ ನಿರ್ಗುಣೇನ ಗುಣಾತ್ಮನಾ ॥ ೧೫ ॥

ಇತಿ ಮಂಗಳಾಚರಣಂ

---

೧೨. ಸಮುದ್ರದ ನೀರನ್ನು ಬಹು ಸುಲಭವಾಗಿಯೇ ದಾಟಿದ, ಜನಕನ ಮಗಳಾದ ಸೀತೆಯ ದುಃಖವೆಂಬ ಬೆಂಕಿಯಿಂದಲೇ ಲಂಕೆಯನ್ನು ಸುಟ್ಟ ಸುಖಿಯಾದ ಹನುಮಂತನನ್ನು ಕೈಮುಗಿದು ನಮಸ್ಕರಿಸುತ್ತೇನೆ.

೧೩. ಮನಸ್ಸಿನ ವೇಗದಂತೆ ವೇಗವುಳ್ಳ, ವಾಯುವೇಗದಂತೆ ವೇಗವುಳ್ಳ, ಜಿತೇಂದ್ರಿಯನಾದ, ಬುದ್ಧಿವಂತರಲ್ಲಿ ಉತ್ತಮನಾದ, ವಾಯುಪುತ್ರನಾದ, ಕಪಿಸೈನ್ಯದಲ್ಲಿ ಮುಖ್ಯನಾದ, ಶ್ರೀರಾಮದೂತನಾದ, ಹನುಮಂತನನ್ನು ಮನಸ್ಸಿನಿಂದಲೇ ನಮಸ್ಕರಿಸುತ್ತೇನೆ.

೧೪–೧೫. ರಾಮನಿಗೆ ನಮಸ್ಕಾರವು. ರಾಮಭದ್ರನಿಗೆ ನಮಸ್ಕಾರವು. ರಾಮಚಂದ್ರನಿಗೆ ನಮಸ್ಕಾರವು. ಸೃಷ್ಟಿಕರ್ತನಿಗೆ ನಮಸ್ಕಾರವು. ರಘುನಾಥನಿಗೆ ನಮಸ್ಕಾರವು. ಸೀತಾಪತಿಗೆ ನಮಸ್ಕಾರವು. ನಾಥನಿಗೆ ನಮಸ್ಕಾರವು. ಲೋಕಗಳೆಲ್ಲವನ್ನೂ ಧರಿಸಿರುವ ಹರಿಯರೂಪನಾದ ಉತ್ಪತ್ತಿರಹಿತನಾದ ವಿಶ್ವದ ಸ್ವರೂಪನಾದ ನಿರ್ಗುಣನಾದರೂ ಸತ್ವರಜಸ್ತಮೋಗುಣಗಳನ್ನು ಹೊಂದಿದ ಆ ಭಗವಂತನು ಸರ್ವೋತ್ಕೃಷ್ಟನು. ಅವನಿಗೆ ನಮಸ್ಕಾರವು.

ಇತಿ ಮಂಗಳಾಚರಣಂ

॥ ಶ್ರೀರಸ್ತು ॥

ಅಥ ಲಘುರಾಮಾಯಣಂ

ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಂ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಂ ॥ ೧ ॥

ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ೨ ॥

ಚಾರಿತ್ರೇಣ ಚ ಕೋ ಯುಕ್ತಸ್ಸರ್ವಭೂತೇಷು ಕೋ ಹಿತಃ ।
ವಿದ್ವಾನ್ ಕಃ ಕಸ್ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥ ೩ ॥

ಲಘುರಾಮಾಯಣವು

೧. ತಪಸ್ಸಿನಲ್ಲಿಯೂ ಅಧ್ಯಯನದಲ್ಲಿಯೂ ಯಾವಾಗಲೂ ಆಸಕ್ತನಾದ, ವಿದ್ವಾಂಸರಲ್ಲಿ ಶ್ರೇಷ್ಠನೂ ಮುನಿಗಳಲ್ಲಿ ಉತ್ತಮನೂ ಆದ ನಾರದನನ್ನು ಕುರಿತು ತಪಸ್ವಿಯಾದ ವಾಲ್ಮೀಕಿಯು ಇಂತೆಂದು ಪ್ರಶ್ನಿಸಿದನು.

೨. ಎಲೈ ನಾರದನೆ ! ಭೂಲೋಕದಲ್ಲಿ ಈಗ ಒಳ್ಳೆಯ ಗುಣಗಳುಳ್ಳವನೂ ಪರಾಕ್ರಮವುಳ್ಳವನೂ, ಧರ್ಮವನ್ನು ಚೆನ್ನಾಗಿ ತಿಳಿದುಕೊಂಡು ಉಪಕಾರ ಸ್ಮರಣೆಯುಳ್ಳವನೂ, ಸತ್ಯವನ್ನೇ ಆಡುತ್ತ ವ್ರತಗಳಲ್ಲಿ ನಿಷ್ಠನಾಗಿರುವವನೂ ಯಾವನಿದ್ದಾನೆ ?

೩. ಒಳ್ಳೆಯ ಚರಿತ್ರೆಯುನ್ನುಳ್ಳವನೂ, ಎಲ್ಲಾ ಬಗೆಯ ಪ್ರಾಣಿಗಳಲ್ಲಿಯೂ ಹಿತಕಾರಿಯಾದವನೂ ಯಾವನಿದ್ದಾನೆ ? ವಿದ್ವಾಂಸನಾಗಿಯೂ ಸಮರ್ಥನಾಗಿಯೂ, ಎಲ್ಲರಿಗೂ ನೋಡಲು ಪ್ರೀತಿಯುಳ್ಳವನಾಗಿಯೂ ಇರುವವನು ಯಾರು ?

ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ಕೋಽನಸೂಯಕಃ ।
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥ ೪ ॥

ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಮ್ ॥ ೫ ॥

ಶ್ರುತ್ವಾ ಚೈತತ್ತ್ರಿಲೋಕಜ್ಞೋ ವಾಲ್ಮೀಕೇರ್ನಾರದೋ ವಚಃ ।
ಶ್ರೂಯತಾಮಿತಿ ಚಾಮಂತ್ರ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್ ॥ ೬ ॥

ಬಹವೋ ದುರ್ಲಭಾಶ್ಚೈವ ತ್ವಯಾ ಯೇ ಕೀರ್ತಿತಾ ಗುಣಾಃ ।
ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಶ್ಶ್ರೂಯತಾಂ ನರಃ ॥ ೭ ॥

---

೪. ಧೈರ್ಯವುಳ್ಳವನೂ ಅರಿಷಡ್ವರ್ಗಗಳನ್ನು ಅಡಗಿಸಿಟ್ಟುಕೊಂಡಿರುವವನೂ ಕಾಂತಿಮಂತನೂ ಪ್ರಾಣಿಗಳಲ್ಲಿ ಹೊಟ್ಟೆಗಿಚ್ಚಿಲ್ಲದವನೂ ಯಾವನಿದ್ದಾನೆ ? ಯುದ್ಧರಂಗದಲ್ಲಿ ಕೋಪಗೊಂಡರೆ ದೇವತೆಗಳಿಗೂ ಕೂಡ ಭಯವನ್ನುಂಟು ಮಾಡುವವನು ಯಾವನಿದ್ದಾನೆ ?

೫. ಅಂತಹ ಮಹಾನುಭಾವನು ಯಾವನಿರುವನೆಂಬುದನ್ನು ಹೇಳು. ನನಗೆ ಅಂತಹವನನ್ನು ಕೇಳಬೇಕೆಂಬ ಬಹಳ ಆಸೆಯುಂಟಾಗಿದೆ. ಎಲೈ ನಾರದಋುಷಿಯೆ ! ಅಂತಹ ಮಹಾನುಭಾವನನ್ನು ತಿಳಿಯಲು ನೀನು ಸಮರ್ಥ ನಾಗಿದ್ದೀಯೆ.

೬. ಮೂರುಲೋಕಗಳ ವಿಷಯಗಳನ್ನೂ ಬಲ್ಲ ನಾರದನು ವಾಲ್ಮೀಕಿಯ ಈ ಮಾತನ್ನು ಕೇಳಿ ಸಂತೋಷಗೊಂಡವನಾಗಿ ಎಲೈ ವಾಲ್ಮೀಕಿಯೆ ! ನಿನಗೆ ಅಷ್ಟು ಕುತೂಹಲವಿದ್ದರೆ ಕೇಳು. ಎಂದು ಹೇಳಿ ಇಂತೆಂದು ಹೇಳತೊಡಗಿದನು.

೭. ಎಲೈ ವಾಲ್ಮೀಕಿಯೆ ! ನೀನು ಹೇಳಿದ ಗುಣಗಳೆಲ್ಲವೂ ಒಬ್ಬನಲ್ಲಿಯೇ ಇರುವುದೆಂದರೆ ಅದು ದುರ್ಲಭವಾದ ವಿಷಯವೇ ಆಗಿರುವುದು. ಆದರೂ ಅವೆಲ್ಲವೂ ಇರುವ ಮನುಷ್ಯನನ್ನು ಯೋಚಿಸಿ ತಿಳಿದು ಹೇಳುತ್ತೇನೆ. ಅಂತಹ ವನನ್ನು ಕೇಳು.

ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಶ್ಶ್ರುತಃ ।
ನಿಯತಾತ್ಮಾ ಮಹಾವೀರ್ಯೋ ದ್ಯುತಿಮಾದ್ಧೃತಿಮಾನ್ವಶೀ ॥ ೮ ॥

ಬುದ್ಧಿಮಾನ್ನೀತಿಮಾನ್ವಾಗ್ಮೀ ಶ್ರೀಮಾನ್ ಶತ್ರುನಿಬರ್ಹಣಃ ।
ವಿಪುಲಾಂಸೋ ಮಹಾಬಾಹುಃ ಕಮ್ಬುಗ್ರೀವೋ ಮಹಾಹನುಃ ॥ ೯ ॥

ಮಹೋರಸ್ಕೋ ಮಹೇಷ್ವಾಸೋ ಗೂಢಜತ್ರುರರಿಂದಮಃ ।
ಆಜಾನುಬಾಹುಸ್ಸುಶಿರಾಸ್ಸುಲಲಾಟಿಸ್ಸುವಿಕ್ರಮಃ ॥ ೧೦ ॥

ಸಮಸ್ಸಮವಿಭಕ್ತಾಂಗಸ್ಸ್ನಿಗ್ಧವರ್ಣಃ ಪ್ರತಾಪವಾನ್ ।
ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾನ್ ಶುಭಲಕ್ಷಣಃ ॥ ೧೧ ॥

---

೮. ಇಕ್ಷ್ವಾಕು ಮಹಾರಾಜನ ವಂಶದಲ್ಲಿ ಒಬ್ಬ ಮಹಾನುಭಾವನು ಹುಟ್ಟಿರುವನು. ಅವನ ಹೆಸರು ರಾಮನೆಂದಿರುವುದು. ಅವನು ಜನಗಳಲ್ಲಿ ಬಹು ಪ್ರಸಿದ್ಧನಾಗಿರುವನು. ಅವನು ಜಿತೇಂದ್ರಿಯನು. ಬಹು ಪರಾಕ್ರಮಿಯು. ಅಚಿಂತ್ಯವೂ ಅಪರಿಮಿತವೂ ಆದ ಶಕ್ತಿಯುಳ್ಳವನು. ನಿತ್ಯಪ್ರಕಾಶನು. ಧೈರ್ಯವಂತನು. ಮನಸ್ಸನ್ನು ಬಹು ಸ್ವಾಧೀನದಲ್ಲಿಟ್ಟುಕೊಂಡಿರುವವನು.

೯. ಬುದ್ಧಿವಂತನು. ನೀತಿಶಾಸ್ತ್ರನಿಪುಣನಾಗಿ ಅದರಂತೆ ಆಚರಿಸುವವನು. ವಾಚಾಳಿಯು. ಶ್ರೀಮಂತನು. ಶತ್ರುಗಳನ್ನು ಸಂಹಾರಮಾಡತಕ್ಕವನು. ದೊಡ್ಡದಾದ ಭುಜಶಿರಸ್ಸುಳ್ಳವನು. ಉದ್ದವಾಗಿರುವ ತೋಳುಗಳುಳ್ಳವನು. ದಪ್ಪವಾದ ಕಪೋಲಗಳುಳ್ಳವನು.

೧೦. ವಿಸ್ತಾರವಾಗಿರುವ ಎದೆಯುಳ್ಳವನು. ದೊಡ್ಡ ಧನುಸ್ಸನ್ನು ಹಿಡಿದಿರುವವನು. ಮಾಂಸಬೆಳೆದು ತುಂಬಿಕೊಂಡು ಕಾಣದಂತಿರುವ ಭುಜದ ಮೇಲಿನ ಹಳ್ಳಪ್ರದೇಶವುಳ್ಳವನು. ಹೊರಗಿನ ಮತ್ತು ಒಳಗಿನ ಶತ್ರುಗಳನ್ನು ನಿಗ್ರಹಿಸಿರುವವನು. ಮಂಡಿಯವರೆಗೂ ಇರುವ ತೋಳುಳ್ಳವನು. ಚೆನ್ನಾಗಿರುವ ತಲೆಯುಳ್ಳವನು. ಚೆನ್ನಾಗಿರುವ ಹಣೆಯುಳ್ಳವನು. ಚೆನ್ನಾಗಿರುವ ನಡಗೆಯುಳ್ಳವನು.

೧೧. ಎಲ್ಲರನ್ನೂ ಹೆಚ್ಚುಕಡಿಮೆಯಿಲ್ಲದೆ ಒಂದೇ ಸಮವಾದ ದೃಷ್ಟಿಯಿಂದ ಕಾಣುವವನು. ಯಾವ ಯಾವ ಅವಯವಗಳು ಯಾವ ಯಾವ ಪ್ರಮಾಣದಲ್ಲಿರಬೇಕೋ ಅದೇ ರೀತಿಯಾದ ಅಂಗಳುಳ್ಳವನು. ರಮ್ಯವಾದ ಬಣ್ಣವುಳ್ಳವನು. ಪ್ರತಾಪಶಾಲಿಯು. ವಿಶಾಲವಾದ ಹೃದಯವುಳ್ಳವನು. ವಿಶಾಲವಾದ ಕಣ್ಣುಗಳುಳ್ಳವನು. ಸಂಪತ್ತುಳ್ಳವನು. ಶುಭಕರವಾದ ಚಿಹ್ನೆಗಳುಳ್ಳವನು.

ಧರ್ಮಜ್ಞಸ್ಸತ್ಯಸನ್ಧಶ್ಚ ಪ್ರಜಾನಾಂ ಚ ಹಿತೇ ರತಃ ।
ಯಶಸ್ವೀ ಜ್ಞಾನಸಂಪನ್ನಶ್ಶುಚಿರ್ವಶ್ಯಸ್ಸಮಾಧಿಮಾನ್ ॥ ೧೨ ॥

ಪ್ರಜಾಪತಿಸಮಶ್ಶ್ರೀಮಾನ್ ದಾತಾ ರಿಪುನಿಷೂದನಃ ।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥ ೧೩ ॥

ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ ।
ವೇದವೇದಾಂಗತತ್ವಜ್ಞೋ ಧನುರ್ವೇದೇ ಚ ನಿಷ್ಠಿತಃ ॥ ೧೪ ॥

ಸರ್ವಶಾಸ್ತ್ರಾರ್ಥತತ್ವಜ್ಞಃ ಸ್ಮೃತಿಮಾನ್ಪ್ರತಿಭಾನವಾನ್ ।
ಸರ್ವಲೋಕಪ್ರಿಯಸ್ಸಾಧುರದೀನಾತ್ಮಾ ವಿಚಕ್ಷಣಃ ॥ ೧೫ ॥

---

೧೨. ಧರ್ಮದ ಮರ್ಮವನ್ನು ಬಲ್ಲವನು. ಸತ್ಯವಂತನು. ಯಾವಾಗಲೂ ಪ್ರಜೆಗಳ ಹಿತದಲ್ಲಿಯೇ ಆಸಕ್ತನಾದವನು. ಯಶಸ್ಸುಳ್ಳವನು. ಒಳ್ಳೆಯ ಜ್ಞಾನವುಳ್ಳವನು. ಶುಚಿರ್ಭೂತನು. ಜಿತೇಂದ್ರಿಯನು. ಯೋಗವನ್ನು ಬಲ್ಲವನು.

೧೩. ಎಲ್ಲ ವಿಷಯದಲ್ಲಿಯೂ ಬ್ರಹ್ಮನಿಗೆ ಸಮನಾದವನು. ಶ್ರೀಮಂತನು. ಎಲ್ಲರನ್ನೂ ಪೋಷಿಸುವವನು. ರಿಪುಸಂಹಾರಕನು. ಎಲ್ಲಾ ಪ್ರಾಣಿಗಳನ್ನೂ ಸರಿಯಾಗಿ ಕಾಪಾಡತಕ್ಕವನು. ಧರ್ಮವನ್ನು ಬಹು ಜಾಗರೂಕತೆಯಿಂದ ಕಾಪಾಡತಕ್ಕವನು.

೧೪. ನಿಜಧರ್ಮವನ್ನು ಬಿಡದೆ ಅದನ್ನು ರಕ್ಷಿಸುವವನು. ತನ್ನ ಜನಗಳನ್ನು ವಿಶೇಷದೃಷ್ಟಿಯಿಂದ ಕಾಪಾಡತಕ್ಕವನು. ವೇದಗಳನ್ನೂ ವೇದಾಂಗಗಳನ್ನೂ ತಿಳಿದಿರುವುದಲ್ಲದೆ ಅವುಗಳ ತತ್ವವನ್ನು ಚೆನ್ನಾಗಿ ಬಲ್ಲವನು. ಧನುರ್ವೇದದಲ್ಲಿ ಬಹು ಗಟ್ಟಿಗನು.

೧೫. ಎಲ್ಲಾ ಶಾಸ್ತ್ರಗಳನ್ನೂ ಅಧ್ಯಯನಮಾಡಿ ಅವುಗಳ ತತ್ವವನ್ನು ಬಲ್ಲವನು. ಬಹುವಾದ ಜ್ಞಾಪಕಶಕ್ತಿಯುಳ್ಳವನು. ಕಾಲಕ್ಕನುಗುಣವಾದ ಪ್ರತಿಭಾವಂತನು. ಎಲ್ಲರಿಗೂ ಪ್ರಿಯನಾದವನು. ಸಾಧುವಾದವನು. ಧೈರ್ಯವನ್ನು ಹೊಂದಿದವನು. ಕಾರ್ಯಗಳಲ್ಲಿ ಬಹು ವಿಚಕ್ಷಣೆಯುಳ್ಳವನು.

ಸರ್ವದಾಭಿಗತಸ್ಸದ್ಭಿಸ್ಸಮುದ್ರ ಇವ ಸಿನ್ಧುಭಿಃ ।
ಆರ್ಯಸ್ಸರ್ವಸಮಶ್ಚೈವ ಸದೈಕಪ್ರಿಯದರ್ಶನಃ ॥ ೧೬ ॥

ಸ ಚ ಸರ್ವಗುಣೋಪೇತಃ ಕೌಸಲ್ಯಾನಂದವರ್ಧನಃ ।
ಸಮುದ್ರ ಇವ ಗಾಮ್ಭೀರ್ಯೇ ಧೈರ್ಯೇಣ ಹಿಮವಾನಿವ ॥ ೧೭ ॥

ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ಪ್ರಿಯದರ್ಶನಃ ।
ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ॥ ೧೮ ॥

ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ।
ತಮೇವಂಗುಣಸಮ್ಪನ್ನಂ ರಾಮಂ ಸತ್ಯಪರಾಕ್ರಮಮ್ ॥ ೧೯ ॥

ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಸ್ಸುತಮ್ ।
ಪ್ರಕೃತೀನಾಂ ಹಿತೈರ್ಯುಕ್ತಂ ಪ್ರಕೃತಿಪ್ರಿಯಕಾಮ್ಯಯಾ ॥ ೨೦ ॥

---

೧೬. ಯಾವಾಗಲೂ ಸತ್ಪುರುಷರೊಡನೆಯೇ ಓಡಾಡುತ್ತಿರುವನು. ನದಿಗಳು ಸಮುದ್ರಕ್ಕೆ ಅಭಿಮುಖವಾಗಿ ಹೇಗೆ ಬಂದು ಸೇರುವುವೋ ಹಾಗೆ ಸತ್ಪುರುಷರು ರಾಮನನ್ನು ಬಂದು ಸೇರುತ್ತಿರುವರು. ಪೂಜ್ಯನು. ಎಲ್ಲರಲ್ಲಿಯೂ ಒಂದೇ ಸಮವಾಗಿರುವನು. ಯಾವಾಗಲೂ ಪ್ರಿಯವಾದವನು.

೧೭. ಕೌಸಲ್ಯೆಗೆ ಆನಂದವನ್ನು ಹೆಚ್ಚಿಸುವ ಆ ಶ್ರೀರಾಮನೊಬ್ಬನೇ ಎಲ್ಲಾ ಗುಣಗಳಿಂದಲೂ ಕೂಡಿರುವವನು. ಗಂಭೀರತನದಲ್ಲಿ ಸಮುದ್ರದಂತೆಯೂ ಧೈರ್ಯದಲ್ಲಿ ಹಿಮಂತನಂತೆಯೂ ಇರುವನು.

೧೮. ಪರಾಕ್ರಮದಲ್ಲಿ ವಿಷ್ಣುವಿಗೆ ಸಮನಾಗಿಯೂ ನೋಡಿದರೆ ಆನಂದವನ್ನುಂಟುಮಾಡುವುದರಲ್ಲಿ ಚಂದ್ರನಂತೆಯೂ ಕೋಪಬಂದರೆ ಪ್ರಳಯಕಾಲದ ಅಗ್ನಿಯಂತೆ ಕ್ರೂರನಾಗಿಯೂ ಕ್ಷಮಾಗುಣದಲ್ಲಿ ಭೂದೇವಿಗೆ ಸಮನಾಗಿಯೂ ಇರುವನು.

೧೯–೨೧. ದಾನಮಾಡುವುದರಲ್ಲಿ ಕುಬೇರನಂತೆಯೂ ಸತ್ಯದವಿಷಯದಲ್ಲಿ ಮತ್ತೊಬ್ಬ ಧರ್ಮಪುರುಷನಂತೆಯೂ ಇರುವನು. ರಾಮನು ಈ ರೀತಿಯಾದ ಗುಣಗಳಿಂದ ಕೂಡಿರುವನು. ಇಂತಹ ಸತ್ಯಪರಾಕ್ರಮನೂ ಜ್ಯೇಷ್ಠನೂ ಉತ್ತಮ ಗುಣಗಳಿಂದ ಕೂಡಿದವನೂ ತನಗೆ ಪ್ರೀತಿಪಾತ್ರನೂ ಆದ ಮಗನನ್ನು

ಯೌವರಾಜ್ಯೇನ ಸಂಯೋಕ್ತುಮೈಚ್ಛತ್ಪ್ರೀತ್ಯಾ ಮಹೀಪತಿಃ ।
ತಸ್ಯಾಭಿಷೇಕಸಮ್ಭಾರಾನ್ದೃಷ್ಟ್ವಾ ಭಾರ್ಯಾಥ ಕೈಕಯೀ ॥ ೨೧ ॥

ಪೂರ್ವಂ ದತ್ತವರಾ ದೇವೀ ವರಮೇನಮಯಾಚತ ।
ವಿವಾಸನಂ ಚ ರಾಮಸ್ಯ ಭರತಸ್ಯಾಭಿಷೇಚನಂ ॥ ೨೨ ॥

ಸ ಸತ್ಯವಚನಾದ್ರಾಜಾ ಧರ್ಮಪಾಶೇನ ಸಂಯುತಃ ।
ವಿವಾಸಯಾಮಾಸ ಸುತಂ ರಾಮಂ ದಶರಥಪ್ರಿಯಮ್ ॥ ೨೩ ॥

ಸ ಜಗಾಮ ವನಂ ವೀರಃ ಪ್ರತಿಜ್ಞಾಮನುಪಾಲಯನ್ ।
ಪಿತುರ್ವಚನನಿರ್ದೇಶಾತ್ಕೈಕೇಯ್ಯಾಃ ಪ್ರಿಯಕಾರಣಾತ್ ॥ ೨೪ ॥

ದಶರಥನು ಜನಗಳಿಗೆ ಹಿತವನ್ನು ಮಾಡಬೇಕೆಂಬ ಇಚ್ಛೆಯಿಂದ ಯುವ ರಾಜ ಪದವಿಯಲ್ಲಿಟ್ಟು ಪಟ್ಟಕಟ್ಟಲು ಅಪೇಕ್ಷಿಸಿದನು. ಈ ರಾಮನಿಗೆ ಯುವ ರಾಜಪಟ್ಟವನ್ನು ಕಟ್ಟುವುದನ್ನು ಇವನ ಹೆಂಡತಿಯಾದ ಕೈಕೇಯಿಯು ನೋಡಿದಳು.

೨೨. ಹಿಂದೆ ದಶರಥನು ತನಗೆ ಕೊಟ್ಟಿದ್ದ ಎರಡು ವರಗಳನ್ನು ಜ್ಞಾಪಿಸಿ ಕೊಂಡು ಅವನ್ನೇ ಕೇಳಿದಳು. ಅವುಗಳಲ್ಲಿ ಒಂದಕ್ಕೆ ರಾಮನು ಕಾಡಿಗೆ ಹೋಗುವಿಕೆಯೂ ಮತ್ತೊಂದಕ್ಕೆ ಭರತನಿಗೆ ರಾಜ್ಯಾಭಿಷೇಕವನ್ನು ಮಾಡು ವಿಕೆಯೂ ಆಗಿದ್ದಿತು.

೨೩. ಸತ್ಯವಚನವುಳ್ಳ ಆ ರಾಜನು ಧರ್ಮಪಾಶದಿಂದ ಕಟ್ಟಲ್ಪಟ್ಟವನಾಗಿ ಮಗನಾದ ರಾಮನನ್ನು ಪ್ರೀತಿಪಾತ್ರನಾದರೂ ಕಾಡಿಗೆ ಕಳುಹಿಸಿಬಿಟ್ಟನು.

೨೪. ವೀರನಾದ ರಾಮನು ಪ್ರತಿಜ್ಞೆಯನ್ನು ಕಾಪಾಡುತ್ತ ಕಾಡಿಗೆ ಹೊರಟು ಹೋದನು. ತಂದೆಯ ಮಾತನ್ನು ಉಳಿಸಿದಂತಾಗುವುದೆಂದೂ ಕೈಕೇಯಿಗೂ ಪ್ರಿಯವಾಗುವುದೆಂದೂ ಒಡನೆಯೇ ಹೊರಟು ಹೋದನು.

ತಂ ವ್ರಜನ್ತಂ ಪ್ರಿಯೋ ಭ್ರಾತಾ ಲಕ್ಷ್ಮಣೋಽನುಜಗಾಮ ಹ ।
ಸ್ನೇಹಾದ್ವಿನಯಸಮ್ಪನ್ನಸ್ಸುಮಿತ್ರಾನನ್ದವರ್ಧನಃ ॥ ೨೫ ॥

ಭ್ರಾತರಂ ದಯಿತೋ ಭ್ರಾತುಸ್ಸೌಭ್ರಾತ್ರಮನುದರ್ಶಯನ್ ।
ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ ॥ ೨೬ ॥

ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ ।
ಸರ್ವಲಕ್ಷಣಸಮ್ಪನ್ನಾ ನಾರೀಣಾಮುತ್ತಮಾ ವಧೂಃ ॥ ೨೭ ॥

ಸೀತಾಪ್ಯನುಗತಾ ರಾಮಂ ಶಶಿನಂ ರೋಹಿಣೀ ಯಥಾ ।
ಪೌರೈರನುಗತೋ ದೂರಂ ಪಿತ್ರಾ ದಶರಥೇನ ಚ ॥ ೨೮ ॥

---

೨೫. ಸುಮಿತ್ರೆಯ ಮಗನಾದ ಲಕ್ಷ್ಮಣನು ರಾಮನು ಕಾಡಿಗೆ ಹೋಗುತ್ತಿರುವುದನ್ನು ನೋಡಿ ಅವನಲ್ಲಿರುವ ಸ್ನೇಹದಿಂದ ವಿನಯದಿಂದ ಕೂಡಿ ಅವನೊಡನೆ ಹೋದನು.

೨೬. ಆ ಲಕ್ಷ್ಮಣನು ರಾಮನಿಗೆ ಬಹು ಪ್ರೀತಿಪಾತ್ರನಾದ ತಮ್ಮನು. ಆದ್ದರಿಂದ ಲಕ್ಷ್ಮಣನು ತನ್ನ ಸ್ನೇಹವನ್ನೇ ತೋರಿಸುತ್ತಾ ಹೊರಟನು. ರಾಮನಿಗೆ ಒಬ್ಬಳು ಹೆಂಡತಿಯಿದ್ದಳು. ಅವಳು ಅವನಿಗೆ ಬಹು ಪ್ರೀತಿಪಾತ್ರಳು. ಯಾವಾಗಲೂ ಪ್ರಾಣಕ್ಕೆ ಸಮಳಾದವಳು. ರಾಮನಿಗೆ ಹಿತವನ್ನೇ ಬಯಸುವವಳು.

೨೭. ಅವಳು ಜನಕರಾಜನ ಮನೆಯಲ್ಲಿ ಹುಟ್ಟಿದವಳು. ದೇವತೆಗಳ ಮಾಯೆಯಿಂದಲೇ ನಿರ್ಮಿತಳಾದವಳು. ಎಲ್ಲ ಲಕ್ಷ್ಮಣಗಳಿಂದಲೂ ಕೂಡಿದವಳು. ಹೆಂಗಸರಲ್ಲಿ ಉತ್ತಮಳಾದ ಹೆಂಗಸು.

೨೮. ಈಕೆಯ ಹೆಸರು ಸೀತೆಯೆಂದು. ಚಂದ್ರನನ್ನು ರೋಹಿಣಿಯು ಅನುಸರಿಸಿಕೊಂಡು ಹೋಗುವಂತೆ ಆ ಸೀತೆಯು ರಾಮನನ್ನು ಅನುಸರಿಸಿ ಹೊರಟಳು. ರಾಮನು ಹೋಗುತ್ತಿರಲು ಅವನನ್ನು ಅನುಸರಿಸಿ ಪೌರರೂ ಹೋದರು. ತಂದೆಯಾದ ದಶರಥನೂ ಅನುಸರಿಸಿ ಹೋದನು.

ಶೃಂಗಬೇರಪುರೇ ಸೂತಂ ಗಂಗಾಕೂಲೇ ವ್ಯಸರ್ಜಯತ್ ।
ಗುಹಮಾಸಾದ್ಯ ಧರ್ಮಾತ್ಮಾ ನಿಷಾದಾಧಿಪತಿಂ ಪ್ರಿಯಮ್ ॥ ೨೯ ॥

ಗುಹೇನ ಸಹಿತೋ ರಾಮೋ ಲಕ್ಷ್ಮಣೇನ ಚ ಸೀತಯಾ ।
ತೇ ವನೇನ ವನಂ ಗತ್ವಾ ನದೀಸ್ತೀರ್ತ್ವಾ ಬಹೂದಕಾಃ ॥ ೩೦ ॥

ಚಿತ್ರಕೂಟಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್ ।
ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇ ತ್ರಯಃ ॥ ೩೧ ॥

ದೇವಗನ್ಧರ್ವಸಂಕಾಶಾಸ್ತತ್ರ ತೇ ನ್ಯವಸನ್ ಸುಖಮ್ ।
ಚಿತ್ರಕೂಟಂ ಗತೇ ರಾಮೇ ಪುತ್ರಶೋಕಾತುರಸ್ತದಾ ॥ ೩೨ ॥

---

೨೯. ರಾಮನು ಹೊರಟು ಶೃಂಗಬೇರಪುರದಲ್ಲಿ ತಂಗಿದನು. ಅಲ್ಲಿರುವ ಗಂಗಾತೀರದಲ್ಲಿ ತಾನು ನಿಂತು ಸೂತನನ್ನು ಊರಿಗೆ ಹೋಗುವಂತೆ ಹೇಳಿ ಕಳುಹಿಸಿದನು. ಅನಂತರ ರಾಮನು ಅಲ್ಲಿದ್ದ ನಿಷಾದರಿಗೆ ಒಡೆಯನಾದ ಗುಹನ ಬಳಿಗೆ ಹೋದನು.

೩೦. ಅನಂತರ ಗುಹನೂ, ರಾಮಲಕ್ಷ್ಮಣರೂ ಸೀತೆಯೂ ಹೊರಟು ಕಾಡಿನಿಂದ ಕಾಡಿಗೆ ಹೋಗುತ್ತ ಬಹುವಾದ ನೀರುಳ್ಳ ನದಿಗಳನ್ನು ದಾಟಿದರು.

೩೧. ಕಡೆಗೆ ಚಿತ್ರಕೂಟಪರ್ವತಕ್ಕೆ ಹೋದರು ಅಲ್ಲಿ ಭರದ್ವಾಜ ಋಷಿಯ ಅಪ್ಪಣೆಯಂತೆ ಒಂದು ಚೆನ್ನಾಗಿರುವ ಆಶ್ರಮವನ್ನು ಮಾಡಿಕೊಂಡು ಆ ವನದಲ್ಲಿ ರಾಮಲಕ್ಷ್ಮಣ ಸೀತೆಯರು ಮೂವರೂ ಆನಂದಿಸುತ್ತಿದ್ದರು.

೩೨-೩೩. ದೇವತೆಗಳಂತೆಯೂ, ಗಂಧರ್ವರಂತೆಯೂ, ಅವರು ಅಲ್ಲಿ ರಮಿಸುತ್ತ ಸುಖದಿಂದಿದ್ದರು. ರಾಮನು ಚಿತ್ರಕೂಟಕ್ಕೆ ಹೋದಮೇಲೆ ದಶರಥನು ಪುತ್ರಶೋಕದಿಂದ ಆ ರಾಮನನ್ನೇ ಸ್ಮರಿಸುತ್ತ ಸ್ವರ್ಗವನ್ನು ಹೊಂದಿದನು.

ರಾಜಾ ದಶರಥಸ್ಸರ್ಗಂ ಜಗಾಮ ವಿಲಪನ್ ಸುತಂ ।
ಮೃತೇ ತು ತಸ್ಮಿನ್ ಭರತೋ ವಸಿಷ್ಠಪ್ರಮುಖೈರ್ದ್ವಿಜೈಃ ॥ ೩೩ ॥

ನಿಯುಜ್ಯಮಾನೋ ರಾಜ್ಯಾಯ ನೈಚ್ಛದ್ರಾಜ್ಯಂ ಮಹಾಬಲಃ ।
ಸ ಜಗಾಮ ವನಂ ವೀರೋ ರಾಮಪಾದಪ್ರಸಾದಕಃ ॥ ೩೪ ॥

ಗತ್ವಾ ತು ತಂ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ ।
ಅಯಾಚದ್ಭ್ರಾತರಂ ರಾಮಮಾರ್ಯಭಾವಪುರಸ್ಕೃತಃ ॥ ೩೫ ॥

ತ್ವಮೇವ ರಾಜಾ ಧರ್ಮಜ್ಞ ಇತಿ ರಾಮಂ ವಚೋಽಬ್ರವೀತ್ ।
ರಾಮೋಽಪಿ ಪರಮೋದಾರಸ್ಸುಮುಖಸ್ಸುಮಹಾಯಶಾಃ ॥ ೩೬ ॥

ನ ಚೈಚ್ಛತ್ಪಿತುರಾದೇಶಾದ್ರಾಜ್ಯಂ ರಾಮೋ ಮಹಾಬಲಃ ।
ಪಾದುಕೇ ಚಾಸ್ಯ ರಾಜ್ಯಾಯ ನ್ಯಾಸಂ ದತ್ವಾ ಪುನಃ ಪುನಃ ॥ ೩೭ ॥

ಆ ರಾಜನು ಮೃತನಾದ ಮೇಲೆ ಭರತನು ವಸಿಷ್ಠನೇ ಮುಂತಾದ ಬ್ರಾಹ್ಮಣರೊಡನೆ ರಾಮನಲ್ಲಿಗೆ ಬಂದನು.

೩೪. ಅಲ್ಲಿ ಭರತನಿಂದ ಕಳುಹಿಸಲ್ಪಟ್ಟ ವಸಿಷ್ಠನೇ ಮುಂತಾದವರು ರಾಮನನ್ನು ರಾಜ್ಯಕ್ಕೆ ಬರುವಂತೆ ನಿರ್ಬಂಧಿಸಿದರು. ಆ ರಾಮನು ರಾಜ್ಯವನ್ನು ಸ್ವಲ್ಪವೂ ಇಚ್ಛಿಸಲೇ ಇಲ್ಲ. ಮತ್ತು ಮುಂದಕ್ಕೆ ಕಾಡಿಗೆ ಹೊರಟನು. ಅನಂತರ ರಾಮನನ್ನು ಒಪ್ಪಿಸಲು ಭರತನೇ ಹೊರಟನು.

೩೫. ಅನಂತರ ಭರತನು ಸತ್ಯಪರಾಕ್ರಮಿಯಾದ ರಾಮನ ಬಳಿಗೆ ಹೋದನು. ಅಲ್ಲಿಗೆ ಹೋಗಿ ಅಣ್ಣನೆಂಬ ಗೌರವವನ್ನು ಮುಂದುಮಾಡಿಕೊಂಡು ರಾಮನನ್ನು ಕುರಿತು ಇಂತೆಂದು ಯಾಚಿಸಿದನು.

೩೬. ಎಲೈ ರಾಮನೇ ! ಧರ್ಮಜ್ಞನಾದ ನೀನೇ ರಾಜನಾಗಿರಬೇಕು. ಎಂದು ರಾಮನನ್ನು ಕೇಳಿಕೊಂಡನು. ರಾಮನಾದರೋ ಉದಾರ ಸ್ವಭಾವವುಳ್ಳವನು. ಸುಮುಖನು. ಮಹಾಯಶಸ್ವಿಯು.

೩೭. ಈ ರೀತಿಯಾದವನಾದುದರಿಂದಲೂ ತಂದೆಯ ಅಪ್ಪಣೆಯಿಂದಲೂ ಆ ರಾಮನು ಆ ರಾಜ್ಯವನ್ನು ಇಚ್ಛಿಸಲಿಲ್ಲ. ಆದರೆ ಆ ರಾಮನು ಆ ಭರತನ ಪ್ರಾರ್ಥನೆಯಂತೆ ತನ್ನ ಪಾದುಕೆಗಳನ್ನು ಇಟ್ಟುಕೊಳ್ಳುವುದಕ್ಕೆ ಕೊಟ್ಟು ಹಿಂದಿರುಗಿಸಿ ಕಳುಹಿಸಿದನು.

ನಿವರ್ತಯಾಮಾಸ ತತೋ ಭರತಂ ಭರತಾಗ್ರಜಃ ।
ಸ ಕಾಮಮನವಾಪ್ಯೈನ ರಾಮಪಾದಾವುಪಸ್ಪೃಶ್ ॥ ೩೮ ॥

ನಂದಿಗ್ರಾಮೇಕರೋದ್ರಾಜ್ಯಂ ರಾಮಾಗಮನಕಾಂಕ್ಷಯಾ ।
ಗತೇ ತು ಭರತೇ ಶ್ರೀಮಾನ್ ಸತ್ಯಸಂಧೋ ಜಿತೇಂದ್ರಿಯಃ ॥ ೩೯ ॥

ರಾಮಸ್ತು ಪುನರಾಲಕ್ಷ್ಯ ನಾಗರಸ್ಯ ಜನಸ್ಯ ಚ ।
ತತ್ರಾಗಮನಮೇಕಾಗ್ರೋ ದಂಡಕಾನ್ ಪ್ರವಿವೇಶ ಹ ॥ ೪೦ ॥

ಪ್ರವಿಶ್ಯ ತು ಮಹಾರಣ್ಯಂ ರಾಮೋ ರಾಜೀವಲೋಚನಃ ।
ವಿರಾಧಂ ರಾಕ್ಷಸಂ ಹತ್ವಾ ಶರಭಂಗಂ ದದರ್ಶ ಹ ॥ ೪೧ ॥

ಸುತೀಕ್ಷ್ಣಂ ಚಾಪ್ಯಗಸ್ತ್ಯಂ ಚ ಅಗಸ್ತ್ಯಭ್ರಾತರಂ ತಥಾ ।
ಅಗಸ್ತ್ಯವಚನಾಚ್ಚೈವ ಜಗ್ರಾಹೈಂದ್ರಂ ಶರಾಸನಮ್ ॥ ೪೨ ॥

೩೮-೩೯. ರಾಮನು ಭರತನನ್ನು ಹಿಂದಿರುಗಿ ಕಳುಹಿಸಲು ಆ ಭರತನು ತನ್ನ ಇಷ್ಟವನ್ನು ಹೊಂದದೆಯೇ ರಾಮನ ಆ ಪಾದುಕೆಗಳನ್ನು ತೆಗೆದುಕೊಂಡು ನಂದಿಗ್ರಾಮದಲ್ಲಿದ್ದುಕೊಂಡು ರಾಮನ ಬರುವನ್ನೇಎದುರುನೋಡುತ್ತ ರಾಜ್ಯವನ್ನಾಳುತ್ತಿದ್ದನು. ಭರತನು ಹೊರಟು ಹೋದಮೇಲೆ ರಾಮನು ಇಂತೆಂದು ಯೋಚಿಸಿದನು.

೪೦ ನಾನು ಇಲ್ಲಿಯೇ ಇದ್ದರೆ ನಾನು ಇರುವುದನ್ನು ತಿಳಿದು ನಗರದ ಜನರು ಅಲ್ಲಿಗೆ ಬಂದಾರು ? ಎಂದು ಬಾವಿಸಿ ಆ ಜಾಗವನ್ನು ಬಿಟು ಮುಂದಕ್ಕೆ ದಂಡಕಾರಣ್ಯಕ್ಕೆ ಹೋದನು.

೪೧ ರಾಜೀವಲೋಚನನಾದ ಶ್ರೀ ರಾಮನು ಆ ಮಹಾರಣ್ಯಕ್ಕೆ ಹೋಗಿ ವಿರಾಧನೆಂಬ ರಾಕ್ಷಸನನ್ನು ಕೊಂದು ಶರಭಂಗ ಮಹರ್ಷಿಯ ಬಳಿಗೆ ಹೊಗಿ ಅವನನ್ನು ನೋಡಿದನು.

೪೨. ಅಂತೆಯೇ ಸುತೀಕ್ಷ್ಣ ಅಗಸ್ತ್ಯ ಅಗಸ್ತ್ಯನ ತಮ್ಮ ಇವರ ಆಶ್ರಮಕ್ಕೆ ಹೋಗಿ ಅವರ ದರ್ಶನವನ್ನು ಮಾಡಿದನು. ಆ ಅಗಸ್ತ್ಯನ ಆಶ್ರಮದಲ್ಲಿ ಆ ಋಷಿಯ ಅಪ್ಪಣೆಯಂತೆ ಅಲ್ಲಿದ್ದ ಇಂದ್ರನ ಬಿಲ್ಲನ್ನು ತೆಗೆದುಕೊಂಡನು.

ಖಡ್ಗಂ ಚ ಪರಮಪ್ರೀತಸ್ತೂಣೀ ಚಾಕ್ಷಯಸಾಯಕೌ ।
ವಸತಸ್ತಸ್ಯ ರಾಮಸ್ಯ ವನೇ ವನಚರೈಸ್ಸಹ ॥ ೪೩ ॥

ಋಷಯೋಽಭ್ಯಾಗಮನ್ ಸರ್ವೇ ವಧಾಯಾಸುರರಕ್ಷಸಾಮ್ ।
ಸ ತೇಷಾಂ ಪ್ರತಿಶುಶ್ರಾವ ರಾಕ್ಷಸಾನಾಂ ತದಾ ವನೇ ॥ ೪೪ ॥

ಪ್ರತಿಜ್ಞಾತಶ್ಚ ರಾಮೇಣ ವಧಸ್ಸಂಯತಿ ರಕ್ಷಸಾಮ್ ।
ಋಷೀಣಾಮಗ್ನಿಕಲ್ಪಾನಾಂ ದಂಡಕಾರಣ್ಯವಾಸಿನಾಮ್ ॥ ೪೫ ॥

ತೇನ ತತ್ರೈವ ವಸತಾ ಜನಸ್ಥಾನನಿವಾಸಿನೀ ।
ವಿರೂಪಿತಾ ಶೂರ್ಪಣಖಾ ರಾಕ್ಷಸೀ ಕಾಮರೂಪಿಣೀ ॥ ೪೬ ॥

---

೪೩. ಜೊತೆಗೆ ಕತ್ತಿಯನ್ನೂ ಅಕ್ಷಯ ಬಾಣಗಳುಳ್ಳ ಬತ್ತಳಿಕೆಯನ್ನೂ ತೆಗೆದುಕೊಂಡನು. ಆನಂತರ ಅಲ್ಲಿರುವ ಋಷಿಗಳೊಡನೆ ಸುಖವಾಗಿ ವಾಸಿಸುತ್ತಿದ್ದನು.

೪೪. ಅನೇಕಜನ ಋಷಿಗಳು ಆ ರಾಮನ ಬಳಿಗೆ ಬಂದು ಅಸುರರಿಂದಲೂ ರಾಕ್ಷಸರಿಂದಲೂ ತಮಗೆ ಉಂಟಾಗುತ್ತಿರುವ ತೊಂದರೆಯನು ಆ ರಾಮನಿಗೆ ವಿಜ್ಞಾಪಿಸಿಕೊಂಡರು. ಆ ರಾಮನು ಆ ಕಾಡಿನಲ್ಲಿರುವ ರಾಕ್ಷಸರನ್ನೆಲ್ಲಾ ಕೊಂದು ಬಿಡುವುದಾಗಿ ಅವರಿಗೆ ಪ್ರತಿಜ್ಞೆ ಮಾಡಿದನು.

೪೫. ಅಗ್ನಿಯಂತೆ ಪರಿಶುದ್ಧರೂ ತೇಜಸ್ವಿಗಳೂ ಆದ ಆ ದಂಡಕಾರಣ್ಯದಲ್ಲಿ ವಾಸಿಸುವ ಋಷಿಗಳಿಗೆ ಯುದ್ಧಲ್ಲಿ ರಾಕ್ಷಸರನ್ನು ಕೊಲ್ಲುತ್ತೇನೆಂದು ರಾಮನು ಪ್ರತಿಜ್ಞೆಮಾಡಿದದು ಬಹು ಸಂತೋಷವಾಯಿತು.

೪೬. ರಾಮನು ಆ ದಂಡಕಾರಣ್ಯದಲ್ಲಿದ್ದುಕೊಂಡಿದ್ದಾಗ ಜನಸ್ಥಾನದಲ್ಲಿ ವಾಸವಾಗಿದ್ದ ಶೂರ್ಪಣಖಿಯೆಂಬುವಳು ಅಲ್ಲಿಗೆಬಂದು ಆ ರಾಮನಿಗೆ ತೊಂದರೆಯನ್ನು ಕೊಡಲು ರಾಮನು ಕಾಮರೂಪಿಣಿಯಾದ ಆಕೆಯ ಕಿವಿ ಮೂಗುಗಳನ್ನು ಕುಯ್ದು ವಿಕಾರಿಣಿಯನ್ನಾಗಿ ಮಾಡಿದನು.

ತತಶ್ಶೂರ್ಪಣಖಾವಾಕ್ಯಾದುದ್ಯುಕ್ತಾನ್ ಸರ್ವರಾಕ್ಷಸಾನ್ ।
ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಂ ॥ ೪೭ ॥

ನಿಜಘಾನ ರಣೇ ರಾಮಸ್ತೇಷಾಂ ಚೈವ ಪದಾನುಗಾನ್ ।
ವನೇ ತಸ್ಮಿನ್ನಿವಸತಾ ಜನಸ್ಥಾನನಿವಾಸಿನಾಮ್ ॥ ೪೮ ॥

ರಕ್ಷಸಾಂ ನಿಹತಾನ್ಯಾಸನ್ ಸಹಸ್ರಾಣಿ ಚತುರ್ದಶ ।
ತತೋ ಜ್ಞಾತಿವಧಂ ಶ್ರುತ್ವಾ ರಾವಣಃ ಕ್ರೋಧಮೂರ್ಛಿತಃ ॥ ೪೯ ॥

ಸಹಾಯಂ ವರಯಾಮಾಸ ಮಾರೀಚಂ ನಾಮ ರಾಕ್ಷಸಂ ।
ವಾರ್ಯಮಾಣಸ್ಸುಬಹುಶೋ ಮಾರೀಚೇನ ಸ ರಾವಣಃ ॥ ೫೦ ॥

ನ ವಿರೋಧೋ ಬಲವತಾ ಕ್ಷಮೋ ರಾವಣ ತೇನ ತೇ ।
ಅನಾದೃತ್ಯ ತು ತದ್ವಾಕ್ಯಂ ರಾವಣಃ ಕಾಲಚೋದಿತಃ ॥ ೫೧ ॥

೪೭-೪೯. ಶೂರ್ಪಣಖಿಯು ಮಾತನ್ನು ಕೇಳಿಕೊಂಡು ಅದರಂತೆ ತನ್ನನ್ನು ಹೊಡೆಯಲು ಬಂದ ಖರ ತ್ರಿಶಿರ, ದೂಷಣರೆಂಬ ರಾಕ್ಷಸರನ್ನೂ ಅವರ ಜೊತೆಯಲ್ಲಿ ಹಿಂಬಾಲಿಸಿ ಬಂದಿದ್ದವರನ್ನೂ ರಾಮನು ಯುದ್ಧದಲ್ಲಿ ಕೊಂದುಹಾಕಿದನು. ಹೀಗೆ ಆ ವನದಲ್ಲಿರುತ್ತಿದ್ದಾಗಲೇ ರಾಮನು ಜನಸ್ಥಾನದಲ್ಲಿ ವಾಸಮಾಡುತ್ತಿದ್ದ ಹದಿನಾಲ್ಕುಸಾವಿರಜನ ರಾಕ್ಷಸರನ್ನೂ ಕೊಂದನು. ಇವರೆಲ್ಲರೂ ರಾವಣನ ಸಂಬಂಧಿಗಳು. ಇವರ ವಧೆಯಾದುದನ್ನು ಕೇಳಿ ರಾವಣನಿಗೆ ಬಹುವಾಗಿ ಕೋಪಬಂದಿತು.

೫೦. ಅನಂತರ ಆ ರಾವಣನು ಮಾರೀಚನೆಂಬ ರಾಕ್ಷಸನ ಸಹಾಯವನ್ನು ಕೇಳಲು ಅವನು ರಾಮನ ಮೇಲೆ ಯುದ್ಧಕ್ಕೆ ಹೋಗಬೇಡವೆಂದೂ ಅವನು ಬಹು ಬಲಿಷ್ಠನೆಂದೂ ಅನೇಕ ಬಾರಿ ಹೇಳಿದನು.

೫೧. ಅಲ್ಲದೆ ಎಲೈ ರಾವಣನೇ! ಬಲಿಷ್ಠನಾದ ರಾಮನೊಡನೆ ನಿನಗೆ ವಿರೋಧವು ಯೋಗ್ಯವಲ್ಲ. ಎಂದು ಹೇಳಲು ಆ ಮಾರೀಚನ ವಾಕ್ಯವನ್ನು ಯಮನಿಂದ ಪ್ರೇರಿತನಾದ ಆ ರಾವಣನು ತಿರಸ್ಕರಿಸಿದನು.

ಜಗಾಮ ಸಹ ಮಾರೀಚಸ್ತಸ್ಯಾಶ್ರಮುಪದಂ ತದಾ ।
ತೇನ ಮಾಯಾವಿನಾ ದೂರಮುಪವಾಹ್ಯ ನೃಪಾತ್ಮಜೌ || ೫೨ ||

ಜಹಾರ ಭಾರ್ಯಾಂ ರಾಮಸ್ಯ ಗೃಧ್ರಂ ಹತ್ವಾ ಜಟಾಯುಷಂ ।
ಗೃಧ್ರಂ ಚ ನಿಹತಂ ದೃಷ್ಟ್ವಾ ಹೃತಾಂ ಶ್ರುತ್ವಾ ಚ ಮೈಥಿಲೀಮ್ || ೫೩ ||

ರಾಘವಶ್ಶೋಕಸನ್ತಪ್ತೋ ವಿಲಲಾಪಾಕುಲೇಂದ್ರಿಯಃ ।
ತತಸ್ತೇನೈವ ಶೋಕೇನ ಗೃಧ್ರಂ ದಗ್ಧ್ವಾ ಜಟಾಯುಷಂ || ೫೪ ||

ಮಾರ್ಗಮಾಣೋ ವನೇ ಸೀತಾಂ ರಾಕ್ಷಸಂ ಸಂದದರ್ಶ ಹ ।
ಕಬಂಧಂ ನಾಮ ರೂಪೇಣ ವಿಕೃತಂ ಘೋರದರ್ಶನಂ || ೫೫ ||

---

೫೨. ಅನಂತರ ರಾವಣನೂ ಮಾರೀಚನೂ ಆ ರಾಮನ ಆಶ್ರಮದ ಬಳಿಗೆ ಬಂದರು. ಅಲ್ಲಿ ರಾವಣನ ಮಾತಿನಂತೆ ಮಾರೀಚನು ರಾಮಲಕ್ಷ್ಮಣರನ್ನು ವಂಚಿಸಿ ದೂರವಾಗಿ ಕರೆದುಕೊಂಡು ಹೋದನು.

೫೩. ಇತ್ತ ಈ ರಾವಣನು ರಾಮನ ಹೆಂಡತಿಯನ್ನು ಕದ್ದುಕೊಂಡು ಹೋದನು. ದಾರಿಯಲ್ಲಿ ಅಡ್ಡಿಮಾಡಿದ ಜಟಾಯುವೆಂಬ ಪಕ್ಷಿಯನ್ನು ಕೊಂದನು. ರಾಮನು ಆಶ್ರಮಕ್ಕೆ ಬಂದು ಸೀತೆಯನ್ನು ಕಾಣದೆ ಹುಡುಕುತ್ತಿರಲು ಜಟಾಯುವನ್ನು ಕಂಡು ಅವನಿಂದ ರಾವಣನು ಸೀತೆಯನ್ನು ಕದ್ದುಕೊಂಡು ಹೋಗುತ್ತಿದ್ದುದನ್ನು ತಿಳಿದುಕೊಂಡನು.

೫೪. ಸೀತೆಯು ಇಲ್ಲದುದರಿಂದ ರಾಮನು ಬಹುದುಃಖಕ್ಕೆ ಒಳಗಾದನು. ಇದರಿಂದ ಬುದ್ಧಿಯು ಸ್ವಾಧೀನವಿಲ್ಲದಂತೆ ಆಗಿ ಅತ್ತನು. ದುಃಖದಲ್ಲಿಯೇ ಜಟಾಯುವನ್ನು ಅವನ ಮಾತಿನಂತೆ ಸುಟ್ಟನು.

೫೫. ಅನಂತರ ಸೀತೆಯನ್ನು ಹುಡುಕುತ್ತಾ ಹೊರಟನು. ಕಬಂಧನೆಂಬ ರಾಕ್ಷಸನು ಸಿಕ್ಕಿದನು. ಅವನು ವಿಕಾರಿಯಾಗಿ ಘೋರರೂಪವುಳ್ಳವನಾಗಿದ್ದನು.

ತಂ ನಿಹತ್ಯ ಮಹಾಬಾಹುರ್ದದಾಹ ಸ್ವರ್ಗತಶ್ಚ ಸಃ ।
ಸ ಚಾಸ್ಯ ಕಥಯಾಮಾಸ ಶಬರೀಂ ಧರ್ಮಚಾರಿಣೀಮ್ ॥ ೫೬ ॥

ಶ್ರಮಣೀಂ ಧರ್ಮನಿಪುಣಾಮಭಿಗಚ್ಛೇತಿ ರಾಘವಂ ।
ಸೋಽಭ್ಯಗಚ್ಛನ್ಮಹಾತೇಜಾಶ್ಶಬರೀಂ ಶತ್ರುಸೂದನಃ ॥ ೫೭ ॥

ಶಬರ್ಯಾ ಪೂಜಿತಸ್ಸಮ್ಯಗ್ರಾಮೋ ದಶರಥಾತ್ಮಜಃ ।
ಪಂಪಾತೀರೇ ಹನುಮತಾ ಸಙ್ಗತೋ ವಾನರೇಣ ಹ ॥ ೫೮ ॥

ಹನೂಮದ್ವಚನಾಚ್ಚೈವ ಸುಗ್ರೀವೇಣ ಸಮಾಗತಃ ।
ಸುಗ್ರೀವಾಯ ಚ ತತ್ಸರ್ವಂ ಶಂಸದ್ರಾಮೋ ಮಹಾಬಲಃ ॥ ೫೯ ॥

ಆದಿತಸ್ತದ್ಯಥಾವೃತ್ತಂ ಸೀತಾಯಾಶ್ಚ ವಿಶೇಷತಃ ।
ಸುಗ್ರೀವಶ್ಚಾಪಿ ತತ್ಸರ್ವಂ ಶ್ರುತ್ವಾ ರಾಮಸ್ಯ ವಾನರಃ ॥ ೬೦ ॥

೫೬–೫೭. ರಾಮನು ಅವನನ್ನು ಕೊಂದು ಅವನ ದೇಹವನ್ನು ಸುಡಲು ಅವನು ಸ್ವರ್ಗವನ್ನು ಹೊಂದಿದನು. ಆ ಕಬಂಧನು ಧರ್ಮಚಾರಿಣಿಯಾದ ಶಬರಿಯನ್ನು ನೋಡುವಂತೆ ಹೇಳಿದನು. ಅವನ ಮಾತಿನಂತೆ ಆ ಧರ್ಮಿಷ್ಠಳಾದ ಶಬರಿಯ ಬಳಿಗೆ ರಾಮನು ಹೋದನು

೫೮–೫೯. ರಾಮನನ್ನು ಶಬರಿಯು ಕಂಡಕೂಡಲೇ ಫಲಾದಿಗಳನ್ನು ಕೊಟ್ಟು ಪೂಜಿಸಿದಳು. ಅನಂತರ ಮುಂದೆ ಹೋಗಿ ಪಂಪಾತೀರದಲ್ಲಿ ಸಂಚರಿಸುತ್ತಿರಲು ಅಲ್ಲಿ ಹನುಮಂತನು ಸಿಕ್ಕಿದನು. ಆ ಹನುಮಂತನ ಮಾತಿನಂತೆ ರಾಮನು ಸುಗ್ರೀವನೊಡನೆ ಸೇರಿ ಅವನಿಗೆ ಸ್ನೇಹಿತನಾದನು. ಆಗ ರಾಮನು ಸುಗ್ರೀವನಿಗೆ ತನ್ನ ವಿಷಯವೆಲ್ಲವನ್ನೂ ಹೇಳಿದನು.

೬೦. ರಾಮನು ಸುಗ್ರೀವನಿಗೆ ತನ್ನ ವಿಷಯವನ್ನು ಮೊದಲಿನಿಂದ ಹೇಳಿದುದಲ್ಲದೆ ಸೀತೆಯ ವಿಷಯವನ್ನೂ ವಿಸ್ತಾರವಾಗಿ ಹೇಳಿದನು. ಸುಗ್ರೀವನು ರಾಮನ ವಿಷಯವೆಲ್ಲವನ್ನೂ ಕೇಳಿ ಅವನೊಡನೆ ಸ್ನೇಹವನ್ನು ಮಾಡಿಕೊಂಡನು.

ಚಕಾರ ಸಖ್ಯಂ ರಾಮೇಣ ಪ್ರೀತಶ್ಚೈವಾಗ್ನಿ ಸಾಕ್ಷಿಕಂ ।
ತತೋ ವಾನರರಾಜೇನ ವೈರಾನುಕಥನಂ ಪ್ರತಿ ॥ ೬೧ ॥

ರಾಮಾಯಾವೇದಿತಂ ಸರ್ವಂ ಪ್ರಣಯಾದ್ದುಃಖಿತೇನ ಚ ।
ಪ್ರತಿಜ್ಞಾತಂ ಚ ರಾಮೇಣ ತದಾ ವಾಲಿವಧಂ ಪ್ರತಿ ॥ ೬೨ ॥

ವಾಲಿನಶ್ಚ ಬಲಂ ತತ್ರ ಕಥಯಾಮಾಸ ವಾನರಃ ।
ಸುಗ್ರೀವಶ್ಶಂಕಿತಶ್ಚಾಸಿನ್ನಿತ್ಯಂ ವಿರ್ಯೇಣ ರಾಘವೇ ॥ ೬೩ ॥

ರಾಘವಪ್ರತ್ಯಯಾರ್ಥಸ್ತು ದುಂದುಭೇಃ ಕಾಯಮುತ್ತಮಂ ।
ದರ್ಶಯಾಮಾಸ ಸುಗ್ರೀವೋ ಮಹಾಪರ್ವತಸನ್ನಿಭಮ್ ॥ ೬೪ ॥

ಉತ್ಸ್ಮಯಿತ್ವಾ ಮಹಾಬಾಹುಃ ಪ್ರೇಕ್ಷ್ಯ ಚಾಸ್ಥಿ ಮಹಾಬಲಃ ।
ಪಾದಾಙ್ಗುಷ್ಠೇನ ಚಿಕ್ಷೇಪ ಸಮ್ಪೂರ್ಣಂ ದಶಯೋಜನಮ್ ॥ ೬೫ ॥

೬೧-೬೨. ಆ ಸ್ನೇಹವು ಅವರಿಬ್ಬರಿಗೂ ಅಗ್ನಿಸಾಕ್ಷಿಯಾಗಿ ನಡೆಯಿತು. ಅನಂತರ ಆ ಸುಗ್ರೀವನು ತನಗೂ ತನ್ನ ಅಣ್ಣನಿಗೂ ಇರುವ ವೈರವನ್ನು ಬಹು ದುಃಖಪಡುತ್ತ ಹೇಳಿದನು. ಅದನ್ನೆಲ್ಲಾ ಕೇಳಿದ ರಾಮನು ಅವನ ಅಣ್ಣನಾದ ಆ ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿದನು.

೬೩. ಅನಂತರ ಸುಗ್ರೀವನು ವಾಲಿಗಿರುವ ಬಲದ ವಿಷಯವನ್ನು ರಾಮನಿಗೆ ಹೇಳಿದನು. ಸುಗ್ರೀವನು ರಾಮನಿಗೆ ವಾಲಿಯನ್ನು ಕೊಲ್ಲುವಷ್ಟು ಬಲವಿದೆಯೋ ಇಲ್ಲವೋ ಎಂದು ಸಂದೇಹದಿಂದಿದ್ದನು. ಅದನ್ನು ರಾಮನಿಗೂ ತಿಳಿಸಿದನು.

೬೪. ಮತ್ತು ರಾಮನಲ್ಲಿ ಬಲವಿದೆಯೆಂದು ತಿಳಿಯಲು ಮಹಾ ಪರ್ವತ ದಂತೆ ದೊಡ್ಡದಾಗಿದ್ದ ದುಂದುಭಿಯ ದೇಹವನ್ನು ತೋರಿಸಿ ಅದನ್ನು ಎಸೆಯು ವಂತೆ ಆ ಸುಗ್ರೀವನು ಹೇಳಿದನು.

೬೫-೬೬. ರಾಮನು ಅದನ್ನು ನೋಡಿನಕ್ಕು ಪಾದದ ಹೆಬ್ಬೆರಳಿನಿಂದ ಅದನ್ನು ಎಸೆದನು. ಅದು ಹತ್ತುಯೋಜನಗಳ ಆಚೆಗೆ ಹೋಗಿ ಬಿದ್ದಿತು. ಅನಂತರ ಒಂದೇ ಬಾಣದಿಂದ ಏಳು ತಾಳೆಯಮರಗಳನ್ನು ಕತ್ತರಿಸಿದನು.

ಬಿಭೇದ ಚ ಪುನಸ್ಸಾಲಾನ್ ಸಪ್ತೈಕೇನ ಮಹೇಷುಣಾ ।
ಗಿರಿಂ ರಸಾತಲಂ ಚೈವ ಜನಯನ್ ಪ್ರತ್ಯಯಂ ತದಾ ॥ ೬೬ ॥

ತತಃ ಪ್ರೀತಮನಾಸ್ತೇನ ವಿಶ್ವಸ್ತಸ್ಸ ಮಹಾಕಪಿಃ ।
ಕಿಷ್ಕಿಂಧಾಂ ರಾಮಸಹಿತೋ ಜಗಾಮ ಚ ಗುಹಂ ತದಾ ॥ ೬೭ ॥

ತತೋಽಗರ್ಜದ್ಧರಿವರಸ್ಸುಗ್ರೀವೋ ಹೇಮಪಿಂಗಳಃ ।
ತೇನ ನಾದೇನ ಮಹತಾ ನಿರ್ಜಗಾಮ ಹರೀಶ್ವರಃ ॥ ೬೮ ॥

ಅನುಮಾನ್ಯ ತದಾ ತಾರಾಂ ಸುಗ್ರೀವೇಣ ಸಮಾಗತಃ ।
ನಿಜಘಾನ ಚ ತತ್ರೈನಂ ಶರೇಣೈಕೇನ ರಾಘವಃ ॥ ೬೯ ॥

ಹತಸ್ಸುಗ್ರೀವವಚನಾದ್ಧತ್ವಾ ವಾಲಿನಮಾಹವೇ ।
ಸುಗ್ರೀವಮೇವ ತದ್ರಾಜ್ಯೇ ರಾಘವಃ ಪ್ರತ್ಯಪಾದಯತ್ ॥ ೭೦ ॥

ಆ ಬಾಣವು ಮರಗಳನ್ನು ಕತ್ತರಿಸಿದುದಲ್ಲದೆ ಗಿರಿಯನ್ನು ಕತ್ತರಿಸಿ ಪಾತಾಳದ ವರೆಗೂ ಹೋಗಿ ಮತ್ತೆ ಬಂದಿತು ಇದರಿಂದ ಸುಗ್ರೀವನಿಗೆ ಬಲದ ವಿಷಯದಲ್ಲಿ ನಂಬಿಕೆಯು ಬಂದಿತು.

೬೭. ಆಗ ಸುಗ್ರೀವನಿಗೆ ನಂಬಿಕೆಯುಂಟಾದುದರಿಂದ ಸಂತೋಷ ವಾಯಿತು. ಅನಂತರ ರಾಮನ ಮಾತಿನಂತೆ ಸುಗ್ರೀವನು ಕಿಷ್ಕಿಂಧೆಯೆಂಬ ಗುಹೆಗೆ ಹೋದನು.

೬೮. ಅಲ್ಲಿ ಆ ಹೊಂಬಣ್ಣದ ಕಪಿಯಾದ ಸುಗ್ರೀವನು ಗರ್ಜಿಸಿದನು. ಆ ನಾದವನ್ನು ಕೇಳಿ ಕಪೀಶ್ವರನಾದ ವಾಲಿಯು ಕಿಷ್ಕಿಂಧೆಯಿಂದ ಹೊರಗೆ ಬಂದನು.

೬೯. ತನ್ನ ಹೆಂಡತಿಯಾದ ತಾರೆಯು ವಾಲಿಯನ್ನು ನಿಷೇಧಿಸಿದರೂ ಅವಳಿಗೆ ಸಮಾಧಾನವನ್ನು ಹೇಳಿ ಸುಗ್ರೀವನೊಡನೆ ಯುದ್ಧಕ್ಕೆ ಬಂದನು. ಆಗ ರಾಮನು ವಾಲಿಯನ್ನು ಒಂದೇ ಬಾಣದಿಂದ ಕೊಂದನು.

೭೦-೭೧. ರಾಮನು ಸುಗ್ರೀವನ ಮಾತಿನಂತೆ ವಾಲಿಯನ್ನು ಕೊಂದು ಆ ಸುಗ್ರೀವನಿಗೆ ಆ ವಾಲಿಯ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿದನು. ಅನಂತರ

ಸ ಚ ಸರ್ವಾನ್ ಸಮಾನೀಯ ವಾನರಾನ್ ವಾನರರ್ಷಭಃ ।
ದಿಶಃ ಪ್ರಸ್ಥಾಪಯಾಮಾಸ ದಿದೃಕ್ಷುರ್ಜನಕಾತ್ಮಜಾಮ್ ॥ ೭೧ ॥

ತತೋ ಗೃಧ್ರಸ್ಯ ವಚನಾತ್ಸಂಪಾತೇರ್ಹನುಮಾನ್ ಬಲೀ ।
ಶತಯೋಜನವಿಸ್ತೀರ್ಣಂ ಪುಪ್ಲುವೇ ಲವಣಾರ್ಣವಂ ॥ ೭೨ ॥

ತತ್ರ ಲಂಕಾಂ ಸಮಾಸಾದ್ಯ ಪುರೀಂ ರಾವಣಪಾಲಿತಾಮ್ ।
ದದರ್ಶ ಸೀತಾಂ ಧ್ಯಾಯನ್ತೀಮಶೋಕವನಿಕಾಂ ಗತಾಮ್ ॥ ೭೩ ॥

ನಿವೇದಯಿತ್ವಾಭಿಜ್ಞಾನಂ ಪ್ರವೃತ್ತಿಂ ಚ ನಿವೇದ್ಯ ಚ ।
ಸಮಾಶ್ವಾಸ್ಯ ಚ ವೈದೇಹೀಂ ಮರ್ದಯಾಮಾಸ ತೋರಣಮ್ ॥ ೭೪ ॥

ಪಂಚ ಸೇನಾಗ್ರಗಾನ್ ಹತ್ವಾ ಸಪ್ತಮಂತ್ರಿಸುತಾನಪಿ ।
ಶೂರಮಕ್ಷಂ ಚ ನಿಷ್ಪಿಷ್ಯ ಗ್ರಹಣಂ ಸಮುಪಾಗಮತ್ ॥ ೭೫ ॥

ಸುಗ್ರೀವನು ಎಲ್ಲಾ ಕಪಿಗಳನ್ನೂ ಕರೆಸಿ ಅವರಿಗೆ ಸನ್ಮಾನಮಾಡಿ ಜನಕಾತ್ಮಜೆಯನ್ನು ಹುಡುಕಲು ಎಲ್ಲಾ ದಿಕ್ಕಿಗೂ ಕಳುಹಿಸಿದನು.

೭೨. ಕಡೆಗೆ ಹನುಮಂತನು ಸಂಪಾತಿಯೆಂಬ ಒಂದು ಹದ್ದಿನ ಮಾತಿನಂತೆ ಲಂಕೆಗೆ ಹೋಗಲು ನೂರು ಯೋಜನಗಳ ಅಗಲವುಳ್ಳ ಲವಣ ಸಮುದ್ರವನ್ನು ಹಾರಿದನು.

೭೩. ಆ ಸಮುದ್ರವನ್ನು ದಾಟಿ ರಾವಣನಿಂದ ರಕ್ಷಿತವಾದ ಲಂಕೆಗೆ ಹೋದನು. ಅನಂತರ ಆ ಪಟ್ಟಣದಲ್ಲೆಲ್ಲಾ ಸೀತೆಯನ್ನು ಹುಡುಕುತ್ತ ಕೊನೆಗೆ ಅಶೋಕವನದಲ್ಲಿದ್ದುಕೊಂಡು ರಾಮನನ್ನೇ ಧ್ಯಾನಮಾಡುತ್ತಿರುವ ಸೀತೆಯನ್ನು ನೋಡಿದನು.

೭೪. ಹನುಮಂತನು ಆ ಸೀತೆಗೆ ಗುರುತನ್ನು ಕೊಟ್ಟು ರಾಮನ ವಿಷಯವನ್ನೆಲ್ಲಾ ತಿಳಿಸಿ ಆ ವೈದೇಹಿಯನ್ನು ಸಮಾಧಾನಪಡಿಸಿ ಆ ಊರಿನ ಹೆಬ್ಬಾಗಿಲನ್ನು ಮುರಿದನು.

೭೫. ಅನಂತರ ಆ ರಾವಣನ ಕಡೆಯವರು ಅವನನ್ನು ಹಿಡಿಯುವುದಕ್ಕೆ ಬಂದಾಗ ಅವರಲ್ಲಿ ಐದುಜನ ಸೇನಾಪತಿಗಳನ್ನು ಕೊಂದನು. ಮತ್ತು ಏಳುಜನ ಮಂತ್ರಿಗಳ ಮಕ್ಕಳನ್ನೂ ಕೊಂದನು. ಅನಂತರ ಶೂರನಾದ ಅಕ್ಷಕುಮಾರನನ್ನು ಕೊಂದು ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಸಿಕ್ಕಿಬಿದ್ದನು.

ಅಸ್ತ್ರೇಣೋನ್ಮುಕ್ತಮಾತ್ಮಾನಂ ಜ್ಞಾತ್ವಾ ಪೈತಾಮಹಾದ್ವರಾತ್ ।
ಮರ್ಷಯನ್ರಾಕ್ಷಸಾನ್ವೀರೋ ಯಂತ್ರಿಣಸ್ತಾನ್ಯದೃಚ್ಛಯಾ ॥ ೭೬ ॥

ತತೋ ದಗ್ಧ್ವಾ ಪುರೀಂ ಲಂಕಾಮೃತೇ ಸೀತಾಂ ಚ ಮೈಥಿಲೀಮ್ ।
ರಾಮಾಯ ಪ್ರಿಯಮಾಖ್ಯಾತುಂ ಪುನರಾಯಾನ್ಮಹಾಕಪಿಃ ॥ ೭೭ ॥

ಸೋಭಿಗಮ್ಯ ಮಹಾತ್ಮಾನಂ ಕೃತ್ವಾ ರಾಮಂ ಪ್ರದಕ್ಷಿಣಂ ।
ನ್ಯವೇದಯದಮೇಯಾತ್ಮಾ ದೃಷ್ಟಾ ಸೀತೇತಿ ತತ್ತ್ವತಃ ॥ ೭೮ ॥

ತತಸ್ಸುಗ್ರೀವಸಹಿತೋ ಗತ್ವಾ ತೀರಂ ಮಹೋದಧೇಃ ।
ಸಮುದ್ರಂ ಕ್ಷೋಭಯಾಮಾಸ ಶರೈರಾದಿತ್ಯಸನ್ನಿಭೈಃ ॥ ೭೯ ॥

---

೭೬. ಬ್ರಹ್ಮನ ವರದಿಂದ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದನು. ಅನಂತರ ಆದರಿಂದ ಮುಕ್ತನೂ ಆದನು. ಆದರೂ ಕೂಡ ಆ ಅಸ್ತ್ರಕ್ಕೆ ಸಿಕ್ಕಿಬಿದ್ದವನಂತೆಯೇ ನಟಿಸುತ್ತ ಆ ರಾಕ್ಷಸರನ್ನೆಲ್ಲಾ ಕ್ಷಮಿಸುತ್ತಲೇ ಹೋಗುತ್ತಿದ್ದನು.

೭೭. ಅನಂತರ ಆ ರಾವಣನು ಶಿಕ್ಷೆಯರೂಪವಾಗಿ ಅವನ ಬಾಲಕ್ಕೆ ಬೆಂಕಿಯನ್ನು ಹಚ್ಚಲು ಅದರಿಂದ ಆ ಲಂಕಾಪುರಿಯನ್ನೇ ಸುಟ್ಟನು ಸೀತೆಗೆ ಮಾತ್ರ ಯಾವ ತೊಂದರೆಯೂ ಆಗಲಿಲ್ಲ ಈ ವಿಷಯವನ್ನು ರಾಮನಿಗೆ ತಿಳಿಸಲು ಹಿಂದಿರುಗಿ ಮತ್ತೆ ಬಂದನು.

೭೮. ಹನುಮಂತನು ರಾಮನ ಬಳಿಗೆ ಬಂದು ಅವನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಎಲೈ ರಾಮನೇ! ಸೀತೆಯನ್ನು ನಿಶ್ಚಯವಾಗಿಯೂ ನೋಡಿದೆನು ಎಂಬುದಾಗಿ ತಿಳಿಸಿದನು.

೭೯. ಅನಂತರ ಶ್ರೀರಾಮನು ಸುಗ್ರೀವನೊಡನೆ ಸಮುದ್ರದ ಬಳಿಗೆ ಹೋಗಿ ಅಲ್ಲಿ ಸಮುದ್ರವು ಲಂಕೆಗೆ ಹೋಗಲು ದಾರಿಬಿಡದಿರಲು ಸೂರ್ಯನಿಗೆ ಸಮಾನವಾದ ಅಸ್ತ್ರಗಳಿಂದ ಆ ಸಮುದ್ರವನ್ನು ಶೋಷಿಸಿದನು.

ದರ್ಶಯಾಮಾಸ ಚಾತ್ಮಾನಂ ಸಮುದ್ರಸ್ಸರಿತಾಂ ಪತಿಃ ।
ಸಮುದ್ರ ವಚನಾಚ್ಚೈವ ನಳಂ ಸೇತುಮಕಾರಯತ್ ॥ ೮೦ ॥

ತೇನ ಗತ್ವಾ ಪುರೀಂ ಲಂಕಾಂ ಹತ್ವಾ ರಾವಣಮಾಹವೇ ।
ರಾಮಸ್ಸೀತಾಮನುಪ್ರಾಪ್ಯ ಪರಾಂ ಪ್ರೀತಿಮುಪಾಗಮತ್ ॥ ೮೧ ॥

ತಾಮುವಾಚ ತತೋ ರಾಮಃ ಪರುಷಂ ಜನಸಂಸದಿ ।
ಅಮೃಷ್ಯಮಾಣಾ ಸಾ ಸೀತಾ ವಿವೇಶ ಜ್ವಲನಂ ಸತೀ ॥ ೮೨ ॥

ತತೋಗ್ನಿವಚನಾತ್ಸೀತಾಂ ಜ್ಞಾತ್ವಾ ವಿಗತಕಲ್ಮಷಾಂ ।
ಕರ್ಮಣಾ ತೇನ ಮಹತಾ ತ್ರೈಲೋಕ್ಯಂ ಸಚರಾಚರಂ ॥ ೮೩ ॥

---

೮೦. ಇದರಿಂದ ಹೆದರಿಕೊಂಡು ಸಮುದ್ರರಾಜನು ರಾಮನ ಬಳಿಗೆ ಪ್ರತ್ಯಕ್ಷವಾಗಿ ಬಂದನು. ಅನಂತರ ಸಮುದ್ರರಾಜನ ಮಾತಿನಂತೆ ರಾಮನು ಸಮುದ್ರದಲ್ಲಿ ನಳನ ಕೈಯ್ಯಿಂದ ಸೇತುವೆಯನ್ನು ಕಟ್ಟಿಸಿದನು.

೮೧. ಆ ಸೇತುವೆಯಮೇಲೆ ಸೈನ್ಯವನ್ನು ಕರೆದುಕೊಂಡು ಲಂಕೆಗೆ ಹೋಗಿ ಯುದ್ಧದಲ್ಲಿ ರಾವಣನನ್ನು ಕೊಂದು ಮತ್ತೆ ಸೀತೆಯನ್ನು ಹೊಂದಿ ರಾಮನು ಬಹು ಸಂತೋಷಪಟ್ಟನು. ಅಲ್ಲದೆ ಆ ರಾಮನಿಗೆ ಬಹುವಾದ ಲಜ್ಜೆಯೂ ಉಂಟಾಯಿತು.

೮೨. ಆಗ ರಾಮನು ಸೀತೆಯನ್ನು ಕುರಿತು ಜನಗಳ ಮಧ್ಯದಲ್ಲಿ ಕ್ರೂರವಾದ ಮಾತುಗಳನ್ನು ಆಡಿದನು. ಸೀತೆಯು ಅದನ್ನು ಸಹಿಸಲಾರದೆ ಅಗ್ನಿ ಪ್ರವೇಶವನ್ನು ಮಾಡಿದಳು.

೮೩. ಅನಂತರ ರಾಮನಿಗೆ ಅಗ್ನಿಯು ಬಂದು ಈಕೆಯು ಪರಿಶುದ್ಧಳು. ಎಂದು ಹೇಳಲು ಆ ಅಗ್ನಿಯ ಮಾತಿನಂತೆ ಸೀತೆಯು ಪಾಪಕೆಲಸವನ್ನು ಮಾಡಿಲ್ಲವೆಂದು ತಿಳಿದನು. ಸೀತೆಯ ಈ ರೀತಿಯಾದ ಕೆಲಸದಿಂದ ಚರಾಚರಗಳಿಂದ ಕೂಡಿದ ಮೂರುಲೋಕವೂ ಸಂತೋಷಪಟ್ಟುವು.

ಸದೇವರ್ಷಿಗಣಂ ತುಷ್ಟಂ ರಾಘವಸ್ಯ ಮಹಾತ್ಮನಃ ।
ಬಭೌ ರಾಮಸ್ಸಮ್ಪ್ರಹೃಷ್ಟಃ ಪೂಜಿತಸ್ಸರ್ವದೈವತೈಃ ॥ ೮೪ ॥

ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಂ ।
ಕೃತಕೃತ್ಯಸ್ತತೋ ರಾಮೋ ವಿಜ್ವರಃ ಪ್ರಮುಮೋದ ಹ ॥ ೮೫ ॥

ದೇವತಾಭ್ಯೋ ವರಂ ಪ್ರಾಪ್ಯ ಸಮುತ್ಥಾಪ್ಯ ಚ ವಾನರಾನ್ ।
ಅಯೋಧ್ಯಾಂ ಪ್ರಸ್ಥಿತೋ ರಾಮಃ ಪುಷ್ಪಕೇಣ ಸುಹೃದ್ವೃತಃ ॥ ೮೬ ॥

ಭರದ್ವಾಜಾಶ್ರಮಂ ಗತ್ವಾ ರಾಮಸ್ಸತ್ಯಪರಾಕ್ರಮಃ ।
ಭರತಸ್ಯಾಂತಿಕಂ ರಾಮೋ ಹನೂಮಂತಂ ವ್ಯಸರ್ಜಯತ್ ॥ ೮೭ ॥

ಪುನರಾಖ್ಯಾಯಿಕಾಂ ಜಲ್ಪನ್ ಸುಗ್ರೀವಸಹಿತಶ್ಚ ಸಃ ।
ಪುಷ್ಪಕಂ ತತ್ಸಮಾರುಹ್ಯ ನಂದಿಗ್ರಾಮಂ ಯಯೌ ತದಾ ॥ ೮೮ ॥

---

೮೪. ಅಲ್ಲದೆ ರಾಮನ ಈ ಕೆಲಸದಿಂದ ದೇವತೆಗಳೂ ಋಷಿಗಳೂ ಸಂತೋಷಪಟ್ಟರು. ಆಗ ರಾಮನೂ ಸಂತೋಷಪಟ್ಟನು. ದೇವತೆಗಳೆಲ್ಲರೂ ಆ ರಾಮನನ್ನು ಪೂಜಿಸಿದರು.

೮೫. ಅನಂತರ ರಾಮನು ವಿಭೀಷಣನನ್ನು ಆ ಲಂಕೆಯ ರಾಜ್ಯದಲ್ಲಿ ಅಭಿಷೇಕಮಾಡಿದನು. ಈ ಕೆಲಸಗಳಿಂದ ರಾಮನು ಕೃತಕೃತ್ಯನಾಗಿ ದುಃಖವನ್ನು ಕಳೆದುಕೊಂಡು ಸಂತೋಷಪಟ್ಟನು.

೮೬. ಅನಂತರ ರಾಮನಿಗೆ ದೇವತೆಗಳು ವರವನ್ನು ಕೊಟ್ಟರು ಮತ್ತು ಅವರ ವರದಿಂದ ಸತ್ತ ಕಪಿಗಳೆಲ್ಲರೂ ಜೀವಿಸಿ ಎದ್ದರು. ಅನಂತರ ಆ ರಾಮನು ಪುಷ್ಪಕದಲ್ಲಿ ಸ್ನೇಹಿತರಿಂದ ಕೂಡಿ ಕುಳಿತುಕೊಂಡು ಅಯೋಧ್ಯೆಗೆ ಹೋದನು.

೮೭. ಮೊದಲು ಭರದ್ವಾಜನ ಆಶ್ರಮಕ್ಕೆ ಹೋಗಿ ಅಲ್ಲಿ ನಿಂತು ತನ್ನನ್ನೇ ಎದುರು ನೋಡುತ್ತಿರುವ ಭರತನ ಬಳಿಗೆ ತನ್ನ ಸಮಾಚಾರವನ್ನು ತಿಳಿಸಲು ಹನುಮಂತನನ್ನು ಕಳುಹಿಸಿದನು.

೮೮. ಅನಂತರ ಸುಗ್ರೀವನೊಡನೆ ಪುಷ್ಪಕದಲ್ಲಿ ಕುಳಿತು ಅನೇಕ ವಿಧವಾದ ಸಂತೋಷದ ಮಾತುಗಳನ್ನಾಡುತ್ತ ಭರತನು ವಾಸಿಸುತ್ತಿದ್ದ ನಂದಿಗ್ರಾಮಕ್ಕೆ ಹೋದನು.

ನಂದಿಗ್ರಾಮೇ ಜಟಾಂ ಹಿತ್ವಾ ಭ್ರಾತೃಭಿಸ್ಸಹಿತೋಽನಘಃ ।
ರಾಮಸ್ಸೀತಾಮನುಪ್ರಾಪ್ಯ ರಾಜ್ಯಂ ಪುನರವಾಪ್ತವಾನ್ ॥ ೮೯ ॥

ಪ್ರಹೃಷ್ಟ ಮುದಿತೋ ಲೋಕಸ್ತುಷ್ಟಃ ಪುಷ್ಟಸ್ಸುಧಾರ್ಮಿಕಃ ।
ನಿರಾಮಯೋ ಹ್ಯರೋಗಶ್ಚ ದುರ್ಭಿಕ್ಷಭಯವರ್ಜಿತಃ ॥ ೯೦ ॥

ನ ಪುತ್ರಮರಣಂ ಕಿಂಚಿದ್ದ್ರಕ್ಷ್ಯಂತಿ ಪುರುಷಾಃ ಕ್ವಚಿತ್ ।
ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯಂತಿ ಪತಿವ್ರತಾಃ ॥ ೯೧ ॥

ನ ಚಾಗ್ನಿಜಂ ಭಯಂ ಕಿಂಚನಾಪ್ಸು ಮಜ್ಜಂತಿ ಜಂತವಃ ।
ನ ವಾತಜಂ ಭಯಂ ಕಿಂಚಿನ್ನಾಪಿ ಜ್ವರಕೃತಂ ತಥಾ ॥ ೯೨ ॥

ನ ಚಾಪಿ ಕ್ಷುದ್ಭಯಂ ತತ್ರ ನ ತಸ್ಕರ ಭಯಂ ತಥಾ ।
ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯಯುತಾನಿ ಚ ॥ ೯೩ ॥

---

೮೯. ಆ ನಂದಿಗ್ರಾಮದಲ್ಲಿ ರಾಮನೂ ಅವನ ಸಹೋದರರೂ ಜಟೆಯನ್ನು ತ್ಯಜಿಸಿದರು. ಹೀಗೆ ರಾಮನು ಸೀತೆಯನ್ನು ಹೊಂದಿ ಮತ್ತೆ ರಾಜ್ಯವನ್ನು ಹೊಂದಿದನು.

೯೦. ಆಗ ದೇಶವು ಸಂತೋಷಗೊಂಡಿದ್ದಿತು. ತುಷ್ಟಿಯನ್ನು ಹೊಂದಿದ್ದಿತು. ಒಳ್ಳೆಯ ಧರ್ಮದಿಂದಿದ್ದಿತು. ಮನೋರೋಗವನ್ನಾಗಲಿ, ದೇಹದ ರೋಗವನ್ನಾಗಲಿ ಹೊಂದಿರಲಿಲ್ಲ. ದುರ್ಭಿಕ್ಷವಿರಲಿಲ್ಲ. ಭಯವೂ ಇರಲಿಲ್ಲ.

೯೧. ಪುರುಷರು ಎಲ್ಲಿಯೂ ಕೂಡ ಮಕ್ಕಳು ಸತ್ತರೆಂಬುದನ್ನೇ ಕೇಳುತ್ತಿರಲಿಲ್ಲ. ನಾರಿಯರು ವಿಧವೆಯರಾಗುತ್ತಿರಲಿಲ್ಲ.

೯೨. ಬೆಂಕಿಯಿಂದ ಸುಡುವ ಭಯವೇ ಇರಲಿಲ್ಲ. ನೀರಿನಲ್ಲಿ ಒಬ್ಬರೂ ಮುಳುಗಿಸಾಯುತ್ತಿರಲಿಲ್ಲ. ಗಾಳಿಯ ಭಯವೆಂಬುದೂ ಇರಲಿಲ್ಲ. ಜ್ವರದ ಭಯವೂ ಇರಲಿಲ್ಲ.

೯೩-೯೪. ಹಸಿವಿನ ಭಯವಾಗಲೀ, ಕಳ್ಳರ ಭಯವಾಗಲೀ ಇರಲಿಲ್ಲ. ನಗರಗಳೂ, ರಾಷ್ಟ್ರಗಳೂ, ಧನದಿಂದಲೂ, ಧಾನ್ಯದಿಂದಲೂ ತುಂಬಿದ್ದುವು.

ನಿತ್ಯಂ ಪ್ರಮುದಿತಾಸ್ಸರ್ವೇ ಯಥಾ ಕೃತಯುಗೇ ತಥಾ ।
ಅಶ್ವಮೇಧಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ॥ ೯೪ ॥

ಗವಾಂ ಕೋಟ್ಯಯುತಂ ದತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ ।
ಅಸಂಖ್ಯೇಯಂ ಧನಂ ದತ್ವಾ ಬ್ರಾಹ್ಮಣೇಭ್ಯೋ ಮಹಾಯಶಾಃ ॥ ೯೫ ॥

ರಾಜವಂಶಾಞ್ಛತಗುಣಾನ್ ಸ್ಥಾಪಯಿಷ್ಯತಿ ರಾಘವಃ ।
ಚಾತುರ್ವರ್ಣ್ಯಂ ಚ ಲೋಕೇಽಸ್ಮಿನ್ ಸ್ವೇ ಸ್ವೇ ಧರ್ಮೇ ನಿಯೋಕ್ಷ್ಯತಿ ॥

ದಶವರ್ಷಸಹಸ್ರಾಣಿ ದಶವರ್ಷಶತಾನಿ ಚ ।
ರಾಮೋ ರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಗಮಿಷ್ಯತಿ ॥ ೯೭ ॥

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಮ್ಮಿತಂ ।
ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ ॥ ೯೮ ॥

ಕೃತ ಯುಗದಲ್ಲಿನ ಪ್ರಜೆಗಳಂತೆ ಪ್ರಜೆಗಳು ಯಾವಾಗಲೂ ಸಂತೋಷದಿಂದಿದ್ದರು. ಆಗ ರಾಮನು ನೂರು ಅಶ್ವಮೇಧ ಯಾಗಗಳನ್ನು ಮಾಡಿ ಅನೇಕವಾಗಿ ದಕ್ಷಿಣೆಗಳನ್ನು ಕೊಟ್ಟನು.

೯೫. ಹತ್ತು ಸಾವಿರ ಕೋಟಿ ಗೋವುಗಳನ್ನು ದಾನಮಾಡಿ ಬ್ರಹ್ಮಲೋಕಕ್ಕೆ ಹೋಗುವನು. ಆ ಮಹಾ ಯಶಸ್ಕನಾದ ರಾಮನು ಬ್ರಾಹ್ಮಣರಿಗೆ ಬಹುವಾದ ದಕ್ಷಿಣೆಗಳನ್ನು ಕೊಡುವನು.

೯೬. ರಾಜರ ವಂಶಗಳನ್ನು ಬಹುವಾಗಿ ಭೂಮಿಯಲ್ಲಿ ನೆಲಸುವಂತೆ ಮಾಡುವನು. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳೂ ಅವರವರ ಧರ್ಮಗಳಲ್ಲಿರುವಂತೆ ಮಾಡುವನು.

೯೭. ಈ ರೀತಿಯಾಗಿದ್ದುಕೊಂಡು ಹನ್ನೊಂದು ಸಾವಿರ ವರ್ಷಗಳವರೆಗೂ ರಾಜ್ಯಭಾರ ಮಾಡುವನು. ಅನಂತರ ಬ್ರಹ್ಮ ಲೋಕಕ್ಕೆ ಹೋಗುವನು.

೯೮. ಈ ಕಥೆಯು ಪವಿತ್ರವಾದುದು. ಪಾಪವನ್ನು ನಾಶಮಾಡತಕ್ಕದ್ದು. ವೇದಗಳಿಗೆ ಸಮವಾದುದು ಯಾವನು ಈ ರಾಮ ಚರಿತ್ರೆಯನ್ನು ಓದುವನೋ ಅವನಿಗೆ ಎಲ್ಲಾ ಪಾಪಗಳೂ ಹೋಗುತ್ತವೆ.

ಏತದಾಖ್ಯಾನಮಾಯುಷ್ಯಂ ಪಠನ್ ರಾಮಾಯಣಂ ನರಃ ।
ಸಪುತ್ರಪೌತ್ರಸ್ಸಗಣಃ ಪ್ರೇತ್ಯ ಸ್ವರ್ಗೇ ಮಹೀಯತೇ ॥ ೯೯ ॥

ಪಠನ್ ದ್ವಿಜೋ ವಾಗೃಷಭತ್ವಮೀಯಾತ್
ಸ್ಯಾತ್ ಕ್ಷತ್ರಿಯೋ ಭೂಮಿಪತಿತ್ವಮೀಯಾತ್ ।
ವಣಿಗ್ಜನಃ ಪಣ್ಯಫಲತ್ವಮೀಯಾತ್
ಜನಶ್ಚ ಶೂದ್ರೋಽಪಿ ಮಹತ್ತ್ವಮೀಯಾತ್ ॥ ೧೦೦ ॥

ಏವಂ ಶಿಷ್ಯ ನಾರದೇನ ಮುನಿನಾ ಯಚ್ಚ ಧೀಮತಾ ।
ವಾಲ್ಮೀಕಯೇ ವೇದವಾಕ್ಯೈರ್ಯಾವನ್ಮಾತ್ರಂ ನಿವೇದಿತಂ ॥ ೧೦೧ ॥

ತಾವದೇವಾರ್ಥಮಾದಾಯ ಶ್ಲೋಕಬದ್ಧಂ ಮನೋರಮಂ ।
ವಾಲ್ಮೀಕಿನಾ ಕೃತಂ ಪೂರ್ವಂ ಲಘುರಾಮಾಯಣಾಭಿದಂ ॥ ೧೦೨ ॥

ಶತಶ್ಲೋಕಮಿತಂ ಸ್ವೀಯ ಕವಿತಾಯಾಂ ಚ ತನ್ಮಯಾ ।
ತವಾಗ್ರೇ ಕಥಿತಂ ಸರ್ವಂ ಶ್ರವಣಾತ್ಪುಣ್ಯವರ್ಧನಂ ॥ ೧೦೩ ॥

---

೯೯. ಈ ಕಥೆಯು ಆಯುಸ್ಸನ್ನು ಹೆಚ್ಚಿಸುತ್ತದೆ ಮನುಷ್ಯನು ಈ ರಾಮಾಯಣವನ್ನು ಓದಿದರೆ ಪುತ್ರರನ್ನೂ, ಪೌತ್ರರನ್ನೂ ಹೊಂದಿದ್ದು ಸತ್ತ ಮೇಲೆ ಸ್ವರ್ಗದಲ್ಲಿ ಸುಖಿಸುವನು.

೧೦೦. ಈ ರಾಮ ಚರಿತ್ರೆಯನ್ನು ದ್ವಿಜನು ಓದಿದರೆ ವಾಚಾಳಿಯಾಗುವನು. ಕ್ಷತ್ರಿಯನು ಓದಿದರೆ ರಾಜನಾಗುವನು. ವೈಶ್ಯನು ಓದಿದರೆ ವ್ಯಾಪಾರದಲ್ಲಿ ಲಾಭವನ್ನು ಹೊಂದುವನು. ಶೂದ್ರನು ಓದಿದರೆ ಮಹತ್ವವನ್ನು ಹೊಂದುವನು.

೧೦೧-೧೦೨. ಎಲೈ ಶಿಷ್ಯನೇ! ಬುದ್ಧಿವಂತನಾದ ನಾರದನು ವೇದವಾಕ್ಯಗಳಿಂದ ವಾಲ್ಮೀಕಿಗೆ ಹೇಳಿದನು. ಅದರ ಅರ್ಥವನ್ನೇ ತೆಗೆದುಕೊಂಡು ಮನೋಹರವಾಗಿ ಶ್ಲೋಕಬದ್ಧವಾಗಿ ವಾಲ್ಮೀಕಿಯು ರಚಿಸಿರುವನು. ಇದಕ್ಕೆ ಲಘುರಾಮಾಯಣವೆಂದು ಹೆಸರು ಬಂದಿರುವುದು.

೧೦೩. ತನ್ನ ಕವಿತೆಯಲ್ಲಿ ಈ ಲಘುರಾಮಾಯಣವನ್ನು ನೂರು ಶ್ಲೋಕಗಳುಳ್ಳದ್ದನ್ನಾಗಿ ಹೇಳಿರುವನು ಅದನ್ನೇ ನಾನು ನಿನ್ನ ಎದುರಿಗೆ ಹೇಳಿದ್ದೇನೆ. ಇದನ್ನು ಕೇಳಿದರೆ ಪುಣ್ಯವು ಬರುತ್ತದೆ.

ಬ್ರಹ್ಮದತ್ತವರೇಣೈವ ಸರ್ವಂ ಜ್ಞಾತ್ವಾ ಸ ವೈ ಮುನಿಃ।
ಶತಕೋಟಿಮಿತಾಂ ರಾಮಕ್ರೀಡಾಂ ಶ್ಲೋಕೈರ್ಬಬಂಧ ಹ ॥ ೧೦೪ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಮನೋಹರಕಾಂಡೇ ಲಘುರಾಮಾಯಣ ನಿರೂಪಣಂ ನಾಮ ಪ್ರಥಮಸರ್ಗಃ ಸಮಾಪ್ತಃ

---

೧೦೪. ಬ್ರಹ್ಮನು ಕೊಟ್ಟ ವರದಿಂದಲೇ ವಾಲ್ಮೀಕಿಯು ಎಲ್ಲವನ್ನೂ ತಿಳಿದು ಈ ರಾಮ ಕ್ರೀಡೆಯನ್ನು ಶತಕೋಟಿ ಗ್ರಂಥಗಳ ಪ್ರಮಾಣದಲ್ಲಿ ಬರೆದಿರುವನು.

ಇಂತು ಶ್ರೀ ವಾಲ್ಮೀಕಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಲಘುರಾಮಾಯಣ ನಿರೂಪಣವೆಂಬ ಮೊದಲನೆಯ ಸರ್ಗವು ಮುಗಿದುದು.

—o—o—o—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಮೊದಲನೆಯ ಸರ್ಗದ ಸಾರಾಂಶವು

ನಾರದನು ರಾಮಾಯಣವನ್ನು ವಾಲ್ಮೀಕಿಗೆ ಬೋಧಿಸಿದನು. ಆ ವಾಲ್ಮೀಕಿಯು ಸಮಗ್ರರಾಮಾಯಣವನ್ನು ಶತಕೋಟಿ ಶ್ಲೋಕಗಳ ರೂಪದಲ್ಲಿ ಬರೆದಿದ್ದರೂ ಸಂಕ್ಷೇಪ ರಾಮಾಯಣವೆಂಬುದಾಗಿ ಒಂದುನೂರು ಶ್ಲೋಕಗಳಲ್ಲಿ ಬರೆದಿರುವನು. ಅದನ್ನು ರಾಮದಾಸನು ಹೇಳುವನು ಮಂಗಳಾಚರಣವು.

ಕವಿತೆಯೆಂಬ ಮರವನ್ನು ಹತ್ತಿ ರಾಮ ರಾಮ ಎಂದು ಕೂಗುತ್ತಿರುವ ವಾಲ್ಮೀಕಿಯೆಂಬ ಕೋಗಿಲೆಯನ್ನು ನಮಸ್ಕರಿಸುತ್ತೇನೆ. ಕವಿತೆಯೆಂಬ ವನದಲ್ಲಿ ಸಂಚರಿಸುತ್ತಿರುವ ವಾಲ್ಮೀಕಿಯೆಂಬ ಸಿಂಹದ ನಾದವನ್ನು ಕೇಳಿದವರೆಲ್ಲರೂ ಉತ್ತಮ ಗತಿಯನ್ನು ಹೊಂದುತ್ತಾರೆ.

ರಾಮಚರಿತೆಯೆಂಬ ಅಮೃತ ಸಮುದ್ರವನ್ನೇ ಕುಡಿಯುತ್ತಿದ್ದರೂ ತೃಪ್ತನಾಗದಿರುವ ವಾಲ್ಮೀಕಿಯನ್ನು ನಮಸ್ಕರಿಸುತ್ತೇನೆ.

ಸಮುದ್ರವನ್ನು ಸಣ್ಣ ಕಾಲುವೆಯನ್ನು ದಾಟುವಂತೆ ದಾಟಿ ರಾವಣನನ್ನು ಹುಲ್ಲಿಗಿಂತಲೂ ಕಡೆಯಾಗಿ ತಿಳಿದು ರಾಮಾಯಣವೆಂಬ ಹಾರಕ್ಕೆ ನಾಯಕ ಮಣಿಯಂತಿರುವ ಆಂಜನೇಯನನ್ನು ನಮಸ್ಕರಿಸುತ್ತೇನೆ.

ವೀರನೂ ಜಾನಕಿಯ ದುಃಖವನ್ನು ನಾಶಮಾಡಿದವನೂ ಅಕ್ಷನನ್ನು ಕೊಂದು ಲಂಕೆಗೇ ಭಯಂಕರನೂ ಆದ ಆಂಜನೇಯನಿಗೆ ನಮಸ್ಕಾರವು.

ಸಮುದ್ರವನ್ನು ದಾಟಿ ಜಾನಕಿಯ ದುಃಖವೆಂಬ ಅಗ್ನಿಯನ್ನು ತೆಗೆದು ಅದರಿಂದಲೇ ಲಂಕೆಯನ್ನು ಸುಟ್ಟ ಜಿತೇಂದ್ರಿಯನೂ ಬುದ್ಧಿವಂತನೂ ಆದ ಹನುಮಂತನಿಗೆ ನಮಸ್ಕಾರವು.

ರಘುವಂಶದಲ್ಲಿ ಹುಟ್ಟಿ ಸೀತೆಗೆ ನಿರ್ಗುಣನಾದರೂ ಗುಣವನ್ನು ಹೊಂದಿ ಪತಿಯಾಗಿ ಅವತರಿಸಿದ ಆ ಪರಮಾತ್ಮನಿಗೆ ನಮಸ್ಕಾರವು.

ಒಂದು ಸಾರಿ ತನ್ನ ಬಳಿಗೆ ಬಂದ ನಾರದನನ್ನು ಕುರಿತು ಪೂಜಿಸಿ ವಾಲ್ಮೀಕಿಯು ಇಂತೆಂದು ಕೇಳಿದನು

ಗುಣವಂತನೂ ಪರಾಕ್ರಮಿಯೂ ಧರ್ಮವನ್ನು ಬಲ್ಲವನೂ ಉಪಕಾರ ಸ್ಮರಣೆಯುಳ್ಳವನೂ ಸತ್ಯವಂತನೂ ಒಳ್ಳೆಯ ಕೀರ್ತಿಯುಳ್ಳವನೂ ಪ್ರಾಣಿಗಳಲ್ಲಿ ಹಿತಕಾರಿಯೂ ವಿದ್ವಾಂಸರನ್ನು ನೋಡಿದ ಮಾತ್ರಕ್ಕೆ ಪ್ರೀತಿಯನ್ನುಂಟು ಮಾಡುವಂತಿರುವವನೂ ದ್ವೇಷಾಸೂಯೆಗಳಿಂದ ದೂರನಾದವನೂ ಲೋಕದಲ್ಲಿ ಈಗ ಯಾವನಿದ್ದಾನೆ ?

ಅಲ್ಲದೆ ಯುದ್ಧನಲ್ಲಿ ನಿಂತು ಕೋಪಗೊಂಡರೆ ದೇವತೆಗಳೂ ಕೂಡ ಯಾವನಿಗೆ ಹೆದರುತ್ತಾರೆಯೋ ಅಂತಹ ಪರಾಕ್ರಮಿಯೂ ಆಗಿರಬೇಕು. ಅಂತಹವನು ಯಾವನಿದ್ದಾನೆ ಎಂದೆನಲು ಅದಕ್ಕೆ ನಾರದನು ಇಂತೆಂದನು.

ಭೂತ ಭವಿಷ್ಯದ್ವರ್ತಮಾನಗಳನ್ನು ಬಲ್ಲ ನಾರದನು ವಾಲ್ಮೀಕಿಯ ಈ ಮಾತನ್ನು ಕೇಳಿ ಎಲೈ ವಾಲ್ಮೀಕಿಯೇ! ಆ ನೀನು ಹೇಳಿದಂತಹ ಗುಣಗಳುಳ್ಳ ಮನುಷ್ಯನು ಲೋಕದಲ್ಲಿ ಸಿಕ್ಕುವುದು ಕಷ್ಟ. ಆದರೂ ಯೋಚಿಸಿ ಅಂತಹವನನ್ನು ಹೇಳುತ್ತೇನೆ ಕೇಳು.

ಇಕ್ಷ್ವಾಕು ವಂಶದಲ್ಲಿ ರಾಮನೆಂಬುವನೊಬ್ಬನು ಹುಟ್ಟಿರುವನು. ಅವನು ನೀನು ಹೇಳಿದಂತಹ ಗುಣಗಳಿಂದ ಕೂಡಿರುವನು. ಇಂತಹ ಮಗನಿಗೆ ಅವನ ತಂದೆಯು ರಾಜ್ಯಾಭಿಷೇಕವನ್ನು ಮಾಡಬೇಕೆಂದು ಯೋಚಿಸಿರಲು ಅದನ್ನು ತಿಳಿದು ಅವನ ಚಿಕ್ಕಮ್ಮನಾದ ಕೈಕೇಯಿಯು ತನ್ನ ಮಗನಾದ ಭರತನಿಗೆ ರಾಜ್ಯವನ್ನು ಕೊಡಿಸಬೇಕೆಂದು ಆ ರಾಮನನ್ನು ಕಾಡಿಗೆ ಕಳುಹಿಸಿದಳು.

ಆ ರಾಮನು ತಂದೆಯ ಮಾತಿನಂತೆ ಕಾಡಿಗೆ ಹೊರಡಲು ಜೊತೆಯಲ್ಲಿ ಸೀತೆಯೂ ಲಕ್ಷ್ಮಣನೂ ಹೊರಟರು. ಅವರು ಚಿತ್ರಕೂಟಕ್ಕೆ ಹೋಗಿ ಅಲ್ಲಿ ಆಶ್ರಮವನ್ನು ಮಾಡಿಕೊಂಡು ವಾಸಿಸುತ್ತಿರಲು ಇತ್ತ ತಂದೆಯಾದ ದಶರಥನು ಸತ್ತುಹೋಗುವುದು. ಆಗ ಭರತನು ಆ ರಾಮನನ್ನು ಕರೆತರಲು ಹೋಗಿ ಅವನ ಅಪ್ಪಣೆಯಂತೆ ಅವನ ಪಾದುಕೆಗಳನ್ನು ತೆಗೆದುಕೊಂಡು ಬಂದನು.

ಅನಂತರ ಶ್ರೀರಾಮನು ದಂಡಕಾರಣ್ಯಕ್ಕೆ ಹೋಗಿ ಅಲ್ಲಿದ್ದುಕೊಂಡು ವಿರಾಧನೆಂಬ ರಾಕ್ಷಸನನ್ನು ಕೊಂದು ಅಗಸ್ತ್ಯನಿಂದ ಇಂದ್ರನು ಕೊಟ್ಟಿದ್ದ ಬಿಲ್ಲು ಬಾಣಗಳನ್ನು ತೆಗೆದುಕೊಂಡನು.

ಒಂದು ಸಾರಿ ರಾವಣನ ತಂಗಿಯಾದ ಶೂರ್ಪಣಖಿಯು ರಾಮನ ಬಳಿಗೆ ಬಂದು ಆ ರಾಮನಿಂದ ಅವಮಾನಿತಳಾಗಿ ಖರದೂಷಣರ ಹತ್ತಿರಹೋಗಿ ತನ್ನ ದುಃಖವನ್ನು ನಿವೇದಿಸಿಕೊಳ್ಳಲು ಆ ರಾಕ್ಷಸರು ರಾಮನಿಗೆ ತೊಂದರೆ ಮಾಡಲು ಬಂದರು. ರಾಮನು ಅವರನ್ನು ಕೊಂದನು. ಅಲ್ಲದೆ ಆ ಜನಸ್ಥಾನದಲ್ಲಿದ್ದ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನೂ ಕೊಂದನು.

ತನ್ನವರ ವಧೆಯಾದುದನ್ನು ಕೇಳಿ ರಾವಣನು ಕೋಪಗೊಂಡು ಸೋದರ ಮಾವನಾದ ಮಾರೀಚನೊಡನೆ ರಾಮನ ಬಳಿಗೆ ಬಂದು ಆ ಮಾರೀಚನ ಸಹಾಯದಿಂದ ಸೀತೆಯನ್ನು ಕದ್ದುಕೊಂಡು ಹೋದನು.

ರಾಮನು ಸೀತೆಯನ್ನು ಕಾಣದೆ ಹುಡುಕುತ್ತಿರಲು ಜಟಾಯುವೆಂಬ ಪಕ್ಷಿಯು ಮಾತಿನಂತೆ ರಾವಣನು ಕದ್ದಿರುವುದನ್ನು ತಿಳಿದು ಮುಂದೆ ಹುಡುಕುತ್ತ ಹೊರಟು ಕಬಂಧನೆಂಬ ರಾಕ್ಷಸನನ್ನು ಕೊಂದು ಶಬರಿಯ ಆತಿಥ್ಯವನ್ನು ಸ್ವೀಕರಿಸಿ ಹನುಮಂತನೊಡನೆ ಸ್ನೇಹವನ್ನು ಬೆಳೆಸಿ, ಅವನ ಸಹಾಯದಿಂದ ಸುಗ್ರೀವನ ಸ್ನೇಹವನ್ನು ಹೊಂದಿದನು.

ವಾಲಿಯನ್ನು ಕೊಂದು ಸುಗ್ರೀವನಿಗೆ ರಾಜ್ಯವನ್ನು ಕೊಟ್ಟು ಅವನ ಮಾತಿನಂತೆ ಕಪಿಗಳನ್ನು ಕರೆಸಿ ಅವನ್ನು ಸೀತೆಯನ್ನು ಹುಡುಕಲು ನಾಲ್ಕು ದಿಕ್ಕುಗಳಿಗೂ ಕಳುಹಿಸಿದನು.

ದಕ್ಷಿಣದ ಕಡೆಗೆ ಹೊರಟ ಹನುಮಂತನು ಸಂಪಾತಿಯ ಮಾತಿನಂತೆ ಸಮುದ್ರವನ್ನು ದಾಟಿ ಸೀತೆಯನ್ನು ಕಂಡು ಅವಳ ವಿಷಯವನ್ನು ತಿಳಿದುಕೊಂಡು ಅಕ್ಷಕುಮಾರನನ್ನು ಕೊಂದು ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು ಆ ನೆವದಿಂದ ರಾವಣನನ್ನು ನೋಡಿ ಅವನು ತನ್ನ ಬಾಲಕ್ಕೆ ಹಚ್ಚಿದ್ದ ಬೆಂಕಿಯಿಂದ ಆ ಲಂಕೆಯನ್ನು ಸುಟ್ಟು ಮತ್ತೆ ಸಮುದ್ರವನ್ನು ಹಾರಿ ರಾಮನ ಬಳಿಗೆ ಬಂದು ಸೀತೆಯ ವಿಷಯವನ್ನು ತಿಳಿಸಿದನು.

ಅನಂತರ ರಾಮನು ಆ ಸುಗ್ರೀವನ ಸಹಾಯದಿಂದ ಸಮುದ್ರವನ್ನು ದಾಟಿ ರಾವಣನನ್ನು ಕೊಂದು ವಿಭೀಷಣನಿಗೆ ಲಂಕಾರಾಜ್ಯವನ್ನು ಕೊಟ್ಟು ಸೀತೆಯ ಪಾರಿಶುದ್ಧ್ಯವನ್ನು ಅಗ್ನಿಯಿಂದ ತಿಳಿದು ಆಕೆಯನ್ನು ಪರಿಗ್ರಹಿಸಿ ಹಿಂತಿರುಗಿ ಹೊರಟನು.

ಭರದ್ವಾಜಾಶ್ರಮಕ್ಕೆ ಬಂದು ಅಲ್ಲಿ ಅವನ ಆತಿಥ್ಯವನ್ನು ಸ್ವೀಕರಿಸಿ ಅಲ್ಲಿಂದ ಭರತನ ಬಳಿಗೆ ಹೋಗಿ ಅವನನ್ನು ಸಂತೈಸಿ ರಾಜ್ಯವನ್ನು ಸ್ವೀಕರಿಸಿ ಸೀತೆಯೊಡನೆ ಸುಖವಾಗಿದ್ದನು.

ರಾಮನು ಲೋಕವನ್ನು ಆಳುತ್ತಿರಲು ಲೋಕವೆಲ್ಲವೂ ರೋಗಗಳ ಬಾಧೆಯಿಲ್ಲದೆ ಸುಖವಾಗಿದ್ದಿತು. ಮಳೆಯು ಕಾಲ ಕಾಲಕ್ಕೆ ಆಗುತ್ತಿದ್ದಿತು. ಜನಗಳಲ್ಲಿ ಅಕಾಲಮರಣವೆಂಬುದಿರಲಿಲ್ಲ. ಯಾವ ರೀತಿಯಾದ ಭಯಗಳೂ ಇರುತ್ತಿರಲಿಲ್ಲ.

ಸಂಪತ್ತಿನಿಂದ ಕೂಡಿದ್ದಿತು. ಆ ರಾಮನು ನೂರು ಅಶ್ವಮೇಧಯಾಗವನ್ನು ಮಾಡಿ ಅನೇಕ ಬಗೆಯ ದಾನಗಳನ್ನು ಮಾಡಿ ಕೊನೆಗೆ ಬ್ರಹ್ಮಲೋಕಕ್ಕೆ ಹೋದನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ದ್ವಿತೀಯಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಅಥೈಕದಾ ಸಭಾಮಧ್ಯೇ ಪೌರಜಾನಪದಾದಯಃ ।
ಜ್ಞಾತ್ವಾ ರಾಮಂ ಪರಾತ್ಮಾನಂ ಪಪ್ರಚ್ಛುರ್ವಿನಯಾನ್ವಿತಾಃ ॥ ೧ ॥

ರಾಮ ರಾಮ ಮಹಾರಾಜ ಕಿಂಚಿದುಪದಿಶಸ್ವ ನಃ ।
ವಿಷಯಾಸಕ್ತಚಿತ್ತಾನಾಂ ಯೇನ ಜ್ಞಾನಂ ಭವಿಷ್ಯತಿ ॥ ೨ ॥

ಇತಿ ತೇಷಾಂ ವಚಃ ಶ್ರುತ್ವಾ ರಾಘವಸ್ಸಸ್ಮಿತೋಽಬ್ರವೀತ್ ।
ನಿರಂತರಂ ಹ್ಯುಪದೇಶೋ ಯುಷ್ಮಾಭಿಃ ಶ್ರೂಯತೇ ನ ಕಿಂ ॥ ೩ ॥

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡದ ಎರಡನೆಯ ಸರ್ಗವು

೧. ಶ್ರೀ ರಾಮದಾಸನು ಹೇಳಿದನು-ಒಂದು ಸಾರಿ ರಾಮನು ಸಭೆಯಲ್ಲಿ ಕುಳಿತಿರಲು ಪಟ್ಟಣಿಗರೂ, ದೇಶದವರೂ ಈ ರಾಮನು ಪರಮಾತ್ಮನೆಂದು ತಿಳಿದು ಅವನ ಬಳಿಗೆ ಬಂದು ವಿನಯದಿಂದ ಇಂತೆಂದು ಕೇಳಿದರು.

೨. ಎಲೈ ಮಹಾರಾಜನಾದ ರಾಮನೇ ! ನಾವು ವಿಷಯ ಸುಖದಲ್ಲಿಯೇ ಆಸಕ್ತರಾಗಿದ್ದೇವೆ. ನಮಗೆ ಪರಮಾತ್ಮನ ಜ್ಞಾನವು ಸ್ವಲ್ಪವೂ ಇಲ್ಲ. ಆ ಪರಮಾತ್ಮನ ಜ್ಞಾನವು ಉಂಟಾಗುವಂತೆ ಉಪದೇಶವನ್ನು ಮಾಡು.

೩. ಅವರ ಈ ರೀತಿಯಾದ ಮಾತನ್ನು ಕೇಳಿ ರಾಮನು ನಗುತ್ತ ಇಂತೆಂದು ಹೇಳಿದನು. ನೀವು ಯಾವಾಗಲೂ ಉಪದೇಶದ ಮಾತುಗಳನ್ನು ಕೇಳುತ್ತಿಲ್ಲವೇನು ?

ಪ್ರಹರೇ ಪ್ರಹರೇ ರಾತ್ರೌ ಮುಹೂರ್ತೈಃ ಕ್ರಿಯತೇ ಸದಾ ।
ಅಸ್ತು ತಚ್ಚ ಗತಂ ಪೂರ್ವಂ ದಿನಾನಿ ಸಕಲೈರ್ಜನೈಃ ॥ ೪ ॥

ಅದ್ಯ ಮದ್ದೂತ ವಚನಂ ನಿಶಾಯಾಂ ಬುದ್ಧಿಪೂರ್ವಕಂ ।
ಶ್ರುತ್ವಾ ವಿಚಾರ್ಯ ಪಶ್ಚಾನ್ಮಾಂ ಪ್ರಷ್ಟವ್ಯಂ ಯತ್ತು ರೋಚತೇ ॥ ೫ ॥

ತಥೇತಿ ರಾಮವಚನಾತ್ಸರ್ವೇ ಗತ್ವಾ ನಿಜಂ ನಿಜಂ ।
ಗೇಹಂ ತೇ ಸ್ವಸ್ಥಚಿತ್ತಾಶ್ಚ ಸ್ವಸ್ತ್ರೀಭಿರ್ಮಂಚಕಾದಿಷು ॥ ೬ ॥

ದೂತವಾಕ್ಯೇ ದತ್ತಕರ್ಣಾ ರಾತ್ರೌ ತಸ್ಥುರ್ನ ನಿದ್ರಿತಾಃ ।
ತಾವತ್ತೇ ರಾಮದೂತಾಶ್ಚ ಸಾರ್ಧಯಾಮೇ ಸದೀಪಕಾಃ ॥ ೭ ॥

ಧೃತಶಸ್ತ್ರಾ ದಂಡಧರಾ ನಾನಾವಾಹನಸಂಸ್ಥಿತಾಃ ।
ಗಜೇಷು ದುಂದುಭೀನ್ ಧೃತ್ವಾ ತಥಾ ವಾದ್ಯಾನ್ಯನೇಕಶಃ ॥ ೮ ॥

---

೪. ಗಳಿಗೆ ಗಳಿಗೆಯಲ್ಲಿಯೂ, ಯಾಮಯಾಮದಲ್ಲಿಯೂ ರಾತ್ರಿಯಲ್ಲಿಯೂ ಉಪದೇಶವು ನಡೆಯುತ್ತಲೇ ಇರುವುದು ಅದನ್ನು ನೀವು ಕೇಳಲಿಲ್ಲವೇ? ಇರಲಿ! ಕಳೆದುದು ಕಳೆದು ಹೋಗಲಿ.

೫. ಈ ದಿನ ರಾತ್ರಿಯಲ್ಲಿ ನನ್ನ ದೂತರ ಮಾತನ್ನು ಬುದ್ಧಿಪೂರ್ವಕವಾಗಿ ಕೇಳಿ. ಅದನ್ನು ಚರ್ಚೆಮಾಡಿ ವಿಚಾರಿಸಿ ಅನಂತರ ನಿಮಗೆ ಬೇಕಾದ ವಿಷಯವನ್ನು ಕುರಿತು ನನ್ನನ್ನು ಕೇಳಿರಿ.

೬-೮. ರಾಮನ ಈ ಮಾತನ್ನು ಕೇಳಿ ಅನಂತರ ಅವರೆಲ್ಲರೂ ಅವರವರ ಮನೆಗೆ ಹೋದರು. ಅಲ್ಲಿ ರಾತ್ರಿಯಲ್ಲಿ ಮಂಚದ ಮೇಲೆ ಹೆಂಡತಿಯರೊಡನೆ ಕುಳಿತುಕೊಂಡಿರುತ್ತಿದ್ದರೂ ದೂತನ ಮಾತಿನಲ್ಲಿಯೇ ಕಿವಿಯಿಟ್ಟಿರುತ್ತ ನಿದ್ದೆಯನ್ನು ಮಾಡದೆ ಹಾಗೆಯೇ ಇದ್ದರು. ಅಷ್ಟರಲ್ಲಿ ರಾಮದೂತರು ರಾತ್ರೆ ಒಂದೂವರೆ ಜಾವದ ಮೇಲೆ ದೀಪವನ್ನು ಹಿಡಿದುಕೊಂಡು ಶಸ್ತ್ರಗಳನ್ನೂ ದಂಡಗಳನ್ನೂ ಹಿಡಿದು ಕೊಂಡು ಬಗೆಬಗೆಯ ವಾಹನಗಳಲ್ಲಿ ಕುಳಿತುಕೊಂಡು ತಾವು ಹಿಂದೆ ಬರುತ್ತ ಮುಂದೆ ಆನೆಯ ಮೇಲೆ ದುಂದುಭಿಯನ್ನೂ, ಇನ್ನೂ ಅನೇಕ ವಾದ್ಯಗಳನ್ನೂ ಇಡಿಸಿ ಅವನ್ನು ಬಾರಿಸುತ್ತ ಬಂದರು.

ಧೃತ್ವಾ ಪೃಥಕ್ ಪೃಥಕ್ ನಾನಾಯಾನೇಷು ಮಂಜುಲಾನಿ ಹಿ |
ರಾಜಮಾರ್ಗೇಷು ಸರ್ವತ್ರ ದೀರ್ಘಶಬ್ದಾನುದೀರಯನ್ || ೯ ||

ಹೇ ಜನಾಃ ಶ್ರೂಯತಾಂ ಸರ್ವೇ ಕಿಂ ಮೋಹೇನ ವಿನಿದ್ರಿತಾಃ |
ನೇಯಂ ನಿದ್ರಾ ಸಮೀಚೀನಾ ಕದಾನರ್ಥೋ ಭವಿಷ್ಯತಿ || ೧೦ ||

ಸ್ವಸ್ಥಚಿತ್ತಾಸ್ತ್ವದ್ಯ ಸರ್ವೇ ಭೂತ್ವಾ ನಃ ಶ್ರೂಯತಾಂ ವಚಃ |
ನವದ್ವಾರಾಣ್ಯಯೋಧ್ಯಾಯಾಮೇಕಂ ತು ಲಘುವರ್ತತೇ || ೧೧ ||

ರಾಮರಾಜ್ಯೇ ಭಯಂ ನೇತಿ ಕಾರಣಾದ್ದ್ವಾರರಕ್ಷಕೈಃ |
ದೀಯಂತೇ ವಾ ನ ದೀಯಂತೇ ಕಪಾಟಾದೀನಿ ವೈ ತದಾ || ೧೨ ||

ನಾರ್ಗಳಾ ಶೃಂಖಲಾದೀನಿ ಸಂತಿ ದ್ವಾರೇಷು ಭೋ ಜನಾಃ |
ಕೃಷ್ಣವರ್ಣೋ ಮಹಾಂಶ್ಚೋರೋ ಯಾಮ್ಯಾಶಾಯಾಂ ಸ್ಥಿತಸ್ತ್ವಿತಿ ||೧೩||

---

೯. ತಾವೂ ಕೂಡ ಬೇರೆಬೇರೆಯಾಗಿ ವಾದ್ಯಗಳನ್ನು ಹಿಡಿದು ಅವನ್ನು ಮನೋಹರವಾಗಿ ಬಾರಿಸುತ್ತ ರಾಜಮಾರ್ಗದಲ್ಲಿ ಎಲ್ಲಾ ಕಡೆಯಲ್ಲಿಯೂ ಸುತ್ತುತ್ತ ಗಟ್ಟಿಯಾಗಿ ಕೂಗುತ್ತಿದ್ದರು.

೧೦. ಎಲೈ ಜನಗಳಿರಾ! ನೀವೆಲ್ಲರೂ ಕೇಳಿರಿ. ನೀವೆಲ್ಲರೂ ಏತಕ್ಕೆ ಅಜ್ಞಾನದಿಂದ ನಿದ್ದೆ ಮಾಡುತ್ತಿದ್ದೀರಿ? ಈ ನಿದ್ದೆಯು ಯಾವಾಗಲೂ ಯೋಗ್ಯವಾದುದಲ್ಲ. ಇದರಿಂದ ಅನರ್ಥವು ಬಂದೇ ಬರುತ್ತದೆ.

೧೧. ನೀವೆಲ್ಲರೂ ಕೂಡ ಸರಿಯಾದ ಮನಸ್ಸಿನಿಂದ ನಾವು ಹೇಳುವುದನ್ನು ಕೇಳಿರಿ. ಈ ಅಯೋಧ್ಯೆಗೆ ಒಂಭತ್ತು ಬಾಗಿಲುಗಳಿವೆ. ಅವುಗಳಲ್ಲಿ ಒಂದು ಬಾಗಿಲು ಚಿಕ್ಕದಾಗಿದೆ.

೧೨. ರಾಮರಾಜ್ಯದಲ್ಲಿ ಭಯವಿಲ್ಲವೇ ಇಲ್ಲ ಎಂದು ತಿಳಿಯ ಬೇಡಿ. ಬಾಗಿಲು ಕಾಯುವವರು ಒಂದೊಂದು ಸಾರಿ ಬಾಗಿಲು ಹಾಕುವುದೂ ಉಂಟು. ಹಾಕದೆ ಇರುವುದೂ ಉಂಟು.

೧೩. ಎಲೈ ಜನಗಳಿರಾ! ಆ ಬಾಗಿಲುಗಳಿಗೆ ಅಗುಳಿಗಳಾಗಲಿ, ಸರಪಣಿಗಳಾಗಲಿ ಇಲ್ಲವೇ ಇಲ್ಲ. ಕಪ್ಪು ಬಣ್ಣವುಳ್ಳ ಒಬ್ಬ ದೊಡ್ಡ ಕಳ್ಳನು ದಕ್ಷಿಣ ದಿಕ್ಕಿನಲ್ಲಿರುವನೆಂದು ಎಲ್ಲರೂ ಹೇಳುತ್ತಾರೆ.

ಶ್ರೂಯತೇ ನ ಕದಾ ದೃಷ್ಟಃ ಕೇನಾಪಿ ಭುವಿ ಸಾಂಪ್ರತಂ ।
ಏವಂ ಸತ್ಯಪಿ ನೋಪೇಕ್ಷ್ಯಾ ರೋಗಶಾಂತ್ಯೈ ಪ್ರಕಾರ್ಯತೇ ॥ ೧೪ ॥

ಗುಪ್ತರೂಪಾಸ್ತಸ್ಯ ದೂತಾಸ್ಸಾಕೇತೇ ವಿಚರಂತಿ ಹಿ ।
ನ ಜ್ಞಾಯತೇ ಕದಾಸ್ಮಾಭಿರ್ನಾಗರಾ ಇವ ಸಂಸ್ಥಿತಾಃ ॥ ೧೫ ॥

ಆಗತಶ್ಚೇತ್ಪರೋ ದೂತಸ್ತ್ವೇಕೋ ದುರ್ಗೇ ತದಾಕ್ಷಣಾತ್ ।
ಭೇದಂ ಕೃತ್ವಾ ತು ಸರ್ವತ್ರ ದುರ್ಗಪಾಲೋ ನಿಹನ್ಯತೇ ॥ ೧೬ ॥

ಇತ್ಥಂ ಶ್ರುತಂ ಸದಾಸ್ಮಾಭಿಸ್ತಸ್ತ್ವಸ್ಯಾಂ ಸಹಸ್ರಶಃ ।
ವರ್ತಂತೇ ಯಮದೂತಾಶ್ಚ ನಾನಾವೇಷಧರಾ ಜನಾಃ ॥ ೧೭ ॥

ಜೀವತ್ವಯಂ ಚಿರಂ ರಾಜಾ ಏವಂ ಸತ್ಯಪಿ ನೋ ಭಯಂ ।
ಅಯೋಧ್ಯಾಯಾಂ ಜಾಯತೇ ಹಿ ತದ್ಬಲಂ ಕೋ ವದಿಷ್ಯತಿ ॥ ೧೮ ॥

---

೧೪. ಅವನನ್ನು ಭೂಮಿಯಲ್ಲಿ ಒಬ್ಬನೂ ಒಂದು ಸಾರಿಯೂ ನೋಡಿಯೇ ಇಲ್ಲ. ಹೀಗಿದ್ದರೂ ಕೂಡ ಉಪೇಕ್ಷಿಸುತ್ತಿರಬಾರದು. ಹಾಗೆ ಉಪೇಕ್ಷಿಸಿದರೆ ರೋಗ ಶಾಂತಿಯಾಗುವುದಿಲ್ಲ.

೧೫. ಆ ಕಳ್ಳರ ದೂತರು ಈ ಅಯೋಧ್ಯೆಯಲ್ಲಿ ಗುಪ್ತವಾಗಿ ಅಲ್ಲಲ್ಲಿಯೇ ಸಂಚರಿಸುತ್ತಿರುವರು ಅವರೂ ಕೂಡ ಈ ಪಟ್ಟಣಿಗರಂತೆಯೇ ಇರುವುದರಿಂದ ಆವರು ಯಾರು? ಎಂಬುದು ನಮಗೆ ತಿಳಿಯುವುದೇ ಇಲ್ಲ.

೧೬. ಶತ್ರುಗಳ ದೂತನು ಒಬ್ಬನು ಬಂದೂ ಆ ಕೂಡಲೇ ದುರ್ಗದಲ್ಲಿ ಎಲ್ಲಾ ಕಡೆಯಲ್ಲಿಯೂ ಭೇದವನ್ನುಂಟು ಮಾಡಿ ಆ ದುರ್ಗರಕ್ಷಕನನ್ನು ನಾಶ ಮಾಡುವನು.

೧೭. ಈ ರೀತಿಯಾಗಿ ನಾವು ಕೇಳುತ್ತಲೇ ಇರುವುದರಿಂದ ಎಚ್ಚರಿಕೆಯಿಂದಿರಿ. ಈ ಸಾಕೇತ ನಗರಿಯಲ್ಲಿ ಆ ಪರರ ದೂತರುಗಳು ಬಗೆಬಗೆಯ ವೇಷಗಳನ್ನು ಹಾಕಿಕೊಂಡು ಬಗೆಬಗೆಯ ರೂಪದಲ್ಲಿರುವರು.

೧೮. ಹೀಗಿದ್ದರೂ ಕೂಡ ಈ ಅಯೋಧ್ಯೆಯಲ್ಲಿ ನಮಗೆ ಭಯವೆಂಬುದೇ ಉಂಟಾಗುವುದಿಲ್ಲ. ಈ ರಾಜನು ಬಹು ದಿವಸ ಬದುಕಲಿ. ಅವನ ಬಲವು ಅಪಾರವಾದುದು.

ಏಭಿರ್ದೂತೈಸ್ತಸ್ಯ ರಾಜ್ಞ ಆತ್ಮಾರಾಮಸ್ಯ ಚಾತ್ರ ಹಿ ।
ಕರಣೀಯಂ ಪ್ರಭೋಃ ಕಿಂ ಹಿ ಸಚ್ಚಿದಾನಂದರೂಪಿಣಃ ॥ ೧೯ ॥

ತೇಷಾಂ ಭಯಂ ತು ಯುಷ್ಮಾಕಂ ದುರ್ಬಲಾನಾಂ ಸದಾಸ್ತಿ ಹಿ ।
ಅಜಾಪುತ್ರೋ ದುರ್ಬಲೋತ್ರ ಬಲ್ಯರ್ಥಂ ದೀಯತೇ ಜನೈಃ ॥ ೨೦ ॥

ದತ್ತೋ ಬಲಿಸ್ತು ಸಿಂಹಸ್ಯ ಕದಾ ಕೇನ ಶ್ರುತೋತ್ರ ನ ।
ಅತೋ ಯೂಯಂ ಹಿ ನ ಬಲಾಃ ಕಿಂ ನಿಶಾಯಾಂ ವಿನಿದ್ರಿತಾಃ ॥ ೨೧ ॥

ಕದಾ ಕೃತ್ವಾತ್ರ ತೇ ಭೇದಂ ಚೋರಮತ್ರಾನಯಂತಿ ಹಿ ।
ಸ ಕಾಲೋ ಜ್ಞಾಯತೇ ನೈವ ತಸ್ಮಾನ್ನಿದ್ರಾ ಶುಭಾ ನ ಹಿ ॥ ೨೨ ॥

ಸ್ವಸ್ಥಚಿತ್ತಾಸ್ತ್ಯಕ್ತನಿದ್ರಾಸ್ತ್ವಸ್ಯಾಂ ಪುರ್ಯಾಮಹರ್ನಿಶಂ ।
ಯೂಯಂ ಭೂತ್ವಾ ಸದಾಖಡ್ಗಶ್ರಿತೋಧಾರ್ಯಾಸ್ಸ್ವಸನ್ನಿಧೌ ॥ ೨೩ ॥

---

೧೯. ಬಹು ಬಲಿಷ್ಠನಾದ, ಆತ್ಮರೂಪನಾದ, ಸದ್ರೂಪನೂ, ಚಿದ್ರೂಪನೂ ಆದ ಆ ಸ್ವಾಮಿಗೆ ಆ ದೂತರು ಏನು ಕೆಡಕನ್ನು ಮಾಡಬಲ್ಲರು? ಎಂದು ಸುಮ್ಮನಿರಬೇಡಿ.

೨೦. ಆದರೆ ದುರ್ಬಲರಾದ ಪ್ರಜೆಗಳಾದ ನಿಮ್ಮಗಳಿಗೆ ಅವರ ಭಯವು ಯಾವಾಗಲೂ ಇದ್ದೇ ಇರುವುದು. ಆಡಿನ ಮಗನಾದ ಹೋತನು ದುರ್ಬಲನಾದುದರಿಂದ ಜನರು ಅವನನ್ನು ತೆಗೆದುಕೊಂಡು ಹೋಗಿ ಬಲಿಯನ್ನು ಕೊಡುತ್ತಾರೆ.

೨೧. ಬಲಿಷ್ಠನಾದ ಸಿಂಹದ ಮರಿಯನ್ನು ತೆಗೆದುಕೊಂಡು ಹೋಗಿ ಬಲಿಯನ್ನು ಕೊಟ್ಟ ವಿಷಯವನ್ನು ಯಾರೂ ನೋಡಿಯೂ ಇಲ್ಲ. ಕೇಳಿಯೂ ಇಲ್ಲ. ಆದ್ದರಿಂದ ಹೀನಬಲರಾದ ನೀವು ರಾತ್ರಿಯಲ್ಲಿ ಏತಕ್ಕೆ ನಿದ್ರಿಸುತ್ತಿದ್ದೀರಿ?

೨೨. ಯಾವಾಗಲೋ ನಿಮ್ಮಲ್ಲಿ ಭೇದವನ್ನು ಹುಟ್ಟಿಸಿ ಅವರು ಆ ಕಳ್ಳನನ್ನು ಇಲ್ಲಿಗೆ ಕರೆದುಕೊಂಡು ಬರುತ್ತಾರೆ. ಆ ಕಾಲವು ಯಾವಾಗ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಮನುಷ್ಯನಿಗೆ ನಿದ್ದೆಯೆಂಬುದು ಒಳ್ಳೆಯದಲ್ಲ.

೨೩. ನೀವುಗಳು ಮನಸ್ಸನ್ನು ಸ್ತಿಮಿತದಲ್ಲಿಟ್ಟುಕೊಂಡು ನಿದ್ದೆಯನ್ನು ಬಿಟ್ಟು ಈ ಊರಿನಲ್ಲಿ ಇರಬೇಕು. ಅಲ್ಲದೆ ಹರಿತವಾದ ಕತ್ತಿಯನ್ನು ಯಾವಾಗಲೂ ಇಟ್ಟುಕೊಂಡಿರಬೇಕು.

ಕವಚಾನಿ ಶರೀರೇಷು ಸದಾ ಧಾರ್ಯಾಣಿ ಭೋ ಜನಾಃ |
ಧೈರ್ಯಂ ಧೃತ್ವಾ ನ ಭೇತವ್ಯಂ ಯೋ ಜಾಗರ್ತಿ ನಿರಂತರಂ || ೨೪ ||
ಅಯೋಧ್ಯಾಯಾಂ ನ ತಸ್ಯಾಸ್ತಿ ಚೋರಾದಪಿ ಕದಾ ಭಯಂ |
ನೈತದ್ವಿಸ್ಮರಣೀಯಂ ಹಿ ಸದಾಸ್ಮಾಕಂ ವಚಶ್ಶುಭಂ || ೨೫ ||
ಸಾವಧಾನಂ ಸಾವಧಾನಂ ಸಾವಧಾನಂ ಸದಾ ಜನಾಃ |
ಭವಧ್ವಂ ತತ್ರ ಸಾಕೇತಪುರಸ್ಥಾ ಹಿ ನಿರಂತರಂ || ೨೬ ||
ಇತ್ಯುಕ್ತ್ವಾ ತೇ ರಾಜದೂತಾಃ ಕೃತ್ವಾ ದುಂದುಭಿನಿಸ್ಸ್ವನಾನ್ |
ವಾದಯಾಮಾಸುರ್ವಾದ್ಯಾನಿ ಮಂಜುಲಾನಿ ಮಹಾಂತಿ ಚ || ೨೭ ||
ಏವಂ ಸರ್ವತ್ರ ಪುರ್ಯಾಂ ತೇ ವಿಚೇರೂ ರಾಮಸೇವಕಾಃ |
ಏವಂ ನಿಶಾಯಾಂ ತೈರ್ದೂತೈಸ್ತ್ರಿವಾರಂ ಕಿಂಚಿದಂತರಾತ್ || ೨೮ ||

---

೨೪. ಎಲೈ ಜನರಿರಾ! ಯಾವಾಗಲೂ ಕವಚಗಳನ್ನು ತೊಟ್ಟುಕೊಂಡೇ ಇರಬೇಕು. ಈ ರೀತಿಯಾಗಿದ್ದು ಯಾವನು ಎಚ್ಚರದಿಂದಿರುವನೋ ಮತ್ತು ಧೈರ್ಯದಿಂದಲೂ ಇರುವನೋ ಆವನು ಅವರಿಗೆ ಹೆದರಬೇಕಾಗಿಲ್ಲ.

೨೫ ಅಂತಹವನಿಗೆ ಅಯೋಧ್ಯೆಯಲ್ಲಿ ಕಳ್ಳನಿಂದ ಭಯವಿರುವುದಿಲ್ಲ. ಈ ಮಾತನ್ನು ಮರೆಯ ಬೇಡಿರಿ. ನಮ್ಮ ಮಾತು ಯಾವಾಗಲೂ ಹಿತವನ್ನುಂಟು ಮಾಡತಕ್ಕದ್ದಾಗಿರುವುದು.

೨೬. ಎಲೈ ಜನರಿರಾ! ಸಾವಧಾನವಾಗಿರಿ. ಸಾವಧಾನವಾಗಿರಿ. ಸಾವಧಾನವಾಗಿರಿ. ಈ ಆಯೋಧ್ಯೆಯಲ್ಲಿರುವವರೆಲ್ಲರೂ ಯಾವಾಗಲೂ ಸಾವಧಾನದಿಂದಿರಿ.

೨೭. ಆ ರಾಜದೂತರು ಇಂತೆಂದು ಹೇಳಿ ನಗಾರಿಗಳನ್ನು ಬಡಿಯುತ್ತ ವಾದ್ಯಗಳನ್ನು ಬಾರಿಸಿದರು. ಅವು ಉತ್ತಮವಾಗಿಯೂ ಮನೋಹರವಾಗಿಯೂ ಇದ್ದುವು.

೨೮. ಈ ರೀತಿಯಾಗಿ ರಾಮದೂತರು ಆ ಪಟ್ಟಣದಲ್ಲೆಲ್ಲಾ ಕೂಗಿಕೊಂಡು ಸುತ್ತಿದರು. ಹೀಗೆ ಆ ದೂತರು ಆ ರಾತ್ರಿಯಲ್ಲಿ ಸ್ವಲ್ಪ ಸ್ವಲ್ಪ ಹೊತ್ತನ್ನು ಬಿಟ್ಟುಕೊಂಡು ಮೂರು ಮೂರು ಬಾರಿ ಸಂಚರಿಸುತ್ತ ಬಂದಾಗಲೆಲ್ಲಾ ಇಂತೆಂದೇ ಹೇಳುತ್ತಿದ್ದರು.

ಪೌರಾದ್ಯಾ ಬೋಧಿತಾಃ ಪ್ರಾಪುಃ ಜ್ಞಾನಂ ತಸ್ಯ ವಿಚಾರತಃ ।
ತತಃ ಪ್ರಭಾತೇ ತೇ ಸರ್ವೇ ಪೌರಾ ಜಾನಪದಾದಯಃ ॥ ೨೯ ॥

ಸಭಾಯಾಂ ರಾಘವಂ ನತ್ವಾ ಕುಷ್ಟಾಃ ಪ್ರೋಚುಃ ಪುರಃ ಸ್ಥಿತಾಃ ।
ರಾಮ ರಾಜೀವಪತ್ರಾಕ್ಷ ತ್ವದ್ದೂತವಚನಾನಿ ಹಿ ॥ ೩೦ ॥

ಶ್ರೂಯಂತೇತ್ರ ಸದಾಸ್ಮಾಭಿರ್ನ ವಿಚಾರಸ್ತದಾ ಕೃತಃ ।
ಅದ್ಯಾಸ್ಮಾಭಿರ್ನಿಶಾಯಾಂ ಹಿ ತ್ವದ್ದೂತವಚನಂ ಶುಭಂ ॥ ೩೧ ॥

ಶ್ರುತ್ವಾ ಕೃತೋ ವಿಚಾರೋ ಹಿ ಹೃದಿ ಬುದ್ಧ್ಯಾ ತವಾಜ್ಞಯಾ ।
ಲಬ್ಧಂ ಜ್ಞಾನಂ ಪ್ರಭೋಸ್ಮಾಭಿಸ್ತ್ವಜ್ಞಾನಂ ತದ್ಗತಂ ಹಿ ನಃ ॥ ೩೨ ॥

ನೇದಾನೀಮುಪದೇಶಂ ಹಿ ತ್ವತ್ತೋವಾಂಛಾಮ ರಾಘವ ।
ಇತಿ ತೇಷಾಂ ವಚಃ ಶ್ರುತ್ವಾ ತಾನ್ರಾಮಃ ಪ್ರಾಹ ಸಸ್ಮಿತಃ ॥ ೩೩ ॥

---

೨೯. ಪಟ್ಟಣದವರು ಈ ವಿಷಯವನ್ನು ಎಚ್ಚರದಿಂದ ಕೇಳಿ ಅದರ ವಿಚಾರದಲ್ಲಿ ಆಸಕ್ತರಾಗಿ ಜ್ಞಾನವನ್ನು ಹೊಂದಿದರು. ಬೆಳಗಾಗುತ್ತಲೂ ಪಟ್ಟಣದವರೂ ದೇಶದವರೂ ಎಲ್ಲರೂ ಸಭೆಗೆ ಬಂದು ಸೇರಿದರು.

೩೦-೩೧. ಅವರೆಲ್ಲರೂ ಸಭೆಯಲ್ಲಿ ರಾಮನಿಗೆ ನಮಸ್ಕರಿಸಿ ಎದುರಿಗೆ ನಿಂತು ಸಂತೋಷದಿಂದ ಇಂತೆಂದರು. ರಾಜೀವಾಕ್ಷನಾದ ರಾಮನೇ! ನಿನ್ನ ದೂತರ ವಚನಗಳು ಈ ಪಟ್ಟಣದಲ್ಲಿ ಯಾವಾಗಲೂ ಈ ರೀತಿಯಾಗಿ ಕೇಳಿ ಬರುತ್ತಿವೆ. ಆದರೆ ನಾವು ಆಗ ಅದರ ವಿಚಾರವನ್ನು ಮಾಡಲಿಲ್ಲ. ಈ ದಿನ ರಾತ್ರಿಯಲ್ಲಿಯಾದರೋ ಆ ನಿನ್ನ ದೂತರ ಮಂಗಳಕರವಾದ ವಚನಗಳನ್ನು ಕೇಳಿದೆವು.

೩೨. ಅದನ್ನು ಕೇಳಿ ನಿನ್ನ ಅಪ್ಪಣೆಯಂತೆ ಮನಸ್ಸಿನಲ್ಲಿಯೇ ಬುದ್ಧಿವಂತಿಕೆಯಿಂದ ಚರ್ಚಿಸಿ ವಿಚಾರ ಮಾಡಿಕೊಂಡೆವು. ಎಲೈ ಪ್ರಭುವೇ! ಜ್ಞಾನೋದಯವಾಯಿತು. ಮತ್ತು ನಮ್ಮಗಳ ಅಜ್ಞಾನವು ಹೋಯಿತು.

೩೩. ಎಲೈ ರಾಘವನೇ! ಈಗ ನಿನ್ನಿಂದ ಉಪದೇಶವನ್ನು ನಾವು ಅಪೇಕ್ಷಿಸುವುದಿಲ್ಲ. ಎಂಬುದಾಗಿ ಅವರೆಲ್ಲರೂ ಹೇಳಲು ರಾಮನು ಅದನ್ನು ಕೇಳಿ ನಗುತ್ತ ಇಂತೆಂದನು.

ಕಥಂ ಲಬ್ಧಂ ಹಿ ತತ್ ಜ್ಞಾನಂ ಕಿಂ ಶ್ರುತಂ ಕಿಂ ವಿಚಿಂತಿತಂ ।
ತನ್ಮೇಗ್ರೇ ಕಥನೀಯಂ ಹಿ ವಿಸ್ತರೇಣ ಯಥಾಕ್ರಮಂ ॥ ೩೪ ॥

ಇತಿ ರಾಮವಚಃ ಶ್ರುತ್ವಾ ಜನಾಃ ಪ್ರೋಚುರ್ಮುದಾನ್ವಿತಾಃ ।
ಶ್ರುಣು ರಾಮ ಮಹಾಬಾಹೋ ಯಲ್ಲಬ್ಧಂ ಜ್ಞಾನಮುಚ್ಯತೇ ॥ ೩೫ ॥

ಮೋಹ ಏವ ನಿಶಾ ಜ್ಞೇಯಾ ನಿದ್ರಾ ಭ್ರಾಂತಿಸ್ತು ಕಥ್ಯತೇ ।
ನೇಯಂ ಭ್ರಾಂತಿಸ್ಸಮೀಚೀನಾನರ್ಥೋಮೃತ್ಯುರ್ಗ್ರಸಿಷ್ಯತಿ ॥ ೩೬ ॥

ಅಯೋಧ್ಯೇಯಂ ಸ್ವೀಯದೇಹಸ್ತತ್ರ ಛಿದ್ರಾಣಿ ವೈ ನವ ।
ಲಘುಂ ತನ್ಮಸ್ತಕೇ ಜ್ಞೇಯಂ ದಂತಾದ್ಯಾ ದ್ವಾರರಕ್ಷಕಾಃ ॥ ೩೭ ॥

ಪಕ್ಷ್ಮೋಷ್ಠಾದೀನಿ ದ್ವಾರೇಷು ಕಪಾಟಾನೀರಿತಾನಿ ಚ ।
ಪಂಚಾ ಪ್ರಾಣಾಶ್ಚ ತೇ ದೂತಾಃ ಪುರ್ಯಾಂ ನಿತ್ಯಮಟಂತಿ ಹಿ ॥ ೩೮ ॥

---

೩೪. ಆ ಜ್ಞಾನವು ನಿಮಗೆ ಹೇಗೆ ಬಂದಿತು? ನೀವು ಕೇಳಿದುದೇನು? ಅದೆಲ್ಲವನ್ನೂ ನೀವು ಕ್ರಮವಾಗಿ ನನ್ನೆದುರಿಗೆ ಹೇಳಬೇಕು.

೩೫. ರಾಮನು ಹೀಗೆ ಹೇಳಿದುದನ್ನು ಕೇಳಿ ಜನಗಳು ಸಂತೋಷದಿಂದ ಇಂತೆಂದು ಹೇಳಿದರು. ಎಲೈ ಮಹಾಬಾಹುವಾದ ರಾಮನೇ! ನಾವು ಹೊಂದಿದ ಜ್ಞಾನವನ್ನು ಹೇಳುತ್ತೇವೆ, ಕೇಳು

೩೬. ನಿಶೇ (ರಾತ್ರಿ) ಯೆಂದರೆ ಮೋಹವೆಂದೂ ನಿದ್ದೆಯೆಂದರೆ ಭ್ರಾಂತಿ ಯೆಂಬದಾಗಿಯೂ ಹೇಳಲಾಗಿದೆ. ಈ ಭ್ರಾಂತಿಯು ಸರಿಯಾದುದಲ್ಲ. ಅನರ್ಥಕರವಾದುದು ಮೃತ್ಯುವು ಬಂದು ಹಿಡಿಯುವುದು.

೩೭. ಈ ಅಯೋಧ್ಯೆಯೆಂದರೆ ನಮ್ಮ ದೇಹಗಳು. ಅದರಲ್ಲಿ ಒಂಭತ್ತು ಬಾಗಿಲುಗಳಿವೆಯೆಂದರೆ ಈ ದೇಹದಲ್ಲಿಯೂ ಎರಡು ಮೂಗು, ಎರಡು ಕಣ್ಣು, ಎರಡು ಕಿವಿ, ಒಂದು ಬಾಯಿ, ಒಂದು ಮೂತ್ರ ದ್ವಾರ, ಒಂದು ಮಲದ್ವಾರ ಒಟ್ಟು ಒಂಭತ್ತು ದ್ವಾರಗಳು ಇವೆ. ಲಘುದ್ವಾರವೆಂದರೆ ತಲೆಯಲ್ಲಿರುವ ಬ್ರಹ್ಮರಂಧ್ರವು ಎಂದು ತಿಳಿಯಬೇಕು. ಹಲ್ಲು ತುಟಿ ಮುಂತಾದುವು ಆ ದ್ವಾರವನ್ನು ಕಾಪಾಡತಕ್ಕವು.

೩೮. ರೆಪ್ಪೆಗಳು, ತುಟಿಗಳು, ಇವು ದ್ವಾರಕ್ಕೆ ಕದಗಳಾಗಿವೆಯೆಂದು ತಿಳಿಯಬೇಕು. ಆ ರಾಜದೂತರೆಂದರೆ ಪಂಚಪ್ರಾಣಗಳು. ಇವು ನಿತ್ಯವೂ ದೇಹದಲ್ಲಿ ಓಡಾಡುತ್ತಿವೆ.

ಆತ್ಮಾ ಜ್ಞೇಯಸ್ತ್ವತ್ರ ರಾಜಾ ಜೀವಶ್ಚೇಂದ್ರಿಯದೇವತಾಃ ।
ಜ್ಞೇಯಾಶ್ಚ ದೇಹನಗರೇ ಪೌರಾಸ್ತತ್ರ ರಘೂತ್ತಮ ॥ ೩೯ ॥

ಕಾಲೋಃ ಜ್ಞೇಯೋ ಮಹಾಚೋರೋ ತ್ರಿದೋಷಾದ್ಯಾ ಗದಾಶ್ಚ ಯೇ ।
ಕಾಲಸ್ಯ ಸೇವಕಾ ಜ್ಞೇಯಾ ನಾಗರಾ ಇವ ಸಂಸ್ಥಿತಾಃ ॥ ೪೦ ॥

ದುರ್ಬಲಾಸ್ತೇದ್ಯ ಜೀವಾದ್ಯಾಸ್ತೇಷಾಮೇವಾಸ್ತಿ ತದ್ಭಯಂ ।
ಕಿಂ ಮೋಹೇ ಪತಿತಾ ಭ್ರಾಂತಾಃ ಕಾಲಮತ್ರಾನಯಂತಿ ತೇ ॥ ೪೧ ॥

ನ ಜ್ಞಾಯತೇ ಮೃತ್ಯುಕಾಲಸ್ತಸ್ಮಾದ್ಭ್ರಾಂತಿಶ್ಶುಭಾತ್ರ ನ ।
ಜ್ಞಾನಮೇವ ಮಹಾಖಡ್ಗೋ ವೈರಾಗ್ಯಂ ತೀಕ್ಷ್ಣತಾ ತ್ವಸೇಃ ॥ ೪೨ ॥

ಸಚ್ಛೀಲಂ ಕವಚಂ ಜ್ಞೇಯಂ ಧೈರ್ಯಂ ಭಕ್ತಿರ್ದೃಢಾ ತ್ವಯಿ ॥
ಆತ್ಮಜ್ಞಾನೇನ ಜಾಗರ್ತಿ ನ ತಸ್ಯಾಸ್ತಿ ಭಯಂ ಕದಾ ॥ ೪೩ ॥

---

೩೯. ಆತ್ಮನೆಂಬುವನೇ ರಾಜನು. ಜೀವನೂ ಇಂದ್ರಿಯ ದೇವತೆಗಳೂ ಈ ದೇಹವೆಂಬ ನಗರದಲ್ಲಿ ಪಟ್ಟಣಿಗರು ಎಂದು ತಿಳಿಯಬೇಕು.

೪೦. ಕಾಲನೆಂಬ ಯಮನೇ ದೊಡ್ಡ ಕಳ್ಳನು. ವಾತ, ಪಿತ್ಥ, ಕಫಗಳೆಂಬ ತ್ರಿದೋಷಗಳಿಂದುಂಟಾಗುವ ರೋಗಗಳೇ ಆ ಕಾಲನಿಗೆ ಸೇವಕರು. ಅವರು ನಗರವಾಸಿಗಳಂತೆ ಇರುವರು

೪೧. ಈ ಜೀವಾದಿಗಳು ದುರ್ಬಲರು. ಆದ್ದರಿಂದ ಅವರಿಗೆ ಆ ತ್ರಿದೋಷಗಳ ಭಯವು ಇದ್ದೇ ಇರುವುದು. ಆದ್ದರಿಂದ ನೀವು ಭ್ರಾಂತರಾಗಿ ಮೋಹದಲ್ಲಿ ಮುಳುಗಬೇಡಿರಿ. ಮೃತ್ಯುವೆಂಬ ಕಾಲನನ್ನು ಕರೆತರುವರು.

೪೨. ನಮಗೆ ಮೃತ್ಯುಕಾಲವೆಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಭ್ರಾಂತಿಯು ಒಳ್ಳೆಯದಲ್ಲ. ಜ್ಞಾನವೆಂಬುದೇ ಮಹಾ ಖಡ್ಗವು. ವೈರಾಗ್ಯವೆಂಬುದೇ ಆ ಕತ್ತಿಗೆ ಹರಿತವು.

೪೩. ಸದಾಚಾರವೆಂಬುದೇ ಕವಚವೆಂದು ತಿಳಿ. ದೃಢಭಕ್ತಿಯೆಂಬುದೇ ಧೈರ್ಯವು ಆದ್ದರಿಂದ ಆತ್ಮಜ್ಞಾನದಿಂದ ಯಾವನು ಜಾಗರೂಕನಾಗಿರುವನೋ ಅವನಿಗೆ ಭಯವೆಂಬುದು ಇಲ್ಲವೇ ಇಲ್ಲ.

ಸಾವಧಾನಂ ಜ್ಞಾನನಿಷ್ಠಂ ಭವಿತವ್ಯಂ ಸದಾತ್ರ ಹಿ।
ವಾದ್ಯಾನಿ ವಚನಾನ್ಯೇವ ಸಾಧೂನಾಂ ಬೋಧನಾನಿ ವೈ ॥ ೪೪ ॥

ಸದಾ ಧೃತಾನಿ ಹೃದಯೇ ತಾನಿ ಬುದ್ಧ್ಯಾವಲೋಕಯೇತ್ ।
ಮೋಹಕ್ಷಯಃ ಪ್ರಭಾತೋಽಯಮಿದಾನೀಂ ತ್ವತ್ಪುರಃ ಸ್ಥಿತಃ ॥ ೪೫ ॥

ತ್ವಮೇವಾತ್ಮಾ ಸಭೇಯಂ ತೇ ನಿವಾಸಸ್ಥಾನಮೀರಿತಂ ।
ತವಾಗ್ರೇ ಯೇ ಸ್ಥಿತಾಸ್ಸರ್ವೇ ವಯಂ ತೇ ಮುಕ್ತಿಮಾಗತಾಃ ॥ ೪೬ ॥

ಕಿಮಿದಾನೀಂ ತೇ ಪ್ರಷ್ಟವ್ಯಂ ಚೋಪದೇಶ್ಯಂ ತ್ವಯಾದ್ಯ ಕಿಂ ।
ತವ ಕೀರ್ತನಮಾತ್ರೇಣ ನರಾ ಮುಕ್ತಿಂ ಲಭಂತಿ ಹಿ ॥ ೪೭ ॥

ವಯಂ ತ್ವದಂತಿಕಾಸ್ಸರ್ವೇ ಮುಕ್ತಾ ಏವ ನ ಸಂಶಯಃ ।
ಇತಿ ತೇಷಾಂ ವಚಃ ಶ್ರುತ್ವಾ ಸಸ್ಮಿತಃ ಪ್ರಾಹ ತಾನ್ಪ್ರಭುಃ ॥ ೪೮ ॥

---

೪೪. ಜ್ಞಾನದಲ್ಲಿರುವಿಕೆಯು ಸಾವಧಾನವೆಂದೆನಿಸಿಕೊಳ್ಳುತ್ತದೆ. ವಚನಗಳೆಂಬುದೇ ವಾದ್ಯಗಳು. ಈ ವಚನಗಳು ಸತ್ಪುರುಷರು ಹೇಳಿರತಕ್ಕವು.

೪೫. ಅವನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡಿರುತ್ತಾ ಬುದ್ಧಿಯಿಂದ ವಿಮರ್ಶಿಸಬೇಕು. ಮೋಹಕ್ಷಯ (ಮೋಹವನ್ನು ಬಿಟ್ಟುಬಿಡುವುದು) ವೆಂಬುದೇ ಬೆಳಗಾಗುವಿಕೆಯು. ಅದೇ ಈಗ ನಿನ್ನ ಎದುರಿಗೆ ನಿಂತಿರುವುದು.

೪೬. ನೀನೇ ಆತ್ಮವು. ನಿನ್ನ ಸಭೆಯೆಂಬುದೇ ಆತ್ಮನ ನಿವಾಸಸ್ಥಾನವು. ನಿನ್ನ ಎದುರಿಗೆ ಇರುವ ನಾವೆಲ್ಲರೂ ಮುಕ್ತರಾಗಿರುವವರು.

೪೭. ಎಲೈ ರಾಮನೇ ! ನಿನ್ನನ್ನು ಕೇಳತಕ್ಕದ್ದೇನಿರುವುದು ? ನೀನು ಉಪದೇಶಿಸತಕ್ಕದ್ದು ತಾನೇ ಈಗ ಯಾವುದಿರುವುದು ? ನಿನ್ನ ಕೀರ್ತನೆಯನ್ನು ಮಾಡಿದ ಮಾತ್ರದಿಂದಲೇ ನರರು ಮುಕ್ತಿಯನ್ನು ಹೊಂದುತ್ತಾರೆ.

೪೮. ನಿನ್ನ ಹತ್ತಿರವಿರುವ ನಾವೆಲ್ಲರೂ ಮುಕ್ತರಾಗಿಯೇ ಇದ್ದೇವೆ. ಇದರಲ್ಲಿ ಸಂಶಯವಿಲ್ಲ. ಎಂದೆನ್ನಲು ಇದನ್ನು ರಾಮನು ಕೇಳಿ ಇಂತೆಂದನು.

ಸಮ್ಯಕ್ ಬುಧ್ಯಾ ಪರಿಜ್ಞಾತಂ ಸುಖೇ ಸ್ಥೇಯಂ ಸದಾ ಜನಾಃ ।
ನಾನ್ಯಥಾ ಸ್ವಮತಿಃ ಕಾರ್ಯಾತ್ಮನೋ ರಾಮಂ ಪೃಥಕ್ ಸ್ಥಿತಂ ॥ ೪೯ ॥

ಇತ್ಯುಕ್ತ್ವಾ ಸಕಲಾನ್ ರಾಮೋ ಯಯೌ ಸೀತಾಗೃಹಂ ಮುದಾ ।
ಪೌರಾದ್ಯಾ ಗತಮೋಹಾಸ್ತೇ ಚಾತ್ಮಾನಂ ಮೇನಿರೇ ಪರಂ ॥ ೫೦ ॥

ಏವಂ ರಾಮೇಣ ಭೋ ಶಿಷ್ಯ ದೂತವಾಕ್ಯೈಸ್ಸುಬೋಧಿತಾಃ ।
ಪೌರಾಸ್ಸರ್ವೇ ಯಥಾ ತಚ್ಚ ಮಯಾ ತೇ ವಿನಿವೇದಿತಂ ॥ ೫೧ ॥

ಏಕದಾ ಕೈಕಯೀ ರಾಮ ಮೇಕಾಂತೇ ಪ್ರಣಿಪತ್ಯ ಸಾ ।
ಅಬ್ರವೀನ್ಮಧುರಂ ವಾಕ್ಯಂ ವಿನಯಾತ್ಪುರತಃ ಸ್ಥಿತಾ ॥ ೫೨ ॥

ರಾಮ ರಾಜೀವಪತ್ರಾಕ್ಷ ಮಯಾ ಯದಪರಾಧಿತಂ ।
ಪುರಾಜ್ಞಾನಾತ್ತ್ವಯಾ ತಚ್ಚ ಕ್ಷಂತವ್ಯಂ ತ್ವೈ ಕೃಪಾಳು ನಾ ॥ ೫೩ ॥

---

೪೯. ಎಲೈ ಜನಗಳಿರಾ! ನೀವು ಸರಿಯಾಗಿ ಬುದ್ಧಿಯನ್ನು ಉಪಯೋಗಿಸಿ ತಿಳಿದುಕೊಂಡಿರುವಿರಿ. ಚೆನ್ನಾಗಿರುವುದು. ಈ ರಾಮನು ಬೇರೆ, ಆತ್ಮನು ಬೇರೆ, ಎಂದು ತಿಳಿಯಬೇಡಿರಿ. ರಾಮನೇ ಆತ್ಮರೂಪನಾದವನು. ಇದರಲ್ಲಿ ಬೇರೆಯಾಗಿ ತಿಳಿಯಲೇಬೇಡಿರಿ.

೫೦. ಹೀಗೆಂದು ರಾಮನು ಎಲ್ಲರಿಗೂ ಹೇಳಿ ಸಂತೋಷದಿಂದ ಸೀತೆಯ ಮನೆಗೆ ಹೊರಟುಹೋದನು. ಆಗ ಈ ಪಟ್ಟಣಿಗರೆಲ್ಲರೂ ತಾವು ತಮ್ಮ ಈ ಅಜ್ಞಾನವನ್ನು ನಾಶಮಾಡಿಕೊಂಡು ಆತ್ಮಸ್ವರೂಪವನ್ನು ತಿಳಿದರು.

೫೧. ಎಲೈ ಶಿಷ್ಯನೇ! ರಾಮನು ದೂತರವಾಕ್ಯದಿಂದ ಪೌರರನ್ನು ಈ ರೀತಿಯಾಗಿ ಬೋಧಿಸಿದನು. ಆ ಬೋಧನೆಯನ್ನು ನಿನಗೆ ನಾನು ವಿವರಿಸಿ ಹೇಳಿರುತ್ತೇನೆ.

೫೨. ರಾಮನು ಹೀಗಿರಲು ಒಂದು ಸಾರಿ ಕೈಕೇಯಿಯು ರಾಮನ ಬಳಿಗೆ ಬಂದು ಏಕಾಂತದಲ್ಲಿ ನಮಸ್ಕರಿಸಿ ಅವನೆದುರಿಗೆ ನಿಂತುಕೊಂಡು ಅವನನ್ನು ಕುರಿತು ಇಂತೆಂದು ಮಧುರವಾಗಿ ಮಾತನಾಡಿದಳು.

೫೩. ಎಲೈ ರಾಜೀವ ಪತ್ರಾಕ್ಷನಾದ ರಾಮನೇ! ನಾನು ಹಿಂದೆ ನಿನಗೆ ಅಪರಾಧವಮಾಡಿದೆನು. ಅದನ್ನು ಕೃಪಾಳುವಾದ ನೀನು ಕ್ಷಮಿಸಬೇಕು.

ಅಹಂ ತೇ ಶರಣಂ ಪ್ರಾಪ್ತಾ ಮಾಮುದ್ಧರ ಜಗತ್ಪತೇ ।
ಕಿಂಚಿದುಪದಿಶಸ್ವ ತ್ವಂ ಯೇನಾಜ್ಞಾನಂ ವಿನಶ್ಯತಿ ॥ ೫೪ ॥

ತತ್ತಸ್ಯಾ ವಚನಂ ಶ್ರುತ್ವಾ ರಾಮೋ ರಾಜೀವಲೋಚನಃ ।
ಉವಾಚ ಕೈಕಯೀಂ ವಾಕ್ಯಂ ಮಧುರಂ ಪ್ರಹಸನ್ನಿವ ॥ ೫೫ ॥

ನ ತ್ವಯಾ ಮೇಽಪರಾದ್ಧಂ ಹಿ ಮಚ್ಛಂದಾಚ್ಚ ಸರಸ್ವತೀ ।
ಸ್ಥಿತ್ವಾ ತವಾಸ್ಯೇ ಸಾ ಪ್ರಾಹ ವರಯಾಚ್ಞಾದಿ ಯತ್ಪುರಾ ॥ ೫೬ ॥

ತ್ವಂ ಚ ಕೈಕಯಿ ಶುದ್ಧಾಸಿ ತ್ವಯಿ ಕ್ರೋಧೋ ನ ಮೇಽಸ್ತಿ ವೈ ।
ಶ್ವಸ್ತ್ವಾಂ ನೀತ್ವೋಪದೇಶಂ ಹಿ ಕಾರಯಿಷ್ಯತಿ ಲಕ್ಷ್ಮಣಃ ॥ ೫೭ ॥

ಇತ್ಯುಕ್ತ್ವಾ ತಾಂ ವಿಸಜ್ಯಾ೯ಥ ಲಕ್ಷ್ಮಣಂ ರಾಘವೋಽಬ್ರವೀತ್ ।
ಶಿಬಿಕಾಸ್ಥಾ ಹಿ ಕೈಕೇಯೀ ಶ್ವಃ ಪ್ರಭಾತೇ ಗಿರಾ ಮಮ ॥ ೫೮ ॥

---

೫೪. ನಾನು ನಿನಗೆ ಶರಣಾಗತಳಾಗಿ ಬಂದಿದ್ದೇನೆ. ಎಲೈ ಜಗತ್ಪತಿಯೇ! ನನ್ನನ್ನು ಉದ್ಧಾರಮಾಡು. ಆ ಅಜ್ಞಾನವು ನಾಶವಾಗುವಂತೆ ಜ್ಞಾನವನ್ನು ಸ್ವಲ್ಪವನ್ನಾದರೂ ನನಗೆ ಉಪದೇಶಮಾಡು ಎಂದಳು.

೫೫. ರಾಜೀವಲೋಚನನಾದ ರಾಮನು ಕೈಕೇಯಿಯ ಆ ಮಾತನ್ನು ಕೇಳಿ ಕೈಕೇಯಿಯನ್ನು ಕುರಿತು ನಗುತ್ತ ಮಧುರವಾಗಿ ಇಂತೆಂದನು.

೫೬. ಎಲೈ ಕೈಕೇಯಿಯೇ! ನೀನು ನನಗೆ ಅಪರಾಧವನ್ನು ಮಾಡಲೇ ಇಲ್ಲ. ನನ್ನ ಅಪೇಕ್ಷೆಯಂತೆ ಸರಸ್ವತಿಯು ನಿನ್ನ ಬಾಯಲ್ಲಿದ್ದುಕೊಂಡು ನೀನು ಹಿಂದೆ ಕೇಳಿದ ವರಗಳನ್ನು ಕೇಳಿದಳು.

೫೭. ಎಲೈ ಕೈಕೇಯಿಯೇ! ನೀನು ಶುದ್ಧಳಾಗಿದ್ದೀಯೆ. ನಿನ್ನಲ್ಲಿ ನನಗೆ ಕೋಪವಿಲ್ಲ. ನಾಳೆಯ ದಿನ ಲಕ್ಷ್ಮಣನು ನಿನ್ನನ್ನು ಕರೆದುಕೊಂಡು ಹೋಗಿ ಉಪದೇಶವನ್ನು ಮಾಡಿಸುತ್ತಾನೆ.

೫೮. ಹೀಗೆಂದು ಹೇಳಿ ರಾಮನು ಆಕೆಯನ್ನು ಕಳುಹಿಸಿಬಿಟ್ಟು ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೇ! ನನ್ನ ಅಪ್ಪಣೆಯಂತೆ ಬೆಳಗಾಗುತ್ತಲೂ ಕೈಕೇಯಿಯನ್ನು ಒಂದು ಮೇನದಲ್ಲಿ ಕೂರಿಸಿಕೋ.

ತ್ವಯಾ ನೇಯಾ ಬಹಿಃ ಪುರ್ಯಾಸ್ಸರಯ್ವಾಶ್ಚ ತಟಂ ಪ್ರತಿ ।
ಅವಿಸಮೂಹಸಂಸ್ಥಾನಂ ವರ್ತತೇ ಯತ್ರ ತತ್ರ ಹಿ ॥ ೫೯ ॥

ಅವಿವೃಂದಾಂತಿಕಂ ನೀತ್ವಾ ಕೈಕೇಯೀಂ ಶಿಬಿಕಾಸ್ಥಿತಾಂ ।
ಅವಿವಾಕ್ಯಾನಿ ಶ್ರಾವ್ಯಾಣಿ ಮುಹೂರ್ತಂ ಮಮ ವಾಕ್ಯತಃ ॥ ೬೦ ॥

ಆನೇತವ್ಯಾ ತತಶ್ಚೇಯಂ ಕೈಕೇಯೀ ಮಮ ಸನ್ನಿಧೌ ।
ಇತಿ ತದ್ರಾಮವಚನಂ ಶ್ರುತ್ವಾ ಸ ಲಕ್ಷ್ಮಣೋಪಿ ಚ ॥ ೬೧ ॥

ತಥೇತ್ಯುಕ್ತ್ವಾ ತದಾ ರಾಮಂ ತೂಷ್ಣೀಂ ತಸ್ಥೌ ತದಗ್ರತಃ ।
ಅಥ ಪ್ರಭಾತೇ ಸೌಮಿತ್ರಿರ್ಗತ್ವಾ ಭರತಮಂದಿರೇ ॥ ೬೨ ॥

ಶಿಬಿಕಾಯಾಂ ಸ ಕೈಕೇಯೀಂ ಸಮಾರುಹ್ಯ ಮುದಾನ್ವಿತಾಂ ।
ದಾಸೀಭಿಸ್ಸೇವಕೈಶ್ಚೈವ ವೇಷ್ಟಿತಾಂ ವೇತ್ರಪಾಣಿಭಿಃ ॥ ೬೩ ॥

---

೫೯. ಅವಳನ್ನು ಊರ ಹೊರಗೆ ಸರಯೂ ನದಿಯ ದಡಕ್ಕೆ ಕರೆದುಕೊಂಡು ಹೋಗು. ಅಲ್ಲಿ ಆಡುಗಳ ಗುಂಪು ಎಲ್ಲಿದೆಯೋ ಅಲ್ಲಿಗೆ ತೆಗೆದುಕೊಂಡು ಹೋಗಿ ನಿಲ್ಲಿಸು.

೬೦-೬೧. ಆಡುಗಳು ಗುಂಪಾಗಿರುವಲ್ಲಿಗೆ ಆ ಕೈಕೇಯಿಯ ಪಲ್ಲಕ್ಕಿಯನ್ನು ತೆಗೆದುಕೊಂಡು ಹೋಗಿ ನಿಲ್ಲಿಸಿ ಒಂದು ಕ್ಷಣಕಾಲ ಆ ಆಡುಗಳ ಮಾತನ್ನು ಕೇಳುತ್ತಿರುವಂತೆ ಮಾಡು. ಅನಂತರ ಆಕೆಯನ್ನು ನನ್ನ ಬಳಿಗೆ ಕರೆದುಕೊಂಡು ಬಾ ಎಂದು ಹೇಳಲು ಲಕ್ಷ್ಮಣನು ಆ ರಾಮನ ಮಾತನ್ನು ಅಪ್ಪಣೆಯೆಂದು ಅಂಗೀಕರಿಸಿದನು.

೬೨-೬೩. ಲಕ್ಷ್ಮಣನು ಹಾಗೆಯೇ ಆಗಲೆಂದು ಹೇಳಿ ಆ ರಾಮನ ಎದುರಿಗೆ ಆಗ ಸುಮ್ಮನಿದ್ದನು. ಬೆಳಗಾಗುತ್ತಲೂ ಲಕ್ಷ್ಮಣನು ಭರತನ ಮನೆಗೆ ಹೋದನು. ಮೇನೆಯಲ್ಲಿ ಆ ಕೈಕೇಯಿಯನ್ನು ಕೂರಿಸಿಕೊಂಡನು. ಜೊತೆಯಲ್ಲಿ ದಾಸಿಯರೂ ಸೇವಕರೂ ಬಹುವಾಗಿ ಬಂದರು. ಬೆತ್ತವನ್ನು ಹಿಡಿದು ಆಳುಗಳು ದಾರಿಯನ್ನು ಬಿಡಿಸುತ್ತ ಹೊರಟರು.

ತಾಂ ನಿನಾಯ ಬಹಿಃ ಪುರ್ಯಾಃ ಶರಯ್ವಾಶ್ಚ ತಟೇ ವರೇ ।
ಅವಿಯೂಥಾಂತಿಕಂ ಯಾನಂ ಸ್ಥಾಪಯಾಮಾಸ ಲಕ್ಷ್ಮಣಃ ॥ ೬೪ ॥

ಸುಸ್ನಾತಾಂ ಕೈಕಯೀಂ ವಿಪ್ರಾಸ್ತೇ ಜ್ಞಾತ್ವಾ ದಕ್ಷಿಣೇಚ್ಛಯಾ ।
ದುದ್ರುವುಶ್ಶಿಬಿತಾಪೃಷ್ಠೇ ಲಕ್ಷ್ಮಣಸ್ತಾನ್ನ್ಯವಾರಯತ್ ॥ ೬೫ ॥

ಅತಿಮೂರ್ಖಾಶ್ಚ ಪಂಗ್ವಾದ್ಯಾ ಯೇ ತೇ ಜ್ಞೇಯಾ ದ್ವಿಜಾತಯಃ ।
ದಾನಾರ್ಹಾಃ ಪಂಡಿತಾ ನೈತೇ ಶ್ರೋತ್ರಿಯಾ ನ ಪ್ರತಿಷ್ಠಿತಾಃ ॥ ೬೬ ॥

ತತೋ ದೂತಾನ್ನಿರಾಕೃತ್ಯ ಮುಕ್ತಾಜಾಲಾನಿ ಲಕ್ಷ್ಮಣಃ ।
ಊರ್ಧ್ವಂ ಕೃತ್ವಾ ಸ್ವಹಸ್ತಾಭ್ಯಾಂ ಕೈಕೇಯೀಂ ವಾಕ್ಯಮಬ್ರವೀತ್ ॥

---

೬೪. ಲಕ್ಷ್ಮಣನು ಆಕೆಯನ್ನು ಕರೆದುಕೊಂಡು ಹೊರಟುಹೋಗಿ ಸರಯೂ ನದಿಯ ದಡಕ್ಕೆ ಹೋದನು. ಅಲ್ಲಿ ಆಡುಗಳ ಮಂದೆಯಿರಲು ಅದರ ಬಳಿಯಲ್ಲಿ ಆ ಕೈಕೇಯಿಯ ಮೇನೆಯನ್ನು ನಿಲ್ಲಿಸಿದನು.

೬೫. ಅಲ್ಲಿ ಆ ಕೈಕೇಯಿಯು ಇಳಿದು ಸರಯೂ ನದಿಯಲ್ಲಿ ಸ್ನಾನ ಮಾಡಿದಳು. ಆಗ ಬ್ರಾಹ್ಮಣರು ಇದನ್ನು ನೋಡಿ ದಕ್ಷಿಣೆಯನ್ನು ಹೊಂದುವ ಇಚ್ಛೆಯಿಂದ ಆಕೆಯ ಹಿಂದೆ ಓಡುತ್ತ ಹೋದರು. ಲಕ್ಷ್ಮಣನು ಅವರನ್ನು ಹಿಂತಿರುಗಿಸಿದನು.

೬೬. ಈ ನಮ್ಮ ಹಿಂದೆ ಓಡಿಬರುತ್ತಿರುವ ಈ ದ್ವಿಜಾದಿಗಳು ಕುಂಟರು, ಕುರುಡರೇ ಮುಂತಾದವರು. ಇವರು ಮೂರ್ಖರು. ಇವರು ದಯೆಯಿಂದ ಕೊಡತಕ್ಕ ಬಹುಮಾನಾರ್ಹರೇ ಹೊರತು ಶ್ರುತ್ಯುಕ್ತವಾದ ಕರ್ಮಗಳನ್ನು ಮಾಡಿಕೊಂಡು ಪಂಡಿತರಾಗಿ ಯೋಗ್ಯರೆನಿಸಿಕೊಂಡಿಲ್ಲ. ಇವರಿಗೆ ದಾನವನ್ನು ಕೊಡಬಾರದೆಂದು ತಿಳಿದು ಲಕ್ಷ್ಮಣನು ಅವರನ್ನು ಓಡಿಸಿದನು.

೬೭. ಅನಂತರ ದೂತರನ್ನು ಲಕ್ಷ್ಮಣನು ನಿಲ್ಲುವಂತೆ ಹೇಳಿ ಸ್ವಲ್ಪ ಮುಂದೆ ಹೋಗಿ ಮೇನೆಯನ್ನು ನಿಲ್ಲಿಸಿ ತನ್ನ ಕೈಯಿಂದಲೇ ಮೇನೆಯೊಳಗಿರುವವರು ಕಾಣದಂತೆ ನೇತಾಡುತ್ತಿರುವ ಮುತ್ತಿನ ಸರಗಳನ್ನು ಮೇಲಕ್ಕೆತ್ತಿ ಕೈಕೇಯಿಯನ್ನು ಕುರಿತು ಇಂತೆಂದನು.

ಪಶ್ಯ ಕೈಕೇಯಿ ಮಾತಸ್ತ್ವಂ ಅವಿಯೂಥಂ ಪುರಃ ಸ್ಥಿತಂ ।
ರಾಮೇಣ ಪ್ರೇಷಿತಾಸಿ ತ್ವಮುಪದೇಶಾರ್ಥಮಾದರಾತ್ ॥ ೧೮ ॥

ತತ್ಸೌಮಿತ್ರಿವಚಃ ಶ್ರುತ್ವಾಶ್ಚರ್ಯಯುಕ್ತಾಥ ಕೈಕಯೀ ।
ಪ್ರತಾರಿತಾಹಂ ರಾಮೇಣ ಕಿಮತ್ರ ಪ್ರೇಷ್ಯ ಸಾದರಂ ॥ ೧೯ ॥

ಇತಿ ತರ್ಕಾನ್ಸ್ಕುರ್ವತೀ ಸಾ ತಸ್ಥೌ ತೂಷ್ಣೀಂ ಕ್ಷಣಂ ತದಾ ।
ತಾವಚ್ಛುಶ್ರಾವ ಸಾ ಮೇ ಮೇ ತ್ವವಿವಾಕ್ಯಾಧ ವೈ ಮುಹುಃ ॥ ೨೦ ॥

ತಾನಿ ಶ್ರುತ್ವಾಥ ಕೈಕೇಯೀ ತದಾ ಚಿತ್ತೇ ವಿಚಾರಯತ್ ।
ಮೇ ಮೇ ತ್ವಿತಿ ಮುಹುಶ್ಚಾತ್ರ ಕಿಮರ್ಥಂ ವಚನಾನಿ ಹಿ ॥ ೨೧ ॥

ಅವ್ಯಸ್ಸರ್ವಾ ವದಂತ್ಯತ್ರ ಗೂಢೋರ್ಥಸ್ತ್ವತ್ರ ವರ್ತತೇ ।
ತತೋ ನಿಮೀಲ್ಯ ಕೈಕೇಯೀ ನೇತ್ರಂ ಧ್ಯಾತ್ವಾ ಕ್ಷಣಂ ಹೃದಿ ॥ ೨೨ ॥

---

೧೮. ಎಲೈ ತಾಯಿಯಾದ ಕೈಕೇಯಿಯೇ! ಈ ಮುಂದುಗಡೆಯಲ್ಲಿರುವ ಆಡಿನ ಮಂದೆಯನ್ನು ನೋಡು. ಇವುಗಳಲ್ಲಿ ನೀನು ಉಪದೇಶವನ್ನು ಹೊಂದಲೆಂದು ರಾಮನು ನಿನ್ನನ್ನು ಕಳುಹಿಸಿರುವನು.

೧೯-೨೦. ಸೌಮಿತ್ರಿಯು ಇಂತೆಂದು ಹೇಳಿದುದನ್ನು ಕೇಳಿ ರಾಮನು ನನ್ನನ್ನು ಇಲ್ಲಿಗೆ ಕಳುಹಿಸಿ ಮೋಸಪಡಿಸಿರಬಹುದೇ ? ಏನು ? ಎಂದು ಕೈಕೇಯಿಯು ಆಶ್ಚರ್ಯಪಡುತ್ತ ಕ್ಷಣಕಾಲ ಯೋಚಿಸುತ್ತ ಸುಮ್ಮನಿದ್ದಳು. ಆಗ ಅವೆಲ್ಲವೂ "ಮೆ, ಮೆ," ಎನ್ನುತ್ತಿದ್ದ ಧ್ವನಿಯನ್ನು ಕೇಳಿದಳು.

೨೧-೨೨. ಆ ಧ್ವನಿಯನ್ನು ಕೇಳಿ ಕೈಕೇಯಿಯು ಮನಸ್ಸಿನಲ್ಲಿಯೇ ಯೋಚಿಸಿದಳು. ಈ ಆಡುಗಳೆಲ್ಲವೂ "ಮೆ, ಮೆ," ಎಂಬುದಾಗಿ ಆಗಾಗ್ಗೆ ಹೇಳುತ್ತಲೇ ಇರಲು ಕಾರಣವೇನು ? ಇದರಲ್ಲಿ ಯಾವುದೋ ಗೂಢವಾದ ಅರ್ಥವಿರಬೇಕು ಎಂದು ತಿಳಿದು ಕಣ್ಣನ್ನು ಮುಚ್ಚಿಕೊಂಡು ಕ್ಷಣಕಾಲ ಯೋಚಿಸಿದಳು.

ಸರ್ವಂ ಜ್ಞಾತ್ವಾ ಗತಾಜ್ಞಾನಾ ತುತೋಷ ನಿತರಾಂ ತದಾ ।
ತತಃ ಸ್ಮಿತಾನನಾ ಪ್ರಾಹ ಲಕ್ಷ್ಮಣಂ ಪುರತಃ ಸ್ಥಿತಂ ॥ ೭೩ ॥

ಲಬ್ಧಂ ಜ್ಞಾನಂ ಮಯಾ ಬಾಲ ನಯ ಮಾಂ ರಾಘವಂ ಪ್ರತಿ ।
ಇತಿ ತಸ್ಯಾ ವಚಃ ಶ್ರುತ್ವಾ ಮುಕ್ತಾಜಾಲಾನಿ ಮುಚ್ಯ ಸಃ ॥ ೭೪ ॥

ದೂತಾನ್ದೂರೇ ಗತಾನ್ವೇಗಾದಾಹೂಯ ನಗರೀಂ ಪ್ರತಿ ।
ಕೈಕೇಯೀಮಾನಯಾಮಾಸ ಸೀತಾಗೇಹಂ ವಿವೇಶ ಸಾ ॥ ೭೫ ॥

ತತ್ರ ದೃಷ್ಟ್ವಾ ಸಮಾಸೀನಂ ಸೀತಯಾ ರಘುನಂದನಂ ।
ಬಧ್ಯಮಾನಂ ಸ್ವಶಿರಸಿ ಚಿತ್ರೋಷ್ಣೀಷಂ ಕರೇಣ ಹಿ ॥ ೭೬ ॥

---

೭೩. ಆದರ ಅರ್ಥವನ್ನು ತಿಳಿದು ಅಜ್ಞಾನವನ್ನು ನಾಶಮಾಡಿಕೊಂಡು ಬಹುವಾಗಿ ಸಂತೋಷಪಟ್ಟಳು. ಆಗ ನಗುತ್ತ ಎದುರಿಗೆ ನಿಂತಿರುವ ಲಕ್ಷ್ಮಣನನ್ನು ಕುರಿತು ಇಂತೆಂದಳು.

೭೪. ಎಲೈ ಬಾಲನೇ ! ನನ್ನ ಅಜ್ಞಾನವು ಹೋಯಿತು. ನನ್ನನ್ನು ರಾಮನ ಬಳಿಗೆ ಕರೆದುಕೊಂಡು ಹೋಗು. ಎಂದೆನಲು ಆ ಮಾತನ್ನು ಕೇಳಿ ಲಕ್ಷ್ಮಣನು ಮೇನೆಯಲ್ಲಿನ ಮುತ್ತಿನ ಸರಗಳನ್ನು ಎಂದಿನಂತೆಯೇ ನೇತಾಡುವಂತೆ ಬಿಟ್ಟುಬಿಟ್ಟನು.

೭೫. ಅನಂತರ ದೂರದಲ್ಲಿದ್ದ ದೂತರನ್ನು ಕರೆದು ಅವರನ್ನು ಮೇನೆಯನ್ನು ಹೊತ್ತುಕೊಳ್ಳುವಂತೆ ಹೇಳಿ ಊರಿಗೆ ಕರೆದುಕೊಂಡು ಬಂದು ರಾಮನ ಬಳಿಗೆಹೋಗಿ ಬಿಡಲು ಆಕೆಯು ಸೀತೆಯ ಮನೆಗೆ ಹೋದಳು.

೭೬-೭೭. ಆ ಸೀತೆಯ ಮನೆಯಲ್ಲಿ ರಾಮನೂ ಸೀತೆಯೂ ಕುಳಿತಿದ್ದರು. ಮತ್ತು ಆ ರಾಮನು ತನ್ನ ಕೈಯಿಂದ ತಾನೇ ರುಮಾಲನ್ನುಸುತ್ತಿಕೊಳ್ಳುತ್ತಿದ್ದನು. ಸೀತೆಯು ಅವನು ಸುತ್ತಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಕನ್ನಡಿಯನ್ನೂ

ಸೀತಾಕರಧೃತಾದರ್ಶೇ ಪಶ್ಯಂತಂ ಸ್ವಮುಖೋತ್ಪಲಂ ।
ತಂ ನತ್ವಾ ಪರಯಾ ಭಕ್ತ್ಯಾ ಕೈಕೇಯೀ ವಾಕ್ಯಮಬ್ರವೀತ್ ॥ ೭೭ ॥

ರಾಮ ತೇ ಕೃಪಯಾ ಲಬ್ಧಮವಿವಾಕ್ಯವಿಚಾರತಃ ।
ಸತ್‌ಜ್ಞಾನಂ ಮೇ ಗತೋ ಮೋಹಶ್ಚೇದಾನೀಂ ನ ಪ್ರಯೋಜನಂ ॥ ೭೮ ॥

ಉಪದೇಶಸ್ಯ ತೇ ರಾಮ ಸದಾ ಮುಕ್ತಾಸ್ಮಿ ರಾಘವ ।
ತತ್ತಸ್ಯಾ ವಚನಂ ಶ್ರುತ್ವಾ ಸಸ್ಮಿತಃ ಪ್ರಾಹ ತಾಂ ವಿಭುಃ ॥ ೭೯ ॥

ಕಥಂ ಜ್ಞಾತಂ ತ್ವಯಾ ಜ್ಞಾನಂ ವಿಚಾರಶ್ಚ ಕಥಂ ಕೃತಃ ।
ತತ್ಸರ್ವಂ ವಿಸ್ತರೇಣೈವ ಮಮಾಗ್ರೇ ವದ ಕೈಕಯಿ ॥ ೮೦ ॥

ತದ್ರಾಮವಚನಂ ಶ್ರುತ್ವಾ ಕೈಕೇಯೀ ಪ್ರಾಹ ರಾಘವಂ ।
ಶೃಣು ರಾಮ ಯಥಾ ಲಬ್ಧಂ ಜ್ಞಾನಂ ತತ್ತೇ ವದಾಮ್ಯಹಂ ॥ ೮೧ ॥

ಹಿಡಿದುಕೊಂಡಿದ್ದಳು. ಅದರಲ್ಲಿ ತನ್ನ ಮುಖವನ್ನು ನೋಡಿಕೊಳ್ಳುತ್ತ ಸುತ್ತಿಕೊಳ್ಳುತ್ತಿದ್ದನು. ಆ ರಾಮನನ್ನು ಕೈಕೇಯಿಯು ಬಹು ಭಕ್ತಿಯಿಂದ ನಮಸ್ಕರಿಸಿ ಅವನನ್ನು ಕುರಿತು ಇಂತೆಂದಳು.

೭೮. ಎಲೈ ರಾಮನೇ ! ನಿನ್ನ ಕೃಪೆಯಿಂದ ಆ ಆಡುಗಳ ಮಾತನ್ನು ಕೇಳಿ ವಿಚಾರಮಾಡಿ ಒಳ್ಳೆಯ ಜ್ಞಾನವನ್ನು ಹೊಂದಿದೆನು. ನನ್ನ ಮೋಹವು ಹೋಯಿತು. ಈಗ ನಿನ್ನ ಉಪದೇಶದಿಂದ ನನಗೆ ಪ್ರಯೋಜನವಿಲ್ಲ.

೭೯. ನಾನು ಈಗ ಯಾವಾಗಲೂ ಮುಕ್ತಳಾಗಿಯೇ ಇರುವೆನು. ಎಂದು ಹೇಳಿದಳು. ಆಕೆಯು ಅಂತು ಹೇಳಿಸುದನ್ನು ಕೇಳಿ ಪ್ರಭುವಾದ ರಾಮನು ನಗುತ್ತ ಇಂತೆಂದನು.

೮೦. ಎಲೈ ಕೈಕೇಯಿಯೇ ! ನೀನು ಜ್ಞಾನವನ್ನು ಹೇಗೆ ಹೊಂದಿದೆ ? ಹೇಗೆ ವಿಚಾರವನ್ನು ಮಾಡಿಕೊಂಡೆ ? ಅದೆಲ್ಲವನ್ನೂ ವಿಸ್ತಾರವಾಗಿ ನನ್ನ ಎದುರಿಗೆ ಹೇಳು.

೮೧. ರಾಮನ ಈ ಮಾತನ್ನು ಕೇಳಿ ಕೈಕೇಯಿಯು ಎಲೈ ರಾಮನೇ ! ನಾನು ಹೇಗೆ ಜ್ಞಾನವನ್ನು ಹೊಂದಿದೆನು ಎಂಬುದನ್ನು ವಿಸ್ತಾರವಾಗಿ ಹೇಳುತ್ತೇನೆ ಕೇಳು.

ಮಯಾವಿವಚನಾನ್ಯೇವ ತತ್ರಾವಿಯೂಥಸನ್ನಿಧೌ ।
ಶ್ರುತ್ವಾ ಮೇ ಮೇ ತ್ವಿತಿ ತದಾ ಹೃದಯೇ ಮಂತ್ರಿತಂ ಕ್ಷಣಂ ॥ ೬೨ ॥

ಮೇ ಮೇ ತ್ವಿತಿ ಮನ್ಯೈತಾಶ್ಚ ಶ್ರಾವಯಂತಿ ಮುಹುರ್ಮುಹುಃ ।
ಶ್ರುತ್ವಾ ಮೇ ಮೇ ತ್ವಿತಿ ಮಯಾ ಚೇದ್ವಾಚ್ಯಂ ತರ್ಹಿ ನೈ ಮಯಾ ॥

ಮೇ ಮೇ ಪ್ರಕಥ್ಯತೇ ನಿತ್ಯಂ ಪಶುಪುತ್ರಗೃಹಾದಿಷು ।
ಅತೋ ವಕ್ತುಂ ನೋಪದೇಶೋಯಂ ಮಾಮೇತಾಭಿರುಚ್ಯತೇ ॥ ೬೪ ॥

ತರ್ಹ್ಯಯಂ ಚೋಪದೇಶೋದ್ಯ ನಿಷೇಧೇ ಮಾಂ ಪ್ರಕೀರ್ತ್ಯತೇ ।
ಅತೋಹಂ ನ ಕದಾ ಮೇ ಮೇ ಪ್ರವದಾಮಿ ತ್ವಿತಃ ಪರಂ ॥ ೬೫ ॥

---

೬೨. ನಾನು ಆ ಆಡಿನ ಮಂದೆಯ ಹತ್ತಿರಕ್ಕೆ ಹೋಗಿ ಅವುಗಳ ಮಾತನ್ನು ಕೇಳಿದೆನು. ಅವು "ಮೆ, ಮೆ," ಎಂದೆನ್ನುತ್ತಿದ್ದವು. ಇದೇನಿರಬಹುದೆಂಬುದಾಗಿ ಮನಸ್ಸಿನಲ್ಲಿಯೇ ಕ್ಷಣಕಾಲ ಯೋಚಿಸಿದೆನು.

೬೩. ಆ ಆಡುಗಳೆಲ್ಲವೂ ಕೂಡ "ಮೆ, ಮೆ." ಎಂದರೆ ಇವೆಲ್ಲವೂ ನನ್ನವು. ಇವೆಲ್ಲವೂ ನನ್ನವು ಎಂದು ಹೇಳುತ್ತವೆ. ಆ "ಮೆ, ಮೆ," ಎಂಬುದನ್ನು ಕೇಳಿದೆನು. ಇದರಂತೆಯೇ ನಾನೂ ನನ್ನದು ಎಂದು ಹೇಳುವೆನು.

೬೪. ಪಶುಗಳು, ಪುತ್ರರು, ಗೃಹಗಳು ಇವೆಲ್ಲವೂ ಕೂಡ ನನ್ನದು ಎಂದು ಹೇಳಲ್ಪಡುತ್ತಿವೆ. ಹಾಗೆ ಹೇಳಬಾರದೆಂದು ಇವು ಹೇಳುತ್ತವೆ. ಹೀಗೆ ಹೇಳುತ್ತಿದ್ದುದೇ ನನಗೆ ಉಪದೇಶವು.

(ಮೇ ಮೇ ಮೇ = ನನ್ನದು, ನನ್ನದು, ನನ್ನದು.
ಮೇ ಮೇ ಮೇ = ಮಾ + ಇಮೇ + ಮೇ = ಇವುಗಳು ನನ್ನದು ಎಂದೆನಬೇಡ.)

೬೫. ಈ ಉಪದೇಶವು ನಮಗೆ ಬೇಡ ಬೇಡವೆಂಬ ನಿಷೇಧದಲ್ಲಿ ಹೇಳಲ್ಪಡುತ್ತಿದೆ. ಮೆ, ಮೆ, ಎಂದರೆ ನನ್ನದು ಎಂದೆನ್ನುವಿಕೆ. ಇದನ್ನು ಇದೊಂದೂ ನನ್ನದಲ್ಲ, ಇವೊಂದೂ ನನ್ನದಲ್ಲ ಎಂದು ನಾವು ನಿಷೇಧರೀತಿಯಲ್ಲಿ ತಿಳಿದುಕೊಳ್ಳಬೇಕು. ಆದ್ದರಿಂದ ಇನ್ನು ಮೇಲೆ ನಾನು ನನ್ನದು, ಎಂದು ಹೇಳುವುದಿಲ್ಲ.

ಮೇ ಮಾತಾ ಮೇ ಸುತಶ್ಚಾಯಂ ಮೇ ಬಂಧುರ್ಮೇ ಗೃಹಂ ವರಂ ।
ಮೇ ರಾಜ್ಯಂ ಮೇ ಸಪತ್ನೀಯಂ ಮೇ ಸಾಪತ್ನ್ಯ ಸುತಸ್ತ್ವಯಂ ॥

ಮೇ ಶರೀರಮಿದಂ ಕಾಂತಂ ಮೇ ದಿವ್ಯಾಭರಣಂ ವರಂ ।
ಮೇ ಮಂಥರಾ ಪ್ರಿಯಾ ದಾಸೀ ಪುತ್ರಾದೀಶ್ಚ ಶುಭಾಮತಿಃ ॥ ೮೭ ॥

ಯಾಸ್ತಿ ಮೇ ಮೇ ತ್ವಿತಿ ಮಯಿ ಸಾ ತ್ಯಕ್ತವ್ಯೇತಿ ಮಾಮತಃ ।
ಬೋಧಯಾಮಾಸುರ್ವಚನೈಃ ಸ್ವೀಯೈಃ ಸ್ಪಷ್ಟಂ ರಘೂತ್ತಮ ॥ ೮೮ ॥

ಅನ್ಯದ್ರಾಮ ನರಾನ್ ಸರ್ವಾನ್ ತಾಶ್ಚಾಪ್ಯೇ ಬೋಧಯಂತಿ ಹಿ ।
ಮೇ ಮೇ ಬುಧ್ಯಾ ಶದಾಸ್ಮಾಭಿಃ ಪೂರ್ವಜನ್ಮನಿ ವರ್ತಿತಂ ॥ ೮೯ ॥

ದೇಹಸ್ತ್ವತೋ ಹ್ಯವೇರ್ಲಬ್ಧೋ ಯುಷ್ಮಾಭಿರ್ಮೇ ಮತಿಸ್ತು ಯಾ ।
ಸರ್ವತಸ್ಸಾತ್ರ ತ್ಯಕ್ತವ್ಯಾ ನಾಂಗೀಕಾರ್ಯಾ ಕದಾಚನ ॥ ೯೦ ॥

೮೬-೮೭. ನನ್ನ ತಾಯಿ, ನನ್ನ ಮಗ, ನನ್ನ ಅಣ್ಣ, ನನ್ನ ತಮ್ಮ, ನನ್ನ ರಾಜ್ಯ, ನನ್ನ ಸವತಿ, ಇವನು ನನ್ನ ಸವತಿಯ ಮಗ, ಈ ನನ್ನ ಶರೀರವು ಸುಂದರವಾಗಿದೆ, ನನ್ನ ದಿವ್ಯವಾದ ಆಭರಣವು, ನನಗೆ ಮಂದರೆಯು ಪ್ರಿಯದಾಸಿಯು. ಇವೆಲ್ಲವೂ ಕೂಡ ಸರಿಯಾದ ಬುದ್ಧಿಯಲ್ಲ.

೮೮. ನನ್ನದು, ನನ್ನದು ಎಂಬತಕ್ಕ ಮಮಕಾರವನ್ನು ಬಿಟ್ಟುಬಿಡಬೇಕು ಎಂಬುದಾಗಿ ಈ ಆಡುಗಳು ತಮ್ಮ ತಮ್ಮ ಮಾತುಗಳಿಂದ ಸ್ಪಷ್ಟವಾಗಿ ನನಗೆ ಬೋಧಿಸಿದುವು.

೮೯-೯೦. ಎಲೈ ರಾಮನೇ! ಮತ್ತೊಂದೇನೆಂದರೆ! ಆ ಆಡುಗಳೆಲ್ಲವೂ ಕೂಡ ತಮ್ಮ ತಮ್ಮ ಮಾತಿನಿಂದ ಎಲೈ ನರರಿರಾ! ನಾವು ಪೂರ್ವಜನ್ಮದಲ್ಲಿ ನಮ್ಮದು, ನಮ್ಮದು ಎಂದುಕೊಂಡೇ ನಡೆದುಕೊಂಡೆವು. ಆದ್ದರಿಂದಲೇ ನಮಗೆ ಈ ಆಡಿನ ಜನ್ಮವು ಬಂದಿರುವುದು. ಆದ್ದರಿಂದ ನೀವು ನನ್ನದು ಎಂಬ ಬುದ್ಧಿಯನ್ನು ಎಲ್ಲಾ ಕಡೆಯಲ್ಲಿಯೂ ಎಲ್ಲಾ ರೀತಿಯಲ್ಲಿಯೂ ಬಿಟ್ಟು ಬಿಡಿರಿ. ಒಂದು ಸಾರಿಯೂ ಕೂಡ ಅದನ್ನು ಅಂಗೀಕರಿಸಬೇಡಿರಿ. ಎಂಬುದಾಗಿ ಎಲ್ಲಾ ಜನರಿಗೂ ಅವು ಬೋಧಿಸುತ್ತವೆ.

ಮೇ ಮೇ ಮತ್ವಾ ಗತಿರ್ಜಾತಾ ಯಾಸ್ಮಾಕಂ ಸಕಲಾ ಜನಾಃ ।
ಮೇ ಮೇ ಬುದ್ಧ್ಯಾ ಹಿ ಯುಷ್ಮಾಕಂ ಗತಿಸ್ಸೈವ ಭವಿಷ್ಯತಿ ॥ ೯೧ ॥

ಏವಂ ತಾ ಬೋಧಯಂತ್ಯತ್ರ ಜನಾನ್ ಸ್ವವಚನೈಸ್ಸದಾ ।
ನ ತದ್ವಾಕ್ಯಂ ಜನೈರ್ಬುಧ್ವಾ ಕದಾ ಚಿತ್ತೇ ವಿಚಾರ್ಯತೇ ॥ ೯೨ ॥

ತಾಸಾಂ ವಾಕ್ಯೋಪದೇಶೇನ ಪ್ರಸಾದಾತ್ತವ ರಾಘವ ।
ಮೇ ಮೇ ಬುದ್ಧಿರ್ಗತಾ ಮತ್ತಸ್ತ್ವತೋ ಮುಕ್ತಾಸ್ಮ್ಯಹಂ ತ್ವಿಹ ॥

ಮೇ ದೇಹಸ್ತ್ವಿತಿ ಯಾ ಬುದ್ಧಿರ್ಯದಾ ಸಕ್ತಾ ಮಯಾತ್ರ ಹಿ ।
ತದಾ ಕಿಂ ಶೇಷಮಸ್ತ್ಯತ್ರ ಸಂಸಾರೇ ದುಃಖದಾಯಕೇ ॥ ೯೪ ॥

ಅಸ್ತ್ವಯಂ ವಾ ಲಯಂ ಯಾತು ದೇಹೋ ವಾರಿತರಂಗವತ್ ।
ಕಃ ಪುತ್ರಃ ಕಸ್ಯ ಕಾ ಮಾತಾ ಸರ್ವಂ ಬ್ರಹ್ಮ ನ ಸಂಶಯಃ ॥ ೯೫ ॥

---

೯೧. ಎಲೈ ಜನಗಳಿರಾ ! ನನ್ನದು, ನನ್ನದು ಎಂಬ ಬುದ್ಧಿಯಿಂದ ನಮಗೆ ಈಗ ಯಾವ ಗತಿಯು ಬಂದಿದೆಯೋ ನನ್ನದು, ನನ್ನದು ಎಂಬ ಮಮಕಾರವನ್ನು ಇಟ್ಟುಕೊಂಡರೆ ನಿಮಗೂ ಅದೇ ಗತಿಯು ಬರುತ್ತದೆ.

೯೨. ಈ ರೀತಿಯಾಗಿ ಆ ಆಡುಗಳು ಎಲ್ಲರನ್ನೂ ತಮ್ಮ ಮಾತುಗಳಿಂದ ಎಚ್ಚರಿಸಿ ಬೋಧಿಸುತ್ತಿವೆ. ಈ ವಾಕ್ಯವನ್ನು ಜನಗಳು ತಿಳಿದು ಬುದ್ಧಿಯಿಂದ ವಿಮರ್ಶೆ ಮಾಡಿ ತಿಳಿದುಕೊಳ್ಳುವುದಿಲ್ಲ.

೯೩. ಎಲೈ ರಾಘವನೇ ! ನಿನ್ನ ಅನುಗ್ರಹದಿಂದ ಆ ಆಡುಗಳ ವಾಕ್ಯದ ಉಪದೇಶದಿಂದ ನನ್ನದು, ನನ್ನದು ಎಂಬ ನನಗಿರುವ ಬುದ್ಧಿಯು ಹೋಯಿತು. ಆದ್ದರಿಂದ ನಾನು ಮುಕ್ತಳಾಗಿದ್ದೇನೆ.

೯೪. "ನನ್ನ ದೇಹವು" ಎಂಬ ಮಮಕಾರವು ನನಗೆ ಉಂಟಾದರೆ ಈ ದುಃಖದಾಯಕವಾದ ಸಂಸಾರದಲ್ಲಿ ದುಃಖವನ್ನುಂಟುಮಾಡಲು ಅದಕ್ಕಿಂತಲೂ ಬೇರೆಯಾದುದು ಯಾವುದು ತಾನೆ ಬೇಕಾಗಿರುವುದು ? ಅದಕ್ಕಿಂತಲೂ ದುಃಖವು ಮತ್ತಾವುದು ತಾನೆ ಉಳಿದಿರುವುದು ?

೯೫. ಈ ದೇಹವು ನೀರಿನ ಮೇಲಿನ ಅಲೆಯಂತಿರುವುದು. ಇದು ಇದ್ದರೂ ಇರಲಿ, ಹೋದರೂ ಹೋಗಲಿ, ಅದಕ್ಕೆ ಲಕ್ಷ್ಯವಿಡಬಾರದು ಯಾರಿಗೆ ಯಾರು ಮಗನು, ಯಾರು ತಾಯಿಯು ? ಈ ಸಂಬಂಧವು ಒಂದೂ ಇಲ್ಲವು. ಎಲ್ಲವೂ ಬ್ರಹ್ಮವೇ ಆಗಿರುವುದು. ಸಂಶಯವೇ ಇರುವುದಿಲ್ಲ.

ಅಹಮೇವ ಪರಂ ಬ್ರಹ್ಮ ಮತ್ತೋ ಬ್ರಹ್ಮ ಪರಂ ನ ಹಿ ।
ಸರ್ವಂ ಯದ್ದೃಶ್ಯತೇ ಚೇದಂ ಮಾಯೇಯಂ ತವ ರಾಘವ ॥ ೯೬ ॥

ನಶ್ವರಂ ಬುದ್ಬುದಾಕಾರಂ ಜ್ಞಾತಂ ಚೇದಂ ಮಯಾ ಪ್ರಭೋ ।
ಇತಿ ತಸ್ಯಾಃ ವಚಃ ಶ್ರುತ್ವಾ ಪ್ರಾಹ ತಾಂ ಸಸ್ಮಿತಃ ಪ್ರಭುಃ ॥ ೯೭ ॥

ಸಮ್ಯಗ್ವಿಚಾರಿತಂ ಬುದ್ಧ್ಯಾ ತ್ವಯಾವೀವಾಕ್ಯಮುತ್ತಮಂ ।
ಗಚ್ಛೇದಾನೀಂ ಸುಖಂ ತಿಷ್ಠ ಜೀವನ್ಮುಕ್ತಾಸಿ ಕೈಕಯಿ ॥ ೯೮ ॥

ತದ್ರಾಮವಚನಂ ಶ್ರುತ್ವಾ ಕೈಕೇಯೀ ತೋಷಪೂರಿತಾ ।
ದೇಹಾಭಿಮಾನಹೀನಾ ಸಾ ನತ್ವಾ ಸೀತಾಂ ರಘೂತ್ತಮಂ ॥ ೯೯ ॥

ಯಯೌ ಭರತಗೇಹಂ ಹಿ ನಾ ಸಕ್ತಾ ಕ್ವಾಪಿ ಸಾತ್ಮಭೂತ್ ।
ಏವಂ ಶಿಷ್ಯ ಮಯಾ ಪ್ರೋಕ್ತಮಾವೀವಾಕ್ಯೋಪದೇಶತಃ ॥ ೧೦೦ ॥

---

೯೬. ನಾನೇನೇ ಪರಬ್ರಹ್ಮವು. ನನಗಿಂತಲೂ ಬೇರೆ ಬ್ರಹ್ಮವೇ ಇರುವುದಿಲ್ಲ. ಎಲೈ ರಾಘವನೆ! ಇಲ್ಲಿ ನಮಗೆ ಕಣ್ಣಿಗೆ ಕಾಣುವುದೆಲ್ಲವೂ ನಿನ್ನ ಮಾಯೆಯೇ ಆಗಿರುವುದು.

೯೭. ಈ ಪ್ರಪಂಚವು ನೀರಿನ ಮೇಲಿನ ಗುಳ್ಳೆಯಂತೆ ನಶ್ವರವಾದುದು. ಇದನ್ನು ನಾನು ಚೆನ್ನಾಗಿ ತಿಳಿದುಕೊಂಡಿರುವೆನು. ಆ ಕೈಕೇಯಿಯು ಹೀಗೆಂದು ಹೇಳಿದುದನ್ನು ಕೇಳಿ ಶ್ರೀರಾಮನು ನಗುತ್ತ ಇಂತೆಂದನು.

೯೮. ಎಲೈ ಕೈಕೇಯಿಯೇ! ನೀನು ಆ ಆಡುಗಳ ಮಾತನ್ನು ಚೆನ್ನಾಗಿ ವಿಮರ್ಶಿಸಿ ತಿಳಿದುಕೊಂಡಿದ್ದೀಯೆ, ನೀನು ಹೋಗು ಸುಖವಾಗಿರು. ಜೀವನ್ಮುಕ್ತಳಾಗಿಯೇ ಇದ್ದೀಯೆ.

೯೯. ರಾಮನು ಹೀಗೆ ಹೇಳಿದುದನ್ನು ಕೇಳಿ ಕೈಕೇಯಿಯು ಸಂತೋಷಗೊಂಡಳು. ದೇಹಾಭಿಮಾನವನ್ನು ಬಿಟ್ಟಿರುವ ಆಕೆಯು ರಾಮನಿಗೂ ಸೀತೆಗೂ ನಮಸ್ಕರಿಸಿದಳು.

೧೦೦-೧೦೧. ಅನಂತರ ಭರತನ ಮನೆಗೆ ಹೋದಳು. ಅಲ್ಲಿ ಯಾವುದರಲ್ಲಿಯೂ ಆಸಕ್ತಿಯನ್ನು ಹೊಂದಿ ಇರಲೇ ಇಲ್ಲ. ಎಲೈ ಶಿಷ್ಯನೇ! ಆ ಆಡಿನ

ಯಥಾ ಜ್ಞಾನಂ ಹಿ ಕೈಕೇಯ್ಯೈ ಜಾತಂ ತತ್ಕಥಿತಂ ತವ ।
ಇದಾನೀಂ ಶ್ರುಣು ಯಚ್ಚಾನ್ಯತ್ತೇ ವದಾಮಿ ಕುತೂಹಲಂ ॥ ೧೦೧ ॥

ಸುಮಿತ್ರಾ ತ್ವೇಕದಾ ರಾಮಂ ಸೀತಯಾ ರಹಸಿ ಸ್ಥಿತಂ।
ನಿರೀಕ್ಷ್ಯ ನತ್ವಾ ತಂ ಪ್ರಾಹ ರಾಮ ರಾಜೀವಲೋಚನ ॥ ೧೦೨ ॥

ಕಿಂಚಿತ್ತೇ ಪ್ರಾರ್ಥಯಾಮ್ಯದ್ಯ ಕಿಂಚಿದುಪದಿಶಸ್ವ ಮಾಂ ।
ತತ್ತಸ್ಯಾ ವಚನಂ ಶ್ರುತ್ವಾ ತಾಮಾಹ ರಘುನಂದನಃ ॥ ೧೦೩ ॥

ಕಾ ತ್ವಂ ಚೇತಿ ವದಾದೌ ಮಾಂ ಪಶ್ಚಾದುಪದಿಶಾಮಿ ತೇ ।
ಗಚ್ಛ ಗೇಹಂ ಸ್ವಬುದ್ಧ್ಯಾ ಚ ಹೃದಿ ಸಮ್ಯಗ್ವಿಚಾರ್ಯ ಚ ॥ ೧೦೪ ॥

ಶ್ವೋ ಮಾನೇತ್ಯ ಮಮ ಪ್ರಶ್ನಸ್ಯೋತ್ತರಂ ದೇಹಿ ವೈ ತತಃ ।
ಅಹಮುಪದಿಶಾಮ್ಯಂಬ ತೇನ ತುಷ್ಟಾ ಭವಿಷ್ಯಸಿ ॥ ೧೦೫ ॥

ಮಾತಿನಿಂದ ಕೈಕೇಯಿಗೆ ಉಪದೇಶವಾಗಿ ಅವಳು ಜ್ಞಾನವನ್ನು ಹೊಂದಿದುದನ್ನು ಹೇಳಿದೆನು. ಇನ್ನು ಮತ್ತೊಂದು ವಿಷಯವನ್ನು ಹೇಳುತ್ತೇನೆ ಕೇಳು, ಅದು ಬಹು ಕುತೂಹಲವನ್ನುಂಟುಮಾಡುವುದಾಗಿರುವುದು.

೧೦೨. ರಾಮನು ಒಂದು ಬಾರಿ ಸೀತೆಯೊಡನೆ ಏಕಾಂತದಲ್ಲಿ ಕುಳಿತಿರಲು ಸುಮಿತ್ರೆಯು ಹೋಗಿ ಆತನನ್ನು ನೋಡಿದಳು. ಆಗ ಆಕೆಯು ಆ ರಾಮನಿಗೆ ನಮಸ್ಕರಿಸಿ ಇಂತೆಂದಳು.

೧೦೩. ರಾಜೀವಲೋಚನನಾದ ರಾಮನೇ ! ನನಗೇನಾದರೂ ಉಪದೇಶ ವಾಕ್ಯಗಳನ್ನು ಹೇಳು. ನಿನ್ನಲ್ಲಿ ಕೇಳಿಕೊಳ್ಳುತ್ತೇನೆ. ಆಕೆಯು ಇಂತೆಂದುದನ್ನು ಕೇಳಿ ಆಕೆಯನ್ನು ಕುರಿತು ಆ ರಾಮನು ಇಂತೆಂದನು.

೧೦೪. ಎಲೈ ಸುಮಿತ್ರೆಯೇ! ನೀನಾರು ಎಂಬುದನ್ನು ಮೊದಲು ಯೋಚಿಸಿ ನನಗೆ ಹೇಳು. ಅನಂತರ ನಾನು ನಿನಗೆ ಉಪದೇಶ ಮಾಡುತ್ತೇನೆ. ನೀನು ಈಗ ಹೇಳದಿದ್ದರೆ ಬೇಡ. ನಿನ್ನ ಮನೆಗೆ ಹೋಗು. ಅಲ್ಲಿ ಮನಸ್ಸಿನಲ್ಲಿ ಚೆನ್ನಾಗಿ ವಿಮರ್ಶಿಸಿ ನೋಡು.

೧೦೫. ನಾಳೆ ನನ್ನ ಬಳಿಗೆ ಬಂದು ಈಗ ನಾನು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಹೇಳು. ಅನಂತರ ನಾನು ನಿನಗೆ ಉಪದೇಶಮಾಡುತ್ತೇನೆ. ಅದರಿಂದ ನಿನಗೆ ತೃಪ್ತಿಯಾಗುತ್ತದೆ.

ತದ್ರಾಮವಚನಂ ಶ್ರುತ್ವಾ ಸುಮಿತ್ರಾ ವಿಸ್ಮಿತಾನನಾ ।
ತೂಷ್ಣೀಮೇವ ಯಯೌ ಗೇಹಂ ರಾಮವಾಕ್ಯಂ ವ್ಯಚಿಂತಯತ್ ॥ ೧೦೬ ॥
ಕಾಹಂ ಪೃಷ್ಟಾ ರಾಘವೇಣ ಕಿಂ ವಾ ದೇಯಂ ಮಯೋತ್ತರಂ ।
ಕಾಹಂ ದೇವೀ ಚಾಸುರೀ ವಾ ದಾನವೀ ರಾಕ್ಷಸೀ ತಥಾ ॥ ೧೦೭ ॥
ಮಾನುಷೀ ಚೇತ್ಯಹಂ ಮತ್ವಾ ಯದಿ ರಾಮಂ ವದಾಮಿ ವೈ ।
ತರ್ಹಿ ನಾನಾಶರೀರಾಣಿ ಧ್ರಿಯಂತೇ ನಟವನ್ಮಯಾ ॥ ೧೦೮ ॥
ತದಾ ಕ್ವೇದಂ ಮಾನುಷೀತ್ವಮನ್ಯಜಾತ್ಯಾಂ ಘಟೇಚ್ಚ ಮೇ ।
ತರ್ಹ್ಯಹಂ ಮಾನುಷೀ ನೈವಾ ನಚೈವಾನ್ಯಾ ಕದಾಚನ ॥ ೧೦೯ ॥
ಮಾನುಷೀ ರಾಕ್ಷಸೀ ಚೇತೀಮಾನಿ ನಾಮಾನಿ ತಾನಿ ಹಿ ।
ದೇಹಸ್ಯೈವಾತ್ರ ಕಥ್ಯಂತೇ ದೇಹಸ್ತು ನಶ್ವರಃ ಸ್ಮೃತಃ ॥ ೧೧೦ ॥

---

೧೦೬. ರಾಮನು ಹೀಗೆ ಹೇಳಿದುದನ್ನು ಕೇಳಿ ಸುಮಿತ್ರೆಯು ನಕ್ಕಳು. ಅನಂತರ ಮನೆಗೆ ಸುಮ್ಮನೆ ಹೊರಟುಹೋಗಿ ರಾಮನು ಹೇಳಿದ ಮಾತನ್ನು ಮನಸ್ಸಿನಲ್ಲಿಯೇ ವಿಮರ್ಶಿಸಿದಳು.

೧೦೭. ರಾಮನಿಂದ ಕೇಳಲ್ಪಟ್ಟ ನಾನಾರು ? ಅವನಿಗೆ ನಾನೇನೆಂದು ಉತ್ತರವನ್ನು ಕೊಡಲಿ ? ನಾನು ದೇವತಾ ಸ್ತ್ರೀಯೇ ? ರಾಕ್ಷಸಿಯೇ ? ಅಸುರ ಸ್ತ್ರೀಯೇ ? ಅಥವಾ ದಾನವ ಸ್ತ್ರೀಯೇ ?

೧೦೮-೧೦೯. ನಾನು ಮನುಷ್ಯ ಸ್ತ್ರೀಯೆಂದು ರಾಮನಿಗೆ ಉತ್ತರವನ್ನು ಹೇಳಿದರೆ ನಾನು ನಟರಂತೆ ನಾನಾ ಶರೀರವನ್ನು ಧರಿಸುತ್ತಿರುವೆನಲ್ಲ ! ಆಗ ಈ ಮನುಷ್ಯಜನ್ಮವೇ ಎಲ್ಲಿಂದ ಬಂದೀತು ? ಬೇರೆಯ ಜಾತಿಯಲ್ಲಿ ಹುಟ್ಟಿರು ವುದರಿಂದ ಆ ಮನುಷ್ಯ ಜನ್ಮವೇ ಎಲ್ಲಿಂದ ಬಂದೀತು ? ಬೇರೆಯ ಜಾತಿಯಲ್ಲಿ ಹುಟ್ಟುವುದರಿಂದ ಆ ಮನುಷ್ಯ ಜನ್ಮವು ಇರುವುದಿಲ್ಲ. ಆದ್ದರಿಂದ ನಾನು ಮನುಷ್ಯ ಸ್ತ್ರೀಯಲ್ಲ. ಬೇರೆಯವಳೂ ಅಲ್ಲ.

೧೧೦. ಆದ್ದರಿಂದ ಮಾನುಷೀ, ರಾಕ್ಷಸೀ ಎಂಬ ಹೆಸರುಗಳು ದೇಹ ಕ್ಕೇನೇ ಹೇಳಲ್ಪಡುತ್ತವೆ. ಆದರೆ ಈ ದೇಹವಾದರೋ ನಶ್ವರವಾದುದು ಎಂದು ತಿಳಿಯಬೇಕು.

ದೇಹಾದ್ಭಿನ್ನಾಸ್ಮಿ ಕಾಪ್ಯನ್ಯಾ ಯಾಹಂ ರೂಪಾಣ್ಯನೇಕಶಃ ।
ಧರಾಮಿ ಸರ್ವದಾ ಭೂಮ್ಯಾಂ ಸಾ ಕಾಹಂ ಚೇತಿ ವೇದ್ಮಿ ನ ॥ ೧೧೧ ॥

ಇದಾನೀಂ ತು ಮಯಾ ಜ್ಞಾತಂ ಯಥಾ ವಿಷ್ಣುಸ್ತಥಾಪ್ಯಹಂ ।
ನಾನಾರೂಪಾಣಿ ಸೋಽಪ್ಯತ್ರ ಮತ್ಸ್ಯಾದೀನಿ ದಧಾತಿ ಹಿ ॥ ೧೧೨ ॥

ತಥಾ ನಾನಾಸ್ವರೂಪಾಣಿ ಧಾರ್ಯಂತೇಽತ್ರಾಪಿ ವೈ ಮಯಾ ।
ಏವಮೇವ ಹಿ ವಕ್ತವ್ಯಂ ತರ್ಹಿ ಮೇ ತಸ್ಯ ಚೋತ್ತರಂ ॥ ೧೧೩ ॥

ಸ್ವವಶೋಽಸ್ತಿ ಮಹಾವಿಷ್ಣುಸ್ತ್ವಹಂ ವಿಷ್ಣುವಶಾ ಸದಾ ।
ಅತೋ ವಿಷ್ಣೋಃ ಕಲಾ ಚಾಹಂ ಸತ್ಯಮೇವ ನ ಸಂಶಯಃ ॥ ೧೧೪ ॥

ವಿಷ್ಣೋರ್ಮೇ ನೈವ ಭೇದೋಽಸ್ತಿ ಯಥಾ ಗಂಗಾಸ್ಥಲೇ ಘಟೇ ।
ಏಕೈವಾಸ್ತ್ಯತ್ರ ತದ್ವಚ್ಚ ವಿಷ್ಣುರೇವಾಹಮಸ್ಮಿ ಹಿ ॥ ೧೧೫ ॥

---

೧೧೧. ಆದ್ದರಿಂದ ಅನೇಕ ರೀತಿಯಲ್ಲಿ ದೇಹವನ್ನು ಧರಿಸುವ ಈ ದೇಹಗಳಿಗಿಂತ ಬೇರೆಯಾಗಿರುವ ನಾನಾರು? ಯಾವಾಗಲೂ ಆ ರೀತಿಯಾಗಿ ದೇಹವನ್ನು ಧರಿಸಿರುವ ನಾನಾರೆಂಬುದು ನನಗೆ ತಿಳಿಯಲಿಲ್ಲವಲ್ಲ !

೧೧೨. ಓಹೋ! ಈಗ ನನಗೆ ತಿಳಿಯಿತು. ವಿಷ್ಣುವು ಹೇಗಿರುವನೋ ನಾನೂ ಹಾಗೆಯೇ ಇರುವೆನು. ಆ ವಿಷ್ಣುವೂ ಕೂಡ ಮತ್ಸ್ಯಾವತಾರವೇ ಮುಂತಾದ ಅನೇಕ ಅವತಾರಗಳನ್ನು ಹೊಂದುತ್ತಿರುವನು.

೧೧೩. ಅದೇ ರೀತಿಯಾಗಿ ನಾನೂ ಕೂಡ ಅನೇಕ ರೂಪಗಳನ್ನು ಧರಿಸುತ್ತಿರುವೆನು. ಇದೇ ರೀತಿಯಾಗಿ ಆ ರಾಮನಿಗೆ ನಾನು ಉತ್ತರವನ್ನು ಹೇಳಬೇಕು.

೧೧೪. ಮಹಾವಿಷ್ಣುವು ನನಗೆ ವಶವಾಗಿರುವನು. ನಾನು ವಿಷ್ಣುವಿಗೆ ವಶಳಾಗಿರುವೆನು. ಆದ್ದರಿಂದ ನಾನು ವಿಷ್ಣುವಿನ ಕಲೆಯೇ ಆಗಿರುವೆನು. ಸಂಶಯವಿಲ್ಲ.

೧೧೫. ಗಂಗೆಯು ನೀರು ನೆಲದ ಮೇಲಿದ್ದರೂ, ಬಿಂದಿಗೆಯಲ್ಲಿದ್ದರೂ ಅದು ಒಂದೇ ಆಗಿರುವಂತೆ ವಿಷ್ಣುವಿಗೂ ನನಗೂ ಭೇದವಿಲ್ಲದೆ ಒಂದೇ ಆಗಿರುವೆನು. ಆದ್ದರಿಂದ ನಾನು ವಿಷ್ಣುವೇ ಆಗಿರುವೆನು. ಸಂಶಯವಿಲ್ಲ.

ಅಹಮೇವ ಯದಾ ವಿಷ್ಣುಸ್ತದಾ ಕಿಂ ಚಾವಶೇಷಿತಂ ।
ಯತ್ಪೃಷ್ಟವ್ಯಂ ತು ರಾಮಾಯ ಜೀವನ್ಮುಕ್ತಾಹಮಸ್ಮಿ ವೈ ॥ ೧೧೬ ॥

ಏವಂ ಸುಮಿತ್ರಾ ಸಂಚಿಂತ್ಯ ಗತಾಜ್ಞಾನಾ ಮುದಾನ್ವಿತಾ ।
ಅತಿಕ್ರಮ್ಯ ನಿಶಾಂತಿ ತಾಂ ಸಾ ಪ್ರಭಾತೇ ರಾಘವಂ ಯಯೌ ॥ ೧೧೭ ॥

ನತ್ವಾ ರಾಮಂ ತದಾ ಪ್ರಾಹ ಮಯಾ ರಾತ್ರೌ ವಿಚಿಂತಿತಂ ।
ಕಾ ತ್ವಂ ಪೃಷ್ಟಾತ್ವಯಾ ಪೂರ್ವಂ ತರ್ಹ್ಯಹಂ ಬ್ರಹ್ಮ ರಾಘವ ॥ ೧೧೮ ॥

ತ್ವತ್ತೋ ನಾನ್ಯಚ್ಚ ಪ್ರಷ್ಟವ್ಯಂ ತ್ವದ್ಭಿನ್ನಾಹಂ ಕದಾಪಿ ನ ।
ಇತ್ಯುಕ್ತ್ವಾ ಸಾ ಯಥಾ ಗೇಹೇ ನಿಶಿ ಸ್ವೇ ಹೃದಿ ಮಂತ್ರಿತಂ ॥ ೧೧೯ ॥

ತತ್ಸರ್ವಂ ಶ್ರಾವಯಿತ್ವಾ ತಂ ಜೀವನ್ಮುಕ್ತಾಭವತ್ತದಾ ।
ಸುಮಿತ್ರಾಂ ರಾಘವೋಪ್ಯಾಹ ಸಮ್ಯಕ್ ಬುಧ್ಯಾ ವಿಚಿಂತಿತಂ ॥ ೧೨೦ ॥

---

೧೧೬. ನಾನೇ ಯಾವಾಗ ವಿಷ್ಣುವಾದೆನೋ ಆಗ ಮತ್ತೇನು ಉಳಿದಿರುವುದು? ಇನ್ನು ಮೇಲೆ ರಾಮನನ್ನು ಕೇಳತಕ್ಕದ್ದೇನಿರುವುದು? ನಾನು ಜೀವನ್ಮುಕ್ತಳಾಗಿಯೇ ಇರುವೆನು.

೧೧೭. ಈ ರೀತಿಯಾಗಿ ಸುಮಿತ್ರೆಯು ಯೋಚಿಸಿಕೊಂಡು ಅಜ್ಞಾನವನ್ನು ಕಳೆದುಕೊಂಡು ಸಂತೋಷಿಸಿದಳು. ಹೀಗೆಯೇ ನಿಶ್ಚಯಿಸಿಕೊಂಡು ಆ ದಿನದ ರಾತ್ರಿಯು ಕಳೆದ ಮೇಲೆ ಶ್ರೀರಾಮನ ಬಳಿಗೆ ಹೋದಳು.

೧೧೮. ಆ ರಾಮನಿಗೆ ನಮಸ್ಕರಿಸಿ ಅವನನ್ನು ಕುರಿತು ಇಂತೆಂದಳು. ಎಲೈ ರಾಮನೇ! ನಾನು ರಾತ್ರಿಯಲ್ಲಿ ಯೋಚಿಸಿದೆನು. ನೀನು ಯಾರೆಂದು ಕೇಳಿದೆಯಷ್ಟೆ. ಆ ನಾನು ಬ್ರಹ್ಮನಾಗಿರುವೆನು.

೧೧೯-೧೨೦. ನಿನ್ನಿಂದ ಕೇಳಬೇಕಾದುದೇ ಉಳಿದಿಲ್ಲ. ನಿನಗಿಂತಲೂ ನಾನು ಬೇರೆಯಾದವಳೇ ಅಲ್ಲ. ಹೀಗೆಂದು ಹೇಳಿ ತಾನು ರಾತ್ರಿಯಲ್ಲೆಲ್ಲಾ ತನ್ನ ಮನೆಯಲ್ಲಿ ಹೇಗೆ ಯೋಚಿಸಿದಳೋ ಅದೆಲ್ಲವನ್ನೂ ಹೇಳಿದಳು. ಮತ್ತು ಆಕೆಯು ಜೀವನ್ಮುಕ್ತಳಾದಳು. ರಾಮನೂ ಕೂಡ ಎಲೈ ಸುಮಿತ್ರೆಯೇ! ನೀನು ಚೆನ್ನಾಗಿ ವಿಮರ್ಶೆಮಾಡಿ ನೋಡಿದ್ದೀಯೆ.

ಜೀವನ್ಮುಕ್ತಾ ಹಿ ಚಾಂಬ ತ್ವಂ ಗಚ್ಛ ಗೇಹಂ ಸುಖಂ ವಸ ।
ತತಸ್ಸುಮಿತ್ರಾ ಸಂತುಷ್ಟಾ ಗತಮೋಹಾ ರಘೂತ್ತಮಂ ॥ ೧೨೧ ॥

ಸೀತಾಂ ಚಾಪಿ ಪೃಥಕ್ ನತ್ವಾ ಯಯೌ ಲಕ್ಷ್ಮಣಮಂದಿರಂ !
ಏವಂ ಶಿಷ್ಯ ಮಯಾ ಪ್ರೋಕ್ತಂ ಕೋಹಂ ಚೇತಿ ವಿಚಾರತಃ ॥ ೧೨೨ ॥

ಜೀವನ್ಮುಕ್ತಾ ಸುಮಿತ್ರಾ ಸಾ ಬಭೂವ ಸುಖನಿರ್ಭರಾ ।
ಅನ್ಯಚ್ಚ ತೇ ವದಾಮ್ಯದ್ಯ ತಚ್ಛೃಣುಷ್ವ ದ್ವಿಜೋತ್ತಮ ॥ ೧೨೩ ॥

ಏಕದಾ ರಾಘವಂ ದೃಷ್ಟ್ವಾ ಕೌಸಲ್ಯಾ ಜನನೀ ರಹಃ ।
ಆಸನೇ ಚಿತ್ರಶಾಲಾಯಾಂ ಸೀತಯಾ ಸಹ ಸಂಸ್ಥಿತಂ ॥ ೧೨೪ ॥

ಪಪ್ರಚ್ಛ ನತ್ವಾ ಶ್ರೀರಾಮಂ ಜ್ಞಾತ್ವಾ ವಿಷ್ಣುಂ ಪರಾತ್ಪರಂ ।
ರಾಮ ರಾಮ ಮಹಾಬಾಹೋ ಕಿಂಚಿದುಪದಿಶಸ್ವ ಮಾಂ ॥ ೧೨೫ ॥

೧೨೧-೧೨೨. ಎಲೈ ತಾಯಿಯೇ! ನೀನು ಜೀವನ್ಮುಕ್ತಳಾಗಿದ್ದೀಯೆ. ಮನೆಗೆ ಹೋಗು ಸುಖವಾಗಿರು ಎಂದನು. ಅನಂತರ ಸುಮಿತ್ರೆಯು ದೇಹಾಭಿಮಾನವನ್ನು ಬಿಟ್ಟು ಸಂತುಷ್ಟಳಾಗಿ ರಾಮನನ್ನೂ ಸೀತೆಯನ್ನೂ ಬೇರೆ ಬೇರೆಯಾಗಿ ನಮಸ್ಕರಿಸಿ ಲಕ್ಷ್ಮಣನ ಮನೆಗೆ ಹೊರಟುಹೋದಳು. ಎಲೈ ಶಿಷ್ಯನೇ ! ಇದನ್ನು ನಾನು ನಿನಗೆ ಹೇಳಿದ್ದೇನೆ.

೧೨೩. ನಾನು ಯಾರು ಎಂಬ ವಿಚಾರದಿಂದ ಸುಮಿತ್ರೆಯು ಜೀವನ್ಮುಕ್ತಳಾದಳು. ಬಹುವಾಗಿ ಸುಖದಿಂದಿದ್ದಳು. ಎಲೈ ದ್ವಿಜೋತ್ತಮನೇ! ಮತ್ತೊಂದು ವಿಷಯವನ್ನು ಹೇಳುತ್ತೇನೆ. ಅದನ್ನು ಕೇಳು.

೧೨೪-೧೨೫. ಒಂದು ಸಾರಿ ಶ್ರೀರಾಮನೂ ಸೀತೆಯೂ ಚಿತ್ರಶಾಲೆಯಲ್ಲಿ ಕುಳಿತಿರುವಾಗ ತಾಯಿಯಾದ ಕೌಸಲ್ಯೆಯು ರಾಮನನ್ನು ನೋಡಲು ಹೋಗಿ ಅವನನ್ನು ಸಾಕ್ಷಾದ್ವಿಷ್ಣುವೆಂದು ತಿಳಿದು ನಮಸ್ಕರಿಸಿ ಎಲೈ ಮಹಾಬಾಹುವಾದ ರಾಮನೇ! ನನಗೆ ಸ್ವಲ್ಪ ಉಪದೇಶವನ್ನು ಮಾಡು ಎಂದು ಕೇಳಿದಳು. ನಿನ್ನ ವಿಷಯವಾದ ಉತ್ತಮ ಜ್ಞಾನವು ನನಗೆ ಉಂಟಾಗಬೇಕು.

ಯೇನ ಮೇ ತವ ಸುಜ್ಞಾನಂ ಭವಿಷ್ಯತಿ ಮಹಚ್ಛುಭಂ ।
ತನ್ಮಾತೃವಚನಂ ಶ್ರುತ್ವಾ ತಾಂ ವಿಹಸ್ಯಾಹ ರಾಘವಃ ॥ ೧೨೬ ॥

ಶ್ವಃ ಪ್ರಭಾತೇ ಸಮುತ್ಥಾಯ ಗತ್ವಾ ಗೋಷ್ಠಂ ಕಿಯತ್ ಕ್ಷಣಂ ।
ಶ್ರುತ್ವಾ ಗೋವತ್ಸವಾಕ್ಯಾನಿ ಸಮ್ಯಕ್ತ್ವಾನಿ ವಿಚಿಂತ್ಯ ಚ ।
ಮಮಾಂತಿಕಂ ತತೋ ಯಾಹಿ ತ್ವಮಂಬ ವಚನಾನ್ಮಮ ॥ ೧೨೭ ॥

ಉಪದೇಶಂ ಕರಿಷ್ಯಾಮಿ ತತೋಽಹಂ ತ್ವಾಂ ನ ಸಂಶಯಃ ।
ತದ್ರಾಮವಚನಂ ಶ್ರುತ್ವಾ ಕೌಸಲ್ಯಾ ವಿಸ್ಮಿತಾ ತದಾ ॥ ೧೨೮ ॥

ನತ್ವಾ ರಾಮಂ ಸಸೀತಂ ಚ ತೂಷ್ಣೀಮೇವ ಗೃಹಂ ಯಯೌ ।
ತತೋ ನಿಶಾಮತಿಕ್ರಮ್ಯ ಕೌಸಲ್ಯಾ ಸಾರುಣೋದಯೇ ॥ ೧೨೯ ॥

ಗೋಷ್ಠಂ ಗತ್ವಾ ಕ್ಷಣಂ ಸ್ಥಿತ್ವಾ ಧೇನುವತ್ಸವಚಾಂಸಿ ಸಾ ।
ಅಹಂ ಮಾ ತ್ವಿತಿ ಶುಶ್ರಾವ ಸುಶ್ರಾಂತಾ ವೈ ಮುಹುರ್ಮುಹುಃ ॥ ೧೩೦ ॥

೧೨೬-೧೨೭. ತಾಯಿಯು ಹೀಗೆಂದುದನ್ನು ಕೇಳಿ ರಾಮನು ನಕ್ಕು ಅಮ್ಮ! ನಾಳೆಯ ಬೆಳಗ್ಗೆ ಎದ್ದು ದನಗಳ ಕೊಟ್ಟಿಗೆಗೆ ಹೋಗಿ ಅಲ್ಲಿ ಒಂದು ಕ್ಷಣ ಕಾಲವಿರು, ಅಲ್ಲಿರುವ ದನಗಳ ಕರುಗಳು ಆಡುವ ಮಾತುಗಳನ್ನು ಕೇಳಿ ಅವುಗಳನ್ನು ವಿಮರ್ಶಿಸಿ ಯೋಚಿಸು. ಅನಂತರ ನನ್ನ ಬಳಿಗೆ ಬಾ.

೧೨೮. ಅನಂತರ ನಿನಗೆ ಬೇಕಾದುದನ್ನು ಉಪದೇಶಮಾಡುತ್ತೇನೆ. ಸಂಶಯವಿಲ್ಲ. ಸಂಶಯಪಡಬೇಡ. ಎನ್ನಲು ರಾಮನ ಆ ಮಾತನ್ನು ಕೇಳಿ ಕೌಸಲ್ಯೆಯು ನಕ್ಕಳು.

೧೨೯. ಅನಂತರ ಆ ರಾಮನಿಗೂ ಸೀತೆಗೂ ನಮಸ್ಕರಿಸಿ ಸುಮ್ಮನೆ ಮನೆಗೆ ಹೊರಟುಹೋದಳು. ರಾತ್ರಿಯೆಲ್ಲವೂ ಕಳೆಯಿತು. ಅರುಣೋದಯವಾಯಿತು. ಕೌಸಲ್ಯೆಯು ಎದ್ದು ದನಗಳ ಕೊಟ್ಟಿಗೆಗೆ ಹೋದಳು.

೧೩೦. ಅಲ್ಲಿ ಕ್ಷಣಕಾಲವಿದ್ದಳು. ಆಗ ಹಸುವಿನ ಕರುಗಳು ಕೂಗಿಕೊಳ್ಳುತ್ತಿದ್ದುವು. ಅದನ್ನು ಕೇಳಿದಳು. ಅವು ಅಹಂಮಾ, ಅಹಂಮಾ ಎಂಬುದಾಗಿ ಆಗಿಂದಾಗ್ಗೆ ಕೂಗುತ್ತಿದ್ದುವು.

ತಾನಿ ವಾಕ್ಯಾನಿ ವತ್ಸಾನಾಂ ಶ್ರುತ್ವಾ ಚಿತ್ತೇ ವಿಚಾರಯತ್ |
ಅಹಂ ಮಾಂ ತ್ವಿತಿ ವತ್ಸಾಶ್ಚ ಕಿಂ ವದಂತಿ ಮುಹುರ್ಮುಹುಃ || ೧೩೧ ||

ಇಮಾನಿ ಕಿಂ ಬೋಧಯಂತಿ ಮಾಂ ವತ್ಸಾಶ್ಚ ಮುಹುರ್ಮುಹುಃ |
ಇತ್ಯುಕ್ತ್ವಾ ಸಾ ಕ್ಷಣಂ ಧ್ಯಾತ್ವಾ ಹೃದಿ ಸಮ್ಯಗ್ವಿಚಾರ್ಯ ಚ || ೧೩೨ ||

ವತ್ಸವಾಕ್ಯೈಶ್ಚ ಕೌಸಲ್ಯಾ ಗತಾಜ್ಞಾನಾಭವತ್ ಕ್ಷಣಾತ್ |
ತತಸ್ತುಷ್ಟಾ ಯಯೌ ರಾಮಂ ನತ್ವಾ ತಂ ಪ್ರಾಹ ಹರ್ಷಿತಾ || ೧೩೩ ||

ರಾಮ ವಿಷ್ಣೋ ರಮಾನಾಥ ವತ್ಸವಾಕ್ಯೈಸ್ಸುಬೋಧಿತಾ |
ತ್ವಯೈವಾಹಂ ರಾಮಚಂದ್ರ ಗತಾಜ್ಞಾನಾಸ್ಮಿ ರಾಘವ || ೧೩೪ ||

ತವೋಪದೇಶವಾಂಛಾ ಮೇ ನ ಕಿಂಚಿದಸ್ತ್ಯತಃ ಪರಂ |
ಲಬ್ಧಂ ಜ್ಞಾನಂ ಮಯಾ ರಾಮ ತ್ವತ್ತೋಽಭಿನ್ನಾ ಕದಾಸ್ಮಿ ನ || ೧೩೫ ||

---

೧೩೧. ಕರುಗಳ ಆ ಮಾತನ್ನು ಈ ಕೌಸಲ್ಯೆಯು ಕೇಳಿ ಮನಸ್ಸಿನಲ್ಲಿ ವಿಮರ್ಶಿಸಿದಳು. ಈ ಕರುಗಳು ಅಹಂಮಾ, ಆಹಂಮಾ ಎಂದು ಬಾರಿ ಬಾರಿಗೂ ಕೂಗುತ್ತಿವೆಯಲ್ಲ! ಇವು ಏನೆಂದು ಹೇಳುವುವು?

೧೩೨. ಈ ಕರುಗಳು ನನಗೆ ಬಾರಿಬಾರಿಗೂ ಏನನ್ನು ಬೋಧಿಸುತ್ತಲಿರುತ್ತವೆ? ಹೀಗೆಂದು ಹೇಳಿ ಕ್ಷಣಕಾಲ ಧ್ಯಾನಿಸಿ ಹೃದಯದಲ್ಲಿ ಚೆನ್ನಾಗಿ ವಿಮರ್ಶಿಸಿದಳು.

೧೩೩. ಆ ಕರುಗಳ ಮಾತನ್ನು ಕೇಳಿ ಮನಸ್ಸಿನಲ್ಲಿ ಆ ಕೌಸಲ್ಯೆಗೆ ಅಜ್ಞಾನವು ಹೋಯಿತು. ಇದರಿಂದ ಸಂತೋಷಗೊಂಡು ರಾಮನ ಬಳಿಗೆ ಹೋಗಿ ಅವನಿಗೆ ನಮಸ್ಕರಿಸಿ ಹರ್ಷದಿಂದ ಇಂತೆಂದಳು.

೧೩೪. ಎಲೈ ರಾಮನೇ! ವಿಷ್ಣುವೇ! ರಮಾನಾಥನೇ! ಆ ಕರುಗಳ ಮಾತಿನಿಂದ ನನಗೆ ಒಳ್ಳೆಯ ಜ್ಞಾನವು ಬಂದಿತು. ಎಲೈ ರಾಮಚಂದ್ರನೇ! ನಿನ್ನಿಂದಲೇ ನನ್ನ ಅಜ್ಞಾನವು ಹೋಯಿತು.

೧೩೫ ನನಗೆ ಬೇರೆಯಾಗಿ ಉಪದೇಶವನ್ನು ತೆಗೆದುಕೊಳ್ಳುವ ಆಪೇಕ್ಷೆಯಿರುವುದಿಲ್ಲ ಎಲೈ ರಾಮನೇ! ನನಗೆ ಜ್ಞಾನೋದಯವಾಯಿತು. ನಾನು ನಿನಗಿಂತಲೂ ಬೇರೆಯಾದವಳಲ್ಲ ನನಗಿಂತಲೂ ಬೇರೆಯಾದುದು ಯಾವುದೂ ಇಲ್ಲವೆಂದು ಗೊತ್ತಾಯಿತು. ಎಂದಳು.

ತನ್ಮಾತೃವಚನಂ ಶ್ರುತ್ವಾ ಕೌಸಲ್ಯಾಂ ರಾಘವೋಽಬ್ರವೀತ್ ।
ವತ್ಸವಾಕ್ಯೈಃ ಕಥಂ ಲಬ್ಧಂ ತ್ವಯಾ ಜ್ಞಾನಂ ವದಸ್ವ ಮಾಂ ॥ ೧೩೬ ॥

ತದ್ರಾಮವಚನಂ ಶ್ರುತ್ವಾ ಕೌಸಲ್ಯಾ ಸ್ಪ್ರಾಹ ರಾಘವಂ ।
ಅಹಂ ಮಾ ತ್ವಿತಿ ವಾಕ್ಯಾನಿ ತೇಷಾಂ ಶ್ರುತ್ವಾ ರಘೂತ್ತಮ ॥ ೧೩೭ ॥

ಇಮಾನಿ ಕಿಂ ಬೋಧಯಂತಿ ಮಾಂ ವತ್ಸೋಕ್ತಾನಿ ವೈ ಮುಹುಃ ।
ಏವಂ ವಿಚಾರಿತಂ ಧ್ಯಾತ್ವಾ ಕ್ಷಣಂ ಸ್ವಹೃದಯೇ ಮಯಾ ॥ ೧೩೮ ॥

ವಾಕ್ಯಾರ್ಥಶ್ಚ ಮಯಾ ಜ್ಞಾತಸ್ತ್ವಹಂ ಮಾ ಕಥ್ಯತಾಂ ಜನಾಃ ।
ವತ್ಸಾಸ್ತ್ವೇವಂ ಬೋಧಯಂತಿ ನ ಜ್ಞಾಯೇತ ಜನೈಸ್ತು ಯತ್ ॥ ೧೩೯ ॥

ಅಹಂ ಶಬ್ದೋ ದೇಹಪರೋ ಯದಾ ತ್ಯಕ್ತೋ ಮಯಾತ್ರ ಹಿ ।
ಅಹಂ ದೇಹೀ ತ್ವಹಂ ಮಾತಾ ಚೇತಿ ಬುದ್ಧಿರ್ಗತಾ ಮಮ ॥ ೧೪೦ ॥

---

೧೩೬. ತಾಯಿಯು ಹೀಗೆ ಹೇಳಿದುದನ್ನು ಕೇಳಿ ರಾಮನು ಎಲೈ ತಾಯಿಯೇ ! ಆ ಕರುಗಳ ಮಾತಿನಿಂದ ನೀನು ಜ್ಞಾನವನ್ನು ಹೇಗೆ ಹೊಂದಿದೆ ? ಎಂಬುದನ್ನು ನನಗೆ ಹೇಳು ಎಂದನು.

೧೩೭. ರಾಮನು ಇಂತೆಂದುದನ್ನು ಕೌಸಲ್ಯೆಯು ಕೇಳಿ ಇಂತೆಂದಳು. ಎಲೈ ರಾಮನೇ ! ಅವು ಅಹಂಮಾ, ಅಹಂ, ಮಾ, ಎಂದು ಕೂಗುತ್ತಿದ್ದುದನ್ನು ಕೇಳಿದೆನು.

೧೩೮–೧೩೯. ಕರುಗಳು ಹೇಳುತ್ತಿರುವ ಈ ಮಾತುಗಳಿಂದ ನನಗೇನು ತಿಳಿದುಬರುವುದು ಎಂದು ಮನಸ್ಸಿನಲ್ಲಿ ಕ್ಷಣಕಾಲ ಯೋಚಿಸಿದೆನು. ಆದರಲ್ಲಿ ಎಲೈ ಜನರಿರಾ ! ಅಹಂಮಾ ಎಂದೆನ್ನಬೇಡಿ ಎಂದು ಹೇಳುತ್ತವೆ. ಎಂದು ತಿಳಿಯಬಂದಿತು. ಇದು ಜನಗಳಿಗೆ ಗೊತ್ತಾಗುವುದಿಲ್ಲ.

೧೪೦. ಅಹಂ ಶಬ್ದವು ದೇಹಪರವು. ಆ ಅಹಂಭಾವವನ್ನು ಬಿಟ್ಟೆನು. ನಾನು, ನನ್ನ ದೇಹವು ನಿನ್ನ ತಾಯಿಯು, ಎಂಬ ಬುದ್ಧಿಯು ನನಗೆ ಹೋಯಿತು.

ದೇಹಬುದ್ಧಿರ್ಯದಾ ನಷ್ಟಾ ತದಾ ಕಿಂ ಶೇಷಮಸ್ತಿ ಹಿ ।
ಸುಖಂ ದುಃಖಂ ತು ದೇಹಾಯ ನ ಮೇ ಕಿಂಚಿದ್ರಘೂತ್ತಮ ॥ ೧೪೧ ॥

ತಿಷ್ಠ ತ್ವಯಂ ವಾ ಪತತು ದೇಹೋ ಭೋಗಾಶ್ರಯಃ ಪ್ರಭೋ ।
ಅಹಂ ತ್ವದಂಶ ಏವಾತ್ರ ಕ್ಪೃಥಗುಪಾಧಿತಃ ಸ್ಮೃತಾ ॥ ೧೪೨ ॥

ಯಥಾ ಕುಂಭೇ ರವಿರ್ಭಿನ್ನೋ ದೃಶ್ಯತೇತ್ರ ಹ್ಯುಪಾಧಿತಃ ।
ತ್ವತ್ತೋಽಹಂ ನ ಕದಾ ಭಿನ್ನಾ ಬ್ರಹ್ಮೈವಾಸ್ಮ್ಯಹಮೇವ ವೈ ॥ ೧೪೩ ॥

ಇತಿ ತನ್ಮಾತೃವಚನಂ ಶ್ರುತ್ವಾ ರಾಮಃ ಸ್ಮಿತಾನನಃ ।
ಕೌಸಲ್ಯಾಮಾಹ ಮಾತಸ್ತ್ವಂ ಮುಕ್ತಾಸ್ಯದ್ಯ ನ ಸಂಶಯಃ ॥ ೧೪೪ ॥

---

೧೪೧. ದೇಹಬುದ್ಧಿಯು ಹೋದಮೇಲೆ ಉಳಿದುದೇನಿರುವುದು? ಸುಖ ದುಃಖಗಳೆಂಬುದು ಈ ದೇಹಕ್ಕೇ ಇರುವುದು. ಆದ್ದರಿಂದ ನಾನು ಆ ದೇಹಬುದ್ಧಿಯನ್ನು ಬಿಟ್ಟುದರಿಂದ ಸುಖದುಃಖಗಳು ಹೋದುವು.

೧೪೨. ಈ ದೇಹವು ಭೋಗಕ್ಕೆ ಹುಟ್ಟಿರುವುದು. ಇದು ಇರಲಿ ಹೋಗಲಿ ನಾನು ಅದನ್ನು ಲಕ್ಷಿಸುವುದಿಲ್ಲ. ನಾನೂ ನೀನೂ ಒಂದೇ. ಈ ದೇಹಗಳೆಂಬುವು ಉಪಾಧಿಗಳು. ಆದ್ದರಿಂದ ಬೇರೆ ಬೇರೆ ಕಾಣುತ್ತೇವೆ. ಅದನ್ನು ಬಿಟ್ಟರೆ ಇಬ್ಬರೂ ಒಂದೇ.

೧೪೩. ಬಿಂದಿಗೆಗಳಲ್ಲಿ ನೀರನ್ನು ತುಂಬಿಟ್ಟದ್ದರೆ ಒಂದೊಂದು ಬಿಂದಿಗೆಯಲ್ಲಿಯೂ ಒಬ್ಬೊಬ್ಬ ಸೂರ್ಯನು ಕಂಡುಬರುತ್ತಾನೆ. ಸೂರ್ಯನಿರುವವನು ಒಬ್ಬನೇ. ಆದರೆ ಆ ಸೂರ್ಯನು ಬೇರೆ ಬೇರೆಯಾಗಿ ಕಂಡುಬರುವುದು ಆ ಬಿಂದಿಗೆಗಳು ಬೇರೆ ಬೇರೆ ಇರುವುದರಿಂದ. ಆದ್ದರಿಂದ ಈ ಸೂರ್ಯನುಬೇರೆಬೇರೆಯಾಗಿ ಕಾಣಲು ಈ ಬಿಂದಿಗೆಯು ಉಪಾಧಿಯೆನಿಸಿಕೊಳ್ಳುತ್ತದೆ. ಅದರಂತೆ ನೀನೂ, ನಾನೂ, ಒಂದೇ ಹೊರತು ಬೇರೆಯಲ್ಲ. ದೇಹಗಳು ಉಪಾಧಿಗಳಾಗಿ ಒಬ್ಬನನ್ನೇ ಬೇರೆಯಾಗಿ ಕಾಣಿಸಿಕೊಳ್ಳುವಂತೆ ಮಾಡುತ್ತಿವೆ. ಆದ್ದರಿಂದ ನಾನು ಅಖಂಡವಾದ ಬ್ರಹ್ಮನಾಗಿದ್ದೇನೆ.

೧೪೪-೧೪೫. ತಾಯಿಯು ಇಂತು ಹೇಳಿದುದನ್ನು ಕೇಳಿ ರಾಮನು ನಕ್ಕನು. ಅಮ್ಮ! ನೀನು ಈಗ ಮುಕ್ತಳಾಗಿದ್ದೀಯೆ. ಸಂಶಯವಿಲ್ಲ.

ಸಮ್ಯಗ್ವಿಚಾರಿತಂ ಚಿತ್ತೇ ವತ್ಸವಾಕ್ಯಂ ಸವಿಸ್ತರಂ ।
ಗಚ್ಛ ತಿಷ್ಠ ಸುಖಂ ಗೇಹೇ ತ್ವಿಮಾಂ ಬುದ್ಧಿಂ ಸುಖಂ ಕುರು ॥ ೧೪೫ ॥

ಕಿಮರ್ಥನ ಮಯಾ ಯುಷ್ಮಾನ್ಮಾತಸ್ಸ್ವವಚನೇನ ಹಿ ।
ಉಪದೇಶಃ ಕೃತಸ್ತ್ವಂಬ ತತ್ಸರ್ವಂ ತ್ವಂ ನಿಬೋಧಯ ॥ ೧೪೬ ॥

ಉಪದೇಷ್ಟಾ ಗುರುರ್ಜ್ಞೇಯೋ ಯುಷ್ಮಾಕಂ ತನಯಸ್ತ್ವಹಂ ।
ಕಥಂ ಯುಷ್ಮಾನತ್ರ ಮಾತಸ್ತ್ವಹಂ ಚೋಪದಿಶಾಮಿ ವೈ ॥ ೧೪೭ ॥

ಸ್ತ್ರೀಣಾಂ ಪತಿರ್ಗುರುರ್ಜ್ಞೇಯಃ ಸ್ತ್ರೀಭಿರ್ನಾನ್ಯೋ ಗುರುಃ ಕದಾ ।
ಕಾರ್ಯಸ್ತಸ್ಮಾನ್ಮಯಾ ನೈವ ಯುಷ್ಮಾಕಂ ಸ್ವಾಸ್ಯೋಪದೇಶಿತಂ ॥ ೧೪೮ ॥

ಆ ಕರುಗಳ ವಾಕ್ಯವನ್ನು ಹೃದಯದಲ್ಲಿ ಚೆನ್ನಾಗಿ ವಿಮರ್ಶಿಸಿದ್ದೀಯೆ. ಮನೆಗೆ ಹೋಗು. ಸುಖವಾಗಿರು. ಈ ಸುಖವಾದ ಬುದ್ಧಿಯನ್ನೇ ಹೊಂದಿರು.

೧೪೬. ನಾನು ನಿಮ್ಮಗಳಿಗೆ ಏತಕ್ಕೋಸ್ಕರ ಉಪದೇಶ ಮಾಡಲಿಲ್ಲ? ನಿಮ್ಮ ನಿಮ್ಮ ಮಾತಿನಿಂದಲೇ ತಿಳಿದುಕೊಳ್ಳುವಂತೆ ಏಕೆ ಮಾಡಿದೆನು? ಅದೆಲ್ಲ ವನ್ನೂ ಹೇಳುತ್ತೇನೆ ಕೇಳು.

೧೪೭. ಯಾರಿಗಾದರೂ ಸರಿಯೆ. ಗುರುವು ಉಪದೇಶ ಮಾಡಬೇಕು. ನಾನಾದರೋ ನಿಮಗೆ ಮಗನಾಗಿದ್ದೇನೆ. ಮಗನಾದ ನಾನು ನಿಮಗೆ ಹೇಗೆ ತಾನೆ ಉಪದೇಶಮಾಡಲಿ?

೧೪೮. ಲೋಕದಲ್ಲಿ ಹೆಂಗಸರಿಗೆ ಗಂಡನೇ ಗುರುವು ಎಂದು ತಿಳಿ. ಹೆಂಗಸರಿಗೆ ಬೇರೆಯಾದ ಗುರುವೇ ಇಲ್ಲ. ಹೆಂಗಸು ಗಂಡನಾದವನನ್ನು ಹೊರತಾಗಿ ಬೇರೆಯವನನ್ನು ಗುರುವನ್ನಾಗಿ ಮಾಡಿಕೊಳ್ಳಲೇ ಕೂಡದು. ಆದ್ದರಿಂದಲೇ ನಿಮ್ಮ ಬಾಯಿಂದಲೇ ನಿಮಗೆ ಉಪದೇಶವಾಗುವಂತೆ ಮಾಡಿದೆನು. ನಾನು ನಿಮಗೆ ಬೇರೆಯಾಗಿ ಉಪದೇಶಮಾಡಲಿಲ್ಲ.

ಪೌರಾಣಾಂ ಚ ಗುರುಸ್ತಾತಸ್ತಥಾಸ್ವೀಯಪುರೋಹಿತಃ ।
ಅತಸ್ತೇಷಾಮಪಿ ಮಯಾ ದೂತವಾಕ್ಯೋಪದೇಶಿತಂ ॥ ೧೪೯ ॥

ಪರಾಸ್ಯೈರೇವ ಯುಷ್ಮಾಕಮುಪದೇಶಃ ಕೃತೋ ಮಯಾ ।
ಗಚ್ಛ ಗೇಹಂ ಸುಖಂ ತಿಷ್ಠ ಸದಾ ಮಾಂ ಪರಿಚಿಂತಯ ॥ ೧೫೦ ॥

ತದ್ರಾಮವಚನಂ ಶ್ರುತ್ವಾ ಕೌಸಲ್ಯಾ ತುಷ್ಟಮಾನಸಾ ।
ರಾಮಂ ನತ್ವಾ ಯಯೌ ಗೇಹಂ ಸಂತುಷ್ಟಾ ಸಂಸ್ಥಿತಾ ಸುಖಂ ॥ ೧೫೧ ॥

ಏವಂ ತಾ ರಾಮಚಂದ್ರೇಣ ಬೋಧಿತಾ ಮಾತರಶ್ಶುಭಾಃ ।
ಸ್ವಸ್ವಾಯುಷಃ ಕ್ಷಯೇ ಸರ್ವಾಃ ಸ್ವದೇಹಾನ್ ಮುಮುಚುಃ ಸುಖಂ ॥

ರಾಮಸಾನ್ನಿಧ್ಯಮಾತ್ರೇಣ ವಿಮಾನವರಸಂಸ್ಥಿತಾಃ ।
ಜಗ್ಮುಸ್ಸರ್ವಾಸ್ತದ್ವೈಕುಂಠಂ ರಾಘವೇಣೈವ ಸತ್ಕೃತಾಃ ॥ ೧೫೩ ॥

---

೧೪೯. ಪೌರಿಗೆ ಅವರವರ ತಂದೆಯವರು ಗುರುವು. ಅಂತೆಯೇ ಅವರ ಪುರೋಹಿತನೂ ಗುರುವು ಆದ್ದರಿಂದಲೇ ಅವರಿಗೂ ನಾನು ಉಪದೇಶ ಮಾಡದೆ ದೂತವಾಕ್ಯದಿಂದ ಉಪದೇಶ ಮಾಡಿದೆನು.

೧೫೦. ನಿಮಗೂ ಕೂಡ ಬೇರೆಯವರ ಬಾಯಿಂದಲೇ ಉಪದೇಶವನ್ನು ಮಾಡಿಸಿದೆನು. ಮನೆಗೆ ಹೋಗು. ಸುಖವಾಗಿರು. ಯಾವಾಗಲೂ ನನ್ನನ್ನು ಚಿಂತಿಸುತ್ತಿರು.

೧೫೧. ರಾಮನು ಹೀಗೆ ಹೇಳಿದುದನ್ನು ಕೇಳಿ ಕೌಸಲ್ಯೆಯು ಸಂತೋಷಗೊಂಡಳು. ರಾಮನಿಗೆ ನಮಸ್ಕರಿಸಿ ಸಂತೋಷದಿಂದ ಮನೆಗೆ ಹೋಗಿ ಸುಖವಾಗಿದ್ದಳು.

೧೫೨-೧೫೩. ಈ ರೀತಿಯಾಗಿ ಆ ಮೂವರು ತಾಯಿಯರೂ ರಾಮನಿಂದ ಬೋಧಿತರಾಗಿ ಸುಖವಾಗಿದ್ದುಕೊಂಡು ತಮ್ಮ ತಮ್ಮ ಆಯುಃ ಪರಿಮಿತಿಯು ಕಳೆದನಂತರ ತಮ್ಮ ತಮ್ಮ ದೇಹವನ್ನು ಬಿಟ್ಟರು. ಶ್ರೀರಾಮನ ಹತ್ತಿರದಲ್ಲಿದ್ದುದರಿಂದಲೇ ಅವರೆಲ್ಲರೂ ದಿವ್ಯವಾದ ವಿಮಾನವನ್ನು ಹತ್ತಿ ಆ ರಾಮನ ನಿವಾಸಸ್ಥಾನವಾದ ವೈಕುಂಠಕ್ಕೆ ಹೋದರು.

ಶಿಷ್ಯ ತಾಸಾಂ ಮಹದ್ಭಾಗ್ಯಂ ಯಾಸಾಂ ರಾಮಾದಿಭಿಃ ಸ್ತ್ರಿಭಿಃ ।
ಪಾರಲೋಕ್ಯಾದಿ ಸತ್ಕರ್ಮ ಸ್ವಹಸ್ತೈರ್ವಿನಿವರ್ತಿತಂ ॥ ೧೫೪ ॥

ಏವಂ ಸಿಷ್ಯ ಮಯಾ ಪ್ರೋಕ್ತಾ ತಾ ಸಾಮೂರ್ಧ್ವಗತಿಸ್ತವ ।
ಉಪದೇಶಾಸ್ತಥಾ ತಾಸಾಂ ಪ್ರೋಕ್ತಾಶ್ಚಾಪ್ಯತ್ರ ತೇ ಮಯಾ ॥ ೧೫೫ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಮನೋಹರಕಾಂಡೇ ಮಾತೃವೈಕುಂಠಾರೋಹಣಂ ನಾಮ ದ್ವಿತೀಯಸರ್ಗಃ ಸಮಾಪ್ತಃ

---

೧೫೪. ಎಲೈ ಶಿಷ್ಯನೇ! ಅವರ ಮಹಾ ಭಾಗ್ಯವನ್ನು ನೋಡು. ರಾಮ ಲಕ್ಷ್ಮಣ, ಭರತರೇ ಅವರಿಗೆ ಉತ್ತರ ಕ್ರಿಯೆಗಳನ್ನು ಮಾಡಿದರು. ಅದರಲ್ಲಿಯೂ ಪರರ ಕೈಯಲ್ಲಿ ಮಾಡಿಸದೆ ತಾವೇ ಮಾಡಿದರು. ಇದಲ್ಲವೇ ಮಹಾ ಭಾಗ್ಯವು.

೧೫೫. ಎಲೈ ಶಿಷ್ಯನೇ! ಈ ರೀತಿಯಾಗಿ ಆ ರಾಮನ ತಾಯಿಯರ ವೈಕುಂಠ ಗಮನವನ್ನು ಹೇಳಿದ್ದೇನೆ. ಅವರಿಗೆ ರಾಮನು ಹೇಗೆ ಉಪದೇಶವನ್ನು ಮಾಡಿದನೆಂಬುದನ್ನೂ ಕೂಡ ಹೇಳಿದ್ದೇನೆ.

ಇಂತು ಶ್ರೀ ವಾಲ್ಮೀಕಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ರಾಮನ ತಾಯಿಯರು ವೈಕುಂಠಾರೋಹಣವೆಂಬ ಎರಡನೆಯ ಸರ್ಗವು ಮುಗಿದುದು.

—o—o—o—

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಎರಡನೆಯ ಸರ್ಗದ ಸಾರಾಂಶವು

ರಾಮನನ್ನು ಪರಮಾತ್ಮನೆಂದು ತಿಳಿಯುತ್ತಲೂ ಒಂದು ಸಾರಿ ಪ್ರಜೆಗಳೆಲ್ಲರೂ ಆ ರಾಮನ ಬಳಿಗೆ ಹೋಗಿ ತಮಗೆ ಪರಮಾತ್ಮನ ಉಪದೇಶವನ್ನು ಕೊಡಬೇಕೆಂದು ಕೇಳಿಕೊಂಡರು. ಆಗ ಆ ಸ್ವಾಮಿಯು ತಾನು ದೂತರ ಮುಖದಿಂದ ನಿತ್ಯವೂ ರಾತ್ರಿಯ ಕಾಲದಲ್ಲಿ ಉಪದೇಶವನ್ನು ಮಾಡಿಸುತ್ತಿದ್ದೇನೆಂದು ಹೇಳಿ ಅದನ್ನು ಕೇಳುವಂತೆ ಹೇಳಿದನು. ಆಗ ಅವರೆಲ್ಲರೂ ರಾತ್ರಿಯಲ್ಲಿ ದೂತರು ಏನೆಂದು ಹೇಳುವರು ಎಂಬುದನ್ನು ನಿರೀಕ್ಷಿಸುತ್ತಿದ್ದರು. ಆಗ ಆ ದೂತರು ದುಂದುಭಿಗಳನ್ನು ಬಾರಿಸುತ್ತ "ಎಲೈ ಪ್ರಜೆಗಳಿರಾ! ನಿಮಗೆ ಮೋಹ ನಿದ್ದೆಯು ಯುಕ್ತವಲ್ಲ. ಹಾಗೆ ನಿದ್ದೆ ಮಾಡಬೇಡಿರಿ. ಯಾವಾಗ ಅನರ್ಥವು ಬರುವುದೆಂದು ಹೇಳುವುದಕ್ಕಾಗುವುದಿಲ್ಲ. ಈ ಅಯೋಧ್ಯೆಗೆ ಒಂಭತ್ತು ಬಾಗಿಲುಗಳಿವೆ. ಅವುಗಳಲ್ಲಿ ಒಂದು ಬಹು ಸೂಕ್ಷ್ಮವಾಗಿದೆ ರಾಮರಾಜ್ಯದಲ್ಲಿ ಭಯವಿಲ್ಲವೆಂದು ಆ ಬಾಗಿಲಿಗೆ ದೂತರು ಅಗುಳಿಯನ್ನು ಹಾಕದಿರುವುದೂ ಉಂಟು. ದಕ್ಷಿಣ ದಿಕ್ಕಿನಲ್ಲಿ ಕಪ್ಪಗಿರುವ ದೊಡ್ಡ ಕಳ್ಳನಿದ್ದಾನೆ. ಅವನನ್ನು ಯಾರೂ ನೋಡಿಯೂ ಇಲ್ಲ. ಆದರೂ ಕೂಡ ಉಪೇಕ್ಷಿಸಬೇಡಿರಿ. ಆ ಕಳ್ಳನ ದೂತರು ಗೂಢಚಾರರಾಗಿ ಪಟ್ಟಣದಲ್ಲೆಲ್ಲಾ ಓಡಾಡುತ್ತಿದ್ದಾರೆ. ಅವರು ದುರ್ಗವನ್ನು ಭೇದಿಸಿ ಪಟ್ಟಣವನ್ನು ನಾಶಮಾಡಬಹುದು. ದುರ್ಬಲರಾದ ನಿಮಗೆ ಅವರ ಭಯವು ಇದ್ದೇ ಇರುವುದು. ಜನರು ಯಾವಾಗಲೂ ಆಡಿನ ಮರಿಯು ದುರ್ಬಲವಾದುದರಿಂದ ಅದನ್ನು ಮಾರಿಗೆ ಬಲಿ ಕೊಡುತ್ತಾರೆ. ಸಿಂಹದ ಮರಿಯು ಬಲವಾದುದರಿಂದ ಅದನ್ನು ಬಲಿ ಕೊಡುವುದಿಲ್ಲ. ಆದ್ದರಿಂದ ದುರ್ಬಲರಾದ ನೀವು ಜೋಕೆಯಿಂದಿರಿ. ಇಂತೆಂದು ಹೇಳುತ್ತಿದ್ದರು. ಇದನ್ನು ಕೇಳಿದ ಜನರು ವಿಚಾರಿಸಿ ತಿಳಿದುಕೊಂಡು ಮತ್ತೆ ರಾಮನ ಬಳಿಗೆ ಹೋಗಿ ಸ್ವಾಮಿ! ನಮಗೆ ಜ್ಞಾನೋದಯವಾಯಿತು, ಎಂದರು. ರಾಮನು ಅದು ಹೇಗೆನ್ನಲು, ಅದಕ್ಕೆ ಅವರು ಇಂತೆಂದರು. ರಾತ್ರಿಯೆಂಬುದೇ ಮೋಹವು, ನಿದ್ರೆಯೆಂಬುದು ಭ್ರಾಂತಿಯು, ಈ ಮೋಹವು ಒಳ್ಳೆಯದಲ್ಲ. ಮೃತ್ಯುವು ನಮ್ಮನ್ನು ಹಿಡಿಯುತ್ತಾನೆ. ಅಯೋಧ್ಯೆಯೆಂಬುದೇ ನಮ್ಮ

ದೇಹವು. ಅದಕ್ಕೆ ನವದ್ವಾರಗಳೆಂದರೆ ನಮ್ಮಲ್ಲಿರುವ ನವದ್ವಾರಗಳು. ಲಘು ವಾದುದು ನೆತ್ತಿಯಲ್ಲಿರುವುದೆಂದು ತಿಳಿಯಬೇಕು. ಹಲ್ಲು ಮುಂತಾದುವೇ ದ್ವಾರ ರಕ್ಷಕರು. ರೆಪ್ಪೆ ತುಟಿ ಮುಂತಾದುವೇ ಬಾಗಿಲುಗಳು. ಪ್ರಾಣಗಳೇ ರಾಜದೂತರು ರಾಜನೇ ಆತ್ಮನು. ಇಂದ್ರಿಯಗಳು ದೇಹ ನಗರದಲ್ಲಿನ ಪೌರರು. ಯಮನೇ ಮಹಾ ಚೋರನು. ತ್ರಿದೋಷಗಳೇ ರೋಗಗಳು. ಈ ರೋಗಗಳು ಆ ಯಮನಿಗೆ ಸೇವಕರು. ನಾಗರಿಕರಂತೆಯೇ ದೇಹದಲ್ಲಿದ್ದುಕೊಂಡಿರುತ್ತಾರೆ. ಜೀವಗಳು ದುರ್ಬಲರಾದುದರಿಂದ ಅವರಿಗೆ ಅವುಗಳ ಭಯವಿದೆ. ಅವರು ಕಾಲರೂಪನಾದ ಯಮನನ್ನು ಕರೆತರಬಹುದು. ಆದ್ದರಿಂದ ನಿಮಗೆ ಮೃತ್ಯುಕಾಲವು ಗೊತ್ತಾಗುವು ದಿಲ್ಲ. ಮೋಹದಲ್ಲಿರಬೇಡಿ. ವೈರಾಗ್ಯವೆಂಬ ಅಲಗುಳ್ಳ ಜ್ಞಾನವೆಂಬ ಕತ್ತಿಯನ್ನು ಹಿಡಿದುಕೊಳ್ಳಿರಿ. ಸಚ್ಛೀಲವೇ ಕವಚವು. ಧೈರ್ಯವೇ ಭಕ್ತಿಯು. ಯಾವನು ಆತ್ಮಜ್ಞಾನದಿಂದಿದ್ದಾನೆಯೋ ಅವನಿಗೆ ಭಯವಿಲ್ಲ. ಸಾವಧಾನವೆಂದರೆ ಜ್ಞಾನವು ವಾದ್ಯಗಳೇ ಸತ್ಪುರುಷರ ವಚನಗಳು. ಮೋಹಕ್ಷಯವೆಂಬುದೇ ಪ್ರಭಾತವು. ನೀನೇ ಆತ್ಮನು ಈ ಸಭೆಯೇ ಆ ಆತ್ಮನ ನಿವಾಸಸ್ಥಾನವು. ನಿನ್ನ ಎದುರಿಗಿರುವ ನಾವು ಮುಕ್ತಿಯನ್ನು ಹೊಂದಿದ್ದೇವೆ- ಆದ್ದರಿಂದ ನಿನ್ನ ಉಪದೇಶವು ಬೇಡ. ನಿನ್ನ ಬಳಿಯಲ್ಲಿದ್ದರೇ ಮುಕ್ತಿಯು ನಮಗೆ ಬರುತ್ತದೆ. ಅವರು ಇಂತೆಂದುದನ್ನು ಕೇಳಿ ಸಂತೋಷಪಟ್ಟು ರಾಮನು ಸರಿಯಾಗಿ ವಿಚಾರ ಮಾಡಿದಿರಿ, ಎಂದು ಹೇಳಿ ಕಳುಹಿಸಿದನು.

ಒಂದು ಸಾರಿ ಕೈಕೇಯಿಯು ರಾಮನ ಬಳಿಗೆ ಬಂದು ತಾನು ಹಿಂದೆ ಅವ ನನ್ನು ಕಾಡಿಗೆ ಕಳುಹಿಸಿದುದು ಅಪರಾಧವಾಯಿತೆಂದು ಹೇಳಿ ಕ್ಷಮಾಪಣೆಯನ್ನು ಕೇಳಿ ತನಗೆ ತಕ್ಕ ಉಪದೇಶಮಾಡುವಂತೆ ಕೇಳಿಕೊಂಡಳು. ಆಗ ರಾಮನು ಲಕ್ಷ್ಮಣನಿಗೆ ಹೇಳಿ ಆಕೆಯನ್ನು ಆಡುಗಳಿರುವ ಜಾಗಕ್ಕೆ ಕಳುಹಿಸಲು, ಆಕೆಯು ಆ ಆಡುಗಳ ಮೇ ಮೇ ಎಂಬ ಶಬ್ದವನ್ನು ಕೇಳಿ ವಿಚಾರಮಾಡಿ ನಾವು ನಮ್ಮದು ಎಂಬ ಅಹಂಭಾವವನ್ನು ಬಿಡಬೇಕೆಂದು ತಿಳಿದುಕೊಂಡಳು. ಒಂದು ಸಾರಿ ಸುಮಿತ್ರೆಯು ಬಂದು ರಾಮನ ಉಪದೇಶವನ್ನು ಕೇಳಿದಳು. ಅದಕ್ಕೆ ರಾಮನು "ನೀನು ಯಾರು ?" ಎಂಬುದನ್ನು ತಿಳಿದು ಬಾ ಎಂದನು. ಸುಮಿತ್ರೆಯು ನಾನು ಎಂಬುದು ದೇಹವಲ್ಲ. ಏತಕ್ಕೆಂದರೆ ಆ ದೇಹವನ್ನು ಅನೇಕ ಬಾರಿ ಎತ್ತು ತ್ತೇವೆ, ಆಗ ನನ್ನದೆಂಬ ಈ ದೇಹವು ಅಲ್ಲಿರುವುದಿಲ್ಲ. ಆದ್ದರಿಂದ ಎಲ್ಲಾ ಜನ್ಮಗಳ ಲ್ಲಿಯೂ ನನ್ನದು ಎಂಬುದು ಯಾವುದಿದೆ ಎಂದರೆ ಆತ್ಮವು. ಆಗ್ಗೆ ನಾನೇ ಆತ್ಮವು. ಆತ್ಮವೇ ನಾನು ಎಂದಂತಾಯಿತು. ಎಂದು ತಿಳಿದು ರಾಮನಿಗೆ ಇದನ್ನೇ ಹೇಳಿ ಆತ್ಮಭಾವವನ್ನು ಹೊಂದಿದಳು.

ಒಂದು ಸಾರಿ ಕೌಸಲ್ಯೆಯು ರಾಮನ ಬಳಿಗೆ ಬಂದು ಉಪದೇಶವನ್ನು ಕೇಳಿದಳು. ಆದಕ್ಕೆ ರಾಮನು " ನೀನು ಹಸುವಿನ ಕೊಟ್ಟಿಗೆಗೆ ಹೋಗಿ ಅಲ್ಲಿ ಕರುಗಳ ಶಬ್ದವನ್ನು ಕೇಳಿ ವಿಚಾರಿಸಿ ನೋಡಿಕೊಂಡು ಬಾ" ಎಂದನು. ಆಕೆಯು ಅಂತೆಯೇ ಅಲ್ಲಿಗೆ ಹೋಗಿ ನೋಡಲು ಆ ಕರುಗಳು ಅಹಂ ಮಾ ಅಹಂ ಮಾ ಎಂದೆನ್ನುತ್ತಿದ್ದುವು. ಇದನ್ನು ಕೇಳಿ ಅಹಂ ಮಾ ಎಂದರೆ ಅಹಂಭಾವವು ಬೇಡ ಎಂದು ಅರ್ಥ. ಅಹಂ ಪದವು ದೇಹಪರವು. ಆದ್ದರಿಂದ ನಾನು ನನ್ನ ಮಕ್ಕಳು ಇತ್ಯಾದಿ ಭಾವವು ಬೇಡವೆಂದೆನ್ನುತ್ತವೆ. ಎಂದು ತಿಳಿದುದಲ್ಲದೆ ದೇಹಬುದ್ಧಿಯು ಹೋದಮೇಲೆ ನಾನೇ ಬ್ರಹ್ಮವು ಎಂಬ ಜ್ಞಾನವೂ ಬರುತ್ತದೆ ಎಂದು ತಿಳಿದು ಕೊಂಡಳು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ತೃತೀಯಸ್ಸರ್ಗಃ

ಶ್ರೀ ವಿಷ್ಣುದಾಸ ಉವಾಚ

ಕಥಂ ಶ್ರೀರಾಘವಸ್ಯಾತ್ರ ರಾಮೋಪಾಸಕಮಾನವೈಃ ।
ಕಾರ್ಯಾ ವೈ ಮಾಸೀಪೂಜಾ ಬಹಿಃ ಪೂಜಾ ತಥಾ ಶುಭಾ ॥ ೧ ॥

ಕಥಂ ಚೋಪಾಸನಾ ಗ್ರಾಹ್ಯಾ ಗುರೋಃ ಶ್ರೀರಾಘವಸ್ಯ ಚ ।
ಕಾ ಶ್ರೇಷ್ಠೋಪಾಸನಾಚಾತ್ರ ಕಃ ಶ್ರೇಷ್ಠೋಽತ್ರ ಗುರುಸ್ತಥಾ ॥ ೨ ॥

ಕೇ ಕೇ ಮಂತ್ರಾ ರಾಘವಸ್ಯ ಭಕ್ತಾನಾಂ ಸಿದ್ಧಿದಾಯಕಾಃ ।
ಕಾ ತಿಥಿಸ್ತೋಷದಾ ತಸ್ಯ ಕಿಂ ಕಿಂ ತತ್ತೋಷವರ್ಧನಂ ॥ ೩ ॥

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡದ ಮೂರನೆಯ ಸರ್ಗವು

೧. ಶ್ರೀ ವಿಷ್ಣುದಾಸನು ಹೇಳಿದನು:— ಎಲೈ ಗುರುವೇ! ರಾಮನನ್ನು ಉಪಾಸನೆ ಮಾಡುವ ಜನರು ಶ್ರೀರಾಮನ ಮಾನಸ ಪೂಜೆಯನ್ನು ಹೇಗೆ ಮಾಡಬೇಕು? ಅಂತೆಯೇ ಹೊರಗಿನ ಪುಷ್ಪ ಪೂಜೆಗಳನ್ನು ಹೇಗೆ ಮಾಡಬೇಕು?

೨. ಎಲೈ ಗುರುವೇ! ಶ್ರೀರಾಘವನ ಉಪಾಸನೆಯನ್ನು ಹೇಗೆ ಮಾಡಬೇಕು? ಶ್ರೇಷ್ಠವಾದ ಉಪಾಸನೆ ಯಾವುದು? ಯಾವ ಗುರುವು ಶ್ರೇಷ್ಠನಾದವನು?

೩. ರಾಘವನ ಮಂತ್ರಗಳಾವುವು? ಯಾವು ಯಾವುವು ಭಕ್ತರಿಗೆ ಸಿದ್ಧಿಯನ್ನು ಕೊಡುತ್ತವೆ? ಆ ಶ್ರೀರಾಮನಿಗೆ ಸಂತೋಷವನ್ನುಂಟುಮಾಡುವ ತಿಥಿ ಯಾವುದು? ಆ ರಾಘವನಿಗೆ ಸಂತೋಷವನ್ನುಂಟುಮಾಡುವ ಪದಾರ್ಥಗಳು ಯಾವು ಯಾವುವು?

ಕಃ ಶ್ರೇಷ್ಠೋತ್ರ ವರೋ ದೇವೋ ಯಸ್ಯ ಗ್ರಾಹ್ಯಾ ಹ್ಯುಪಾಸನಾ ।
ತತ್ಸರ್ವಂ ವಿಸ್ತರೇಣೈವ ಗುರೋ ತ್ವಂ ವಕ್ತುಮರ್ಹಸಿ ॥ ೪ ॥

ಶ್ರೀ ರಾಮದಾಸ ಉವಾಚ

ಸಮ್ಯಕ್ಪೃಷ್ಟಂ ತ್ವಯಾ ಶಿಷ್ಯ ಸಾವಧಾನಮನಾಃ ಶೃಣು ।
ಸರ್ವಂ ತದ್ವಿಸ್ತರೇಣಾದ್ಯ ತ್ವದಗ್ರೇ ಕಥ್ಯತೇ ಮಯಾ ॥ ೫ ॥

ಆದೌ ಗುರುಂ ಪರೀಕ್ಷ್ಯಾತ್ರ ತಚ್ಚಿಹ್ನೈಶ್ಚ ದ್ವಿಜೋತ್ತಮೈಃ ।
ತತಸ್ತಸ್ಮಾದುಪದೇಶೋ ಗ್ರಾಹ್ಯಸ್ತೀರ್ಥೇ ವಿಧಾನತಃ ॥ ೬ ॥

ಗುರೋಶ್ಚೈವಾತ್ರ ಚಿಹ್ನಾನಿ ತವಾದೌ ಪ್ರವದಾಮ್ಯಹಂ ।
ಕ್ರೋಧೀ ಕುಷ್ಠೀ ಮಹಾರೋಗೀ ಮಲೀನೋ ನಿರ್ಘೃಣೋಜಡಃ ॥ ೭ ॥

ಅಪಂಡಿತೋ ನಿಂದಕಶ್ಚ ಲೋಲುಪೋ ವಿಷಯಾತುರಃ ।
ದಾಂಭಿಕೋ ಗರ್ವಸಂಯುಕ್ತಃ ಪಾಪಾತ್ಮಾ ದುಷ್ಟವಂಶಜಃ ॥ ೮ ॥

---

೪. ಶ್ರೇಷ್ಠವಾದ ದೇವರಾರು? ಅಂತಹ ಯಾವನ ಉಪಾಸನೆಯನ್ನು ಮಾಡಬೇಕು? ಎಲೈ ಗುರುವೇ! ಅವೆಲ್ಲವನ್ನೂ ವಿಸ್ತಾರವಾಗಿ ಹೇಳು.

೫. ಶ್ರೀರಾಮದಾಸನು ಹೇಳಿದನು;— ಎಲೈ ಶಿಷ್ಯನೇ! ನೀನು ಕೇಳಿದುದು ಚೆನ್ನಾಗಿದೆ. ಸಾವಧಾನ ಚಿತ್ತದಿಂದ ಕೇಳು. ಎಲ್ಲವನ್ನೂ ಕೂಡ ನಿನ್ನೆದುರಿಗೆ ವಿಸ್ತಾರವಾಗಿ ಹೇಳುತ್ತೇನೆ.

೬. ಮೊದಲು ಸದ್ಗುರುವನ್ನು ಅವನ ಲಕ್ಷಣಗಳಿಂದ ಪರೀಕ್ಷಿಸಿ ತಿಳಿದುಕೊಳ್ಳಬೇಕು. ಅನಂತರ ಅವನಿಂದ ತೀರ್ಥಗಳಲ್ಲಿ ವಿಧಿಯಂತೆ ಉಪದೇಶವನ್ನು ತೆಗೆದುಕೊಳ್ಳಬೇಕು.

೭. ಮೊದಲು ನಾನು ನಿನಗೆ ಗುರುವಿನ ಚಿಹ್ನೆಗಳನ್ನು ಹೇಳುತ್ತೇನೆ ಕೇಳು. ಕೋಪಗೊಳ್ಳುವವನು, ಕುಷ್ಠರೋಗದವನು, ಮಹಾರೋಗವುಳ್ಳವನು, ಮಲಿನನು, ದಯೆಯಿಲ್ಲದವನು, ದಡ್ಡನು, ಇವರು ಗುರುವಾಗಲಾರರು.

೮. ಪಂಡಿತನಲ್ಲದವನು, ಪರರನ್ನು ನಿಂದಿಸುವವನು, ಸ್ವೇಚ್ಛೆಯಿಂದಿರುವವನು, ವಿಷಯ ಸುಖದಲ್ಲಿ ಆಸಕ್ತನು, ಡಂಭಾಚಾರವುಳ್ಳವನು, ಗರ್ವವುಳ್ಳವನು, ಪಾಪಿಯು, ದುಷ್ಟರ ವಂಶದಲ್ಲಿ ಹುಟ್ಟಿದವನು, ಅವರು ಗುರುವಾಗಲಾರರು.

ಘಾತೀ ಪರದ್ರೋಹಕರ್ತಾ ಪರದ್ರವ್ಯಾಪಹಾರಕಃ |
ಅಜಿತಾತ್ಮಾ ವೇದಬಾಹ್ಯಃ ಪರದಾರರತಸ್ಸದಾ ॥ ೯ ॥

ಪರದೋಷಾರೋಪಕಶ್ಚ ಕೃಪಣಶ್ಚಾಜಿತೇಂದ್ರಿಯಃ |
ವೇದದೇವದ್ವಿಜಾನಾಂ ಚ ಯತಿತೀರ್ಥಗವಾಮಪಿ ॥ ೧೦ ॥

ತುಲಸೀವಹ್ನಿಸೂರ್ಯಾಣಾಂ ದ್ವೇಷ್ಟಾ ಯೋಗ್ಯೋ ಗುರುರ್ನಹಿ |
ವೇತ್ತಾ ಸಕಲಧರ್ಮಾಣಾಂ ಶಾಸ್ತ್ರೇಷು ಪರಿನಿಷ್ಠಕಃ ॥ ೧೧ ॥

ಸತ್ಯವಾಕ್ ಮಿತಭುಕ್ ಜ್ಞಾನೀ ಕಲಾವಾನ್ ದ್ವಿಜವಂಶಜಃ |
ಸತ್ಕರ್ಮನಿಷ್ಠೋ ಧರ್ಮಾಣಾಮುಪದೇಷ್ಟಾ ಸುಬುದ್ಧಿದಃ ॥ ೧೨ ॥

---

೯. ಪ್ರಾಣಿ ಹಿಂಸಕನು, ಪರರಿಗೆ ದ್ರೋಹವನ್ನುಂಟುಮಾಡುವವನು, ಪರರ ದ್ರವ್ಯವನ್ನು ಅಪಹರಿಸುವವನು, ಜಿತೇಂದ್ರಿಯನಲ್ಲದವನು, ವೇದವನ್ನು ಓದದವನು, ಪರರ ಹೆಂಡಿರಲ್ಲಿಯೇ ಆಸಕ್ತನಾಗಿರುವವನು, ಇಂತಹವರು ಗುರುವಾಗಲಾರರು.

೧೦-೧೧. ಪರರಮೇಲೆ ದೋಷವನ್ನು ಹೊರಿಸುವವರು, ಕೃಪಣರು, ಜಿತೇಂದ್ರಿಯರಲ್ಲದವರು, ವೇದ ದ್ವೇಷಿಗಳು, ಬ್ರಾಹ್ಮಣ ದ್ವೇಷಿಗಳು, ದೇವತೆಗಳ ದ್ವೇಷಿಗಳು, ಯತಿಗಳ ದ್ವೇಷಿಗಳು, ತೀರ್ಥಗಳ ದ್ವೇಷಿಗಳು, ಗೋವುಗಳ ದ್ವೇಷಿಗಳು, ತುಲಸಿಯ ದ್ವೇಷಿಗಳು, ಅಗ್ನಿ, ಸೂರ್ಯ, ಇವರನ್ನು ದ್ವೇಷಿಸುವವರು ಇವರು ಗುರುಗಳಾಗಲಾರರು. ಇಂತಹವರು ಅಯೋಗ್ಯರು.

೧೨. ಸಕಲ ಧರ್ಮಗಳನ್ನೂ ಬಲ್ಲವನು, ಶಾಸ್ತ್ರಗಳಲ್ಲಿ ಚೆನ್ನಾಗಿ ಜ್ಞಾನವುಳ್ಳವನು, ಸತ್ಯವಾದಿಯು, ಮಿತವಾಗಿ ಭೋಜನ ಮಾಡುವವನು, ಜ್ಞಾನವುಳ್ಳವನು, ಕಲೆಗಳನ್ನು ಬಲ್ಲವನು, ಬ್ರಾಹ್ಮಣ ವಂಶದಲ್ಲಿ ಹುಟ್ಟಿದವನು, ಒಳ್ಳೆಯ ಕರ್ಮಗಳಲ್ಲಿ ನಿಷ್ಠನಾದವನು, ಒಳ್ಳೆಯ ಬುದ್ಧಿಯನ್ನುಂಟು ಮಾಡುವವನು, ಇಂತಹವನು ಉಪದೇಶ ಮಾಡಲು ಅರ್ಹನಾದ ಗುರುವು,

ಯೋಗಾಭ್ಯಾಸಕಲಾಭಿಜ್ಞೋ ಯೋಗವಾ೯ ಸಮದರ್ಶನಃ ।
ಕೃತಕರ್ಮಾ ತೀರ್ಥಸೇವೀ ಧರ್ಮಾಧರ್ಮವಿವೇಚಕಃ ॥ ೧೩ ॥

ಬ್ರಹ್ಮಚಾರೀ ಗೃಹಾಸ್ಥೋ ವಾ ವಾನಪ್ರಸ್ಥಾಶ್ರಮೀ ಯತಿಃ ।
ಸ್ವಾಶ್ರಮಾಚಾರಸನ್ನಿಷ್ಠೋ ಬುದ್ಧಿಮಾ೯ ವಿಜಿತೇಂದ್ರಿಯಃ ॥ ೧೪ ॥

ಕ್ಷಮೀ ಕೃಪಾಳುರ್ಮೃದುವಾಕ್ ಸುಮುಖಸ್ಸೌಮ್ಯದರ್ಶನಃ ।
ಅನಿದ್ರಶ್ಚ ಸಮುದ್ಯೋಗೀ ಶಾಂತಾತ್ಮಾ ಪರತೋಷಕೃತ್ ॥ ೧೫ ॥

ಔದಾರ್ಯವಾ೯ ಜ್ಞಾನನಿಷ್ಠಶ್ಶುಚಿಸ್ತ್ಯಕ್ತಪರಿಗ್ರಹಃ ।
ಇತ್ಯಾದಿಗುಣಯುಕ್ತೋ ಯಸ್ಸ ಗುರುಃ ಪರಮೋತ್ತಮಃ ॥ ೧೬ ॥

ತಸ್ಯ ಸೇವಾಂ ಚಿರಂ ಕೃತ್ವಾ ಸೇವಯಾ ತಂ ಪ್ರಸಾದ್ಯ ಚ ।
ತಸ್ಮಾದುಪಾಸನಾ ಗ್ರಾಹ್ಯಾ ಸುತೀರ್ಥೇ ವಿಧಿಪೂರ್ವಕಂ ॥ ೧೭ ॥

೧೩-೧೪. ಯೋಗಾಭ್ಯಾಸದ ಕಲೆಯನ್ನು ಬಲ್ಲವನು, ಯೋಗವನ್ನು ಮಾಡುವವನು, ಎಲ್ಲರನ್ನೂ ಒಂದೇ ರೀತಿಯಾಗಿ ನೋಡುವವನು, ಕರ್ಮಾನುಷ್ಠಾನವನ್ನು ಮಾಡುವವನು, ತೀರ್ಥವನ್ನು ಸೇವಿಸುವವನು, ಧರ್ಮ ಅಧರ್ಮಗಳನ್ನು ವಿಮರ್ಶಿಸಿ ತಿಳಿಯುವವನು, ಬ್ರಹ್ಮನಲ್ಲಿ ಆಸಕ್ತನಾದವನು, ಬ್ರಹ್ಮಚಾರಿ ಆಶ್ರಮಸ್ಥನು, ಅಥವಾ ಗೃಹಸ್ಥನು, ಅಥವಾ ವಾನಪ್ರಸ್ಥಾಶ್ರಮಿಯು, ಅಥವಾ ಯತಿಯು ತನ್ನ ಆಶ್ರಮದಲ್ಲಿ ನಿರತನಾದವನು, ಬುದ್ಧಿವಂತನು, ಜಿತೇಂದ್ರಿಯನು, ಇಂತಹವನು ಗುರುವಾಗಲು ಯೋಗ್ಯನು.

೧೫-೧೬. ಕ್ಷಮಾಶೀಲನು, ಕೃಪಾವಂತನು, ಮೃದುವಾದ ಮಾತುಗಳನ್ನಾಡುವವನು, ಸುಮುಖನು, ನೋಡಲು ಸೌಮ್ಯವಾಗಿರುವವನು, ಸೋಮಾರಿಯಲ್ಲದವನು, ಉದ್ಯೋಗ ಮಾಡತಕ್ಕವನು, ಶಾಂತನಾದವನು, ಇತರರಿಗೆ ಸಂತೋಷವನ್ನುಂಟುಮಾಡತಕ್ಕವನು, ಉದಾರ ಬುದ್ಧಿಯುಳ್ಳವನು, ಜ್ಞಾನಿಯಾದವನು, ಶುಚಿಯಾದವನು, ದಾನವನ್ನು ತೆಗೆದುಕೊಳ್ಳದವನು, ಇವೇ ಮೊದಲಾದ ಗುಣಗಳುಳ್ಳವನನ್ನು ಉತ್ತಮ ಗುರುವೆಂದು ಹೇಳುತ್ತಾರೆ.

೧೭. ಇಂತಹ ಗುರುವಿನ ಸೇವೆಯನ್ನು ಶಿಷ್ಯನಾದವನು ಬಹುದಿವಸಗಳವರೆಗೂ ಮಾಡಿ ಅವನನ್ನು ಸಂತೋಷಪಡಿಸಬೇಕು. ಅಂತಹವನಿಂದ ಒಳ್ಳೆಯ ತೀರ್ಥ ಸ್ಥಳಗಳಲ್ಲಿ ವಿಧಿಯಂತೆ ಉಪದೇಶವನ್ನು ತೆಗೆದುಕೊಳ್ಳಬೇಕು. ಅದರಂತೆ ಉಪಾಸನೆ ಮಾಡಬೇಕು.

ಉಪಾಸನಾಸ್ತ್ರಯಸ್ಸಂತಿ ಸಾತ್ವಿಕೀ ರಾಜಸೀ ತಥಾ ।
ತಾಮಸೀ ಚ ತೃತೀಯಾ ಸಾ ಗರ್ಹಿತಾತ್ರ ನಿಗದ್ಯತೇ ॥ ೧೮ ॥

ಭೂತಭೇತಾಳಕೂಶ್ಮಾಂಡಪಿಶಾಚಾನಾಮುಪಾಸನಾ ।
ಸಾ ಜ್ಞೇಯಾ ತಾಮಸೀ ಘೋರಾ ದೇವಾನಾಂ ಸಾತ್ವಿಕೀ ಸ್ಮೃತಾ ॥ ೧೯ ॥

ಯಕ್ಷಾಣಾಂ ರಾಕ್ಷಸಾನಾಂ ಚ ಯಾ ಸಾ ಜ್ಞೇಯಾ ತು ರಾಜಸೀ ।
ಶೈವಾಃ ಸೌರಾಶ್ಚ ಗಾಣೇಶಾಃ ಶಾಕ್ತಾಶ್ಚ ವೈಷ್ಣವಾಸ್ತಥಾ ॥ ೨೦ ॥

ಅವತಾರಾಸ್ತ್ವಸಂಖ್ಯಾತಾಃ ಪಂಚಾನಾಂ ಸಂತಿ ಭೂತಲೇ ।
ತೇಷಾಮುಪಾಸನಾ ಗ್ರಾಹ್ಯಾ ಗುರೋರಾಸ್ಯಾದ್ದ್ವಿಜಾದಿಭಿಃ ॥ ೨೧ ॥

---

೧೮. ಈ ಉಪಾಸನೆಗಳು ಮೂರು ಬಗೆಯಾಗಿವೆ. ಒಂದನೆಯದು ಸಾತ್ವಿಕೀ ಉಪಾಸನೆ, ಎರಡನೆಯದು ರಾಜಸೀಯ ಉಪಾಸನೆ, ಮೂರನೆಯದು ತಾಮಸೀಯ ಉಪಾಸನೆಯು ಒಂದನೆಯದಾದ ಸಾತ್ವಕೀಯ ಉಪಾಸನೆಯು ಬಹಳ ಶ್ರೇಷ್ಠವಾದುದು. ಎರಡನೆಯದಾದ ರಾಜಸೀಯ ಉಪಾಸನೆಯು ಮಧ್ಯಮವಾದುದು. ಮೂರನೆಯದಾದ ತಾಮಸೀಯ ಉಪಾಸನೆಯು ಬಹು ನಿಂದಿತವಾದುದು.

೧೯-೨೦. ಭೂತ, ಭೇತಾಳ, ಕೂಶ್ಮಾಂಡ, ಪಿಶಾಚಗಳನ್ನು ಉದ್ದೇಶಿಸಿ ಮಾಡತಕ್ಕ ಉಪಾಸನೆಯು ಘೋರವಾದುದು. ಇದೇ ತಾಮಸೀಯ ಉಪಾಸನೆಯು, ದೇವತೆಗಳನ್ನು ಉಪಾಸನೆ ಮಾಡುವುದು ಸಾತ್ವಕೀಯ ಉಪಾಸನೆ ಎಂದೆನಿಸಿಕೊಳ್ಳುವುದು. ಯಕ್ಷರು, ರಾಕ್ಷಸರು, ಇವರನ್ನು ಉಪಾಸನೆ ಮಾಡುವುದು ರಾಜಸೀಯ ಉಪಾಸನೆಯೆಂದೆನಿಸಿಕೊಳ್ಳುವುದು.

೨೧. ಶೈವ, ಗಾಣೇಶ, ಸೌರ, ಶಾಕ್ತ ವೈಷ್ಣವ, ಎಂಬುದಾಗಿ ಈ ಐದು ರೀತಿಯಲ್ಲಿ ದೇವತೆಗಳ ಅವತಾರಗಳು ಅನೇಕ ರೀತಿಯಾಗಿವೆ. ಅವುಗಳ ಉಪಾಸನೆಗಳನ್ನು ಗುರುವಿನ ಉಪದೇಶ ಮಾರ್ಗದಿಂದ ತಿಳಿದುಕೊಳ್ಳಬೇಕು.

ಪಂಚನಾಮವತಾರೇಷು ವಿಷ್ಣೋರೇವ ವದಾಮ್ಯಹಂ ।
ಚತುಶ್ಚತ್ವಾರಿಂಶನ್ಮಿತಾನವತಾರಾನ್ ಮಹೋತ್ತಮಾನ್ ॥ ೨೨ ॥

ಪುರುಷೋತ್ತಮೋ ವಿಧಿಶ್ಚೈವ ರುದ್ರೋ ನಾರಾಯಣಸ್ತ್ರಿಧಾ ।
ಹಂಸೋಥ ದತ್ತಾತ್ರೇಯಶ್ಚ ಕುಮಾರೋ ಋಷಭಸ್ತಥಾ ॥ ೨೩ ॥

ಹಯಗ್ರೀವಸ್ತಥಾ ಮತ್ಸ್ಯಃ ಕೂರ್ಮೋ ವಾರಾಹ ಏವ ಚ ।
ನಾರಸಿಂಹೋ ವಾಮನಶ್ಚ ಜಾಮದಗ್ನ್ಯಸ್ತಥೈವ ಚ ॥ ೨೪ ॥

ರಾಮಃ ಕೃಷ್ಣಸ್ತಥಾ ಬೌದ್ಧಃ ಕಲ್ಕಿರ್ಯಜ್ಞೋ ಹರಿಸ್ತಥಾ ।
ವಾಲಖಿಲ್ಯೋದ್ಧಾರಕಶ್ಚ ಪೃಥುರ್ಧನ್ವಂತರಿಸ್ತಥಾ ॥ ೨೫ ॥

ಮೋಹಿನೀ ನಾರದೋ ವ್ಯಾಸೋ ಕಪಿಲಃ ಕೇಶವಸ್ತಥಾ ।
ಮಾಧವಶ್ಚಾಥ ಗೋವಿಂದೋ ಮಧುಸೂದನ ಏವ ಚ ॥ ೨೬ ॥

ತ್ರಿವಿಕ್ರಮಃ ಶ್ರೀಧರಶ್ಚ ಪದ್ಮನಾಭಸ್ತಥಾ ಸ್ಮೃತಃ ।
ದಾಮೋದರಸ್ತಥಾ ಸಂಕರ್ಷಣಃ ಪ್ರದ್ಯುಮ್ನ ಏವ ಚ ॥ ೨೭ ॥

ಅನಿರುದ್ಧೋಽಧೋಕ್ಷಜಶ್ಚ ಹ್ಯಚ್ಯುತಶ್ಚ ಜನಾರ್ದನಃ ।
ಉಪೇಂದ್ರಶ್ಚ ಹೃಷೀಕೇಶಸ್ತ್ವೇತೇ ಜ್ಞೇಯಾ ಮಹತ್ತಮಾಃ ॥ ೨೮ ॥

---

೨೨. ಈ ಐದು ಬಗೆಯಾದ ಅವತಾರಗಳಿದ್ದರೂ ಅವುಗಳಲ್ಲಿ ವಿಷ್ಣುವು ಮಾಡಿರುವ ಅವತಾರಗಳನ್ನೇ ನಾನು ಹೇಳುತ್ತೇನೆ. ಈ ವಿಷ್ಣುವಿನ ಅವತಾರಗಳಲ್ಲಿ ನಾಲ್ವತ್ತು ನಾಲ್ಕು ಅವತಾರಗಳು ಮಹತ್ವವುಳ್ಳವು. ಅವನ್ನು ನಾನು ನಿನಗೆ ಹೇಳುತ್ತೇನೆ.

೨೩-೨೮. ಪುರುಷೋತ್ತಮ, ವಿಧಿ, ರುದ್ರ, ನಾರಾಯಣ, ಹಂಸ, ದತ್ತಾತ್ರೇಯ, ಕುಮಾರ ರುಷಭ, ಹಯಗ್ರೀವ, ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಜಾಮದಗ್ನ್ಯ, ರಾಮ, ಕೃಷ್ಣ, ಬೌದ್ಧ, ಕಲ್ಕಿ, ಯಜ್ಞ, ಹರಿ, ವಾಲಖಿಲ್ಯೋದ್ಧಾರಕ, ಪೃಥು, ಧನ್ವಂತರಿ, ಮೋಹಿನಿ, ನಾರದ, ವ್ಯಾಸ, ಕಪಿಲ, ಕೇಶವ, ಮಾಧವ, ಗೋವಿಂದ, ಮಧುಸೂದನ, ತ್ರಿವಿಕ್ರಮ, ಶ್ರೀಧರ, ಪದ್ಮನಾಭ ದಾಮೋದರ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ಅಧೋಕ್ಷಜ, ಅಚ್ಯುತ, ಜನಾರ್ದನ, ಉಪೇಂದ್ರ, ಹೃಷೀಕೇಶ, ಇವುಗಳು ನಾಲ್ವತ್ತು ನಾಲ್ಕು ಮಹತ್ತಮವಾದ ಅವತಾರಗಳೆಂದು ತಿಳಿಯಬೇಕು

ಮತ್ಸ್ಯಾದ್ಯಾ ಅವತಾರಾಶ್ಚ ದಶೈತೇಷ್ವಪಿ ಚೋತಮಾಃ ।
ದ್ವಾದಶಾವತಾರಮಧ್ಯೇ ಹಿ ರಾಮಕೃಷ್ಣೌ ಮಹಾತ್ತಮೌ ॥ ೨೯ ॥

ತಾಭ್ಯಾಮಪಿ ವರಃ ಪೂರ್ವಸ್ಸತ್ಯಸಂಧೋರಘೂತ್ತಮಃ ।
ಏಕಪತ್ನೀವ್ರತಪರಸ್ತ್ವೇಕಬಾಣೋ ನೃಪೋತ್ತಮಃ ॥ ೩೦ ॥

ಸಪ್ತದ್ವೀಪಪತಿಃ ಶ್ರೀಮಾ‌ಛತ್ರಚಾಮರರಾಜಿತಃ ।
ಏವಂ ಜ್ಞಾತ್ವೋಪಾಸನಾತ್ರ ಗ್ರಾಹ್ಯಾ ಶ್ರೀರಾಘವಸ್ಯ ಚ ॥ ೩೧ ॥

ಗುರೂಪದಿಷ್ಟ ವಿಧಿನಾ ಸುಮುಹೂರ್ತೇ ಶುಭಸ್ಥಲೇ ।
ಅಥವಾ ತತ್ತದ್ದೇವಾನಾಂಗ್ರಾಹ್ಯಾ ತಜ್ಜನ್ಮಸತ್ತಿಥೌ ॥ ೩೨ ॥

ಚೈತ್ರೇ ಮಾಸೇ ಸಿತೇ ಪಕ್ಷೇ ನವಮ್ಯಾಂ ರಾಮಜನ್ಮನಿ ।
ಉಪಾಸನಾನಂತರಂ ಹಿ ರಾಮಂ ಭಕ್ತ್ಯಾ ಪ್ರಪೂಜಯೇತ್ ॥ ೩೩ ॥

---

೨೯. ಈ ಅವತಾರಗಳಲ್ಲಿಯೂ ಕೂಡ ಮತ್ಸ್ಯಾವತಾರವೇ ಮುಂತಾದ ಪ್ರಸಿದ್ಧವಾದ ಹತ್ತು ಅವತಾರಗಳು ಉತ್ತಮವಾದುವು. ಈ ದಶಾವತಾರಗಳಲ್ಲಿಯೂ ರಾಮ ಮತ್ತು ಕೃಷ್ಣಾವತಾರಗಳು ಬಹು ಉತ್ತಮವಾದುವು.

೩೦. ಈ ರಾಮಕೃಷ್ಣಾವತಾರಗಳೆರಡರಲ್ಲಿಯೂ ಮೊದಲನೆಯದಾದ ರಾಮಾವತಾರವು ಶ್ರೇಷ್ಠವಾದುದು. ಆ ರಾಮನು ಸತ್ಯಸಂಧನು. ಏಕಪತ್ನೀವ್ರತದವನು. ಒಂದೇ ಬಾಣವನ್ನು ತೊಡುವವನು. ರಾಜಶ್ರೇಷ್ಠನು.

೩೧ ಸಪ್ತದ್ವೀಪಗಳಿಗೂ ಒಡೆಯನು. ಶ್ರೀಮಂತನು. ಛತ್ರಚಾಮರಗಳಿಂದ ಶೋಭಿತನು. ಇದೆಲ್ಲವನ್ನೂ ತಿಳಿದುಕೊಂಡು ಆ ರಾಘವನ ಉಪಾಸನೆಯನ್ನು ಹೆಚ್ಚಾಗಿ ಮಾಡಬೇಕು.

೩೨. ಒಳ್ಳೆಯ ಮುಹೂರ್ತದಲ್ಲಿ ಒಳ್ಳೆಯ ಸ್ಥಳದಲ್ಲಿ, ಗುರುವು ಹೇಳಿಕೊಟ್ಟ ರೀತಿಯಲ್ಲಿ, ಆ ಉಪಾಸನೆಯನ್ನು ಸ್ವೀಕರಿಸಬೇಕು. ಅಥವಾ ಆಯಾಯ ದೇವತೆಗಳ ಜನ್ಮ ತಿಥಿಗಳಲ್ಲಿ ಆಯಾಯ ದೇವತೆಗಳ ಉಪಾಸನೆಯನ್ನು ಸ್ವೀಕರಿಸಬೇಕು.

೩೩. ಚೈತ್ರಮಾಸದ ಶುಕ್ಲಪಕ್ಷದ ನವಮಿಯು ರಾಮನು ಹುಟ್ಟಿದ ದಿವಸವು. ಆ ದಿನ ಉಪವಾಸವನ್ನು ಮಾಡಿ ಆಮೇಲೆ ರಾಮನನ್ನು ಭಕ್ತಿಯಿಂದ ಪೂಜಿಸಬೇಕು.

ಏವಂ ಯಸ್ಯಾವತಾರಸ್ಯ ಗೃಹೀತೋಪಾಸನಾ ನರೈಃ ।
ತೈಸ್ತಸ್ಯ ಜನ್ಮದಿವಸೇ ಕಾರ್ಯಾ ಪೂಜಾ ಮಹೋತ್ಸವೈಃ ॥ ೩೪ ॥

ಅಥ ದಶಾವತಾರಾಣಾಂ ಶಿಷ್ಯ ಜನ್ಮದಿನಾನಿ ತೇ ।
ಪ್ರೋಚ್ಯಂತೇಽತ್ರ ಶೃಣು ತ್ವಂ ಹಿ ಯೇಷು ತಾನ್ಪೂಜಯೇಜ್ಜನಾಃ ॥ ೩೫ ॥

ಚೈತ್ರೇ ತು ಶುಕ್ಲಪಂಚಮ್ಯಾಂ ಭಗವಾನ್ಮೀನರೂಪಧೃತ್ ।
ಜ್ಯೇಷ್ಠೇ ತು ಶುಕ್ಲದ್ವಾದಶ್ಯಾಂ ಕೂರ್ಮರೂಪಧರೋ ಹರಿಃ ॥ ೩೬ ॥

ಚೈತ್ರಕೃಷ್ಣನವಮ್ಯಾಂ ತು ಹರಿರ್ವಾರಾಹರೂಪಧೃಕ್ ।
ವೈಶಾಖೇಭೂಚ್ಚತುರ್ದಶ್ಯಾಂ ಶುಕ್ಲಪಕ್ಷೇ ನೃಕೇಸರೀ ॥ ೩೭ ॥

ಮಾಸಿ ಭಾದ್ರಪದೇ ಶುಕ್ಲೇ ದ್ವಾದಶ್ಯಾಂ ವಾಮನಸ್ತ್ವಭೂತ್ ।
ವೈಶಾಖೇ ಜಾಮದಗ್ನ್ಯಸ್ತು ತೃತೀಯಾಯಾಂ ಸಿತೇತ್ವಭೂತ್ ॥ ೩೮ ॥

ಚೈತ್ರಶುಕ್ಲನವಮ್ಯಾಂ ತು ಮಧ್ಯಾಹ್ನೇ ರಾಘವಸ್ತ್ವಭೂತ್ ।
ಕೃಷ್ಣಾಷ್ಟಮ್ಯಾಂ ಶ್ರಾವಣೇ ಹಿ ಕೃಷ್ಣೋಭೂನ್ಮಥುರಾಪುರಿ ॥ ೩೯ ॥

---

೩೪. ಇದೇ ರೀತಿಯಾಗಿ ಯಾವ ದೇವರ ಉಪಾಸನೆಯನ್ನು ಯಾವನು ಹಿಡಿಯುವನೋ ಅವನು ಆ ದೇವರ ಜನ್ಮ ದಿವಸದಲ್ಲಿ ಮಹೋತ್ಸವವನ್ನು ಮಾಡಬೇಕು. ಆ ದಿನದಲ್ಲಿ ಉಪಾಸನೆಯನ್ನು ಹೊಸದಾಗಿ ಹಿಡಿಯಬಹುದು.

೩೫. ಎಲೈ ಶಿಷ್ಯನೇ! ದಶಾವತಾರಗಳ ಜನ್ಮ ದಿನಗಳನ್ನು ನಿನಗೆ ಹೇಳುತ್ತೇನೆ. ಅದರಲ್ಲಿ ಆಯಾ ದೇವರನ್ನು ಮನುಷ್ಯನು ಪೂಜಿಸಬೇಕು.

೩೬-೪೦ ಚೈತ್ರ ಶುದ್ಧ ಪಂಚಮಿಯ ದಿವಸದಲ್ಲಿ ಆ ಮತ್ಸ್ಯಾವತಾರವನ್ನು ಮಾಡಿದನು. ಜೇಷ್ಠ ಶುದ್ಧ ದ್ವಾದಶಿಯ ದಿವಸ ಕೂರ್ಮ (ಆಮೆ) ವತಾರವನ್ನು ಮಾಡಿದನು. ಚೈತ್ರ ಬಹುಳ ನವಮಿಯ ದಿವಸ ವರಹಾವತಾರವನ್ನು ಮಾಡಿದನು. ವೈಶಾಖ ಶುದ್ಧ ಚತುರ್ಥಿಯ ದಿವಸ ನರಸಿಂಹಾವತಾರವು ಆಯಿತು ಭಾದ್ರಪದ ಶುದ್ಧ ದ್ವಾದಶಿಯ ದಿವಸ ವಾಮನಾವತಾರವಾಯಿತು. ವೈಶಾಖ ಶುದ್ಧ ತದಿಗೆಯ ದಿವಸ ಪರಶುರಾಮಾವತಾರವು ನಡೆಯಿತು. ಚೈತ್ರ ಶುದ್ಧ ನವಮಿಯ ದಿವಸ ಮಧ್ಯಾಹ್ನದಲ್ಲಿ ಹರಿಯು ರಾಮಾವತಾರವನ್ನು ಮಾಡಿದನು.

ಪೌಷಶುಕ್ಲಾ ಸಪ್ತಮೀ ಯಾ ಬುದ್ಧಜನ್ಮತಿಥಿಸ್ತು ಸಾ ।
ಮಾಘಶುಕ್ಲತೃತೀಯಾ ತು ಕಲ್ಕಿನಸ್ಸಾತಿಥಿಸ್ಸ್ಮೃತಾ ॥ ೪೦ ॥

ಅಹ್ನೋ ಮಧ್ಯೇ ವಾಮನೋ ರಾಮರಾಮೌ ।
ಮತ್ಸ್ಯಃ ಕ್ರೋಡಶ್ಚಾಪರಾಹ್ಣೇ ವಿಭಾಗೇ ।
ಕೂರ್ಮಸ್ಸಿಂಹೋ ಬುದ್ಧಕಲ್ಕೀ ಚ ಸಾಯಂ ।
ಕೃಷ್ಣೋ ರಾತ್ರೌ ಕಾಲಸಾಮ್ಯೇ ಚ ಪೂರ್ವೇ ॥ ೪೧ ॥

ಏವಂ ತಜ್ಜನ್ಮಕಾಲಾಂಶ್ಚ ಜ್ಞಾತ್ವಾ ತೇಷಾಮುಪಾಸಕೈಃ ।
ಉತ್ಸವಃ ಪರಮಃ ಕಾರ್ಯಸ್ತತ್ತದ್ದೇವಪ್ರಪೂಜನೇ ॥ ೪೨ ॥

ನಿತ್ಯಪೂಜಾ ಪ್ರಕರ್ತವ್ಯಾ ಭಕ್ತ್ಯಾ ತೇಷಾಮುಪಾಸಕೈಃ ।
ವಿಶೇಷಾಜ್ಜನ್ಮದಿವಸೇ ಕಾರ್ಯಂ ತತ್ಪೂಜನಂ ಮುದಾ ॥ ೪೩ ॥

ಶ್ರಾವಣ ಕೃಷ್ಣ ಅಷ್ಟಮಿಯ ದಿವಸ ಮಧುರಾ ಪುರಿಯಲ್ಲಿ ಕೃಷ್ಣಾವತಾರ ವಾಯಿತು. ಪುಷ್ಯ ಶುದ್ಧ ಸಪ್ತಮಿಯ ದಿವಸ ಬುದ್ಧನು ಜನ್ಮವೆತ್ತಿದನು.

೪೧. ವಾಮನಾವತಾರ, ಶ್ರೀರಾಮಾವತಾರ, ಪರಶುರಾಮಾವತಾರಗಳು ಮಧ್ಯಾಹ್ನದ ಸಮಯದಲ್ಲಿ ನಡೆದುವು. ಮತ್ಸ್ಯಾವತಾರವೂ, ವರಹಾವತಾರವೂ ಅಪರಾಹ್ಣದ ಸಮಯದಲ್ಲಿ ನಡೆದುವು. ಕೂರ್ಮಾವತಾರ, ನರಸಿಂಹಾವತಾರ, ಬುದ್ಧ, ಕಲ್ಕಿ ಅವತಾರಗಳು ಸಾಯಂಕಾಲದಲ್ಲಿ ನಡೆದುವು. ಕೃಷ್ಣಾವತಾರವು ರಾತ್ರಿಯಲ್ಲಿ ನಡೆಯಿತು. ಈ ಅವತಾರಗಳಲ್ಲಿ ತಿಥಿಯ ವ್ಯಾಪನೆಯು ಎರಡು ದಿನಗಳಿದ್ದರೆ ಮೊದಲನೆಯ ದಿನಗಳಲ್ಲಿಯೇ ಈ ವ್ರತಗಳನ್ನು ಆಚರಿಸಬೇಕು.

೪೨. ಈ ರೀತಿಯಾಗಿ ದೇವರ ಜನ್ಮ ಕಾಲಗಳನ್ನು ತಿಳಿದು ಅವರವರ ಉಪಾಸಕರು ಆಯಾ ದೇವರ ಉತ್ಸವಗಳನ್ನೂ ಆ ದೇವರ ಪೂಜೆಗಳನ್ನೂ ಮಾಡಬೇಕು.

೪೩. ಇದೂ ಅಲ್ಲದೆ ಉಪಾಸಕರು ಆಯಾ ದೇವರುಗಳಿಗೆ ನಿತ್ಯವೂ ಪೂಜೆಗಳನ್ನು ಮಾಡಬೇಕು. ಆದರೆ ಜನ್ಮದಿವಸಗಳಲ್ಲಿ ವಿಶೇಷ ಪೂಜೆಗಳನ್ನು ಉತ್ಸವಗಳನ್ನೂ ಮಾಡಬೇಕು.

ಗುರೋರ್ಗೃಹೀತೋ ಯೋ ಮಂತ್ರಸ್ತನ್ನಿತ್ಯಂ ಹೃದಯೇ ಜಪೇತ್ ।
ರಾಮಮಂತ್ರಾಸ್ತ್ವನೇಕಾಶ್ಚ ಶತವರ್ಣಾತ್ಮಕೋ ಮನುಃ ॥ ೪೪ ॥

ಪಂಚಾಶದ್ವರ್ಣಕಶ್ಚಾಪಿ ದ್ವಿಚತ್ವಾರಿಂಶದಕ್ಷರಃ ।
ದ್ವಾತ್ರಿಂಶದಕ್ಷರಶ್ಚಾಥ ಸಪ್ತವಿಂಶಾಕ್ಷರಸ್ತಥಾ ॥ ೪೫ ॥

ಪಂಚವಿಂಶದ್ವರ್ಣಕಶ್ಚ ಚತುರ್ವಿಂಶಾಕ್ಷರಸ್ತಥಾ ।
ಏಕವಿಂಶದ್ವರ್ಣಕಶ್ಚ ವಿಂಶದ್ವರ್ಣಾತ್ಮಕಸ್ತಥಾ ॥ ೪೬ ॥

ಅಷ್ಟಾದಶವರ್ಣಕಶ್ಚ ಷೋಡಶಾಕ್ಷರ ಏವ ಚ ।
ಪಂಚದಶವರ್ಣಕಶ್ಚ ಚತುರ್ದಶಾಕ್ಷರಸ್ತಥಾ ॥ ೪೭ ॥

ತ್ರಯೋದಶಾಕ್ಷರಶ್ಚಾಪಿ ದ್ವಾದಶಾಕ್ಷರ ಏವ ಚ ।
ಏಕಾದಶಾಕ್ಷರಶ್ಚಾಪಿ ತಥಾಮಂತ್ರೋ ದಶಾಕ್ಷರಃ ॥ ೪೮ ॥

ನವಾಕ್ಷರೋಽಷ್ಟವರ್ಣಾತ್ಮಾ ಸಪ್ತಾಕ್ಷರಮನುಸ್ತಥಾ ।
ಷಡಕ್ಷರೋ ರಾಮಮಂತ್ರಸ್ತಥಾ ಪಂಚಾಕ್ಷರೋ ಮನುಃ ॥ ೪೯ ॥

ಚತುರ್ವರ್ಣಾತ್ಮಕಶ್ಚಾಪಿ ತಥಾ ವರ್ಣತ್ರಯಾತ್ಮಕಃ ।
ದ್ವ್ಯಕ್ಷರೋ ರಾಮಮಂತ್ರಶ್ಚ ಮನುಸ್ತ್ವೇಕಾಕ್ಷರೋಽಪಿ ಚ ॥ ೫೦ ॥

---

೪೪. ಗುರುವಿನಿಂದ ಉಪದೇಶ ತೆಗೆದುಕೊಂಡ ಮಂತ್ರವನ್ನು ನಿತ್ಯವೂ ಮನಸ್ಸಿನಲ್ಲಿಯೇ ಜಪಿಸುತ್ತಿರಬೇಕು. ಶ್ರೀರಾಮನ ಮಂತ್ರಗಳು ಅನೇಕವಾಗಿವೆ ಅವುಗಳಲ್ಲಿ ಒಂದು ನೂರು ಅಕ್ಷರಗಳುಳ್ಳ ಮಂತ್ರಗಳೂ ಇವೆ.

೪೫-೫೧. ಅಂತೆಯೇ ಐವತ್ತು, ನಾಲ್ವತ್ತೆರಡು, ಮೂವತ್ತೆರಡು, ಇಪ್ಪತ್ತೇಳು, ಇಪ್ಪತ್ತೈದು, ಇಪ್ಪತ್ತ ನಾಲ್ಕು, ಇಪ್ಪತ್ತೊಂದು, ಇಪ್ಪತ್ತು, ಹದಿನೆಂಟು ಹದಿನಾರು, ಹದಿನೈದು, ಹದಿನಾಲ್ಕು, ಹದಿಮೂರು, ಹನ್ನೆರಡು, ಹನ್ನೊಂದು, ಹತ್ತು, ಒಂಭತ್ತು, ಎಂಟು, ಏಳು, ಆರು, ಐದು, ನಾಲ್ಕು, ಮೂರು, ಎರಡು, ಒಂದು, ಈ ರೀತಿಯಾದ ಅಕ್ಷರ ಸಂಖ್ಯೆಯುಳ್ಳ ರಾಮ ಮಂತ್ರಗಳು ನೂರರ

ಏವಂ ನಾನಾವಿಧಾ ಮಂತ್ರಾಶ್ಶತಶೋಽಥ ಸಹಸ್ರಶಃ ।
ಗುರೋಸ್ತ್ವೇಕೋ ಗೃಹೀತ್ವಾತ್ರ ಜಪೇಚ್ಛ್ರೀರಾಮಸನ್ನಿಧೌ ॥ ೫೧ ॥

ಉಪಾಸನಾವಿಧಾನಂ ಚ ರಾಮೋಪಾಸಕಮಾನವೈಃ ।
ತಥಾ ಮಂತ್ರಸ್ಯ ರೂಪಂ ಹಿ ವಿಜ್ಞೇಯಂ ಮಂತ್ರಶಾಸ್ತ್ರತಃ ॥ ೫೨ ॥

ಅಧುನಾ ಮಾನಸೀಪೂಜಾವಿಧಾನಂ ಚ ಮಯೋಚ್ಯತೇ ।
ಯದ್ದಂಡಕೇ ಸುತೀಕ್ಷ್ಣಾಯ ಕಥಿತಂ ಕುಂಭಜನ್ಮನಾ ॥ ೫೩ ॥

ಸುತೀಕ್ಷ್ಣಸ್ತ್ವೇಕದಾಗಸ್ತ್ಯಂ ದೃಷ್ಟ್ವಾ ರಹಸಿ ಸಂಸ್ಥಿತಂ ।
ಪ್ರಣಮ್ಯ ಪರಯಾ ಭಕ್ತ್ಯಾ ಪ್ರೋವಾಚ ವಿನಯಾನ್ವಿತಃ ॥ ೫೪ ॥

॥ ಸತೀಕ್ಷ್ಣ ಉವಾಚ ॥

ಹೃದಯೇ ಮಾನಸೀ ಪೂಜಾ ಕೀದೃಶೀ ಚ ವದ ಪ್ರಭೋ ।
ಉಪಚಾರೈಃ ಕತಿವಿಧೈಃ ಪೂಜ್ಯತೇ ರಘುನಂದನ ॥ ೫೫ ॥

ರೀತಿಯಲ್ಲಿಯೋ ಅನೇಕವಾಗಿವೆ. ಇವುಗಳಲ್ಲಿ ಯಾವುದಾದರೂ ಒಂದನ್ನು ಗುರುವಿನಿಂದ ಉಪದೇಶವನ್ನು ತೆಗೆದುಕೊಂಡು ಅದನ್ನು ರಾಮನ ಸನ್ನಿಧಿಯಲ್ಲಿ ಜಪಿಸಬೇಕು.

೫೨. ಈ ಉಪಾಸನಾ ವಿಧಾನವನ್ನು ರಾಮಮಂತ್ರೋಪಾಸಕರಿಂದ ತಿಳಿದುಕೊಳ್ಳಬೇಕು. ಮಂತ್ರ ಸ್ವರೂಪವನ್ನು ಮಂತ್ರ ಶಾಸ್ತ್ರದಿಂದ ತಿಳಿದುಕೊಳ್ಳಬೇಕು.

೫೩. ಈ ನಾನು ನಿನಗೆ ಮಾನಸ ಪೂಜೆಯ ವಿಧಾನವನ್ನು ಹೇಳುತ್ತೇನೆ. ಈ ವಿಷಯವನ್ನು ಅಗಸ್ತ್ಯನು ಸುತೀಕ್ಷ್ಣನಿಗೆ ಹೇಳಿರುವನು.

೫೪, ಅಗಸ್ತ್ಯನು ಒಂದು ಸಾರಿ ಏಕಾಂತದಲ್ಲಿ ಕುಳಿತಿರಲು ಸುತೀಕ್ಷ್ಣನು ಅವನನ್ನು ನೋಡಿ ಭಕ್ತಿಯಿಂದ ನಮಸ್ಕರಿಸಿ ವಿನಯದಿಂದ ನಿಂತುಕೊಂಡು ಇಂತೆಂದನು.

ಅಗಸ್ತ್ಯನು ಉಪದೇಶಮಾಡಿದ ರಾಮೋಪಾಸನಾ ವಿಧಿಯು

೫೫. ಸುತೀಕ್ಷ್ಣನು ಹೇಳಿದನು:— ಎಲೈ ಮಹಾತ್ಮನೇ! ಹೃದಯದಲ್ಲಿಯೇ ಮಾನಸ ಪೂಜೆಯನ್ನು ಮಾಡುತ್ತಾರೆಂದೆನ್ನುವರಲ್ಲ! ಅದು ಹೇಗೆ? ಹೇಳು. ಯಾವ ವಿಧವಾದ ಉಪಚಾರಗಳಿಂದ ಎಷ್ಟು ವಿಧವಾಗಿ ಆ ಸ್ವಾಮಿಯನ್ನು ಪೂಜಿಸಬೇಕು.

|| ಅಗಸ್ತ್ಯ ಉವಾಚ ||

ರಾಮಂ ಪದ್ಮವಿಶಾಲಾಕ್ಷಂ ಕಾಲಾಂಬುಧಸಮಪ್ರಭಂ ।
ಸ್ಮಿತವಕ್ತ್ರಂ ಸುಖಾಸೀನಂ ಚಿಂತಯೇಚ್ಚಿತ್ತಪುಷ್ಕರೇ || ೫೬ ||

ರಾಗೇಣ ಕಲುಷಂ ಚಿತ್ತಂ ವೈರಾಗ್ಯೇಣ ಸುನಿರ್ಮಲಂ ।
ಕೃತ್ವಾ ಧ್ಯಾಯೇತ್ಸದಾ ರಾಮಂ ಭವಬಂಧವಿಮುಕ್ತಯೇ || ೫೭ ||

ಪ್ರಾತರುತ್ಥಾಯ ಸುಭರ್ಗತ್ವಾ ಶೌಚಾದಿಭಿರತಂದ್ರಿತಃ ।
ವಿವಿಕ್ತದೇಶಮಾಶ್ರಿತ್ಯ ಧ್ಯಾನಂ ಪೂಜಾಂ ಸಮಾರಭೇತ್ || ೫೮ ||

ನಾಭಿಕಂದಸಮುದ್ಭೂತಂ ಕದಲೀಕುಸುಮೋಪಮಂ ।
ಅಷ್ಟಪತ್ರಂ ಸ್ನಿಗ್ಧವರ್ಣಂ ಧ್ಯಾಯೇತ್ ಹೃದಯಪಂಕಜಂ || ೫೯ ||

---

೫೬. ಅಗಸ್ತ್ಯನು ಹೇಳಿದನು:— ಎಲೈ ಶಿಷ್ಯನೇ! ಪದ್ಮದಂತೆ ವಿಶಾಲವಾದ ಕಣ್ಣುಗಳುಳ್ಳ ನೀಲಮೇಘಶ್ಯಾಮನಾದ ನಗುಮುಖವುಳ್ಳ ಸುಖವಾಗಿ ಕುಳಿತಿರುವ ಶ್ರೀರಾಮನನ್ನು ಹೃದಯ ಜಲದಲ್ಲಿ ಧ್ಯಾನಿಸಬೇಕು.

೫೭. ರಾಗದ್ವೇಷಾದಿಗಳನ್ನು ಬಿಟ್ಟು ವೈರಾಗ್ಯದಿಂದ ಮನಸ್ಸನ್ನು ನಿರ್ಮಲವನ್ನಾಗಿ ಮಾಡಿಕೊಂಡು ಅಂತಹ ಮನಸ್ಸಿನಲ್ಲಿ ಆ ಶ್ರೀರಾಮನನ್ನು ಧ್ಯಾನಿಸಿದರೆ ಸಂಸಾರವೆಂಬ ಬಂಧನದಿಂದ ಮುಕ್ತನಾಗುವನು.

೫೮. ಪ್ರಾತಃಕಾಲದಲ್ಲಿ ಎದ್ದು ಶೌಚಾದಿಗಳನ್ನು ಆಲಸ್ಯ ಪಡದೆ ಮಾಡಿಕೊಂಡು ಶುದ್ಧ ದೇಹವುಳ್ಳವನಾಗಿ ಯಾರೂ ಇಲ್ಲದಿರುವ ಪ್ರದೇಶಕ್ಕೆ ಹೋಗಿ ಧ್ಯಾನವನ್ನು ಮಾಡಬೇಕು. ಪೂಜೆಯನ್ನು ಮಾಡಬೇಕು.

೫೯. ಉಪಾಸಕನು ಮೊದಲು ಹೃದಯ ಕಮಲವನ್ನು ನಾಭಿ(ಹೊಕ್ಕಳು)ಯಿಂದ ಮೇಲಕ್ಕೆ ಬಂದ ಬಾಳೆಯ ಹೂವಿನಂತೆ ಭಾವಿಸಿ ಅದು ಎಂಟು ದಳಗಳಿಂದ ಕೂಡಿರುವಂತೆಯೂ ಮನೋಹರವಾದ ವರ್ಣವಿರುವಂತೆಯೂ ಭಾವಿಸಬೇಕು.

ತತ್ಪದ್ಮಂ ರಾಮನಾಮ್ನೈವ ಫುಲ್ಲಂ ಕೃತ್ವಾಸ್ಯ ಮಧ್ಯಮೇ ।
ಭಾವಯೇತ್ಸೂರ್ಯಸೋಮಾಗ್ನಿಮಂಡಲಾನ್ಯುತ್ತರೋತ್ತರಂ ॥ ೬೦ ॥

ತಸ್ಯೋಪರಿ ನ್ಯಸೇದ್ದಿವ್ಯಂ ಪೀಠಂ ರತ್ನಮಯೋಜ್ಜ್ವಲಂ ।
ತನ್ಮಧ್ಯೇ ರಾಘವಂ ಧ್ಯಾಯೇತ್ಸೂರ್ಯಕೋಟಿಸಮಪ್ರಭಂ ॥ ೬೧ ॥

ಇಂದೀವರನಿಭಂ ಶಾಂತಂ ವಿಶಾಲಾಕ್ಷಂ ಸುವಕ್ಷಸಂ ।
ಉದ್ಯದ್ದೀಧಿತಿಮದ್ಭಾಸ್ವತ್ಕುಂಡಲಾಭ್ಯಾಂ ವಿರಾಜಿತಂ ॥ ೬೨ ॥

ಸುನಾಸಂ ಸುಕಿರೀಟಂ ಚ ಸುಕಪೋಲಂ ಶುಚಿಸ್ಮಿತಂ ।
ವಿಜ್ಞಾನಮುದ್ರಂ ದ್ವಿಭುಜಂ ಕಂಬುಗ್ರೀವಂ ಸುಕುಂತಲಂ ॥ ೬೩ ॥

---

೬೦. ಆ ಪದ್ಮವನ್ನು ರಾಮ ನಾಮದಿಂದ ವಿಕಸಿತವನ್ನಾಗಿ ಮಾಡಿ ಅದರ ಮಧ್ಯದಲ್ಲಿ ಮೊದಲು ಸೂರ್ಯಮಂಡಲವನ್ನೂ ಅದರ ಮೇಲೆ ಚಂದ್ರಮಂಡಲವನ್ನೂ ಅದರ ಮೇಲೆ ಅಗ್ನಿ ಮಂಡಲವನ್ನೂ ಧ್ಯಾನಿಸಬೇಕು.

೬೧. ಅದರ ಮೇಲೆ ರತ್ನಮಯವಾದ, ಪ್ರಕಾಶಮಾನವಾದ ಸಿಂಹಾಸನವನ್ನು ಇಟ್ಟಿರುವಂತೆ ಧ್ಯಾನಿಸಬೇಕು. ಅದರ ಮಧ್ಯದಲ್ಲಿ ಕೋಟಿಸೂರ್ಯಪ್ರಕಾಶನಾದ ರಾಮನು ಕುಳಿತಿರುವಂತೆ ಧ್ಯಾನಿಸಬೇಕು.

೬೨-೬೩. ಅವನು ನೈದಿಲೆಯಂತೆ ನೀಲಿಯ ಬಣ್ಣದವನಾಗಿಯೂ, ಶಾಂತನಾಗಿಯೂ, ವಿಶಾಲವಾದ ಕಣ್ಣುಳ್ಳವನಾಗಿಯೂ' ಚೆನ್ನಾಗಿರುವ ಎದೆಯುಳ್ಳವನಾಗಿಯೂ, ಆಗತಾನೆ ಹುಟ್ಟುತ್ತಿರುವ ಸೂರ್ಯನಂತೆ ಕಾಂತಿಯುಳ್ಳ ಕರ್ಣಕುಂಡಲದಿಂದ ಕೂಡಿದವನಾಗಿಯೂ, ಒಳ್ಳೆಯ ಮೂಗೂ, ಒಳ್ಳೆಯ ಕಿರೀಟವೂ, ಒಳ್ಳೆಯ ಕಪೋಲವೂ, ಇರಬೇಕು- ಅವನು ನಗುತ್ತಿರಬೇಕು. ವಿಜ್ಞಾನ ಮುದ್ರೆಯಿಂದ ಕೂಡಿರಬೇಕು. ಎರಡು ಭುಜಗಳಿರಬೇಕು. ಶಂಖದಂತೆ ಕತ್ತಿರಬೇಕು. ಒಳ್ಳೆಯ ತಲೆ ಕೂದಲಿರಬೇಕು.

ನಾನಾರತ್ನಮಯೈರ್ದಿವ್ಯಹಾರೈರ್ಭೂಷಿತಮವ್ಯಯಂ ।
ವಿದ್ಯುತ್ಪುಂಜಪ್ರತೀಕಾಶಂ ವಸ್ತ್ರಯುಗ್ಮಧರಂ ಹರಿಂ ॥ ೬೪ ॥

ವೀರಾಸನಸ್ಥಂ ಸಂತಾನತರುಮೂಲನಿವಾಸಿನಂ ।
ಮಹಾಸುಗಂಧಲಿಪ್ತಾಂಗಂ ವನಮಾಲಾವಿರಾಜಿತಂ ॥ ೬೫ ॥

ವಾಮಪಾರ್ಶ್ವೇ ಸ್ಥಿತಾಂ ಸೀತಾಂ ಚಾಮೀಕರಸಮಪ್ರಭಾಂ ।
ಲೀಲಾಪದ್ಮಧರಾಂ ದೇವೀಂ ಚಾರುಹಾಸಾಂ ಶುಭಾನನಾಂ ॥ ೬೬ ॥

ಪಶ್ಯಂತೀಂ ಸ್ನಿಗ್ಧಯಾ ದೃಷ್ಟ್ಯಾ ದಿವ್ಯಾಂ ಕಲ್ಪವಿರಾಜಿತಾಂ ।
ಛತ್ರಚಾಮರಹಸ್ತೇನ ಲಕ್ಷ್ಮಣೇನ ಸುಸೇವಿತಂ ॥ ೬೭ ॥

---

೬೪. ರತ್ನಮಯವಾದ ಅನೇಕ ಹಾರಗಳನ್ನು ಹಾಕಿಕೊಂಡಿರಬೇಕು. ಅವ್ಯಯ ಸ್ವರೂಪನಾಗಿರಬೇಕು. ಮಿಂಚುಗಳ ಗುಂಪಿನಂತೆ ಪ್ರಕಾಶಮಾನವುಳ್ಳವನಾಗಿರಬೇಕು. ಒಂದು ವಸ್ತ್ರವನ್ನುಟ್ಟುಕೊಂಡು ಮತ್ತೊಂದು ಬಟ್ಟೆಯನ್ನು ಹೊದ್ದುಕೊಂಡಿರಬೇಕು.

೬೫. ಕಲ್ಪವೃಕ್ಷದ ಕೆಳಗಡೆಯಲ್ಲಿ ವೀರಾಸನವನ್ನು ಹಾಕಿಕೊಂಡು ಕುಳಿತಿರಬೇಕು ಒಳ್ಳೆಯ ಸುಗಂಧವನ್ನು ಪೂಸಿಕೊಂಡಿರಬೇಕು ವನಮಾಲೆಯೆಂಬ ಮಾಲೆಯನ್ನು ಹಾಕಿಕೊಂಡು ಪ್ರಕಾಶಿಸುತ್ತಿರಬೇಕು.

೬೬. ಆ ಸ್ವಾಮಿಯ ಎಡಗಡೆಯಲ್ಲಿ ಚಿನ್ನದ ಬಣ್ಣವುಳ್ಳ ಸೀತೆಯು ಕುಳಿತಿರಬೇಕು. ಲೀಲೆಗೋಸ್ಕರ ಕೈಯ್ಯಲ್ಲಿ ಪದ್ಮವನ್ನು ಹಿಡಿದಿರಬೇಕು. ಮುಗುಳು ನಗೆ ನಗುತ್ತಾ ಒಳ್ಳೆಯ ಮುಖದಿಂದ ಕೂಡಿರಬೇಕು.

೬೭-೬೮. ಒಳ್ಳೆಯ ದೃಷ್ಟಿಯಿಂದ ನೋಡುತ್ತಿರುವ, ಒಳ್ಳೆಯ ಆಭರಣಗಳಿಂದ ಪ್ರಕಾಶಿಸುತ್ತಿರುವ ಸೀತೆಯನ್ನು ಧ್ಯಾನಿಸಬೇಕು. ಇವರನ್ನು ಲಕ್ಷ್ಮಣನು ಛತ್ರ ಚಾಮರಗಳನ್ನು ಹಿಡಿದು ಸೇವಿಸುತ್ತಿರಬೇಕು. ಹನುಮಂತನು

ಹನೂಮತ್ಪ್ರಮುಖೈರ್ನಿತ್ಯಂ ವಾನರೈಃ ಪರಿವಾರಿತಂ ।
ಸ್ತೂಯಮಾನಂ ಋಷಿಗಣೈ ಸ್ಸೇವಿತಂ ಭರತಾದಿಭಿಃ ॥ ೬೮ ॥

ಸನಂದನಾದಿಭಿಶ್ಚಾನ್ಯೈರ್ಯೋಗಿವೃಂದೈಃ ಸ್ತುತಂ ಸದಾ ।
ಸರ್ವಶಾಸ್ತ್ರಾರ್ಥಕುಶಲಂ ಯೋಗಜ್ಞಂ ಯೋಗಸಿದ್ಧಿದಂ ॥ ೬೯ ॥

॥ ಇತಿಧ್ಯಾನಂ ॥

ಏವಂ ಧ್ಯಾತ್ವಾ ರಾಮಚಂದ್ರಂ ಮಣಿದ್ವಯಸುಶೋಭಿತಂ ।
ಶುದ್ಧೇನ ಮನಸಾ ರಾಮಂ ಪೂಜಯೇತ್ಸತತಂ ಹೃದಿ ॥ ೭೦ ॥

ಆವಾಹಯಾಮಿ ವಿಶ್ವೇಶಂ ಜಾನಕೀವಲ್ಲಭಂ ವಿಭುಂ ।
ಕೌಸಲ್ಯಾತನಯಂ ವಿಷ್ಣುಂ ಶ್ರೀರಾಮಂ ಪ್ರಕೃತೇಃ ಪರಂ ॥ ೭೧ ॥

ರಾಜಾಧಿರಾಜ ರಾಜೇಂದ್ರ ರಾಮಚಂದ್ರ ಮಹಿಪತೇ ।
ರತ್ನಸಿಂಹಾಸನಂ ತುಭ್ಯಂ ದಾಸ್ಯಾಮಿ ಸ್ವೀಕುರು ಪ್ರಭೋ ॥ ೭೨ ॥

ಮುಂತಾದ ಕಪಿಗಳು ಸುತ್ತಲೂ ಕುಳಿತಿರಬೇಕು. ಋಷಿಗಳು ಸ್ತುತಿಸುತ್ತಿರಬೇಕು. ಭರತನೇ ಮುಂತಾದವರು ಸೇವಿಸುತ್ತಿರಬೇಕು.

೬೯. ಸನಕ ಸನಂದರೇ ಮುಂತಾದ ಯೋಗಿಗಳು ಅವನನ್ನು ಸ್ತುತಿಸುತ್ತಿರಬೇಕು. ಅವನು ಸರ್ವಶಾಸ್ತ್ರ ಕುಶಲನಾಗಿರಬೇಕು. ಯೋಗವನ್ನು ತಿಳಿದಿರುವನಾಗಿರಬೇಕು. ಯೋಗ ಸಿದ್ಧಿಯನ್ನು ಕೊಡುವವನಾಗಿರಬೇಕು. ಇಂತಹ ರಾಮನನ್ನು ಧ್ಯಾನಿಸಬೇಕು.

ಇದು ಧ್ಯಾನವು

೭೦. ಕೌಸ್ತುಭಮಣಿ ಚಿಂತಾಮಣಿಗಳಿಂದ ಕೂಡಿರುವ ಶ್ರೀರಾಮಚಂದ್ರನನ್ನು ಈ ರೀತಿಯಾಗಿ ಧ್ಯಾನಿಸಬೇಕು. ಶುದ್ಧವಾದ ಮನಸ್ಸಿನಿಂದ ಈ ರಾಮನನ್ನು ಯಾವಾಗಲೂ ಹೃದಯ ಕಮಲದಲ್ಲಿ ಪೂಜಿಸಬೇಕು.

೭೧. ವಿಶ್ವೇಶನೂ, ಜಾನಕೀವಲ್ಲಭನೂ, ವಿಭುವೂ, ಕೌಸಲ್ಯಾತನಯನೂ ವಿಷ್ಣುವೂ, ಪ್ರಕೃತಿಗಿಂತಲೂ ಬೇರೆಯಾದವನೂ ಆದ ರಾಮನನ್ನು ಭಜಿಸಬೇಕು.

೭೨. ರಾಜಾಧಿರಾಜನೂ, ರಾಜೇಂದ್ರನೂ, ರಾಮಚಂದ್ರನೂ, ಮಹೀಪತಿಯೂ, ಆದ ಸ್ವಾಮಿಯೇ! ರತ್ನ ಸಿಂಹಾಸನವನ್ನು ನಿನಗೆ ಕೊಡುತ್ತೇನೆ ಸ್ವೀಕರಿಸು.

ಶ್ರೀರಾಮಾಗಚ್ಛ ಭಗವನ್ ರಘುವೀರ ರಘೂತ್ತಮ ।
ಜಾನಕ್ಯಾ ಸಹ ರಾಜೇಂದ್ರ ಸುಸ್ಥಿರೋ ಭವ ಸರ್ವದಾ ॥ ೭೩ ॥

ರಾಮಚಂದ್ರ ಮಹೇಷ್ವಾಸ ರಾವಣಾಂತಕ ರಾಘವ ।
ಯಾವತ್ಪೂಜಾಂ ಸಮಾಪ್ಯೇಽಹಂ ತಾವತ್ತ್ವಂ ಸನ್ನಿಧೋ ಭವ ॥ ೭೪ ॥

ರಘುನಂದನ ರಾಜರ್ಷೇ ರಾಮ ರಾಜೀವಲೋಚನ ।
ಭಕ್ತಾನಂದದ ಮೇ ದೇವ ಶ್ರೀರಾಮಾಭಿಮುಖೋ ಭವ ॥ ೭೫ ॥

ಪ್ರಸೀದ ಜಾನಕೀನಾಥ ಸುಪ್ರಸಿದ್ಧ ಸುರೇಶ್ವರ ।
ಪ್ರಸನ್ನೋ ಭವ ಮೇ ರಾಜನ್ ಸರ್ವೇಶ ಮಧುಸೂದನ ॥ ೭೬ ॥

ಶರಣಂ ಮೇ ಜಗನ್ನಾಥ ಶರಣಂ ಭಕ್ತವತ್ಸಲ ।
ವರದೋ ಭವ ಮೇ ರಾಜನ್ ಶರಣಂ ಮೇ ರಘೂತ್ತಮ ॥ ೭೭ ॥

ತ್ರೈಲೋಕ್ಯಪಾವನಾನಂತ ನಮಸ್ತೇ ರಘುನಾಯಕ ।
ಪಾದ್ಯಂ ಗೃಹಾಣ ರಾಜರ್ಷೇ ನಮೋ ರಾಜೀವಲೋಚನ ॥ ೭೮ ॥

---

೭೩. ಭಗವಂತನಾದ ಶ್ರೀರಾಮನೇ ! ಸೀತೆಯೊಡನೆ ಇಲ್ಲಿಗೆ ಬಾ. ರಘುವೀರನೇ! ರಘೂತ್ತಮನೇ ರಾಜೇಂದ್ರನೇ ! ನೀನು ಜಾನಕಿಯೊಡನೆ ಬಂದು ಕುಳಿತು ಸುಸ್ಥಿತನಾಗಿರು.

೭೪. ರಾಮಚಂದ್ರನೇ ! ಮಹತ್ತಾದ ಧನುಸ್ಸುಳ್ಳವನೇ ! ರಾವಣಾಂತಕನಾದ ರಾಘವನೇ ! ನಾನು ನಿನ್ನ ಪೂಜೆಯನ್ನು ಮಾಡಿ ಮುಗಿಸುವವರೆಗೂ ಇಲ್ಲಿ ಸುಖವಾಗಿದ್ದುಕೊಂಡಿರು.

೭೫. ರಘುನಂದನನೇ ! ರಾಜಋಷಿಯೇ ! ರಾಜೀವಲೋಚನನಾದ ರಾಮನೇ ! ಭಕ್ತರಿಗೆ ಆನಂದವನ್ನುಂಟುಮಾಡುವವನೇ ! ಶ್ರೀರಾಮನೇ! ನನಗೆ ಎದುರಾಗಿ ಕುಳಿತುಕೋ.

೭೬. ಪ್ರಸಿದ್ಧನಾದ ಸುರೇಶ್ವರನೇ ! ಜಾನಕೀ ನಾಥನೇ ! ಪ್ರಸನ್ನನಾಗು. ಸರ್ವೇಶ್ವರನೇ! ಮಧುಸೂದನನೇ ! ನನಗೆ ಯಾವಾಗಲೂ ಪ್ರಸನ್ನನಾಗು.

೭೭-೭೮. ತ್ರೈಲೋಕ್ಯಕ್ಕೂ ಪಾವನನೇ ! ಅನಂತನೇ ! ನಿನಗೆ ನಮಸ್ಕಾರವು. ರಘುನಾಯಕನೇ ! ನಿನಗೆ ನಮಸ್ಕಾರವು. ರಾಜರ್ಷಿಯೇ! ಈ ಪಾದ್ಯವನ್ನು ತೆಗೆದು ಕೋ. ರಾಜೀವಲೋಚನನೇ! ನಮಸ್ಕಾರವು.

ಪರಿಪೂರ್ಣ ಪರಾನಂದ ನಮೋ ರಾಮಾಯ ವೇಧಸೇ ।
ಗೃಹಾಣಾರ್ಘ್ಯಂ ಮಯಾ ದತ್ತಂ ಕೃಷ್ಣ ವಿಷ್ಣೋ ಜನಾರ್ದನ || ೭೯ ||

ಓಂ ನಮೋ ವಾಸುದೇವಾಯ ತತ್ವಜ್ಞಾನಸ್ವರೂಪಿಣೇ ।
ಮಧುಪರ್ಕಂ ಗೃಹಾಣೇಮಂ ರಾಜರಾಜಾಯ ತೇ ನಮಃ || ೮೦ ||

ನಮಸ್ಸತ್ಯಾಯ ಶುದ್ಧಾಯ ಬುಧ್ಧ್ಯಾಯ ಜ್ಞಾನರೂಪಿಣೇ ।
ಗೃಹಾಣಾಚಮನಂ ದೇವ ಸರ್ವಲೋಕೈಕನಾಯಕ || ೮೧ ||

ಬ್ರಹ್ಮಾಂಡೋದರಮಧ್ಯಸ್ಥೈಸ್ತೀರ್ಥೈಶ್ಚ ರಘುನಂದನ ।
ಸ್ನಾಪಯಿಷ್ಯಾಮ್ಯಹಂ ಭಕ್ತ್ಯಾ ತ್ವಂ ಗೃಹಾಣ ಜನಾರ್ದನ || ೮೨ ||

ಸಂತಪ್ತಕಾಂಚನಪ್ರಖ್ಯಂ ಪೀತಾಂಬರಮಿಮಂ ಹರೇ ।
ಸಂಗೃಹಾಣ ಜಗನ್ನಾಥ ರಾಮಚಂದ್ರ ನಮೋಽಸ್ತು ತೇ || ೮೩ ||

---

೭೯. ಪರಿಪೂರ್ಣನೇ! ಪರಾನಂದನೇ! ನಿನಗೆ ನಮಸ್ಕಾರವು. ವೇಧಸ್ಸಿನರೂಪನಾದ ರಾಮನೇ! ನಿನಗೆ ನಮಸ್ಕಾರವು. ಕೃಷ್ಣನೇ! ವಿಷ್ಣುವೇ! ಜನಾರ್ಧನನೇ! ಅರ್ಘ್ಯವನ್ನು ಸ್ವೀಕರಿಸು.

೮೦. ಓಂ ತತ್ವಜ್ಞಾನಸ್ವರೂಪಿಯಾದ ವಾಸುದೇವನಿಗೆ ನಮಸ್ಕಾರವು. ನೀನು ಈ ಮಧುಪರ್ಕವನ್ನು ತೆಗೆದುಕೋ. ರಾಜರಾಜನಾದ ನಿನಗೆ ನಮಸ್ಕಾರವು.

೮೧. ಸತ್ಯನೂ, ಶುದ್ಧನೂ, ಬುದ್ಧನೂ, ಜ್ಞಾನರೂಪಿಯೂ, ಆದ ನಿನಗೆ ನಮಸ್ಕಾರವು. ಸರ್ವಲೋಕಗಳಿಗೂ ಮುಖ್ಯನಾದ ನಾಯಕನೇ! ಈ ಆಚಮನವನ್ನು ಸ್ವೀಕರಿಸು.

೮೨. ಎಲೈ ರಘುನಂದನನೇ! ಈ ಬ್ರಹ್ಮಾಡಂದ ಮಧ್ಯದಲ್ಲಿರುವ ತೀರ್ಥಗಳಿಂದ ನಿನಗೆ ಭಕ್ತಿಯಿಂದ ಸ್ನಾನವನ್ನು ಮಾಡಿಸುತ್ತೇನೆ. ಎಲೈ ಜನಾರ್ದನನೇ! ಅದನ್ನು ನೀನು ಸ್ವೀಕರಿಸು.

೮೩. ಕಾದಿರುವ ಚಿನ್ನದಂತೆ ಬಣ್ಣವುಳ್ಳ ಈ ಪಿತಾಂಬರವನ್ನು ಕೊಡುತ್ತೇನೆ. ಎಲೈ ಜಗನ್ನಾಥನೇ! ಇದನ್ನು ಸ್ವೀಕರಿಸು. ಎಲೆ ರಾಮಚಂದ್ರನೇ! ನಿನಗೆ ನಮಸ್ಕಾರವು.

ಶ್ರೀರಾಮಾಚ್ಯುತ ಯಜ್ಞೇಶ ಶ್ರೀಧರಾನಂದ ರಾಘವ ।
ಬ್ರಹ್ಮಸೂತ್ರಂ ಸೋತ್ತರೀಯಂ ಗೃಹಾಣ ರಘುನಾಯಕ ॥ ೮೪ ॥

ಕಿರೀಟಹಾರಕೇಯೂರರತ್ನಕುಂಡಲಮೇಖಲಾಃ ।
ಗ್ರೈವೇಯಕೌಸ್ತುಭಂ ಹಾರಂ ರತ್ನಕಂಕಣನೂಪುರಾನ್ ॥ ೮೫ ॥

ಏವಮಾದೀನಿ ಸರ್ವಾಣಿ ಭೂಷಣಾನಿ ರಘೂತ್ತಮ ।
ಅಹಂ ದಾಸ್ಯಾಮಿ ತೇ ಭಕ್ತ್ಯಾ ಸಂಗೃಹಾಣ ಜನಾರ್ದನ ॥ ೮೬ ॥

ಕುಂಕುಮಾಗರುಕಸ್ತೂರೀಕರ್ಪೂರೋನ್ಮಿಶ್ರಚಂದನಂ ।
ತುಭ್ಯಂ ದಾಸ್ಯಾಮಿ ವಿಶ್ವೇಶ ಶ್ರೀರಾಮ ಸ್ವೀಕುರು ಪ್ರಭೋ ॥ ೮೭ ॥

ತುಲಸೀಕುಂದಮಂದಾರಜಾತೀಪುನ್ನಾಗಚಂಪಕೈಃ ।
ಕದಂಬಕರವೀರೈಶ್ಚ ಕುಸುಮೈಶ್ಶತಪತ್ರಕೈಃ ॥ ೮೮ ॥

ನೀಲಾಂಬುಜೈರ್ಬಿಲ್ವದಳೈಃ ಪುಷ್ಪಮಾಲ್ಯೈಶ್ಚ ರಾಘವ ।
ಪೂಜಯಿಷ್ಯಾಮ್ಯಹಂ ಭಕ್ತ್ಯಾ ಸಂಗೃಹಾಣ ನಮೋಽಸ್ತು ತೇ ॥ ೮೯ ॥

---

೮೪. ಶ್ರೀರಾಮನೇ! ಅಚ್ಯುತನೇ! ಯಜ್ಞೇಶನೇ! ಶ್ರೀಧರನೇ! ಆನಂದನೇ! ರಾಘವನೇ! ಉತ್ತರೀಯರೂಪವಾದ ಈ ಬ್ರಹ್ಮಸೂತ್ರವನ್ನು ತೊಡುತ್ತೇನೆ. ಎಲೈ ರಘುನಾಯಕನೇ! ಇದನ್ನು ಸ್ವೀಕರಿಸು.

೮೫–೮೬. ಕಿರೀಟ, ಹಾರ, ಕೇಯೂರ, ರತ್ನದಕುಂಡಲ, ಉಡಿದಾರ, ಕತ್ತಿಗೆ ಹಾಕಿಕೊಳ್ಳುವ ಸರಪಣಿ, ಕೌಸ್ತುಭ ರತ್ನ,ಹಾರ, ರತ್ನದಕಂಕಣ, ಕಾಲುಬಳೆಗಳು, ಇವೇ ಮುಂತಾದ ಎಲ್ಲಾ ಒಡವೆಗಳನ್ನೂ ಕೊಡುತ್ತೇನೆ. ಎಲೈ ಜನಾರ್ದನನೇ! ನಾನು ಭಕ್ತಿಯಿಂದ ಕೊಟ್ಟ ಇವೆಲ್ಲವನ್ನೂ ನೀನು ತೆಗೆದುಕೋ.

೮೭. ಕುಂಕುಮ, ಅಗರು, ಕಸ್ತೂರಿ, ಪಚ್ಚಕರ್ಪೂರ ಇವುಗಳಿಂದ ಕೂಡಿದ ಚಂದನವನ್ನು ಎಲೈ ವಿಶ್ವೇಶ್ವರನೇ! ನಿನಗೆ ಸಮರ್ಪಿಸುತ್ತೇನೆ. ಎಲೈ ಪ್ರಭುವೇ! ಅದನ್ನು ಸ್ವೀಕರಿಸು.

೮೮-೮೯. ತುಲಸಿ, ಜಾಜಿ, ಮಂದಾರ, ಮಲ್ಲಿಗೆ, ಸುರಹೊನ್ನೆ, ಸಂಪಿಗೆ, ಕಡಹ, ಕಣಿಗಿಲೆ, ಕಮಲ, ಕನ್ನೈದಿಲೆ, ಬಿಲ್ವ, ಇವುಗಳಿಂದ ಕೂಡಿದ ಪೂಮಾಲೆಯಿಂದ ನಿನ್ನನ್ನು ಪೂಜಿಸುತ್ತೇನೆ. ಎಲೈ ರಾಘವನೇ! ನೀನು ಅದನ್ನು ಸ್ವೀಕರಿಸು.

ವನಸ್ಪತಿರಸೈರ್ದಿವ್ಯೈರ್ಗಂಧಾಢ್ಯೈಸ್ಸುಮನೋಹರೈಃ ।
ರಾಮಚಂದ್ರ ಮಹೀಪಾಲ ಧೂಪೋಯಂ ಪ್ರತಿಗೃಹ್ಯತಾಂ ॥ ೯೦ ॥

ಜ್ಯೋತಿಷಾಂ ಪತಯೇ ತುಭ್ಯಂ ನಮೋ ರಾಮಾಯ ವೇಧಸೇ ।
ಗೃಹಾಣ ದೀಪಕಂ ರಾಜಂಸ್ತ್ರೈಲೋಕ್ಯತಿಮಿರಾಪಹಂ ॥ ೯೧ ॥

ಇದಂ ದಿವ್ಯಾನ್ನಮಮೃತಂ ರಸೈಷ್ಷಡ್ಭಿರ್ವಿರಾಜಿತಂ ।
ಶ್ರೀರಾಮ ರಾಜರಾಜೇಂದ್ರ ನೈವೇದ್ಯಂ ಪ್ರತಿಗೃಹ್ಯತಾಂ ॥ ೯೨ ॥

ನಾಗವಲ್ಲೀದಳೈರ್ಯುಕ್ತಂ ಪೂಗೀಫಲಸಮನ್ವಿತಂ ।
ತಾಂಬೂಲಂ ಗೃಹ್ಯತಾಂ ರಾಮ ಕರ್ಪೂರಾದಿಸಮನ್ವಿತಂ ॥ ೯೩ ॥

ಮಂಗಳಾರ್ಥಂ ಮಹೀಪಾಲ ನೀರಾಜನಮಿದಂ ಹರೇ ।
ಸಂಗೃಹಾಣ ಜಗನ್ನಾಥ ರಾಮಚಂದ್ರ ನಮೋಸ್ತು ತೇ ॥ ೯೪ ॥

---

೯೦. ವನಸ್ಪತಿಯ ರಸಗಳಿಂದ ಮಾಡಿದ ಸುವಾಸನೆಯುಳ್ಳ ಗಂಧದಿಂದ ಕೂಡಿದ ಈ ಧೂಪವನ್ನು ಮಾಡಿದ್ದೇನೆ. ಎಲೈ ಸ್ವಾಮಿಯೇ! ಇದನ್ನು ಸ್ವೀಕರಿಸು.

೯೧. ಜೋತಿಸ್ಸಿಗೆಲ್ಲಾ ಒಡೆಯನಾದ ನಿನಗೆ ನಮಸ್ಕಾರವು. ವೇಧಸ್ಸಾದ ರಾಮನೇ! ನಿನಗೆ ನಮಸ್ಕಾರವು. ಎಲೈ ರಾಜನೇ! ಮೂರು ಲೋಕದ ಅಂಧಕಾರವನ್ನೂ ನಾಶಮಾಡುವ ಈ ದೀಪವನ್ನು ಸ್ವೀಕರಿಸು.

೯೨. ಇಗೋ ಇಲ್ಲಿರುವುದು ದಿವ್ಯಾನ್ನವು ಅಮೃತದಂತಿರುವುದು. ಆರು ಬಗೆಯ ರಸಗಳಿಂದಲೂ, ಕೂಡಿರುವುದು. ರಾಜ ರಾಜನೂ, ರಾಜೇಂದ್ರನೂ, ಆದ ಶ್ರೀರಾಮನೇ! ಈ ನೈವೇದ್ಯವನ್ನು ಸ್ವೀಕರಿಸು.

೯೩. ಇಗೋ ಇದು ವೀಳೆಯದೆಲೆಯು. ಒಳ್ಳೆಯ ಅಡಕೆಯನ್ನು ಸೇರಿಸಿರುವೆನು. ಪಚ್ಚ ಕರ್ಪೂರ ಏಲಕ್ಕಿ ಮುಂತಾದುವನ್ನು ಸೇರಿಸಿರುವೆನು. ಎಲೈ ರಾಮನೇ! ಇಂತಹ ತಾಂಬೂಲವನ್ನು ಸ್ವೀಕರಿಸು.

೯೪. ಎಲೈ ಮಹೀಪತಿಯಾದ ರಾಮನೇ! ಮಂಗಳವನ್ನುಂಟುಮಾಡುವ ಈ ಆರತಿಯನ್ನು ಸಮರ್ಪಿಸುತ್ತೇನೆ. ಎಲೈ ಜಗನ್ನಾಥನೇ! ಇದನ್ನು ಸ್ವೀಕರಿಸು. ರಾಮಚಂದ್ರನೇ! ನಿನಗೆ ನಮಸ್ಕಾರವು.

॥ ಅಥಾಷ್ಟನಮಸ್ಕಾರಾಃ ॥

ಓಂ ನಮಃ ಶ್ರೀಭಗವತೇ ರಾಮಾಯ ಪರಮಾತ್ಮನೇ ।
ಸರ್ವಭೂತಾಂತರಸ್ಥಾಯ ಸಸೀತಾಯ ನಮೋ ನಮಃ ॥ ೯೫ ॥

ಓಂ ನಮಃ ಶ್ರೀಭಗವತೇ ರಾಮಚಂದ್ರಾಯ ವೇಧಸೇ ।
ಸರ್ವವೇದಾಂತವೇದ್ಯಾಯ ಸಸೀತಾಯ ನಮೋ ನಮಃ ॥ ೯೬ ॥

ಓಂ ನಮಃ ಶ್ರೀಭಗವತೇ ವಿಷ್ಣವೇ ಪರಮಾತ್ಮನೇ ।
ಪರಾತ್ಪರಾಯ ರಾಮಾಯ ಸಸೀತಾಯ ನಮೋ ನಮಃ ॥ ೯೭ ॥

ಓಂ ನಮಃ ಶ್ರೀಭಗವತೇ ರಘುನಾಥಾಯ ಶಾರ್ಙ್ಗಿಣೇ ।
ಚಿನ್ಮಯಾನಂದರೂಪಾಯ ಸಸೀತಾಯ ನಮೋ ನಮಃ ॥ ೯೮ ॥

ಓಂ ನಮಃ ಶ್ರೀಭಗವತೇ ರಾಮಕೃಷ್ಣಾಯ ಚಕ್ರಿಣೇ ।
ವಿಶುದ್ಧಜ್ಞಾನದೇಹಾಯ ಸಸೀತಾಯ ನಮೋ ನಮಃ ॥ ೯೯ ॥

ನಮಸ್ಕಾರ ಮಂತ್ರಗಳು.

೯೫ ಓಂ ಭಗವಂತನೂ, ಪರಮಾತ್ಮನೂ, ಆದ ರಾಮನಿಗೆ ನಮಸ್ಕಾರವು. ಎಲ್ಲಾ ಪ್ರಾಣಿಗಳಲ್ಲಿಯೂ ಇರುವ ಸೀತೆಯೊಡಗೂಡಿದ ನಿನಗೆ ನಮಸ್ಕಾರವು.

೯೬. ಓಂ ಶ್ರೀ ಬ್ರಹ್ಮರೂಪನಾದ, ಭಗವಂತನಾದ ರಾಮಚಂದ್ರನಿಗೆ ನಮಸ್ಕಾರವು. ಎಲ್ಲಾ ವೇದಾಂತಗಳಲ್ಲಿಯೂ ಹೇಳಲ್ಪಟ್ಟಿರುವ ಸೀತೆಯೊಡಗೂಡಿದ ನಿನಗೆ ನಮಸ್ಕಾರವು.

೯೭. ಓಂ ಭಗವಂತನಾದ ಪರಮಾತ್ಮನೂ ವಿಷ್ಣುವೂ ಆದ ಆ ಸ್ವಾಮಿಗೆ ನಮಸ್ಕಾರವು. ಪರಾತ್ಪರನೂ ಸೀತೆಯೊಡನೆ ಕೂಡಿದವನೂ ಆದ ಶ್ರೀರಾಮನಿಗೆ ನಮಸ್ಕಾರವು.

೯೮. ಓಂ ಭಗವಂತನೂ ಶಾರ್ಙ್ಗವೆಂಬ ಧನುಸ್ಸನ್ನು ಹಿಡಿದಿರುವವನೂ ಆದ ರಘುನಾಥನಿಗೆ ನಮಸ್ಕಾರವು. ಚಿನ್ಮಯನೂ, ಆನಂದ ಸ್ವರೂಪನೂ ಆದ ಸೀತೆಯೊಡಗೂಡಿದ ಶ್ರೀರಾಮನಿಗೆ ನಮಸ್ಕಾರವು.

೯೯. ಓಂ ಭಗವಂತನಾದ, ಚಕ್ರವನ್ನು ಹಿಡಿದಿರುವ ರಾಮಕೃಷ್ಣನಿಗೆ ನಮಸ್ಕಾರವು ಶುದ್ಧವೂ ಜ್ಞಾನರೂಪವೂ ಆದ ದೇಹವುಳ್ಳ ಸೀತೆಯೊಡಗೂಡಿದ ಶ್ರೀರಾಮನಿಗೆ ನಮಸ್ಕಾರವು.

ಓಂ ನಮಃ ಶ್ರೀಭಗವತೇ ವಾಸುದೇವಾಯ ವಿಷ್ಣವೇ ।
ಪೂರ್ಣಾನಂದೈಕರೂಪಾಯ ಸಸೀತಾಯ ನಮೋ ನಮಃ ॥ ೧೦೦ ॥

ಓಂ ನಮಃ ಶ್ರೀಭಗವತೇ ರಾಮಭದ್ರಾಯ ವೇಧಸೇ ।
ಸರ್ವಲೋಕೈಕಶರಣ್ಯಾಯ ಸಸೀತಾಯ ನಮೋ ನಮಃ ॥ ೧೦೧ ॥

ಓಂ ನಮಃ ಶ್ರೀಭಗವತೇ ರಾಮಾಯಾಮಿತತೇಜಸೇ ।
ಬ್ರಹ್ಮಾನಂದೈಕರೂಪಾಯ ಸಸೀತಾಯ ನಮೋ ನಮಃ ॥ ೧೦೨ ॥

॥ ಇತಿ ನಮಸ್ಕಾರಾಷ್ಟಕಮಂತ್ರಾಃ ॥

ನೃತ್ಯಗೀತಾದಿವಾದ್ಯಾದಿಪುರಾಣಪಠನಾದಿಭಿಃ ।
ರಾಜೋಪಚಾರೈರಖಿಲೈಸ್ಸಂತುಷ್ಟೋ ಭವ ರಾಘವ ॥ ೧೦೩ ॥

ವಿಶುದ್ಧಜ್ಞಾನದೇಹಾಯ ರಘುನಾಥಾಯ ವಿಷ್ಣವೇ ।
ಅಂತಃಕರಣಸಂಶುದ್ಧಿಂ ದೇಹಿ ಮೇ ರಘುನಂದನ ॥ ೧೦೪ ॥

---

೧೦೦. ಓಂ ಭಗವಂತನಾದ ವಿಷ್ಣುವಾದ ವಾಸುದೇವನಿಗೆ ನಮಸ್ಕಾರವು. ಪೂರ್ಣವಾದ ಆನಂದ ಸ್ವರೂಪನಾದ ಸೀತೆಯೊಡಗೂಡಿದ ಶ್ರೀರಾಮನಿಗೆ ನಮಸ್ಕಾರವು.

೧೦೧-೧೦೨. ಓಂ ಭಗವಂತನೂ, ವೇಧಸ್ಸೂ, ಆದ ರಾಮಭದ್ರನಿಗೆ ನಮಸ್ಕಾರವು. ಎಲ್ಲಾ ಲೋಕಗಳಿಗೂ ರಕ್ಷಕನಾದ ಸೀತೆಯೊಡಗೂಡಿದ ರಾಮನಿಗೆ ನಮಸ್ಕಾರವು. ಓಂ ಭಗವಂತನೂ, ಬಹು ತೇಜಸ್ಸುಳ್ಳವನೂ ಆದ ಶ್ರೀರಾಮನಿಗೆ ನಮಸ್ಕಾರವು.

ಇಂತು ನಮಸ್ಕಾರದ ಎಂಟು ಮಂತ್ರಗಳು

೧೦೩. ರಾಘವನೇ! ನೃತ್ಯಗೀತವೇ ಮುಂತಾದುವುಗಳಿಂದಲೂ, ವಾದ್ಯಗಳಿಂದಲೂ ಪುರಾಣಶ್ರವಣಾದಿಗಳಿಂದಲೂ ಎಲ್ಲಾ ರಾಜೋಪಚಾರಗಳಿಂದಲೂ ಸಂತುಷ್ಟನಾಗು.

೧೦೪. ವಿಶುದ್ಧಜ್ಞಾನವೇ ದೇಹವಾಗಿಉಳ್ಳ ವಿಷ್ಣುವಾದ ರಘುನಾಥನಿಗೆ ನಮಸ್ಕಾರವು. ಎಲೈ ರಘುನಂದನನೇ ನನಗೆ ಅಂತಃಕರಣದ ಶುದ್ಧಿಯನ್ನು ಕೊಡು.

ನಮೋ ನಾರಾಯಣಾನಂತ ಶ್ರೀರಾಮ ಕರುಣಾನಿಧೇ ।
ಮಾಮುದ್ಧರ ಜಗನ್ನಾಥ ಘೋರಾತ್ಸಂಸಾರಸಾಗರಾತ್ ॥ ೧೦೫ ॥

ರಾಮಚಂದ್ರ ಮಹೇಷ್ವಾಸ ಶರಣಾಗತತತ್ಪರ ।
ತ್ರಾಹಿ ಮಾಂ ಸರ್ವಲೋಕೇಶ ತಾಪತ್ರಯಮಹಾನಲಾತ್ ॥ ೧೦೬ ॥

ಶ್ರೀಕೃಷ್ಣ ಶ್ರೀಕರ ಶ್ರೀಶ ಶ್ರೀರಾಮ ಶ್ರೀನಿಧೇ ಹರೇ ।
ಶ್ರೀನಾಥ ಶ್ರೀಮಹಾವಿಷ್ಣೋ ಶ್ರೀನೃಸಿಂಹ ಕೃಪಾನಿಧೇ ॥ ೧೦೭ ॥

ಗರ್ಭಜನ್ಮಜರಾವ್ಯಾಧಿಘೋರಸಂಸಾರಸಾಗರಾತ್ ।
ಮಾಮುದ್ಧರ ಜಗನ್ನಾಥ ಕೃಷ್ಣ ವಿಷ್ಣೋ ಜನಾರ್ದನ ॥ ೧೦೮ ॥

ಶ್ರೀರಾಮ ಗೋವಿಂದ ಮುಕುಂದ ಕೃಷ್ಣ
ಶ್ರೀನಾಥ ವಿಷ್ಣೋ ಭಗವನ್ನಮಸ್ತೇ ।
ಪ್ರೌಢಾರಿಷಡ್ವರ್ಗಮಹಾಭಯೇಭ್ಯೋ
ಮಾಂ ತ್ರಾಹಿ ನಾರಾಯಣ ವಿಶ್ವಮೂರ್ತೇ ॥ ೧೦೯ ॥

---

೧೦೫. ನಾರಾಯಣನೇ ! ನಮಸ್ಕಾರವು. ಅನಂತನೇ ! ನಮಸ್ಕಾರವು. ಕರುಣಾನಿಧಿಯಾದ ಶ್ರೀರಾಮನೇ ! ನಮಸ್ಕಾರವು. ಎಲೈ ಜಗನ್ನಾಥನೇ ! ಈ ಘೋರವಾದ ಸಂಸಾರವೆಂಬ ಸಾಗರದಿಂದ ನನ್ನನ್ನು ಮೇಲಕ್ಕೆತ್ತು.

೧೦೬. ದೊಡ್ಡ ಧನುಸ್ಸನ್ನು ಹಿಡಿದಿರುವ ರಾಮಚಂದ್ರನೇ! ಶರಣಾಗತರಲ್ಲಿ ಆಸಕ್ತನೇ ಸರ್ವಲೋಕಗಳಿಗೂ ಒಡೆಯನೇ, ತಾಪತ್ರಯವೆಂಬ ಅಗ್ನಿಯಿಂದ ನನ್ನನ್ನು ಕಾಪಾಡು.

೧೦೭-೧೦೮. ಶ್ರೀಕೃಷ್ಣನೇ, ! ಶ್ರೀಕರನೇ, ! ಶ್ರೀಶನೇ, ! ಶ್ರೀರಾಮ, ! ಶ್ರೀವಿಧಿಯೇ, ! ಕಾಪಾಡು. ಹರಿಯೇ, ! ಶ್ರೀನಾಥ, ! ಶ್ರೀಮಹಾವಿಷ್ಣು, ! ಶ್ರೀನರಸಿಂಹ, ! ಕೃಪಾನಿಧಿಯೇ ! ನೀನು ಗರ್ಭ, ಜನ್ಮ, ಮುಪ್ಪು, ವ್ಯಾಧಿಗಳಿಂದ ಕೂಡಿದ ಈ ಸಂಸಾರವೆಂಬ ಸಾಗರದಿಂದ ನನ್ನನ್ನು ಎತ್ತುವವನಾಗು. ಜನಾರ್ದನನೇ, ! ಕೃಷ್ಣನೇ, ! ವಿಷ್ಣುವೇ ! ನಿನಗೆ ನಮಸ್ಕಾರವು

೧೦೯. ಶ್ರೀರಾಮ, ಗೋವಿಂದ, ಮುಕುಂದ, ಕೃಷ್ಣ, ಶ್ರೀನಾಥ, ವಿಷ್ಣು, ಭಗವಂತ ! ನಿನಗೆ ನಮಸ್ಕಾರವು. ಬಹು ದೊಡ್ಡದಾದ ಅರಿಷಡ್ವರ್ಗಗಳೆಂಬ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳ ಭಯದಿಂದ ನನ್ನನ್ನು ಕಾಪಾಡು.

ಶ್ರೀರಾಮಾಚ್ಯುತ ಯಜ್ಞೇಶ ಶ್ರೀಧರಾನಂದ ರಾಘವ |
ಶ್ರೀಗೋವಿಂದ ಹರೇ ವಿಷ್ಣೋ ನಮಸ್ತೇ ಜಾನಕೀಪತೇ ॥ ೧೧೦ ॥

ಬ್ರಹ್ಮಾನಂದೈಕವಿಜ್ಞಾನಂ ತ್ವನ್ನಾಮಸ್ಮರಣಂ ನೃಣಾಂ |
ತ್ವತ್ಪದಾಂಬುಜಸದ್ಭಕ್ತಿಂ ದೇಹಿ ಮೇ ರಘುವಲ್ಲಭ ॥ ೧೧೧ ॥

ನಮೋಽಸ್ತು ನಾರಾಯಣ ವಿಶ್ವಮೂರ್ತೇ
ನಮೋಽಸ್ತು ತೇ ಶಾಶ್ವತ ವಿಶ್ವಯೋನೇ |
ತ್ವಮೇವ ವಿಶ್ವಂ ಸಚರಾಚರಂ ಚ
ತ್ವಮೇವ ಸರ್ವಂ ಪ್ರವದಂತಿ ಸಂತಃ ॥ ೧೧೨ ॥

ನಮೋಽಸ್ತು ತೇ ಕಾರಣಕಾರಣಾಯ
ನಮೋಽಸ್ತು ಕೈವಲ್ಯ ಫಲಪ್ರದಾಯ |
ನಮೋ ನಮಸ್ತೇಽಸ್ತು ಜಗನ್ಮಯಾಯ
ವೇದಾಂತವೇದ್ಯಾಯ ನಮೋ ನಮಸ್ತೇ ॥ ೧೧೩ ॥

---

೧೧೦. ಶ್ರೀರಾಮ, ಅಚ್ಯುತ, ಯಜ್ಞೇಶ ಶ್ರೀಧರ, ಆನಂದ ರಾಘವ, ಗೋವಿಂದ, ಹರೆ, ವಿಷ್ಣೋ, ಜಾನಕೀಪತಿ, ನಿನಗೆ ನಮಸ್ಕಾರವು.

೧೧೧. ಎಲೈ ಶ್ರೀರಾಮನೇ, ನಿನ್ನ ನಾಮಸ್ಮರಣೆಯೇ ಜನರಿಗೆ ಬ್ರಹ್ಮನ ಆನಂದವನ್ನು ಕೊಡುವುದಾಗಿರುವುದು. ಅಂತಹ ನೀನು ನಿನ್ನ ಪಾದಾಂಬುಜ ದಲ್ಲಿ ಒಳ್ಳೆಯ ಭಕ್ತಿಯನ್ನು ಕೊಡು.

೧೧೨. ನಾರಾಯಣನೇ,! ನಿನಗೆ ನಮಸ್ಕಾರವು. ವಿಶ್ವಮೂರ್ತಿಯೇ,! ನಿನಗೆ ನಮಸ್ಕಾರವು. ಶಾಶ್ವತನೇ! ನಿನಗೆ ನಮಸ್ಕಾರವು. ವಿಶ್ವಯೋನಿಯೇ! ನಿನಗೆ ನಮಸ್ಕಾರವು. ನೀನೇ ಚರಾಚರಾಧಿಕನಾದ ಪ್ರಪಂಚವು. ಸಜ್ಜನರು ಎಲ್ಲವೂ ನೀನೇ ಎಂದೆನ್ನುತ್ತಾರೆ.

೧೧೩. ಕಾರಣಕ್ಕೂ ಕಾರಣನಾದ ನಿನಗೆ ನಮಸ್ಕಾರವು ಕೈವಲ್ಯದ ಫಲವನ್ನು ಕೊಡುವ ನಿನಗೆ ನಮಸ್ಕಾರವು. ಜಗನ್ಮಯನಾದ ನಿನಗೆ ನಮ ಸ್ಕಾರವು. ವೇದಾಂತದಲ್ಲಿ ತಿಳಿಯತಕ್ಕ ನಿನಗೆ ನಮಸ್ಕಾರವು.

ನಮೋ ನಮಸ್ತೇ ಭರತಾಗ್ರಜಾಯ
ನಮೋಽಸ್ತು ಯಜ್ಞಪ್ರತಿಪಾಲನಾಯ ।
ಅನಂತ ಯಜ್ಞೇಶ ಹರೇ ಮುಕುಂದ
ಗೋವಿಂದ ವಿಷ್ಣೋ ಭಗವನ್ಮುರಾರೇ ॥ ೧೧೪ ॥

ಶ್ರೀವಲ್ಲಭಾನಂತ ಜಗನ್ನಿವಾಸ ।
ಶ್ರೀರಾಮರಾಜೇಂದ್ರ ನಮೋ ನಮಸ್ತೇ !
ಶ್ರೀಜಾನಕೀಕಾಂತ ವಿಶಾಲನೇತ್ರ
ರಾಜಾಧಿರಾಜ ತ್ವಯಿ ಮೇಽಸ್ತು ಭಕ್ತಿಃ ॥ ೧೧೫ ॥

ತಪ್ತಜಾಂಬೂನದೇನೈವ ನಿರ್ಮಿತಂ ರತ್ನಭೂಷಿತಂ ।
ಸ್ವರ್ಣಪುಷ್ಪಂ ರಘುಶ್ರೇಷ್ಠ ದಾಸ್ಯಾಮಿ ಸ್ವೀಕುರು ಪ್ರಭೋ ॥ ೧೧೬ ॥

ಹೃತ್ಪದ್ಮಕರ್ಣಿಕಾಮಧ್ಯೇ ಸೀತಯಾ ಸಹ ರಾಘವ ।
ನಿವಸ ತ್ವಂ ರಘುಶ್ರೇಷ್ಠ ಸರ್ವೈರಾವರಣೈಸ್ಸಹ ॥ ೧೧೭ ॥

೧೧೪-೧೧೫. ಭರತಾಗ್ರಜನಾದ ನಿನಗೆ ನಮಸ್ಕಾರವು. ಯಜ್ಞವನ್ನು ಕಾಪಾಡುವ ನಿನಗೆ ನಮಸ್ಕಾರವು. ಅನಂತ, ಯಜ್ಞೇಶ, ಹರೆ, ಮುಕುಂದ, ಗೋವಿಂದ, ವಿಷ್ಣು, ಭಗವಂತ, ಮುರಾರಿ, ಶ್ರೀವಲ್ಲಭ, ಅನಂತ, ಜಗನ್ನಿವಾಸ, ಶ್ರೀರಾಮರಾಜೇಂದ್ರ! ನಿನಗೆ ನಮಸ್ಕಾರವು. ಶ್ರೀ ಜಾನಕೀನಾಥನೇ ವಿಶಾಲ ನೇತ್ರನೇ ರಾಜಾಧಿರಾಜನಾದ ರಾಮನೇ! ನಿನ್ನಲ್ಲಿ ನನಗೆ ಭಕ್ತಿಯು ಶಾಶ್ವತ ವಾಗಿರಲಿ.

೧೧೬. ಒಳ್ಳೆಯ ಚಿನ್ನದಿಂದ ಈ ಹೂವನ್ನು ಮಾಡಿಸಿದ್ದೇನೆ. ಇದಕ್ಕೆ ರತ್ನಗಳನ್ನು ಸೇರಿಸಿ ಮನೋಹರವಾಗಿರುವಂತೆ ಮಾಡಿದ್ದೇನೆ. ಎಲೈ ರಘು ಶ್ರೇಷ್ಠನೇ! ಇದನ್ನು ಸಮರ್ಪಿಸುತ್ತೇನೆ. ಸ್ವೀಕರಿಸು.

೧೧೭. ಎಲೈ ರಾಘವನೇ! ನನ್ನ ಹೃದಯದ ಪದ್ಮದ ಕರ್ಣಿಕೆಯ ಮಧ್ಯ ಭಾಗದಲ್ಲಿ ನೀನು ಸೀತೆಯೊಡನೆ ಕುಳಿತುಕೋ. ಜೊತೆಯಲ್ಲಿಯೇ ಎಲ್ಲಾ ಆವರಣ ವನ್ನೂ ಇಟ್ಟುಕೋ.

ಮನೋವಾಕ್ಕಾಯ ಜನಿತಂ ಕರ್ಮ ಯದ್ವಾ ಶುಭಾಶುಭಂ ।
ತತ್ಸರ್ವಂ ಪ್ರೀತಯೇ ಭೂಯಾನ್ನಮೋ ರಾಮಾಯ ಶಾರ್ಙ್ಗಿಣೇ ॥
ಅಪರಾಧಸಹಸ್ರಾಣಿ ಕ್ರಿಯಂತೇಽಹರ್ನಿಶಂ ಮಯಾ ।
ದಾಸೋಽಹಮಿತಿ ಮಾಂ ಮತ್ವಾ ಕ್ಷಮಸ್ವ ರಘುಪುಂಗವ ॥ ೧೧೯ ॥
ನಮಸ್ತೇ ಜಾನಕೀನಾಥ ರಾಮಚಂದ್ರ ಮಹೀಪತೇ ।
ಪೂರ್ಣಾನಂದೈಕರೂಪ ತ್ವಂ ಗೃಹಾಣಾರ್ಘ್ಯಂ ನಮೋಽಸ್ತು ತೇ ॥ ೧೨೦ ॥
ಏವಂ ಯಃ ಕುರುತೇ ಪೂಜಾಂ ಬಹಿರ್ವಾ ಹೃದಯೇಽಪಿ ಚ ।
ಸಕೃತ್ಪೂಜನಮಾತ್ರೇಣ ರಾಮ ಏವ ಭವೇನ್ನರಃ ॥ ೧೨೧ ॥
ಕಿಂ ಪುನಸ್ಸತತಂ ಬ್ರಹ್ಮಣ್ಯೇವಂ ಪೂಜ್ಯಸ್ಥಿತೋ ಹಿ ಸಃ ।
ಸರ್ವಾನ್ ಕಾಮಾನವಾಪ್ನೋತಿ ಚೇಹ ಲೋಕೇ ಪರತ್ರ ಚ ॥ ೧೨೨ ॥

---

೧೧೮. ಮನಸ್ಸು ಮಾತು, ದೇಹಗಳಿಂದ ಉತ್ಪನ್ನವಾದ ಶುಭ ಅಶುಭಗಳಾದ ಕರ್ಮಗಳೆಲ್ಲವೂ ಕೂಡ ನಿನಗೆ ಪ್ರೀತಿಯನ್ನುಂಟುಮಾಡಲಿ. ಶಾಂರ್ಗಿಯಾದ ನಿನಗೆ ನಮಸ್ಕಾರವು.

೧೧೯. ಹಗಲೂ ರಾತ್ರಿಯೂ ಕೂಡ ನಾನು ಸಾವಿರಾರು ತಪ್ಪುಗಳನ್ನು ಮಾಡುತ್ತೇನೆ. ಇವನು ನನ್ನ ದಾಸನೆಂದು ತಿಳಿದುಕೊಂಡು ಎಲೈ ರಘುಪುಂಗವನೇ! ಅವೆಲ್ಲವನ್ನೂ ಕ್ಷಮಿಸು.

೧೨೦. ಜಾನಕೀನಾಥನೇ! ನಿನಗೆ ನಮಸ್ಕಾರವು. ಮಹೀಪತಿಯಾದ ರಾಮಚಂದ್ರನೇ! ಪೂರ್ಣಾನಂದ ರೂಪನಾದ ನೀನು ಈ ಅರ್ಘ್ಯವನ್ನು ಸ್ವೀಕರಿಸು. ನಿನಗೆ ನಮಸ್ಕಾರವು.

೧೨೧. ಯಾವನು ಈ ರೀತಿಯಾಗಿ ಹೊರಗಡೆ ಪ್ರತಿಮೆಗಾಗಲಿ ಒಳಗೆ ಮನಸ್ಸಿನಲ್ಲಾಗಲೀ ಪೂಜೆಯನ್ನು ಮಾಡುತ್ತಾನೆಯೋ ಅವನು ಒಂದು ಸಾರಿ ಪೂಜೆ ಮಾಡುವುದರಿಂದಲೇ ರಾಮನೇ ಆಗುವನು. ಇನ್ನು ಹೇಳತಕ್ಕದ್ದೇನಿರುವುದು.

೧೨೨. ಹೀಗಿರುವಲ್ಲಿ ಯಾವಾಗಲೂ ಈ ರೀತಿಯಾಗಿ ಪೂಜಿಸುವವನು ಈ ಲೋಕ ಪರಲೋಕಗಳೆರಡರಲ್ಲಿಯೂ ಕೂಡ ಎಲ್ಲಾ ಇಷ್ಟಗಳನ್ನೂ ಹೊಂದುವನು.

ಏವಂ ಸುತೀಕ್ಷ್ಣ ತೇ ಪ್ರೋಕ್ತಂ ಯಥಾ ಪೃಷ್ಟಂ ತ್ವಯಾ ಮುನೇ ।
ಹೃದಯೇ ಮಾನಸೀ ಪೂಜಾ ವಿಧಾನಂ ರಾಘವಸ್ಯ ಚ ॥ ೧೨೩ ॥

॥ ಶ್ರೀರಾಮದಾಸ ಉವಾಚ ॥

ಏವಂ ಶಿಷ್ಯ ಸುತೀಕ್ಷ್ಣಾಯ ಮುನಯೇಽಗಸ್ತಿನಾ ಪುರಾ ।
ಯತ್ಪ್ರೋಕ್ತಂ ತನ್ಮಯಾ ಸರ್ವಂ ತವ ಪ್ರೋಕ್ತಂ ಸವಿಸ್ತರಾತ್ ॥

ಶಿಷ್ಯಾಧುನಾ ಬಹಿಃ ಪೂಜಾವಿಧಾನಂ ಚ ಮಯೋಚ್ಯತೇ ।
ನರಃ ಪ್ರಾತಃ ಸಮುತ್ಥಾಯ ಕೃತ್ವಾ ಶೌಚಾದಿಕಾಃ ಕ್ರಿಯಾಃ ॥ ೧೨೫ ॥

ಸ್ನಾತ್ವಾ ಸಂಧ್ಯಾದಿಕಂ ಕೃತ್ವಾ ದೇವಪೂಜಾಂ ಸಮಾರಭೇತ್ ।
ತೀರ್ಥೇ ದೇವಾಲಯೇ ವಾಪಿ ಗೋಷ್ಠೇ ಪುಣ್ಯಸ್ಥಲೇಷು ಚ ॥ ೧೨೬ ॥

---

೧೨೩. ಎಲೈ ಸುತೀಕ್ಷ್ಣನೇ! ನೀನು ಕೇಳಿದುದನ್ನು ಒಂದನ್ನೂ ಬಿಡದೆ ಈ ರೀತಿಯಾಗಿ ವಿವರಿಸಿರುವೆನು. ಇದು ರಾಮನ ಮಾನಸೀಪೂಜಾವಿಧಾನವಾಗಿರುವುದು.

೧೨೪. ಶ್ರೀ ರಾಮದಾಸನು ಹೇಳಿದನು:— ಎಲೈ ಶಿಷ್ಯನೇ! ಈ ರೀತಿಯಾಗಿ ಅಗಸ್ತ್ಯನು ಪೂರ್ವದಲ್ಲಿ ಸುತೀಕ್ಷ್ಣನಿಗೆ ಹೇಳಿದನು. ಅವನು ಹೇಗೆ ಹೇಳಿರುವನೋ ಅದೇ ರೀತಿಯಲ್ಲಿ ಎಲ್ಲವನ್ನೂ ನಿನಗೆ ಹೇಳಿದ್ದೇನೆ.

೧೨೫. ಎಲೈ ಶಿಷ್ಯನೇ! ಈಗ ಹೊರಗಿನ ಪೂಜೆಯ ವಿಧಾನವನ್ನು ಹೇಳುತ್ತೇನೆ ಕೇಳು. ಮನುಷ್ಯನಾದವನು ಬೆಳಗ್ಗೆ ಎದ್ದು ಮೊದಲು ಶೌಚಾದಿ ಕ್ರಿಯೆಗಳನ್ನು ಮಾಡಿಕೊಳ್ಳಬೇಕು.

೧೨೬. ಅನಂತರ ಸ್ನಾನಮಾಡಿ ಸಂಧ್ಯಾವಂದನಾದಿಗಳನ್ನು ಮಾಡಿಕೊಳ್ಳಬೇಕು. ಅನಂತರ ದೇವರ ಪೂಜೆಯನ್ನು ಆರಂಭಿಸಬೇಕು. ಈ ಪೂಜೆಯನ್ನು ತೀರ್ಥಗಳಲ್ಲಾಗಲಿ, ನದಿಯ ದಡದಲ್ಲಾಗಲಿ, ದೇವರ ಮನೆಯಲ್ಲಾಗಲಿ, ದೇವಾಲಯಗಳಲ್ಲಾಗಲಿ, ಕೊಟ್ಟಿಗೆಯಲ್ಲಾಗಲಿ, ಪುಣ್ಯಸ್ಥಳಗಳಲ್ಲಾಗಲೀ. ತುಲಸಿಯ ಹತ್ತಿರದಲ್ಲಾಗಲಿ ಮಾಡಬೇಕು.

ನದ್ಯಾಸ್ತಟೇ ದೇವಗೇಹೇ ತುಲಸೀಸನ್ನಿಧೌ ತಥಾ ।
ಲಿಪ್ತ್ವಾ ಭೂಮಿಂ ಗೋಮಯೇನ ತತೋ ಪದ್ಮಾನಿ ಲೇಖಯೇತ್ ॥
ಸಿತಾರಕ್ತಹರಿತ್ಪೀತನೀಲಕೃಷ್ಣಾದಿಸಂಭವೈಃ ।
ನಾನಾವರ್ಣೈಶ್ಚಿತ್ರಿತಾನಿ ತತ್ರ ಪೂಜಾಂ ಸಮಾರಭೇತ್ ॥ ೧೨೮ ॥

ಅಷ್ಟೋತರಸಹಸ್ರಶ್ರೀರಾಮಲಿಂಗಾತ್ಮಕಾಸನಂ ।
ಅಷ್ಟೋತ್ತರಶತಂ ಶ್ರೀಮದ್ರಾಮಲಿಂಗಾತ್ಮಕಾಸನಂ ॥ ೧೨೯ ॥

ಅಷ್ಟೋತ್ತರಸಹಸ್ರಶ್ರೀರಾಮಭದ್ರಾಸನಂ ಹಿ ವಾ ।
ಅಷ್ಟೋತ್ತರಶತಂ ಶ್ರೀಮದ್ರಾಮಭದ್ರಾಸನಂ ಶುಭಂ ॥ ೧೩೦ ॥

ಬಹೂನ್ಯನ್ಯಾನಿ ಶತಶಸ್ಸಂತಿ ಲಘ್ವಾಸನಾನಿ ಹಿ ।
ತೇಷಾಂ ಮಧ್ಯಾದೇಕಮೇವಾಸನಂ ಸಂಸ್ಥಾಪ್ಯ ಚಿತ್ರಿತಂ ॥ ೧೩೧ ॥

ಪೀಠೋಪರಿ ವಸ್ತ್ರಕೃತಂ ಪತ್ರಾದಿಷ್ವಪಿ ವಾ ಕೃತಂ ।
ಆಸನೋಪರಿ ಜಾನಕ್ಯಾ ರಾಘವಾದೀನ್ನ್ಯವೇಶಯೇತ್ ॥ ೧೩೨ ॥

೧೨೭-೧೨೮. ಪೂಜೆ ಮಾಡುವ ಸ್ಥಳದಲ್ಲಿ ಮೊದಲು ಗೋಮಯದಿಂದ ಆ ಜಾಗವನ್ನು ಸಾರಿಸಬೇಕು. ಅಲ್ಲಿ ಬಿಳಿಯ, ಕೆಂಪಿನ, ಅರಿಶಿನ ಬಣ್ಣದ, ನೀಲಿಯ, ಕಪ್ಪಾದ ಇನ್ನೂ ನಾನಾ ಬಣ್ಣದ ರಂಗವಲ್ಲಿಯಿಂದ ಪದ್ಮಗಳನ್ನು ಬರೆಯಬೇಕು. ಅದರ ಮೇಲೆ ಪೂಜೆಯನ್ನು ಆರಂಭಿಸಬೇಕು.

೧೨೯-೧೩೧. ಆ ಪದ್ಮದ ಮೇಲೆ ಸಾವಿರದೆಂಟು ಅಥವಾ ನೂರೆಂಟು ರಾಮ ಲಿಂಗಾಂಕಿತ ಆಸನವನ್ನಾಗಲಿ ಸಾವಿರದೆಂಟು ರಾಮ ಭದ್ರಾಂಕಿತವಾದ ಆಸನವನ್ನಾಗಲಿ ಅಥವಾ ಇನ್ನೂ ಅನೇಕವಾಗಿ ಲಘ್ವಾಸನಗಳಿರುವುವಷ್ಟೆ! ಅವುಗಳಲ್ಲಿ ಒಂದನ್ನಾಗಲಿ ಯಾವುದಾದರೂ ಒಂದನ್ನಿಡಬೇಕು.

೧೩೨-೧೩೩. ಆ ಪೀಠದ ಮೇಲೆ ವಸ್ತ್ರದಲ್ಲಿ ರಚಿಸಿದ ಅಥವಾ ಹೂಗಳಿಂದ ರಚಿಸಿದ ಸೀತಾರಾಮರ ಚಿತ್ರಗಳನ್ನು ಇಡಬೇಕು. ಸರ್ವತೋ ಭದ್ರವನ್ನು ರಚಿಸಿ

ಆಸನೇ ಸರ್ವತೋಭದ್ರಮಧ್ಯೇ ಪದ್ಮೋಪರಿ ನ್ಯಸೇತ್ ।
ಸೀತಯಾ ರಾಘವಂ ರಮ್ಯಂ ವರಸಿಂಹಾಸನೇ ಸ್ಥಿತಂ ॥ ೧೩೩ ॥

ರಾಮಸ್ಯ ಪೃಷ್ಠಭಾಗೇ ಚ ಲಕ್ಷ್ಮಣಂ ಸ್ಥಾಪಯೇತ್ತತಃ ।
ರಾಮಸ್ಯ ದಕ್ಷಿಣೇ ಪಾರ್ಶ್ವೇ ಭರತಂ ವಿನ್ಯಸೇಚ್ಛುಭಂ ॥ ೧೩೪ ॥

ರಾಮಸ್ಯ ವಾಮಪಾರ್ಶ್ವೇ ಹಿ ಶತ್ರುಘ್ನಂ ವಿನ್ಯಸೇಚ್ಛುಭಂ ।
ಪುರತೋ ರಾಮಚಂದ್ರಸ್ಯ ವಾಯುಪುತ್ರಂ ತು ವಿನ್ಯಸೇತ್ ॥ ೧೩೫ ॥

ರಾಮಸ್ಯ ವಾಯುದಿಗ್ಭಾಗೇ ಸುಗ್ರೀವಂ ಸ್ಥಾಪಯೇತ್ತತಃ ।
ಈಶಾನ್ಯಾಂ ರಾಮಚಂದ್ರಸ್ಯ ವಿನ್ಯಸ್ಯ ಚ ವಿಭೀಷಣಂ ॥ ೧೩೬ ॥

ರಾಮಸ್ಯ ವಹ್ನಿದಿಗ್ಭಾಗೇ ವಿನ್ಯಸೇದಂಗದಂ ತತಃ ।
ನೈರುತ್ಯಾಂ ರಾಮಚಂದ್ರಸ್ಯ ಜಾಂಬವಂತಂ ತು ವಿನ್ಯಸೇತ್ ॥ ೧೩೭ ॥

ಪೂಜ್ಯಪೂಜಕಯೋರ್ಮಧ್ಯೇ ಪ್ರಾಗ್ ದಿಕ್ ಜ್ಞೇಯಾರ್ಚನೇ ತ್ವಿಹ ।
ಸರ್ವಶಾಸ್ತ್ರೇಷ್ವೇವಮೇವ ನಿರ್ಣಯಃ ಕಥ್ಯತೇ ಬುಧೈಃ ॥ ೧೩೮ ॥

ಆದರ ಮಧ್ಯದಲ್ಲಿ ಪದ್ಮವನ್ನು ಬರೆದು ಆದರ ಮೇಲೆ ಸಿಂಹಾಸನದಲ್ಲಿ ಈ ಸೀತಾ ರಾಮರ ಚಿತ್ರವನ್ನು ಇಡಬೇಕು.

೧೩೪-೧೩೭. ಆನಂತರ ಆ ರಾಮನ ಹಿಂದುಗಡೆಯಲ್ಲಿ ಲಕ್ಷ್ಮಣನನ್ನು ಇಡಬೇಕು. ಆ ರಾಮನ ಬಲಗಡೆಯಲ್ಲಿ ಭರತನನ್ನು ಇಡಬೇಕು. ರಾಮನ ಎಡಗಡೆಗೆ ಶತ್ರುಘ್ನನನ್ನು ಇಡಬೇಕು. ಆ ರಾಮನ ಎದುರಿಗೆ ಹನುಮಂತ ನನ್ನು ಇಡಬೇಕು. ರಾಮನಿಗೆ ವಾಯವ್ಯದಿಕ್ಕಿನಲ್ಲಿ ಸುಗ್ರೀವನನ್ನು ಇಡಬೇಕು. ರಾಮನಿಗೆ ಈಶಾನ್ಯದಲ್ಲಿ ವಿಭೀಷಣನನ್ನು ಇಡಬೇಕು. ರಾಮನಿಗೆ ಆಗ್ನೇಯ ದಲ್ಲಿ ಅಂಗದನನ್ನು ಇಡಬೇಕು. ರಾಮನಿಗೆ ನೈರುತ್ಯ ದಿಕ್ಕಿನಲ್ಲಿ ಜಾಂಬವಂತ ನನ್ನಿಡಬೇಕು.

೧೩೮. ಪೂಜೆಮಾಡುವ ದೇವರು ಪಶ್ಚಿಮದಿಕ್ಕಿಗಿದ್ದು ಪೂಜೆಮಾಡು ವವನು ಪೂರ್ವದಿಕ್ಕಿಗೆ ಮುಖವನ್ನು ಮಾಡಿಕೊಂಡಂತೆ ಇರಬೇಕು. ಎಲ್ಲಾ ಶಾಸ್ತ್ರಗಳಲ್ಲಿಯೂ ಹೀಗೆಯೇ ಇರಬೇಕೆಂದು ನಿರ್ಣಯಿಸಿರುವುದು.

ಲಕ್ಷ್ಮಣಸ್ಯ ಕರೇ ದೇಯಂ ಛತ್ರಂ ಮುಕ್ತಾವಿರಾಜಿತಂ ।
ಭರತಸ್ಯ ಕರೇ ದೇಯಂ ಚಾಮರಂ ರುಕ್ಮಮಂಡಿತಂ ॥ ೧೩೯ ॥

ಶತ್ರುಘ್ನಸ್ಯ ಕರೇ ದೇಯಂ ವ್ಯಜನಂ ಚಿತ್ರಿತಂ ಶುಭಂ ।
ಹನೂಮತಃ ಕರೇ ದೇಯಂ ರಾಮಸ್ಯ ಪಾದುಕಾದ್ವಯಂ ॥ ೧೪೦ ॥

ಸುಗ್ರೀವಸ್ಯ ಕರೇ ದೇಯಂ ಜಲಪಾತ್ರಂ ಮನೋಹರಂ ।
ಕರೇ ವಿಭೀಷಣಸ್ಯಾಪಿ ದೇಯಂ ಮುಕುರಮುತ್ತಮಂ ॥ ೧೪೧ ॥

ದೇಯಂ ತಾಂಬೂಲಪಾತ್ರಂ ಚ ವಾಲಿನಂದನಸತ್ಕರೇ ।
ಜಾಂಬವತಃ ಕರೇ ದೇಯೋ ವಸ್ತ್ರಕೋಶೋ ಮಹತ್ತಮಃ ॥ ೧೪೨ ॥

ನವಾಯತನಮೇವಂ ಹಿ ಸ್ಥಾಪಯೇದ್ರಾಘವಸ್ಯ ಚ ।
ಅಥವಾ ಪಂಚಾಯತನಂ ಸ್ಥಾಪಯೇದಾಸನೋಪರಿ ॥ ೧೪೩ ॥

---

೧೩೯. ಲಕ್ಷ್ಮಣನ ಕೈಯಲ್ಲಿ ಮುತ್ತಿನಿಂದ ಅಲಂಕರಿಸಿರುವ ಛತ್ರಿಯನ್ನು ಹಿಡಿದಿರುವಂತೆ ಮಾಡಿರಬೇಕು. ಭರತನ ಕೈಯಲ್ಲಿ ಚಿನ್ನದ ಹಿಡಿಯುಳ್ಳ ಚಾಮರವನ್ನು ಕೊಟ್ಟಿರಬೇಕು.

೧೪೦. ಶತ್ರುಘ್ನನ ಕೈಯಲ್ಲಿ ಚಿತ್ರ ವಿಚಿತ್ರವಾಗಿರುವ ಬೀಸಣಿಗೆಯನ್ನು ಕೊಟ್ಟಿರಬೇಕು. ಹನುಮಂತನ ಕೈಯಲ್ಲಿ ರಾಮನ ಎರಡು ಪಾದುಕೆಗಳನ್ನು ಕೊಟ್ಟಿರಬೇಕು.

೧೪೧-೧೪೨. ಸುಗ್ರೀವನ ಕೈಯಲ್ಲಿ ಮನೋಹರವಾದ ನೀರಿರುವ ಪಾತ್ರೆಯನ್ನು ಕೊಟ್ಟಿರಬೇಕು. ವಿಭೀಷಣನ ಕೈಯಲ್ಲಿ ಚೆನ್ನಾಗಿರುವ ಕನ್ನಡಿಯನ್ನು ಕೊಟ್ಟಿರಬೇಕು. ವಾಲಿ ನಂದನನಾದ ಅಂಗದನ ಕೈಯುಲ್ಲಿ ತಾಂಬೂಲದ ಪಾತ್ರೆಯನ್ನು ಕೊಟ್ಟಿರಬೇಕು. ಜಾಂಬವಂತನ ಕೈಯಲ್ಲಿ ಬಟ್ಟೆಯ ಪೆಟ್ಟಿಗೆಯನ್ನು ಕೊಟ್ಟಿರಬೇಕು.

೧೪೩. ಇದೇ ಶ್ರೀರಾಮನ ನವ (ಒಂಭತ್ತು ಜನರಿರುವ) ಆಯತನವು. ಇದು ಶುಭವಾದುದು. ಇದಾಗದಿದ್ದರೆ ರಾಮನ ಪಂಚಾಯತನವನ್ನು ಇಟ್ಟುಕೊಳ್ಳಬಹುದು.

ಸೀತಯಾ ರಾಮಚಂದ್ರಂ ಚ ಮಧ್ಯೇ ಪೃಷ್ಠೇ ತು ಲಕ್ಷ್ಮಣಂ ।
ಭರತಂ ಸವ್ಯಪಾರ್ಶ್ವೇ ಚ ಶತ್ರುಘ್ನಂ ವಾಮಪಾರ್ಶ್ವಕೇ ॥ ೧೪೪ ॥

ಪುರತೋ ವಾಯುಪುತ್ರಂ ಚ ಪೂರ್ವೋಕ್ತೈರುಪಚಾರಕೈಃ ।
ಏವಂ ಸಂಸ್ಥಾಪಯೇದ್ಭಕ್ತ್ಯಾ ರಾಮಂ ಭದ್ರಾಸನೋಪರಿ ॥ ೧೪೫ ॥

ಅಥವಾ ಸೀತಯಾ ರಾಮಂ ಮಧ್ಯೇ ಸ್ಥಾಪ್ಯ ತತಃ ಪರಂ ।
ರಾಮಸ್ಯ ಪೃಷ್ಠೇ ಸೌಮಿತ್ರಿಂ ರಾಮಾಗ್ರೇ ವಾಯುನಂದನಂ ॥ ೧೪೬ ॥

ಸ್ಥಾಪ್ಯೈವಂ ಪೂಜಯೇದ್ಭಕ್ತ್ಯಾ ರಾಮಂ ಧೃತಶರಾಸನಂ ।
ಅಥವಾ ಸೀತಯಾ ರಾಮಂ ಲಕ್ಷ್ಮಣಂ ಪರಿಪೂಜಯೇತ್ ॥ ೧೪೭ ॥

ಸೀತಾತ್ಮಜೌ ವಿನಾ ಪೂಜಾ ರಾಮಸ್ಯೈಕಸ್ಯ ನಾಚರೇತ್ ।
ಕೃತಾ ಚೇದ್ವಿಘ್ನಕರ್ತ್ರೀ ಸಾ ಭವೇದತ್ರ ನ ಸಂಶಯಃ ॥ ೧೪೮ ॥

೧೪೪-೧೪೫. ಈ ಪಂಚಾಯತನವು ಹೇಗೆಂದರೆ ಹಿಂದೆ ಹೇಳಿದ ಸರ್ವತೋಭದ್ರದ ಮಧ್ಯದಲ್ಲಿರುವ ಪದ್ಮದ ಕರ್ಣಿಕೆಯಲ್ಲಿ ಆಸನವನ್ನಿಟ್ಟು ಅದರಮೇಲೆ ಸೀತಾರಾಮರನ್ನಿಡಬೇಕು. ಹಿಂದುಗಡೆಯಲ್ಲಿ ಲಕ್ಷ್ಮಣನನ್ನೂ ಬಲದಲ್ಲಿ ಭರತನನ್ನೂ ಎಡದಲ್ಲಿ ಶತ್ರುಘ್ನನನ್ನೂ ಎದುರಿನಲ್ಲಿ ಹನುಮಂತನನ್ನೂ ಹಿಂದೆ ಹೇಳಿರುವಂತೆ ಅವರವರ ಕೈಯಲ್ಲಿ ಆಯಾ ಪದಾರ್ಥಗಳನ್ನು ಕೊಟ್ಟು ಇಟ್ಟಿರಬೇಕು. ಈ ರೀತಿಯಾಗಿ ಭಕ್ತಿಯಿಂದ ರಾಮನನ್ನು ಭದ್ರಾಸನದಲ್ಲಿ ಕೂರಿಸಿರಬೇಕು.

೧೪೬-೧೪೭. ಈ ಪಂಚಾಯತನವೂ ಆಗದಿದ್ದಲ್ಲಿ ಆ ಕರ್ಣಿಕೆಯ ಮೇಲೆ ಸೀತಾರಾಮರನ್ನು ಕೂರಿಸಬೇಕು. ರಾಮನ ಹಿಂದೆ ಲಕ್ಷ್ಮಣನನ್ನೂ ಎದುರಿಗೆ ಹನುಮಂತನನ್ನೂ ಇಡಬೇಕು. ಆ ರಾಮನ ಕೈಯಲ್ಲಿ ಧನುಸ್ಸನ್ನು ಕೊಟ್ಟು ಇರಬೇಕು. ಅದೂ ಆಗದಿದ್ದರೆ ಸೀತೆ ರಾಮಲಕ್ಷ್ಮಣರನ್ನು ಆ ಕರ್ಣಿಕೆಯ ಮಧ್ಯದಲ್ಲಿಟ್ಟು ಪೂಜಿಸಬೇಕು.

೧೪೮. ಸೀತೆಯೂ ಲಕ್ಷ್ಮಣನೂ ಇಲ್ಲದೆ ರಾಮನೊಬ್ಬನಿಗೇ ಪೂಜೆಯನ್ನು ಮಾಡಬಾರದು. ಹಾಗೆ ರಾಮನನ್ನು ಒಬ್ಬನನ್ನೇ ಇಟ್ಟು ಪೂಜಿಸಿದರೆ ಅದರಲ್ಲಿ ವಿಘ್ನವೂ, ತೊಂದರೆಯೂ ಉಂಟಾಗುವುದು. ಸಂಶಯವಿಲ್ಲ.

ನವಾಯತನಪೂಜಾ ಸಾ ಶ್ರೇಷ್ಠಾ ಜ್ಞೇಯಾ ಶುಭಪ್ರದಾ ।
ಯಾ ಪಂಚಾಯತನೀ ಪೂಜಾ ಜ್ಞೇಯಾ ಸಾ ಮಧ್ಯಮಾತ್ರ ಹಿ ॥ ೧೪೯ ॥

ತ್ರಿದೈವತ್ಯಾ ತು ಯಾ ಪೂಜಾ ಕನಿಷ್ಠಾ ಸಾ ನಿಗದ್ಯತೇ ।
ಅತಿಕನಿಷ್ಠಾ ಪೂಜಾ ಸಾ ದ್ವಿದೈವತ್ಯಾ ಸ್ಮೃತಾತ್ರ ಹಿ ॥ ೧೫೦ ॥

ಕೋದಂಡಂ ವಾಮಹಸ್ತೇ ಚ ತೂಣೀರಂ ವಾಮಪೃಷ್ಠಕೇ ।
ನಿಜನಾಮಾಂಕಿತಂ ಬಾಣಂ ದಧಾನಂ ದಕ್ಷಿಣೇ ಕರೇ ॥ ೧೫೧ ॥

ಏವಂ ಶ್ರೀರಾಘವಂ ಸ್ಥಾಪ್ಯ ತತಃ ಪೂಜಾಂ ಸಮಾರಭೇತ್ ।
ಆತ್ಮನೋ ವಾಮಭಾಗೇ ಚ ಜಲಕುಂಭಂ ನಿಧಾಯ ಹಿ ॥ ೧೫೨ ॥

ಆತ್ಮನೋ ದಕ್ಷಿಣೇ ಭಾಗೇ ಪೂಜಾಪಾತ್ರಂ ನಿವೇಶಯೇತ್ ।
ಆತ್ಮನಃ ಪುರತಃ ಪಾತ್ರಂ ಸ್ಥಾಪಯೇದ್ವಿಸ್ತೃತಂ ವರಂ ॥ ೧೫೩ ॥

೧೪೯-೧೫೦. ಈ ಪೂಜೆಗಳಲ್ಲಿ ನವಾಯುತನ ಪೂಜೆಯೇ ಶ್ರೇಷ್ಠವಾದುದು. ಶುಭವಾದುದು. ಪಂಚಾಯತನ ಪೂಜೆಯು ಮಧ್ಯಮವೆಂದು ತಿಳಿಯತಕ್ಕದ್ದು. ರಾಮ ಲಕ್ಷ್ಮಣ ಸೀತೆಯರು ಮೂರು ಜನರನ್ನೇ ಪೂಜಿಸಿದರೆ ಅದು ಕನಿಷ್ಠವೆಂದು ತಿಳಿಯಬೇಕು. ಸೀತಾರಾಮರನ್ನೇ ಇಟ್ಟು ಪೂಜಿಸಿದರೆ ಅದು ಅತಿ ಕನಿಷ್ಠವಾದುದೆಂದು ಹೇಳಲ್ಪಟ್ಟಿದೆ.

೧೫೧. ಆ ರಾಮನು ಎಡಗೈಯಲ್ಲಿ ಕೋದಂಡವನ್ನು ಹಿಡಿದು ಎಡಭುಜದ ಮೇಲೆ ಹಿಂದುಗಡೆಯಲ್ಲಿ ಬತ್ತಳಿಕೆಯನ್ನು ಹಾಕಿಕೊಂಡು ಬಲಗೈಯಲ್ಲಿ ರಾಮ ನಾಮದಿಂದ ಮುದ್ರಿತವಾದ ಬಾಣವನ್ನು ಹಿಡಿದಿರಬೇಕು.

೧೫೨-೧೫೩. ರಾಮನನ್ನು ಈರೀತಿಯಾಗಿಟ್ಟು ಅನಂತರ ಪೂಜೆಯನ್ನು ಪ್ರಾರಂಭಿಸಬೇಕು. ಪೂಜಿಸುವವನು ತನ್ನ ಎಡಗಡೆಯಲ್ಲಿ ನೀರಿರುವ ಕಲಶವನ್ನು ಇಟ್ಟುಕೊಂಡಿರಬೇಕು. ತನ್ನ ಬಲಭಾಗದಲ್ಲಿ ಪೂಜೆಯ ಪಾತ್ರೆಗಳನ್ನಿಟ್ಟುಕೊಂಡಿರಬೇಕು. ತನ್ನ ಎದುರಿಗೆ ಪೂಜೆಯ ಪಾತ್ರೆಗಳನ್ನು ಇಟ್ಟುಕೊಂಡಿರಬೇಕು.

ಪ್ರಾಙ್ಮುಖಸ್ಸುಖಮಾಸೀನೋ ಧೃತಪದ್ಮಾಸನಶ್ಶುಚಿಃ ।
ಮೌನೀ ಧೃತಾಕ್ಷತುಲಸೀಮಾಲೋ ನಿಶ್ಚಲಮಾನಸಃ ॥ ೧೫೪ ॥

ಬದ್ಧಗ್ರಂಥಿಶಿಖಶ್ಶುದ್ಧವಸ್ತ್ರೋ ಧೃತಪವಿತ್ರಕಃ ।
ಶುದ್ಧದ್ವಾರಾವತೀಮೃತ್ಕೃತ್ತಿಲಕೋ ಮುದ್ರಿಕಾಂಕಿತಃ ॥ ೧೫೫ ॥

ತತ್ವಾದೌ ಗಣರಾಜಂ ಚ ತಿಥಿವಾರಾದಿ ಕೀರ್ತಯೇತ್ ।
ಭೂಮಿಶುದ್ಧಿಂ ಭೂತಶುದ್ಧಿಂ ನ್ಯಾಸೌ ಕೃತ್ವಾ ಯಥಾಕ್ರಮಂ ॥ ೧೫೬ ॥

ಪ್ರೋಕ್ಷಣೀಪಾತ್ರಮೇಕಂ ತು ಜಲಪೂರ್ಣಂ ಪ್ರಕಾರಯೇತ್ ।
ದೂರ್ವಾಗಂಧಾಕ್ಷತೈಃ ಪುಷ್ಪೈಸ್ತತ್ಪಾತ್ರಂ ಪರಿಪೂರಯೇತ್ ॥ ೧೫೭ ॥

---

೧೫೪. ಪೂಜೆ ಮಾಡುವವನು ಪೂರ್ವ ಮುಖವಾಗಿ ಕುಳಿತುಕೊಳ್ಳಬೇಕು. ಪದ್ಮಾಸನವನ್ನು ಹಾಕಿಕೊಳ್ಳಬೇಕು. ಶುಚಿಯಾಗಿರಬೇಕು. ಮೌನವನ್ನು ಧರಿಸಿರಬೇಕು. ಅಕ್ಷಮಾಲೆಯನ್ನಾಗಲೀ, ತುಳಸೀ ಮಾಲೆಯನ್ನಾಗಲೀ ಹಿಡಿದಿರಬೇಕು. ನಿಶ್ಚಲವಾದ ಮನಸ್ಸಿನಿಂದಿರಬೇಕು.

೧೫೫. ಜುಟ್ಟನ್ನು ಗಂಟುಹಾಕಿಕೊಂಡಿರಬೇಕು. ಶುದ್ಧ ವಸ್ತ್ರವನ್ನು ಧರಿಸಿರಬೇಕು. ಪವಿತ್ರವನ್ನು ಹಾಕಿಕೊಂಡಿರಬೇಕು. ಶುದ್ಧವಾದ ದ್ವಾರಕೆಯ ಮೃತ್ತಿಕೆಯಿಂದ ತಿಲಕವನ್ನು ಹಾಕಿಕೊಂಡಿರಬೇಕು.

೧೫೬. ಮೊದಲು ಗಣಪತಿಯ ಪ್ರಾರ್ಥನೆಯನ್ನು ಮಾಡಬೇಕು. ಅನಂತರ ತಿಥಿ ವಾರಗಳನ್ನು ಹೇಳಬೇಕು. ಅನಂತರ ಭೂಮಿ ಶುದ್ಧಿಯನ್ನೂ, ಭೂತ ಶುದ್ಧಿಯನ್ನೂ ಮಾಡಿಕೊಂಡು ಕರನ್ಯಾಸ, ಅಂಗನ್ಯಾಸಗಳನ್ನೂ ಮಾಡಿಕೊಳಬೇಕು.

೧೫೭. ಅನಂತರ ಪ್ರೋಕ್ಷಣೇ ಪಾತ್ರವನ್ನೂ ಜಲಪೂರ್ಣ ಪಾತ್ರೆಯನ್ನೂ ಇಟ್ಟುಕೊಂಡು ದೂರ್ವೆ, ಗಂಧ, ಅಕ್ಷತೆ ಹೂವುಗಳಿಂದ ಕಲಶವನ್ನು ಪೂಜಿಸಬೇಕು.

ಪ್ರೋಕ್ಷಯೇತ್ತೇನ ನೀರೇಣ ಪೂಜಾದ್ರವ್ಯಂ ಸಹಾತ್ಮನಾ ।
ಪಾದಾರ್ಘ್ಯಾಚಮನಾರ್ಥಂ ತು ತ್ರೀಣಿ ಪಾತ್ರಾಣಿ ವಿನ್ಯಸೇತ್ ।
ಗಣರಾಜಂ ಪೂಜಯಿತ್ವಾ ಸಂಪೂಜ್ಯ ವರುಣಂ ತತಃ ॥ ೧೫೮ ॥

ಪಾಂಚಜನ್ಯಂ ಪೂಜಯಿತ್ವಾ ಪ್ರೋಕ್ಷಯೇತ್ತಜ್ಜಲೈರಪಿ ।
ಪೂಜಾದ್ರವ್ಯಂ ಪೂರ್ವವಚ್ಚ ಸ್ವಾತ್ಮಾನಂ ಚ ಭುವಂ ತಥಾ ॥ ೧೫೯ ॥

ಧೇನುಶಂಖಚಕ್ರಪಕ್ಷಿರಾಜಮುದ್ರಾಃ ಪ್ರದರ್ಶಯೇತ್ ।
ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ॥ ೧೬೦ ॥

ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ।
ಅಥ ಧ್ಯಾಯೇದ್ರಾಮಚಂದ್ರಂ ಸಸೀತಂ ಪುರತಃ ಸ್ಥಿತಂ ॥ ೧೬೧ ॥

---

೧೫೮. ಆ ಪೂಜಿಸಿದ ಕಲಶದ ನೀರಿನಿಂದ ಪೂಜಾದ್ರವ್ಯಗಳನ್ನೂ ತನ್ನನ್ನೂ ಪ್ರೋಕ್ಷಿಸಿಕೊಳ್ಳಬೇಕು. ಪಾದ್ಯ, ಅರ್ಘ್ಯ, ಆಚಮನಗಳಿಗೋಸ್ಕರ ಬೇರೆಬೇರೆಯಾಗಿ ಮೂರು ಪಾತ್ರೆಗಳನ್ನಿಟ್ಟುಕೊಳ್ಳಬೇಕು. ಮೊದಲು ಗಣಪತಿಯನ್ನು ಪೂಜಿಸಬೇಕು. ಅನಂತರ ವರುಣನನ್ನು ಪೂಜಿಸಬೇಕು.

೧೫೯. ಶಂಖ ಪೂಜೆಯನ್ನು ಮಾಡಬೇಕು. ಅದರ ನೀರಿನಿಂದಲೂ ಕೂಡ ಎಲ್ಲವನ್ನೂ ಪ್ರೋಕ್ಷಣೆಮಾಡಬೇಕು. ತನ್ನನ್ನು ಪ್ರೋಕ್ಷಿಸಿಕೊಂಡು ಅಲ್ಲಿನ ನೆಲವನ್ನು ಪ್ರೋಕ್ಷಿಸಬೇಕು.

೧೬೦-೧೬೧. ಧೇನುಮುದ್ರೆ, ಶಂಖಮುದ್ರೆ, ಚಕ್ರಮುದ್ರೆ, ಗರುಡಮುದ್ರೆ, ಗಳನ್ನು ತೋರಿಸಬೇಕು. ಶಿಲೆ, ಮರ, ಲೋಹ, ಅಚ್ಚುಹಾಕಿದುದು, ಬರೆದ ಚಿತ್ರ ಮರಳಿನದು, ಮನಸ್ಸಿನಲ್ಲಿ ಭಾವಿಸಿಕೊಂಡುದು, ಮಣಿಯ ವಿಕಾರವಾದುದು ಎಂಬುದಾಗಿ ಪ್ರತಿಮೆಯು ಎಂಟು ಬಗೆಯಾಗಿರುವುದು. ಇವುಗಳಲ್ಲಿ ಯಾವುದನ್ನಾದರೂ ಒಂದನ್ನು ಇಟ್ಟುಕೊಂಡು ಅದರಲ್ಲಿ ಸೀತಾಸಹಿತನಾದ ರಾಮಚಂದ್ರನನ್ನು ಧ್ಯಾನಿಸಿಕೊಳ್ಳಬೇಕು.

ದ್ವಿಭುಜಂ ಧೃತತೂಣೀರಚಾಪಬಾಣಂ ಧೃತಾಯುಧಂ ।
ದಿವ್ಯಾಲಂಕಾರಸಂಯುಕ್ತಂ ಪೀತಕೌಶೇಯವಾಸಸಂ ॥ ೧೬೨ ॥

ಸಲಕ್ಷ್ಮಣಂ ಸಶತ್ರುಘ್ನಂ ಭರತೇನ ಸಮನ್ವಿತಂ ।
ಹನುಮತ್ಸೇವಿತಪದಂ ಸಿಂಹಾಸನವಿರಾಜಿತಂ ॥ ೧೬೩ ॥

ಸಿತಚ್ಛತ್ರಸಮಾಯುಕ್ತಂ ದಿವ್ಯಚಾಮರವೀಜಿತಂ ।
ವಿಭೀಷಣಸಮಾಯುಕ್ತಂ ಸುಗ್ರೀವಪರಿವಂದಿತಂ ॥ ೧೬೪ ॥

ಜಾಂಬವತ್ಸಸಮಾಯುಕ್ತಮಂಗದೇನ ಪರಿಷ್ಟುತಂ ।
ಅಯೋಧ್ಯಾವಾಸಿನಂ ರಾಮಮೇವಂ ಹೃದಿ ವಿಚಿಂತಯೇತ್ ॥ ೧೬೫ ॥

ಸೀತಾರಾಮ ಸಮಾಗಚ್ಛ ಮದಗ್ರೇ ತ್ವಂ ಸ್ಥಿರೋ ಭವ ।
ಗೃಹಾಣ ಪೂಜಾಂ ಮದ್ದತ್ತಾಂ ಕೃತನಾವಾಹನಂ ಮಯಾ ॥ ೧೬೬ ॥

೧೬೨-೧೬೩. ಆ ರಾಮನು ಎರಡು ಕೈಗಳುಳ್ಳವನಾಗಿರಬೇಕು. ಎಡಗೈಯಲ್ಲಿ ಕೋದಂಡವನ್ನೂ ಎಡ ಭುಜದ ಮೇಲೆ ಬತ್ತಳಿಕೆಯನ್ನೂ ಬಲಗೈಯಲ್ಲಿ ಸ್ವನಾಮಾಂಕಿತ ಬಾಣವನ್ನೂ ಹಿಡಿದಿರಬೇಕು. ದಿವ್ಯಾಲಂಕಾರಗಳನ್ನು ಹಾಕಿಕೊಂಡು ಹೊಂಬಣ್ಣದ ರೇಷ್ಮೆಯ ಬಟ್ಟೆಯನ್ನು ಧರಿಸಿರಬೇಕು. ಲಕ್ಷ್ಮಣ ಭರತ ಶತ್ರುಘ್ನ, ಹನುಮಂತರಿಂದ ಕೂಡಿರಬೇಕು. ತಾನು ಸಿಂಹಾಸನದಲ್ಲಿ ಕುಳಿತಿರಬೇಕು.

೧೬೪-೧೬೫. ಶ್ವೇತಛತ್ರಿಯನ್ನು ಹಿಡಿದಿರಬೇಕು. ಚಾಮರವನ್ನು ಬೀಸಿಸಿಕೊಳ್ಳುತ್ತಿರಬೇಕು. ವಿಭೀಷಣನೂ, ಸುಗ್ರೀವನೂ ಇರಬೇಕು. ಜಾಂಬವನೂ ಅಂಗದನೂ ಸೇವಿಸುತ್ತಿರಬೇಕು. ಈ ರೀತಿಯಾಗಿ ಅಯೋಧ್ಯೆಯಲ್ಲಿರುವಂತೆ ರಾಮನನ್ನು ಹೃದಯದಲ್ಲಿ ಧ್ಯಾನಿಸಿಕೊಳ್ಳಬೇಕು.

೧೬೬. ಎಲೈ ಸೀತಾರಾಮನೇ! ನೀನು ಬಾ. ಎದುರಿನಲ್ಲಿ ಸ್ಥಿರವಾಗಿ ಕುಳಿತುಕೊ. ನಿನ್ನನ್ನು ಆವಾಹಿಸಿದ್ದೇನೆ. ನಾನು ಮಾಡುವ ಪೂಜೆಯನ್ನು ಸ್ವೀಕರಿಸು.

ಹಿರಣ್ಮಯಂ ರತ್ನಯುಕ್ತಂ ನಾನಾಚಿತ್ರವಿಚಿತ್ರಿತಂ ।
ಸಿಂಹಾಸನಂ ಸವಸ್ತ್ರಂ ತೇ ಹ್ಯಾಸನಾರ್ಥಂ ದದಾಮ್ಯಹಂ ॥ ೧೬೭ ॥
ಚಂದನಾಗರುಸಂಯುಕ್ತೈರ್ಜಲೈಸ್ತೀರ್ಥಸಮುದ್ಭವೈಃ ।
ಪಾದ್ಯಂ ಗೃಹಾಣ ಶ್ರೀರಾಮ ಮಯಾ ದತ್ತಂ ಪ್ರಸೀದ ಮೇ ॥ ೧೬೮ ॥
ಪುಷ್ಕರಾದಿಷು ತೀರ್ಥೇಷು ಗಂಗಾದಿಷು ಸರಿತ್ಸು ಚ ।
ಯತ್ತೋಯಂ ತನ್ಮಯಾನೀತಂ ದತ್ತಮರ್ಘ್ಯಂ ಗೃಹಾಣ ಭೋ ॥
ಸುಗಂಧವಾಸಿತಂ ತೋಯಂ ಬಹುತೀರ್ಥಸಮುದ್ಭವಂ ।
ಆಚಮನಾರ್ಥಮಾನೀತಂ ಗೃಹಾಣ ತ್ವಂ ಸ್ಥಿರೋ ಭವ ॥ ೧೭೦ ॥
ಹರಿದ್ರಾಕುಂಕುಮೈರ್ಯುಕ್ತಂ ಸುಗಂಧದ್ರವ್ಯಮಿಶ್ರಿತಂ ।
ಸುಗಂಧಸ್ನೇಹಸಂಮಿಶ್ರಮುದ್ವರ್ತನಮಥಾಸ್ತು ತೇ ॥ ೧೭೧ ॥

---

೧೬೭. ರತ್ನದಿಂದ ಕೂಡಿದ ನಾನಾ ಚಿತ್ರಗಳಿಂದ ಚಿತ್ರಿತವಾಗಿರುವ ಚಿನ್ನದ ಸಿಂಹಾಸನವನ್ನು ಕೊಟ್ಟಿದ್ದೇನೆ. ಆದಕ್ಕೆ ವಸ್ತ್ರವನ್ನು ಹಾಕಿರುವೆನು. ಅದರಲ್ಲಿ ಕುಳಿತುಕೊ.

೧೬೮. ಚಂದನ, ಅಗರುಗಳಿಂದ ಕೂಡಿದ ತೀರ್ಥದಿಂದ ತಂದ ನೀರನ್ನು ತಂದಿದ್ದೇನೆ. ಇದನ್ನು ತೆಗೆದುಕೊ. ಕಾಲನ್ನು ತೊಳೆಯುತ್ತೇನೆ. ನನಗೆ ಪ್ರಸನ್ನನಾಗು.

೧೬೯. ಎಲೈ ರಾಮನೇ! ಪುಷ್ಕರವೇ ಮುಂತಾದ ತೀರ್ಥಗಳಿಂದಲೂ, ಗಂಗೆಯೇ ಮುಂತಾದ ನದಿಗಳಿಂದಲೂ ಪವಿತ್ರವಾದ ನೀರನ್ನು ತಂದಿದ್ದೇನೆ. ಇದನ್ನು ಅರ್ಘ್ಯಕ್ಕೆ ಕೊಡುತ್ತೇನೆ. ಸ್ವೀಕರಿಸು.

೧೭೦. ಬಹು ತೀರ್ಥಗಳಿಂದ ನೀರನ್ನು ತಂದು ಅದಕ್ಕೆ ಸುವಾಸನೆಯ ದ್ರವ್ಯಗಳನ್ನು ಹಾಕಿ ಸುವಾಸನೆ ಬರುವಂತೆ ಮಾಡಿದ್ದೇನೆ. ಇದನ್ನು ನಿನಗೆ ಆಚಮನಕ್ಕೋಸ್ಕರ ಮಾಡಿದ್ದೇನೆ. ಇದನ್ನು ತೆಗೆದುಕೊ.

೧೭೧. ಅರಿಶಿನಕುಂಕುಮಗಳಿಂದ ಕೂಡಿದ ಸುಗಂಧ ದ್ರವ್ಯಗಳನ್ನು ಒಳಗೊಂಡಿರುವ ಸುಗಂಧವಾದ ಎಣ್ಣೆಗಳನ್ನು ಬೆರೆಸಿರುವ ಈ ಉದ್ವರ್ತನವನ್ನು ಸ್ವೀಕರಿಸು. (ಮೈಗೆ ತೊಡೆದುಕೊಳ್ಳುವ ಎಣ್ಣೆಗೆ ಉದ್ವರ್ತನವೆಂದು ಕರೆಯುತ್ತಾರೆ.)

ಕಾಮಧೇನೂದ್ಭವಂ ಕ್ಷೀರಂ ನಂದಿನ್ಯಾ ದಧಿ ಸುಂದರಂ ।
ಕಪಿಲಾಯಾ ಘೃತಂ ಶ್ರೇಷ್ಠಂ ಮಧು ವಿಂಧ್ಯಾದ್ರಿಸಂಭವಂ ॥ ೧೭೨ ॥
ಸಿತೋತ್ಪಲಸಮಾನಾಭಂ ಸಿತಾಯುಕ್ತಂ ಮನೋಹರಂ ।
ಪಂಚಾಮೃತಂ ಮಯಾನೀತಂ ಸ್ನಾನಾರ್ಥಂ ತ್ವಂ ಗೃಹಾಣ ಭೋ ॥

ಗಂಗಾ ಚ ಯಮುನಾ ಚೈವ ಗೋದಾವರೀ ಸರಸ್ವತೀ ।
ನರ್ಮದಾ ಸಿಂಧುಕಾವೇರೀ ಸರಯೂ ಗಂಡಕೀ ತಥಾ ॥ ೧೭೪ ॥
ತಾಮ್ರಪರ್ಣೀ ಭೀಮರಥೀ ಕೃಷ್ಣಾ ವೇಣೀ ಮಹಾನದೀ ।
ಗೋಮತೀ ಸಾಗರಾಸ್ಸಪ್ತ ಪಯೋಷ್ಣೀ ಭವನಾಸಿನೀ ॥ ೧೭೫ ॥
ಪೂರ್ಣಾ ತಾಪೀ ತುಂಗಭದ್ರಾ ಕ್ಷಿಪ್ರಾ ವೇಗವತೀ ತಥಾ ।
ಪಿನಾಕೀ ಪ್ರದರಾ ಸಿಂಧುಷೇಣಾ ಸಾರ್ಧತ್ರಯಾ ನದಾಃ ॥ ೧೭೬ ॥
ಘೃತಮಾಲಾ ಕೃತ್ತಮಾಲಾ ಮಹೀ ನಿಕ್ಷೇಪಿಕಾ ತಥಾ ।
ಪಯೋದಾ ಪ್ರೇಮಗಂಗಾ ಚ ಚಿತ್ರಗಂಗಾಕರಾ ನದೀ ॥ ೧೭೭ ॥
ನೀರಾ ಚರ್ಮಣ್ವತೀ ವೃದ್ಧಾ ವಂಜರಾ ಚ ಪುನಃ ಪುನಾ ।
ಸಿಂಧುಕ್ಷೀರಾ ಚ ವೈಕುಂಠಾಲಕನಂದಾ ಚ ದಾರುಣಾ ॥ ೧೭೮ ॥

೧೭೨-೧೭೩. ಕಾಮಧೇನುವಿನ ಹಾಲನ್ನೂ, ನಂದಿನಿಯ ಮೊಸರನ್ನೂ, ಕಪಿಲೆ ಹಸುವಿನ ತುಪ್ಪವನ್ನೂ, ವಿಂಧ್ಯಪರ್ವತದಿಂದ ತಂದ ಜೇನುತಪ್ಪವನ್ನೂ, ಬಿಳಿಯ ಕಮಲದಂತೆ ಇರುವ ಮನೋಹರವಾದ ಸಕ್ಕರೆಯನ್ನೂ ಸೇರಿಸಿ ಪಂಚಾಮೃತವನ್ನು ತಂದಿದ್ದೇನೆ. ಇದನ್ನು ಸ್ನಾನಕ್ಕೋಸ್ಕರ ಸ್ವೀಕರಿಸು.

೧೭೪-೧೭೯. ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು ಕಾವೇರಿ, ಸರಯೂ, ಗಂಡಕೀ, ತಾಮ್ರಪರ್ಣೀ, ಭೀಮರಥಿ, ಕೃಷ್ಣಾ, ವೇಣೀ, ಮಹಾನದಿ, ಗೋಮತಿ ಈ ನದಿಗಳು ಮತ್ತು ಏಳು ಸಮುದ್ರಗಳು ಪಯೋಷ್ಣಿ, ಭವನಾಶಿನಿ, ಪೂರ್ಣಾ, ತಪತೀ, ತುಂಗಭದ್ರೆ, ಕ್ಷಿಪ್ರಾ, ವೇಗವತಿ, ಪಿನಾಕಿನಿ, ಪ್ರಾದರೆ, ಸಿಂಧುಷೇಷಣ, ಸಾರ್ಧತ್ರಯ, ಈ ನದಿಗಳು, ಘೃತಮಾಲ, ಕೃತ್ತಮಾಲಾ, ಮಹೀ, ನಿಕ್ಷೇಪಕೆ, ಪಯೋದೆ, ಪ್ರೇಮಗಂಗೆ, ಚಿತ್ರಗಂಗಾ, ನೀರಾಕರ ಚರ್ಮಣ್ವತೀ, ವೃದ್ಧಾ, ವಂಜರಾ, ಪುನಃಪುನಾ, ಸಿಂಧುಕ್ಷೀರೆ, ವೈಕುಂಠೆ,

ಇತ್ಯಾದಿ ಸರ್ವತೀರ್ಥೇಷು ಯತ್ತ್ರೋಯಂ ವರ್ತತೇ ಶುಭಂ |
ತನ್ಮಯಾನೀತಮದ್ಯಾತ್ರ ಸ್ನಾನಂ ಕುರು ರಘೂತ್ತಮ ॥ ೧೭೯ ॥

ಪುನರಾಚಮನಂ ರಮ್ಯಂ ಸರ್ವತೀರ್ಥಸಮುದ್ಭವಂ |
ಗೃಹಾಣ ರಘುನಾಥ ತ್ವಂ ದೀಯತೇ ಯನ್ಮಯಾ ತವ ॥ ೧೮೦ ॥

ಸುವರ್ಣತಂತುಭಿಶ್ಚಿತ್ರಂ ಪೀತಕೌಶೇಯಸಂಭವಂ ।
ವಸ್ತ್ರಯುಗ್ಮಂ ಪ್ರದಾಸ್ಯಾಮಿ ಗೃಹಾಣ ರಘುನಾಯಕ ॥ ೧೮೧ ॥

ಶುದ್ಧಂ ಹೇಮಮಯಂ ರಮ್ಯಂ ನವತಂತುಸಮುದ್ಭವಂ |
ಬ್ರಹ್ಮಗ್ರಂಥಿಸಮಾಯುಕ್ತಂ ಬ್ರಹ್ಮಸೂತ್ರಂ ಪ್ರಗೃಹ್ಯತಾಂ ॥ ೧೮೨ ॥

ಮುಕುಟಂ ಕುಂಡಲೇ ರಮ್ಯೇ ಮುದ್ರಿಕಾಃ ಕಂಕಣೇ ತಥಾ |
ನೂಪುರೇ ರಶನಾಮಾಲಾಃ ಕೇಯೂರೇ ರತ್ನಮಂಡಿತೇ ॥ ೧೮೩ ॥

ಅಲಕನಂದೆ, ದಾರುಣೆ ಇವೇ ಮುಂತಾದ ತೀರ್ಥಗಳಲ್ಲಿರುವ ಶುಭವಾದ ತೀರ್ಥವನ್ನು ತಂದಿದ್ದೇನೆ ಈ ತೀರ್ಥದಲ್ಲಿ ಎಲೈ ರಘೋತ್ತಮನೇ ! ನೀನು ಸ್ನಾನವನ್ನು ಮಾಡು.

೧೮೦. ಸರ್ವ ತೀರ್ಥಗಳಿಂದಲೂ ತಂದ ಈ ತೀರ್ಥವನ್ನು ಕೊಡುತ್ತೇನೆ. ಎಲೈ ರಘೋತ್ತಮನೇ ! ಇದರಿಂದ ಪುನರಾಚಮನವನ್ನು ಮಾಡು.

೧೮೧. ಬಿಳಿಯ ರೇಷ್ಮೆಯನ್ನು ಹುರಿ ಮಾಡಿ ಅದಕ್ಕೆ ಸುವರ್ಣದ ತಂತುವನ್ನು ಹಾಕಿ ಎಂದರೆ ಚಿನ್ನದ ಸರಿಗೆಯನ್ನು ಸುತ್ತಿ ಚಿತ್ರವಾಗಿ ಮಾಡಿರುವ ಎರಡು ಬಟ್ಟೆಗಳನ್ನು ಕೊಡುತ್ತೇನೆ. ಎಲೈ ರಘುನಾಯಕನೆ! ಇವನ್ನು ಸ್ವೀಕರಿಸು.

೧೮೨. ಶುದ್ಧವಾದ ಚಿನ್ನದಿಂದ ಮಾಡಿದ ಮನೋಹರವಾದ ಒಂಭತ್ತು ನೂಲುಗಳನ್ನು ಸೇರಿಸಿರುವ ಬ್ರಹ್ಮಗಂಟಿನಿಂದ ಕೂಡಿರುವ ಈ ಯಜ್ಞೋಪವೀತವನ್ನು ಕೊಡುತ್ತೇನೆ. ಸ್ವೀಕರಿಸು.

೧೮೩-೧೮೪. ಎಲೈ ರಾಮನೇ! ಕಿರೀಟ, ಕುಂಡಲಗಳು, ಉಂಗುರ, ಕೈ ಬಳೆಗಳು, ಕಾಲು ಬಳೆಗಳು, ಉಡಿದಾರ, ಮಾಲೆಗಳು, ಭುಜಕೀರ್ತಿ ಇವೇ

ಇತ್ಯಾದೀನ್ ಪರ್ವನ್ಯಾನ್ ದಿವ್ಯಾನ್ ಸ್ವರ್ಣಮಾಣಿಕ್ಯನಿರ್ಮಿತಾನ್ ।
ತ್ವದರ್ಥಂ ಚ ಮಯಾನೀತಾನಲಂಕಾರಾನ್ ಗೃಹಾಣ ಭೋ ॥ ೧೮೪ ॥

ಛತ್ರಂ ಸವ್ಯಜನಂ ರಮ್ಯಂ ಚಾಮರದ್ವಯಸಂಯುತಂ ।
ತ್ವದರ್ಥಂ ಚ ಸಮಾನೀತಂ ಗೃಹ್ಣೀಷ್ವ ರಿಪುಸೂದನ ॥ ೧೮೫ ॥

ಸುಗಂಧಂ ಚಂದನಂ ದಿವ್ಯಂ ಕೃಷ್ಣಾಗರುವಿಮಿಶ್ರಿತಂ ।
ರಕ್ತಗಂಧನಸಂಯುಕ್ತಂ ಗೃಹ್ಣೀಷ್ವ ತ್ವಂ ಮಯಾರ್ಪಿತಂ ॥ ೧೮೬ ॥

ಅಕ್ಷತಾಂಶ್ಚ ವರಾನ್ ದಿವ್ಯಾನ್ ಮುಕ್ತಾಫಲವಿನಿರ್ಮಿತಾನ್ ।
ಕಸ್ತೂರ್ಯಾ ಕುಂಕುಮೇನಾಕ್ತಾನ್ ಗೃಹಾಣ ಪರಮೇಶ್ವರ ॥ ೧೮೭ ॥

ಮಾಲ್ಯಾದೀನಿ ಸುಗಂಧೀನಿ ಮಾಲತ್ಯಾದೀನಿ ವೈ ಪ್ರಭೋ ।
ಮಯಾ ಹೃತಾನಿ ಪೂಜಾರ್ಥಂ ಗೃಹಾಣ ರಘುನಾಯಕ ॥ ೧೮೮ ॥

ಮೊದಲಾದ ಚಿನ್ನದಿಂದ ಮಾಡಿದ ಮಾಣಿಕ್ಯವನ್ನು ಸೇರಿಸಿರುವ ಅಲಂಕಾರಗಳನ್ನು (ಒಡವೆಗಳನ್ನು) ನಿನಗೋಸ್ಕರ ತಂದಿದ್ದೇನೆ. ಇವನ್ನು ತೆಗೆದುಕೊ.

೧೮೫. ಎಲೈ ಶತ್ರುನಾಶಕನೇ! ವ್ಯಜನಗಳನ್ನೂ ಚಾಮರಗಳನ್ನೂ ತಂದಿದ್ದೇನೆ. ಇವನ್ನು ನಿನಗೋಸ್ಕರಲೇ ತಂದಿದ್ದೇನೆ. ಕೃಪೆಮಾಡಿ ತೆಗೆದುಕೊ.

೧೮೬. ಈ ಚಂದನವು ಸುಗಂಧವುಳ್ಳದ್ದಾಗಿದೆ. ದಿವ್ಯವಾಗಿದೆ. ಕೃಷ್ಣಾಗರುವನ್ನು ಸೇರಿಸಿದ್ದೇನೆ. ಕೆಂಪು ಗಂಧವನ್ನು ಸೇರಿಸಿದ್ದೇನೆ. ಇವನ್ನು ನಿನಗೆ ಅರ್ಪಿಸುತ್ತೇನೆ. ಸ್ವೀಕರಿಸು.

೧೮೭. ಮುತ್ತಿನಲ್ಲಿ ಮಾಡಿರುವ ಈ ಅಕ್ಷತೆಗಳು ಬಹು ರಮ್ಯವಾಗಿವೆ. ಕಸ್ತೂರಿ, ಕುಂಕುಮಕೇಸರಿಗಳನ್ನು ಸವರಿದ್ದೇನೆ. ಎಲೈ ಪರಮೇಶ್ವರನೇ! ಸ್ವೀಕರಿಸು.

೧೮೮. ಮಾಲತಿ (ಜಾಜಿ)ಯೇ ಮುಂತಾದ ಸುಗಂಧದ ಹೂಗಳನ್ನು ಕಟ್ಟಿ ಮಾಲೆಯನ್ನು ಮಾಡಿದ್ದೇನೆ. ನಿನ್ನ ಪೂಜೆಗೋಸ್ಕರ ಕಟ್ಟಿದ್ದೇನೆ. ರಘುನಾಯಕನೇ! ಇದನ್ನು ತೆಗೆದುಕೊ.

ವನಸ್ಪತಿರಸೋದ್ಭೂತಂ ಗಂಧಾಢ್ಯಂ ಗಂಧಮುತ್ತಮಂ ।
ಆಘ್ರೇಯಂ ಸರ್ವದೇವಾನಾಂ ಧೂಪಂ ಗೃಹ್ಣೀಷ್ವ ರಾಘವ ॥ ೧೮೯ ॥

ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ ।
ದೀಪಂ ಗೃಹಾಣ ಭೋ ರಾಮ ತ್ರೈಲೋಕ್ಯತಿಮಿರಾಪಹ ॥ ೧೯೦ ॥

ಭಕ್ಷ್ಯೈ ಭೋಜ್ಯೈಶ್ಚ ಸಂಯುಕ್ತಂ ಸಪಾಯಸಘೃತಾನ್ವಿತಂ ।
ಶರ್ಕರಾಮಧುಸಂಯುಕ್ತಂ ನೈವೇದ್ಯಂ ಪ್ರತಿಗೃಹ್ಯತಾಂ ॥ ೧೯೧ ॥

ಆಮ್ರಾದೀನಿ ಸುಪಕ್ವಾನಿ ಫಲಾನಿ ವಿವಿಧಾನಿ ಚ ।
ಸಮರ್ಪಿತಾನಿ ತೇ ರಾಮ ಗೃಹ್ಣೀಷ್ವ ರಘುನಂದನ ॥ ೧೯೨ ॥

ಪೂಗೀಫಲಸಮಾಯುಕ್ತಂ ನಾಗವಲ್ಲೀದಳೈರ್ಯುತಂ ।
ಜಾತೀಚತುಷ್ಟಯಯುತಂ ತಾಂಬೂಲಂ ಸ್ವೀಕುರು ಪ್ರಭೋ ॥ ೧೯೩ ॥

---

೧೮೯. ವನಸ್ಪತಿಯ ರಸದಿಂದ ಉತ್ಪನ್ನವಾದ ಸುವಾಸನೆಯಿಂದ ಕೂಡಿದ ಉತ್ತಮವಾದ ಎಲ್ಲಾ ದೇವತೆಗಳಿಗೂ ವಾಸನೆ ನೋಡಲು ಯೋಗ್ಯವಾದ ಈ ಧೂಪವನ್ನು ಸ್ವೀಕರಿಸು.

೧೯೦. ಮೂರು ಬತ್ತಿಗಳನ್ನು ಜೋಡಿಸಿ ಅದನ್ನು ತುಪ್ಪದಲ್ಲಿ ನೆನೆಸಿ ಬೆಂಕಿಯನ್ನು ಹಚ್ಚಿದ್ದೇನೆ. ಇದನ್ನು ನಿನಗೆ ದೀಪವಾಗಿ ಸಮರ್ಪಿಸುತ್ತೇನೆ. ಮೂರು ಲೋಕದ ಕತ್ತಲೆಯನ್ನೂ ನಾಶಮಾಡುವವನೇ ಇದನ್ನು ಸ್ವೀಕರಿಸು.

೧೯೧. ಭಕ್ಷ್ಯ ಭೋಜ್ಯಗಳಿಂದಲೂ ಪಾಯಸ ತುಪ್ಪಗಳಿಂದಲೂ ಕೂಡಿದ ಈ ನೈವೇದ್ಯವನ್ನು ತಂದಿದ್ದೇನೆ. ಸಕ್ಕರೆಯನ್ನೂ ಜೇನುತುಪ್ಪವನ್ನೂ ಇಟ್ಟಿದ್ದೇನೆ. ಇದನ್ನು ಸ್ವೀಕರಿಸು.

೧೯೨. ಮಾವಿನ ಹಣ್ಣೇ ಮುಂತಾದುವುಗಳನ್ನು ತಂದಿದ್ದೇನೆ. ಅವು ಕಳಿತಿವೆ. ವಿಧವಿಧವಾದ ಹಣ್ಣುಗಳವೆ. ಎಲೈ ರಾಮನೇ! ನಿನಗೆ ಸಮರ್ಪಿಸಿದ್ದೇನೆ. ಇದನ್ನು ಸ್ವೀಕರಿಸು.

೧೯೩. ಒಳ್ಳೆಯ ಅಡಕೆಯಿಂದ ಕೂಡಿದ ಈ ವೀಳೆಯದೆಲೆ ಯಿರುವುದು. ಜಾಯಿಕಾಯಿ, ಜಾಯಿಪತ್ರೆ, ಲವಂಗ, ಏಲಕ್ಕಿ ಈ ನಾಲ್ಕರಿಂದಲೂ ಕೂಡಿದೆ. ಈ ತಾಂಬೂಲವನ್ನು ಸ್ವೀಕರಿಸು.

ಹಿರಣ್ಯಂ ಬ್ರಹ್ಮಸಂಭೂತಂ ವಹ್ನಿತೇಜಸ್ಸಮುದ್ಭವಂ ।
ದೀಯತೇ ದಕ್ಷಿಣಾರ್ಥಂ ತೇ ಗೃಹ್ಣೀಷ್ವ ರಘುನಂದನ ॥ ೧೯೪ ॥

ಏವಂ ಮಯಾ ಷೋಡಶಚೋಪಚಾರಾಃ
ಸವಿಸ್ತರಂ ತೇ ಕಥಿತಂ ಶಿಶೋತ್ರ ।
ಆವಾಹನಾದ್ಯಾಶ್ಚ ಹಿ ದಕ್ಷಿಣಾಂತಾಃ
ಶೇಷಾಂ ಚ ಪೂಜಾಂ ಸಕಲಾಂ ಹಿ ವಕ್ಷ್ಯೇ ॥ ೧೯೫ ॥

ಪಂಚವರ್ತಿಸಮಾಯುಕ್ತಂ ಕಪಿಲಾಜ್ಯವಿಮಿಶ್ರಿತಂ ।
ವಹ್ನಿನಾ ಯೋಜಿತಂ ರಮ್ಯಂ ಗೃಹ್ಣೀಷ್ವ ತ್ವಂ ನಿರಾಜನಂ ॥ ೧೯೬ ॥

ಜಾತೀ ಪಂಚಕಮಂದಾರೌ ಕೇತಕೀ ತುಲಸೀ ತಥಾ ।
ದಮನೋ ಮುನಿಕುಂದೇ ಚ ಹ್ಯನಂತಂ ತ್ರಿಂತಿ ನೈ ನವ ॥ ೧೯೭ ॥

ಏವಂ ನವವಿಧೈಃ ಪುಷ್ಪೈಃ ಮಂತ್ರಪುಷ್ಪಾಣಿ ರಾಘವ ।
ಮಯಾರ್ಪಿತಾನಿ ಗೃಹ್ಣೀಷ್ವ ಪ್ರಸೀದ ಪರಮೇಶ್ವರ ॥ ೧೯೮ ॥

---

೧೯೪. ಬ್ರಹ್ಮನಿಂದ ಹುಟ್ಟಿದ ಅಗ್ನಿಯ ತೇಜಸ್ಸನ್ನು ಹೊಂದಿರುವ ಈ ಚಿನ್ನವನ್ನು ನಿನಗೆ ದಕ್ಷಿಣೆಯಾಗಿ ಕೊಡುತ್ತೇನೆ. ಸ್ವೀಕರಿಸು.

೧೯೫. ಎಲೈ ಶಿಷ್ಯನೇ! ಈ ರೀತಿಯಾಗಿ ಆವಾಹನದಿಂದ ಮೊದಲುಗೊಂಡು ದಕ್ಷಿಣೆ ಸಮರ್ಪಣೆಯುವರೆಗೂ ಇರುವ ಷೋಡಶೋಪಚಾರ (ಹದಿನಾರು ಉಪಚಾರಗಳ)ಗಳ ಪೂಜೆಯನ್ನು ಹೇಳಿದ್ದೇನೆ. ಉಳಿದ ಪೂಜೆಗಳೆಲ್ಲವನ್ನೂ ಕ್ರಮವಾಗಿ ಹೇಳುತ್ತೇನೆ.

೧೯೬. ಐದು ಬತ್ತಿಗಳನ್ನು ಸೇರಿಸಿ ಕಪಿಲೆಯ ಹಸುವಿನ ತುಪ್ಪದಿಂದ ನೆನೆಸಿದ್ದೇನೆ. ಅದನ್ನು ಬೆಂಕಿಯಿಂದ ಉರಿಮಾಡಿದ್ದೇನೆ. ರಮ್ಯವಾಗಿದೆ. ಈ ನೀರಾಜನವನ್ನು ನೀನು ಸ್ವೀಕರಿಸು.

೧೯೭-೧೯೮. ಜಾಜಿ, ಸಂಪಿಗೆ, ಪಾರಿಜಾತ ತಾಳೆ, ತುಳಸಿ, ದವನ, ಆಗಸೆ ಹೂವು, ಮಲ್ಲಿಗೆ, ಬೃಹತಿ, (ಗರಿಗ) ಎಂದು ಒಂಭತ್ತು ಬಗೆಯ ಹೂಗಳಿಂದ ಮಂತ್ರ ಪುಷ್ಪವನ್ನು ಸಮರ್ಪಿಸುತ್ತೇನೆ. ಎಲೈ ಪರಮೇಶ್ವರನೇ! ಇದನ್ನು ತೆಗೆದುಕೊ ಪ್ರಸನ್ನನಾಗು.

ಯಾನಿ ಕಾನಿ ಚ ಪಾಪಾನಿ ಜನ್ಮಾಂತರಕೃತಾನಿ ಚ ।
ತಾನಿ ಸರ್ವಾಣಿ ನಶ್ಯಂತು ಪ್ರದಕ್ಷಿಣ ಪದೇ ಪದೇ ॥ ೧೯೯ ॥

ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ ।
ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಸಾಷ್ಟಾಂಗಶ್ಚ ನಮೋಽಸ್ತುತೇ ॥

ಆವಾಹನಂ ನ ಜಾನಾಮಿ ನ ಜಾನಾಮಿ ವಿಸರ್ಜನಂ ।
ಪೂಜಾಂ ಚೈವ ನ ಜಾನಾಮಿ ಕ್ಷಮ್ಯತಾಂ ಪರಮೇಶ್ವರ ॥ ೨೦೧ ॥

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಘೂತ್ತಮ ।
ಯತ್ಪೂಜಿತಂ ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥ ೨೦೨ ॥

ಏವಂ ಶ್ರೀರಾಮಚಂದ್ರಸ್ಯ ಭಕ್ತ್ಯಾ ಕಾರ್ಯಂ ಪ್ರಪೂಜನಂ ।
ನಿರಂತರಂ ತಥಾ ಕಾರ್ಯಂ ನವಮ್ಯಾಂ ಚ ವಿಶೇಷತಃ ॥ ೨೦೩ ॥

---

೧೯೯. ಜನ್ಮ ಜನ್ಮಾಂತರಗಳಲ್ಲಿ ಮಾಡಿದ ಯಾವ ಯಾವ ಪಾಪಗಳುಂಟೋ ಅವೆಲ್ಲವೂ ಈ ಪ್ರದಕ್ಷಿಣದ ಹೆಜ್ಜೆ ಹೆಜ್ಜೆಗೂ ನಾಶಹೊಂದಲಿ.

೨೦೦- ಎದೆ, ತಲೆ, ಕಣ್ಣು, ಮನಸ್ಸು, ಮಾತು, ಕಾಲುಗಳು, ಕೈಗಳು, ಮಂಡಿಗಳು ಇವಿಷ್ಟರಿಂದಲೂ ಮಾಡುವ ನಮಸ್ಕಾರವು ಸಾಷ್ಟಾಂಗ ನಮಸ್ಕಾರವು. ಅಂತಹ ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತೇನೆ. ನಿನಗೆ ನಮಸ್ಕಾರವು.

೨೦೧. ಆವಾಹನೆ ಮಾಡುವುದೂ ನನಗೆ ತಿಳಿಯುವುದಿಲ್ಲ. ವಿಸರ್ಜನೆ ಮಾಡುವುದೂ ನನಗೆ ತಿಳಿಯುವುದಿಲ್ಲ. ಪೂಜೆಮಾಡುವುದೂ ಕೂಡ ಬರುವುದಿಲ್ಲ. ಆದ್ದರಿಂದ ಎಲೈ ಪರಮೇಶ್ವರನೇ ! ಯಾವ ತಪ್ಪಿದ್ದರೂ ಕ್ಷಮಿಸು.

೨೦೨. ಎಲೈ ದೇವನೇ ! ನಾನು ಮಂತ್ರದಲ್ಲಿ ಕಡಿಮೆ ಮಾಡಿರಬಹುದು. ಕ್ರಿಯೆಯಲ್ಲಿ ಕಡಿಮೆ ಮಾಡಿರಬಹುದು. ಭಕ್ತಿಯೂ ನನಗೆ ಕಡಿಮೆ. ನಾನು ಯಾವ ರೀತಿಯಲ್ಲಿ ಕಡಿಮೆಯಾಗಿ ಮಾಡಿದ್ದರೂ ಅದು ನಾನು ಪೂರ್ಣವಾಗಿ ಮಾಡಿದ ಪೂಜೆಯಾಗಿಯೇ ನಿನಗೆ ಆಗಲಿ.

೨೦೩. ಈ ರೀತಿಯಾಗಿ ರಾಮಚಂದ್ರನ ಪೂಜೆಯನ್ನು ಭಕ್ತಿಯಿಂದ ಮಾಡಬೇಕು. ನಿತ್ಯವೂ ಹೀಗೆಯೇ ಮಾಡಬೇಕು. ನವಮಿಯ ದಿವಸದಲ್ಲಿ ವಿಶೇಷವಾಗಿ ಪೂಜೆಮಾಡಬೇಕು.

॥ ವಿಷ್ಣುದಾಸ ಉವಾಚ ॥

ಗುರೋ! ನವವಿಧೈಃ ಪುಷ್ಪೈಸ್ತ್ವಯಾ ಪುಷ್ಪಾಂಜಲಿಃ ಕಥಂ ।
ನಿವೇದಿತೋತ್ರ ರಾಮಸ್ಯ ಪೂಜನೇ ತದ್ವದಸ್ವ ಮಾಂ ॥ ೨೦೪ ॥

ತ್ವತ್ತೋ ನಾನಾವಿಧಾಃ ಪೂಜಾಸ್ಸುರಾಣಾಂ ಚ ಮಯಾ ಶ್ರುತಾಃ ।
ಪೂರ್ವಂ ತಾಸು ಶ್ರುತೋ ನೈವ ನವಪುಷ್ಪಾಂಜಲಿಃ ಕದಾ ॥ ೨೦೫ ॥

॥ ಶ್ರೀರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ಶಿಷ್ಯ ಸಾವಧಾನಮನಾಃ ಶೃಣು ।
ಅಸೀತ್ಪುರಾ ದ್ವಿಜವರಃ ಕಾವೇರ್ಯಾ ಉತ್ತರೇ ತಟೇ ॥ ೨೦೬ ॥

ರಾಮನಾಥಪುರೇ ಕಶ್ಚಿತ್ಸುಂದರಾಖ್ಯೋತಿಭಕ್ತಿಮಾನ್ ।
ತಸ್ಯಾಸನ್ನವಪುತ್ರಾಶ್ಚ ರಾಮಚಿಂತನತತ್ಪರಾಃ ॥ ೨೦೭ ॥

ಚಂದ್ರೋತಿಚಂದ್ರಶ್ಚಂದ್ರಾಭಶ್ಚಂದ್ರಾಸ್ಯಶ್ಚಂದ್ರಶೇಖರಃ ।
ಚಂದ್ರಾಂಶುರ್ಜಿತಚಂದ್ರಶ್ಚ ಚಂದ್ರಚೂಡೋಷ್ಟಮಃ ಸ್ಮೃತಃ ॥ ೨೦೮ ॥

---

೨೦೪. ವಿಷ್ಣುದಾಸನು ಹೇಳಿದನು:— ಎಲೈ ಗುರುವೇ, ! ರಾಮನಿಗೆ ಪುಷ್ಪಾಂಜಲಿಯನ್ನು ಕೊಡಬೇಕೆಂದು ಹೇಳಿದೆಯಲ್ಲ ಆದರಲ್ಲಿ ಒಂಭತ್ತು ಬಗೆಯ ಹೂಗಳಿರಬೇಕೆಂದು ಹೇಳಿದೆಯಷ್ಟೆ. ಅದು ಏಕೆ? ಹೇಗೆ? ಎಂಬುದನ್ನು ಹೇಳು.

೨೦೫. ಅನೇಕ ವಿಧವಾಗಿ ದೇವತೆಗಳಿಗೆ ಪೂಜೆಮಾಡುವಿಕೆಯನ್ನು ನೀನೇ ನನಗೆ ಹೇಳಿದ್ದೀಯೆ. ಅವುಗಳೊಂದರಲ್ಲಿಯೂ ಈ ನವ ವಿಧವಾದ ಪೂಜೆಯನ್ನು ಹೇಳಲಿಲ್ಲ. ಈಗ ಹೇಳಲು ಕಾರಣವೇನು

೨೦೬. ಶ್ರೀರಾಮದಾಸನು ಹೇಳಿದನು:— ಎಲೈ ಶಿಷ್ಯನೇ ನೀನು ಕೇಳಿದುದು ಸರಿಯಾಗಿದೆ. ಆದರೆ ಮನಸ್ಸಿಟ್ಟು ಕೇಳು. ಕಾವೇರಿ ನದಿಯ ಉತ್ತರ ದಡದಲ್ಲಿ ಒಬ್ಬ ಬ್ರಾಹ್ಮಣನಿದ್ದನು.

೨೦೭. ಅವನ ಊರು ರಾಮನಾಥಪುರವು. ಅವನ ಹೆಸರು ಸುಂದರ ಶರ್ಮನೆಂದು. ಅವನಿಗೆ ರಾಮನಲ್ಲಿ ಬಹುವಾದ ಭಕ್ತಿಯಿದ್ದಿತು. ಅವನಿಗೆ ಒಂಭತ್ತು ಜನ ಮಕ್ಕಳಿದ್ದರು. ಅವರೂ ಕೂಡ ರಾಮನಲ್ಲಿ ಭಕ್ತಿಯಿಟ್ಟು ಪೂಜೆ ಮಾಡತಕ್ಕವರೇ ಆಗಿದ್ದರು.

೨೦೮-೨೦೯. ಚಂದ್ರ, ಅತಿಚಂದ್ರ, ಚಂದ್ರಾಭ, ಚಂದ್ರಾಸ್ಯ, ಚಂದ್ರಶೇಖರ, ಚಂದ್ರಾಂಶು, ಜಿತಚಂದ್ರ, ಚಂದ್ರಚೂಡ, ರಾಮಚಂದ್ರ ಎಂಬುದಾಗಿ

ರಾಮಚಂದ್ರಶ್ಚೇತಿ ನವ ಗ್ರಹಾಭಾಶ್ಚ ನವಸ್ಮೃತಾಃ ।
ಏಕದಾ ತೇ ತ್ವಯೋಧ್ಯಾಯಾಂ ರಾಮಂ ಭಕ್ತಕೃಪಾಕರಂ ॥ ೨೦೯ ॥
ದ್ರಷ್ಟುಂ ಯಯುಃ ಚೈತ್ರಮಾಸೇ ತಸ್ಥುಸ್ತೇ ಸರಯೂತಟೇ ।
ತಾವತ್ತತ್ರ ಸಮಾಯಾತಾ ನಾನಾದೇಶಾಂತರಸ್ಥಿತಾಃ ॥ ೨೧೦ ॥
ಜನೌಘಾನಾಂ ಕೋಟಯಶ್ಚ ನಾನಾವಾಹನಸಂಸ್ಥಿತಾಃ ।
ಸರಯ್ವಾಂ ರಾಮತೀರ್ಥೇ ಹಿ ಚೈತ್ರಸ್ನಾನಾರ್ಥಮಾದರಾತ್ ॥ ೨೧೧ ॥
ತೇಷಾಂ ಸಮಾಗತಾನಾಂ ಹಿ ಸಂಮರ್ದಸ್ತತ್ರ ಹ್ಯಭೂತ್ ।
ಸಂಮರ್ದಾದ್ರಾಮಚಂದ್ರಸ್ಯ ತೇಷಾಂ ನಾಭೂಚ್ಚ ದರ್ಶನಂ ॥ ೨೧೨ ॥
ತದಾ ತೇ ಮಂತ್ರಯಾಮಾಸುರ್ನವ ವಿಪ್ರಾಃ ಪರಸ್ಪರಂ ।
ಕಥಂ ಶ್ರೀರಾಘವಸ್ಯಾತ್ರ ಸಂಮರ್ದೇ ದರ್ಶನಂ ಭವೇತ್ ॥ ೨೧೩ ॥

ಒಂಭತ್ತು ಜನ ಮಕ್ಕಳು ನವಗ್ರಹಗಳಂತೆ ಬೆಳಗುತ್ತಿದ್ದರು. ಇವರೆಲ್ಲರೂ ಒಂದು ಸಾರಿ ಭಕ್ತರಲ್ಲಿ ಕೃಪೆಯುಳ್ಳ ರಾಮಚಂದ್ರನನ್ನು ನೋಡಲು ಅಯೋಧ್ಯೆಗೆ ಹೋದರು.

೨೧೦. ಆಗ ಚೈತ್ರಮಾಸವಾಗಿದ್ದಿತು. ಅವರು ಅಯೋಧ್ಯೆಗೆ ಹೋಗಲು ಹೊರಟು ಸರಯೂ ನದಿಯ ದಡದಲ್ಲಿ ನಿಂತರು. ಅವರು ಅಲ್ಲಿರುವಂತೆಯೇ ಅಲ್ಲಿ ನಾನಾ ದೇಶದ ಜನಗಳು ಬಂದರು.

೨೧೧. ಜನಗಳು ಗುಂಪು-ಗುಂಪಾಗಿ ಕೋಟಿಗಟ್ಟಲೆಯಲ್ಲಿ ಅನೇಕವಾದ ವಾಹನಗಳ ಮೇಲೆ ಕುಳಿತು ಬರುತ್ತಿದ್ದರು. ಚೈತ್ರಮಾಸವಾದುದರಿಂದ ಅವರೆಲ್ಲರೂ ಸರಯೂ ನದಿಯಲ್ಲಿರುವ ರಾಮತೀರ್ಥದಲ್ಲಿ ಸ್ನಾನಮಾಡಬೇಕೆಂದು ಬರುತ್ತಿದ್ದರು.

೨೧೨. ಜನಗಳು ಹಾಗೆ ಅಲ್ಲಿ ಬರುತ್ತಿದ್ದುದರಿಂದ ಜನಗಳ ಗುಂಪು ಹೆಚ್ಚಿ ಗಲಭೆಯು ಹೆಚ್ಚಿತು. ಜನಗಳು ಹೆಚ್ಚಿ ಗಲಭೆಯಾದ ಕಾರಣ ರಾಮಚಂದ್ರನ ದರ್ಶನವು ಇವರಿಗಾಗಲೇ ಇಲ್ಲ.

೨೧೩. ಆಗ ಈ ಒಂಭತ್ತು ಜನರು ಒಬ್ಬರಿಗೊಬ್ಬರು ಇಂತೆಂದು ಮಾತನಾಡಿಕೊಂಡರು. ಈ ಗಲಭೆಯೊಳಗೆ ರಾಮಚಂದ್ರನ ದರ್ಶನವು ನಮಗೆ ಆಗುವ ಬಗೆ ಹೇಗೆ?

ಚೇಜ್ಜಾತಂ ತ್ವತಿಯತ್ನೇನ ತರ್ಹಿ ತತ್ಕಿಂ ತು ದರ್ಶನಂ ।
ಯಾವತ್ಸ್ವಸ್ಥೇನ ಮನಸಾ ರಾಘವೋ ನ ನಿರೀಕ್ಷಿತಃ ॥ ೨೧೪ ॥

ತಾವತ್ತದ್ದರ್ಶನಂ ನೈವ ನೋ ತುಷ್ಟಿಂ ಜನಯಿಷ್ಯತಿ ।
ತದಾ ಚಂದ್ರೋಽಬ್ರವೀಜ್ಯೇಷ್ಠಸ್ತ್ವತ್ರೈವ ರಾಮದರ್ಶನಂ ॥ ೨೧೫ ॥

ವಯಂ ತೀವ್ರೇಣ ಮನಸಾ ಪ್ರಾಪ್ಸ್ಯಾಮಸ್ತಪ್ಯತಾಂ ತಪಃ ।
ತಚ್ಚಂದ್ರವಚನಂ ಶ್ರುತ್ವಾ ಪುನಃ ಪ್ರೋಚುರ್ದ್ವಿಜೋತ್ತಮಾಃ ॥ ೨೧೬ ॥

ಏಕಕಾಲೇ ತು ಸರ್ವೇಷಾಂ ತಪತಾಮಂತರೇಣ ಹಿ ।
ಕಸ್ಯಾದೌ ರಾಮಚಂದ್ರಶ್ಚ ದಾಸ್ಯತ್ಯತ್ರ ಪ್ರದರ್ಶನಂ ॥ ೧೧೭ ॥

ಕಸ್ಯ ದಾಸ್ಯತಿ ಪಶ್ಚಾಚ್ಚ ವಿದಿತಂ ತದ್ಭವಿಷ್ಯತಿ ।
ಕಸ್ಯಾಸ್ಮಾಸು ಧೃಢಾಭಕ್ತಿರ್ವಿದಿತಾ ಸಾ ಭವಿಷ್ಯತಿ ॥ ೨೧೮ ॥

---

೨೧೪. ಒಂದು ವೇಳೆ ಬಹು ಕಷ್ಟದಿಂದ ನುಗ್ಗಿ ದರ್ಶನವನ್ನು ಮಾಡಿದರೂ ಅದೆಂತಹ ದರ್ಶನವು? ಅದು ಉಪಯೋಗವಿಲ್ಲದ್ದು. ಸ್ವಸ್ಥವಾದ ಮನಸ್ಸಿನಿಂದ ರಾಮನನ್ನು ನೋಡದಿದ್ದ ಮೇಲೆ ಆದರಿಂದ ಉಪಯೋಗವೇನು?

೨೧೫-೨೧೬. ಈ ಗಲಭೆಯಲ್ಲಿ ಆ ರಾಮನನ್ನು ನೋಡಿದರೂ ಆದರಿಂದ ಸಂತೋಷವಾಗಲೀ, ತೃಪ್ತಿಯಾಗಲೀ ಉಂಟಾಗುವುದಿಲ್ಲ. ಆಗ ಅವರಲ್ಲಿ ಚಂದ್ರನು ನಾವು ತೀವ್ರವಾಗಿ ತಪಸ್ಸು ಮಾಡೋಣ. ಇಲ್ಲಿಯೇ ರಾಮದರ್ಶನ ವನ್ನು ಮಾಡಬಹುದು. ಆದ್ದರಿಂದ ತಪಸ್ಸನ್ನು ಮಾಡಿರಿ ಎಂದನು. ಚಂದ್ರನು ಇಂತೆಂದುದನ್ನು ಕೇಳಿ ಅವರೆಲ್ಲರೂ ಇಂತೆಂದರು.

೨೧೭-೨೧೮. ಎಲ್ಲರೂ ಒಂದೇ ಕಾಲದಲ್ಲಿ ತಪಸ್ಸನ್ನು ಮಾಡುತ್ತ ಮಂತ್ರ ವನ್ನು ಉಚ್ಚಾರ ಮಾಡೋಣ, ಇದರಲ್ಲಿ ಯಾವನಿಗೆ ಮೊದಲು ರಾಮಚಂದ್ರನು ದರ್ಶನವನ್ನು ಕೊಡುವನು? ಯಾವನಿಗೆ ಅನಂತರದಲ್ಲಿ ಕೊಡುವನು? ಯಾವ ನಿಗೆ ಕೊನೆಯಲ್ಲಿ ಕೊಡುವನು? ಅದು ಗೊತ್ತಾಗುತ್ತದೆ. ನಮ್ಮಗಳಲ್ಲಿ ಯಾವ ನಿಗೆ ಧೃಢವಾದ ಭಕ್ತಿಯಿದೆ? ಎಂಬುದೂ ತಿಳಿಯುತ್ತದೆ.

ಏವಂ ಪರಸ್ಪರಂ ಚೋಕ್ತ್ವಾ ತೇ ಸರ್ವೇ ದ್ವಿಜಸೂನವಃ ।
ತ್ಯಕ್ತ್ವಾಹಾರಾ ವಾಯುಭಕ್ಷಾಶ್ಚೈಕಾಂತೇ ತತ್ಪರೇಣ ಹಿ ॥ ೨೧೯ ॥

ಗತ್ವಾತಿದೂರಂ ಸಂಮುದಾ೯ತ್ತೇಪುಸ್ಸರ್ವೇ ತಪೋ ಮಹತ್ ।
ತತ್ಸರ್ವಂ ರಾಘವೋ ಜ್ಞಾತ್ವಾ ಸರ್ವಸಾಕ್ಷೀ ಜಗತ್ಪ್ರಭುಃ ॥ ೨೨೦ ॥

ತೇಷಾಂ ಸ್ವಂ ದರ್ಶನಂ ದಾತುಂ ನವಮೇ ದಿವಸೇ ಮುದಾ ।
ಮಂತ್ರಯಾಮಾಸ ಶ್ರೀರಾಮಃ ಕ್ಷಣಂ ಚಿತ್ತೇ ಸಮಾಸ್ಥಿತಃ ॥ ೨೨೧ ॥

ಏಕಕಾಲೇ ತು ಸರ್ವೇಷಾಂ ಯದಿ ದಾಸ್ಯಾಮಿ ದರ್ಶನಂ ।
ತದೈವ ತುಷ್ಟಿಸ್ತೇಷಾಂ ಹಿ ಭವಿಷ್ಯತಿ ನ ಚೇನ್ನ ಹಿ ॥ ೨೨೨ ॥

ಅತೋದ್ಯಾಹಂ ಕರಿಷ್ಯಾಮಿ ನವರೂಪಾಣಿ ನಿಶ್ಚಯಾತ್ ।
ಏವಂ ಸಂಮಂತ್ರ್ಯ ಶ್ರೀರಾಮೋ ಲಕ್ಷ್ಮಣಂ ಪ್ರಾಹ ಸಾದರಂ ॥ ೨೨೩ ॥

೨೧೯-೨೨೦. ಅವರು ಹೀಗೆ ಒಬ್ಬರಿಗೊಬ್ಬರು ಮಾತನಾಡಿಕೊಂಡು ಆಹಾರವನ್ನು ಬಿಟ್ಟು ವಾಯು ಭಕ್ಷಕರಾಗಿದ್ದುಕೊಂಡು ಆ ಜನಗಳ ಗುಂಪನ್ನು ಬಿಟ್ಟು ದೂರಕ್ಕೆ ಹೋಗಿ ಏಕಾಂತದಲ್ಲಿ ಆ ರಾಮನಲ್ಲಿಯೇ ಮನಸ್ಸಿಟ್ಟವರಾಗಿ ಮಹತ್ತಾದ ತಪಸ್ಸನ್ನು ಮಾಡಿದರು. ಸರ್ವಸಾಕ್ಷಿಯೂ ಜಗತ್ಪ್ರಭುವೂ ಆದ ರಾಘವನಿಗೆ ಅದೆಲ್ಲವೂ ತಿಳಿಯಿತು.

೨೨೧-೨೨೨. ಅವರೆಲ್ಲರಿಗೂ ದರ್ಶನವನ್ನು ಕೊಡಲು ಒಂಭತ್ತನೆಯ ದಿವಸ ಹೋಗಬೇಕೆಂದು ಮನಸ್ಸಿನಲ್ಲಿಯೇ ಆಲೋಚಿಸಿಕೊಂಡನು. ಮತ್ತು ಒಂದೇ ಕಾಲದಲ್ಲಿ ಅವರೆಲ್ಲರಿಗೂ ನಾನು ದರ್ಶನವನ್ನು ಕೊಟ್ಟರೆ ಅವರಿಗೆಲ್ಲರಿಗೂ ತೃಪ್ತಿಯೂ ಸಂತೋಷವೂ ಉಂಟಾಗುತ್ತದೆ. ಇಲ್ಲದಿದ್ದರೆ ಉಂಟಾಗುವುದಿಲ್ಲವೆಂದೂ ತಿಳಿದನು.

೨೨೩. ಆದ್ದರಿಂದ ನಾನು ಒಂಭತ್ತು ಜನರಿಗೂ ದರ್ಶನವನ್ನು ಕೊಡಲು ಒಂಭತ್ತು ರೂಪಗಳನ್ನು ಮಾಡುತ್ತೇನೆ. ಈ ರೀತಿಯಾಗಿ ಯೋಚಿಸಿ ಶ್ರೀರಾಮನು ಆದರದಿಂದ ಲಕ್ಷ್ಮಣನನ್ನು ಕುರಿತು ಇಂತೆಂದನು.

ಶಿಬಿಕಾಮಾನಯಸ್ವಾದ್ಯ ಬಹಿರ್ಗಚ್ಛಾಮ್ಯಹಂ ಮುದಾ ।
ತಥೇತಿ ರಾಮವಾಕ್ಯೇನ ಶಿಬಿಕಾಂ ಲಕ್ಷ್ಮಣಸ್ತಥಾ ॥ ೨೨೪ ॥

ಆನಯಾಮಾಸ ದೂತೈಸ್ಸ ರಾಘವಾಯ ನ ವೇದಯತ್ ।
ತದಾ ಸಿಂಹಾಸನಾದ್ರಾಮಶ್ಚೋತ್ತೀರ್ಯ ಶಿಬಿಕಾಸ್ಥಿತಃ ॥ ೨೨೫ ॥

ಬಂಧುಭಿರ್ಮಂತ್ರಿವರ್ಗೈಶ್ಚ ಸುಹೃನ್ಮಿತ್ರಾದಿಭಿರ್ಯುತಃ ।
ಬಹಿಶ್ಚನ್ವೈರಯೋಧ್ಯಾಯಾ ಯಯೌ ರಾಮೋ ಮುದಾನ್ವಿತಃ ॥ ೨೨೬ ॥

ತತಸ್ತಂ ಜನಸಂಮರ್ದಂ ಸಮುತಿಕ್ರಮ್ಯ ರಾಘವಃ ।
ಚಕಾರ ನವರೂಪಾಣಿ ಹ್ಯಾತ್ಮನಃ ಪರಮೇಶ್ವರಃ ॥ ೨೨೭ ॥

ಶಿಬಿಕಾಸ್ಸುಹೃದೋ ಭ್ರಾತೄನ್ ದೂತಾನ್ ಮಿತ್ರಾನ್ ಸವಾಹನಾನ್
ಚಕಾರ ಸ ನವಧಾ ರಾಮಃ ತದಾ ಸ ಕ್ಷಣಮಾತ್ರತಃ ॥ ೨೨೮ ॥

---

೨೨೪. ಎಲೈ ಲಕ್ಷ್ಮಣನೇ! ಪಲ್ಲಕ್ಕಿಯನ್ನು ತರಿಸು. ನಾನು ಪಟ್ಟಣದಿಂದ ಹೊರಗೆ ಹೋಗಬೇಕಾಗಿದೆ. ಎನ್ನಲು ರಾಮನ ಅಪ್ಪಣೆಯಂತೆ ಲಕ್ಷ್ಮಣನು ಪಲ್ಲಕ್ಕಿಯನ್ನು ತರಿಸಿದನು.

೨೨೫. ಪಲ್ಲಕ್ಕಿಯನ್ನು ತರಿಸಿ ಶ್ರೀರಾಮನಿಗೆ ತರಿಸಿದ್ದೇನೆಂದು ಹೇಳಿ ಒಪ್ಪಿಸಿದನು. ಒಡನೆಯೇ ರಾಮನು ಸಿಂಹಾಸನದಿಂದ ಇಳಿದು ಪಲ್ಲಕ್ಕಿಯಲ್ಲಿ ಕುಳಿತುಕೊಂಡನು.

೨೨೬. ತಮ್ಮಂದಿರನ್ನೂ, ಮಂತ್ರಿಗಳನ್ನೂ, ಸ್ನೇಹಿತರನ್ನೂ, ಮಿತ್ರರನ್ನೂ ಜೊತೆಯಲ್ಲಿ ಕರೆದುಕೊಂಡನು. ಒಡನೆಯೇ ಎಲ್ಲರೊಡನೆಯೂ ಅಯೋಧ್ಯೆಯಿಂದ ಹೊರಕ್ಕೆ ಹೊರಟನು.

೨೨೭-೨೨೮. ಆಗ ರಾಮನು ಆ ಜನಗಳ ಗುಂಪನ್ನು ದಾಟಿ ತಾನು ಒಂಭತ್ತು ಬಗೆಯಾಗಿ ರೂಪವನ್ನು ಹೊಂದಿದನು. ತಾನು ಒಂಭತ್ತು ಬಗೆಯಾದುದಲ್ಲದೆ ಪಲ್ಲಕ್ಕಿ, ಸ್ನೇಹಿತರು, ತಮ್ಮಂದಿರು, ದೂತರು, ಮಿತ್ರರು, ವಾಹನಗಳು ಎಲ್ಲವನ್ನೂ ಒಂಭತ್ತು ರೀತಿಯಲ್ಲಿ ರೂಪವನ್ನು ಹೊಂದಿಸಿದನು. ಇದಲ್ಲದೆ

ನಿರೀಕ್ಷಿತುಂ ಸಮಾಯಾತಾ ನಾತ್ಮಾನಂ ತಾನ್ ಜನಾನಪಿ ।
ಚಕಾರ ನವಧಾ ರಾಮಸ್ತದದ್ಭುತಮಿವಾಭವತ್ ॥ ೨೨೯ ॥

ತತಸ್ತೈಸ್ತೈರ್ಜನೈರ್ಮಿತ್ರೈರ್ದೂತೈರ್ಬಂಧುಜನೈಸ್ಸಹ ।
ಸರ್ವಾಸಾಂ ಭೂಸುರಾಣಾಂ ಹಿ ಯಯಾವಗ್ರೇ ರಘೂತ್ತಮಃ ॥ ೨೩೦ ॥

ತತಸ್ತೇ ಭೂಸುರಾಸ್ಸರ್ವೇ ತದೈಕಸಮಯೇ ಪ್ರಭುಂ ।
ಆತ್ಮನಃ ಪುರತೋ ರಾಮಂ ದದೃಶುಸ್ತಂ ಪೃಥಕ್ ಪೃಥಕ್ ॥ ೨೩೧ ॥

ತತ್ತುಷ್ಟಮನಸಸ್ಸರ್ವೇ ಪ್ರಣೇಮೂ ರಘುನಂದನಂ ।
ತತೋ ರಾಮ ಶ್ಶಿಬಿಕಾಭ್ಯಸ್ತ್ವವರುಹ್ಯ ಪೃಥಕ್ ಪೃಥಕ್ ॥ ೨೩೨ ॥

ನವರೂಪಧರಸ್ಸರ್ವಾನ್ವಿಪ್ರಾನಾಲಿಂಗ್ಯ ಸಾದರಂ ।
ಊಚುರ್ಮಧುರಯಾ ವಾಚಾ ಪ್ರಸನ್ನಮುಖಪಂಕಜಾಃ ॥ ೨೩೩ ॥

ತನ್ನನ್ನು ನೋಡಲು ಬಂದಿದ್ದ ಜನರನ್ನೂ ಒಂಭತ್ತು ಬಗೆಯಾಗುವಂತೆ ಮಾಡಿಕೊಂಡನು. ಇದು ನೋಡಲು ಬಹು ಅದ್ಭುತವಾಗಿದ್ದಿತು.

೨೩೦. ಅಲ್ಲದೆ ಆ ಜನರ ಮಿತ್ರರೂ, ಬಂಧುಗಳೂ, ದೂತರೂ, ತನ್ನ ಕಡೆಯವರೂ ಎಲ್ಲರನ್ನೂ ಸೇರಿಸಿಕೊಂಡು ಆ ಒಂಭತ್ತು ಜನ ಬ್ರಾಹ್ಮಣ ಕುಮಾರರ ಎದುರಿಗೂ ಒಬ್ಬಬ್ಬನ ಎದುರಿಗೆ ಒಂದೊಂದು ಗುಂಪಿನಂತೆ ಹೋದನು.

೨೩೧. ಆಗ ಆ ಬ್ರಾಹ್ಮಣ ಕುಮಾರರೆಲ್ಲರೂ ಒಂದೇ ಕಾಲದಲ್ಲಿ ತಮ್ಮ ತಮ್ಮ ಎದುರಿಗೆ ಬೇರೆಬೇರೆಯಾಗಿ ಬಂದು ನಿಂತಿದ್ದ ರಾಮನನ್ನು ನೋಡಿದರು.

೨೩೨ ಆಗ ಅವರೆಲ್ಲರೂ ಸಂತೋಷಗೊಂಡು ಆ ಶ್ರೀರಾಮನನ್ನು ನಮಸ್ಕರಿಸಿದರು. ಆಗ ರಾಮನು ಆ ಪಲ್ಲಕ್ಕಿಗಳಿಂದ ಬೇರೆಬೇರೆಯಾಗಿ ಅವರವರ ಮುಂದೆಯೇ ಇಳಿದನು.

೨೩೩. ಒಂಭತ್ತು ಬಗೆಯಾದ ರೂಪದಿಂದಲೂ, ಒಬ್ಬಬ್ಬ ಬ್ರಾಹ್ಮಣನನ್ನೂ ಒಂದೇ ಕಾಲದಲ್ಲಿ ಆಲಂಗಿಸಿಕೊಂಡನು. ಮತ್ತು ಆ ಒಂಭತ್ತು ರಾಮರೂ ಏಕ ಕಾಲದಲ್ಲಿ ಆ ಬ್ರಾಹ್ಮಣ ಕುಮಾರರನ್ನು ಕುರಿತು ಇಂತೆಂದರು.

॥ ರಾಮ ಉವಾಚ ॥

ಭೋ ವಿಪ್ರಾಃ ಶ್ರೂಯತಾಂ ಯೂಯಂ ಯುಷ್ಮಾಕಂ ಕೃತನಿಶ್ಚಯಂ ।
ಬುಧ್ವಾ ವಯಂ ಪೃಥಗ್ರೂಪೈರ್ಜಾತಾ ನವಧಾದ್ಯ ಹಿ ॥ ೨೩೪ ॥

ಏಕಕಾಲೇತ್ರ ತಪತಾಂ ಸರ್ವೇಷಾಂ ದರ್ಶನಂ ನಿಜಂ ।
ಕಸ್ಯ ದೇಯಂ ತು ಪೂರ್ವಂ ಹಿ ಪಶ್ಚಾತ್ಕಸ್ಯ ಪ್ರದೀಯತಾಂ ॥ ೨೩೫ ॥

ಇತಿ ಸಂಮಂತ್ರ್ಯ ಹೃದಯೇ ತ್ವದ್ಯೈಕಸಮಯೇನ ಹಿ ।
ಯುಷ್ಮಾಕಂ ದರ್ಶನಂ ದತ್ತಂ ವರಯಧ್ವಂ ವರಾನಿತಃ ॥ ೨೩೬ ॥

ರಾಮಾಣಾಂ ವಚನಂ ಶ್ರುತ್ವಾ ತೇ ಪ್ರೋಚುರ್ಭೂಸುರೋತ್ತಮಾಃ ।
ಯೇನಾಸ್ಮಾಕಂ ಭವೇತ್ಕೀರ್ತಿಸ್ಸ ವರೋ ದೀಯತಾಂ ತು ನಃ ॥ ೨೩೭ ॥

---

೨೩೪. ರಾಮರು ಹೇಳಿದರು:— ಎಲೈ ಬ್ರಾಹ್ಮಣರಿರಾ! ಕೇಳಿರಿ. ನೀವು ಮಾಡಿಕೊಂಡಿರುವ ನಿಶ್ಚಯ ಬುದ್ಧಿಯನ್ನು ಕೇಳಿ ತಿಳಿದ ನಾನು ನಿಮ್ಮನ್ನು ಏಕಕಾಲದಲ್ಲಿಯೇ ನೋಡಲು ಬೇರೆಬೇರೆಯಾಗಿ ಒಂಭತ್ತು ರೀತಿಯಾಗಿ ಬಂದೆನು.

೨೩೫-೨೩೬. ನಿಮ್ಮಗಳ ತಪಸ್ಸಿಗೆ ಮೆಚ್ಚಿ ನಿಮ್ಮಲ್ಲಿ ಯಾವನಿಗೆ ಮೊದಲು ದರ್ಶನವನ್ನು ಕೊಡಲಿ? ಯಾವನಿಗೆ ಅನಂತರದಲ್ಲಿ ದರ್ಶನವನ್ನು ಕೊಡಲಿ? ಎಂಬುದನ್ನು ವಿಮರ್ಶಿಸಿದನು. ಇದನ್ನು ಮನಸ್ಸಿನಲ್ಲಿಯೇ ಯೋಚಿಸಿ ಹೆಚ್ಚು ಕಡಿಮೆಯಾಗಿ ದರ್ಶನವನ್ನು ಕೊಡುವುದು ಯೋಗ್ಯವಲ್ಲವೆಂದು ತಿಳಿದು ಒಂಭತ್ತು ರೂಪವನ್ನು ಧರಿಸಿ ಒಂದೇ ಕಾಲದಲ್ಲಿ ನಿಮಗೆ ದರ್ಶನವನ್ನು ಕೊಟ್ಟಿರುವೆನು' ಈಗ ನೀವು ನಿಮಗೆ ಬೇಕಾದುದನ್ನು ಕೇಳಿಕೊಳ್ಳಿರಿ.

೨೩೭. ರಾಮುವರ ಮಾತನ್ನು ಕೇಳಿ ಆ ಬ್ರಾಹ್ಮಣರು ಇಂತೆಂದರು. ಎಲೈ ರಾಮನೇ! ನಮಗೆ ಲೋಕದಲ್ಲಿ ಕೀರ್ತಿಯು ಉಂಟಾಗುವಂತೆ ಮಾಡುವ ವರವನ್ನು ಕೊಡು.

ತತ್ತೇಷಾಂ ವಚನಂ ಶ್ರುತ್ವಾ ರಾಮಾಃ ಪ್ರೋಚುಃ ದ್ವಿಜಾನ್ ಪುನಃ ।
ಯುಷ್ಮಾಕಂ ದರ್ಶನಾರ್ಥಂ ಹಿ ನವರೂಪಧರಾ ವಯಂ ॥ ೨೩೮ ॥

ಅದ್ಯ ಜಾತಾ ಯತಸ್ತಸ್ಮಾದ್ಯುಷ್ಮಾಕಂ ನಾಮಭಿಸ್ಸದಾ ।
ನವರಾಮಾಂ ಪರಾಂ ಖ್ಯಾತಿಂ ಗಮಿಷ್ಯಾಮೋ ವನೀತಲೇ ॥ ೨೩೯ ॥

ಅಸ್ಮಾಕಂ ನವ ಯತ್ಕಿಂಚಿತ್ತತ್ಪ್ರಿಯಂ ಹಿ ಭವಿಷ್ಯತಿ ।
ಇತಿ ತೇಷಾಂ ತು ರಾಮಾಣಾಂ ವಾಕ್ಯಂ ಶ್ರುತ್ವಾ ದ್ವಿಜೋತ್ತಮಾಃ ॥ ೨೪೦ ॥

ಸಂತುಷ್ಟಾಸ್ತೇ ತದಾ ನೇಮುಸ್ಸ್ವಂ ಸ್ವಂ ರಾಮಂ ಮುಹುರ್ಮುಹುಃ ।
ತದಾ ಸರ್ವೇ ಜನಾ ರಾಮಾನ್ ಲಕ್ಷ್ಮಣಾನ್ ಭರತಾದಿಕಾನ್ ॥ ೨೪೧ ॥

ಆತ್ಮಾನಂ ನವಧಾ ಜಾತಾನ್ ದೃಷ್ಟ್ವಾ ವಿಸ್ಮಯಮಾಗತಾಃ ।
ತತೋ ರಾಮಾಶ್ಶಿಬಿಕಾಸು ಸ್ಥಿತ್ವಾ ಪೃಷ್ಟ್ವಾ ದ್ವಿಜೋತ್ತಮಾನ್ ॥ ೨೪೨ ॥

---

೨೩೮. ಅವರ ಮಾತನ್ನು ಕೇಳಿ ರಾಮರು ಆ ಬ್ರಾಹ್ಮಣರನ್ನು ಕುರಿತು ಇಂತೆಂದರು. ನಿಮಗೆ ದರ್ಶನವನ್ನು ಕೊಡುವುದಕ್ಕೋಸ್ಕರ ನಾವು ಒಂಭತ್ತು ರೂಪವನ್ನು ಹೊಂದಿದ್ದೇವೆ.

೨೩೯. ಈ ರೀತಿಯಾಗಿ ನಾವು ಈಗ ಧರಿಸಿರುವ ಕಾರಣದಿಂದ ನಿಮ್ಮಗಳ ಹೆಸರಿನಿಂದಲೇ ಒಂಭತ್ತು ರಾಮರುಗಳು ಭೂಮಿಯಲ್ಲಿ ಪ್ರಸಿದ್ಧರಾಗುತ್ತಾರೆ.

೨೪೦. ನಾನು ನಿಮಗೋಸ್ಕರ ಒಂಭತ್ತು ಬಗೆಯಾದೆನು. ಎಂಬುವ ವೃತ್ತಾಂತವು ಲೋಕದಲ್ಲಿ ಹರಡಲಿ, ಅದೇ ನನಗೆ ಪ್ರಿಯವು. ಹೀಗೆಂದು ಆ ರಾಮರು ಹೇಳಿದುದನ್ನು ಆ ಬ್ರಾಹ್ಮಣರು ಕೇಳಿದರು.

೨೪೧-೨೪೨. ಇದರಿಂದ ಆ ಬ್ರಾಹ್ಮಣರು ಸಂತೋಷಗೊಂಡು ತಮ್ಮ ತಮ್ಮ ಎದುರಿಗಿರುವವರನ್ನು ಅನೇಕ ಬಾರಿ ನಮಸ್ಕರಿಸಿದರು. ಆಗ ಆ ಬ್ರಾಹ್ಮಣರೆಲ್ಲರೂ ರಾಮನನ್ನೂ ಅವರ ಕಡೆಯವರನ್ನೂ ಒಂಭತ್ತು ಬಗೆಯಾಗಿ ಬಂದಿರುವುದನ್ನು ನೋಡಿ ಆಶ್ಚರ್ಯಗೊಂಡರು. ಅನಂತರ ಆ ರಾಮರು ಪಲ್ಲಕ್ಕಿಯಲ್ಲಿ ಕುಳಿತುಕೊಂಡರು.

ಪರಾವೃತ್ಯ ಯಯುಸ್ಸರ್ವೇ ಮಾರ್ಗೇ ತ್ವೇಕೋಽಭವತ್ಪುನಃ ।
ಸರ್ವೇ ಜಾತಾಸ್ತ್ವೇಕರೂಪಾಸ್ತದಾ ತೇ ವಿಸ್ಮಯಂ ಯಯೌ ॥ ೨೪೩ ॥

ತತೋ ರಾಮೋ ಬಂಧುಭಿಶ್ಚ ಪೂರ್ವವನ್ನಗರೀಂ ಯಯೌ ।
ಗತ್ವಾ ಗೇಹೇ ತು ಸೀತಾಯೈ ಸರ್ವಂ ವೃತ್ತಂ ನ್ಯವೇದಯತ್ ॥ ೨೪೪ ॥

ಅತಸ್ತೇ ನವವಿಪ್ರಾಣಾಂ ನಾಮಭಿರ್ಜಗತೀತಲೇ ।
ಖ್ಯಾತಿಂ ರಾಮಾ ಯಯುಸ್ತತ್ರ ನವಧಾ ಚ ತತ್ಪ್ರಿಯಂ ॥ ೨೪೫ ॥

ಯಥಾರ್ಕಾ ದ್ವಾದಶ ಪ್ರೋಕ್ತಾ ಏಕವಿಂಶದ್ಗಣಾಧಿಪಾಃ ।
ರುದ್ರಾ ಏಕದಶ ಪ್ರೋಕ್ತಾ ಯಥಾಷ್ಟ ಭೈರವಾಃ ಸ್ಮೃತಾಃ ॥ ೨೪೬ ॥

---

೨೪೩. ಆ ದ್ವಿಜರಿಗೆ ಹೋಗಿಬರುತ್ತೇವೆಂದು ಹೇಳಿ ಹಿಂದಿರುಗಿ ಹೊರಟು ದಾರಿಯಲ್ಲಿ ಬರುತ್ತಾ ಅವರೆಲ್ಲರೂ ಒಂದೇ ಆದರು. ಅನಂತರ ಅವರ ಜೊತೆಯಲ್ಲಿ ಬಂದಿದ್ದವರೆಲ್ಲರೂ ಕೂಡ ಅಂತೆಯೇ ಒಂದೇ ರೂಪರಾದರು, ಇದನ್ನು ನೋಡಿ ಆ ಬ್ರಾಹ್ಮಣರೆಲ್ಲರೂ ಆಶ್ಚರ್ಯಭರಿತರಾದರು.

೨೪೪. ಅನಂತರ ರಾಮನು ತಮ್ಮಂದಿರೊಡನೆಯೂ ಮಿತ್ರ, ಮಂತ್ರಿಗಳೊಡನೆಯೂ ಪಟ್ಟಣಕ್ಕೆ ಬಂದನು. ಮನೆಗೆ ಬಂದು ಸೀತೆಗೆ ಅಲ್ಲಿ ನಡೆದ ವಿಷಯಗಳೆಲ್ಲವನ್ನೂ ತಿಳಿಸಿದನು.

೨೪೫. ಆದ್ದರಿಂದ ಆ ರಾಮನು ಆ ಬ್ರಾಹ್ಮಣರ ಹೆಸರಿನಿಂದ ಭೂಮಿಯಲ್ಲಿ ಒಂಭತ್ತು ಬಗೆಯಾಗಿ ಆ ಬ್ರಾಹ್ಮಣರು ತಮಗೆ ಪ್ರಿಯವನ್ನು ಕೇಳಿಕೊಂಡಂತೆ ರಾಮರಾಗಿ ಆದನು. ಅವರವರಿಗೆ ದರ್ಶನವನ್ನು ಕೊಟ್ಟು ಆಯಾ ರಾಮರು ಅವರವರಿಗೆ ಪ್ರಿಯರಾದರು.

೨೪೬-೨೪೭. ಆದಿತ್ಯರು ಹನ್ನೆರಡು ಬಗೆಯಾಗಿಯೂ, ಗಣಪತಿಗಳು ಇಪ್ಪತ್ತೊಂದು ಬಗೆಯಾಗಿಯೂ, ರುದ್ರರು ಹನ್ನೊಂದು ಬಗೆಯಾಗಿಯೂ, ಭೈರವರು

ನವ ದುರ್ಗಾ ಯಥಾ ತ್ವತ್ರ ತಥಾ ರಾಮಾ ನವಸ್ಮೃತಾಃ |
ಪ್ರಿಯಂ ದ್ವಾದಶ ಸೂರ್ಯಾಯ ಏಕಾದಶ ಶಿವಪ್ರಿಯಂ ॥ ೨೪೭ ॥

ಏಕವಿಂಶತ್ಪ್ರಿಯಂ ಯದ್ವದ್ಗಣೇಶಾಯ ಮಹಾತ್ಮನೇ ।
ಪ್ರಿಯಮಷ್ಟ ಭೈರವಾಯ ದುರ್ಗಾಯೈ ತೇ ನವ ಪ್ರಿಯಂ ॥ ೨೪೮ ॥

ಯಥಾ ತಥಾ ತ್ರ ರಾಮಾಯ ನವ ಶಿಷ್ಯ ಪ್ರಿಯಂ ಸದಾ ।
ತಸ್ಮಾನ್ನವ ವಿಧೈಃ ಪುಷ್ಪೈಃ ಅಂಜಲಿಸ್ತತ್ಪ್ರಿಯೋ ಮತಃ ॥ ೨೪೯ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಮನೋಹರಕಾಂಡೇ ಶ್ರೀರಾಮ ಪೂಜಾವಿಧಾನಾದಿ ವರ್ಣನಂ ನಾಮ ತೃತೀಯಸ್ಸರ್ಗಃ ಸಮಾಪ್ತಃ

ಎಂಟು ಬಗೆಯಾಗಿಯೂ, ದುರ್ಗೆಯರು ಒಂಭತ್ತು ಬಗೆಯಾಗಿಯೂ ಹೇಗೆ ಪ್ರಸಿದ್ಧರಾಗಿರುವರೋ ಹಾಗೆಯೇ ನವ (ಒಂಭತ್ತು) ರಾಮರೂ ಪ್ರಸಿದ್ಧರಾಗಿರುವರು. ಸೂರ್ಯನಿಗೆ ಹನ್ನೆರಡು ಬಗೆಯಾದುದು ಪ್ರಿಯವು. ಶಿವನಿಗೆ ಹನ್ನೊಂದು ಬಗೆಯಾದುದು ಪ್ರಿಯವು. ಗಣೇಶನಿಗೆ ಇಪ್ಪತ್ತೊಂದು ಬಗೆಯಾದುದು ಪ್ರಿಯವಾಗಿರುವುದು. ಭೈರವನಿಗೆ ಎಂಟು ಬಗೆಯಾಗಿರುವುದು ಪ್ರಿಯವಾದುದು. ದುರ್ಗೆಗೆ ಒಂಭತ್ತು ಬಗೆಯಾಗಿರುವುದು ಪ್ರಿಯವಾದುದು. ಅದೇ ರೀತಿಯಲ್ಲಿಯೇ ರಾಮನಿಗೆ ಒಂಭತ್ತು ಬಗೆಯಾಗಿರುವುದು ಪ್ರಿಯವಾಗಿ ಇರುತ್ತದೆ. ಆದ್ದರಿಂದ ಆ ಒಂಭತ್ತು ಜನ ರಾಮರಿಗೆ ಒಂಭತ್ತು ಬಗೆಯ ಹೂಗಳಿಂದ ಅಂಜಲಿ ಸಮರ್ಪಣವು ಪ್ರಿಯವಾದುದು.

ಇಂತು ಶ್ರೀ ವಾಲ್ಮೀಕಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಶ್ರೀರಾಮ ಪೂಜಾ ವಿಧಾನ ವರ್ಣನವೆಂಬ ಮೂರನೆಯ ಸರ್ಗವು ಮುಗಿದುದು.

—o—o—o—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಮೂರನೆಯ ಸರ್ಗದ ಸಾರಾಂಶವು

—o—o—

ಶ್ರೀರಾಮನನ್ನು ಪೂಜೆಮಾಡುವವರು ಮಾನಸ ಪೂಜೆಯನ್ನು ಹೇಗೆ ಮಾಡಬೇಕು? ಬಹಿಃ ಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನು ಈ ಸರ್ಗದಲ್ಲಿ ವಿಶದೀಕರಿಸುತ್ತಾನೆ.

ಮೊದಲು ಉತ್ತಮವಾದ ಗುರುವನ್ನು ಸಂಪಾದಿಸಿಕೊಳ್ಳಬೇಕು. ಅವನು ಕೋಪಿಯಾಗಿರಕೂಡದು. ಕುಷ್ಠರೋಗವನ್ನು ಹೊಂದಿರಕೂಡದು. ಗರ್ವಿಷ್ಠನೂ, ಮಲಿನನೂ, ದಯಾಶೂನ್ಯನೂ, ಜಡನೂ ವಿಷಯದಲ್ಲಿ ಲೋಲುಪನೂ ಆಗಿರಕೂಡದು. ವೇದವನ್ನು ನಿಂದಿಸಬಾರದವನಾಗಿಯೂ, ಪರರ ಹೆಂಗಸರಲ್ಲಿ ಆಸಕ್ತನಾಗಿಯೂ ಇರಬಾರದು. ಡಾಂಭಿಕನಾಗಿರಬಾರದು. ಪರರಲ್ಲಿ ದೋಷವನ್ನು ಹೊರಿಸದವನಾಗಿರಬೇಕು. ದೊಡ್ಡವರನ್ನು ನಿಂದಿಸಬಾರದವನಾಗಿರಬೇಕು. ಪೂಜ್ಯರನ್ನು ಪೂಜಿಸುವವನಾಗಿರಬೇಕು. ಧರ್ಮಗಳನ್ನು ತಿಳಿದು ಅದರಂತೆ ಆಚರಿಸುವವನಾಗಿರಬೇಕು. ಸತ್ಯವಂತನೂ, ಮಿತಾಹಾರಿಯೂ ಆಗಿರಬೇಕು. ಒಳ್ಳೆಯ ಧರ್ಮಗಳಿಗೆ ಉಪದೇಶಕನಾಗಿರಬೇಕು. ತೀರ್ಥವನ್ನು ಸೇವಿಸುವವನಾಗಿರಬೇಕು. ನೋಡಿದರೆ ಪ್ರೀತಿಹುಟ್ಟುವವನಂತಿರಬೇಕು. ದಾನವನ್ನು ತೆಗೆದುಕೊಳ್ಳದವನಾಗಿರಬೇಕು. ಇವೇ ಮುಂತಾದ ಸದ್ಧರ್ಮಗಳಿದ್ದರೆ ಅವನು ಗುರುವಾಗಿರುವುದಕ್ಕೆ ಯೋಗ್ಯನು.

ಇಂತಹ ಗುರುವಿನ ಸೇವೆಯನ್ನು ಬಹುಕಾಲ ಮಾಡಿ ಅವನಿಂದ ತೀರ್ಥಗಳಲ್ಲಿ ಉಪದೇಶವನ್ನು ತೆಗೆದುಕೊಳ್ಳಬೇಕು.

ದೇವರುಗಳನ್ನು ಉಪಾಸನೆ ಮಾಡುವುದರಲ್ಲಿ ಸಾತ್ವಕೀ, ರಾಜಸೀ ತಾಮಸಿ ಎಂದು ಮೂರು ಬಗೆಯಿರುವುದು. ಇದರಲ್ಲಿ ತಾಮಸೀ ಉಪಾಸನೆಯು ದುಷ್ಟವಾದುದು. ಭೂತ ಭೇತಾಳಗಳನ್ನು ಉಪಾಸನೈಮಾಡುವುದೇ ತಾಮಸೀ ಉಪಾಸನೆಯು. ದೇವತೆಗಳ ಉಪಾಸನೆಯು ಸಾತ್ವಕಿಯು. ಯಕ್ಷ ರಾಕ್ಷಸರ ಉಪಾಸನೆಯು ರಾಜಸವು.

ಲೋಕದಲ್ಲಿ ದೇವತೆಗಳ ಅವತಾರಗಳು ಬಹು ಬಗೆಯಾಗಿವೆ. ಅವುಗಳ ಲ್ಲೊಂದನ್ನು ತೆಗೆದುಕೊಳ್ಳಬೇಕು. ಅನೇಕ ದೇವತೆಗಳು ಅನೇಕ ಬಗೆಯಲ್ಲಿ ಅವತರಿಸಿರುವರು. ಉಪಾಸನೆಗಳು, ಶೈವ, ಸೌರ, ಗಾಣೇಶ, ಶಾಕ್ತ, ವೈಷ್ಣವ, ಎಂಬುದಾಗಿ ಐದು ಬಗೆಯಾಗಿರುವುವು. ಈ ಐದು ಬಗೆಗಳಲ್ಲಿ ವಿಷ್ಣುವಿನ ಅವತಾರಗಳನ್ನೇ ನಾನು ಹೇಳಿರುತ್ತೇನೆ ಈ ಅವತಾರಗಳು ಉತ್ತಮವಾದುವು. ನಾಲ್ವತ್ತು ನಾಲ್ಕಿರುವುವು. ಆ ನಾಲ್ವತ್ತನಾಲ್ಕರಲ್ಲಿ ಹತ್ತು ಅವತಾರಗಳು ಇನ್ನೂ ಉತ್ತಮವಾದುವು. ಈ ಹತ್ತು ಅವತಾರಗಳಲ್ಲಿಯೂ ರಾಮಾವತಾರ ಕೃಷ್ಣಾವತಾರಗಳು ಮಹತ್ತಮವಾದುವು. ಅವೆರಡರಲ್ಲಿಯೂ ಸತ್ಯಕ್ಕೆ ಕಟ್ಟುಬಿದ್ದಿರುವ ರಾಮಾವತಾರವೇ ಮುಖ್ಯವು.

ಈ ದೇವತೆಗಳ ಮಂತ್ರಗಳನ್ನು ಮೇಲೆ ಹೇಳಿದ ರೀತಿಯ ಯೋಗ್ಯವಾದ ಗುರುವಿನಿಂದ ಆಯಾ ದೇವತೆಗಳ ಜನ್ಮ ತಿಥಿಗಳಲ್ಲಿ ಉಪದೇಶವನ್ನು ಹೊಂದಬೇಕು. ಯಾವ ದೇವರ ಮಂತ್ರವನ್ನು ಉಪದೇಶ ಹೊಂದಿದ್ದೇವೆಯೋ ಆ ದೇವರನ್ನು ಆ ದೇವರ ಜನ್ಮ ದಿನದಲ್ಲಿ ವಿಶೇಷವಾಗಿ ಪೂಜೆಮಾಡಬೇಕು. ಗುರುವಿನಿಂದ ಉಪದೇಶವನ್ನು ತೆಗೆದುಕೊಂಡ ಮಂತ್ರವನ್ನು ನಿತ್ಯದಲ್ಲಿಯೂ ಜಪಿಸುತ್ತಿರಬೇಕು. ಇದರಲ್ಲಿ ಮಂತ್ರಗಳು ಒಂದು ಅಕ್ಷರದಿಂದ ಮೊದಲು ಹೊರಟು ನೂರು ಅಕ್ಷರಗಳವರೆಗೂ ಇರುವುದು. ಇಂತಹವು ಅನೇಕವಾಗಿರುವುವು.

ರಾಮನ ಮಾನಸ ಪೂಜೆಯನ್ನು ಮಾಡುವಾಗ ರಾಮ, ಲಕ್ಷ್ಮಣ, ಭರತ, ಶತ್ರುಘ್ನ, ಹನುಮಂತ, ಸೀತೆಯರನ್ನು ಧ್ಯಾನಿಸಬೇಕು. ಆವಾಹನದಿಂದ ಮೊದಲುಮಾಡಿಕೊಂಡು ನಮಸ್ಕಾರದವರೆಗೂ ಮಾಡಿ ನಮಸ್ಕಾರವನ್ನು ಪೂರೈಸಿಕೊಂಡು ಉತ್ತರ ಪೂಜೆಯನ್ನು ಮಾಡಬೇಕು.

ಬಹಿಃ ಪೂಜೆಯನ್ನು ಮಾಡುವಾಗ ರಾಮತೋ ಭದ್ರವನ್ನ ಬರೆದು ಅದರಲ್ಲಿ ರಾಮನ ಪ್ರತಿಮೆಯನ್ನು ಪರಿವಾರದ ಸಂಗಡ ಇಡಬೇಕು. ಕೊನೆಯಪಕ್ಷ ರಾಮನೊಡನೆ ಸೀತೆಯೊಬ್ಬಳನ್ನಾದರೂ ಇಡಬೇಕು. ರಾಮನೊಬ್ಬನಿಗೇ ಪೂಜೆ ಮಾಡಬಾರದು. ಆವಾಹನಾದಿ ಷೋಡಶೋಪಚಾರ ಪೂಜೆಗಳನ್ನು ಆಯಾಯಾ ಪದಾರ್ಥಗಳಿಂದ ಮಾಡಬೇಕು. ರಾಮನಿಗೆ ಯಾವಾಗಲೂ ಒಂಭತ್ತು ಬಗೆಯಾದ ಪದಾರ್ಥಗಳಲ್ಲಿ ಪ್ರೀತಿಯು ಹೆಚ್ಚು. ಆದ್ದರಿಂದ ಕಷ್ಟಪಟ್ಟು ಒಂಭತ್ತು ಬಗೆ ಹೂ. ಒಂಭತ್ತು ಬಗೆ ಅನ್ನ ಈ ರೀತಿಯಾಗಿ ಸಂಪಾದಿಸಿಕೊಳ್ಳಬೇಕು.

ಕಾವೇರಿಯ ಉತ್ತರ ದಡದಲ್ಲಿರುವ ರಾಮನಾಥಪುರದಲ್ಲಿ ಸುಂದರಶರ್ಮನೆಂಬ ಬ್ರಾಹ್ಮಣನಿದ್ದನು. ಅವನಿಗೆ ಒಂಭತ್ತು ಜನ ಮಕ್ಕಳಿದ್ದರು. ಅವರೆಲ್ಲರೂ

ರಾಮಭಕ್ತರು. ರಾಮ ಪೂಜಕರು. ಇವರೆಲ್ಲರೂ ರಾಮನನ್ನು ನೋಡಬೇಕೆಂದು ಒಂದುಸಾರಿ ಅಯೋಧ್ಯೆಗೆ ಹೋದರು. ಆಗ ನಾನಾ ದೇಶಗಳಿಂದಲೂ ಜನರು ಬಹುವಾಗಿ ಬಂದಿದ್ದುದರಿಂದ ಗಲಭೆಯು ಹೆಚ್ಚಾಗಿ ಇವರಿಗೆ ರಾಮಚಂದ್ರನ ದರ್ಶನವು ಕಷ್ಟವಾಯಿತು. ಆಗ ಇವರು ತಪಸ್ಸಿನಿಂದ ರಾಮನ ದರ್ಶನವನ್ನು ಪಡೆಯಲು ಅಲ್ಲಿದ್ದ ಸರಯೂ ನದಿಯ ದಡದಲ್ಲಿಯೇ ತಪಸ್ಸಿಗೆ ಕುಳಿತರು ಮತ್ತು ಯಾರಿಗೆ ಬೇಗ ಆಗುತ್ತದೆಯೋ ಅವರು ದೃಢಭಕ್ತಿಯುಳ್ಳವರೆಂದೂ ಹೇಳಿಕೊಳ್ಳುತ್ತಾ ತಪಸ್ಸಿಗೆ ಕುಳಿತರು. ಇವರು ತಪಸ್ಸು ಮಾಡುತ್ತಿದ್ದುದೂ ಇವರು ಹೇಳಿಕೊಂಡುದೂ ರಾಮನಿಗೆ ತಿಳಿಯಿತು. ಆಗ ರಾಮನು ಇವರ ಭಕ್ತಿಗೆ ದರ್ಶನವನ್ನು ಕೊಡಲು ಅಪೇಕ್ಷಿಸಿ ಲಕ್ಷ್ಮಣನಿಂದ ಪಲ್ಲಕ್ಕಿಯನ್ನು ತರಿಸಿ ಸರಯೂ ನದಿಯ ದಡಕ್ಕೆ ಹೋಗಿ ಅವರ ಭಕ್ತಿಗೆ ಮೆಚ್ಚಿ ತಾನು ಒಂಭತ್ತು ಬಗೆಯಾಗಿ ಎಲ್ಲರಿಗೂ ಏಕ ಕಾಲದಲ್ಲಿ ದರ್ಶನವನ್ನು ಕೊಟ್ಟನು. ಆಗ ರಾಮನಿಗೆ ನವರಾಮನೆಂದು ಹೆಸರು ಬಂದಿತು. ಅನಂತರ ಆ ರಾಮನು ಒಬ್ಬನೇ ಆದನು. ಇದನ್ನು ನೋಡಿ ಎಲ್ಲರೂ ಆಶ್ಚರ್ಯವನ್ನು ಪಡೆದರು. ಅನಂತರ ರಾಮನು ಮನೆಗೆ ಬಂದು ಸೀತೆಗೆ ಎಲ್ಲಾ ವಿಷಯಗಳನ್ನೂ ಹೇಳಿದನು. ರುದ್ರರು ಹನ್ನೊಂದು ಜನರೆಂದೂ, ದುರ್ಗೆಯರು ಒಂಭತ್ತು ಜನರೆಂದೂ, ಸೂರ್ಯರು ಹನ್ನೆರಡು ಜನರೆಂದೂ ಪ್ರಸಿದ್ಧರಾಗಿರುವಂತೆ ರಾಮರು ಒಂಭತ್ತು ಜನರೆಂದು ಪ್ರಸಿದ್ಧರಾಗಿರುವರು. ಅಂತೆಯೇ ಒಂಭತ್ತೊಂಭತ್ತು ಪದಾರ್ಥಗಳು ಅವನಿಗೆ ಪ್ರೀತಿಕರವು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ

ಚತುರ್ಥಸ್ಸರ್ಗಃ

॥ ಶ್ರೀ ವಿಷ್ಣುದಾಸ ಉವಾಚ ॥

ಸ್ವಾಮಿಂಸ್ತ್ವಯಾ ರಾಮನಾಮ್ನಾಮಷ್ಟೋತ್ತರಸಹಸ್ರಕಂ ।
ಭದ್ರಮುಕ್ತಂ ತಥಾ ಚಾಷ್ಟೋತ್ತರಶತಮನುತ್ತಮಂ ॥ ೧ ॥

ರಾಮನಾಮ್ನಾಂ ಭದ್ರಮುಕ್ತಂ ರಾಮಚಂದ್ರಪ್ರಪೂಜನೇ ।
ತತ್ಕೀದೃಶೇ ತೇ ತು ಭದ್ರೇ ಲೇಖನೀಯೇ ಮನೋರಮೇ ॥ ೨ ॥

ತೇ ಮಾಂ ವಿಸ್ತರತೋ ಬ್ರೂಹಿ ಯಥಾಹಂ ವೇದ್ಮಿ ತತ್ತ್ವತಃ ।
ತ್ವಯೋರ್ಮೇ ಯೇ ವಿಶೇಷಾಶ್ಚ ಭದ್ರಯೋಸ್ತೇ ಹಿ ಮಾಂ ವದ ॥ ೩ ॥

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡದ ನಾಲ್ಕನೆಯ ಸರ್ಗವು

೧-೨. ವಿಷ್ಣುದಾಸನು ಹೇಳಿದನು:— ಸ್ವಾಮಿ! ರಾಮನಾಮಗಳ ಭದ್ರವು ಸಾವಿರದ ಎಂಟು ಒಂದೆಂದೂ, ನೂರ ಎಂಟು ಒಂದೆಂದೂ ಹೇಳಿದಿರಿ. ಅವುಗಳು ರಾಮಚಂದ್ರನನ್ನು ಪೂಜಿಸುವುದರಲ್ಲಿ ಬಹು ಉಪಯುಕ್ತವಾದುವೆಂದೂ ಹೇಳಿದಿರಿ. ಆ ಭದ್ರಗಳು ಹೇಗಿವೆ? ಪೂಜೆ ಮಾಡುವುದಕ್ಕೆ ಅವನ್ನು ಹೇಗೆ ಬರೆಯಬೇಕು?

೩. ನಾನು ಅವನ್ನು ಸರಿಯಾಗಿ ತಿಳಿದುಕೊಳ್ಳುವಂತೆ ವಿಸ್ತಾರವಾಗಿಯೂ ವಿವರವಾಗಿಯೂ ಹೇಳಿರಿ. ಆ ಭದ್ರಗಳಲ್ಲಿ ಇನ್ನೂ ಯಾವ ಯಾವ ವಿಶೇಷಗಳವೆಯೋ ಅದನ್ನೂ ನನಗೆ ತಿಳಿಸಿರಿ.

॥ ಶ್ರೀರಾಮದಾಸ ಉವಾಚ ॥

ಶೃಣು ಶಿಷ್ಯ ಪ್ರವಕ್ಷ್ಯಾಮಿ ಭದ್ರಾಣಾಂ ರಚನಾಶ್ಶುಭಾಃ ।
ಯಥಾ ಪೃಷ್ಟಾ ತ್ವಯಾ ಮಹ್ಯಂ ರಾಮನಾಮ್ನಾ ಮನೋರಮಾಃ ॥ ೪ ॥

ಅಷ್ಟೋತ್ತರಶತಂ ರಾಮಲಿಂಗತೋಭದ್ರಮುತ್ತಮಂ ।
ಆದೌ ಮಯಾ ವಿಸ್ತರೇಣ ಕಥ್ಯತೇ ತನ್ನಿಶಾಮಯ ॥ ೫ ॥

ಆತ್ರೋಪಾಸ್ಯಾ ರಾಮಮುದ್ರಾ ರುದ್ರಶ್ಚೋಪಾಸಕಃ ಸ್ಮೃತಃ ।
ಶ್ರೀರಾಮಲಿಂಗತೋಭದ್ರಮತ ಏವೋಚ್ಯತೇ ಬುಧೈಃ ॥ ೬ ॥

ತಿರ್ಯಗೂರ್ಧ್ವಗತಾ ರೇಖಾ ದ್ವೇಶತೇ ರೇಖಯಾಧಿಕೇ ।
ತತ್ರಾದೌ ಕೃಷ್ಣಪರಿಧಿಸ್ತತೋ ರಕ್ತಸ್ಸಿತಸ್ತತಃ ॥ ೭ ॥

---

೪. ರಾಮದಾಸನು ಹೇಳಿದನು:— ಎಲೈ ಶಿಷ್ಯನೇ, ರಾಮನಾಮಗಳಿಂದ ಮನೋಹರವಾದ ಆ ಭದ್ರಗಳನ್ನು ನಾನು ಹಿಂದೆ ಕೇಳಿರುವ ರೀತಿಯಲ್ಲಿಯೇ ಹೇಳುತ್ತೇನೆ. ಆ ಭದ್ರಗಳ ರಚನೆಯನ್ನೂ ಹೇಳುತ್ತೇನೆ. ಕೇಳು.

೫. ಈ ರಾಮಭದ್ರಗಳಲ್ಲಿ ನೂರ ಎಂಟು ರಾಮನಾಮಗಳುಳ್ಳ ಭದ್ರವು ಮನೋಹರವಾದುದು. ಮತ್ತು ಉತ್ತಮವಾದುದು. ಅದನ್ನು ಮೊದಲು ವಿಸ್ತಾರವಾಗಿ ಹೇಳುತ್ತೇನೆ. ಮನಸ್ಸಿಟ್ಟು ಕೇಳು.

೬. ರಾಮಮುದ್ರೆಯು ಪೂಜಿಸಿಕೊಳ್ಳಲು ವಿಷಯವಾಗಿರತಕ್ಕದ್ದು. ಪೂಜಿಸುವವನು ಶಿವನು. ಆದ್ದರಿಂದ ಈ ಭದ್ರಕ್ಕೆ ಆ ಎರಡು ಹೆಸರನ್ನೂ ಸೇರಿಸಿ ಪಂಡಿತರು ಶ್ರೀರಾಮಲಿಂಗತೋಭದ್ರವೆಂದು ಹೆಸರನ್ನಿಟ್ಟಿದ್ದಾರೆ.

೭. ಮೇಲಿನಿಂದ ಕೆಳ ಮುಖವಾಗಿ ಇನ್ನೂರ ಒಂದು ಗೆರೆಗಳನ್ನು ಎಳೆಯಬೇಕು. ಅದರ ಮೇಲೆ ಅಡ್ಡಡ್ಡಲಾಗಿ ಅದೇ ಅಗಲಕ್ಕೆ ಇನ್ನೂರೊಂದು ಗೆರೆಗಳನ್ನು ಎಳೆಯಬೇಕು. ಆಮೇಲೆ ಮೊದಲಿನ ಅಂಚನ್ನು ಕಪ್ಪು ಬಣ್ಣದಿಂದಲೂ ಎರಡನೆಯ ಅಂಚನ್ನು ಕೆಂಪು ಬಣ್ಣದಿಂದಲೂ ಮೂರನೆಯದನ್ನು ಬಿಳಿಯಬಣ್ಣದಿಂದಲೂ ಬರೆಯಬೇಕು. ಎಂದರೆ ಮೊದಲನೆಯ ಸಾಲಿನ ಚೌಕದ ಮನೆಯನ್ನು ಕಪ್ಪು ಬಣ್ಣದಿಂದಲೂ ಎರಡನೆಯ ಸಾಲನ್ನು ಕೆಂಪು ಬಣ್ಣದಿಂದಲೂ ಮೂರನೆಯದನ್ನು ಬಿಳುಪು ಬಣ್ಣದಿಂದಲೂ ತುಂಬಬೇಕು.

ತತಸ್ಸಿತಶ್ಚ ಪರಿಧಿಃ ಕೋಣೇಂದುಃ ತ್ರಿಪದಃ ಸ್ಮೃತಃ ।
ಚಂದ್ರಾಗ್ರೇ ಶೃಂಖಲಾ ಕೃಷ್ಣಾ ಸ್ಮೃತಾ ದ್ವಾದಶಪಾದಿಕಾ ॥ ೮ ॥

ಹರಿತಾ ಚ ತತೋ ವಲ್ಲೀ ತ್ರಯೋವಿಂಶತ್ಪದಾತ್ಮಿಕಾ ।
ತತಃ ಪೀತಾ ಶೃಂಖಲಾ ಚ ಸ್ಮೃತಾ ದ್ವಾದಶಪಾದಿಕಾ ॥ ೯ ॥

ವಿಂಶತ್ಪಾದಭವಂ ಭದ್ರಂ ರಕ್ತಂ ವಾಪೀ ಸಿತಾ ತತಃ ।
ತ್ರಯೋದಶಪದಾ ಜ್ಞೇಯಾ ಲಿಂಗಂ ಷಡ್ವಿಂಶಪಾದಜಂ ॥ ೧೦ ॥

ಕೃಷ್ಣಶ್ಚತುಷ್ಪದೋ ಮೂರ್ಧ್ನಾ ನಾಭಿಃ ಯುಗ್ಮಪದಃ ಸ್ಮೃತಃ ।
ಮೂಲಸ್ಕಂಧೌ ಷಟ್ಪದಜೌ ಪಾರ್ಶ್ವೇ ತುರ್ಯಪಥಾತ್ಮಕೇ ॥ ೧೧ ॥

೮-೯. ಆಮೇಲೆ ನಾಲ್ಕನೆಯ ಸಾಲಿನದನ್ನು ಅರಿಶಿನ ಬಣ್ಣದಿಂದ ತುಂಬ ಬೇಕು. ಹೀಗೆ ನಾಲ್ಕು ಕಡೆಗಳಲ್ಲಿಯೂ ತುಂಬಬೇಕು. ಹೀಗೆ ತುಂಬಿದರೆ ನಾಲ್ಕು ಮೂಲೆಗಳಲ್ಲಿಯೂ ಮೂರು ಮೂರು ಮನೆಗಳನ್ನು ನೋಡಿದರೆ ಚಂದ್ರಾ ಕೃತಿಯಂತೆ ಕಾಣುವುವು. ಆ ಚಂದ್ರನನ್ನೇ ಮೊದಲು ಭಾಗವಾಗಿ ಇಟ್ಟುಕೊಂಡು ಹನ್ನೆರಡು ಮನೆಗಳನ್ನು ಸರಪಣಿಗಳಂತೆ ಕಪ್ಪು ಬಣ್ಣಕ್ಕೆ ಏರ್ಪಡುತ್ತವೆ. ಅನಂ ತರ ಇಪ್ಪತ್ತು ಮೂರು ಮನೆಗಳೂ ಬಳ್ಳಿಯಂತೆ ಕಂಡು ಬರುತ್ತದೆ. ಅದರಿಂದ ಮುಂದೆ ಹನ್ನೆರಡು ಮನೆಗಳೂ ಅರಿಶಿನ ಬಣ್ಣದಿಂದ ಕೂಡಿದ ಸರಪಣಿಯಂತೆ ಕಾಣುತ್ತವೆ.

೧೦. ಹೀಗೆ ಮಾಡಿದರೆ ಕೆಂಪು ಬಣ್ಣದ ಇಪ್ಪತ್ತು ಮನೆಗಳಲ್ಲಿ ಭದ್ರವು ಏರ್ಪಡುತ್ತದೆ. ಅವನ್ನು ನೋಡಿದರೆ ರಾಮನಾಮವು ತಿಳಿದು ಬರುತ್ತದೆ. ಅನಂ ತರ ಬೆಳ್ಳಗಿರುವ ಹದಿಮೂರು ಮನೆಗಳಲ್ಲಿ ವಾಪಿಯು ಕಂಡು ಬರುತ್ತದೆ. ಅನಂ ತರ ಇಪ್ಪತ್ತಾರು ಮನೆಗಳಲ್ಲಿ ಲಿಂಗಾಕೃತಿಯು ಕಂಡು ಬರುತ್ತದೆ.

೧೧. ಈ ಲಿಂಗಾಕೃತಿಯ ತಲೆಯು ನಾಲ್ಕು ಕಪ್ಪು ಮನೆಗಳ ರೂಪ ದಲ್ಲಿಯೂ ಎರಡು ಕಪ್ಪು ಮನೆಗಳನ್ನು ಸೊಂಟವೆಂದರೆ ನಾಭಿಯಾಗಿಯೂ ಬುಡ ಮತ್ತು ಭುಜಗಳು ಆರಾರು ಮನೆಗಳುಳ್ಳದ್ದಾಗಿಯೂ ಪಾರ್ಶ್ವಗಳು ನಾಲ್ಕು ಮನೆ ಗಳುಳ್ಳದ್ದಾಗಿಯೂ ಕಂಡು ಬಂದು ಒಟ್ಟಿನಲ್ಲಿ ಆ ಲಿಂಗಾಕೃತಿಯು ಸ್ಪಷ್ಟವಾಗಿ ಕಾಣುತ್ತದೆ.

ತತೋ ರಕ್ತಶ್ಚ ಪರಿಧಿರ್ಮರ್ಯಾದಾಖ್ಯೋಽರ್ಕಪಾದಜಃ ।
ತತೋ ಮುದ್ರಾ ತುರ್ಯತುರ್ಯಭೂಮಿಪಾದಮಿತಾ ಸ್ಮೃತಾ ॥ ೧೨ ॥

ತತೋ ಮರ್ಯಾದಾ ಪರಿಧಿರ್ಲಿಂಗಮುದ್ರಾಃ ಪುನಃ ಪುನಃ ।
ಏವಂ ಹರಾ ನವ ಜ್ಞೇಯಾ ಮುದ್ರಾ ಅಷ್ಟ ಪ್ರಕೀರ್ತಿತಾಃ ॥ ೧೩ ॥

ಪರಿಧಯಷ್ಷೋಡಶೈವ ಹ್ಯಂತೇ ಲಿಂಗೋರ್ಧ್ವಪಾರ್ಶ್ವಕೇ ।
ತಿರ್ಯಕ್ ಭದ್ರಂ ನವಪದೈಃ ಪೀತಂ ವಾ ಹರಿತಂ ಕ್ವಚಿತ್ ॥ ೧೪ ॥

ರಕ್ತಭದ್ರೋರ್ಧ್ವತಶ್ಶೇಷಪದಾನಿ ಯಾನಿ ಸಂತಿ ಹಿ ।
ಯಥೇಚ್ಛಂ ಚಿತ್ರವರ್ಣೈಶ್ಚ ಶೃಂಖಲಾರ್ಥೇ ನಿಯೋಜಯೇತ್ ॥ ೧೫ ॥

---

೧೨. ಇಷ್ಟಾದ ಮೇಲೆ ಮುಂದಕ್ಕೆ ಕೆಂಪಗಿರುವ ಒಂದು ಪರಿಧಿಯನ್ನು ಎಳೆಯಬೇಕು. ಅದು ಹನ್ನೆರಡು ಮನೆಗಳುಳ್ಳದ್ದಾಗಿರುತ್ತದೆ. ಅದಕ್ಕೆ ಮರ್ಯಾದಾಪಥಿಯೆಂದು ಹೆಸರು. ಇದಾದ ಮೇಲೆ ಒಂಭತ್ತು ಮನೆಗಳಿಂದ ರಾಮ ಮುದ್ರೆಯು ಕಾಣಿಸಿಕೊಳ್ಳುವುದು.

೧೩. ಅನಂತರ ಮತ್ತೆ ಮರ್ಯಾದಾಪರಿ ವಿಧಿಯು ಬರುತ್ತದೆ. ಆ ಮೇಲೆ ಲಿಂಗವು. ಅನಂತರ ಮದ್ಯಾದಾರಿಧಿಯು. ಮತ್ತೆ ರಾಮಮುದ್ರೆಯು. ಈ ರೀತಿಯಲ್ಲಿ ಕ್ರಮದಿಂದ ಕಂಡು ಬರುತ್ತವೆ. ಇವನ್ನು ಎಣಿಕೆ ಮಾಡಿದರೆ ಒಂಭತ್ತು ಲಿಂಗ ಮುದ್ರೆಗಳೂ ಎಂಟು ರಾಮ ಮುದ್ರೆಗಳೂ ಆಗುತ್ತವೆ.

೧೪. ಮರ್ಯಾದಾಪರಿಧಿಗಳು ಲಿಂಗಗಳ ಮೇಲುಗಡೆಯಲ್ಲಿಯೂ ಪಾರ್ಶ್ವಗಳಲ್ಲಿಯೂ ಕಂಡು ಬರುತ್ತವೆ. ಇವುಗಳು ಒಟ್ಟು ಹದಿನಾರು ಏರ್ಪಡುತ್ತವೆ. ಅಡ್ಡಲಾಗಿ ಬರುವ ಭದ್ರವು ಒಂಭತ್ತು ಬರುವುವು. ಇವುಗಳಲ್ಲಿ ಕೆಲವು ಅರಿಶಿನ ಬಣ್ಣವುಳ್ಳವಾಗಿಯೂ ಕೆಲವು ಬಿಳಿಯವಾಗಿಯೂ ಇರುತ್ತವೆ.

೧೫. ಕೆಂಪು ಬಣ್ಣದ ಭದ್ರಗಳ ಮೇಲುಗಡೆಯಲ್ಲಿ ಉಳಿದಿರುವ ಮನೆಗಳಿವೆಯಷ್ಟೆ. ಅವುಗಳಿಗೆ ಇಷ್ಟ ಬಂದ ಬಣ್ಣಗಳನ್ನು ಹಾಕಿಕೊಂಡು ಸರಪಣಿಗಳಂತೆ ಮಾಡಿಕೊಳ್ಳಬಹುದು.

ಮಧ್ಯಲಿಂಗಸ್ಕಂಧಯೋಶ್ಚ ಸಿತಾ ನೇತ್ರಾ ಶುಭಾ ಸ್ಮೃತಾ ।
ಪೀತೇ ಲಿಂಗಸ್ಕಂಧಯೋಶ್ಚ ಶೃಂಖಲೇ ತ್ರಿತ್ರಿಪಾದಜೇ ॥ ೧೬ ॥

ಅಧೋಮುಖಂ ಹರೋರ್ಧ್ವಗಂ ಚ ರಕ್ತಂ ಭಕ್ತಂ ದ್ವಿಷಟ್ಪದಂ ।
ತಿರ್ಯಗ್ಭದ್ರೇ ತು ಹರಿತೇ ಸ್ಮೃತೇಷ್ಟಾದಶಪಾದಜೇ ॥ ೧೭ ॥

ತತಃ ಪಂಕ್ತೇರೂರ್ಧ್ವಭಾಗೇ ಹರಿತಃ ಪರಿಧಿಃ ಸ್ಮೃತಃ ।
ತತ ಊರ್ಧ್ವಂ ಪೀತವರ್ಣಃ ಪ್ರೋಕ್ತಶ್ಚ ಪರಿಧಿಶ್ಶುಭಃ ॥ ೧೮ ॥

ಏವಂ ಪ್ರೋಕ್ತಾ ಪ್ರಥಮೋಯಂ ಪಂಕ್ತಿಸ್ಸರ್ವತ್ರ ಕಾರಯೇತ್ ।
ದ್ವಿತೀಯಾಯಾಂ ವಿಶೇಷಂ ಚ ವಕ್ಷ್ಯಾಮಿ ನ ಪುರೇರಿತಂ ॥ ೧೯ ॥

---

೧೬. ಮಧ್ಯ ಲಿಂಗ ಮುದ್ರೆಯ ಸ್ಕಂಧಗಳಲ್ಲಿಯೂ ಎರಡೆರಡು ಮನೆಗಳನ್ನು ಬಿಳಿಯ ಬಣ್ಣದಿಂದ ಕಣ್ಣುಗಳನ್ನಾಗಿ ರಚಿಸಬೇಕು. ಕೊನೆಯ ಲಿಂಗ ಮುದ್ರೆಯ ಸ್ಕಂಧಗಳಲ್ಲಿ ಮೂರು ಮೂರು ಮನೆಗಳಿಗೆ ಹೊಂಬಣ್ಣದಿಂದ ಸರಪಣಿಗಳನ್ನು ರಚಿಸಬೇಕು.

೧೭. ಅಧೋ ಮುಖವಾದ ಲಿಂಗಗಳ ಮೇಲೆ ಕೆಂಪು ಬಣ್ಣದ ಭದ್ರವು ಅರವತ್ತೆರಡು ಮನೆಗಳಲ್ಲಿ ಏರ್ಪಡುತ್ತವೆ. ಅಡ್ಡಡ್ಡವಾಗಿರುವ ಭದ್ರಗಳು ಅರಿಶಿನದ ಬಣ್ಣಕ್ಕೆ ನಿಲ್ಲುತ್ತವೆ. ಇವು ಹದಿನೆಂಟು ಮನೆಗಳಲ್ಲಿ ಏರ್ಪಡುತ್ತವೆ. ಈ ಭದ್ರಗಳು ಎರಡು.

೧೮. ಮುಂದಿನ ಪಂಕ್ತಿಯ ಮೇಲು ಭಾಗದಲ್ಲಿ ಪರಿಧಿಯಾಗಿರಬೇಕು. ಅದನ್ನು ಅರಿಶಿನದ ಬಣ್ಣದಿಂದ ಏರ್ಪಡಿಸಬೇಕು. ಅದರ ಮುಂದಿನ ಪರಿಧಿಯು ಹೊಂಬಣ್ಣದ್ದಾಗಿರಬೇಕು.

೧೯. ಇದು ಮೊದಲಿನ ಪಂಕ್ತಿಯು. ಇದರಂತೆಯೇ ಉಳಿದ ಭದ್ರಗಳಲ್ಲಿಯೂ ಮಾಡಬೇಕು. ಎರಡನೆಯ ಪಂಕ್ತಿಯಲ್ಲಿ ಉಂಟಾಗುವ ಭದ್ರದಲ್ಲಿನ ವಿಶೇಷವನ್ನು ಹೇಳುತ್ತೇನೆ. ಹೇಳದಿರುವುದನ್ನು ಹೇಳಿದುವುಗಳ ಪಂಕ್ತಿಯಂತೆಯೇ ಎಂದು ತಿಳಿದುಕೊಳ್ಳಬೇಕು.

ಸಪ್ತಮುದ್ರಾ ಹರಾ ಹ್ಯಷ್ಟ ಪರಿಧಯಶ್ಚತುರ್ದಶ |
ಭದ್ರಂ ರಕ್ತಂ ಷಟ್ಪದಂ ಚ ಶೇಷಂ ಸರ್ವಂ ತು ಪೂರ್ವವತ್ ॥ ೨೦ ॥

ತೃತೀಯಾಯಾಂ ತತಃ ಪಂಕ್ತೌ ಮುದ್ರಾಃ ಪಂಚ ಶಿವಾ ರಸಾಃ |
ಪರಿಧಯೋ ದಶ ಜ್ಞೇಯಾ ಭದ್ರಂ ತ್ರಿಂಶತ್ಪದಾತ್ಮಕಂ ॥ ೨೧ ॥

ತತಃ ಪಂಕ್ತೌ ಚತುರ್ಥ್ಯಾಂ ತು ತ್ರೀಶಾ ಮುದ್ರಾ ಚತುಷ್ಟಯಂ |
ಪರಿಧಯೋಽಷ್ಟ ವಿಜ್ಞೇಯಾ ಭದ್ರಂ ಚ ನವ ವೇದಜಂ ॥ ೨೨ ॥

ಹರಿತ್ಪೀತಯೋರ್ಮಧ್ಯೇ ಹಿ ಲೋಹಿತಃ ಪರಿಧಿಃ ಸ್ಮೃತಃ |
ಪಂಚಮಾಯಾಂ ತತಃ ಪಂಕ್ತೌ ಮುದ್ರೈಕಾ ಶಂಕರದ್ವಯಂ ॥ ೨೩ ॥

---

೨೦. ಈ ಎರಡನೆಯ ಪಂಕ್ತಿಯಲ್ಲಿ ಏಳು ಮುದ್ರೆಗಳೂ ಎಂಟು ಲಿಂಗಗಳೂ ಹದಿನಾಲ್ಕು ಪರಿಧಿಗಳೂ ಏರ್ಪಡುತ್ತವೆ. ಇಲ್ಲಿರುವ ಭದ್ರವು ಕೆಂಪು ಬಣ್ಣದಿಂದ ಕೂಡಿ ಆರಾರು ಮನೆಗಳಿಂದ ರಚಿತವಾಗುತ್ತವೆ. ಲಿಂಗವನ್ನೂ ಪರಿಧಿಯನ್ನೂ ಮೇಲಿನದರ ಬಣ್ಣದಿಂದ ರಚಿಸಿಕೊಳ್ಳಬೇಕು.

೨೧. ಅನಂತರ ಮೂರನೆಯ ಪಂಕ್ತಿಯ ವಿಷಯ. ಈ ಪಂಕ್ತಿಯಲ್ಲಿ ಐದು ಮುದ್ರೆಗಳೂ ಆರು ಲಿಂಗಗಳೂ ಹತ್ತು ಪರಿಧಿಗಳೂ ಏರ್ಪಡುತ್ತವೆ. ಇಲ್ಲಿನ ಭದ್ರವು ಮೂವತ್ತು ಮನೆಗಳಿಂದ ಕೂಡಿರುತ್ತದೆ.

೨೨. ಅನಂತರ ನಾಲ್ಕನೆಯ ಪಂಕ್ತಿಯಲ್ಲಿ ಮೂರು ಲಿಂಗಗಳೂ ನಾಲ್ಕು ಮುದ್ರೆಗಳೂ ಎಂಟು ಪರಿಧಿಗಳೂ ಏರ್ಪಡುತ್ತವೆ. ಇಲ್ಲಿ ರಚಿತವಾಗುವ ಭದ್ರವು ನಾಲ್ವತ್ತೊಂಭತ್ತು ಮನೆಗಳುಳ್ಳದ್ದು.

೨೩-೨೪. ಅರಿಶಿನ ಬಣ್ಣ ಹಸುರುಬಣ್ಣಗಳ ಮಧ್ಯದಲ್ಲಿ ಕೆಂಪು ಬಣ್ಣದ ಪರಿಧಿಯು ಬರುವಂತೆ ರಚಿಸಬೇಕು. ಐದನೆಯ ಪಂಕ್ತಿಯಲ್ಲಿ ಒಂದು ಮುದ್ರೆಯೂ ಎರಡು ಲಿಂಗಗಳೂ ನಾಲ್ಕು ಪರಿಧಿಗಳೂ ಏರ್ಪಡುತ್ತವೆ. ಇಲ್ಲಿರುವ ಭದ್ರವು

ಪರಿಧಯಶ್ಚ ಚತ್ವಾರಿ ಭದ್ರಂ ನವತಿಪಾದಜಂ ।
ಹರಿಪ್ರಕ್ತಪೀತವರ್ಣಾಃ ಪರಿಧಯಶ್ಚ ಪೂರ್ವವತ್ ॥ ೨೪ ॥

ಷಷ್ಠ್ಯಾಯಾಂ ಚ ತತಃ ಪಂಕ್ತೌ ಮುದ್ರಿಕಾ ಪರಿಧಿದ್ವಯಂ ।
ನವ ವೇದಭವಂ ಭದ್ರಂ ತಿಸ್ರಃ ಪರಿಧಯೋಽಪಿ ಚ ॥ ೨೫ ॥

ಮಧ್ಯೇಽಪಿ ಸರ್ವತೋಭದ್ರಂ ವೇದನೇತ್ರಾಗ್ನಿಪಾದಜಂ ।
ತ್ರಿಪದೇಂದುಃ ಶೃಂಖಲಾಶ್ಚ ಕೃಷ್ಣಾಃ ಪಂಚಪದಾ ಮತಾಃ ॥ ೨೬ ॥

ಏಕಾದಶಪದಾ ವಲ್ಲೀ ಭದ್ರಂ ನವಪದಾತ್ಮಕಂ ।
ಚತುರ್ವಿಂಶತ್ಪದಾ ವಾಪೀ ಪೀತಶ್ಚ ಪರಿಧಿಃ ಸ್ಮೃತಃ ॥ ೨೭ ॥

ಪದೇಷು ಷೋಡಶೇಷ್ವೇವ ಮಧ್ಯೇ ಪದ್ಮಂ ಯಥಾರುಚಿ ।
ಕರ್ಣಿಕಾ ಪೀತವರ್ಣಾ ಚ ಶೇಷಂ ಬುದ್ಧ್ಯಾ ನಿಯೋಜಯೇತ್ ॥ ೨೮ ॥

ತೊಂಭತ್ತು ಮನೆಗಳಿಂದ ಕೂಡಿದುದಾಗಿರುತ್ತದೆ. ಇದರಲ್ಲಿ ಮೊದಲಿನ ಪಂಕ್ತಿಯಂತೆ ಅರಿಸಿನ ವರ್ಣ ಕೆಂಪುವರ್ಣ ಹೊಂಬಣ್ಣಗಳಿರಬೇಕು.

೨೫-೨೬. ಆರನೆಯ ಪಂಕ್ತಿಯಲ್ಲಿ ಒಂದು ಮುದ್ರೆಯೂ ಎರಡು ಪರಿಧಿಗಳೂ ಏರ್ಪಡುತ್ತವೆ. ನಾಲ್ವತ್ತೊಂಭತ್ತು ಮನೆಗಳಿಂದ ಭದ್ರವು ರಚಿತವಾಗುತ್ತದೆ. ಅನಂತರ ಮೂರು ಪರಿಧಿಗಳು ಏರ್ಪಟ್ಟು ಮಧ್ಯದಲ್ಲಿ ಸರ್ವತೋ ಭದ್ರವು ಏರ್ಪಡುತ್ತದೆ. ಈ ಭದ್ರವು ಮುನ್ನೂರ ಇಪ್ಪತ್ತ ನಾಲ್ಕು ಮನೆಗಳುಳ್ಳದ್ದಾಗಿರುತ್ತದೆ. ಇಲ್ಲಿ ಮೂರು ಮನೆಗಳ ಇಂದುವೂ ಐದು ಮನೆಗಳ ಕಪ್ಪು ಬಣ್ಣದ ಸರಪಣಿಯೂ ಏರ್ಪಡುತ್ತವೆ.

೨೭. ಹನ್ನೊಂದು ಮನೆಗಳ ವಲ್ಲಿಯೂ ಅದರಲ್ಲಿ ಒಂಭತ್ತು ಮನೆಗಳ ಭದ್ರವೂ ಉಂಟಾಗುತ್ತದೆ. ಅನಂತರ ಇಪ್ಪತ್ತ ನಾಲ್ಕು ಮನೆಗಳಲ್ಲಿ ಒಂದು ವಾಪಿಯೂ ಹುಟ್ಟುತ್ತದೆ. ಇದರಲ್ಲಿ ಪರಿಧಿಯು ಹೊಂಬಣ್ಣದ್ದಾಗಿರುತ್ತದೆ.

೨೮. ಅನಂತರ ಹದಿನಾರು ಮನೆಗಳು ಬರುತ್ತವೆ. ಈ ಹದಿನಾರು ಮನೆಗಳಲ್ಲಿ ಅಂದವಾಗಿರುವಂತೆ ಪದ್ಮವನ್ನು ರಚಿಸಬೇಕು. ಇದರಲ್ಲಿ ಕರ್ಣಿಕೆಯು ಹೊಂಬಣ್ಣ (ಹಸರು ಬಣ್ಣ) ಕ್ಕಿರಬೇಕು. ಉಳಿದುವನ್ನು ಬುದ್ಧಿವಂತಿಕೆಯಿಂದ ತುಂಬಬೇಕು.

ಏತದಷ್ಟೋತ್ತರಶತಂ ರಾಮಲಿಂಗಾತ್ಮಕಂ ಸ್ಮೃತಂ ।
ಕ್ಷೇತ್ರ ಮುದ್ರಾಸ್ವರೂಪಂ ಚ ವೇದವೇದೇಂದುಭಿಃ ಸ್ಮೃತಂ ॥ ೨೯ ॥

ರಾಜ್ಯಕಾಂಡೇ ಉತ್ತರಾರ್ಧೇ ಸರ್ಗೇಽಷ್ಟಾದಶಮೇ ಪುರಾ ।
ಉಕ್ತಂ ಮುದ್ರಾಸ್ವರೂಪಂ ಚ ತಥಾಪ್ಯತ್ರ ತು ಕಥ್ಯತೇ ॥ ೩೦ ॥

ಪಂಕ್ತಯೋರ್ಕಮಿತಾಸ್ತತ್ರ ಸರ್ವಾ ದ್ವಾದಶಪಾದಜಾಃ ।
ತಾಸು ಪೂರ್ವದಿಗಾರಭ್ಯ ಕ್ರಮೇಣೈವಂ ಪ್ರಪೂರಯೇತ್ ॥ ೩೧ ॥

ಪ್ರಥಮಾ ಸಪ್ತಮಿಾ ಚೋಭೇ ಪಂಕ್ತೀ ಕೃಷ್ಣೇ ಪ್ರಪೂರಯೇತ್ ।
ಊರ್ಧ್ವಾಧಃ ಪಂಚ ಪಂಚೈವ ಪಂಕ್ತಯಸ್ತತ್ಕ್ರಮಂ ಬ್ರುವೇ ॥ ೩೨ ॥

ಪಂಚಪಂಕ್ತಿಷು ಚೋರ್ಧ್ವಂ ಹಿ ಪ್ರಥಮಾಯಾಃ ಪ್ರಪೂರಯೇತ್ ।
ಪ್ರಥಮಂ ಷೇತದಿಗ್ಜಂ ಚ ಕೃಷ್ಣವರ್ಣಂ ನ ಚಾಪರಂ ॥ ೩೩ ॥

---

೨೯. ಈ ಮೇಲೆ ಹೇಳಿದುದು ಅಷ್ಟೋತ್ತರ ಶತರಾಮಲಿಂಗತೋಭದ್ರ ಎಂಬ ಹೆಸರುಳ್ಳದು. ಇದರಲ್ಲಿನ ಮುದ್ರೆಗಳು ನೂರ ನಾಲ್ವತ್ತನಾಲ್ಕು ಎಂದು ತಿಳಿಯಬೇಕು. ಎಂದರೆ ನೂರ ನಾಲ್ವತ್ತನಾಲ್ಕು ಮುದ್ರೆಗಳುಳ್ಳದರ ಸ್ವರೂಪವು.

೩೦. ರಾಜ್ಯಕಾಂಡದ ಉತ್ತರಾರ್ಧದ ಹದಿನೆಂಟನೆಯ ಸರ್ಗದಲ್ಲಿ ಮುದ್ರಾಸ್ವರೂಪವನ್ನು ವಿವರಿಸಿದ್ದೇನೆ. ಆದರೂ ಇಲ್ಲಿ ಇನ್ನೂ ಸ್ವಲ್ಪ ಹೆಚ್ಚಾಗಿ ವಿವರಿಸುತ್ತೇನೆ.

೩೧. ಆ ಜಾಗದಲ್ಲಿ ಹನ್ನೆರಡು ಪಂಕ್ತಿಗಳೂ ಹನ್ನೆರಡು ಮನೆಗಳೂ ಇದ್ದು ಅವು ಅದರಿಂದ ಏರ್ಪಟ್ಟುವು. ಅವುಗಳನ್ನು ಪೂರ್ವದಿಕ್ಕಿನಿಂದ ಮೊದಲು ಮಾಡಿಕೊಂಡು ಕ್ರಮವಾಗಿ ಪೂರ್ತಿ ಮಾಡಬೇಕು.

೩೨. ಮೊದಲನೆಯ ಮತ್ತು ಏಳನೆಯ ಪಂಕ್ತಿಗಳನ್ನು ಎಂದರೆ ಆ ಮನೆಗಳ ಸಾಲನ್ನು ಕಪ್ಪು ಬಣ್ಣದಿಂದ ತುಂಬಬೇಕು. ಹೀಗೆ ಮಾಡಿದರೆ ಮಧ್ಯಕ್ಕೆ ಕಪ್ಪು ಮನೆಯು ಬಂದು ಅದರ ಮೇಲೂ ಕೆಳಗೂ ಐದೈದು ಸಾಲುಗಳು ಉಳಿದುಕೊಂಡುವು. ಅವುಗಳ ಕ್ರಮವನ್ನು ಹೇಳುತ್ತೇನೆ.

೩೩. ಆ ಐದು ಪಂಕ್ತಿಗಳಲ್ಲಿ ಮೇಲಿನ ಐದರಲ್ಲಿ ಮೊದಲನೆಯದನ್ನು ಈ ರೀತಿ ತುಂಬಬೇಕು ಮೊದಲನೆಯದರಲ್ಲಿ ಈಶಾನ್ಯ ದಿಕ್ಕಿನಲ್ಲಿರುವ ಒಂದನೆಯದನ್ನು ಕಪ್ಪು ಬಣ್ಣದಿಂದ ತುಂಬಬೇಕು ಮಿಕ್ಕುವು ಹಾಗೆಯೇ ಇರಬೇಕು.

ತದಧಶ್ಚ ದ್ವಿತೀಯಾಯಾಃ ಪ್ರಥಮಂ ಚ ದ್ವಿತೀಯಕಂ।
ಚತುರ್ಥಂ ಸಪ್ತಮಂ ಷಷ್ಠಂ ಹ್ಯಷ್ಟಮಂ ನವಮಂ ತಥಾ ॥ ೩೪ ॥

ತಥೈಕಾದಶಮಂ ಚಾಪಿ ಕೃಷ್ಣವರ್ಣಾನಿ ಪೂರಯೇತ್ ।
ತದಧಶ್ಚ ತೃತೀಯಾಯಾಃ ಚತುರ್ಥಂ ಷಷ್ಠಸಪ್ತಮೇ ॥ ೩೫ ॥

ತಥೈಕಾದಶಮಂ ಚಾಪಿ ಕೃಷ್ಣವರ್ಣಾನಿ ಪೂರಯೇತ್ ।
ಚತುರ್ಥ್ಯಾಸ್ತದಧಶ್ಚಾಪಿ ಪ್ರಥಮಂ ಚ ದ್ವಿತೀಯಕಂ ॥ ೩೬ ॥

ಚತುರ್ಥಂ ಸಪ್ತಮಂ ಷಷ್ಠಂ ನವಮಂ ರುದ್ರಸಂಮಿತಂ ।
ತದಧಃ ಪಂಚಮಾಯಾಶ್ಚ ಪ್ರಥಮಂ ಚ ದ್ವಿತೀಯಕಂ ॥ ೩೭ ॥

ಚತುರ್ಥಂ ಚ ತಥಾ ಷಷ್ಠಂ ನವಮ್ಯೈಕಾದಶೇ ತಥಾ ।
ರಾಜೇತಿ ದ್ವೇಕ್ಷರೇ ಶುಕ್ಲೇ ದ್ರಷ್ಟವ್ಯೇ ಪಂಚಪಂಕ್ತಿಷು ॥ ೩೮ ॥

ಪಂಚಪಂಕ್ತಿಷ್ವಧಶ್ಚಾಥ ಪ್ರಥಮಾಯಾಶ್ಚ ಪೂರ್ವವತ್ ।
ತದಧಶ್ಚ ದ್ವಿತೀಯಾಯಾಃ ಪ್ರಥಮಂ ಚ ದ್ವಿತೀಯಕಂ ॥ ೩೯ ॥

೩೪-೩೮. ಅದರ ಕೆಳಗಿರುವ ಎರಡನೆಯ ಪಂಕ್ತಿಯಲ್ಲಿ ಒಂದು, ಎರಡು, ನಾಲ್ಕು, ಆರು ಏಳು ಎಂಟು, ಒಂಭತ್ತು, ಹನ್ನೊಂದು, ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು. ಅದರ ಕೆಳಗಿನದಾದ ಮೂರನ್ನೆಯ ಸಾಲಿನಲ್ಲಿ ನಾಲ್ಕು, ಆರು, ಏಳು, ಹನ್ನೊಂದು, ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು. ಅದರ ಕೆಳಗಿರುವ ನಾಲ್ಕನೆಯ ಪಂಕ್ತಿಯಲ್ಲಿ ಒಂದು. ಎರಡು, ನಾಲ್ಕು, ಆರು, ಏಳು, ಒಂಭತ್ತೂ, ಹನ್ನೊಂದು, ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು. ಅದರ ಕೆಳಗಿನ ಐದನೆಯ ಪಂಕ್ತಿಯಲ್ಲಿ ಒಂದು, ಎರಡು, ನಾಲ್ಕು, ಆರು, ಒಂಭತ್ತು, ಹನ್ನೊಂದು, ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು. ಹೀಗೆ ತುಂಬಿದರೆ ಈ ಮೇಲಿನ ಐದು ಪಂಕ್ತಿಗಳಲ್ಲಿ ರಾಜಾ ಎಂಬ ಎರಡು ಅಕ್ಷರಗಳು ಬಿಳಿಯ ಬಣ್ಣದ ಮನೆಗಳಿಂದ ಕಂಡು ಬರುತ್ತವೆ.

೩೯-೪೦. ಕೆಳಗಿನ ಐದು ಪಂಕ್ತಿಗಳಲ್ಲಿ ಮೊದಲನೆಯದರಲ್ಲಿ ಮೇಲೆ ಹೇಳಿದಂತೆ ಮೊದಲನೆಯದನ್ನೂ ಈಶಾನ್ಯ ದಿಕ್ಕಿನದನ್ನೂ ಕಪ್ಪು ಬಣ್ಣದಿಂದ ತುಂಬಿ

ಚತುರ್ಥಂ ಸಪ್ತಮಂ ಷಷ್ಠಂ ನವಮಂ ದಶಮಂ ತಥಾ ।
ತಥಾ ಚೈವ ದ್ವಾದಶಮಂ ಕೃಷ್ಣವರ್ಣಾನಿ ಪೂರಯೇತ್ ॥ ೪೦ ॥

ತೃತೀಯಾಯಾಶ್ಚತುರ್ಥಂ ಚ ಷಷ್ಠಮರ್ಕಂ ಚ ಸಪ್ತಮಂ ।
ಚತುರ್ಥ್ಯಾಃ ಪ್ರಥಮಂ ಷಷ್ಠಂ ದ್ವಿತೀಯಂ ಚ ಚತುರ್ಥಕಂ ॥ ೪೧ ॥

ಅಷ್ಟಮಂ ನವಮಂ ಚಾರ್ಕಂ ದಶಮಂ ಚಾಪಿ ಪೂರಯೇತ್ ।
ಪಂಚಮಾಯಾಃ ಪಂಚಮಂ ಚ ದ್ವಿತೀಯಂ ಚ ಚತುರ್ಥಕಂ ॥ ೪೨ ॥

ಷಷ್ಠಮರ್ಕಾಷ್ಟಮಂ ಚಾಪಿ ಸಪ್ತಮಂ ದಶಮಂ ತಥಾ ।
ನವಮಂ ಕೃಷ್ಣವರ್ಣಾನಿ ರಾಮೇತಿ ದ್ವೇವಲೋಕಯೇತ್ ॥ ೪೩ ॥

ರಾಜಾ ರಾಮೇತಿ ಚತ್ವಾರಿ ಹ್ಯಕ್ಷರಾಣಿ ನಿರೀಕ್ಷಯೇತ್ ।
ವ್ಯತ್ಯಯಾದ್ರಾಮರಾಜೇತಿ ಬುದ್ಧ್ಯಾ ಕಾರ್ಯೇಕ್ಷರೇ ನರೈಃ ॥ ೪೪ ॥

ಮಿಕ್ಕುವನ್ನು ಬಿಟ್ಟು ಬಿಡಬೇಕು. ಅದರ ಕೆಳಗೆ ಎರಡನೆಯ ಪಂಕ್ತಿಯಲ್ಲಿ ಒಂದು ಎರಡು, ನಾಲ್ಕು, ಆರು, ಏಳು, ಒಂಭತ್ತು, ಹತ್ತು, ಹನ್ನೆರಡು, ಈ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು.

೪೧-೪೩. ಮೂರನೆಯ ಪಂಕ್ತಿಯಲ್ಲಿ ನಾಲ್ಕು, ಆರು, ಏಳು, ಹನ್ನೆರಡು ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು. ನಾಲ್ಕನೆಯ ಪಂಕ್ತಿಯಲ್ಲಿ ಒಂದು, ಎರಡು, ನಾಲ್ಕು, ಆರು, ಎಂಟು, ಒಂಭತ್ತು, ಹತ್ತು, ಹನ್ನೆರಡು ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು. ಒಂದನೆಯ ಪಂಕ್ತಿಯಲ್ಲಿ ಒಂದು, ಎರಡು, ನಾಲ್ಕು, ಆರು, ಏಳು, ಎಂಟು, ಒಂಭತ್ತು, ಹನ್ನೆರಡು, ಸಂಖ್ಯೆಯವನ್ನು ಕಪ್ಪು ಬಣ್ಣದಿಂದ ತುಂಬಬೇಕು. ಹೀಗೆ ತುಂಬಿದ ಮೇಲೆ 'ರಾಮ' ಎಂಬುದಾಗಿ ಬಿಳಿಯ ಬಣ್ಣದಲ್ಲಿ ಎರಡಕ್ಷರಗಳು ಕಂಡು ಬರುತ್ತವೆ.

೪೪. ಒಟ್ಟಿನ ಮುದ್ರೆಯಲ್ಲಿ 'ರಾಜಾರಾಮ' ಎಂದು ನಾಲ್ಕು ಅಕ್ಷರಗಳು ಉಂಟಾಗುತ್ತವೆ. ಇದನ್ನು ಹಿಂದೆ ಮುಂದೆ ಮಾಡಿ ಎಂದರೆ ಕೆಳಗಿನ ಐದು ಸಾಲನ್ನು ಮೇಲಕ್ಕೂ ಮೇಲಿನ ಐದು ಸಾಲನ್ನು ಕೆಳಕ್ಕೂ ಬುದ್ಧಿಯನ್ನು ಉಪಯೋಗಿಸಿ ತುಂಬಿದರೆ 'ರಾಮರಾಜ' ಎಂದು ಆಗುತ್ತದೆ. ಹಾಗೂ ಮಾಡಬಹುದು. ಇದು ಎರಡನೆಯ ಹೆಸರು

ಅಥವಾ ರಾಮರಾಮೇತಿ ತೃತೀಯಂ ನಾಮ ಕಾರಯೇತ್ ।
ವಿಶೇಷಂ ತತ್ರ ವಕ್ಷ್ಯಾಮಿ ಹ್ಯಥಃ ಪಂಚಸು ಪಂಕ್ತಿಷು　　॥ ೪೫ ॥

ಪಂಕ್ತೇಶ್ಚತುರ್ಥ್ಯಾಃ ಪ್ರಥಮಂ ಪದಂ ಕೃಷ್ಣೇನ ಕಾರಯೇತ್ ।
ನಾಕಾರಸ್ತೇನ ದ್ರಷ್ಟವ್ಯೋ ರಾಮನಾಮಾವಲೋಕಯೇತ್　　॥ ೪೬ ॥

ಅಥವಾ ರಮಾರಾಮೇತಿ ವಿಶೇಷಶ್ಚೋರ್ಧ್ವಪಂಕ್ತಿಷು ।
ಪ್ರಥಯಾ ಪೂರ್ವವತ್ ಜ್ಞೇಯಾ ದ್ವಿತೀಯಾಯಾಸ್ತತಃ ಪರಂ　　॥೪೭ ॥

ಪ್ರಥಮಂ ಚ ದ್ವಿತೀಯಂ ಚ ತೃತೀಯಂ ಪಂಚಮಂ ತಥಾ ।
ಅಷ್ಟಮಂ ನವಮಂ ಷಷ್ಠಂ ತಥೈಕಾದಶಮಂ ತ್ವಪಿ　　॥ ೪೮ ॥

ತೃತೀಯಾಯಾಶ್ಚ ಪ್ರಥಮಂ ರುದ್ರಂ ಷಷ್ಠಂ ಚ ಪಂಚಮಂ ।
ಚತುರ್ಥ್ಯಾಃ ಪ್ರಥಮಂ ಚೈವ ದ್ವಿತೀಯಂ ಚ ತೃತೀಯಕಂ　　॥ ೪೯ ॥

---

೪೫. ಆದಿಲ್ಲದಿದ್ದರೆ 'ರಾಮ ರಾಮ' ಎಂದು ಮೂರನೆಯ ಹೆಸರನ್ನೂ ಮಾಡಿಕೊಳ್ಳಬಹುದು. ಕೆಳಗಿನ ಐದು ಪಂಕ್ತಿಗಳಲ್ಲಿ ವಿಶೇಷವನ್ನು ಹೇಳುತ್ತೇನೆ.

೪೬. ನಾಲ್ಕನೆಯ ಪಂಕ್ತಿಯಲ್ಲಿ ಮೊದಲನೆಯ ಮನೆಯನ್ನು ಕಪ್ಪು ಬಣ್ಣದಿಂದ ತುಂಬಬೇಕು. ಇದರಿಂದ 'ನಾ' ಕಾರವು ಏರ್ಪಡುತ್ತದೆ. ಇದನ್ನು ಓದಿದರೆ ರಾಮ ನಾಮ, ಎಂದಾಗುತ್ತದೆ.

೪೭-೪೮. ಅಥವಾ ರಮಾ, ರಾಮ, ಎಂಬ ಹೆಸರನ್ನು ಬೇಕಾದರೂ ಏರ್ಪಡಿಸಿಕೊಳ್ಳಬಹುದು. ಮೇಲಿನ ಪಂಕ್ತಿಗಳಲ್ಲಿ ಅದರ ವ್ಯತ್ಯಾಸಗಳನ್ನು ಹೇಳುತ್ತೇನೆ. ಮೊದಲನೆಯ ಪಂಕ್ತಿಯನ್ನು ಮೊದಲು ಹೇಳಿರುವಂತೆಯೇ ತುಂಬಬೇಕು. ಎರಡನೆಯ ಪಂಕ್ತಿಯಲ್ಲಿ ಒಂದು, ಎರಡು, ಮೂರು ಐದು, ಆರು, ಎಂಟು, ಒಂಭತ್ತು ಹನ್ನೊಂದು ಇವನ್ನೂ ಕಪ್ಪು ಬಣ್ಣದಿಂದ ತುಂಬಬೇಕು.

೪೯-೫೦. ಮೂರನೆಯ ಪಂಕ್ತಿಯಲ್ಲಿ ಒಂದು, ಐದು, ಆರು, ಹನ್ನೊಂದು ಈ ಸಂಖ್ಯೆಯ ಮನೆಗಳನ್ನು ಕಪ್ಪಿನಿಂದ ತುಂಬಬೇಕು. ನಾಲ್ಕನೆಯ ಪಂಕ್ತಿಯಲ್ಲಿ

ಪಂಚಮಂ ಸಪ್ತಮಂ ಚಾಪಿ ಹ್ಯಷ್ಟಮಂ ನವಮಂ ತಥಾ ।
ತಥೈಕಾದಶಮಂ ಚಾಪಿ ಕೃಷ್ಣವರ್ಣಾನಿ ಪೂರಯೇತ್ ॥ ೫೦ ॥

ಪಂಚಮಾಯಾಃ ಪ್ರಥಮಂ ಚ ದ್ವಿತೀಯಂ ಚ ತೃತೀಯಕಂ ।
ಪಂಚಮಂ ಸಪ್ತಮಂ ಷಷ್ಠಂ ಹ್ಯಷ್ಟಮಂ ನವಮಂ ತಥಾ ॥ ೫೧ ॥

ತಥೈಕಾದಶಮಂ ಚಾಪಿ ರಾಮೇತಿ ದ್ವೇಕ್ಷರೇ ಸಿತೇ ।
ನಾಮಾನ್ಯೇತಾನಿ ಚತ್ವಾರಿ ಚತುಃಪಾರ್ಶ್ವೇಷು ಯೋಜಯೇತ್ ॥ ೫೨ ॥

ಲಘುಮುದ್ರಾನ್ವಿತಂ ರಾಮಲಿಂಗಾಖ್ಯಂ ಭದ್ರಮುಚ್ಯತೇ ।
ಮಯಾ ಶಿಷ್ಯಾಧುನಾ ತತ್ವಂ ಶೃಣುಷ್ವ ಸ್ವಸ್ಥಮಾನಸಃ ॥ ೫೩ ॥

ತಿರ್ಯಗೂರ್ಧ್ವಮೇಕಪಂಚಾಶದ್ರೇಖಾಸ್ತತ್ಪದೇಷು ಚ ।
ಸಪ್ತಸಪ್ತಪದಾ ತೇ ದ್ವಾ ಪರಿಧೀ ಪೀತವರ್ಣಕೇ ॥ ೫೪ ॥

ಒಂದು, ಎರಡು, ಮೂರು, ಐದು, ಏಳು, ಎಂಟು, ಒಂಭತ್ತು, ಹನ್ನೊಂದು ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು.

೫೧-೫೨. ಐದನೆಯ ಪಂಕ್ತಿಯಲ್ಲಿ ಒಂದು, ಎರಡು, ಮೂರು, ಐದು, ಆರು, ಏಳು, ಎಂಟು, ಒಂಭತ್ತು, ಹನ್ನೊಂದು ಈ ಸಂಖ್ಯೆಯ ಮನೆಗಳನ್ನು ಕಪ್ಪು ಬಣ್ಣದಿಂದ ತುಂಬಬೇಕು. ಅನಂತರ ರಾಮ, ಎಂಬ ಎರಡು ಅಕ್ಷರಗಳು ಬಿಳಿಯ ಮನೆಗಳಲ್ಲಿ ಕಂಡು ಬರುತ್ತನೆ.

೫೩. ಇನ್ನೂ ಮೇಲೆ ರಾಮ ಮುದ್ರೆಯಲ್ಲಿ ಲಘು ರಾಮ ಲಿಂಗಮುದ್ರೆಯೆಂಬುದೊಂದೊಂದುಂಟು. ಆದರಲ್ಲಿ ಲಿಂಗವೂ ಉಂಟು. ಮುದ್ರೆಯೂ ಉಂಟು. ಅದನ್ನು ಹೇಳುತ್ತೇನೆ ಈಗ ಅದನ್ನು ಕೇಳು.

೫೪-೫೬. ಅಡ್ಡಲಾಗಿಯೂ ಉದ್ದವಾಗಿಯೂ ಐವತ್ತೊಂದು ರೇಖೆಗಳನ್ನು ಎಳೆಯಬೇಕು. ಇವುಗಳಲ್ಲಿ ಏಳೇಳು ಸಾಲುಗಳಿಗೆ ಭಾಗಿಸಿಕೊಳ್ಳಬೇಕು. ಎರಡು ಪರಿಧಿಗಳನ್ನು ಹೊಂಬಣ್ಣದಿಂದ ರಚಿಸಿಕೊಳ್ಳಬೇಕು. ಮೂಲೆಯ ಪ್ರದೇಶದಲ್ಲಿ ಬರುವ ಇಂದುವು ಮೂರು ಮನೆಗಳುಳ್ಳದ್ದಾಗಿರಬೇಕು. ಅದು ಬಿಳಿಯ ಮನೆಯದಾಗಿರಬೇಕು. ಎಂದರೆ ಅದಕ್ಕೆ ಬಣ್ಣವನ್ನು ತುಂಬಬಾರದು. ಆರು ಮನೆಗಳಷ್ಟಕ್ಕೆ

ಕಾರ್ಯೋ ತತ್ರ ಕೋಣದೇಶೇಷ್ವಿಂದುಸ್ತ್ರಿಪದಶುಕ್ಲಕೈಃ ।
ಶೃಂಖಲತುರ್ಯಪದಾ ಕೃಷ್ಣಾ ತ್ರಯೋದಶಪದಾ ಲತಾ ॥ ೫೫ ॥

ಹರಿತೇಶೋ ವಸುಪದಃ ಕೃಷ್ಣವರ್ಣಃ-ಪ್ರಕಾರಯೇತ್ ।
ತ್ರಿಪದಂ ಲೋಹಿತಂ ಜ್ಞೇಯಂ ಭದ್ರಂ ವಲ್ಲ್ಯಂತಿಕಸ್ಥಿತಂ ॥ ೫೬ ॥

ಷಷ್ಟಿಪಾದಾತ್ಮಿಕಾ ಮುದ್ರಾ ತತ್ರೇಂದ್ರಯಮದಿಕ್‌ಸ್ಥಿತೇ ।
ತ್ಯಕ್ತ್ವಾ ಪಂಕ್ತಿಕೋಣಕೋಷ್ಠಾನ್ ಸಿಂಧುಸಿಂಧುಮಿತಾಂಸ್ತಥಾ ॥ ೫೭ ॥

ಸಿಂಧ್ವರ್ತುಪಂಕ್ತಿ ದ್ವೇ ಸಪ್ತಮಾಯಾಃ ಪಂಕ್ತೇಃ ಪದಂ ತ್ವಧಃ ।
ಮಷಿಣಾ ಪೂರಯೇತ್ತತ್ರ ಭಾತಿ ರಾಮೇತಿ ಸತ್ಪದಂ ॥ ೫೮ ॥

ತತ್ರಾದ್ರಾವಗ್ನಿಮುದ್ರಾಸ್ತತ್ಸೀಮಾಪರಿಧಯಸ್ತಥಾ ।
ರಕ್ತಲಿಂಗದ್ವಯಂ ಭದ್ರಂ ತಥಾ ಲಿಂಗೋಪರಿ ಸ್ಥಿತಂ ॥ ೫೯ ॥

ಒಂದು ಸರಪಣಿಯನ್ನು ಮಾಡಬೇಕು. ಅದನ್ನು ಕಪ್ಪು ಬಣ್ಣದಿಂದ ರಚಿಸಬೇಕು. ಹದಿಮೂರು ಮನೆಗಳಷ್ಟಕ್ಕೆ ಲತೆಯನ್ನು ರಚಿಸಬೇಕು. ಅದನ್ನು ಅರಿಶಿನ ಬಣ್ಣದಿಂದ ತುಂಬಬೇಕು. ಅದರ ಮುಂದೆ ಲಿಂಗವು ಎಂಟು ಮನೆಯಿಂದ ರಚಿತವಾಗುತ್ತದೆ. ಅದಕ್ಕೆ ಕಪ್ಪು ಬಣ್ಣವನ್ನು ತುಂಬಬೇಕು. ಇವುಗಳಲ್ಲಿ ವಲ್ಲಿಯ ಕೊನೆಯ ಮೂರು ಮನೆಗಳನ್ನು ಕೆಂಪು ಬಣ್ಣದಿಂದ ತುಂಬಬೇಕು. ಇದೇ ಭದ್ರವು.

೫೭. ಈ ಮುದ್ರೆಯು ಅರವತ್ತು ಮನೆಗಳಿಂದ ಕೂಡಿದ ಚಚ್ಚೌಕದಿಂದ ಏರ್ಪಡುತ್ತದೆ. ಈ ಮುದ್ರೆಯಲ್ಲಿ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿರುವ ಮೂಲೆಗಳಲ್ಲಿ ನಾಲ್ಕು ನಾಲ್ಕು ಪಂಕ್ತಿಗಳನ್ನು ಬಿಡಬೇಕು.

೫೮. ಇವುಗಳಲ್ಲಿ ನಾಲ್ಕು ಆರನೆಯ ಪಂಕ್ತಿಗಳನ್ನು ಬಿಟ್ಟು ಬಿಡಬೇಕು. ಏಳನೆಯ ಪಂಕ್ತಿಯ ಕೆಳಗೆ ಕಪ್ಪು ಬಣ್ಣದಿಂದ ಉದ್ದಕ್ಕೂ ತುಂಬಬೇಕು. ಹೀಗೆ ಮಾಡಿದರೆ ರಾಮ, ಎಂಬ ಪದವು ಕಾಣುತ್ತದೆ.

೫೯-೬೦. ಇದರಲ್ಲಿ ಮೊದಲನೆಯದರಲ್ಲಿ ಮೂರು ಮುದ್ರೆಗಳೂ ಅವುಗಳ ಸೀಮಾ ಪರಿಧಿಗಳೂ ಕೆಂಪಿನ ಬಣ್ಣದ ಎರಡು ಲಿಂಗಗಳೂ ಉಳ್ಳ ಭದ್ರವು ಏರ್ಪಡುತ್ತದೆ.

ಪದದ್ವಯಂ ಪೀತವರ್ಣಂ ವೀಥೀವಲ್ಲ್ಯಾಸಿ ಯೋಜಯೇತ್ ।
ದ್ವಿತೀಯೇತ್ವೇಕಮುದ್ರಾ ದ್ವೌ ಪರಿಧೀ ದ್ವೌ ಶಿವೌ ಮತಾ ॥ ೬೦ ॥

ಭದ್ರಂ ನವಪದಂ ಲಿಂಗವಲ್ಲ್ಯೋರ್ಮಧ್ಯೇ ರಸಾತ್ಮಕಂ ।
ಭದ್ರಂ ಪೀತಂ ಲಿಂಗೋಪರಿ ರಕ್ತಂ ತುರ್ಯಪದಾತ್ಮಕಂ ॥ ೬೧ ॥

ಲಿಂಗಸ್ಕಂಧಪದೇ ದ್ವೇ ದ್ವೇ ಹರಿತೇ ವೀಥಿಕಾಪಿ ಚ ।
ಭದ್ರಾಣಿ ತ್ರೀಣಿ ಜ್ಞೇಯಾನಿ ಪೀತಂ ದ್ವೇ ಲೋಹಿತೇತ್ರ ಹಿ ॥ ೬೨ ॥

ತತೋಂತಸ್ಸರ್ವತೋಭದ್ರಂ ಕಾರ್ಯಂ ತತ್ರ ತು ವಾಪಿಕಾ ।
ಚತುರ್ವಿಂಶತ್ಪದಾ ಭದ್ರಮುಂಕಕೋಷ್ಠಂ ಲತೇಶಿಕಾ ॥ ೬೩ ॥

ತ್ರಿಪದೋಬ್ಜಃ ಪಂಚಪದಾ ಶೃಂಖಲಾ ಪರಿಧಿಸ್ತತಃ ।
ಮಧ್ಯೇ ಪದ್ಮಂ ರಕ್ತವರ್ಣಂ ರಚಯೇದ್ವಾ ವಿಚಿತ್ರಿತಂ ॥ ೬೪ ॥

ಈ ಸ್ಥಳದಲ್ಲಿ ಲಿಂಗಗಳ ಮೇಲೆ ಇರುವ ಎರಡೆರಡು ಮನೆಗಳನ್ನು ಹಸರು ಬಣ್ಣದಿಂದ ರಚಿಸಬೇಕು. ಅಂತೆಯೇ ವಲ್ಲಿಗಳನ್ನೂ ಮಾಡಬೇಕು. ಎರಡನೆಯದರಲ್ಲಿ ಒಂದು ಮುದ್ರೆ ಎರಡು ಪರಿಧಿಗಳೂ ಎರಡು ಲಿಂಗಗಳೂ ಏರ್ಪಡುತ್ತವೆ.

೬೧-೬೨. ಇದು ಒಂಭತ್ತು ಮನೆಯಿಂದ ಕೂಡಿದ ಭದ್ರವು. ಇದು ಲಿಂಗ ವಲ್ಲಿಗಳ ಮಧ್ಯದಲ್ಲಿ ಏರ್ಪಡುತ್ತದೆ. ಇದು ಹಸರು ಬಣ್ಣದ್ದಾಗಿ ರಚಿತವಾಗಿರುತ್ತದೆ. ಲಿಂಗಕ್ಕಿಂತಲೂ ಮುಂದಕ್ಕೆ ನಾಲ್ಕು ಮನೆಗಳನ್ನು ಕೆಂಪು ಬಣ್ಣದಿಂದ ತುಂಬಬೇಕು. ಲಿಂಗಗಳ ಸ್ಕಂಧದ ಮನೆಗಳಲ್ಲಿ ಎರಡೆರಡನ್ನು ಅರಿಶಿನ ಬಣ್ಣದಿಂದ ತುಂಬಿ ವೀಥಿಗಳನ್ನು ರಚಿಸಬೇಕು. ಇದರಲ್ಲಿ ಮೂರು ಭದ್ರಗಳು ಬರುತ್ತವೆ. ಇವುಗಳಲ್ಲಿ ಒಂದು ಹಸರು ಬಣ್ಣದ್ದು, ಮತ್ತೆರಡು ಅರಿಶಿನ ಬಣ್ಣದ್ದು.

೬೩-೬೪. ಕೊನೆಯದರಲ್ಲಿ ಸರ್ವತೋ ಭದ್ರವನ್ನು ರಚಿಸಬೇಕು. ಅದರಲ್ಲಿ ಇಪ್ಪತ್ತ ನಾಲ್ಕು ಮನೆಗಳಿರುತ್ತವೆ. ಮೂಲೆಯದನ್ನು ಲತೆಗಳನ್ನಾಗಿ ಬರೆಯಬೇಕು. ಮಧ್ಯದಲ್ಲಿ ಮೂರು ಮನೆಗಳ ಕಮಲವಿರಬೇಕು. ಐದು ಮನೆಗಳ ಸರಪಣಿಯೂ ಸುತ್ತಲೂ ಪರಿಧಿಯು ಇರಬೇಕು. ಮಧ್ಯದ ಪದ್ಮವನ್ನು

ಪೀತಶುಕ್ಲರಕ್ತಕೃಷ್ಣಾಶ್ಚಾಂತೇ ಪರಿಧಯೋ ಮತಾಃ ।
ಏತತ್ ಷೋಡಶಮುದ್ರಾಭಿಃ ರಾಮಲಿಂಗಾಖ್ಯಭದ್ರಕಂ ॥ ೬೫ ॥

ಸದಾನಂದಮಯಂ ರಾಮಂ ಚಿಜ್ಜ್ಯೋತಿಷಮನಾಮಯಂ ।
ಸರ್ವಾವಭಾಸಕಂ ನಿತ್ಯಂ ಸ್ವಾತ್ಮಾನಂ ಸಮುಪಾಸ್ಮಹೇ ॥ ೬೬ ॥

ಚಂದ್ರಕಲಂ ರಾಮಲಿಂಗತೋಭದ್ರಂ ಯದ್ವಿಕಲ್ಪಿತಂ ।
ನಿರ್ವಿಚಾರಂ ನಾಸ್ತಿ ತಸ್ಮಿನ್ ವಿವೇಕಸ್ತಂ ವಿವಿಚ್ಯತೇ ॥ ೬೭ ॥

ಕಲ್ಪಿತಸ್ಸ ನರೋ ರಾಜರಾಮಲಿಂಗಯುತಃ ಸ್ಮೃತಃ ।
ರಮಣಾದ್ರಾಮ ಇತ್ಯುಕ್ತೋ ಯೋಗಿಗಮ್ಯಃ ಪರಂ ಮಹಃ ॥ ೬೮ ॥

ಲೀಯಂತೇ ಯತ್ರ ಭೂತಾನಿ ನಿರ್ಗಚ್ಛಂತಿ ಯತಃ ಪುನಃ ।
ತೇನ ಲಿಂಗಂ ಪರಂ ಪ್ರೋಕ್ತಮಿತ್ಯುಕ್ತಂ ಬ್ರಹ್ಮವಿದುತ್ತಮೈಃ ॥ ೬೯ ॥

ಕೆಂಪು ಬಣ್ಣದಿಂದ ತುಂಬಬೇಕು. ಇಲ್ಲದಿದ್ದರೆ ನಾನಾ ಬಣ್ಣದಿಂದ ಬೇಕಾದರೂ ರಚಿಸಬಹುದು. ಕೊನೆಯಲ್ಲಿ ಪರಿಧಿಗಳನ್ನು ಹಸುರು, ಹಳದಿ, ಕೆಂಪು, ಬಿಳುಪು ಬಣ್ಣಗಳಿಂದ ರಚಿಸಬೇಕು. ಇದು ಹದಿನಾರು ಮುದ್ರೆಯ ರಾಮಲಿಂಗ ಭದ್ರವು.

೬೬. ಯಾವಾಗಲೂ ಆನಂದ ಸ್ವರೂಪನಾದ ಚಿತ್ ಸ್ವರೂಪನೂ ಜ್ಯೋತಿಸ್ಸ್ವರೂಪನೂ ಅನಾಮಯನೂ ಆದ ಎಲ್ಲವನ್ನೂ ಪ್ರಕಾಶಿಸುವಂತೆ ಮಾಡುವ ನಿತ್ಯನಾದ, ಆತ್ಮರೂಪನಾದ ರಾಮನನ್ನು ಧ್ಯಾನಿಸುತ್ತೇನೆ.

೬೭. ಷೋಡಶ ಮುದ್ರೆಯ ರಾಮ ಮುದ್ರೆ ಎಂಬು ಹೇಳಿದುದರಲ್ಲಿ ವಿಚಾರವೇ ಇಲ್ಲ. ಆದರೂ ಸ್ವಲ್ಪ ವಿಶೇಷವನ್ನು ಹೇಳುತ್ತೇನೆ.

೬೮-೬೯. ಈ ಮುದ್ರೆಯನ್ನು ಮಾಡಿ ಪೂಜಿಸುವವನು ರಾಜಾ ರಾಮಲಿಂಗವೇ ಆಗಿರುವನು. ರಾಮನು ಆ ಮುದ್ರೆಯಲ್ಲಿಯೇ ಆಸಕ್ತನಾಗಿ ರಮಿಸುವುದರಿಂದ ರಾಮನೆನ್ನಿಸಿಕೊಳ್ಳುವನು. ಯೋಗಿಗಳಿಗೆ ಮಾತ್ರ ತಿಳಿಯತಕ್ಕವನು. ಜ್ಯೋತಿ ಸ್ವರೂಪನು. ಈ ಪರಮಾತ್ಮನಿಂದಲೇ ಎಲ್ಲಾ ಪ್ರಾಣಿಗಳೂ ಹೊರಕ್ಕೆ ಬರುತ್ತವೆ. ಮತ್ತೆ ಅಲ್ಲಿಯೇ ಸೇರುತ್ತವೆ. ಈ ಕಾರಣದಿಂದ ಲಿಂಗವೆಂಬ ಹೆಸರು ಬಂದಿತು. ಎಂಬುದಾಗಿ ತಿಳಿದವರು ಹೇಳುತ್ತಾರೆ.

ಲಿಂಗ್ಯತೇ ಚಿಂತ್ಯತೇ ಯೇನ ಭಾವೇನ ಭಗವಾಂಚ್ಛಿವಃ ।
ಲಿಂಗರೂಪೀ ಸ ರಾಮೇತಿ ಲಿಂಗಂ ಚೇತಿ ದ್ವಿನಾಮಕಃ ॥ ೭೦ ॥

ಬಹೂನಿ ಸಂತಿ ನಾಮಾನಿ ರಾಮೇಶಸ್ಯ ಮಹಾತ್ಮನಃ ।
ರಜಾಂಸಿ ಗಣಯೇತ್ಕೋಪಿ ಭೂಮೇರ್ನೈವಾಖಿಲೇಶಿತುಃ ॥ ೭೧ ॥

ತಸ್ಮಿನ್ ಯತ್ಸರ್ವತೋಭದ್ರಂ ಹೃದಯಂ ತತ್ಪ್ರಕೀರ್ತಿತಂ ।
ತತ್ರ ಪದ್ಮಮಷ್ಟಪತ್ರಂ ಸಕೇಸರಸುಕರ್ಣಿಕಂ ॥ ೭೨ ॥

ತತ್ ಸ್ಥಾನಂ ರಾಮಲಿಂಗಸ್ಯ ಧ್ಯಾನಾರ್ಥಂ ಪರಿಕಲ್ಪಿತಂ ।
ಅನ್ಯಥಾ ಸರ್ವಗಸ್ಯಾಸ್ಯ ಕಥಂ ದೇಶಾದಿಭೇದತಾ ॥ ೭೩ ॥

ಚಿಜ್ಜ್ಯೋತಿಃ ಪರಮಾತ್ಮಾಯಂ ಸ್ವಮಾಯಾವಶತಾಂ ಗತಃ ।
ಧರ್ಮಾರ್ಥಕಾಮಮುಕ್ತ್ಯರ್ಥಂ ಸೃಷ್ಟ್ಯುಪಾಧಿಂ ಪ್ರವಿಷ್ಟವಾನ್ ॥ ೭೪ ॥

---

೭೦. ನಾವು ಉತ್ತಮ ಭಾವದಿಂದ ಚಿಂತಿಸುವುದರಿಂದ ಲಿಂಗವೆಂಬ ಹೆಸರು ಅನ್ವರ್ಥಕವಾಗಿ ಆ ರಾಮನಿಗೆ ರಾಮ ಲಿಂಗ ಎಂಬ ಎರಡು ಹೆಸರೂ ಉಂಟು.

೭೧. ರಾಮನಿಗೂ ಶಿವನಿಗೂ ಅನೇಕವಾದ ಹೆಸರುಗಳುಂಟು ಯಾವನಾದರೂ ಒಬ್ಬನು ಪ್ರಯತ್ನ ಪಟ್ಟರೆ ಭೂಮಿಯಲ್ಲಿನ ಧೂಳನ್ನು ಎಣಿಸಬಹುದು. ಆದರೆ ಆ ಸ್ವಾಮಿಯ ಹೆಸರುಗಳನ್ನು ಎಣಿಸಲಾಗುವುದಿಲ್ಲ.

೭೨-೭೩. ಅಂತಹ ರಾಮನಿಗೆ ಈ ಸರ್ವತೋ ಭದ್ರವು ಹೃದಯವು ಅದರಲ್ಲಿರುವ ಕೇಸರ ಕರ್ಣಿಕೆಗಳಿಂದ ಕೂಡಿದ ಎಂಟು ದಳದ ಪದ್ಮವು ರಾಮಧ್ಯಾನಾರ್ಥವಾಗಿಯೇ ಕಲ್ಪಿತವಾಗಿದೆ. ಹಾಗೆಂದು ಕಲ್ಪಿಸಿಕೊಳ್ಳದಿದ್ದರೆ ದೇಶಕಾಲಗಳಿಲ್ಲದಿರುವ ಅವನನ್ನು ನಾವು ಧ್ಯಾನಿಸಲಾಗುವುದಿಲ್ಲ.

೭೪. ಚಿತ್ ಸ್ವರೂಪನೂ ಜ್ಯೋತಿಃ ಸ್ವರೂಪನೂ ಪರಮಾತ್ಮನೂ ಆದ ಈ ರಾಮನು ತಾನು ಕಲ್ಪಿಸಿರುವ ಮಾಯೆಗೆ ಅಧೀನನಾಗಿ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ತೋರಿಸುವುದಕ್ಕೋಸ್ಕರ ಸೃಷ್ಟಿ ಎಂಬ ಉಪಾಧಿಯನ್ನು ಹೊಂದಿರುವನು.

ತಸ್ಯ ಚೈತನ್ಯಚಂದ್ರಸ್ಯ ಷೋಡಶೇಮಾಃ ಕಲಾಃ ಪರಾಃ ।
ಚಿದ್ವ್ಯಾಪ್ತಾಶ್ಚ ದ್ವಾರಭೂತಾ ಘಟಾದೀನ್ ವಿಷಯಾನಿಮಾ ॥ ೭೫ ॥

ಪ್ರಕಾಶಯಂತಿ ಗೃಹ್ಣಂತಿ ತ್ಯಜಂತಿ ಚ ಸ್ವಭಾವತಃ ।
ಬುದ್ಧಿರೇಕಾತ್ಯಂತಸಿತಾ ಸನ್ನಿಕೃಷ್ಟಾ ಶಿವಾತ್ಮನಃ ॥ ೭೬ ॥

ಅತೋ ಜ್ಞಾನಪ್ರಧಾನಾ ಸಾ ತತ್ ಜ್ಞಾನಂ ಚಕ್ಷುರಾದಿಷು ।
ಪ್ರಸೃತಂ ರೂಪಶಬ್ದಾದೀನ್ ಜಾನಾತಿ ತು ವಿಶೇಷತಃ ॥ ೭೭ ॥

ಚತುರ್ಧಾ ವೃತ್ತಿಭೇದೇನ ಪ್ರೋಕ್ತಾ ತತ್ವಾರ್ಥದರ್ಶಿಭಿಃ ।
ಪ್ರಯೋಜನಂ ನ ತೇನಾತ್ರ ಪ್ರಕೃತಂ ತದ್ವಿವಿಚ್ಯತೇ ॥ ೭೮ ॥

ಕ್ರಿಯಾಪ್ರಧಾನಃ ಪ್ರಾಣಶ್ಚ ಪಂಚಧಾಽಸೌ ಸ್ವವೃತ್ತಿತಃ ।
ಪ್ರಾಣಾಪಾನೌ ತಥಾ ವ್ಯಾನಸ್ಸಮಾನೋದಾನಕಾವಿತಿ ॥ ೭೯ ॥

---

೭೫. ಆತ್ಮರೂಪನಾದ ಆ ರಾಮಚಂದ್ರನಿಗೆ ಈ ಷೋಡಶ ಮುದ್ರೆಯು ಷೋಡಶ ಕಲೆಗಳು. ಈ ಕಲೆಗಳ ಮೂಲಕವಾಗಿ ಚೈತನ್ಯ ಈಚೆಗೆ ಬರುತ್ತದೆ. ಆದರಿಂದ ನಮಗೆಲ್ಲವೂ ಕಾಣುವಂತೆ ಮಾಡುತ್ತದೆ. ಚಂದ್ರನ ಶಕ್ತಿಯು ಕಲೆಗಳ ಮೂಲಕವಾಗಿ ಹೊರಗೆ ಬಂದು ಪದಾರ್ಥಗಳನ್ನು ತೋರಿಸುತ್ತದೆ. ಮತ್ತು ಬಿಡುತ್ತದೆ. ಅಂತೆಯೇ ಈ ಶಕ್ತಿಯೂ ಎಂದು ತಿಳಿಯಬೇಕು.

೭೬–೭೭. ಬುದ್ಧಿಯೆಂಬುದು ಒಂದು. ಅದು ಬಹು ಪರಿಶುದ್ಧವಾದುದು. ಅದು ಶಿವ ರೂಪನಾದ ಆತ್ಮನಿಗೆ ಬಹು ಹತ್ತಿರದಲ್ಲಿರತಕ್ಕದ್ದು. ಆ ಬುದ್ಧಿಯು ಜ್ಞಾನವನ್ನೇ ಪ್ರಧಾನವಾಗಿ ಹೊಂದಿರತಕ್ಕದ್ದು. ಆ ಜ್ಞಾನವು ಕಣ್ಣೇ ಮುಂತಾದ ಇಂದ್ರಿಯಗಳಿಂದ ಹೊರ ಹೊಮ್ಮಿ ವಸ್ತುಗಳ ರೂಪ ಶಬ್ದಾದಿಗಳನ್ನು ಗ್ರಹಿಸುತ್ತದೆ.

೭೮. ಆ ಬುದ್ಧಿಯು ವೃತ್ತಿ ಭೇದದಿಂದ ನಾಲ್ಕು ಭಾಗವಾಗಿದೆ. ಎಂದು ತಜ್ಞರು ಹೇಳುತ್ತಾರೆ. ಅದು ಇಲ್ಲಿ ಪ್ರಕೃತವಲ್ಲ. ಪ್ರಕೃತವನ್ನು ಹೇಳುತ್ತೇನೆ.

೭೯. ಕ್ರಿಯೆಯನ್ನೇ ಪ್ರಧಾನವಾಗಿ ಉಳ್ಳ ಪ್ರಾಣವು ಎಂದರೆ ಗಾಳಿಯು ಐದು ಬಗೆಯಾಗಿ ಭಾಗವಾಗಿದೆ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬದಾಗಿ ಅವು ಹೆಸರನ್ನು ಪಡೆದಿವೆ.

ವಾಗಾದಿಕರ್ಮೇಂದ್ರಿಯೇಷು ಕ್ರಿಯಾ ಪ್ರಾಣಾಶ್ರಯಾ ಮತಾ ।
ಶ್ರವಣಂ ನಯನಂ ಘ್ರಾಣಂ ತ್ವಗ್ರಸನೇಂದ್ರಿಯಂ ತಥಾ ॥ ೮೦ ॥

ಪಂಚೈವಾನಿ ಚೇಂದ್ರಿಯಾಣಿ ಜ್ಞಾನದ್ವಾರಾಣಿ ನೈ ವಿದುಃ ।
ವಾಕ್ಪಾಣಿಪಾದಪಾಯೂಪಸ್ಥಾಶ್ಚ ಕರ್ಮೇಂದ್ರಿಯಾಣಿ ಚ ॥ ೮೧ ॥

ಏವಂ ಷೋಡಶಸಂಖ್ಯಾನಂ ಕಲಾನಾಮುಚ್ಯತೇ ಬುಧೈಃ ।
ತಾಸು ಸರ್ವಾಸು ಚೈತನ್ಯಂ ರಾಮರಾಮೇತಿ ವಿಶ್ರುತಂ ॥ ೮೨ ॥

ಪ್ರವಿಷ್ಟಂ ದೀಪ್ಯತೇ ತತ್ತ್ವೇನ ವಿಶ್ವಂ ವಿಚೇಷ್ಟತೇ ।
ಅನಾದಿಸಂಸಾರತರುಃ ಕರ್ಮಮೂಲಫಲಾತ್ಮಕಃ ॥ ೮೩ ॥

೮೦-೮೨. ವಾಕ್ ಎಂದರೆ ಮಾತು. ಇದೇ ಮೊದಲಾದ ಕರ್ಮೇಂದ್ರಿಯಗಳಲ್ಲಿ ನಡೆಯತಕ್ಕ ಕ್ರಿಯೆಯು ಈ ಪ್ರಾಣವಾಯುವನ್ನೇ ಆಶ್ರಯಿಸಿಕೊಂಡು ನಡೆಯುತ್ತದೆ. ಕಿವಿ, ಕಣ್ಣು, ಮೂಗು, ಚರ್ಮ, ನಾಲಿಗೆ, ಈ ಐದು ಇಂದ್ರಿಯಗಳೂ ಮನುಷ್ಯನಿಗೆ ಜ್ಞಾನವನ್ನುಂಟು ಮಾಡುವುದಕ್ಕೆ ದ್ವಾರಗಳು. ಆದ್ದರಿಂದ ಇವು ಜ್ಞಾನೇಂದ್ರಿಯಗಳು, ಕೈ, ಕಾಲು, ಪಾಯು, ಉಪಸ್ಥ, ವಾಕ್ ಇವು ಐದೂ ಕರ್ಮೇಂದ್ರಿಯಗಳು. ಈ ರೀತಿಯಾಗಿ ಆ ಹದಿನಾರು ಕಲೆಗಳಿಗೂ ಈ ರೀತಿಯಾಗಿ ಐದುಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಐದುಪ್ರಾಣಗಳುಒಂದು ಬುದ್ಧಿ ಇವುಗಳ ಅಭೇದವನ್ನು ಹೇಳಿದೆ. ಅವೆಲ್ಲದರಲ್ಲಿಯೂ ಇರುವ ಚೈತನ್ಯ ಸ್ವರೂಪವು ರಾಮ ನಾಮವು ಎಂದು ಹೇಳಲ್ಪಟ್ಟಿದೆ.

೮೩. ಆ ರಾಮನಾಮವು ಈ ಚೈತನ್ಯರೂಪವಾಗಿ ಆ ಕಲೆಗಳಲ್ಲಿ ಪ್ರವೇಶಿಸಿದರೆ ಅವು ಪ್ರಕಾಶಿಸುವುವು. ಮತ್ತು ಅವುಗಳ ಕ್ರಿಯೆಗಳನ್ನು ಮಾಡುವುವು. ಈ ಸಂಸಾರವೆಂಬುದು ಆದಿಯಿಲ್ಲದ ಒಂದು ಮರವು. ಇದಕ್ಕೆ ಕರ್ಮವೇ ಬೇರು. ಫಲವೇ ಆತ್ಮವು.

ಥೇಹಾಭಿಮಾನಿನೋ ಜೀವಾಃ ಫಲಭೋಗಾಯ ಪಕ್ಷಿಣಃ ।
ಯಥಾ ಕರ್ಮ ಸುಖಂ ದುಃಖಂ ಖಾದಂತಿ ಸ್ವೇಶ್ವರಾರ್ಪಿತಂ ॥ ೮೪ ॥

ಕಶ್ಚಿಜ್ಜನ್ಮಸಹಸ್ರೇಷು ಜ್ಞಾನವಾನ್ ಜಾಯತೇ ಯದಾ ।
ತದಾತ್ಮಸ್ಥಂ ರಾಮರೂಪಂ ಜ್ಞಾತ್ವಾ ಮೋಕ್ಷೀಭವತ್ಯಲಂ ॥ ೮೫ ॥

ಇಂದ್ರಿಯಾಣಿ ಪರಾಣ್ಯೇವ ತೇಭ್ಯೋ ಬುದ್ಧಿಃ ಪರಾ ಮತಾ ।
ತತ್ಪರಃ ಪರಮಾತ್ಮಾ ಚ ಸರ್ವಸಾಕ್ಷೀ ವಿನಿಶ್ಚಿತಃ ॥ ೮೬ ॥

ದ್ವೌ ಸುಪರ್ಣಾವೇಕವೃಕ್ಷಂ ಸಮಾಶ್ರಿತ್ಯ ಸ್ಥಿತೌ ತಯೋಃ ।
ಏಕಸ್ಸಾರಫಲಂ ಸ್ವಾದು ಖಾದತ್ಯನ್ಯೋ ವಿಚಕ್ಷತೇ ॥ ೮೭ ॥

---

೮೪. ದೇಹದಲ್ಲಿ ಅಭಿಮಾನವನ್ನು ಹೊಂದಿರುವ ಈ ಜೀವಗಳು ಪಕ್ಷಿಗಳಂತೆ ಇರುತ್ತಾ ಆ ಮರದ ಫಲವನ್ನು ಅನುಭವಿಸುತ್ತವೆ. ಆಯಾಯ ದೇಹದಲ್ಲಿರುವ ಆಯಾ ಜೀವಗಳು ತಮ್ಮ ತಮ್ಮ ಈಶ್ವರನಿಂದ ಕೊಡಲ್ಪಟ್ಟ ಸುಖದುಃಖರೂಪವಾದ ಕರ್ಮಗಳನ್ನು ಅನುಭವಿಸುತ್ತವೆ.

೮೫. ಈ ರೀತಿಯಾಗಿ ಜನ್ಮವನ್ನು ಹೊಂದಿರುವ ಪ್ರಾಣಿಯು ಸಾವಿರಾರು ಜನ್ಮಗಳನ್ನು ಹೊಂದುತ್ತವೆ. ಹೀಗೆ ಹೊಂದುವಾಗ ಇವುಗಳಲ್ಲಿ ಯಾವುದೋ ಒಂದರಲ್ಲಿ ಆ ಪ್ರಾಣಿಯು ಜ್ಞಾನಿಯಾಗುತ್ತಾನೆ. ಆಗ ಆ ಆತ್ಮರೂಪನಾದ ರಾಮನನ್ನು ತಿಳಿದು ಮೋಕ್ಷವನ್ನು ಹೊಂದುತ್ತಾನೆ.

೮೬. ದೇಹಿಗೆ ಎಲ್ಲಕ್ಕಿಂತಲೂ ಇಂದ್ರಿಯಗಳು ಉತ್ತಮವಾದುವು. ಆ ಇಂದ್ರಿಯಗಳೆಲ್ಲಕ್ಕಿಂತಲೂ ಬುದ್ಧಿಯು ಉತ್ತಮವಾದುದು. ಆ ಬುದ್ಧಿಗಿಂತಲೂ ಪರಮಾತ್ಮನು ಉತ್ತಮನು ಇವನೇ ಸರ್ವ ಸಾಕ್ಷಿಯಾಗಿರುವವನು. ಆ ಬುದ್ಧಿಯು ಆ ಪರಮಾತ್ಮನ ಅಧೀನವಾದುದು.

೮೭. ಒಂದು ಮರವನ್ನು ಎರಡು ಪಕ್ಷಿಗಳು ಆಶ್ರಯಿಸಿಕೊಂಡು ಇವೆ. ಅವುಗಳಲ್ಲಿ ಒಂದು ಸಾರವಾದ ಹಣ್ಣನ್ನು ತಿನ್ನುತ್ತದೆ. ಮತ್ತೊಂದು ನೋಡುತ್ತದೆ. ಎಂದರೆ ಒಂದು ದೇಹದಲ್ಲಿ ಜೀವ ಆತ್ಮ ಎರಡೂ ಇರುತ್ತವೆ. ಜೀವವು ಪಾಪ ಪುಣ್ಯಗಳನ್ನು ಅನುಭವಿಸುತ್ತದೆ. ಆತ್ಮವು ಅದಕ್ಕೆ ಅಧೀನವಾಗದೆ ಸೌಖ್ಯಪಡುತ್ತ ಲಣವಾಗಿರುತ್ತದೆ.

ತ್ರಿಷು ಧಾಮಸು ಯದ್ಭೋಗ್ಯಂ ಭೋಕ್ತಾ ಭೋಗ್ಯಶ್ಚ ಯದ್ಭವೇತ್ ।
ತೇಭ್ಯೋ ವಿಲಕ್ಷಣಸ್ಸಾಕ್ಷೀತ್ಯಾಹ ಚಾಥರ್ವಣೀ ಶ್ರುತಿಃ ॥ ೮೮ ॥

ಯಚ್ಚಾಸ್ತೀಹ ಯತ್ ಸ್ಫುರತಿ ಯಚ್ಚಾನಂದಯತಿ ಸ್ವಯಂ ।
ಯಸ್ಮಿಂಶ್ಚ ಮಹಸಿ ಪ್ರಖ್ಯೇ ಸರ್ವೇ ವೇದಾಸ್ಸಮನ್ವಿತಾಃ ॥ ೮೯ ॥

ವಿಷಯಾದಿಧೀಪರ್ಯಂತಂ ಜಡಂ ಸರ್ವಮನಾತ್ಮಕಂ ।
ಯಸ್ಯಾರ್ಥೇ ಚ ಪ್ರಿಯಂ ಚೈತತ್ಸರಾಮಾತ್ಮಾ ಮಹಾನ್ ಪ್ರಿಯಃ ॥

ಸರ್ವೇಷಾಂ ಪ್ರಾಣಿನಾಂ ಸ್ವಾತ್ಮಾ ಪರಪ್ರೇಮಾಸ್ಪದೋ ಮತಃ ।
ಸ ತು ಸರ್ವತ್ರೈಕ ಏವ ನೇಹ ನಾನಾಸ್ತಿ ಗಚ್ಛತಿ ॥ ೯೧ ॥

---

೮೮. ಮೂರು ಲೋಕಗಳಲ್ಲಿಯೂ ಭೋಕ್ತಾ ಎಂದರೆ ಅನುಭವಿಸುವವನು. ಭಾಗ್ಯ ಎಂದರೆ ಅನುಭವಿಸುವ ಪದಾರ್ಥ. ಇವು ಯಾವುವು ಇವೆಯೋ ಅವೆಲ್ಲಕ್ಕೂ ಬೇರೆಯಾದವನು ಈ ಆತ್ಮನು. ಅವನು ವಿಲಕ್ಷಣನು. ಮತ್ತು ಸಾಕ್ಷಿಯೂ ಎಂದು ಅಥರ್ವಣ ಶ್ರುತಿಯು ಹೇಳುತ್ತದೆ.

೮೯. ಯಾವುದು ಇದೆಯೋ ಯಾವುದು ಪ್ರಕಾಶಿಸುತ್ತದೆಯೋ ಯಾವುದು ತಾನಾಗಿಯೇ ಆನಂದಪಡುತ್ತದೆಯೋ ಮತ್ತು ಆನಂದಾತ್ಮಕವೋ ಅಂತಹ ಪ್ರಸಿದ್ಧವಾದ ಆತ್ಮರೂಪನಾದ ಜ್ಯೋತಿಸ್ಸಿನಲ್ಲಿ ಎಲ್ಲಾ ವೇದಗಳೂ ಸೇರಿ ಹೋಗಿವೆ.

೯೦. ಜಗತ್ತಿನಲ್ಲಿ ನಮಗೆ ತಿಳಿಯುವ ಎಂದರೆ ವಿಷಯವಾಗುವ ಪದಾರ್ಥ ಮೊದಲುಗೊಂಡು ಉತ್ತಮವಾದ ಬುದ್ಧಿಯವರೆಗೂ ಇರುವುವೆಲ್ಲವೂ ಜಡವಾದುವು. ಎಂದರೆ ಅವುಗಳಲ್ಲಿ ಕ್ರಿಯೆಯು ನಡೆಯುವುದಿಲ್ಲ. ಅವುಗಳು ಆತ್ಮರಹಿತವಾದುವು. ಅವೆಲ್ಲವೂ ಯಾವುದನ್ನು ಹೊಂದಿದರೆ ಎಲ್ಲಕ್ಕೂ ಪ್ರಿಯವಾಗುವುದೋ ಅದೇ ರಾಮಾತ್ಮಕವಾದುದು.

೯೧. ಎಲ್ಲ ಪ್ರಾಣಿಗಳಿಗೂ ತನ್ನ ಆತ್ಮವು ಪರಮ ಪ್ರೇಮಾಸ್ಪದವಾದುದು. ಆ ಆತ್ಮವು ಎಲ್ಲ ಕಡೆಯಲ್ಲಿಯೂ ಇರುವನು. ಮತ್ತು ಒಬ್ಬನೇ ಆಗಿರುವನು. ಆವನು ಅನೇಕ ವಿಧವಾಗುವುದಿಲ್ಲ.

ಚಿದ್ರಾಮಂ ಹೃದ್ಗತಂ ಜ್ಞಾತ್ವಾ ಯೋಸೌ ಸೋಹಮಿತೀರಯಾ ।
ಆಚಾರ್ಯದತ್ತಯಾ ಸಮ್ಯಕ್ ಪರನೋಪಾಸನಂ ಗತಃ ॥ ೯೨ ॥

ಆವೃತ್ತಿರಸಕೃತ್‌ನ್ಯಾಯಾತ್ ಫಲೀಭೂತೇ ಪರಾತ್ಮನಿ ।
ಬೋಧದಾರ್ಢ್ಯೇ ಪುನಸ್ತಸ್ಯ ನ ಕಾರ್ಯಂ ವಿದ್ಯತೇ ಭವೇ ॥ ೯೩ ॥

ಸರ್ವೇಷ್ವುಪಾಯಶಾಸ್ತ್ರೇಷು ಯತ್‌ಜ್ಞಾನಾರ್ಥೇ ಪ್ರಯೋಜಿತಾಃ ।
ಸ ಚೇದ್ದೇಶಿಕಶಬ್ದೇನ ಹೃದ್ಯಾವಿಃ ಕಿಂ ಪರಂ ತತಃ ॥ ೯೪ ॥

ದೃಷ್ಟೇಸ್ಮಿನ್ರಚಿತೇ ಭದ್ರೇ ಯದ್ಯೇವಂ ಪ್ರವಿಚಾರ್ಯತೇ ।
ತದಾ ಚಿತ್ತೇ ಪರಾ ಪ್ರೀತಿರ್ಜಾಯತೇ ವಿದುಷಾಂ ಸತಾಂ ॥ ೯೫ ॥

೯೨-೯೩. ಯಾವನು ಚಿನ್ಮಯನಾದ ರಾಮನನ್ನು ಹೃದಯದಲ್ಲಿರುವಂತೆ ಭಾವಿಸಿ ಗುರುವಿನಿಂದ ಉಪದಿಷ್ಟವಾದ ಸೋಹಂ ಭಾವದಿಂದ ಚೆನ್ನಾಗಿ ಉಪಾಸನೆ ಮಾಡುತ್ತಾನೆಯೋ ಅವನು ಆವೃತ್ತಿ ರಹಿತನಾದ ಸೋಹಮಿತ್ಯಾದಿ ಶ್ರುತಿಗಳಿಗೆ ಫಲರೂಪನಾದ ಜ್ಞಾನದಿಂದ ದೃಢೀಕೃತವಾದ ಆತ್ಮನಲ್ಲಿ ಲೀನವಾಗುತ್ತಾನೆ. ಅವನಿಗೆ ಈ ಸಂಸಾರದಲ್ಲಿ ಮಾಡಬೇಕಾದ ಒಳ್ಳೆಯದು ಕೆಟ್ಟದು ಯಾವುವೂ ಇರುವುದಿಲ್ಲ.

೯೪. ಶಾಸ್ತ್ರಗಳೂ, ಯುಕ್ತಿಗಳೂ ಯಾವ ಸ್ವಾಮಿಯನ್ನು ತಿಳಿಯಲು ಜ್ಞಾನವನ್ನು ಬೋಧಿಸುತ್ತವೆಯೋ ಆ ಪರಬ್ರಹ್ಮನಾದ ರಾಮನು ಗುರೂಪದೇಶ ವಾಕ್ಯಗಳಿಂದಲೇ ಹೃದಯದಲ್ಲಿ ತೋರಿ ಬರುತ್ತಾನೆ. ಇದಕ್ಕಿಂತಲೂ ಬೇರೆ ಏನು ಬೇಕು!

೯೫. ಈ ರಾಮಲಿಂಗತೋ ಭದ್ರವನ್ನು ರಚಿಸಿ ಆ ಭದ್ರದಲ್ಲಿ ಮೇಲೆ ಹೇಳಿದ ರೀತಿಯಿಂದ ವಿವೇಚಿಸಿ ಯೋಚಿಸಿದರೆ ಆಗ ಮನಸ್ಸಿಗೆ ಬಹುವಾದ ಆನಂದವು ಹುಟ್ಟುತ್ತದೆ.

ನಮೋ ರಾಮಾಯ ಶಾಂತಾಯ ಲಿಂಗರೂಪಧರಾಯ ಚ ।
ಶಂಭವೇ ವಿಷ್ಣವೇ ತುಭ್ಯಂ ಶಂಕರಾಯ ಶಿವಾತ್ಮನೇ ॥ ೯೬ ॥

ಅಥವಾದ್ಯೇ ಸ್ಥಲೇ ಭದ್ರಂ ಕಾರ್ಯಂ ನವಪದಾತ್ಮಕಂ ।
ತಿರ್ಯಗ್ಭದ್ರಂ ಷಟ್ಪದಜಂ ರಕ್ತಪೀತೇಽತ್ರ ತೇ ಸ್ಮೃತೇ ॥ ೯೭ ॥

ಸ್ಥಲೇ ದ್ವಿತೀಯೇ ಭದ್ರಂ ಹಿ ರಕ್ತಂ ವಿಂಶಪದಾತ್ಮಕಂ ।
ತಿರ್ಯಕ್ ಭದ್ರಂ ನವಪದೈಃ ಪೀತಂ ಚಿತ್ರೇ ತು ಶೃಂಖಲೇ ॥ ೯೮ ॥

ದ್ವಿದ್ವಿಪಾದಾತ್ಮಕೇ ಕಾರ್ಯೇ ಶೇಷಂ ಸರ್ವಂ ಹಿ ಪೂರ್ವವತ್ ।
ರಾಮತೋ ಭದ್ರಮೇತಚ್ಚ ಕೇವಲಂ ರಾಮತುಷ್ಟಿದಂ ॥ ೯೯ ॥

---

೯೬. ಶಾಂತನಾಗಿರುವ ರಾಮನಿಗೆ ನಮಸ್ಕಾರವು ಲಿಂಗ ರೂಪವನ್ನು ಹೊಂದಿರುವ ಆ ರಾಮನಿಗೆ ನಮಸ್ಕಾರವು. ಶಂಭುವೂ, ವಿಷ್ಣುವೂ ಆದ ರಾಮನಿಗೆ ನಮಸ್ಕಾರವು. ಶಿವಸ್ವರೂಪನಾಗಿ ಸುಖವನ್ನುಂಟುಮಾಡುವ ಆ ಸ್ವಾಮಿಗೆ ನಮಸ್ಕಾರವು.

೯೭. ರಾಮಲಿಂಗತೋಭದ್ರದ ಮತ್ತೊಂದು ರೀತಿಯು ಹೇಗೆ ಇದೆ ಎಂದರೆ ಎರಡು ಭಾಗದಲ್ಲಿ ಮೊದಲನೆಯ ಭಾಗವು ಒಂಭತ್ತು ಮನೆಗಳಿಂದ ಕೂಡಿರುತ್ತದೆ. ತಿರ್ಯಕ್ ಎಂದರೆ ಕೆಳಗಡೆಯದು. ಆರು ಮನೆಗಳಿಂದ ಕೂಡಿರುವುದು. ಇವುಗಳಲ್ಲಿ ಒಂದು ಕೆಂಪು ಬಣ್ಣದ್ದಾಗಿಯೂ ಮತ್ತೊಂದು ಹಸರು ಬಣ್ಣದ್ದಾಗಿಯೂ ಇರಬೇಕು.

೯೮. ಎರಡನೆಯ ಭದ್ರವು ಇಪ್ಪತ್ತು ಮನೆಗಳಿಂದ ಕೂಡಿ ರಕ್ತವರ್ಣದಿಂದ ರಚಿತವಾಗಿರಬೇಕು. ಅದರ ಕೆಳಗಿರುವ ಭದ್ರವು ಒಂಭತ್ತು ಮನೆಗಳಿಂದ ಕೂಡಿರಬೇಕು. ಅದರ ಬಣ್ಣ ಹಸುರಾಗಿರಬೇಕು. ಶೃಂಖಲವು ಚಿತ್ರ ಬಣ್ಣದಿಂದಿರಬೇಕು.

೯೯. ಇವುಗಳಲ್ಲಿ ಮನೆಯನ್ನು ತೆಗೆದುಕೊಳ್ಳುವಾಗ ಎರಡೆರಡು ಮನೆಗಳನ್ನು ತೆಗೆದುಕೊಳ್ಳಬೇಕು. ಉಳಿದುವು ಮೇಲೆ ಹೇಳಿದ ಭದ್ರದಂತೆ ರಚಿತವಾಗುತ್ತವೆ.

ನತ್ವೇಶಾನಂ ರಾಮಮಾನಂದಕಂದಂ
ಮಾಯಾತೀತಂ ನಿರ್ವಿಕಾರಂ ನಿರೀಹಂ ।
ವಿದ್ಯಾಧೀಶಂ ಷಡ್ಗುಣೈಕಾಶ್ರಯಂ ಚ
ವಕ್ಷ್ಯೇ ಭದ್ರಂ ರಾಮನಾಮಾಂಕಿತಂ ತತ್ ॥ ೧೦೦ ॥

ಪ್ರಾಗುತ್ತರಾದ್ವಿಶತಮಂಕನವಾಧಿಕಾಶ್ಚ
ರೇಖಾಸ್ಸಮಾಸ್ಸುಪರಿಕಲ್ಪ್ಯ ಪದೇಷು ತಾಸಾಂ ।
ಕೋಣಾಂತರಾತ್ರ ಉಪರೀಂದುಶಕುಂತಸಂಖ್ಯಾಃ
ಪೀತಾಶ್ಚ ತೇ ಪರಿಧಯಃ ಪರಿಕಲ್ಪನೀಯಾಃ ॥ ೧೦೧ ॥

ಕೋಣಾಬ್ಜಶೃಂಖಲಲತಾಸ್ಸಿತಕೃಷ್ಣನೀಲಾ
ಭದ್ರಾಣಿ ಭಿನ್ನರಚನಾನ್ಯರುಣಾನಿ ತಾನಿ ।
ಮುದ್ರಾಶ್ಚ ತತ್ಪರಿಧಯಶ್ಚ ಸಿತಾಶ್ಚ ರಕ್ತಾಃ
ಸಂಪೂರಿತಾಶ್ಚ ಜನಯಂತಿ ರತಿಂ ಮುನೀನಾಂ ॥ ೧೦೨ ॥

---

೧೦೦. ಆನಂದಸ್ವರೂಪನೂ ಈಶನೂ ಮಾಯೆಗೆ ಸಿಕ್ಕದವನೂ ವಿಕಾರವಿಲ್ಲದವನೂ ಆಶೆಯಿಲ್ಲದವನೂ ವಿದ್ಯೆಗೆ ಒಡೆಯನೂ ಷಡ್ಗುಣಗಳಿಗೂ ಆಶ್ರಯನೂ ಆದ ಆ ರಾಮನನ್ನು ನಮಸ್ಕರಿಸಿ ರಾಮನಾಮಾಂಕಿತವಾದ ಭದ್ರವನ್ನು ಹೇಳುತ್ತೇನೆ.

೧೦೧. ಎಡದಿಂದ ಬಲಕ್ಕೆ ಇನ್ನೂರತೊಂಭತ್ತೊಂಭತ್ತು ಗೆರೆಗಳನ್ನು ಎಳೆಯಬೇಕು. ಅಂತೆಯೇ ಮೇಲಿನಿಂದ ಕೆಳಕ್ಕೂ ಇನ್ನೂರತೊಂಭತ್ತೊಂಭತ್ತು ರೇಖೆಗಳನ್ನೆಳೆಯಬೇಕು. ಇಲ್ಲಿನ ಕೋಣಾಂತರದಲ್ಲಿ ಇಪ್ಪತ್ತೊಂದು ಮನೆಗಳಿಂದ ಕೂಡಿದ ಪರಿಧಿಗಳನ್ನು ರಚಿಸಬೇಕು. ಇದು ಹಸರು ಬಣ್ಣದಿಂದಿರಬೇಕು.

೧೦೨. ಕೋಣೇಂದುವೂ ಸರಪಣಿಯೂ ಲತೆಯೂ ಬಿಳಿದು, ಕಪ್ಪು, ನೀಲಿ ಬಣ್ಣಗಳಿಂದ ಕೂಡಿರಬೇಕು. ಅಲ್ಲಿ ಬರುವ ಭದ್ರಗಳು ಕೆಂಪು ಬಣ್ಣದಿಂದ ಕೂಡಿ ಭಿನ್ನ ಭಿನ್ನ ರಚನೆಗಳಿಂದ ಬರುತ್ತವೆ. ಇದರಲ್ಲಿನ ಮುದ್ರೆಯು ಬೆಳ್ಳಗೂ ಪರಿಧಿಯು ಕೆಂಪುಬಣ್ಣದಲ್ಲಿಯೂ ಸಂಪೂರಿತವಾಗಿರುತ್ತವೆ. ಹೀಗಿರುವ ಭದ್ರವು ಮುನಿಗಳಿಗೆ ಆಹ್ಲಾದಕರವಾದುದು.

ಮುದ್ರಾ ತು ಷಷ್ಟಿಪದಸಂವಲಿತಾ ಚ ತತ್ರ
ಪಂಕ್ತೀ ವಿಹಾಯ ಯಮವಾಸವದಿಕ್ತನಸ್ಥೇ ।
ಪ್ರತ್ಯೇಕಕೋಣಕಪದಾನಿ ಚತುಷ್ಟಯಾನಿ
ಪಂಕ್ತಿದ್ವಯಂ ರಸತುರೀಯಕಮಂಜನಾಭಂ ॥ ೧೦೩ ॥

ಕೃತ್ವಾಪದ್ಯೈಕಮಥತಸ್ತ್ವಥ ಸಪ್ತಮಾಯಾ
ಸ್ತೇನಾತಿಸುಂದರತರಂ ಪರಿಭಾತಿ ಸಾರಂ ।
ರಾಮೇತಿ ದ್ವ್ಯಕ್ಷರಮುಮೇಶಜಪಂ ನಿಧಾನಂ
ಪ್ರಾಣಪ್ರಯಾಣಸಮಯೇ ಜಪತಾಂ ಮಹೋದಂ ॥ ೧೦೪ ॥

ರಚಯೇದಾದಿತಸ್ಸಮ್ಯಕ್ ಯಾವದ್ವಿಂಶಸ್ಥಲಾವಧಿ ।
ಸರ್ವತ್ರ ರಾಮಮುದ್ರಾಸು ಮಧ್ಯೇ ಸುಪರಿಧಿದ್ವಯಂ ॥ ೧೦೫ ॥

ಆದೌ ತತ್ವಮಿತಾ ಮುದ್ರಾಸ್ತ್ರಯೋವಿಂಶನ್ಮಿತಾಸ್ತತಃ ।
ದ್ವಾವಿಂಶೈಕವಿಂಶವಿಂಶತ್ರಿಷಟ್ಸಪ್ತದಶಾಪರಾಃ ॥ ೧೦೬ ॥

೧೦೩-೧೦೪. ಇದರಲ್ಲಿರುವ ಮುದ್ರೆಯು ಅರವತ್ತು ಮನೆಗಳಿಂದ ಕೂಡಿರುತ್ತದೆ. ಇದರಲ್ಲಿ ಪೂರ್ವ ಮತ್ತು ದಕ್ಷಿಣದ ಪಂಕ್ತಿಗಳನ್ನು ಬಿಟ್ಟು ಬಿಡಬೇಕು. ಇದರಲ್ಲಿನ ಕೋಣಗಳ ಮನೆಯು ನಾಲ್ಕು ನಾಲ್ಕಿರಬೇಕು. ನಾಲ್ಕು ಮತ್ತು ಆರನೆಯ ಪಂಕ್ತಿಗಳು ಕಪ್ಪು ಬಣ್ಣದ್ದಾಗಿರಬೇಕು. ಆ ಏಳನೆಯ ಪಂಕ್ತಿಯು ಬಿಳಿಯ ಬಣ್ಣದ್ದಾಗಿರಬೇಕು. ಇದರಿಂದ ಭದ್ರವು ಸುಂದರವಾಗಿ ಕಾಣುತ್ತದೆ. ಇದರಲ್ಲಿ ಶಿವನ ಜಪಕ್ಕೆ ವಿಷಯವಾದ ಪ್ರಾಣವು ಪ್ರಯಾಣ ಮಾಡುವಾಗ ಜನಿಸಿದರೆ ಸದ್ಗತಿಪ್ರದವೂ ಆದ ರಾಮ, ಎಂಬ ಅಕ್ಷರವು ಏರ್ಪಡುತ್ತದೆ.

೧೦೫-೧೧೧. ಈ ಭದ್ರದಲ್ಲಿ ಮೊದಲಿನಿಂದ ಇಪ್ಪತ್ತು ಇಪ್ಪತ್ತು ಮನೆಗಳಿಗೆ ಒಂದೊಂದು ಭದ್ರವು ರಚಿತವಾಗುತ್ತದೆ. ಈ ರಾಮ ಮುದ್ರೆಯ ಮಧ್ಯದಲ್ಲಿ ಎರಡು ಪರಿಧಿಗಳು ಬರುತ್ತವೆ. ಆದಿಯುದರಲ್ಲಿ ಇಪ್ಪತ್ತ ಮೂರು ಮನೆಗಳ ಇಪ್ಪತ್ತೈದು ಮುದ್ರೆಗಳು ಬರುತ್ತವೆ. ಇಪ್ಪತ್ತೆರಡು, ಇಪ್ಪತ್ತೊಂದು, ಹದಿನೆಂಟು ಹದಿನೇಳು, ಹದಿನಾರು, ಹದಿನಾಲ್ಕು, ಹದಿಮೂರು, ಹನ್ನೆರಡು, ಒಂಭತ್ತು,

ದ್ವ್ಯಷ್ಟಚತುರ್ದಶತ್ರಯೋದಶದ್ವಾದಶರುದ್ರಕಾಃ ।
ನವಾಷ್ಟಸಪ್ತಷಟ್ಪಂಚಾಬ್ಧಿತ್ರಿದ್ವ್ಯೇಕಾಃ ಶಾಪ್ಯನುಕ್ರಮಾತ್ ॥ ೧೦೭ ॥

ಭದ್ರಂ ಷೋಡಶಪಾದಂ ಚ ವಿಂಶತ್ತ್ರಿಂಶತ್ ಷಡಗ್ನಿಕಂ ।
ಚಂದ್ರಕಲಂ ತತ್ತ್ವನಿತಂ ತ್ರಿಂಶಾಕ್ಷಿಸಿಂಧುವಿಂಶಕಂ ॥ ೧೦೮ ॥

ತತ್ತ್ವಷಡಗ್ನಿನೇತ್ರಾಂಬುನಿಧಿವಿಂಶನ್ನಭೋಗ್ನಿಕಂ ।
ಷಟ್ತ್ರಿಂಶತ್ಷೋಡಶಪದಂ ತತ್ತ್ವೇ ತ್ರಿಂಶದ್ದ್ವಿಸಿಂಧುಕಂ ॥ ೧೦೯ ॥

ವಿಂಶತ್ಕೋಷ್ಠಂ ಕ್ರಮಾದೇವಂ ಭವೇತ್ಪಾರ್ಶ್ವಚತುಷ್ಟಯೇ ।
ಏಕವಿಂಶತ್ಪದೇ ಭದ್ರಮಂಕಕೋಷ್ಠಂ ಚ ವಾಪಿಕಾ ॥ ೧೧೦ ॥

ಚತುರ್ವಿಂಶಪದಾ ಕಾರ್ಯಾ ಪರಿಧ್ಯಂತೋರುಣಾಂಬುಜಂ ।
ಭದ್ರೋಪರಿ ಯತ್ರ ಯತ್ರ ಪದಾನ್ಯುರ್ವರಿತಾನಿ ಚ ॥ ೧೧೧ ॥

ತಿರ್ಯಕ್ ಭದ್ರಶೃಂಖಲಾರ್ಥೇ ಯಥೇಚ್ಛಂ ಪೂರಯೇದ್ಧಿಯಾ ।
ಸರ್ವತ್ರ ಶೃಂಖಲಾಃ ಪಂಚಪದಜೈಕಾದಶೀ ಲತಾ ॥ ೧೧೨ ॥

ಎಂಟು, ಏಳು, ಆರು, ನಾಲ್ಕು ಮೂರು, ಎರಡು, ಒಂದು ಈ ರೀತಿಯಾಗಿ ಹೋಗು ಹೋಗುತ್ತಾ ಲಿಂಗಗಳು ಏರ್ಪಡುತ್ತವೆ. ಇಲ್ಲಿ ಬರುವ ಭದ್ರವು ಹದಿಮೂರು ಮನೆಗಳದು. ಇಪ್ಪತ್ತು, ಮೂವತ್ತು, ಮೂವತ್ತಾರು, ಹದಿನಾರು, ಇಪ್ಪತ್ತೈದು, ಮೂವತ್ತು, ನಾಲ್ವತ್ತೆರಡು, ಇಪ್ಪತ್ತು, ಇಪ್ಪತ್ತೈದು, ಮೂವತ್ತಾರು ಹದಿನಾರು, ಇಪ್ಪತ್ತೈದು, ಮೂವತ್ತು ನಾಲ್ವತ್ತೆರಡು, ಇಪ್ಪತ್ತು ಮನೆಗಳಿಂದ ಭದ್ರವು ಹುಟ್ಟುತ್ತದೆ. ನಾಲ್ಕು ಪಾರ್ಶ್ವದಲ್ಲಿಯೂ ಇಪ್ಪತ್ತೊಂದು ಮನೆಗಳ ಒಂದು ವಾಪಿಯು ಬರುತ್ತದೆ. ಅದು ಇಪ್ಪತ್ತ ನಾಲ್ಕು ಮನೆಗಳಿಂದ ಕೂಡಿರುತ್ತದೆ. ಪರಿಧಿಯು ಕೆಂಪು ಬಣ್ಣದಿಂದ ಕೂಡಿರಬೇಕು. ಈ ಪರಿಧಿಯು ಭದ್ರದಲ್ಲಿ ಎಲ್ಲೆಲ್ಲಿ ಹೆಚ್ಚು ಮನೆಗಳು ಬರುತ್ತವೆಯೋ ಅಲ್ಲೆಲ್ಲಾ ಉಂಟಾಗುತ್ತವೆ.

೧೧೨-೧೧೪. ತಿರ್ಯಕ್ ಭದ್ರದಲ್ಲಿ ಸರಪಣಿಯನ್ನು ಬುದ್ಧಿವಂತಿಕೆಯಿಂದ ಇಷ್ಟಬಂದಷ್ಟನ್ನೂ ತೆಗೆದುಕೊಳ್ಳಬಹುದು. ಆದರೆ ಸಾಧಾರಣವಾಗಿ ಈ ಶೃಂಖಲೆಯು ಐದು ಮನೆಗಳದೇ ಆಗಿರುತ್ತದೆ. ಲತೆಯು ಹನ್ನೊಂದು ಮನೆಗಳಿಂದ

ತ್ರಿಪದಶ್ಚ ಶಶೀಜ್ಞೇಯಃ ಪರಿಧಯೋ ಬಹಿಃ ಕ್ರಮಾತ್ ।
ಕೃಷ್ಣರಕ್ತಶುಕ್ಲಪೀತಾಶ್ಚತುರ್ದಿಕ್ಷು ಸಮಂತತಃ ॥ ೧೧೩ ॥

ಏತದಷ್ಟೋತ್ತರದಶಶತಂ ರಾಮಸ್ತು ಭದ್ರಕಂ ।
ಅಥವಾ ಮನುರೇಖಾನಾಂ ವೃದ್ಧಿಂ ಕೃತ್ವಾ ಪ್ರಕಲ್ಪ್ಯ ಚ ॥ ೧೧೪ ॥

ಪರಿಧಿಸ್ತತ್ರ ಲಿಂಗಾನಾಮೇಕವಿಂಶಾಧಿಕಂ ಶತಂ ।
ವಾಪ್ಯೋಭದ್ರಾಣಿ ಚಂದ್ರಾದಿಚತುಃಪಾರ್ಶ್ವೇಷು ಯೋಜಯೇತ್ ॥

ಚತುರ್ವಿಂಶಪದಂ ಲಿಂಗಂ ವಾಪ್ಯಷ್ಟಾದಶಪಾದಿಕಾ ।
ದ್ವೇ ಭದ್ರೇ ನವ ನವ ಪದೇ ದ್ವ್ಯಷ್ಟದ್ವ್ಯಷ್ಟ ಪದಾನಿ ಷಟ್ ॥ ೧೧೬ ॥

ತ್ರಿಂಶಲ್ಲಿಂಗಾನಿ ವಾಪ್ಯಸ್ತು ಸಪ್ತವಿಂಶನ್ಮಿತಾ ಮತಾಃ ।
ಏಕಸ್ಮಿನ್ ಪಾರ್ಶ್ವಕೇ ಲಿಂಗಾಧಿಕ್ಯೇ ಭದ್ರೇ ಪ್ರಕಲ್ಪಯೇತ್ ॥ ೧೧೭ ॥

ಕೂಡಿರುತ್ತದೆ. ಮೂರು ಮನೆಗಳ ಚಂದ್ರನಿರುವುದು. ಪರಿಧಿಯು ಹೊರಗಡೆಯದು. ಕಪ್ಪು, ಕೆಂಪು, ಬಿಳುಪು, ಹಸುರು ಈ ರೀತಿಯ ಬಣ್ಣಗಳನ್ನು ನಾಲ್ಕು ದಿಕ್ಕುಗಳಲ್ಲಿಯೂ ಎಲ್ಲಕ್ಕೂ ಉಪಯೋಗಿಸಬೇಕು. ಇದು ನೂರೆಂಟು ಭದ್ರವುಳ್ಳ ರಾಮಲಿಂಗತೋಭದ್ರವು. ಇನ್ನೂ ಬೇಕಾದರೆ ಈ ಇನ್ನೂರ ತೊಂಭತ್ತೊಂಭತ್ತರ ಜೊತೆಗೆ ಹದಿನಾಲ್ಕು ರೇಖೆಗಳನ್ನು ಸೇರಿಸಿ ಎಳೆದರೆ ಮುನ್ನೂರ ಹದಿಮೂರು ರೇಖೆಗಳಾಗುತ್ತವೆ.

೧೧೫. ಆ ಭದ್ರದಲ್ಲಿ ಲಿಂಗಗಳು ಒಂದನೂರ ಇಪ್ಪತ್ತೊಂದಾಗುತ್ತವೆ. ಆದಕ್ಕನುಸಾರವಾಗಿ ವಾಪಿ, ಭದ್ರ, ಚಂದ್ರಗಳನ್ನು ನಾಲ್ಕು ಪಾರ್ಶ್ವಗಳಲ್ಲಿಯೂ ರಚಿಸಬೇಕು.

೧೧೬-೧೧೭. ಇದರಲ್ಲಿ ಇಪ್ಪತ್ತ ನಾಲ್ಕು ಮನೆಗಳ ಪ್ರಮಾಣದ ಲಿಂಗವು ಏರ್ಪಡುತ್ತದೆ. ಹದಿನೆಂಟು ಮನೆಗಳ ಪ್ರಮಾಣದ ವಾಪಿಯು ಏರ್ಪಡುತ್ತದೆ. ಒಂಭತ್ತೊಂಭತ್ತು ಮನೆಯ ಎರಡೆರಡು ಭದ್ರಗಳು ಏರ್ಪಡುತ್ತವೆ. ಎಂಟೆಂಟು ಮನೆಯ ಭದ್ರಗಳು ಆರು ಏರ್ಪಡುತ್ತವೆ. ಲಿಂಗಗಳು ಮೂವತ್ತಾಗುತ್ತವೆ. ವಾಪಿಗಳು ಇಪ್ಪತ್ತೇಳಾಗುತ್ತವೆ. ಯಾವುದಾದರೂ ಒಂದು ಪಾರ್ಶ್ವದಲ್ಲಿ ಒಂದು ಲಿಂಗವನ್ನು ಹೆಚ್ಚಿಸಬೇಕು.

ದ್ವ್ಯಷ್ಟದ್ವ್ಯಷ್ಟಪದೇ ಶೇಷಾಣ್ಯಂಕಕೋಷ್ಠಾನಿ ಯೋಜಯೇತ್ ।
ಲಿಂಗಂ ಕೃಷ್ಣಂ ಸಿತಾ ವಾಪ್ಯಃ ಶೇಷಂ ಸರ್ವಂ ಪುರೋದಿತಂ ॥ ೧೧೮ ॥

ಪದಾನಿ ಶೇಷಭೂತಾನಿ ಯತ್ರ ಯತ್ರೇಹ ತಾನಿ ಚ ।
ಭದ್ರಶೃಂಖಲಯೋಗ್ಯಾನಿ ತದರ್ಥೇ ವಿನಿಯೋಜಯೇತ್ ॥ ೧೧೯ ॥

ಕೃಷ್ಣರಕ್ತಶುಕ್ಲಪೀತಾ ಅಂತೇ ಪರಿಧಯೋ ಮತಾಃ ।
ಏವಂ ಲಿಂಗಯುತಂ ರಾಮತೋಭದ್ರಂ ಪರಿಕೀರ್ತಿತಂ ॥ ೧೨೦ ॥

ಅನೇನ ದೇವೌ ಸುಪ್ರೀತೌ ರಾಮೇಶೌ ಭವತಸ್ತ್ವಿಹ ।
ರಾಮಸ್ಯ ಪೂಜನಾರ್ಥಂ ಹಿ ತ್ವಿದಂ ಪ್ರೋಕ್ತಂ ವರಾಸನಂ ॥ ೧೨೧ ॥

ಆಚಾರ್ಯಾನ್ ಜ್ಞಾನಸಂಪನ್ನಾನ್ನತ್ವಾ ತೇಷಾಂ ಪ್ರಸಾದತಃ ।
ವಕ್ಷ್ಯೇಹಂ ರಾಮತೋಭದ್ರಕೃತಂ ಚ ಶಂಭುಸಂಯುತಾಂ ॥ ೧೨೨ ॥

---

೧೧೮. ಮಿಕ್ಕವುಗಳೆಲ್ಲವೂ ಹದಿನಾರು ಹದಿನಾರು ಮನೆಗಳಲ್ಲಿ ಏರ್ಪಡುತ್ತವೆ. ಲಿಂಗವು ಕಪ್ಪು ಬಣ್ಣದಲ್ಲಿಯೂ ವಾಪಿಯು ಬಿಳಿಯ ಬಣ್ಣದಲ್ಲಿಯೂ ರಚಿಸಬೇಕು. ಮಿಕ್ಕವು ಹಿಂದಿನ ಬಣ್ಣದ್ದರಂತೆಯೇ ಇರುವುವು.

೧೧೯. ಇನ್ನೂ ಎಲ್ಲೆಲ್ಲಿ ಎಷ್ಟೆಷ್ಟು ಮನೆಗಳು ಉಳಿಯುತ್ತವೆಯೋ ಅದನ್ನು ಭದ್ರಕ್ಕೆ ಅನುಕೂಲಿಸುವಂತೆ ಶೃಂಖಲೆಗಳನ್ನಾಗಿ ಉಪಯೋಗಿಸಬೇಕು.

೧೨೦. ಕೊನೆಯಲ್ಲಿರುವ ಪರಿಧಿಗಳು ಕಪ್ಪು, ಕೆಂಪು, ಹಸುರು, ಬಿಳುಪುಗಳಿಂದ ಯಥಾ ಯೋಗ್ಯವಾಗಿ ರಚಿತವಾಗಬೇಕು. ಲಿಂಗದಿಂದ ಕೂಡಿದ ರಾಮತೋ ಭದ್ರವನ್ನು ಹೀಗೆ ಹೇಳಿದ್ದೇನೆ.

೧೨೧. ಈ ಮುದ್ರೆಯಿಂದ ರಾಮನೂ ಶಿವನೂ ಸುಪ್ರೀತರಾಗುತ್ತಾರೆ. ರಾಮನ ಪೂಜೆಗೋಸ್ಕರವೇನೇ ಈ ಉತ್ತಮವಾದ ಆಸನ ರೂಪವಾದ ಭದ್ರವು ಹೇಳಲ್ಪಟ್ಟಿದೆ.

೧೨೨. ಜ್ಞಾನಿಯಾದ ಆಚಾರ್ಯನನ್ನು ನಮಸ್ಕರಿಸಿ ಅವನ ಪ್ರಸಾದದಿಂದ ಲಿಂಗದಿಂದ ಕೂಡಿರುವ ರಾಮತೋ ಭದ್ರದ ಕೃತಿಯನ್ನು ವಿವರಿಸುತ್ತೇನೆ.

ಪ್ರಕೃತಿಂ ರಾಮತೋಭದ್ರಂ ವಿಕೃತಿಂ ಲಿಂಗಸಂಯುತಂ ।
ಅನ್ಯೇ ವಿಕಾರಾಸ್ಸಂಜ್ಞೇಯಾ ಹ್ಯೇವಂ ಕೃತಿಸ್ತ್ರಿಧೋಚ್ಯತೇ ॥ ೧೨೩ ॥
ತಿರ್ಯಗೂರ್ಧ್ವಗಮುಗ್ನ್ಯಧಿಕಾಶ್ಯತರೇಖಾಃ ಪ್ರಕಲ್ಪಯೇತ್ ।
ತತ್ಪದೇಷು ಪರಿಧಯಷಟ್ಟ್ಸಡಂತೇ ಷಡ್ಯೈವ ತು ॥ ೨೨೪ ॥
ಪೀತಾಃ ಕೋಣೇಷು ತ್ರಿಪದಶ್ಯುಕ್ಲೇಂದುಃ ಶೃಂಖಲಾಽಸಿತಾ ।
ಪಂಚಪದ್ಯೈಕಾದಶಿಕಾ ವಲ್ಲರೀ ಭದ್ರಸಂಕ್ರಮಾತ್ ॥ ೧೨೫ ॥
ಸಿಂಧುಷೋಡಶಸೂರ್ಯರ್ತುರ್ಯಯುಗಷೋಡಶಕೋಷ್ಠಕಂ ।
ಕಲ್ಪಯೇತ್ಪಷ್ಟಕೋಷ್ಠೇಷು ರಾಮಮುದ್ರಾಂ ಹಿ ಪೂರ್ವವತ್ ॥ ೧೨೬ ॥
ಅಷ್ಟಷಟ್ಪಂಚಸಿಂಧುವಹ್ನಿಚಂದ್ರಮಿತಾಶ್ಯಭಾಃ ।
ತಾಸಾಂ ಸೀಮಾಪರಿಧಯಸ್ತ್ವೇಕಾಧಿಕಾಸ್ತು ಲೌಹಿತಾಃ ॥ ೧೨೭ ॥

---

೧೨೩. ರಾಮತೋ ಭದ್ರವು ಪ್ರಕೃತಿಯು. ಲಿಂಗಯುತವಾದ ರಾಮಲಿಂಗತೋಭದ್ರವು ವಿಕೃತಿಯು, ಉಳಿದುವು ವಿಕಾರಗಳು. ಈ ರೀತಿಯಾಗಿ ಈ ಭದ್ರವು ಮೂರು ಬಗೆಯಾಗಿರುವುದು.

೧೨೪-೧೨೫. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಒಂದನೂರ ಮೂರು ಗೆರೆಗಳನ್ನು ಎಳೆಯಬೇಕು. ಅದರಲ್ಲಿ ಪರಿಧಿಗಳು ಆರಾರಿರಬೇಕು. ಕೊನೆಯಲ್ಲಿಯೂ ಆರಿರಬೇಕು. ಇವನ್ನು ಹಸರು ಬಣ್ಣದಿಂದ ರಚಿಸಬೇಕು. ಕೋಣದಲ್ಲಿ ಮೂರು ಮನೆಯ ಚಂದ್ರನಿರಬೇಕು. ಅದು ಬಿಳಿಯ ಬಣ್ಣದ್ದಾಗಿರಬೇಕು. ಶೃಂಖಲೆಯು ಕಪ್ಪು ಬಣ್ಣದ್ದಾಗಿರಬೇಕು. ಈ ಶೃಂಖಲೆಯು ಐದು ಮನೆಗಳದು. ಹನ್ನೊಂದು ಮನೆಗಳ ಲತೆಯಿರಬೇಕು.

೧೨೬. ನಾಲ್ಕು, ಹದಿನಾರು, ಹನ್ನೆರಡು, ಆರು, ನಾಲ್ಕು ರಾಮಮುದ್ರೆಯು ಬರುತ್ತದೆ. ಇದು ಹದಿನಾರು ಮನೆಯ ಪ್ರಮಾಣದಲ್ಲಿ ಏರ್ಪಡುತ್ತದೆ. ಈ ರೀತಿಯಾಗಿ ಎಂಟು ಕಡೆಗಳಲ್ಲಿಯೂ ರಚಿಸಬೇಕು.

೧೨೭. ಎಂಟು, ಆರು, ಐದು, ನಾಲ್ಕು, ಮೂರು, ಒಂದು ಈ ರೀತಿಯಾಗಿ ಮುದ್ರೆಗಳು ಕ್ರಮದಿಂದ ಉಂಟಾಗುತ್ತವೆ. ಇವುಗಳ ಸೀಮಾ ಪರಿಧಿಗಳು ಅವಕ್ಕಿಂತಲೂ ಒಂದೊಂದು ಹೆಚ್ಚಾಗಿರುತ್ತವೆ. ಇವನ್ನು ಕೆಂಪು ಬಣ್ಣದಿಂದ ರಚಿಸಬೇಕು.

ರಜನೀಶನೇತ್ರಸಿಂಧುಪಂಕ್ತಿಷು ಮಧ್ಯಮಾಸ್ತ್ರಯಃ ।
ಮರ್ಯಾದಾಖ್ಯಾ ಪರಿಧಯೋ ಭವಂತಿ ದ್ವಿಗುಣೀಕೃತಾಃ ॥ ೧೨೮ ॥

ಅಂತಿಮೋ ತು ಪರಿಧ್ಯಂತಸ್ಸರ್ವತೋಭದ್ರಕಂ ಲಿಖೇತ್ ।
ವಿಶೇಷಸ್ತತ್ರ ವಾಪೀ ತು ಚತುರ್ವಿಂಶಪದಾತ್ಮಿಕಾ ॥ ೧೨೯ ॥

ಭದ್ರಂ ನವಪದಂ ಪದ್ಮಂ ಪರಿಧ್ಯಂತಸ್ಸುಲೋಹಿತಂ ।
ಪೀತಾ ತತ್ಕರ್ಣಿಕಾ ಕಾರ್ಯಾ ಅಂತೇ ಪರಿಧಯೋಪಿ ಚ ॥ ೧೩೦ ॥

ಪೀತಶುಕ್ಲರಕ್ತಕೃಷ್ಣವರ್ಣಾ ಯತ್ರ ಪದಾನಿ ಚ ।
ಭದ್ರೋರ್ಧ್ವಂ ಶೇಷಭೂತಾನಿ ತಾನಿ ಯುಕ್ತ್ಯಾ ಪ್ರಪೂರಯೇತ್ ॥

ತಿರ್ಯಕ್ ಭದ್ರಂ ಶೃಂಖಲಾದ್ಯೈಃ ಪೀತಚಿತ್ರೇ ಚ ತೇ ಸ್ಮೃತೇ ।
ಏತದಷ್ಟೋತ್ತರಶತಂ ರಾಮತೋಭದ್ರಮೀರಿತಂ ॥ ೧೩೨ ॥

---

೧೨೮. ಒಂದು, ಎರಡು, ನಾಲ್ಕು ಈ ಪಂಕ್ತಿಗಳಲ್ಲಿ ಮಧ್ಯದಲ್ಲಿರುವ ಮೂರು ಮನೆಗಳು ಮರ್ಯಾದಾ ಪರಿಧಿಗಳಾಗುತ್ತವೆ. ಎಂದರೆ ಒಂದನೆಯದರಲ್ಲಿ ಮೂರು ಮನೆಗಳು ಎರಡನೆಯದರಲ್ಲಿ ಆರು ಮನೆಗಳು, ನಾಲ್ಕನೆಯದರಲ್ಲಿ ಹನ್ನೆರಡು ಮನೆಗಳು ಎಂದು ತಿಳಿಯಬೇಕು.

೧೨೯. ಕಡೆಯಲ್ಲಿರುವ ಪರಿಧಿಯಿಂದ ಮುಂದಲದು ಸರ್ವತೋಭದ್ರವಾಗುತ್ತದೆ. ಅಲ್ಲಿ ಅದನ್ನು ರಚಿಸಬೇಕು. ಅದರಲ್ಲಿರುವ ವಾಪಿಗಳು ಎಂದರೆ ಮನೆಗಳು ಇಪ್ಪತ್ತ ನಾಲ್ಕು ಇರುತ್ತವೆ.

೧೩೦-೧೩೧ ಇಲ್ಲಿ ಒಂಭತ್ತು ಮನೆಗಳ ಪದ್ಮವು ಬರುತ್ತದೆ. ಇದೂ ಪರಿಧಿಯ ಕೊನೆಯಲ್ಲಿಯೇ ಬರುತ್ತದೆ. ಅದರ ಕರ್ಣಿಕೆಗಳನ್ನು ಹಸುರು ಬಣ್ಣದಿಂದ ತುಂಬಬೇಕು. ಸುತ್ತಲೂ ಅದರ ಪರಿಧಿಗಳನ್ನು ಹಸುರು, ಕೆಂಪು, ಹಳದಿ, ಕಪ್ಪು ಬಣ್ಣದಿಂದ ತುಂಬಬೇಕು. ಆ ಭದ್ರದ ಮೇಲಿರುವ ಉಳಿದಿರುವ ಮನೆಗಳನ್ನು ಹೇಗೆ ಸೊಗಸು ಬರುತ್ತದೆಯೋ ಹಾಗೆ ತುಂಬಬೇಕು.

೧೩೨. ಕೆಳಗಡೆಯಿರುವ ಭದ್ರಗಳನ್ನು ಪರಿಧಿ ಶೃಂಖಲ ಮುಂತಾದುವುಗಳಿಂದ ಕ್ರಮ ಪಡಿಸಿ ಹಸರು ಬಣ್ಣದಿಂದ ತುಂಬಬೇಕು. ಇದೇನೆ ಅಷ್ಟೋತ್ತರಶತರಾಮತೋಭದ್ರವೆಂದೆನಿಸಿಕೊಳ್ಳುತ್ತದೆ.

ಏಕಂ ಸಂಸಾರಶೂನ್ಯಂ ಸಕಲಸುಖನಿಧಿಂ ಸಚ್ಚಿದಾನಂದಕಂದಂ
ಮಾಯಾಯೋಗೇನ ವಿಶ್ವಾತ್ಮಕಮಿದಮಮಲಂ ಬ್ರಹ್ಮವಿಷ್ಣ್ವೀಶಸಂಜ್ಞಂ।
ಸೃಷ್ಟಿಸ್ಥಿತ್ಯಂತಹೇತುಂ ನಿಗಮಕವಿನುತಂ ಸರ್ವಭೂತಾತ್ಮಭೂತಂ
ಸರ್ವಜ್ಞಂ ಸರ್ವಶಕ್ತಿಂ ರಣಹರಮಮೃತಂ ತನ್ಮಹೋಭಾವಯೇಽಹಂ ॥

ನತ್ವಾ ಶ್ರೀದೇಶಿಕೇಂದ್ರಸ್ಯ ಪಾದಾಬ್ಜಮಮರಪ್ರಭಂ ।
ವಕ್ಷ್ಯೇ ಆಧ್ಯಾತ್ಮಿಕೀಂ ಸೂಕ್ತಿಂ ಸತಾಂ ಚಿತ್ತಚಮತ್ಕೃತಿಂ ॥ ೧೩೪ ॥

ಪಶೂನಾಂ ನಖರೋಮಾದಿ ಸರ್ವಮರ್ಥಾಯ ಕಲ್ಪತೇ ।
ಮೃತಸ್ಯ ನರದೇಹಸ್ಯ ಸ್ಪೃಷ್ಟಿರ್ದೋಷಾವಹೋದಿತಾ ॥ ೧೩೫ ॥

ಏಕಮೇವಾಮುನಾ ಸಾಧ್ಯಂ ಜ್ಞಾನಂ ಸ್ವಾತ್ಮಸ್ವರೂಪದಂ ।
ತದ್ವಿನಾ ತು ಪಶುಭ್ಯಶ್ಚ ನರೋ ಹೀನತರೋ ಮತಃ ॥ ೧೩೬ ॥

---

೧೩೩. ಏಕನಾದ ಜನನ ಮರಣಗಳಿಲ್ಲದ ಸುಖಕ್ಕೆಲ್ಲಾ ನಿಧಿಯಾದ ಚಿದಾನಂದರೂಪನಾದ ಮಾಯೆಯಿಂದ ಕೂಡಿ ವಿಶ್ವಸ್ವರೂಪನಾದ ಬ್ರಹ್ಮ ವಿಷ್ಣು ಶಿವಾತ್ಮಕನಾದ, ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ವೇದಗಳಿಂದ ಹೊಗಳಲ್ಪಟ್ಟ ಎಲ್ಲಾ ಪ್ರಾಣಿಗಳಿಗೂ ಆತ್ಮರೂಪನಾದ ಸರ್ವಜ್ಞನೂ ಸರ್ವ ಶಕ್ತನೂ ಆದ ತೊಂದರೆಗಳನ್ನು ನಾಶಮಾಡುವ ಅಮೃತ ಸ್ವರೂಪನಾದ ತೇಜ ಸ್ವರೂಪನಾದ ಆ ಸ್ವಾಮಿಯನ್ನು ಭಜಿಸುತ್ತೇನೆ.

೧೩೪. ಸ್ವರ್ಗ ಸುಖವನ್ನು ಕೊಡುವ ಗುರುಗಳ ಪಾದ ಕಮಲಗಳನ್ನು ನಮಸ್ಕರಿಸಿ ಸತ್ಪುರಷರಿಗೆ ಮನಸ್ಸಿಗೆ ಹರ್ಷದಾಯಕವಾದ ಆಧ್ಯಾತ್ಮಿಕ ತತ್ವವನ್ನು ಹೇಳುತ್ತೇನೆ.

೧೩೫. ಪಶುಗಳ ಎಂದರೆ ತಿರ್ಯಕ್ ಪ್ರಾಣಿಗಳ ಕೂದಲು ಉಗುರುಗಳೂ ಕೂಡ ಉಪಯೋಗಕ್ಕೆ ಬರುತ್ತದೆ. ಆದರೆ ಮನುಷ್ಯನ ಮೃತ ದೇಹವು ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಮತ್ತು ಅದನ್ನು ಮುಟ್ಟಿದರೇನೆ ದೋಷವು ಬರುತ್ತದೆ.

೧೩೬. ಈ ಮನುಷ್ಯನಿಗೆ ದೇಹದಿಂದ ಆತ್ಮ ಸ್ವರೂಪವನ್ನು ತಿಳಿದು ಕೊಳ್ಳುವ ಜ್ಞಾನವೊಂದೇ ಸಾಧ್ಯವಾಗಿರುವುದು. ಈ ದೇಹದಿಂದ ಆ ಜ್ಞಾನವನ್ನು ಹೊಂದದೆ ಹೋದರೆ ಅವನು ಆ ಪಶುಗಳಿಗಿಂತಲೂ ಹೀನತರನಾದವನು ಎಂದು ತಿಳಿಯಬೇಕು.

ಪ್ರತಿಭಾವಾನ್ಪುಣ್ಯತಮಶ್ಶ್ರದ್ಧಾವಾನ್ ಗುರ್ವಧೋಕ್ಷಜೇ ।
ಕೋಟಿಷ್ವೇಕಃ ಸ್ವಯಂ ಸಾಕ್ಷಾನ್ನರೋ ನಾರಾಯಣೋ ಭವೇತ್ ॥

ಕೇನ ಚಿದ್ರಾಮತೋಭದ್ರಂ ಮುದ್ರಾ ಷಷ್ಟಿಪದಾತ್ಮಿಕಾ ।
ರಾಮಾಂಕಿತಾ ಚ ಸಂಕ್ಲೃಪ್ತೇ ವಿವಿಚ್ಯೇತೇ ಚ ತೇ ಉಭೇ ॥ ೧೩೮ ॥

ಲೋಕಾಸ್ಸಪ್ತ ಯಥಾಂಡೇಸ್ಮಿಂಸ್ತಥಾ ತತ್ರ ಪ್ರಕಲ್ಪಿತಾಃ ।
ತೇನೇಯಂ ರಚನಾ ತುಲ್ಯಾ ಜ್ಞಾತ್ವಾ ಹೃತ್‌ಸ್ಥಮುದೀರ್ಯತೇ ॥

ಬ್ರಹ್ಮಾಂಡಂ ರಾಮತೋಭದ್ರಂ ಮುದ್ರಾ ಭೂತಾನಿ ಸಮ್ಮತಾಃ ।
ರಾಮಚೈತನ್ಯಯುಕ್ತಾನಿ ಸಂಮತಾನಿ ತು ಸೂರಿಭಿಃ ॥ ೧೪೦ ॥

---

೧೩೭. ಪ್ರತಿಭೆಯುಳ್ಳವನೂ, ಪುಣ್ಯಶಾಲಿಯೂ, ಶ್ರದ್ಧಾವಂತನೂ, ದೇವರನ್ನೇ ಗುರುವಾಗಿ ಹೊಂದಿದವನೂ ಯಾವನೋ ಒಬ್ಬನು ಕೋಟಿ ಜನರಲ್ಲಿ ಇರುವನು. ಅಂತಹವನೊಬ್ಬನೇ ಸಾಕ್ಷಾತ್ಕಾರವನ್ನು ಹೊಂದಿ ನಾರಾಯಣನಾಗುವನು.

೧೩೮. ಇಂತಹ ಯಾವನೋ ಒಬ್ಬನಿಂದ ರಾಮತೋಭದ್ರವೂ ಅರವತ್ತು ಮನೆಗಳಿಂದ ಕೂಡಿದ ರಾಮಾಂಕಿತವಾದ ಮುದ್ರೆಯೂ ಎರಡೂ ಕೂಡ ವಿಮರ್ಶಿಸಲ್ಪಡುತ್ತವೆ.

೧೩೯. ಈ ಬ್ರಹ್ಮಾಂಡದಲ್ಲಿ ಏಳು ಲೋಕಗಳು ಸೃಷ್ಟಿಸಲ್ಪಟ್ಟವೆಯಷ್ಟೆ! ಈ ರಾಮತೋಭದ್ರದ ರಚನೆಯೂ ಆ ಅಂಡಸೃಷ್ಟಿಯೊಡನೆ ಸಮವಾಗುತ್ತದೆ. ಅದನ್ನೂ ತಿಳಿದುಕೊಂಡೇ ನನ್ನ ಮನಸ್ಸಿನಲ್ಲಿರುವ ಅದನ್ನು ಹೇಳುತ್ತೇನೆ.

೧೪೦. ಸರ್ವತೋಭದ್ರವೇ ಬ್ರಹ್ಮಾಂಡವು. ಮುದ್ರೆಗಳೇ ಭೂತಗಳು. ಅವೆಲ್ಲವೂ ರಾಮ ಚೈತನ್ಯದಿಂದ ಕೂಡಿಕೊಂಡಿವೆ ಎಂಬುದು ವಿವೇಕಿಗಳಿಗೆ ಸಮ್ಮತವಾಗಿದೆ.

ಯಸ್ಯಾಂ ಸ್ಯಾನ್ಮುದ್ರಿತಂ ವಸ್ತು ಸಾ ಮುದ್ರೇತಿ ನಿಗದ್ಯತೇ |
ಮುದ್ರಿತಂ ಚಿಹ್ನಿತಂ ಚಾಥ ಪಿಹಿತಂ ಹ್ಯರ್ಥತೋ ಭವೇತ್ ||

ತದ್ವತ್ಸರ್ವಾಸು ಚೈತಾಸು ಬ್ರಹ್ಮಮುದ್ರಿತಮುಚ್ಯತೇ |
ತಥಾಪ್ಯಾಸಾಂ ಸಬಾಹ್ಯಾಂತಶ್ಚೈತನ್ಯಂ ಸಂಪ್ರಕಾಶತೇ || ೧೪೨ ||

ಆಚ್ಛಾದಿತೋಽಪಿ ಕಲಶೇ ಸ್ಫಟಿಕೇಂತರ್ಬಹಿಃ ಕಿಲ |
ದೀಪಃ ಪ್ರಕಾಶತೇ ಕಸ್ತಂ ಲೋಪಯೇಚ್ಚ ತಥೇಷ್ಯತೇ || ೧೪೩ ||

ಮೂಷಾಸಿಕ್ತಂ ತಾಮ್ರರಸಂ ತದಾಕಾರಂ ಪ್ರಪದ್ಯತೇ |
ತಥಾ ಬ್ರಹ್ಮ ನಿರಾಕಾರಂ ಮುದ್ರಾಕಾರಂ ವಿಭಾಸತೇ || ೧೪೪ ||

---

೧೪೧. ಆ ಮುದ್ರೆಯಲ್ಲಿ ವಸ್ತುಗಳೆಲ್ಲವೂ ಮುದ್ರಿತವಾಗಿರುವುದರಿಂದ (ಸೇರಿಕೊಂಡಿರುವುದರಿಂದ) ಅದನ್ನು ಮುದ್ರೆ ಎಂದು ಕರೆಯುತ್ತೇವೆ. ಮುದ್ರಿತವೆಂದರೆ ಗುರುತು ಮಾಡಲ್ಪಟ್ಟದ್ದು. ಆದರಲ್ಲಿ ಮುಚ್ಚಿದ ರೂಪದಲ್ಲಿ ಬರೆದಿರುವುದು ಎಂಬರ್ಥದಿಂದ ಈ ಮುದ್ರೆಯೆಂಬ ಹೆಸರು ಬಂದಿದೆ.

೧೪೨. ಈ ಮುದ್ರೆಗಳೆಲ್ಲವೂ ಬ್ರಹ್ಮನಿಂದ ಮುದ್ರಿತವಾಗಿವೆಯೆಂದು ವಿದ್ವಾಂಸರು ತಿಳಿಯುತ್ತಿದ್ದಾರೆ. ಆದರೂ ಕೂಡ ಈ ಮುದ್ರೆಯಲ್ಲಿ ಆ ಬ್ರಹ್ಮ ಚೈತನ್ಯವು ಒಳಗೂ ಹೊರಗೂ ಪ್ರಕಾಶವಾಗಿ ಕಾಣುತ್ತದೆ.

೧೪೩. ದೀಪದ ಮೇಲೆ ಸ್ಫಟಿಕಶಿಲೆಯ ಬುಡ್ಡಿಯನ್ನು (ಚಿಮಣಿ) ಮುಚ್ಚಿದರೂ ಆ ದೀಪವು ಒಳಗೂ ಹೊರಗೂ ಕೂಡ ಪ್ರಕಾಶಿಸುತ್ತದೆ. ಅದನ್ನು ಸುಳ್ಳೆಂದು ಅಪಲಾಪಿಸಲು ಯಾವನಿಗೆ ಸಾಧ್ಯ !

೧೪೪. ಮೂಷೆಯಲ್ಲಿ ನೀರಾದ ತಾಮ್ರದ ರಸವನ್ನು ಯಾವ ಪಾತ್ರೆಗಾದರೂ ಹಾಕಿದರೆ ಅದು ಆ ಹಾಕಿದ ಪಾತ್ರೆಯ ಆಕಾರ ವನ್ನು ಹೊಂದುತ್ತದೆ. ಅದರಂತೆಯೇ ಆಕಾರ ರಹಿತವಾದ ಈ ಬ್ರಹ್ಮವು ಮುದ್ರೆಗೆ ಬಂದ ಮೇಲೆ ಆ ಮುದ್ರೆಯ ಆಕಾರವಾಗಿ ಪರಿಣಮಿಸುತ್ತದೆ.

ಪುರಶ್ಚಕ್ರೇ ಪ್ರಭುಸ್ಸರ್ವಾಃ ಪುರಃ ಪುರುಷ ಆವಿಶತ್ ।
ಇತ್ಯುಕ್ತಂ ಕಣ್ವಶಾಖಾಯಾಂ ಅನ್ಯತ್ರಾಪಿ ಹಿ ಪಠ್ಯತೇ ॥ ೧೪೫ ॥

ಏಕೋ ವಶೀ ಸರ್ವಭೂತಾಂತರಾತ್ಮೇತಿ ಶ್ರುತೇರ್ವಚಃ ।
ಏಕೋ ದೇವಸ್ಸರ್ವಭೂತೇಷ್ವಿತಿ ಚೈವಾಪರಾ ಶ್ರುತಿಃ ॥ ೧೪೬ ॥

ಪುರಃ ಸೃಷ್ಟ್ವಾಃ ಪರೇಶೇನ ನೈವತಾಭಿಸ್ತುತೋಽಷ ಸಃ ।
ಸೃಷ್ಟ್ವೇಮಾಂ ಮಾನುಷೀಂ ಮುದ್ರಾಂ ಪರಂ ತೋಷಮವಾಪಸಃ ॥

ದೇವತಾಶ್ಚಾನ್ನಭುಕ್ತ್ಯರ್ಥಂ ದೃಷ್ಟ್ವೇಮಾಂ ಪೌರುಷೀಂ ತನುಂ ।
ಹರ್ಷಾದಾಹುಶ್ಚ ಸುಕೃತಂ ಬತೇತಿ ಶ್ರೂಯತೇ ಸ್ಫುಟಂ ॥ ೧೪೮ ॥

---

೧೪೫. ಪೂರ್ವದಲ್ಲಿ ಸ್ವಾಮಿಯು ಶರೀರಗಳನ್ನು ನಿರ್ಮಿಸಿದನು. ಆ ಶರೀರವನ್ನು ಪುರುಷನು ಪ್ರವೇಶಿಸಿದನು. ಇದನ್ನೇ ಕಣ್ವ ಶಾಖೆಯಲ್ಲಿ ಹೇಳಿದೆ. ಇತರರೂ ಹಾಗೆಯೇ ಹೇಳಿದ್ದಾರೆ.

೧೪೬. ಆ ಸ್ವಾಮಿಯು ಏಕನು. ಸ್ವತಂತ್ರನು. ಸರ್ವಪ್ರಾಣಿಗಳಲ್ಲಿಯೂ ಇರತಕ್ಕವನು ಎಂದು ಶ್ರುತಿಯು ಹೇಳುತ್ತದೆ. ಏಕನಾದ ಆ ಸ್ವಾಮಿಯೊಬ್ಬನೇ ಎಲ್ಲಾ ಪ್ರಾಣಿಗಳಲ್ಲಿಯೂ ಇರುವನು. ಎಂದು ಮತ್ತೊಂದು ಶ್ರುತಿಯೂ ಹೇಳುತ್ತದೆ.

೧೪೭. ಆ ಸ್ವಾಮಿಯೇ ಈ ವೇದಗಳನ್ನು ರಚಿಸಿದವನು. ಅವನು ಈ ರೀತಿಯಾಗಿ ವೇದಗಳನ್ನು ರಚಿಸಿದರೂ ತೃಪ್ತನಾಗದೆ ಈ ಮಾನುಷೀ ಮುದ್ರೆಯನ್ನು ರಚಿಸಿ ಬಹುವಾಗಿ ಸಂತೋಷಗೊಂಡನು.

೧೪೮. ದೇವತೆಗಳು ಅಮೃತಪಾನ ಮಾಡಿದರಷ್ಟೆ! ಅವರು ಸ್ವಾಮಿಯ ಅನ್ನವನ್ನು ತಿನ್ನುವ ಈ ಶರೀರವನ್ನು ರಚಿಸಿರುವುದನ್ನು ನೋಡಿ ಒಳ್ಳೆಯ ಕೆಲಸವನ್ನು ಮಾಡಿದನು ಎಂದು ಹೊಗಳಿದರು. ಎಂದು ಎಲ್ಲಾ ಕಡೆಯಲ್ಲಿಯೂ ಹೇಳಿದೆ.

ಪುರುಷಂ ತ್ವೇವಾವಿಸ್ತರಮಾತ್ಮೇತ್ಯಾಹ ಶ್ರುತಿಃ ಸ್ವಯಂ ।
ಪುರಾ ಸೃಷ್ಟೈಸ್ಸರ್ವಭೂತೈರತುಷ್ಟಹೃದಯಃ ಸ್ವರಾಟ್ ॥ ೧೪೯ ॥
ಬ್ರಹ್ಮಾವಲೋಕಧಿಷಣಂ ನರಂ ದೃಷ್ಟ್ವಾ ಮುದಂ ಗತಃ ।
ಇತ್ಯಸ್ಮಾಭಿರ್ವಿಷ್ಣುದಾಸ ಶ್ರೂಯತೇ ಭಗವದ್ವಚಃ ॥ ೧೫೦ ॥
ಮುದಂ ಕರೋತಿ ದೇವಸ್ಯ ದ್ರಾವಯೇದ್ದುಃಖಪಾತಕೇ ।
ಇತಿ ಮುದ್ರಾನಿರುಕ್ತಿಶ್ಚ ಮಂತ್ರಶಾಸ್ತ್ರೇಪಿ ಶ್ರೂಯತೇ ॥ ೧೫೧ ॥
ಅತಸ್ಸರ್ವೇಷು ದೇಹೇಷು ಸದ್ರೂಪಗ್ರಹಣಂ ಕೃತಂ ।
ಸ್ವರ್ಗಾಪವರ್ಗಯೋಶ್ಚೈಷೋಽಧಿಕಾರೋಸ್ಮಿನ್ನ ಚೇತರೇ ॥ ೧೫೨ ॥
ಲೋಕೇ ಪ್ರಸಿದ್ಧಿರ್ಯಃ ಕಶ್ಚಿದ್ರಾಜಮುದ್ರಾಂಕಿತೋ ನರಃ ।
ಅಧಿಕಾರೀತಿ ಮನ್ಯಂತೇ ಪೂಜಯಂತ್ಯಾದರಾದಿಭಿಃ ॥ ೧೫೩ ॥

೧೪೯-೧೫೦. ಈ ಪೌರುಷೀತನುವನ್ನೇ ಶ್ರುತಿಯು ಪುರುಷನೆಂದು ಹೇಳುತ್ತದೆ. ಅದು ಅವ್ಯಕ್ತವಾಗಿರುವುದು ಅಷ್ಟೆ. ಬ್ರಹ್ಮನು ಪೂರ್ವದಲ್ಲಿ ಸೃಷ್ಟಿಸಿದ ಪ್ರಾಣಿಗಳಲ್ಲಿ ಅಸಮಾಧಾನವನ್ನು ಹೊಂದಿದ್ದನು. ಈ ಪುರುಷ ಶರೀರವವನು ಬ್ರಹ್ಮನನ್ನು ನೋಡಲು ಹೋದುದರಿಂದ ಇವನನ್ನು ನೋಡಿ ಬ್ರಹ್ಮನಿಗೆ ಬಹು ಸಂತೋಷವಾಯಿತು. ಎಲೈ ವಿಷ್ಣುದಾಸನೆ. ಹೀಗೆಂದು ಹಿಂದಿನವರು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ.

೧೫೧. ದೇವನಿಗೆ ಮುದ ವನ್ನು ಮಾಡುತ್ತದೆ. ದುಃಖ ಮತ್ತು ಪಾಪಗಳನ್ನು ನಾಶಮಾಡುತ್ತದೆ. ಇಂತೆಂದುದರಿಂದ ಮುದ್ರೆಯಾಯಿತು ಎಂದು ಮಂತ್ರ ಶಾಸ್ತ್ರದವರು ಈ ಮುದ್ರೆ ಎಂಬ ಪದಕ್ಕೆ ಅರ್ಥವನ್ನು ಹೇಳುತ್ತಾರೆ.

೧೫೨. ಪ್ರಾಣಿಗಳು ಎಲ್ಲ ಬಗೆಯ ದೇಹಗಳನ್ನೂ ಧರಿಸುತ್ತವೆ. ಆದರೆ ಈ ಪುರುಷ ದೇಹವು ದುರ್ಲಭವು. ಈ ಪುರುಷ ದೇಹಕ್ಕೇನೇ ಸ್ವರ್ಗ ವಿಶೇಷಗಳನ್ನು ಹೊಂದುವುದರಲ್ಲಿ ಅಧಿಕಾರವಿರುವುದು. ಮಿಕ್ಕುವುದರಲ್ಲಿ ಇರುವುದಿಲ್ಲ.

೧೫೩. ಲೋಕದಲ್ಲಿಯೂ ಕೂಡ ರಾಜ ಮುದ್ರೆಯನ್ನು ಹೊಂದಿದ ಮನುಷ್ಯನನ್ನು ಅಧಿಯೆಂದು ಕರೆಯುತ್ತಾರೆ. ಅವನು ಎಲ್ಲ ಕಡೆಯಲ್ಲಿಯೂ ಪ್ರಸಿದ್ಧನಾಗಿರುವನು. ಅವನನ್ನೇ ಜನರು ಪ್ರೀತಿಯಿಂದ ಗೌರವಿಸುತ್ತಾರೆ.

ತಥಾನಯಾಂಕಿತೋ ಜೀವೋಽಧಿಕಾರೀ ಶಾಸ್ತ್ರಭೂಮಿಷು ।
ನಾನ್ಯಾಭಿರ್ಯೋನಿಭಿಃ ಜ್ಞಾತುಂ ಶಕ್ಯತೇ ಸ್ವಾತ್ಮನಃ ಪದಂ ॥ ೧೫೪ ॥

ತಸ್ಮಿಂಶ್ಚೈವ ನರೋಪಾಧೌ ಪದಾನಿ ಷಷ್ಟಿ ಸಂತಿ ಹಿ ।
ತಾನಿ ಸಂಕ್ಷೇಪತಸ್ಸಮ್ಯಕ್ ಪ್ರದರ್ಶ್ಯಂತೇಽವಬುದ್ಧಯೇ ॥ ೧೫೫ ॥

ಅವಿದ್ಯಾಕಾಮಕರ್ಮಾಣಿ ಭೋಕ್ತೃಭೋಗೌ ಸುಷುಪ್ತಿಕಾ ।
ಪಟ್ಟಿದಾನಿ ತು ಜ್ಞೇಯಾನಿ ದೇಹೇ ಕಾರಣಸಂಜ್ಞಕೇ ॥ ೧೫೬ ॥

ತಮೋಽಜ್ಞಾನಮವಿದ್ಯೇತಿ ಶಬ್ದಾ ಏಕಾರ್ಥವಾಚಿನಃ ।
ಅತೋ ಗುಣಾಗ್ರಹೋ ನಾತ್ರ ದೃಶ್ಯತೇ ಷಟ್ಸು ಭೋ ದ್ವಿಜ ॥ ೧೫೭ ॥

ಲಿಂಗೇ ಪುರ್ಯಷ್ಟಕೇಽವಿದ್ಯಾಕಾಮಕರ್ಮಗ್ರಹಃ ಸ್ಮೃತಃ ।
ತಥಾಪ್ಯತ್ರ ತು ಹೇತುತ್ವಾತ್ತ್ರಯಾಣಾಂ ಗ್ರಹಣಂ ಕೃತಂ ॥ ೧೫೮ ॥

---

೧೫೪. ಅದರಂತೆಯೇ ಈ ಮುದ್ರೆಯಿಂದ ಕೂಡಿದ ಜೀವನು ಲೋಕದಲ್ಲಿ ಶಾಸ್ತ್ರವನ್ನು ಪರಿಗ್ರಹಿಸುವುದರಲ್ಲಿ ಅಧಿಕಾರಿಯಾಗುವನು. ಬೇರೆಯದಾದ ಯಾವ ಜನ್ಮದಿಂದಲೂ ಕೂಡ ಆತ್ಮ ಪದವು ತಿಳಿಯಲು ಆಗುವುದೇ ಇಲ್ಲ.

೧೫೫. ಆ ನರನಿಗೆ ಇರುವ ಉಪಾಧಿಗಳಲ್ಲಿ ಅರವತ್ತು ಬಗೆ ಇರುವುವು. ಅದರ ತಿಳವಳಿಕೆಯುಂಟಾಗಲು ಇಲ್ಲಿ ಅವನ್ನೇ ಸಂಕ್ಷೇಪವಾಗಿ ಹೇಳುತ್ತೇನೆ.

೧೫೬. ಅವಿದ್ಯೆ, ಕಾಮ, ಕರ್ಮಗಳೆಂಬುವು ಮೂರು. ಭೋಕ್ತಾ ಭೋಗ ಎಂಬುವು ಎರಡು. ಸುಷುಪ್ತಿ ಎಂಬುದು ಒಂದು. ಇವು ಆರೂ ಕಾರಣ ಸಂಜ್ಞಕವಾದ ಈ ದೇಹದಲ್ಲಿ ಆರು ಸ್ಥಾನಗಳು ಇವುಳ್ಳುದೇ ಕಾರಣ ದೇಹವು.

೧೫೭. ತಮಸ್ಸು, ಅಜ್ಞಾನ, ಅವಿದ್ಯೆ, ಎಂಬುವು ಮೂರು ಒಂದೇ ರೀತಿಯಾದ ಅರ್ಥವುಳ್ಳ ಹೆಸರುಗಳು. ಆದ್ದರಿಂದ ಇವು ಬೇರೆ ಎಂದು ತಿಳಿಯದಿರುವುದರಿಂದ ಹೆಚ್ಚಿನ ವಿಶೇಷವು ಮೇಲಿನ ಆರರಲ್ಲಿ ಕಂಡು ಬರುವುದಿಲ್ಲ.

೧೫೮. ಆದರೂ ಕೂಡ ಹಿಂದಿನ ಆರರಲ್ಲಿ ಅವಿದ್ಯೆಯೆಂಬ ಶಬ್ದವು ಬಂದಿರುವುದರಿಂದ ಅದನ್ನು ಬಿಟ್ಟು ತಮಸ್ಸು ಅಜ್ಞಾನಗಳೆರಡು ಸೇರಿದರೆ ಎಂಟಾಗುತ್ತವೆ. ಇಂತಹ ಎಂಟು ಸ್ಥಾನಗಳುಳ್ಳ ಈ ಲಿಂಗ ಶರೀರದಲ್ಲಿ ಅವಿದ್ಯೆ, ಕಾಮ ಕರ್ಮವನ್ನು ಹೇಳಿದ್ದೇವೆ. ಆದರೂ ಈ ಮೂರಕ್ಕೂ ಕಾರಣವು ಇರುವುದರಿಂದ ಅವನ್ನೂ ತೆಗೆದುಕೊಂಡಿದ್ದೇನೆ.

ಕಾರ್ಯಾಭಾವೇಪ್ಯವಸ್ಥಾನಾತ್ಕಾರಣೇ ಕಾರಣಾತ್ಮನಾ ।
ಕಾಮಸ್ಯ ಕರ್ಮಣಶ್ಚಾಽತ್ರ ವಿದ್ಯತೇ ಸೂಕ್ಷ್ಮರೂಪಿಕಾ ॥ ೧೫೯ ॥

ಅವಿದ್ಯಾಯಾಮುಖ್ಯತಾತ್ರ ವಿದ್ಯತೇ ಕಾರಣಾತ್ಮನಿ ।
ವಸ್ತುತಸ್ತು ನ ಕಾಮೋಽತ್ರ ಕಾಮನಾ ವಾ ಶ್ರುತೇರ್ಮತಂ ॥ ೧೬೦ ॥

ಅಷ್ಟತ್ರಿಂಶತ್ಪದಾನೀಹ ವಿದ್ಯಂತೇ ಸೂಕ್ಷ್ಮದೇಹಕೇ ।
ದಶೇಂದ್ರಿಯಾಣಿ ಪಂಚೈವ ಪ್ರಾಣಾ ಬುದ್ಧಿರ್ಮನಸ್ತ್ವಿತಿ ॥ ೧೬೧ ॥

ಸಪ್ತದಶಾತ್ಮಕಂ ಲಿಂಗಂ ಪ್ರಸಿದ್ಧಂ ಶಾಸ್ತ್ರಸಂಮತಂ ।
ಪಂಚವಿಷಯಗ್ರಹಣಂ ಪಂಚ ಕರ್ಮಕ್ರಿಯಾಸ್ತಥಾ ॥ ೧೬೨ ॥

ಪಂಚ ಸಂಪ್ರಾಣವ್ಯಾಪಾರಾಸ್ಸಂಕಲ್ಪೋ ನಿಶ್ಚಯಸ್ತ್ವಿತಿ ।
ಸಪ್ತದಶಚೈವ ಧರ್ಮಾಃ ಪ್ರಸಿದ್ಧಾಃ ಶಾಸ್ತ್ರಸಂಮತಾಃ ॥ ೧೬೩ ॥

---

೧೫೯. ಈ ಕಾರಣ ದೇಹದಲ್ಲಿ ಕಾಮ ಕರ್ಮಗಳ ಕಾರ್ಯಗಳಿಲ್ಲದಿದ್ದರೂ ಕಾರಣಾತ್ಮಕವಾಗಿರುವುದರಿಂದ ಆವೆರಡೂ ಇವೆ. ಆದರೆ ಅವು ಸೂಕ್ಷ್ಮರೂಪದಿಂದಿವೆಯೇ ಹೊರತು ಸ್ಥೂಲವಾಗಿಲ್ಲ.

೧೬೦. ಈ ಕಾರಣಾತ್ಮಕ ಶರೀರದಲ್ಲಿ ಅವಿದ್ಯೆಗೇ ಮುಖ್ಯವಾಗಿ ಕಾರಣತೆಯೂ ಇರುವುದು. ಸರಿಯಾಗಿ ನೋಡಿದರೆ ಕಾಮಕ್ಕೆ ಸ್ಥಾನವೇ ಇಲ್ಲ. ಇದೇ ಶ್ರುತಿಯಲ್ಲಿಯೂ ಹೇಳಲ್ಪಟ್ಟಿದೆ.

೧೬೧-೧೬೩. ಸೂಕ್ಷ್ಮ ದೇಹದಲ್ಲಿ ಮೂವತ್ತೆಂಟು ಪದಗಳಿರುವುವು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಂದು ಇಂದ್ರಿಯಗಳು ಹತ್ತು. ಪ್ರಾಣಗಳು ಐದು. ಬುದ್ಧಿ, ಮನಸ್ಸು ಎಂಬುವು ಎರಡು. ಈ ರೀತಿಯಾಗಿ ಹದಿನೇಳು ಪದಗಳುಳ್ಳದ್ದು. ಈ ಸೂಕ್ಷ್ಮ ಶರೀರವು ಎಂದು ಶಾಸ್ತ್ರವು ಹೇಳಿದೆ. ಇವುಗಳಲ್ಲಿ ವಿಷಯ ಗ್ರಹಣದವು ಐದು. ಕರ್ಮಗ್ರಹಣದವು ಐದು. ಪ್ರಾಣವ್ಯಾಪಾರದವು ಐದು. ಸಂಕಲ್ಪ ನಿಶ್ಚಯ ಎಂದೆರಡು. ಈ ರೀತಿಯಾಗಿ ಆ ತತ್ವಗಳಿಗೆ ಹದಿನೇಳು ಧರ್ಮಗಳು. ಇವು ಪ್ರಸಿದ್ಧಿಯಾಗಿವೆ. ಶಾಸ್ತ್ರಕ್ಕೂ ಸಮ್ಮತವು.

ಸ್ವಪ್ನಾಭಿಮಾನಿನೌ ಭೋಗೌ ರಜಶ್ಚೇತ ಚತುಷ್ಟಮಂ ।
ದೇವಾನಾಮಿಂದ್ರಿಯಾಣಾಂ ಚ ಸ್ಥಾನಾಭಾವೇಽಪ್ರವೃತ್ತಿತಃ ॥ ೧೬೪ ॥

ಸ್ಥೂಲದೇಹೇ ಷೋಡಶೈವ ಪದಾನಿ ಸಂಮತಾನಿ ಹಿ ।
ಗಣಸ್ಸಪ್ತದಶಸ್ತೇಷಾಮಪಾನವ್ಯಾನಯೋಃಪಃದೇ ॥ ೧೬೫ ॥

ಪಾಯುತ್ವಕ್‌ಸ್ಥಾನಯೋಃ ಜ್ಞೇಯೇ ವಾಚೋರಸಿ ನಿಕೇತನೇ ।
ಪ್ರಾಣಸ್ಯ ಮನಸಶ್ಚಾಪಿ ಬುದ್ಧಿಸ್ಥಾನೇ ಪದಂ ತ್ವಿತಿ ॥ ೧೬೬ ॥

ಪದಾನಿ ದ್ವಾದಶೇಮಾನಿ ಭೋಕ್ತೃಭೋಗೌ ತಥಾ ಗುಣಃ ।
ಅವಸ್ಥಾ ಜಾಗೃತಿಶ್ಚೇತಿ ಕಥಿತಾನಿ ಮನೀಷಿಭಿಃ ॥ ೧೬೭ ॥

ಮುದ್ರಾಮೇತಾದೃಶೀಂ ಪ್ರಾಪ್ಯ ವೇದ ವೇದಾತ್ಮಚಿತ್ಪದಂ ।
ತಸ್ಯ ಜನ್ಮ ಕೃತಾರ್ಥಂ ಸ್ಯಾನ್ಮಹತೀ ನಷ್ಟಿರನ್ಯಥಾ ॥ ೧೬೮ ॥

---

೧೬೪. ಸ್ವಪ್ನ, ಅಭಿಮಾನಿ, ಭೋಗ, ರಜಸ್ಸು, ಎಂದು ನಾಲ್ಕು ಗುಣವು ದೇವತೆಗಳಿಗೆ ಕೆಲವಿಂದ್ರಿಯಗಳಿಗೆ ಸ್ಥಾನವಿಲ್ಲದಿರುವುದರಿಂದ ಬೇರೆಯ ಸ್ಥಾನವೂ ಇಲ್ಲದಿರುವುದರಿಂದ ಈ ರೀತಿಯಾಗಿ ಸೂಕ್ಷ್ಮ ದೇಹಕ್ಕೆ ಹೇಳಿದೆ.

೧೬೫–೧೬೭. ಸ್ಥೂಲದೇಹದಲ್ಲಿ ಹದಿನಾರು ಪದಗಳು ಎಂದರೆ ತತ್ವಗಳೆಂದು ಎಲ್ಲಕ್ಕೂ ಸಮ್ಮತವಾಗಿದೆ. ಆ ಸ್ಥೂಲ ದೇಹದಲ್ಲಿ ಹಿಂದೆ ಹೇಳಿದ ಹದಿನೇಳರದು ಒಂದು ಗಣವು. ಅಪಾನ ವ್ಯಾನಗಳಿಗೆ ಪಾಯುತ್ವಕ್ಕುಗಳೆಂಬುವು ಎರಡು ಒಂದು ಗಣವು. ವಾಕ್ಕಿಗೆ ಹೃದಯದ ಸ್ಥಳವು. ಪಂಚಪ್ರಾಣ ಸ್ಥಾನವು. ಮನ ಸ್ಥಾನವು ಬುದ್ಧಿ ಸ್ಥಾನವು ಇವು ಹನ್ನೆರಡರದು ಒಂದು ಗಣವು. ಭೋಕ್ತಾ ಭೋಗಗಳ ಗಣವು ಒಂದು. ತಮೋಗುಣ ಜಾಗ್ರದವಸ್ಥೆಗಳ ಗಣವು ಒಂದು. ಅಂತೂ ಹದಿನಾರು ಪದಗಳಿಂದ ಕೂಡಿದುದು ಈ ಸ್ಥೂಲ ದೇಹವು.

೧೬೮. ಈ ರೀತಿಯಾದ ಮುದ್ರೆಯನ್ನು ಹೊಂದಿ ಆತ್ಮನಿಗೆ ಸ್ಥಾನವಾಗಿರುವ ಇದನ್ನು ಯಾವನು ತಿಳಿದುಕೊಳ್ಳುತ್ತಾನೆಯೋ ಅವನ ಜನ್ಮವು ಸಾರ್ಥಕವಾಗುತ್ತದೆ. ಹಾಗಿಲ್ಲದಿದ್ದವನು ಬಹುವಾದ ನಷ್ಟವನ್ನು ಹೊಂದಿ ಜನ್ಮವನ್ನು ನಿರರ್ಥಕವನ್ನಾಗಿ ಮಾಡಿಕೊಳ್ಳುತ್ತಾನೆ.

ಮುದ್ರಾರೂಪಂ ವಿನಿಶ್ಚಿತ್ಯೈವ ಯನ್ನಾಮ್ನಾ ಸಾಂಕಿತೇತಿ ಚ ।
ಉಕ್ತಂ ತದಧುನಾ ಕಿಂ ಚಿತ್ಸಂಕ್ಷೇಪೇಣ ನಿರುಚ್ಯತೇ ॥ ೧೬೯ ॥
ರಾಮೇತಿ ಲೋಕರಮಣಾದ್ರಮಂತೇ ಯೋಗಿನೋಽಮಲೇ ।
ಪರಾನಂದಪದೇ ನಿತ್ಯಂ ತೇನ ರಾಮ ಇತೀರ್ಯತೇ ॥ ೧೭೦ ॥
ರಸೇನೈವಾಮುನಾ ಸರ್ವೇ ಜೀವಾ ಜೀವಂತಿ ನಾನ್ಯಥಾ ।
ಇಮಂ ರಸಮಯಂ ಲಬ್ಧ್ವಾ ಭವಂತ್ಯಾನಂದಿನೋಽಖಿಲಾಃ ॥ ೧೭೧ ॥
ವಿಶತಾ ಯೇನ ವಿಶ್ವೇಷು ಸರ್ವಂ ಚೇತಯತೇ ಜಗತ್ ।
ನ ತಂ ಚೇತಯತೇ ಕಶ್ಚಿತ್ಸರಾಮ ಇತಿ ಕೀರ್ತ್ಯತೇ ॥ ೧೭೨ ॥
ಸತ್ತಾ ಯೇನಾಖಿಲಂ ವಿಶ್ವಂ ಸ ದೇವೇತಿ ಪ್ರತೀಯತೇ ।
ಅಸತ್ಸತ್ತಾಪ್ರದಸ್ಸಾಕ್ಷಾದ್ರಾಮ ಇತ್ಯಭಿಧೀಯತೇ ॥ ೧೭೩ ॥

---

೧೬೯. ಮುದ್ರೆಯ ರೂಪವನ್ನು ಬಿಡಿಸಿ ಬಿಡಿಸಿ ಹೇಳಿ ಅದರಲ್ಲಿರುವ ಹೆಸರನ್ನೂ ಅದಕ್ಕೆ ಬಂದಿರುವ ಹೆಸರನ್ನೂ ಹೇಳಿದುದಾಗಿದೆ. ಮತ್ತೆಯೂ ಅದನ್ನು ಸಂಕ್ಷೇಪವಾಗಿ ಹೇಳುತ್ತೇನೆ.

೧೭೦. ಯೋಗಿಗಳು ಈ ಪರಮಾತ್ಮನ ಆನಂದ ಪದದಲ್ಲಿ ರಮಿಸುವುದರಿಂದಲೂ ಜನರಲ್ಲಿ ಈ ರಾಮನು ಸೇರಿ ಅವರಿಗೆ ಆನಂದವನ್ನುಂಟುಮಾಡುವುದರಿಂದಲೂ ಆ ಸ್ವಾಮಿಗೆ ರಾಮನೆಂದು ಅನ್ವರ್ಥವಾದ ಹೆಸರು ಬಂದಿರುವುದು.

೧೭೧. ಆತ್ಮನು ರಸ ಸ್ವರೂಪನು. ಈ ರಸವನ್ನು ಹೊಂದಿಯೇ ಎಲ್ಲಾ ಪ್ರಾಣಿಗಳೂ ಬದುಕಿರುತ್ತವೆ. ಇಲ್ಲದಿದ್ದರೆ ನಾಶ ಹೊಂದುತ್ತವೆ. ರಸ ಸ್ವರೂಪನಾದ ಈ ಸ್ವಾಮಿಯನ್ನು ಹೊಂದಿದರೆ ಎಲ್ಲರೂ ಆನಂದವನ್ನು ಹೊಂದುತ್ತಾರೆ.

೧೭೨. ಈ ಸ್ವಾಮಿಯು ಪ್ರಪಂಚದ ಪ್ರಾಣಿಗಳನ್ನು ವ್ಯಾಪಿಸಿಕೊಂಡು ಅವುಗಳು ಕ್ರಿಯೆಗಳನ್ನು ಮಾಡುವಂತೆ ಮಾಡುತ್ತಾನೆ. ಆ ಸ್ವಾಮಿಗೆ ಮಾತ್ರ ಕ್ರಿಯೆಗಳನ್ನು ಮಾಡಲು ಯಾವುದೂ ಬೇಕಿಲ್ಲ. ಆದುದರಿಂದಲೇ ಇವನಿಗೆ ರಾಮನೆಂದು ಹೆಸರು.

೧೭೩. ಯಾವ ಸ್ವಾಮಿಯ ಆಶ್ರಯದಿಂದ ಪ್ರಪಂಚವೆಲ್ಲವೂ ಎಲ್ಲಾ ಕಾಲದಲ್ಲಿಯೂ ಇದ್ದುಕೊಂಡಿರುವಂತೆ ಕಾಣುತ್ತದೆಯೋ ಅಂತಹ ಅಸತ್ತಾದ ಈ ಜಗತ್ತಿಗೆ ಸತ್ತತೆಯನ್ನುಂಟುಮಾಡುವ ಆ ಸ್ವಾಮಿಯು ರಾಮನೆಂಬ ಹೆಸರನ್ನು ಹೊಂದಿದ್ದಾನೆ.

ಯಥಾ ಪ್ರಸಿದ್ಧಂ ರಾಮೇತಿ ಬ್ರಹ್ಮಣೋ ಹ್ಯಭಿಧಾನಕಂ ।
ತಥಾ ಲಿಂಗಂ ಚೇತಿ ನಾಮ ರೂಪಂ ಚ ಪರಮಾತ್ಮನಃ ॥ ೧೭೪ ॥

ಲೀಯಂತೇ ಯತ್ರ ಭೂತಾನಿ ನಿರ್ಗಚ್ಛಂತಿ ಯತಃ ಪುನಃ ।
ತೇನ ಲಿಂಗಂ ಪರಂ ವ್ಯೋಮ ನಿಷ್ಕಲಃ ಪರಮಶ್ಶಿವಃ ॥ ೧೭೫ ॥

ಇತಿ ಶಾಸ್ತ್ರವಿದಾಂ ವಾಣೀ ಶ್ರೂಯತೇ ತತ್ತ್ವದರ್ಶಿನಾಂ ।
ಅತಸ್ಸರ್ವಾಣಿ ನಾಮಾನಿ ರೂಪಾಣಿ ಚಾಂತರಾತ್ಮನಃ ॥ ೧೭೬ ॥

ಸಂತಿ ತೇನ ಶಬ್ದಭೇದೇ ರೂಪಭೇದೇಽಪಿ ಸರ್ವಥಾ ।
ತತ್ತ್ವತೋ ನೈವ ಭೇದೋಽಸ್ತಿ ಹ್ಯರ್ಥಸ್ಯೈಕಸ್ಯ ವಸ್ತುನಃ ॥ ೧೭೭ ॥

ಸ ಬ್ರಹ್ಮಾ ಸ ಶಿವಶ್ಚಾಥ ಸ ಹರಿಸ್ಸ ಸುರೇಶ್ವರಃ ।
ಸೋಽಕ್ಷರಃ ಪರಮಶ್ಚೈವ ಸಸ್ಸ್ವರಾಡಿತಿ ವೇದವಾಕ್ ॥ ೧೭೮ ॥

---

೧೭೪. ಪರಮಾತ್ಮನಾದ ಬ್ರಹ್ಮನಿಗೆ ರಾಮ ಎಂಬ ಹೆಸರು ಹೇಗೆ ಪ್ರಸಿದ್ಧವೋ ಹಾಗೆಯೇ ಆ ಪರಮಾತ್ಮನಿಗೆ ಲಿಂಗವೆಂಬ ಮತ್ತೊಂದು ಹೆಸರೂ ಉಂಟು.

೧೭೫. ಯಾವ ಸ್ವಾಮಿಯಲ್ಲಿ ಪ್ರಪಂಚದ ಪ್ರಾಣಿಗಳೆಲ್ಲವೂ ಅಡಗಿದ್ದು ಅವನಿಂದಲೇ ಮತ್ತೆ ಹೊರಗೆ ಬರುವುದರಿಂದ ಆ ಸ್ವಾಮಿಗೆ ಲಿಂಗವೆಂದು ಹೆಸರು ಬಂದಿತು. ಅವನು ನಿರ್ಲಿಪ್ತನು. ನಿಷ್ಕಳನು. ಶಿವನೆಂದೂ ಅವನಿಗೆ ಹೆಸರಿರುವುದು.

೧೭೬. ಶಾಸ್ತ್ರದ ಅರ್ಥಗಳನ್ನೂ ತತ್ವಗಳನ್ನೂ ಬಲ್ಲವರು ಹೀಗೆಂದು ಹೇಳುತ್ತಿದ್ದಾರೆ. ಆದ್ದರಿಂದಲೇ ಈ ಹೆಸರುಗಳೆಲ್ಲವೂ ಆ ಅಂತರಾತ್ಮನಿಗೆ ಬಂದಿರುವುವು.

೧೭೭. ಆದ್ದರಿಂದಲೇ ಈ ಸ್ವಾಮಿಗೆ ಹೆಸರುಗಳು ಅನೇಕ ಬಗೆಯಾಗಿರುವುವು. ರೂಪ ಭೇದವು ಇಲ್ಲವೇ ಇಲ್ಲ. ಎಲ್ಲಾ ನಾಮಗಳೂ ಒಂದೇ ಅರ್ಥವುಳ್ಳವು.

೧೭೮. ಆ ಪರಮಾತ್ಮನಾದ ಆ ಚಿತ್ ಸ್ವರೂಪನಿಗೆ ಬ್ರಹ್ಮ, ಶಿವ, ಹರಿ, ಸುರೇಶ್ವರ, ಅಕ್ಷರ, ಪರಮ, ಸ್ವರಾಟ್ ಎಂಬುದಾಗಿ ಬೇರೆ ಬೇರೆ ಹೆಸರುಗಳನ್ನಿಟ್ಟು ವೇದವು ಕರೆಯುತ್ತದೆ.

ಯಸ್ಯೇಮೇ ಸ ಚ್ಚಿದಾನಂದಾಸ್ಸ ವ್ಯಾಪ್ತಾಸ್ಸರ್ವವಸ್ತುಷು ।
ತೇನಾಸ್ತಿ ಚ ಪ್ರಿಯಂ ಭಾತಿ ವಸ್ತುಮಾತ್ರಂ ಪ್ರದೃಶ್ಯತೇ ॥ ೧೭೯ ॥
ಆಮ್ನಾಯೇಷು ಚ ಸರ್ವೇಷು ರಾಮಬ್ರಹ್ಮಾತ್ಮ ಕೀರ್ತನಂ ।
ಆದಿಮಧ್ಯಾವಸಾನೇಷು ಶ್ರೂಯತೇ ಗುರ್ವನುಗ್ರಹಾತ್ ॥ ೧೮೦ ॥
ಐತ್ತರೇಯಕೇ ಆತ್ಮಾ ವಾ ಇದ ಮೇಕಃ ಪುರಾ ಜನ್ಯೈಃ ।
ಅಸೀತ್ತೇನ್ಯೈವ ಲೋಕಾನಾಂ ಪಾಲಾನಾಂ ಸೃಷ್ಟಿರಿಚ್ಛಯಾ ॥ ೧೮೧ ॥
ಕೃತಾರ್ಥಸ್ಸರ್ವದೇವಾನಾಮನ್ನಭುಕ್ತ್ಯರ್ಥಮಿಪ್ಸಿತಂ ।
ದದಾವಾಯತನಂ ಚಾನ್ನಂ ಸೃಷ್ಟಂ ತೇಭ್ಯಸ್ತತಃ ಪರಂ ॥ ೧೮೨ ॥
ವಿಚಾರ್ಯ ಸ್ವೀಯಸ್ವಾಮಿತ್ವಂ ಸೀಮಾದ್ವಾರಾ ಪ್ರವಿಷ್ಟವಾನ್ ।
ತತ್ರಾತ್ಮಾನಂ ಬ್ರಹ್ಮ ತತಂ ದೃಷ್ಟ್ವಾವಾಪೇಂದ್ರತಾಂ ಕಿಲ ॥ ೧೮೩ ॥

---

೧೭೯. ಆ ಸ್ವಾಮಿಯು ಎಲ್ಲದರಲ್ಲಿಯೂ ಕೂಡಿರುವುದರಿಂದೇ ಆಯಾ ವಸ್ತುಗಳು ಪ್ರಿಯವಾಗಿ ಕಾಣುತ್ತವೆ. ಎಂದರೆ ಆ ಸ್ವಾಮಿಯು ಪ್ರತಿಯೊಂದು ವಸ್ತುವಿಗೂ ಪ್ರಾಣ, ರೂಪು, ಮುಂತಾದುವನ್ನು ಕೊಟ್ಟು ಅದರಲ್ಲಿರುತ್ತಾನೆ.

೧೮೦. ಇದರಿಂದಲೇ ಶಾಸ್ತ್ರಾಧ್ಯಯನವನ್ನು ಮಾಡುವಾಗ ಮೊದಲು ಮಧ್ಯ ಕೊನೆಗಳಲ್ಲಿ ರಾಮ ಬ್ರಹ್ಮನನ್ನು ಕೀರ್ತಿಸುತ್ತಾರೆ. ಗುರುವು ಅಂತೆಯೇ ಎಲ್ಲರಿಗೂ ಬೋಧಿಸುತ್ತಾನೆ.

೧೮೧. ಐತ್ತರೇಯಕ ಶ್ರುತಿಯಲ್ಲಿಯೂ ಕೂಡ ಎಲ್ಲದಕ್ಕಿಂತಲೂ ಮೊದಲು ಎಂದರೆ ಜಗತ್ತಿನ ಸೃಷ್ಟಿಗೆ ಮೊದಲು ಆತ್ಮನೊಬ್ಬನೇ ಇದ್ದನು. ಈಗಲೂ ಒಬ್ಬನೇ ಇರುವನು. ಆಗ ಅವ್ಯಾಕೃತವು. ಈಗ ವ್ಯಾಕೃತವು. ಆಗ ಆ ಸ್ವಾಮಿಯು ತನ್ನ ಇಚ್ಛೆಯಿಂದ ಲೋಕ ಪಾಲರನ್ನು ಸೃಷ್ಟಿಸಿದನು.

೧೮೨. ಆ ಸ್ವಾಮಿಯು ತಾನು ಸೃಷ್ಟಿಸಿದ ದೇವತೆಗಳಿಗೆಲ್ಲಾ ತಿಂಡಿಯು ಬೇಕಾದುದರಿಂದ ಅವರ ಊಟಕ್ಕೆ ಅನ್ನವನ್ನು ಸೃಷ್ಟಿಸಿದನು.

೧೮೩. ಅನಂತರ ಅವರಿಗೆ ಅದರಲ್ಲಿರುವ ತೊಂದರೆಯನ್ನು ತಿಳಿದು ಅವಕ್ಕೆ ತನ್ನ ಸ್ವಾಮಿತ್ವವನ್ನು ಕಲ್ಪಿಸಿದನು. ಅದಕ್ಕೆ ಒಂದು ಎಲ್ಲೆಯನ್ನು ಕಲ್ಪಿಸಿ ಆ ಮಧ್ಯದಲ್ಲಿ ತಾನು ನಿಂತನು. ಅಲ್ಲಿಯೂ ಆ ಬ್ರಹ್ಮವು ಸರ್ವವ್ಯಾಪ್ತವಾಗಿರುವುದನ್ನು ನೋಡಿ ಅಲ್ಲಿ ಇಂದ್ರತ್ವವನ್ನು ಹೊಂದಿದನು.

ಕೋಽಯಮಾತ್ಮೇತಿ ಸಂಪ್ರಶ್ನೇ ಯೇನ ಪಶ್ಯತಿ ಜಿಘ್ರುತಿ ।
ಇತ್ಯಾದಿಭಿರ್ವಿನಿರ್ಣೀತಂ ತದೇತದ್ಧೃದಯಾಧಿಭಿಃ ॥ ೧೮೪ ॥

ಪ್ರಜ್ಞಾನಸ್ಯಾಸ್ಯ ನಾಮಾನಿ ಚೋಕ್ತ್ವಾ ತತ್ಸರ್ವತಾ ಸಮಾ ।
ಏಷ ಬ್ರಹ್ಮೇತ್ಯಾದಿಶಬ್ದೈರ್ದರ್ಶಿತಾ ಚಾಖಿಲಂ ಜಗತ್ ॥ ೧೮೫ ॥

ಪ್ರಜ್ಞಾನೇತ್ರಂ ಚ ಪ್ರಜ್ಞಾನೇ ಪ್ರತಿಷ್ಠಂ ಚೇತ್ಯನೇನ ಹಿ ।
ಪ್ರಜ್ಞಾನಂ ಬ್ರಹ್ಮ ಶ್ರುತ್ಯಂತೇ ತ್ರಿಕಾಲೇಷ್ವಿತಿ ದರ್ಶಿತಂ ॥ ೧೮೬ ॥

ತದ್ರಾಮಸಚ್ಚಿದಾನಂದಘನಾನಂತಂ ನ ಸಂಶಯಃ ।
ತೈತ್ತಿರೀಯಕಶಾಖಾಯಾಂ ಬ್ರಹ್ಮಣೋ ಲಕ್ಷಣಂ ಪುರಾ ॥ ೧೮೭ ॥

---

೧೮೪. ಹಾಗಾದರೆ ಆತ್ಮ, ನೆಂಬುವನು ಯಾರೆಂದು ಪ್ರಶ್ನಿಸಿದರೆ ಯಾವನ ಪ್ರೇರಣೆಯಿಂದ ನೋಡುತ್ತೇವೆ, ಯಾವನ ಪ್ರೇರಣೆಯಿಂದ ವಾಸನೆಯನ್ನು ನೋಡುತ್ತೇವೆ ಎಂಬದಾಗಿ ಯೋಚಿಸಿ ಅವಕ್ಕೆ ಕಾರಣವಾದವನನ್ನು ಮನಸ್ಸಿನಿಂದ ತಿಳಿದು ನೋಡುತ್ತೇವೆ. ಅಂತಹನೊಬ್ಬನು ಇರಬೇಕೆಂದು ತೋರುತ್ತದೆ. ಆ ನಿರ್ಣಯದಿಂದ ಬರತಕ್ಕವನೇ ಸ್ವಾಮಿಯು. ಆತ್ಮನು.

೧೮೫. ಆ ನಿರ್ಣಯದಿಂದ ಬರುವುದನ್ನು ಪ್ರಜ್ಞಾನವೆಂದು ಕರೆಯುತ್ತೇವೆ. ಅದಕ್ಕೆ ಯಾವ ಹೆಸರುಗಳನ್ನು ಬೇಕಾದರೂ ಇಡಬಹುದು. ಇದೇ ಬ್ರಹ್ಮವು. ಎಂಬ ಶ್ರುತಿಯಿಂದ ಜಗತ್ತೆಲ್ಲವೂ ಬ್ರಹ್ಮವೆಂದೇ ಹೇಳಲ್ಪಟ್ಟಿದೆ.

೧೮೬. "ಪ್ರಜ್ಞಾನೇತ್ರಂ ಪ್ರಜ್ಞಾನೆಪ್ರತಿಷ್ಠಿತಂ" "ಪ್ರಜ್ಞಾನಂಬ್ರಹ್ಮ" ಈ ಶ್ರುತಿಗಳಿಂದ ಆ ಸ್ವಾಮಿಯು ತ್ರಿಕಾಲಗಳಲ್ಲಿಯೂ ಇದ್ದಾನೆಂದು ತಿಳಿಯ್ಯು ಬರುತ್ತದೆ.

೧೮೭. ಆದ್ದರಿಂದ ಈ ರಾಮನು ಸಚ್ಚಿತ್ ಸ್ವರೂಪನು. ಆನಂದಮಯನು ಅನಂತನು. ಎಂಬುದರಲ್ಲಿ ಸಂಶಯವಿಲ್ಲ. ತೈತ್ತರೀಯಕ ಶಾಖೆಯಲ್ಲಿ ಬ್ರಹ್ಮನ ಸ್ವರೂಪವನ್ನು ಇಂತೆಂದು ವಿವರಿಸಿದ್ದಾರೆ.

ಸತ್ಯಂ ಜ್ಞಾನಮನಂತಂ ಸಂಕೀರ್ತ್ಯ ವೇದಗುಹಾದಿಕಂ ।
ಯಶ್ಚಾ ಸಾವಶ್ನುತೇ ಕಾಮಾನ್ಸರ್ವಾನ್ಯುಗಪದೇವ ಹಿ ॥ ೧೮೮ ॥

ಫಲಂ ಜ್ಞಾನಸ್ಯ ಚೋಕ್ತ್ವಾಥ ತಸ್ಮಾದ್ಬ್ರಹ್ಮಾತ್ಮಕಂ ಕಿಲ ।
ಕ್ರಮೋತ್ಪತ್ತಿರ್ಹಿ ಭೂತಾನಾಂ ಕೋಶಪಂಚಕವೇದನಂ ॥ ೧೮೯ ॥

ತತ್ಫಲಂ ತದನಾತ್ಮತ್ವಂ ಸಂಪ್ರದರ್ಶ್ಯಾಂತರತ್ವತಃ ।
ಪುಚ್ಛಂ ಬ್ರಹ್ಮೇತಿ ನಿರ್ಣೀಯ ತದಸತ್ಸತ್ಪ್ರಕೀರ್ತಿತಃ ॥ ೧೯೦ ॥

ಅಸತ್ಸದ್ಭವತಿ ಹ್ಯೇವಂ ಸಂಕೀರ್ತ್ಯ ಚ ತತಃ ಪರಂ ।
ಕಾಮಯಿತ್ವ ತದೇವೇಹ ಸ್ವಾತ್ಮಾನಂ ಜಗದಾತ್ಮನಾ ॥ ೧೯೧ ॥

ಕೃತ್ವಾ ತಸ್ಮಿನ್ ಪ್ರವಿಷ್ಟೇವ ಸಚ್ಚ ತ್ಯಚ್ಚಾ ಭವತ್ಕಿಲ ।
ಅಪಾನಪ್ರಾಣಯೋಃಶ್ಚೇಷ್ಟಾ ಯಸ್ಮಾತ್ತಸ್ಮಿನ್ ಪ್ರಜಾಯತೇ ॥ ೧೯೨ ॥

---

೧೮೮. ಬ್ರಹ್ಮವು, ಸತ್ಯರೂಪನು, ಜ್ಞಾನರೂಪನು, ಅನಂತನು ಹೃದಯ ಪ್ರದೇಶದಲ್ಲಿರುವವನು ಎಂದು ಹೇಳಿ ಈ ಬ್ರಹ್ಮನು ಎಲ್ಲಾ ಕಾಮುಗಳನ್ನೂ ಒಂದೇ ಕಾಲದಲ್ಲಿ ಅನುಭವಿಸುವನು ಎಂದು ಹೇಳಿದೆ.

೧೮೯-೧೯೦. ಆ ಶಾಖೆಯು ಜ್ಞಾನಕ್ಕೆ ಫಲವನ್ನೂ ಹೇಳಿ ಅದುವರಿಂದ ಪ್ರಪಂಚವೆಲ್ಲವೂ ಬ್ರಹ್ಮಾತ್ಮಕವಾದುದೆಂದೂ ಹೇಳಿದೆ. ಭೂತಗಳ ಉತ್ಪತ್ತಿಯ ಕ್ರಮವೂ ಪಂಚಕೋಶಗಳನ್ನೂ ತಿಳಿಸಿರುವುದೂ ಅವುಗಳಿಗೂ ಫಲವೂ ಮತ್ತು ಅವೊಂದೂ ಆತ್ಮವಲ್ಲವೆಂದು ಹೇಳಿರುವಿಕೆಯು ತೋರಿಸಿರುವುದು. ಅನಂತರ ಸತ್ ಅಸತ್‌ಗಳ ಪ್ರವೇಶದಿಂದ ಜ್ಞಾನದೃಷ್ಟಿಗೋಚರವಾಗುವುದೇ ಬ್ರಹ್ಮವೆಂದು ಹೇಳಿದೆ.

೧೯೧. ಅಸತ್ ಸತ್ ಭವತಿ ಎಂಬುದಾಗಿ ಹೇಳಿ ಅನಂತರ ಜಗತ್ ಸ್ವರೂಪನಾಗಿ ತನ್ನನ್ನು ತಾನೇ ಕಾಮಿಸಿಕೊಳ್ಳುತ್ತಾನೆ ಎಂದು ಹೇಳಿದೆ.

೧೯೨. ಆ ಸ್ವಾಮಿಯು ಆ ಜಗತ್ತಿನಲ್ಲಿ ಪ್ರವೇಶಿಸಿ ಸತ್ ಸ್ವರೂಪನಾಗಿ ದ್ದವನು ಅಸತ್ ಸ್ವರೂಪನಾಗುವನು. ಆ ಸ್ವಾಮಿಯು ಪ್ರವೇಶಿಸಿದ ಮೇಲೆಯೇ ಅಪಾನ ಪ್ರಾಣಗಳ ಕ್ರಿಯೆಯು ಪ್ರಾರಂಭವಾಗುವುದು.

ಅತ್ಮೈವ ರಸ ಏವೈಷ ಆನಂದಯತಿ ಚಾಖಿಲಾನ್ |
ಭಯಹೇತುಸ್ತದೇವೇಹ ವಾತಾದೀನಾಂ ಪ್ರದರ್ಶಿತಂ | ॥ ೧೯೩ ॥

ಮಾನುಷಾದಾರಭ್ಯ ಬ್ರಹ್ಮಾಂತಾ ಆನಂದಾ ಯೇ ಶತೋತ್ತರಾಃ |
ಬಿಂದವಸ್ತೇ ಪರಬ್ರಹ್ಮಾನಂದಸ್ಯೇತಿ ವಿನಿಶ್ಚಿತಂ ॥ ೧೯೪ ॥

ಸ ಯಶ್ಚಾಯಂ ನರೋಪಾಧಾವಾದಿತ್ಯೇ ಯಶ್ಚ ವರ್ತತೇ |
ಸ ಏಕ ಇತಿ ಜ್ಞಾತಾರಂ ಪಾಪಂ ಪುಣ್ಯಂ ಕೃತಾಕೃತೇ ॥ ೧೯೫ ॥

ನ ಸಂತಾಪಯತಸ್ತ್ವೇವಂ ಸಮ್ಯತ್ಸರ್ವಂ ಪ್ರಕೀರ್ತಿತಂ |
ಯದ್ಬ್ರಹ್ಮಮಹಿಮಾಪೇಕ್ಷ್ಯ ತದಾಪ್ನೋತಿ ನ ಸಂಶಯಃ ॥ ೧೯೬ ॥

ಛಾಂದೋಗ್ಯೇಪಿ ಸ ವೇದೇತಿ ಬ್ರಹ್ಮೋಪಕ್ರಮ್ಯ ಬ್ರಹ್ಮಣಃ |
ತೇಜೋವನ್ನಾದಿಕಾ ಸೃಷ್ಟಿಸ್ಸನ್ಮೂಲಾ ಸಾ ಸ್ಥಿತಿರ್ಹ್ಯತಃ ॥ ೧೯೭ ॥

---

೧೯೩. ಆತ್ಮನೇ ರಸವು. ಈ ರಸವೇ ಎಲ್ಲರನ್ನೂ ಆನಂದಪಡಿಸುತ್ತದೆ. ಎಂದು ಆ ಶಾಖೆಯು ಹೇಳಿ ವಾತಾದಿಗಳಿಗೆ ಅದನ್ನೇ ಭಯಹೇತುವನ್ನಾಗಿ ಹೇಳಿದೆ.

೧೯೪. ಮಾನುಷ ಆನಂದವನ್ನು ಮೊದಲು ಮಾಡಿಕೊಂಡು ಬ್ರಹ್ಮನ ಪರ್ಯಂತರವಿರುವ ನೂರು ನೂರರಂತೆ ಹೆಚ್ಚಾದ ಯಾವ ಆನಂದಗಳಿವೆಯೋ ಅವು ಈಪರಮಾತ್ಮನ ಆನಂದದ ಬಿಂದುಗಳೆಂದು ಪ್ರದರ್ಶಿಸಿದೆ.

೧೯೫-೧೯೬. ಮನುಷ್ಯನಲ್ಲಿರುವ ಸುಡುವ ಉಷ್ಣವೂ ಸೂರ್ಯನಲ್ಲಿ ಸುಡುತ್ತಿರುವ ಉಷ್ಣವೂ ಒಂದೇ ಎಂದು ತಿಳಿದಿರುವವನನ್ನು ಕುರಿತು ಅದನ್ನೂ ನಿವಾರಿಸಿ ಇಂತಹ ಉಷ್ಣಗಳಾಗಲಿ ಪಾಪ ಪುಣ್ಯಗಳಾಗಲಿ ಆ ಪರಮಾತ್ಮನನ್ನು ಸಂತಾಪ ಪಡಿಸುವುದಿಲ್ಲ ಎಂದು ವಿವರಿಸಿದ್ದಾನೆ. ಆ ರೀತಿಯಾಗಿ ಹೇಳಿದ ಮಹಿಮೆಯುಳ್ಳ ಬ್ರಹ್ಮನೇ ರಾಮನು. ಸಂಶಯವಿಲ್ಲ.

೧೯೭-೧೯೯. ಛಾಂದೋಗ್ಯೋಪನಿಷತ್ತು "ಕೂಡ ಸವೇದೇತಿ ಬ್ರಹ್ಮ" ಎಂದು ಮೊದಲು ಮಾಡಿಕೊಂಡು ತೇಜಸ್ಸು ಮುಂತಾದುವುಳ್ಳವುಗಳ ಸೃಷ್ಟಿಯು ಆಗ ಬೇಕಾದರೆ ಅವುಗಳ ಸೃಷ್ಟಿಗೆ ಒಬ್ಬನಿದ್ದಾನೆ. ಅದೇ ಜೀವಾತ್ಮನಿಗೆ

ಜೀವಾತ್ಮನಾ ಪ್ರವೇಶಶ್ಚ ವ್ಯಾಕೃತಿರ್ನಾಮರೂಪಯೋಃ ।
ಶ್ವೇತಕೇತೋಸ್ತ್ವಂ ಪದಸ್ಯ ತತ್ಪದೇನೈಕ್ಯತಾಪಿ ಚ ॥ ೧೯೮ ॥

ಸದಸಂಭಾವನಾಯಾಂ ಚ ಸದ್ಭಾವೇ ಚ ಬಹೂಕ್ತಿತಾ ।
ತದಜ್ಞಾನೇ ಗುರೋಃ ಜ್ಞಾನಂ ಜ್ಞಾನಾನ್ಮೋಕ್ಷೋಽಪುನರ್ಭವಃ ॥

ಸತ್ಯಬ್ರಹ್ಮಾಭಿಸಂಧಸ್ಯೇತ್ಯೇವಂ ಸದ್ಬ್ರಹ್ಮಕೀರ್ತನಂ ।
ತದ್ಪ್ರಾಮೋತಿ ಪರಂ ಬ್ರಹ್ಮ ಸೃಷ್ಟಿಸ್ಥಿತ್ಯಂತಹೇತುಕಂ ॥ ೨೦೦ ॥

ಅನ್ಯಸ್ಯಾಮಪಿ ಶಾಖಾಯಾಂ ಪ್ರಶ್ನಪ್ರತ್ಯುಕ್ತಿತಃ ಸ್ಫುಟಂ ।
ಮನಃಪ್ರಾಣೇಂದ್ರಿಯಾಣಾಂ ಯನ್ಮನಃ ಪ್ರಾಣೇಂದ್ರಿಯಂ ಹಿ ತತ್ ॥

ಸ್ಥಿತಿಯನ್ನೂ ಹೇಳುತ್ತದೆ. ಆ ತೇಜೋವತ್ ಪದಾರ್ಥಗಳಿಗೆ ಜೀವಾತ್ಮನು ಪ್ರವೇಶಿಸಿದರೆ ಅವುಗಳ ನಾಮ ರೂಪಗಳು ಉಂಟಾಗುತ್ತವೆ. ಎಂದು ಹೇಳಿದೆ. ಶ್ವೇತಕೇತು ಕುರಿತು ತ್ವಂ ಪದಕ್ಕೆ ತತ್ ಪದದ ಎಂದರೆ ಜೀವಾತ್ಮನಿಗೆ ಪರಮಾತ್ಮನ ಅಭೇದವನ್ನು ವಿವರಿಸಿ ಆ ಬ್ರಹ್ಮನ ಇರುವಿಕೆಯನ್ನು ತೋರಿಸಲು ಬಹು ಕಾರಣಗಳನ್ನು ಹೇಳಿರುವುದು. ಇಷ್ಟಾದರೂ ಬ್ರಹ್ಮನು ತಿಳಿಯದಿದ್ದರೆ ಗುರುವಿನಿಂದ ಜ್ಞಾನೋಪದೇಶವನ್ನು ಹೊಂದಿ ಆದರಿಂದ ಜ್ಞಾನವನ್ನು ಸಂಪಾದಿಸಿ ಆ ಜ್ಞಾನದಿಂದ ಮೋಕ್ಷವನ್ನು ಹೊಂದಬೇಕು. ಆಗ ಸಂಸಾರವು ಉಂಟಾಗುವುದಿಲ್ಲವೆಂದು ವಿವರಿಸಿದೆ.

೨೦೦. ಸತ್ಯವೇ ಬ್ರಹ್ಮವೆಂದು ಹೇಳುತ್ತಿರುವವನಿಗೆ ಈ ರೀತಿಯಾಗಿ ಬ್ರಹ್ಮನ ಅಸ್ತಿತ್ವವನ್ನು ಹೇಳಿದ್ದಾನೆ. ಆ ಪರಮಾತ್ಮವೇನೇ ರಾಮನು. ಅವನೇ ಪರಬ್ರಹ್ಮನು. ಅವನೇ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನು.

೨೦೧. ಮತ್ತೊಂದು ಶಾಖೆಯಲ್ಲಿಯೂ ಕೂಡ ಪ್ರಶ್ನೋತ್ತರ ರೂಪವನ್ನು ತೆಗೆದುಕೊಂಡು ಮನಸ್ಸು, ಪ್ರಾಣ, ಇಂದ್ರಿಯಗಳಿಗೂ ಯಾವುದು ಮನಸ್ಸು, ಪ್ರಾಣ ಇಂದ್ರಿಯಗಳಾಗಿರುವುದೋ ಆದೇ ತತ್ ಪದಾರ್ಥವಾದ ಆತ್ಮವು.

ಸರ್ವೇಷಾಮನುಭೂತೇಸ್ಸದ್ವಿದಿತಾವಿದಿತಾತ್ಪರಂ ।
ವಿಷಯೋ ನೇಂದ್ರಿಯಾದೀನಾಮಿತ್ಯುಕ್ತ್ವಾ ತಸ್ಯ ಶೋಧನಂ ॥ ೨೦೨ ॥

ಸರ್ವದರ್ಶೀ ಸರ್ವವೇತ್ತೃ ದೇವಾನಾಂ ಜಯಕಾರಣಂ ।
ತದಜ್ಞಾನಂ ಚ ದೇವಾನಾಂ ಗುರೋಃ ಜ್ಞಾನಮುಪಾಸ್ತಿತಾ ॥ ೨೦೩ ॥

ವಿದ್ಯೈವ ನಾನ್ಯನ್ಮಾನುಷ್ಯಂ ಪ್ರಾಪ್ಯ ಜನ್ಮ ನ ವೇದ ಚೇತ್ ।
ವಿನಷ್ಟಿರ್ಮಹತೀ ತಸ್ಯ ಚೇತಿ ಪ್ರೋಕ್ತಂ ತತಃ ಪರಂ ॥ ೨೦೪ ॥

ಅಧ್ಯಾತ್ಮಾಧಿದೇವಭಿದಾ ವಿದ್ಯಾಸಾಧನಮೇವ ಚ ।
ಬ್ರಹ್ಮಜ್ಞಾನೇನ ಪಾಪಾನಾಂ ಹಾನಿಸ್ತತ್ಪ್ರಾಪ್ತಿರಿತ್ಯಯಂ ॥ ೨೦೫ ॥

---

೨೦೨. ಸರ್ವ ಪ್ರಾಣಿಗಳಿಗೂ ಗಾಢಸುಷುಪ್ತಿಯ ಉತ್ತರ ಕ್ಷಣದಲ್ಲಿ ಸತ್ ಪದಾರ್ಥವು ಇದೆಯೆಂದು ಅನುಭವಕ್ಕೆ ಬರುವುದರಿಂದಲೂ ವಿದಿತ ಅವಿದಿತಗಳಿಗೆ ಪರವಾದುದು ಬ್ರಹ್ಮವು. ಅದು ಇಂದ್ರಿಯಾದಿಗಳಿಗೆ ವಿಷಯವಾಗುವುದಿಲ್ಲವು ಎಂಬದಾಗಿ ಹೇಳಿ ಆ ಬ್ರಹ್ಮಶೋಧನೆಯನ್ನು ಮಾಡಿದೆ.

೨೦೩. ಸರ್ವದರ್ಶಿಯೂ ಸರ್ವ ಮಾತೃವೂ ದೇವತೆಗಳಿಗೆ ಜಯಕಾರಕನೂ ಆಗಿರುವವನೇ ಆ ಬ್ರಹ್ಮನು. ಅದು ದೇವತೆಗಳಿಗೂ ತಿಳಿಯುವುದಿಲ್ಲ. ಹಾಗೆ ತಿಳಿಯಲು ಗುರುವಿನ ಜ್ಞಾನವೇ ಕಾರಣವು. ಅವನಿಂದ ತಿಳಿದು ಉಪಾಸನೆ ಮಾಡಬೇಕು.

೨೦೪. ಈ ಬ್ರಹ್ಮವಿದ್ಯೆಯೊಂದೇ ವಿದ್ಯೆಯೆನಿಸಿಕೊಳ್ಳುವುದು ಉಳಿದುವು ವಿದ್ಯೆಯೆಂದೆನಿಸಿಕೊಳ್ಳುವುದಿಲ್ಲ. ಮನುಷ್ಯ ಜನ್ಮವನ್ನು ಹೊಂದಿ ಈ ವಿದ್ಯೆಯನ್ನು ಹೊಂದದಿದ್ದರೆ ಅವನಿಗೆ ಬಹು ನಷ್ಟವಾಗುತ್ತದೆ. ಎಂಬದಾಗಿ ಕೊನೆಗೆ ಹೇಳಿದೆ.

೨೦೫. ಅಧ್ಯಾತ್ಮ ವಿದ್ಯೆಯೆಂದೂ ಅಧಿದೇವ ವಿದ್ಯೆಯೆಂದೂ ಈ ಬ್ರಹ್ಮನನ್ನು ತಿಳಿಯಲು ಸಾಧನವಾದ ಎರಡು ವಿದ್ಯೆಗಳಿರುವುವು. ಈ ವಿದ್ಯೆಗಳಿಂದ ಬ್ರಹ್ಮವು ತಿಳಿಯುತ್ತದೆ. ಬ್ರಹ್ಮಜ್ಞಾನದಿಂದ ಪಾಪವು ನಶಿಸಿ ಹೋಗುತ್ತದೆ. ಅನಂತರ ಬ್ರಹ್ಮಪ್ರಾಪ್ತಿಯಾಗುವುದು. ಇದೇ ಮಾರ್ಗವು.

ಬ್ರಹ್ಮಣೋ ಮಹಿಮಾ ಶ್ರುತ್ಯಾ ಕೀರ್ತಿತೋ ವ್ಯಾಸತಃ ಸ್ವಯಂ ।
ತದ್ರಾಮೇತಿ ಗುರೋಃ ಜ್ಞೇಯಂ ನಾನ್ಯಥಾ ಗ್ರಂಥಕೋಟಿಭಿಃ ॥ ೨೦೬ ॥

ಮುಂಡಕೇಪಿ ಪರಾ ವಿದ್ಯಾ ವಿಶಯೌ ಬ್ರಹ್ಮ ಬ್ರಹ್ಮಣಃ ।
ಸೃಷ್ಟಿಶ್ಚಾನೇಕದೃಷ್ಟಾಂತೈರುಕ್ತಾ ತಸ್ಮಿಂಶ್ಚ ಸಂಸ್ಥಿತಾ ॥ ೨೦೭ ॥

ಲಯಶ್ಚಾಪಿ ಹಿ ತತ್ರೈವ ವಿಶ್ವಂ ಸರ್ವಂ ಹಿ ತನ್ಮಯಂ ।
ತಾರೇಣ ಧನುಷಾ ವೇದ್ಯಂ ಲಕ್ಷ್ಯ ಆತ್ಮಾರ್ಪಣಂ ತಥಾ ॥ ೨೦೮ ॥

ಮಹಿಮಾತಿಶಯಸ್ತಸ್ಯ ತದ್ಭಾಸೌ ಭಾತ್ಯಶೇಷಕಂ ।
ಅಗೋಚರಂ ಚ ಸರ್ವೇಷಾಂ ಧ್ಯಾಯಮಾನೋನುಪಶ್ಯತಿ ॥ ೨೦೯ ॥

---

೨೦೬. ಬ್ರಹ್ಮನ ಮಹಿಮೆಯನ್ನು ಶ್ರುತಿಯಲ್ಲಿ ಅನುಲೋಪ ಪ್ರತಿಲೋಪಗಳಿಂದ ಹೇಳಿರುವುದು. ಅಂತಹ ಬ್ರಹ್ಮನೇ ರಾಮನೆಂಬುದಾಗಿ ಗುರುವಿನಿಂದ ತಿಳಿಯಬೇಕು. ಕೋಟಿ ಗ್ರಂಥಗಳನ್ನು ಓದಿದರೂ ಬೇರೆ ರೀತಿಯಿಂದ ಆ ಬ್ರಹ್ಮ ಜ್ಞಾನವಾಗುವುದೇ ಇಲ್ಲ.

೨೦೭. ವೇದವೇದಾಂಗಗಳನ್ನು ಓದಿ ತಿಳಿದು ಕೊಂಡರೆ ಅದು ಅಪರಾ ವಿದ್ಯೆ. ಬ್ರಹ್ಮನನ್ನು ತಿಳಿಯುವ ವಿದ್ಯೆ ಪರಾ ವಿದ್ಯೆ. ಈ ಮುಂಡಕೋಪನಿಷತ್ತು ವೇದ ವಿದ್ಯೆಗೂ ಬ್ರಹ್ಮ ವಿದ್ಯೆಗೂ ಸಾಮ್ಯ ವೈಷಮ್ಯಗಳನ್ನು ಹೇಳುತ್ತಾ ವಿಷಯವನ್ನು ತೆಗೆದುಕೊಂಡಿದೆ. ಅದರಲ್ಲಿ ಅನೇಕ ದೃಷ್ಟಾಂತಗಳಿಂದ ಸೃಷ್ಟಿಯ ವಿಷಯವನ್ನೇ ಹೇಳಿದೆ. ಆ ಸೃಷ್ಟಿಯಲ್ಲಿಯೇ ಬ್ರಹ್ಮನಿರುವನು.

೨೦೮. ಆ ಸೃಷ್ಟವಾದ ಸೃಷ್ಟಿಗೂ ಲಯವನ್ನು ವರ್ಣಿಸಿದೆ. ಅದರಂತೆಯೇ ಆ ಉಪನಿಷತ್ತಿನಲ್ಲಿಯೇ ಪ್ರಪಂಚವೆಲ್ಲವೂ ಆ ಬ್ರಹ್ಮನ ಮಯವೆಂದು ವಿವರಿಸಲ್ಪಟ್ಟಿದೆ. ತಾರ ವಿದ್ಯೆಯೆಂಬ ಧನುಸ್ಸನ್ನೂ ಹೊಂದಿ ಅದನ್ನು ಆತ್ಮವೆಂಬ ಲಕ್ಷ್ಯದಲ್ಲಿ ನಿಯೋಜಿಸಬೇಕು.

೨೦೯. ಆ ಬ್ರಹ್ಮನ ಕಾಂತಿಯಿಂದ ಎಲ್ಲವೂ ಬೆಳಗುತ್ತವೆ. ಯಾವುದಕ್ಕೂ ತಿಳಿಯದೆ ಎಂದರೆ ಗೋಚರಿಸದೆ ಇರುವುದನ್ನು ಧ್ಯಾನದಿಂದ ನೋಡಬಹುದು ಎಂದು ಆ ಬ್ರಹ್ಮನ ಮಹಿಮೆಯು ವರ್ಣಿತವಾಗಿದೆ.

ವೇದಾ ಹಿ ತಂ ಗುಹಾಯಾಂ ಯೋऽ ವಿದ್ಯಾಗ್ರಂಥಿಂ ಭಿನತ್ತಿ ಸಃ ।
ಕೃಪಯಾ ವೃಣುತೇ ಬ್ರಹ್ಮ ಯಂ ಕಂ ಚನ ಸುಸಾಧಕಂ ॥ ೨೧೦ ॥

ತೇನೈವ ಲಭ್ಯತೇ ಸಾಕ್ಷಾನ್ನಾನ್ಯಥಾ ಯತ್ನತೋಽಪಿ ಹಿ ।
ಅಥವಾ ಯಂ ಪರೇಶಾನಂ ಪ್ರಾಪ್ತುಮಿಚ್ಛತಿ ಸಾಧಕಃ ॥ ೨೧೧ ॥

ತೇನೈವ ಹೇತುನಾ ಲಭ್ಯೋ ನಾನ್ಯಥಾ ಸಾಧನಾಂತರೈಃ ।
ಬಲಹೀನಾದಿಭಿರ್ನೇದಂ ಲಭ್ಯತೇ ತೈಸ್ತು ಲಭ್ಯತೇ ॥ ೨೧೨ ॥

ಸನ್ಯಾಸಯೋಗತಸ್ಸತ್ತ್ವಂ ಶುದ್ಧಂ ಯೇಷಾಂ ವಿಚಾರತಃ ।
ತೇ ಪರಾಂತೇನ ಕಾಲೇನ ಪರಿಮುಚ್ಯಂತಿ ನಾನ್ಯಥಾ ॥ ೨೧೩ ॥

---

೨೧೦. ಈ ಬ್ರಹ್ಮನನ್ನು ಯಾವನು ಹೃದಯವೆಂಬ ಗುಹೆಯಲ್ಲಿ ತಿಳಿಯುತ್ತಾನೆಯೋ ಅವನು ಅವಿದ್ಯಾಗ್ರಂಥಿಯನ್ನು ನಾಶವಾಡಿಕೊಳ್ಳುತ್ತಾನೆ. ಯಾವನಾದರೂ ಸಾಧಕನಾದ ಗುರುವನ್ನು ಹೊಂದಿದರೆ ಅವನ ಅನುಗ್ರಹದಿಂದ ಆ ಬ್ರಹ್ಮವು ಸಿಕ್ಕುತ್ತದೆ.

೨೧೧. ಆ ಸಾಧಕ ಗುರುವಿನಿಂದ ನವುಗೆ ಬ್ರಹ್ಮವು ಲಭಿಸಬೇಕೇ ಹೊರತು ಬೇರೆಯ ರೀತಿಯಾದ ಕೋಟಿ ಯತ್ನಗಳನ್ನು ಮಾಡಿದರೂ ಆ ಬ್ರಹ್ಮವು ನವುಗೆ ಸಿಕ್ಕುವುದಿಲ್ಲ

೨೧೨. ಒಂದು ವೇಳೆ ಗುರುವು ಸಿಕ್ಕ ಬೇಕಾದರೂ ಆ ಬ್ರಹ್ಮದ ಮಹತ್ತಿನಿಂದ ಸಿಕ್ಕಬೇಕೇ ಹೊರತು ಬಹುವಾಗಿ ಕಷ್ಟಪಟ್ಟರೂ ಸಿಕ್ಕುವುದಿಲ್ಲ. ಅಲ್ಲದೆ ಬ್ರಹ್ಮವನ್ನು ಸಾಧನೆಮಾಡುವುದರಿಂದಲೂ ಕೂಡ ಈ ಬ್ರಹ್ಮವು ಸಾಕ್ಷಾತ್ಕಾರವಾಗುವುದು. ಅದಕ್ಕೆ ಬಲವಿರಬೇಕು. ಬಲಹೀನರಿಂದ ಹೊಂದಲು ಸಾಧ್ಯವೇ ಇಲ್ಲ.

೨೧೩. ಸನ್ಯಾಸವನ್ನು ಹೊಂದಿದರೆ ಅವರಿಗೆ ವಿಚಾರ ಶಕ್ತಿಯಿಂದ ಅವರ ಜ್ಞಾನವು ಶುದ್ಧವಾಗುತ್ತದೆ. ಅವರೂ ಕೂಡ ಬ್ರಹ್ಮನ ಸಂಧಾನದಿಂದಲೇ ಬಹು ಕಾಲದಮೇಲೆ ಮೋಕ್ಷವನ್ನು ಹೊಂದುತ್ತಾರೆ. ಎಂದರೆ ಬ್ರಹ್ಮವನ್ನು ತಿಳಿದು ಅದರಲ್ಲಿ ಸೇರುತ್ತಾರೆ. ಅವರಿಗೂ ಈ ಸಾಧನೆಯನ್ನು ಬಿಟ್ಟು ಬೇರೆ ಮಾರ್ಗವು ಇರುವುದೇ ಇಲ್ಲ.

ಯಥಾ ನದ್ಯಸ್ಸಮುದ್ರೇಸ್ತಂ ಗಚ್ಛಂತಿ ನಾಮರೂಪತಃ ।
ತಥಾ ವಿದ್ವಾನ್ಕಲಾದೇವ ಪ್ರತಿಷ್ಠಾಯಾಂ ಚ ಸಂಕ್ಷಯಂ ॥ ೨೧೪ ॥

ಪ್ರಾರಬ್ಧಕರ್ಮಣಾಂ ಸಾಕ್ಷಾನ್ಮೋಕ್ಷಮೇತ್ಯಪುನರ್ಭವಂ ।
ಯೋ ವೇದ ಪರಮಂ ಬ್ರಹ್ಮ ಸ ಬ್ರಹ್ಮಭವತೀತಿ ಚ ॥ ೨೧೫ ॥

ಸರ್ವಂ ಸಮುದಿತಂ ಯಸ್ಮಾತ್ತದ್ರಾಮಬ್ರಹ್ಮಚಿದ್ಘನಂ ।
ಪೂರ್ಣಮದಃ ಪೂರ್ಣಮಿತಿ ಕಂಡಿಕಾಯಾಂ ಸಮಾಸತಃ ॥ ೨೧೬ ॥

ಆದಿಮಧ್ಯಾವಸಾನೇಷು ಪೂರ್ಣಂ ಬ್ರಹ್ಮೈವ ನಿಶ್ಚಿತಂ ।
ಪೂರ್ಣಂ ಪರೋಕ್ಷರೂಪೇಣ ಜಾತಂ ತತ್ಪಥಸಂಜ್ಞಿತ ॥ ೨೧೭ ॥

೨೧೪-೨೧೫. ನದಿಗಳೆಲ್ಲವೂ ಸಮುದ್ರವನ್ನು ಸೇರಿದ ಮೇಲೆ ತಮ್ಮ ತಮ್ಮ ನಾಮ ರೂಪಗಳನ್ನು ಹೇಗೆ ಬಿಟ್ಟು ಬಿಡುವುವೋ ಅಂತೆಯೇ ಬ್ರಹ್ಮಸಾಧಕನಾದ ವಿದ್ವಾಂಸನು ಪ್ರಾಣಾದಿ ಕಲೆಗಳನ್ನೂ ಇಂದ್ರಿಯಾದಿಗಳೆನ್ನೂ ಚಿತ್ತದಲ್ಲಿ ಸೇರಿಸಿ ಅವುಗಳ ನಾಮರೂಪಗಳನ್ನು ನಾಶಮಾಡಿಕೊಂಡು ಪ್ರಾರಬ್ಧ ಕರ್ಮಗಳನ್ನು ನಾಶಮಾಡಿಕೊಳ್ಳುತ್ತಾನೆ. ಆಗ ಮೋಕ್ಷವು ಬರುತ್ತದೆ. ಮತ್ತು ಮತ್ತೆ ಹುಟ್ಟುವುದಿಲ್ಲ. ಯಾವನು ಪರಬ್ರಹ್ಮನನ್ನು ತಿಳಿದಿರುವನೋ ಅವನು ಬ್ರಹ್ಮನೇ ಆಗುತ್ತಾನೆ. ಎಲ್ಲವೂ ಕೂಡ ಈ ಬ್ರಹ್ಮನಲ್ಲಿ ಸೇರಿ ಹೋಗಿರುವುವು. ಆದ್ದರಿಂದಲೇ ಇವನನ್ನು ಬ್ರಹ್ಮವೆಂದೆನ್ನುತ್ತಾರೆ. ಆ ಬ್ರಹ್ಮವೇ ಚಿತ್ ಸ್ವರೂಪನಾದ ರಾಮನು.

೨೧೬-೨೧೭. ಪೂರ್ಣಮದಃ ಪೂರ್ಣಂ ಎಂಬುದಾಗಿ ಕಂಡಿಕೆಯಲ್ಲಿ ಶೇರಿಸಿ ಹೇಳಿದೆ. ಅದಕ್ಕೆ ಆದಿ, ಮಧ್ಯ, ಅವಸಾನಗಳಲ್ಲಿ ಪೂರ್ಣವಾದುದು ವಾದರ್ಥ. ಅದು ಬ್ರಹ್ಮವೇ ಎಂದು ನಿಶ್ಚಿತವಾಗಿದೆ. ಪೂರ್ಣವೆಂದರ ನಮಗೆ ತಿಳಿಯದಂತೆ ಹುಟ್ಟಿರುವುದು ಎಂದರ್ಥವೂ ಆಗುತ್ತದೆ.

ಪ್ರತ್ಯಕ್ಷಂ ತ್ವಂ ಪದಾರ್ಥೇನ ಸ್ಥಿತಂ ಭೂತಮಯೇಷು ಚ ।
ಪೂರ್ಣಾನ್ನಿರೂಪಕಾತ್ಪೂರ್ಣಂ ಸೋಪಾಧಿಕಮಿಹೋಚ್ಯತೇ ॥ ೨೧೮ ॥

ತತ್ಪೂರ್ಣಂ ಶಾಸ್ತ್ರಶಾಸ್ತೃಭ್ಯಾಂ ಸ್ವಾವಿದ್ಯಾಹಾನತಿಃ ಸ್ವಯಂ ।
ಸ್ವಾಖಂಡೈಕರಸಂ ಲಕ್ಷ್ಯಮಾದಾಯೋಪನಿಷದ್ಗಿರಾ ॥ ೨೧೯ ॥

ನಿರ್ಗತೋಪಾಧಿಕಂ ಸರ್ವಂ ಪೂರ್ಣಮೇವಾವಶಿಷ್ಯತೇ ।
ತದ್ರಾಮ ಪರಮಂ ಬ್ರಹ್ಮ ಯೋಗಿಧ್ಯೇಯಂ ಸನಾತನಂ ॥ ೨೨೦ ॥

ಸರ್ವಧರ್ಮನಿಷೇಧೇನ ಶ್ರುತಿಗೀತಂ ಪರಾತ್ಪರಂ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥ ೨೨೧ ॥

---

೨೧೮. ನೀನು ಎಂದು ಪ್ರತ್ಯಕ್ಷವಾಗಿ ಕಾಣುವ ಎಲ್ಲಾ ಪ್ರಾಣಿಗಳಲ್ಲಿಯೂ ಇರುವ ಆ ನೀನು ಎಂದೆನ್ನಿಸಿಕೊಳ್ಳುವ ಪದಾರ್ಥವು ಪೂರ್ಣವಾದ ಆ ಪರಮಾತ್ಮನೇ. ಆದರೆ ದೇಹವು ಉಪಾಧಿಯಾಗಿ ಬೇರೆ ಇರುವಂತೆ ಕಾಣುತ್ತದೆ. ಉಪಾಧಿಯು ನಾಶವಾದ ಮೇಲೆ ಎಲ್ಲವೂ ಒಂದೇ ಆಗುತ್ತದೆ.

೨೧೯. ಪೂರ್ಣವಾಗಿರುವ ಆ ನೀನು ಎಂಬ ಪದಾರ್ಥವು ಅದು ಮಾಯೋಪಾಧಿಕವಾದುದು. ಶಾಸ್ತ್ರಾಧ್ಯಯನದಿಂದಲೂ ಗುರುವಿನ ಉಪದೇಶದಿಂದಲೂ ಉಪಾಧಿಕವಾದ ಆ ಮಾಯೆಯು ಹೋದರೆ ಅಖಂಡವಾಗಿರುವ ಆ ಏಕರಸವಾದ ಪೂರ್ಣವಾದ ಬ್ರಹ್ಮನಾಗುತ್ತಾನೆ. ಆ ಪೂರ್ಣ ಪದಾರ್ಥವೇ ಬ್ರಹ್ಮನಾದ ರಾಮನು ಅವನೇ ಯೋಗಿಧ್ಯೇಯನಾದ ಸನಾತನನು.

೨೨೦-೨೨೧. ಎಲ್ಲಾ ಧರ್ಮಗಳನ್ನೂ ಹೇಳುವಾಗ ಒಂದನ್ನು ಹೇಳಿ ಅದಲ್ಲವೆಂದೂ ಮತ್ತೊಂದನ್ನೂ ಹೇಳಿ ಅದೂ ಅಲ್ಲವೆಂದೂ ಹೇಳಿ ಕೊನೆಗೆ ಒಂದೂ ಅಲ್ಲವೆಂದೂ ನಿಷೇಧಿಸಿ ಶ್ರುತಿಯು ಕೊನೆಗೆ ಆ ಪರಾತ್ಪರನಾದ ಬ್ರಹ್ಮನನ್ನು ಹೇಳುತ್ತದೆ. ಆ ಬ್ರಹ್ಮನೇ ನಾನು. ನಾನೇ ಸಕಲ ಪ್ರಪಂಚವನ್ನೂ ಸೃಷ್ಟಿಸುವವನು. ನಾಶಮಾಡುವವನೂ ನಾನೇನೇ.

ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ ೨೨೨ ॥

ಇತ್ಯಾಹ ಭಗವಾನ್ ಸಾಕ್ಷಾದ್ವೇದೇಽಪಿ ತಜ್ಜಲಾನಿತಿ ।
ಏವಂ ಸರ್ವಾಸು ಶ್ರುತಿಷು ಸ್ಮೃತ್ಯಾದಿಷು ಯದೀರಿತಂ ॥ ೨೨೩ ॥

ತದ್ರಾಮ ಪರಮಂ ಬ್ರಹ್ಮ ಯೋಗಿಗಮ್ಯಮನಾಮಯಂ ।
ಅನಂತರಾಮರೂಪೈಶ್ಚ ವಿಶ್ವಾಕಾರಂ ಸ್ವಮಾಯಯಾ । ॥ ೨೨೪ ॥

ಭೂತ್ವಾ ಸರ್ವೇಷು ಭೂತೇಷು ವ್ಯಾಪಕಂ ಭೂತಚಾಲಕಂ ।
ಸ್ಫುಟಮಪ್ಯಸ್ಫುಟಂ ತೇಷಾಮಜ್ಞಾನಾಂ ಸ್ವಾತ್ಮನಸ್ಸದಾ ॥ ೨೨೫ ॥

---

೨೨೨ ಎಲೈ ಧನಂಜಯನೇ! ನನಗಿಂತಲೂ ದೊಡ್ಡದಾದುದು ಮತ್ತೊಂದಿಲ್ಲವೇ ಇಲ್ಲ. ಒಂದು ದಾರದಲ್ಲಿ ಅನೇಕ ಮಣಿಗಳು ಕೋದು ಕೊಂಡಿರುವಂತೆ ನನ್ನಲ್ಲಿ ಈ ಜಗತ್ತೇ ಕೋದು ಕೊಂಡಿರುವುದು.

೨೨೩. ಈ ರೀತಿಯಾಗಿ ಸಾಕ್ಷಾದ್ಭಗವಂತನೇ ಅಪ್ಪಣೆಕೊಡಿಸಿರುವನು. ವೇದದಲ್ಲಿಯೂ "ತಜ್ಜಲಾನಿತಿಶಾಂತ ಉಪಾಸೀತ" ಎಂದು ಮೊದಲುಗೊಂಡು ವಿವರಿಸಿದೆ. ಇದೇ ರೀತಿಯಾಗಿ ಎಲ್ಲಾ ಸ್ಮೃತಿಗಳಲ್ಲಿಯೂ ಶ್ರುತಿಗಳಲ್ಲಿಯೂ ವಿವರಿಸಿದೆ.

೨೨೪. ಹೀಗೆ ಎಲ್ಲವೂ ಯಾವುದನ್ನು ವಿವರಿಸಿದೆಯೋ ಆ ಬ್ರಹ್ಮನೇ ಶ್ರೀರಾಮನು ಯೋಗಿಗಮ್ಯನು. ಅನಂತನು. ಆ ರಾಮನೆಂಬ ಬಹುವಾದ ಹೆಸರುಗಳನ್ನು ರೂಪಗಳನ್ನೂ ಹೊಂದಿರುವನು. ಅವನೇ ತನ್ನ ಮಾಯೆಯಿಂದ ಪ್ರಪಂಚಸ್ವರೂಪನಾಗಿರುವನು.

೨೨೫. ಈ ಸ್ವಾಮಿಯೇ ಎಲ್ಲಾ ಪ್ರಾಣಿಗಳಲ್ಲಿಯೂ ವ್ಯಾಪಿಸಿಕೊಂಡಿರುತ್ತ ಆ ಪ್ರಾಣಿಗಳು ತಮ್ಮ ತಮ್ಮ ಕ್ರಿಯೆಗಳನ್ನು ಮಾಡುವಂತೆ ಮಾಡುತ್ತಾನೆ. ಆ ಸ್ವಾಮಿಯು ಸ್ಫುಟವಾಗಿ ಕಾಣುತ್ತಿದ್ದರೂ ಅಜ್ಞರಾದವರಿಗೆ ಗೋಚರನಾಗುವುದಿಲ್ಲ.

ಬ್ರಹ್ಮಜ್ಞಾನೇ ಪರೋ ಹೇತುಸ್ಸರ್ವೇಽಪಿ ಬಹಿರಕ್ಷಕಾಃ ।
ಮಾನವಾಸ್ಸಂತಿ ತೇನೇದಂ ಚಿದ್ಬ್ರಹ್ಮ ನ ಪ್ರಕಾಶತೇ ॥ ೨೨೬ ॥

ಪರಾಂಚಿ ಖಾನಿ ಪ್ರಭುಣಾ ಸೃಷ್ಟಾನಿ ಚೇಕ್ಷತೇ ಪರಾಕ್ ।
ವೀಕ್ಷಂತೇ ನಾಂತರಾತ್ಮಾನಂ ಪ್ರಸಿದ್ಧಂ ಶ್ರುತ್ಯುದೀರಿತಂ ॥ ೨೨೭ ॥

ಸರ್ವೋಽಪಿ ಮನುಜೋ ದಾಸೋ ವಿತ್ತಸ್ತ್ರೀತನುಜಾತ್ಮನಾಂ ।
ಕಿಂ ವಾ ಸ್ವಃ ಕಾಮದಾಸೋಽಯಂ ತೇನಾಂತಶ್ಚಿನ್ನ ಕಾಶತೇ ॥ ೨೨೮ ॥

ಯದಿ ಭಾಯಾತ್ಸದಾನಂದಃ ಸ್ವಾತ್ಮಾ ಸಾಕ್ಷೀ ಗುಣಾತ್ಪರಃ ।
ತದಾ ಕಿಂ ನಾಮ ರೋಚೇತ ವ್ಯಾಸಾದನ್ಯನ್ನರಸ್ಯ ಹಿ ॥ ೨೨೯ ॥

---

೨೨೬. ಬ್ರಹ್ಮನನ್ನು ತಿಳಿಯದಿರುವುದಕ್ಕೆ ಮತ್ತೊಂದು ಕಾರಣವುಂಟು. ಜನರೆಲ್ಲರೂ ಬಹಿರಿಂದ್ರಿಯಗಳನ್ನೂ ಅವುಗಳ ವ್ಯಾಪಾರಗಳನ್ನೂ ರಕ್ಷಿಸಿ ಕೊಳ್ಳುವರೇ ಹೊರತು ಅಂತರಿಂದ್ರಿಯವನ್ನು ಬಲಪಡಿಸಿಕೊಂಡು ಅದಕ್ಕೆ ವಿಷಯವಾದ ಬ್ರಹ್ಮವನ್ನು ಲಕ್ಷ್ಯದಲ್ಲಿಡುವುದಿಲ್ಲ. ಆದ್ದರಿಂದ ಅಂಥವರಿಗೆ ಈ ಚಿತ್‌ಬ್ರಹ್ಮವು ಪ್ರಕಾಶಿಸುವುದಿಲ್ಲ.

೨೨೭. ಆ ಸರ್ವಪ್ರಭುವಾದ ಸ್ವಾಮಿಯು ಹೊರಗಿನ ವಿಷಯಗಳನ್ನು ತಿಳಿಯುವುದಕ್ಕೆ ಬಹಿರಿಂದ್ರಿಗಳನ್ನು ಸೃಷ್ಟಿಸಿರುವಂತೆಯೇ ಪರಮಾತ್ಮನನ್ನು ತಿಳಿಯುವುದಕ್ಕೆ ಅಂತರಿಂದ್ರಿಯಗಳನ್ನೂ ಸೃಷ್ಟಿಸಿರುವನು. ಆ ಇಂದ್ರಿಯಗಳಿಂದ ಒಳಗಡೆಗೂ ನೋಡಬಹುದು. ಆದರೂ ಪ್ರಸಿದ್ಧನೂ ಶ್ರುತಿಗಳಲ್ಲಿ ಹೇಳಲ್ಪಟ್ಟವನೂ ಆದ ಆ ಸ್ವಾಮಿಯನ್ನು ನೋಡುವುದೇ ಇಲ್ಲ.

೨೨೮. ಪ್ರತಿಯೊಬ್ಬನೂ ಅವನವನ ಯೋಗ್ಯತೆಗನುಗುಣವಾಗಿ ಅವನವನ ಹೆಣ್ಣು, ಹೊನ್ನು, ಮಕ್ಕಳುಗಳಿಗೆ ದಾಸನಾಗಿರುತ್ತಾನೆ. ಆದುದರಿಂದ ಈ ಜೀವನು ತನ್ನ ಕಾಮಕ್ಕೆ ಅಧೀನನಾದಂತಾಯಿತು. ಆದ್ದರಿಂದಲೇ ಒಳಗಿರುವ ಈ ಚಿತ್‌ಬ್ರಹ್ಮವು ಪ್ರಕಾಶಿಸುವುದಿಲ್ಲ.

೨೨೯. ಸರ್ವಸಾಕ್ಷಿಯೂ ಗುಣಾತೀತನೂ ಆನಂದಮಯನೂ ಆದ ಆತ್ಮನು ಒಂದುವೇಳೆ ಅವನ ಸುಯೋಗದಿಂದ ಕಂಡರೆ ಆಗ ಅವನಿಗೆ ಪ್ರಪಂಚ ದಲ್ಲಿರುವುದು ಯಾವುದು ತಾನೆ ರುಚಿಸುತ್ತದೆ! ಹೊರಗಿನ ದಾವುದೂ ರುಚಿಸುವುದಿಲ್ಲ.

ಆತ್ಮಾನಂ ಚೇದ್ವಿಜಾನೀಯಾದಯಮಸ್ಮೀತಿ ಪೂರುಷಃ ।
ಕಿಮಿಚ್ಛನ್ ತಸ್ಯ ಕಾಮಾಯ ಶರೀರಮನುಸಂಜ್ವರೇತ್ ॥ ೨೩೦ ॥

ಇತ್ಯಾಹ ಚ ಶ್ರುತಿಸ್ಸಾಧ್ವೀ ಬೃಹದಾರಣ್ಯಕಾ ಸ್ವಯಂ ।
ಯತ್ತ್ವಾತ್ಮರತಿರೇವಂ ಸ್ಯಾದಾತ್ಮತೃಪ್ತಶ್ಚ ಮಾನವಃ ॥ ೨೩೧ ॥

ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ।
ಇತಿ ಸಾಕ್ಷಾಜ್ಜಗನ್ನಾಥೋಽರ್ಜುನಾಯ ಪ್ರೋಕ್ತವಾನ್ ಸ್ವಯಂ ॥ ೨೩೨ ॥

ಭೋಗಾಸಕ್ತಃ ಪುಮಾನ್ಪೂರ್ವಮೇಕಾಕೀ ರಮತೇ ನ ಚ ।
ಏಷಣಾತ್ರಯಸಂಬದ್ಧೋ ಯತತೇಽರ್ಥಾಯ ನಿತ್ಯದಾ ॥ ೨೩೩ ॥

---

೨೩೦. ಪುರುಷನು ಆ ಆತ್ಮಸಂದರ್ಶನವನ್ನು ಪಡೆದರೆ ಆಗ ಸೋಹಂ ಭಾವವು ಬಂದು ಅವನಿಗೆ ಪ್ರಪಂಚದಲ್ಲಿ ಮತ್ತಾವುದೂ ಬೇಕೇ ಆಗುವುದಿಲ್ಲ. ಆಗ ಯಾವುದಕ್ಕೆ ತಾನೇ ಈತನು ತನ್ನ ದೇಹವನ್ನು ತೊಂದರೆ ಗೀಡುಮಾಡು ಬೇಕು ?

೨೩೧. ಹೀಗೆಂದು ಬೃಹದಾರಣ್ಯಕಶ್ರುತಿಯು ಹೇಳುತ್ತದೆ. ಯಾವನು ಆತ್ಮವನ್ನು ತಿಳಿದು ಅದನ್ನು ಅನುಭವಿಸುತ್ತಾ ತೃಪ್ತನಾಗಿರುತ್ತಾನೆಯೋ ಅವನು ಆತ್ಮತೃಪ್ತನಾಗಿಯೇ ಇರುವನು.

೨೩೨. ಯಾವನು ಆತ್ಮಸುಖವನ್ನು ಅನುಭವಿಸುವನೋ ಅವನು ಆತ್ಮನಲ್ಲಿಯೇ ತುಷ್ಟನಾಗಿರುವನು. ಅವನಿಗೆ ಹೊರಗಿನದರಲ್ಲಾವುದರಲ್ಲೂ ಯಾವ ವಿಧವಾದ ಕೆಲಸವೂ ಇರುವುದೇ ಇಲ್ಲ. ಎಂಬದಾಗಿ ಜಗನ್ನಾಥನಾದ ಕೃಷ್ಣನು ಅರ್ಜುನನಿಗೆ ಬೋಧಿಸಿರುವನು.

೨೩೩. ಭೋಗದಲ್ಲಿ ಆಸಕ್ತನಾದ ಮನುಷ್ಯನು ತನ್ನ ಭೋಗದ ವಿಷಯದಲ್ಲಿ ಇರುವನೇ ಹೊರತು ಏಕಾಕಿಯಾಗಿದ್ದುಕೊಂಡು ಯೋಚಿಸುವುದೇ ಇಲ್ಲ. ಅವನು ಪುತ್ರೇಷಣ. ದಾರೇಷಣ, ವಿತ್ತೇಷಣಗಳೆಂಬ ಏಷಣಾತ್ರಯಗಳಿಗೆ ಅಧೀನನಾಗಿ ಯಾವಾಗಲೂ ಅವುಗಳಿಗೆ ಪ್ರಯತ್ನಪಡುತ್ತಾನೆ.

ನೃಲೋಕೇಽಪುತ್ರಿಣಾಂ ಶ್ರುತ್ವಾ ಪುತ್ರೋತ್ಪಾದನತತ್ಪರಃ |
ಜಾಯಾಂ ಸಂಪಾದಯತ್ಯಾದಾವತಿಯತ್ನೇನ ಮೂಢಧೀಃ ॥ ೨೩೪ ॥

ಪುತ್ರಾನುತ್ಪಾದ್ಯ ಕ್ಲೇಶೇನ ದೇವತೀರ್ಥಾದಿಸೇವಯಾ |
ಕುಟುಂಬಭರಣಾರ್ಥಂ ಚ ಯಾಗಾರ್ಥಂ ವಾ ಧನೇಚ್ಛಯಾ ॥ ೨೩೫ ॥

ಅನಿಶಂ ದಹ್ಯತೇ ಚಿತ್ತೇ ನ ಪ್ರಾಪ್ನೋತಿ ಯಥೇಪ್ಸಿತಂ |
ಶಾಸ್ತ್ರಜ್ಞೋಽಪಿ ಸತ್ಕ್ರಿಯಾವಾನರ್ಥದಾಸಃ ಪ್ರತಿಗ್ರಹಂ ॥ ೨೩೬ ॥

ಧನಿನಾಂ ಯಾತ್ಯಗವತೋ ಗ್ರಾಮೇ ಕೌಲೇಯಕೋ ಯಥಾ |
ಅವ್ಯುತ್ಪನ್ನಮತೀನಾಂ ತು ಕಾ ವಾರ್ತಾ ಸ್ವಾತ್ಮಚಿಂತನೇ ॥ ೨೩೭ ॥

---

೨೩೪. ಲೋಕದಲ್ಲಿ ಮಕ್ಕಳಿಲ್ಲದವನಾಗಿರಬಾರದು ಎಂಬುದನ್ನು ಕೇಳಿ ಮನುಷ್ಯನು ಆ ಮಕ್ಕಳನ್ನು ಹೊಂದುವುದರಲ್ಲಿ ಆಸಕ್ತನಾಗಿ ಹೆಂಡತಿಯನ್ನು ಸಂಪಾದಿಸಲು ದಡ್ಡತನದಿಂದ ಮೊದಲು ಪ್ರಯತ್ನಿಸುವನು. ಇದು ಅಜ್ಞಾನ ವಿಜೃಂಭಿತವು.

೨೩೫–೨೩೬. ಮದುವೆಯಾದಮೇಲೆಯೂ ಮಕ್ಕಳಾಗದಿದ್ದರೆ ದೇವತೆಗಳನ್ನೂ ತೀರ್ಥವನ್ನೂ ಸೇವಿಸಿ ವ್ರತಗಳನ್ನು ಮಾಡಿ ಬಹು ಕ್ಲೇಶದಿಂದ ಆ ಮಕ್ಕಳನ್ನು ಹೊಂದುತ್ತಾನೆ. ಅನಂತರ ಆ ಕುಟುಂಬವನ್ನು ಕಾಪಾಡುವುದಕ್ಕಾಗಲಿ ಇಲ್ಲದಿದ್ದರೆ ಯಾಗವನ್ನು ಮಾಡುವುದಕ್ಕಾಗಲಿ ಹಣವನ್ನು ಸಂಪಾದಿಸುವ ಆಶೆಯಿಂದ ಯಾವಾಗಲೂ ಮನಸ್ಸಿನಲ್ಲಿ ಶಾಂತಿಯಿಲ್ಲದೆ ದುಃಖಿಸುತ್ತಿರುತ್ತಾನೆ. ಆದರೂ ಬೇಕಾದುದನ್ನು ಹೊಂದುವುದೇ ಇಲ್ಲ. ಅನಂತರ ಆ ಹಣಕ್ಕೋಸ್ಕರವಾಗಿ ಮನುಷ್ಯನು ಶಾಸ್ತ್ರಜ್ಞನಾಗಿ ಒಳ್ಳೆಯ ಆಚಾರಶೀಲನಾಗಿದ್ದರೂ ಹಣಕ್ಕೆ ದಾಸನಾಗಿ ದಾನವನ್ನು ತೆಗೆದುಕೊಳ್ಳಲು ಪ್ರಯತ್ನಪಡುತ್ತಾನೆ.

೨೩೭. ಆಗ ಕಲ್ಲುಮುಳ್ಳುಗಳೆನ್ನದೆ ಬೆಟ್ಟಗುಡ್ಡಗಳೆನ್ನದೆ ಅಲ್ಲಿರುವ ಧನಿಕರ ಮನೆಗಳಿಗೆ ನಾಯಿಯಂತೆ ಅಲೆಯುತ್ತಿರುತ್ತಾನೆ. ಜ್ಞಾನಿಗಳೂ ಶಾಸ್ತ್ರಭಾಷ್ಯಗಳೂ ಇಂತಿರುವಾಗ ಬುದ್ಧಿಯಿಲ್ಲದೆ ದಡ್ಡರಾದವರು ಆತ್ಮಚಿಂತನೆಮಾಡುವುದರಲ್ಲಿ ಹೇಳತಕ್ಕದ್ದೇನಿರುವುದು.

ಅನೇಕಪುಣ್ಯಪುಂಜೈಸ್ಸತ್ಕುಲೇ ಜನ್ಮಾಪ್ಯ ಸಾಧುಭಿಃ ।
ಸಜ್ಜತೇ ಸದ್ಭಿರುಕ್ತೇನ ಮಾರ್ಗೇಣೇತಿ ಯದಾ ತದಾ ॥ ೨೩೮ ॥

ರಾಮ ಬ್ರಹ್ಮ ದರ್ಶನಾರ್ಥಂ ಮುದ್ರಾಂ ಸ್ವಾಂ ಪೂರಯತ್ಯತ ।
ಯುಕ್ತ್ಯಾ ಚ ದತ್ತಯಾ ಸದ್ಭಿರ್ನ ಸ್ವಯಾಮೂಲಯಾಕ್ವಚಿತ್ ॥ ೨೩೯ ॥

ತಂ ಪೂರಣಪ್ರಕಾರಂ ತು ಸಂಕ್ಷೇಪೇಣೋಚ್ಯತೇಧುನಾ ।
ಯಥಾ ಲೋಕೇಂಜನಂ ಸಮ್ಯಕ್ಸಂಪಾದ್ಯ ಪೂರ್ಯತೇಶೇಕ್ಷ್ಣಿ ಚ ॥ ೨೪೦ ॥

ನಿಧಿಃ ಪ್ರತ್ಯಕ್ಷತಸ್ತತ್ಯ ದರ್ಶನಂ ಯಾತಿ ನಾನ್ಯಥಾ ।
ಏವಮತ್ರಾಪಿ ತತ್ತುಲ್ಯಂ ಸಾಧನಂ ಯಚ್ಚತುಷ್ಟಯಂ ॥ ೨೪೧ ॥

ಸಂಪಾದ್ಯ ಚೇಕ್ಷತೇ ಶುದ್ಧಂ ರಾಮೇತಿ ಪದಮವ್ಯಯಂ ।
ಮಾಯಯಾವ್ಯಸಿತವರ್ಣಂ ಯದ್ಬ್ರಹ್ಮ ತತ್ಸಾಧನಂ ಯಥಾ ॥ ೨೪೨ ॥

---

೨೩೮. ಮನುಷ್ಯನು ಅಸಾಧುವಾದರೂ ಅನೇಕ ಜನ್ಮಗಳಲ್ಲಿ ಮಾಡಿರುವ ಪುಣ್ಯಗಳಿಂದ ಒಳ್ಳೆಯ ಕುಲದಲ್ಲಿ ಹುಟ್ಟುತ್ತಾನೆ. ಅವನು ಯಾವಾಗಲಾದರೂ ಒಂದುಸಲ ಸತ್ಪುರುಷರು ತೋರಿಸಿ ಹೇಳಿದ ಮಾರ್ಗದಲ್ಲಿ ಹೋಗುತ್ತಾನೆ.

೨೩೯. ಆ ಕಾಲದಲ್ಲಿ ಆ ಸಾಧುಗಳ ಸಹವಾಸದಿಂದ ಈ ರಾಮಮುದ್ರೆಯನ್ನು ಬರೆದು ಅಕ್ಷರಗಳನ್ನು ತುಂಬುತ್ತಾನೆ. ಅಥವಾ ಸತ್ಪುರುಷರಿಂದ ಆ ಮುದ್ರೆಯನ್ನು ಹೊಂದುತ್ತಾನೆ.

೨೪೦-೨೪೧. ಈ ಮುದ್ರೆಯ ಪೂರಣಪ್ರಕಾರವನ್ನು ಸಂಕ್ಷೇಪದಿಂದ ಹೇಳುತ್ತೇನೆ. ಜನಗಳು ಕಪ್ಪನ್ನು ಕಷ್ಟದಿಂದ ಹೊಂದಿ ತಮ್ಮ ಕಣ್ಣುಗಳಿಗೆ ಹಾಕಿಕೊಂಡು ನೋಡಿದರೆ ನಿಧಿಯು ಅವನಿಗೆ ಪ್ರತ್ಯಕ್ಷವಾಗುತ್ತದೆಯೋ ಹೊರತು ಬೇರೆಯ ರೀತಿಯಿಂದ ಕಾಣುವುದಿಲ್ಲ. ಆದರಂತೆಯೇ ಈ ಮುದ್ರೆಯನ್ನು ನೋಡಲು ಸಾಧನವಾದುವು ನಾಲ್ಕು ವಿಷಯಗಳು ಬೇಕು.

೨೪೨. ಆ ನಾಲ್ಕು ಸಾಧನಗಳನ್ನು ಹೊಂದಿದರೆ ರಾಮ ಎಂಬುವ ಪದವನ್ನು ಕಾಣುತ್ತಾನೆ. ಆ ಸಾಧನಗಳು ಯಾವುವೆಂದರೆ ಅವನ್ನು ಹೇಳುತ್ತೇನೆ.

ಶುದ್ಧಾವಿದ್ಯಾಮಯಾ ಚೇತಿ ಪ್ರೋಚ್ಯತೇ ತತ್ತ್ವದರ್ಶಿಭಿಃ ।
ಶಾಸ್ತೃ ಶಾಸ್ತ್ರಂ ಚ ಶಾಸ್ಯಶ್ಚ ಮಿಥ್ಯಾಽವಿದ್ಯಾಮಯಂ ತ್ರಯಂ ॥ ೨೪೩ ॥
ಜ್ಞಾನೋತ್ತರಮಿತಿ ಮತಂ ತಸ್ಮಾತ್ತದ್ವರ್ಣವಿಚಾರಿತಂ ।
ಚತುಷ್ಪಾದಂ ಸಾಧನಂ ತತ್ಪೂರ್ಣಮಿತ್ಯಭಿಧೀಯತೇ ॥ ೨೪೪ ॥

ವಿವೇಕವೈರಾಗ್ಯಶಮಾದಿಷಟ್ಕಂ
ಮುಮುಕ್ಷುತಾ ಚೇತಿ ಪ್ರಸಿದ್ಧಮೇತತ್ ।
ಲಕ್ಷ್ಮಾಣಿ ಪ್ರತ್ಯೇಕಮುಶತ್ತಮಾನಿ
ಪ್ರೋಕ್ತಾನ್ಯಮೀಷಾಂ ಸ್ಮೃತಿಭೂಮಿಕಾಸು ॥ ೨೪೫ ॥

೨೪೩-೨೪೪. ಆ ರಾಮನಾಮವು ಶುದ್ಧವೆಂಬುದಾಗಿಯೂ ಅವಿದ್ಯಾಮಯ ವೆಂಬುದಾಗಿಯೂ ಎರಡು ಬಗೆಯೆಂದು ವಿದ್ಯಾವಂತರು ಹೇಳುತ್ತಾರೆ. ಶಾಸ್ತ್ರೃ ಎಂದರೆ ಹೇಳತಕ್ಕವನು. ಶಾಸ್ತ್ರವೆಂದರೆ ಹೇಳುವ ಗ್ರಂಥವು. ಶಾಸ್ಯವೆಂದರೆ ಹೇಳಿಸಿಕೊಳ್ಳುವವನು ಇವುಗಳು ಮೂರೂ ಮಿಥ್ಯೆ ಅಥವಾ ಅವಿದ್ಯೆಯೆಂದು ಹೇಳಲ್ಪಡುತ್ತವೆ. ಈ ವಿಷಯಗಳನ್ನು ಬ್ರಹ್ಮ ಜ್ಞಾನವು ಬಂದಮೇಲೆ ತಿಳಿದು ಕೊಳ್ಳುತ್ತಾನೆ. ಆದ್ದರಿಂದಲೇ ಇವನ್ನು ನಾಮ ವರ್ಣಕ್ಕೆ ಹೋಲಿಸಿ ಹೇಳಿರು ವೆನು. ಈ ವರ್ಣಗಳನ್ನು ನಾಲ್ಕು ಪಕ್ಕಗಳಲ್ಲಿಯೂ ಬರೆಯುವುದರಿಂದ ನಾಲ್ಕು ಪಾದಗಳೆಂದು ಹೇಳಿರುತ್ತಾರೆ. ಆದ್ದರಿಂದಲೇ ಈ ರಾಮತೋಭದ್ರವು ಪೂರ್ಣ ವೆಂದೂ ಹೇಳಲ್ಪಟ್ಟಿದೆ. ಪ್ರತ್ಯೇಕವಾಗಿ ಸಾಧನವಾಗಿರುವುದನ್ನು ಚತುಸ್ಸಾಧನ ವೆಂದು ಹೇಳಿದೆ.

೨೪೫. . ನಿತ್ಯ ಅನಿತ್ಯ ವಸ್ತುಗಳನ್ನು ವಿವೇಚಿಸಿ ಬ್ರಹ್ಮ ಸತ್ಯ, ಜಗತ್ತು ಮಿಥ್ಯೆ ಎಂಬ ವಿವೇಕ ಜ್ಞಾನ ೧. ಹೆಣ್ಣು ಹೊನ್ನುಗಳು ಭೋಗಾರ್ಹವಾದ ಪದಾರ್ಥಗಳಾಗಿದ್ದರೂ ಅವು ಮೂತ್ರ ಪುರೀಷಗಳಂತೆ ಅಸಹ್ಯಕರುಗಳು ಎಂಬು ದಾಗಿ ಹುಟ್ಟುವ ವೈರಾಗ್ಯ. ೨. ಶಮವೇ ಮುಂತಾದ ಆರು ಗುಣಗಳನ್ನು ಹೊಂಗಿರುವಿಕೆ, ಎಂದರೆ ಅಂತರಿಂದ್ರಿಯ ನಿಗ್ರಹ ರೂಪವಾದ ಶಮವು ಬಹಿರಿಂ ದ್ರಿಯ ನಿಗ್ರಹರೂಪವಾದ ದಮವು ವಿಧಿವಿಹಿತ ಕರ್ಮಗಳನ್ನು ವಿಧಿವತ್ತಾಗಿ ಬಿಡುವ ಉಪರತಿ ಶೀತೋಷ್ಣಗಳ ದ್ವಂದ್ವವನ್ನು ಸಹಿಸುವ ರೂಪವಾದ ತಿತಿಕ್ಷೆ. ಶ್ರವಣಾದಿಗಳಲ್ಲಿ ಅವಧಾನವನ್ನು ಹೊಂದಿದ ಮನಸ್ಥಿತಿಯೆಂಬ ಸಮಾಧಾನವು. ಗುರುವಿನ ವಾಕ್ಯದಲ್ಲಿಯೂ ವೇದಾಂತ ವಾಕ್ಯದಲ್ಲಿಯೂ ವಿಶ್ವಾಸ ರೂಪವಾದ ಶ್ರದ್ಧೆ, ಈ ಆರೂ ಉಳ್ಳ ಷಟ್ಕ ಸಂಪತ್ತಿ. ೩. ಮೋಕ್ಷಹೊಂದುವುದರಲ್ಲಿ ಅತ್ಯಂತ ಆಸೆಯ ರೂಪವಾದ ಮುಮುಕ್ಷುತಾ, ೪. ಈ ನಾಲ್ಕೂ ಕೂಡ ಸಾಧನ ಚತುಷ್ಟಯಗಳು. ಎಂಬುದಾಗಿ ಪ್ರಸಿದ್ಧವಾಗಿವೆ. ಇವುಗಳ ಲಕ್ಷಣವನ್ನು ಸ್ಮೃತಿಯಲ್ಲಿ ಅನೇಕ ಕಡೆಗಳಲ್ಲಿ ವಿಸ್ತಾರವಾಗಿ ಹೇಳಿದೆ.

ಸಾಧನಾನಾಂ ಚತುಷ್ಕಂ ಚ ಹ್ಯೇಷಣಾತ್ಯಾಗಪೂರ್ವಕಂ ।
ಸನ್ಯಾಸಶ್ಚ ಗುರೋಸ್ಸೇವಾ ಶ್ರವಣಾದಿತ್ರಯಂ ತತಃ ॥ ೨೪೬ ॥

ಪೂರ್ವೋತ್ತರಸಮಾಧೀ ಚ ಪುಂಜ ಏಕಾದಶಾತ್ಮಕಃ ।
ಏತೇಷಾಂ ತು ಮಿಥಸ್ಸಾಕ್ಷಾತ್ಪ್ರಾಣಾದ್ಯಾ ಸಂಗತಿರ್ಮತಾ ॥ ೨೪೭ ॥

ಮುಮುಕ್ಷಯಾ ತು ನ್ಯಾಸಾದಿಷಣ್ಣಾಂ ಸಾಕ್ಷಾದಿಹೋಚ್ಯತೇ ।
ಸಮಾಧಿರುತ್ತರಶ್ಚಾಪಿ ಪೃಥಗೇವೇತಿ ಸಂಮತಃ ॥ ೨೪೮ ॥

ಪೂರ್ವತ್ರಯಾಣಾಂ ನ ವಿನಾ ಮುಮುಕ್ಷಾಷಡ್ಭಿರಾದರಃ ।
ಏತೈಸ್ಸಾಧನಸಂಘೈಶ್ಚ ಪದಾನಿ ಪೂರಯತ್ಯಲಂ ॥ ೨೪೯ ॥

೨೪೬-೨೪೭. ಮೇಲೆ ಹೇಳಿದ ಈ ನಾಲ್ಕು ಸಾಧನಗಳೂ ಮತ್ತು ದಾರೇಷಣ, ವಿತ್ತೇಷಣ, ಪುತ್ರೇಷಣಗಳ ತ್ಯಾಗಪೂರ್ವಕವಾದ ಸಂನ್ಯಾಸ, ೫ ಸದ್ಗುರುಸೇವೆ, ೬ ಗುರುವಾಕ್ಯ ಶ್ರವಣ ವೇದಾಂತವಾಕ್ಯ ಶ್ರವಣ, ೭ ಅದರ ಅರ್ಥವನ್ನು ಮನನಮಾಡುವುದು, ೮ ನಿಧಿಧ್ಯಾಸನ, ೯ ಪೂರ್ವಸಮಾಧಿ, ೧೦ ಉತ್ತರಸಮಾಧಿ, ೧೧ ಈ ಹನ್ನೊಂದರದು ಒಂದು ಗುಂಪು, ಮೋಕ್ಷಸಾಧನ ಸಮಷ್ಟಿಯೆನಿಸಿಕೊಳ್ಳುತ್ತದೆ. ಇವುಗಳಿಗೆ ಪ್ರಾಣಾದಿಗಳು ಸೇರಿಕೊಂಡು ಸಹಕಾರಿಯಾಗುತ್ತವೆ.

೨೪೮. ಮೋಕ್ಷೇಚ್ಛೆ ಮೊದಲುಗೊಂಡು ಸನ್ಯಾಸದವರಗಿನ ಆರು ಗುಣಗಳೂ ಪ್ರತ್ಯಕ್ಷಗಳು ಎನಿಸಿಕೊಳ್ಳುತ್ತವೆ. ಉತ್ತರ ಸಮಾಧಿಯು ಕಡೆಯ ಗುಣವು. ಇದು ಬೇರೆಯಾಗಿರುವುದೆಂದು ಹೇಳಲ್ಪಟ್ಟಿದೆ.

೨೪೯. ಮುಮುಕ್ಷು ಎಂಬುದರ ಹಿಂದಿನವುಗಳಿಂದ ವಿವೇಕ ವೈರಾಗ್ಯ ಶಮಾದಿಷಟ್ಕಗಳನ್ನು ಬಿಟ್ಟು ಬಂದ ವೈರಾಗ್ಯವೇ ಉತ್ತಮವಾದುದು ಇದನ್ನೇ ಎಲ್ಲರೂ ಪುರಸ್ಕರಿಸುತ್ತಾರೆ. ಈ ಸಾಧನ ಸಂಘಗಳಿರುವ ಸಾಧಕನು ಇದನ್ನು ಎಂದರೆ ಈ ರಾಮತೋಭದ್ರವನ್ನು ಪೂರ್ತಿಮಾಡಲು ಶಕ್ತನಾಗುತ್ತಾನೆ. ಎಂದರೆ ಮೋಕ್ಷಸಾಧನಕ್ರಮವು ತಿಳಿದಿರುವವನು ಇದನ್ನು ತುಂಬಲು ಯೋಗ್ಯನಾಗುತ್ತಾನೆ.

ತಾನಿ ಸರ್ವಾಣಿ ಪ್ರಾಚ್ಯಂತೇ ಶ್ರೋತೄಣಾಮವಬುದ್ಧಯೇ ।
ದಶೇಂದ್ರಿಯಾಣಿ ತೇಷಾಂ ತು ಗೋಲಕಾನಿ ನವೈವ ತು ॥ ೨೫೦ ॥

ಪ್ರಾಣಾಪಾನೌ ಮನೋಬುದ್ಧೀ ತಸ್ಮಾದ್ಧರ್ಮಾಶ್ಚ ತನ್ಮಿತಾಃ ।
ಬುದ್ಧೇಃ ಜ್ಞಾನಂ ಯಥಾಽಸೋಶ್ಚ ಕ್ರಿಯಾ ತತ್ತಂತ್ರತಾ ಮತಾ ॥

ಉಭಯೋಂಧ್ರಿಯಧರ್ಮಾಣಾಮತೋವಿಶಾಷಾಮನಾಗ್ರಹಃ ।
ಸಪ್ತವಿಂಶತಿಸಂಖ್ಯಾನಿ ಪದಾನೀಮಾನಿ ಸಾಧನೈಃ ॥ ೨೫೨ ॥

ಯೋಗ್ಯಾನಿ ಲಾಂಛಿತುಂ ಸಮ್ಯಕ್ ಪೂರಯತ್ಯೇವ ಸರ್ವಥಾ ।
ತದಾ ಯತ್ಪರಮಂ ಬ್ರಹ್ಮ ರಾಮೇತಿ ಪದಮವ್ಯಯಂ ॥ ೨೫೩ ॥

ಭಾತಿ ಪ್ರತ್ಯಕ್ಷತಸ್ತೇನ ಕೃತಕೃತ್ಯೋ ಹಿ ಜಾಯತೇ ।
ಏತಾವತಾ ವಿಗೀತೇನ ರಾಮತೋಭದ್ರಮುದ್ರಿಕೇ ॥ ೨೫೪ ॥

---

೨೫೦. ಅವೆಲ್ಲವನ್ನೂ ಕೂಡ ಕೇಳುವವರ ತಿಳುವಳಿಕೆಗೆ ಇಲ್ಲಿ ವಿವರಿಸುತ್ತೇನೆ. ದೇಹಗಳಲ್ಲಿ ಹತ್ತು ಇಂದ್ರಿಯಗಳಿವೆ ಇವುಗಳಲ್ಲಿ ಒಂಭತ್ತು ಮಾತ್ರವೇ ಗೋಳಕಾರವಾಗಿವೆ ಎಂದರೆ ತ್ವಗಿಂದ್ರಿಯ ಸ್ಥಾನವೊಂದನ್ನು ಬಿಟ್ಟು ಮಿಕ್ಕ ಶ್ರೋತ್ರ, ಚಕ್ಷು, ಜಿಹ್ವೆ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಇವು ಒಂಭತ್ತು ಗೋಳಕಸ್ಥಾನಗಳೆಂದರ್ಥ.

೨೫೧–೨೫೨. ಪ್ರಾಣ ಅಪಾನಗಳೆರಡು. ಮನೋಬುದ್ಧಿಗಳೆರಡು, ಇವುಗಳ ಧರ್ಮಗಳಾದ ಸಂಶಯ ನಿಶ್ಚಯಪ್ರಾಗವನ, ವಾಗನನ, ಇವು ನಾಲ್ಕು. ಇವು ಸೇರಿದರೆ ೨೭ ಆಗುತ್ತವೆ. ಇವೆಲ್ಲವೂ ಸೇರಿದವನು ರಾಮ ಬ್ರಹ್ಮನ ಸಂಧಾನದಲ್ಲಿ ಎಂದರೆ ಭದ್ರದಲ್ಲಿ ಸರಿಯಾಗಿ ಗುರ್ತಿಸಲು ಯೋಗ್ಯನಾಗುತ್ತಾನೆ.

೨೫೩–೨೫೪. ಈ ರೀತಿಯಾದವನೇ ಆ ಭದ್ರವನ್ನು ಪೂರ್ತಿಮಾಡಲು ಅಪೇಕ್ಷಿಸುತ್ತಾನೆ ಮತ್ತು ಸಮರ್ಥನೂ ಆಗುತ್ತಾನೆ ಈ ರೀತಿಯಾದವನು ಪೂರ್ತಿಮಾಡಿದಮೇಲೆ ಆಗ ಪರಬ್ರಹ್ಮರೂಪವಾದ ಆ ರಾಮವೆಂಬ ಪದವು ಗೋಚರವಾಗುತ್ತದೆ. ಆಗ ಅದನ್ನು ನೋಡಿ ಈ ಮನುಷ್ಯನು ಕೃತಕೃತ್ಯನೂ ಆಗುವನು. ಇಷ್ಟನ್ನೂ ವಿವರಿಸಿದುದರಿಂದ ರಾಮತೋಭದ್ರವೆಂಬ ಮುದ್ರಿಕೆಯು ಹೇಳಲ್ಪಟ್ಟಂತಾಯಿತು.

ರಾಮಶ್ಚ ಕಥಿತಶ್ಚಾಥ ಸರ್ವತೋಭದ್ರಮೀರ್ಯತೇ ।
ಸ್ಥಾನತೋ ನಾಮತಶ್ಚಾಪಿ ಸಂಶಯಸ್ಯಾಪನುತ್ತಯೇ ॥ ೨೫೫ ॥

ಕಲ್ಯಾಣಂ ಸರ್ವತಃ ಪುಂಸಾಂ ಚಿಂತನಾದ್ಯಸ್ಯ ಬ್ರಹ್ಮಣಃ ।
ತದ್ಭದ್ರವಾಚಕಂ ತುಭ್ಯಂ ಮಂಗಳಾನಾಂ ಚ ಮಂಗಳಂ ॥ ೨೫೬ ॥

ಯತ್ರ ತದ್ವ್ಯಜ್ಯತೇ ಸಾಕ್ಷಾತ್ತನ್ನಾಮ್ನಾ ತದುದೀರ್ಯತೇ ।
ಅಧಿದೈವಂ ತಥಾಧ್ಯಾತ್ಮಂ ಸರ್ವತೋಭದ್ರಮಿಷ್ಯತೇ ॥ ೨೫೭ ॥

ವಿವಿಚ್ಯತೇತ್ರೋಭಯಂ ಚ ಪ್ರೋಚ್ಯತೇ ವಸ್ತುವ್ಯಕ್ತಯೇ ।
ಅಧಿದೈವೇ ತು ಯದ್ಭದ್ರಂ ತದಾದಾವುಚ್ಯತೇಽಮಲಂ ॥ ೨೫೮ ॥

ಅಂಡಹೃದ್ಬ್ರಹ್ಮಲೋಕಸ್ತು ಸರ್ವತೋಭದ್ರಮುಚ್ಯತೇ ॥
ತೇನೈವ ಭದ್ರಂ ಸರ್ವೇಷಾಂ ಲೋಕಾನಾಮಿತಿ ಹಿ ಸ್ಥಿತಿಃ ॥ ೨೫೯ ॥

---

೨೫೫. ಆ ಮುದ್ರಿಕೆಯಲ್ಲಿ ರಾಮ ಎಂಬ ಪದವನ್ನು ನೋಡಿ ತಿಳಿದಂತಾಯಿತು. ಇದೇ ರಾಮಸರ್ವತೋಭದ್ರವು. ಇದು ತನ್ನ ಸ್ಥಾನದಿಂದಲೂ ನಾಮದಿಂದಲೂ ಕೂಡ ಸಂಶಯವನ್ನು ನಾಶಮಾಡುತ್ತದೆ.

೨೫೬. ಈ ರಾಮಬ್ರಹ್ಮನನ್ನು ಚಿಂತಿಸುವುದರಿಂದ ಜನರಿಗೆ ಎಲ್ಲಾ ವಿಷಯದಲ್ಲಿಯೂ ಕಲ್ಯಾಣವು ಉಂಟಾಗುತ್ತದೆ. ಹಾಗೆ ಭದ್ರವನ್ನು ಎಂದರೆ ಮಂಗಳವನ್ನು ಉಂಟುಮಾಡುವುದರಿಂದ ಇದು ಭದ್ರವೆಂದೆನಿಸಿಕೊಳ್ಳುತ್ತದೆ. ಇದು ಮಂಗಳಗಳಿಗೂ ಕೂಡ ಮಂಗಳವು.

೨೫೭. ಆ ಭದ್ರವಾಚಕವಾದ ರಾಮ ಎಂಬ ಪದವು ಪ್ರತ್ಯಕ್ಷವಾಗಿ ಕಾಣುವುದರಿಂದ ಅದೇ ಹೆಸರಿನಿಂದ ಅದನ್ನು ಕರೆಯುತ್ತೇವೆ ಈ ಸರ್ವತೋಭದ್ರದಲ್ಲಿ ಅಧಿದೈವವು ಎಂದೂ ಅಧ್ಯಾತ್ಮವು ಎಂದೂ ಎರಡು ಬಗೆಯು.

೨೫೮–೨೫೯. ಆ ರಾಮ ಬ್ರಹ್ಮವು ಸರಿಯಾಗಿ ತಿಳಿಯಲೆಂದೇ ಆ ಎರಡನ್ನು ಇಲ್ಲಿ ವಿವರಿಸುತ್ತೇನೆ. ಅಧಿ ದೈವವೆಂಬ ಭದ್ರವನ್ನು ಮೊದಲು ಹೇಳುತ್ತೇನೆ. ಬ್ರಹ್ಮಾಂಡವೆಂಬುದಕ್ಕೆ ಸರ್ವತೋಭದ್ರವು ಒಂದು ಹೃದಯವು. ಈ ಭದ್ರದಿಂದಲೇ ಲೋಕಗಳಿಗೆಲ್ಲವೂ ಮಂಗಳವು ಉಂಟಾಗುತ್ತದೆ.

ತತ್ರ ಸ್ವರ್ಣಮಯಂ ವೇಶ್ಮ ನಿರ್ಮಿತಂ ಪ್ರಭುಣಾ ಸ್ವಯಂ ।
ತತ್ಪದ್ಮಮಿತಿ ವಿಜ್ಞೇಯಂ ಯತ್ರ ಕಾರ್ಯಚಿತಿಃ ಸ್ವಯಂ ॥ ೨೬೦ ॥

ನ್ಯಾಸೇನ ಸರ್ವಸತ್ವಾನಾಂ ಗತಾನಾಂ ಸರ್ವಯೋಗಿನಾಂ ।
ಪ್ರಾಣೋಪಾಸನನಿಷ್ಠಾನಾಂ ಬ್ರಹ್ಮಣಾ ಚಿತ್ಪ್ರಕಾಶತೇ ॥ ೨೬೧ ॥

ಬ್ರಹ್ಮಣಾ ಸಹ ತೇ ಸರ್ವ ಇತಿ ಸ್ಮೃತಿರಥಾಗಮಃ ।
ಕ್ರಮಮುಕ್ತೇಸ್ತ್ವಯಂ ಪಂಥಾಃ ಶ್ರುತಿಸ್ಮೃತಿಮತೋಽಮಲಃ ॥ ೨೬೨ ॥

ಆಧ್ಯಾತ್ಮ್ಯೇ ಹೃದಯಂ ಯತ್ತತ್ಸರ್ವತೋಭದ್ರಮಿರ್ಯತೇ ।
ತೇನ ಭದ್ರೇಣ ಕಲ್ಯಾಣಂ ಸರ್ವೇಷ್ವವಯವೇಷ್ವಿಹ ॥ ೨೬೩ ॥

ತತ್ರ ಯತ್ಪುಂಡರೀಕಂ ತದ್ಬ್ರಹ್ಮಣಃ ಸ್ಥಾನಮುಚ್ಯತೇ ।
ಶ್ರುತಾವೇವಂ ಪ್ರಸಿದ್ಧಿರ್ಹಿ ದಹರಾಂಬುಜವೇಶ್ಮನಃ ॥ ೨೬೪ ॥

---

೨೬೦. ಸ್ವಾಮಿಯಾದ ಬ್ರಹ್ಮನು ತನಗೆ ವಾಸಕ್ಕೆ ಚಿನ್ನದಿಂದ ಕೂಡಿದ ಮನೆಯನ್ನು ನಿರ್ಮಿಸಿಕೊಂಡಿರುವನು ಆ ಮನೆಯೇ ಪದ್ಮವೆಂದೆನಿಸಿಕೊಂಡಿರುವುದು. ಅಲ್ಲಿದ್ದುಕೊಂಡೇ ಬ್ರಹ್ಮನು ಕಾರ್ಯಗಳನ್ನು ನಿರ್ವಹಿಸುವುದು.

೨೬೧. ಗತಿಸಿದ ಎಲ್ಲಾ ಪ್ರಾಣಿಗಳಿಗೂ ಅದೇನೇಸದ್ಗತಿಯರೂಪವಾಗಿ ಅಲ್ಲಿಯೇ ಚಿತಾಪ್ರಕಾಶಿಸುತ್ತದೆ. ಪ್ರಾಣವನ್ನೇ ಉಪಾಸನೆಮಾಡುವ ಯೋಗಿಗಳಿಗೂ ಅದೇ ಸ್ಥಾನವಾಗಿ ಅಲ್ಲಿಯೇ ಬ್ರಹ್ಮರೂಪವಾದ ಚಿತ್ತುಪ್ರಕಾಶಿಸುತದೆ.

೨೬೨. ಆ ಬ್ರಹ್ಮನಲ್ಲಿಯೇ ಇವರೆಲ್ಲರೂ ಸೇರಿಹೋಗುತ್ತಾರೆ. ಎಂಬದಾಗಿ ಶ್ರುತಿಯೂ ಸ್ಮೃತಿಯೂ ಹೇಳುತ್ತವೆ. ಆದ್ದರಿಂದ ಕ್ರಮವಾಗಿ ಮುಕ್ತಿಯು ಸಿಕ್ಕಲು ಇದು ಮಾರ್ಗವು. ಇದೇನೇ ಶ್ರುತಿಸ್ಮೃತಿಗಳಿಗೆ ಸಮ್ಮತವಾದ ನಿರ್ಮಲವಾದ ಮಾರ್ಗವು.

೨೬೩. ಅಧ್ಯಾತ್ಮವೆಂಬ ದೇಹಕ್ಕೆ ಈ ಭದ್ರವೇ ಹೃದಯುವಾದುದರಿಂದ ಇದಕ್ಕೆ ಸರ್ವತೋಭದ್ರವೆಂದು ಹೆಸರು. ಆ ಹೃದಯುವು ಭದ್ರವೆಂದರೆ ಮಂಗಳವಾದುದರಿಂದ ಇದು ಅವಯುವಗಳೆಲ್ಲಕ್ಕೂ ಮಂಗಳವಾಗಿರುತ್ತದೆ.

೨೬೪. ಅದರಲ್ಲಿರುವ ಪುಂಡರೀಕವು ಎಂದರೆ ಕರ್ಣಿಕೆಯು ಬ್ರಹ್ಮನಿಗೆ ಸ್ಥಾನವು. ದಹರಾಂಬುಜವೇ ಆ ಬ್ರಹ್ಮನ ಮನೆಯು ಎಂದು ಶ್ರುತಿಯೂ ಹೇಳುತ್ತದೆ. ಇದೇ ಶ್ರುತಿಯಲ್ಲಿ ಪ್ರಸಿದ್ಧವಾದ ದಹರಾಂಬುಜವು.

ಸಾಧನಸಂಪತ್ಸಂಯುಕ್ತಾಸ್ತಸ್ಮಿನ್ ಯೇ ತು ಸಮಾಹಿತಾಃ ।
ಗುರೂಪದಿಷ್ಟಯಾ ಯುಕ್ತ್ಯಾ ತೇಷಾಂ ಬ್ರಹ್ಮ ಪ್ರಕಾಶತೇ ॥ ೨೬೫ ॥

ಪರಮಃ ಪುರುಷೋ ಭೂಮೌ ಸ ಏವಾಧಸ್ತಥೋಪರಿ ।
ಇತ್ಯಾದಿ ಶ್ರುತ್ಯಾ ಯತ್ಪ್ರೋಕ್ತಂ ತನ್ನ ಪರೋಕ್ಷಮಿತ್ಯಪಿ ॥ ೨೬೬ ॥

ಅಹಚಾಹಮೇವಾಽಧಸ್ತಾದಿತ್ಯಾದಿಸಮವ್ಯಾಪ್ತಿತಾಂ ।
ಮಂದಾನಾಮಪಿ ಸರ್ವೇಷಾಂ ದೇಹೇಹಮಿತಿ ದೃಶ್ಯತೇ ॥ ೨೬೭ ॥

ಮಾಭೂತ್ಸಂಭ್ರಮ ಇತ್ಯರ್ಥಮಾತ್ಮೈವೇತಿ ಪುನರ್ವಚಃ ।
ಏಕಾತ್ಮರೂಪಯೋಸ್ತಯೋರ್ಭೇದಶಂಕಾನಿವೃತ್ತಯೇ ॥ ೨೬೮ ॥

ಸರ್ವಾಸೂಪನಿಷತ್ಸ್ವೇವಂ ಬ್ರಹ್ಮಾದ್ವೈತಂ ಸುನಿಶ್ಚಿತಂ ।
ಬ್ರಹ್ಮೈವೇದಮಮೃತಮಿತ್ಯಾಹ ಚಾಥರ್ವಣೀಶ್ರುತಿಃ ॥ ೨೬೯ ॥

---

೨೬೫. ಬ್ರಹ್ಮಜ್ಞಾನವನ್ನು ಹೊಂದಲು ಸಾಧನ ಸಂಪತ್ತುಗಳನ್ನು ಹೊಂದಿರುವವರು ಆ ಹೃತ್ಪುಂಡರೀಕದಲ್ಲಿ ಮನಸ್ಸಿಟ್ಟವರಾಗಿ ಗುರೂಪದಿಷ್ಟವಾದ ಯುಕ್ತಿಯಿಂದ ಆ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವರು. ಅಂತಹವರಿಗೆ ಆ ಬ್ರಹ್ಮವು ಪ್ರಕಾಶಿಸುತ್ತದೆ.

೨೬೬. ಪರಮಪುರುಷನಾದ ಆ ಪರಮಾತ್ಮನು ಸ್ವರ್ಗ ಭೂಮಿ ಪಾತಾಳ ಗಳಲ್ಲಿಯೂ ಇರುವನು. ಇವೇ ಮೊದಲಾದುವನ್ನು ಶ್ರುತಿಯು ಹೇಳಿದೆ. ಇದೇ ಶ್ರುತಿಯು ಅದು ಪ್ರತ್ಯಕ್ಷವೇ ಹೊರತು ಪರೋಕ್ಷವಲ್ಲ ಎಂದೂ ಹೇಳಿದೆ.

೨೬೭. ನಾನೇ ಮೇಲೂ ಇದ್ದೇನೆ. ನಾನೇ ಕೆಳಗೂ ಇದ್ದೇನೆ. ನಾನೇ ಎಲ್ಲದರಲ್ಲೂ ಇದ್ದೇನೆ. ಎಂಬುದಾಗಿ ಸಮಸ್ತದಲ್ಲೂ ಇರುವಿಕೆಯನ್ನು ಆ ಶ್ರುತಿಯು ಹೇಳಿರುವುದು. ದೇಹವನ್ನು ಧರಿಸಿರುವವರಿಗೆ ಈ ದೇಹವು ಹೊರ ತಾಗಿ ಬೇರೆ ಒಬ್ಬನು ಇರುವನು. ಅವನೇ ನಾನೆಂದು ಮೂಢರಿಗೂ ಸತ್ಯವಾ ಗಿಯೂ ತೋರುತ್ತದೆ.

೨೬೮-೨೬೯. ಹೀಗೆ ಬೇರೆ ಇರತಕ್ಕವನು ಜೀವಾತ್ಮನೋ ಅಥವಾ ಪರ ಮಾತ್ಮನೋ ಎಂಬ ಭ್ರಾಂತಿಯು ಬರಬಾರದೆಂದೇ ಆತ್ಮನೆಂದೇ ಮತ್ತೆ ಮತ್ತೆ ಶ್ರುತಿಯು ಹೇಳಿರುವುದು. ಎಲ್ಲ ಉಪನಿಷತ್ತುಗಳೂ ಈ ಬ್ರಹ್ಮದ ಅದ್ವೈತವನ್ನೇ ವಿಸ್ತಾರವಾಗಿ ಹೇಳಿವೆ. ಅಥರ್ವಣ ಶ್ರುತಿಯೂ ಕೂಡ ಇದೇ ಬ್ರಹ್ಮನು. ಇದೇ ಅಮೃತವು ಎಂದು ನಿರೂಪಿಸಿದೆ.

ತತ್ವಮೇವ ತ್ವಮೇವೈತದಿತಿಕೈವಲ್ಯಗಂ ವಚಃ ।
ತತ್ತ್ವಮಸೀತಿ ಛಾಂದೋಗ್ಯೇ ಬ್ರಹ್ಮಾತ್ಮೈಕ್ಯಂ ನ ಭೇದಧೀಃ ॥ ೨೭೦ ॥

ಏಕತ್ವಂ ಪದಯೋಃ ಸ್ಪಷ್ಟಂ ಶ್ರುತ್ಯಾ ಯತ್ಪ್ರತಿಪಾದಿತಂ ।
ಸಾಕ್ಷಾನ್ಮುಕ್ತೇಃ ಕಾರಣಂ ತದ್ಬೋಧಸ್ತೇಷಾಂ ಸ ಏವ ಹಿ ॥ ೨೭೧ ॥

ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥ ೨೭೨ ॥

ಇದಂ ಸರ್ವಂ ಯದಯಮಾತ್ಮೈಕಮೇವಾದ್ವಿತೀಯಕಂ ।
ಸರ್ವಂ ಖಲ್ವಿದಮಿತ್ಯಾದಿಶ್ರುತಯೋ ಯದ್ಬ್ರುವಂತಿ ಹಿ ॥ ೨೭೩ ॥

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಂಪಶ್ಯನ್ನಾತ್ಮಯಾಜೀತಿ ಪರಮಾರ್ಥಂ ಮನೋರ್ವಚಃ ॥ ೨೭೪ ॥

---

೨೭೦. ತತ್ ತ್ವಂ ಏವ, ತ್ವಂ ತತ್ ಏವ, ಅದು ನಾನೇ. ನಾನೇ ಅದು ಎಂಬುದಾಗಿ ಕೈವಲ್ಯೋಪನಿಷತ್ತು ಹೇಳಿದೆ. ತತ್ ತ್ವಂ ಅಸಿ, ಅದು ನೀನು, ಎಂದು ಛಾಂದೋಗ್ಯದಲ್ಲಿಯೂ ಜೀವಾತ್ಮ ಪರಮಾತ್ಮರಿಗೆ ಐಕ್ಯವನ್ನು ಹೇಳಿದೆಯೇ ಹೊರತು ಬೇರೆಯೆಂಬ ಭೇದ ಬುದ್ಧಿಯನ್ನು ಹೇಳಿಯೇ ಇಲ್ಲ.

೨೭೧. ಶ್ರುತಿಯಲ್ಲಿ ಜೀವಾತ್ಮ ಪರಮಾತ್ಮರಿಗೆ ಐಕ್ಯವು ಎಂದರೆ ಅಭೇದವು ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ. ಅದೇನೇ ಮುಕ್ತಿಗೆ ಸಾಕ್ಷಾತ್ ಕಾರಣವು. ಅದರಿಂದುಂಟಾಗುವ ಒಂದು ಭೇದವೇ ಪರಮಾತ್ಮವು.

೨೭೨. ಜಗತ್ತಿನಲ್ಲಿ ಕಾಣುವುದೆಲ್ಲವೂ ಮತ್ತು ಕೇಳುವುದೆಲ್ಲವೂ ಆ ಪರಮಾತ್ಮನೆ. ಅವೆಲ್ಲವನ್ನೂ ಕೂಡ ನಾರಾಯಣನೆಂಬ ಹೆಸರುಳ್ಳ ಆ ಪರಮಾತ್ಮನೇ ವ್ಯಾಪಿಸಿಕೊಂಡಿರುವನು.

೨೭೩. ಎಲ್ಲವೂ ಕೂಡ ಈ ಬ್ರಹ್ಮನೆ. ಆ ಬ್ರಹ್ಮವು ಒಂದೇನೇ. ಇದರಂತಿರುವುದು ಮತ್ತೊಂದಿಲ್ಲ. ಸರ್ವವೂ ಈ ಬ್ರಹ್ಮವೇನೇ. ಎಂದೇ ಮುಂತಾಗಿ ಶ್ರುತಿಗಳು ಯಾವುದನ್ನು ಹೇಳುತ್ತವೆಯೋ ಅದೇ ಈ ಏಕನಾದ ಪರಮಾತ್ಮನು.

೨೭೪. ಸರ್ವಭೂತಗಳಲ್ಲಿಯೂ ಆತನನ್ನೂ ಸರ್ವಭೂತಗಳನ್ನೂ ಆ ಆತ್ಮನಲ್ಲಿಯೂ ಆತ್ಮಜ್ಞಾನಿಯು ತಿಳಿಯುತ್ತಾನೆ. ನೋಡುತ್ತಾನೆ. ಎಂಬುದಾಗಿ ಮನುವು ತನ್ನ ಧರ್ಮ ಶಾಸ್ತ್ರದಲ್ಲಿ ಹೇಳುವನು.

ಏತಾದೃಶೇನ ಬೋಧೇನ ಭೂತ್ವಾ ಬ್ರಹ್ಮಾತ್ಮರೂಪಕಾಃ ।
ಕೃತಕೃತ್ಯಾಃ ಸ್ವಯಂ ತೀರ್ತ್ವಾ ಸಚ್ಛಿಷ್ಯಾನ್ ಗ್ರಾಹಯಂತಿ ಚ ॥ ೨೭೫ ॥

ಅತೋಕ್ತಂ ಶ್ರುತ್ಯಭಿಪ್ರಾಯಂ ಜಾನಂತಿ ವಿದುಷೋಽಖಿಲಾಃ ।
ಕಿಂ ಬಹೂಕ್ತೇನ ಚೋದ್ದಿಷ್ಟಂ ಸಂಕ್ಷೇಪೇಣೋಪಸಂಹೃತಂ ॥ ೨೭೬ ॥

ನಾರಾಯಣಾಚ್ಯುತ ಜನಾರ್ದನ ವಾಸುದೇವ
ಗೋವಿಂದ ಮಾಧವ ಮುಕುಂದ ರಮೇಶ ವಿಷ್ಣೋ ।
ಸಂಕರ್ಷಣಾಜ ನರಸಿಂಹ ಪರಾವರಾತ್ಮನ್ರಾ
ಮೋರುಗಾಯ ಶಿವ ವಾಮನ ಪಾಹಿ ಶಿಷ್ಯಂ ॥ ೨೭೭ ॥

ಯೇನೇದಂ ವಿಕೃತಂ ವಿಶ್ವಂ ವಿಶತಾ ಯೇನ ಚೇತನಂ ।
ಯತ್ ಸ್ಥಿತಂ ಯತ್ಪ್ರತಿಷ್ಠಂ ಚ ತಸ್ಮೈ ಸರ್ವಾತ್ಮನೇ ನಮಃ ॥ ೨೭೮ ॥

---

೨೭೫. ಬ್ರಹ್ಮನಲ್ಲಿಯೇ ಲೀನವಾಗಿ ಕೃತಕೃತ್ಯರಾದವರು ಈ ರೀತಿಯಾದ ಜ್ಞಾನೋಪದೇಶದಿಂದ ಶಿಷ್ಯರನ್ನೂ ಮುಕ್ತರನ್ನಾಗಿ ಮಾಡಿ ತಾವೂ ಮುಕ್ತರಾಗುವರು. ಮತ್ತು ಉಪದೇಶಿಸುವರು.

೨೭೬. ಬುದ್ಧಿವಂತರಾದವರು ಈ ರೀತಿಯಾದ ಶ್ರುತಿಯಲ್ಲಿನ ಅಭಿಪ್ರಾಯಗಳನ್ನು ತಿಳಿದುಕೊಳ್ಳುತ್ತಾರೆ. ಬಹಳ ಮಾತಿನಿಂದೇನು? ಹೇಳಬೇಕಾದುದನ್ನು ಸಂಕ್ಷೇಪದಿಂದ ಹೇಳಿದ್ದೇನೆ.

೨೭೭. ನಾರಾಯಣ, ಅಚ್ಯುತ, ಜನಾರ್ದನ, ವಾಸುದೇವ, ಗೋವಿಂದ, ಮಾಧವ, ಮುಕುಂದ, ರಮೇಶ, ವಿಷ್ಣು, ಸಂಕರ್ಷಣ, ಅಜ, ನರಸಿಂಹ, ಪರಾವರ, ರಾಮ, ಉರುಗಾಯ, ಶಿವ, ವಾಮನ, ಈ ರೀತಿಯಾದ ಪರಮಾತ್ಮನೇ! ನೀನು ಶಿಷ್ಯನನ್ನು ಕಾಪಾಡು.

೨೭೮. ಈ ಪ್ರಪಂಚವು ಯಾವನಿಂದ ಈ ರೀತಿಯಾದ ವಿಕಾರವನ್ನು ಹೊಂದುತ್ತದೆಯೋ ಯಾವನು ಈ ನಿಷ್ಕ್ರಿಯವಾದ ಜಗತ್ತಿನಲ್ಲಿ ಸೇರಿ ಅವು ಕ್ರಿಯೆಗಳನ್ನು ಮಾಡುವಂತೆ ಮಾಡುವನೋ ಯಾವನಿಂದ ಈ ಜಗತ್ತು ನಿಂತಿದೆಯೋ, ಯಾವನಿಂದ ಈ ಜಗತ್ತು ಸ್ಥಾಪನೆಯಾಗಿದೆಯೋ ಅಂತಹ ಪರಮಾತ್ಮನಿಗೆ ನಮಸ್ಕಾರವು.

ಇದಾನೀಂ ರಾಮತೋ ಭದ್ರಸ್ಯಾಷ್ಟೋತ್ತರಶತಸ್ಯ ಚ ।
ನಾನಾಭೇದಾಃ ಪ್ರಕಥ್ಯಂತೇ ಲಘುಮುದ್ರಾಂಕಿತಸ್ಯ ಹಿ ॥ ೨೭೯ ॥

ಪೂರ್ವೋಕ್ತೇಷ್ವವಿಂಶತಿರೇಖಾವೃದ್ಧಿಂ ಪ್ರಕಲ್ಪಯೇತ್ ।
ಪರಿಧೀ ದ್ವಾವಧಿಕೌ ತತ್ಪಂಕ್ತ್ಯೋರ್ಲಿಂಗಾನಿ ಯೋಜಯೇತ್ ॥ ೨೮೦ ॥

ಪ್ರಥಮೇ ತಿಥಿಮಿಕೇಶಾಶ್ಚ ತುರ್ವಿಂಶಪದಾತ್ಮಕಾಃ ।
ವಾಪ್ಯಷ್ಷೋಡಶಸಂಖ್ಯಾಕಾಸ್ತ್ರಯೋದಶಪದಾತ್ಮಿಕಾಃ ॥ ೨೮೧ ॥

ಭದ್ರಂ ತತ್ವಮಿತಂ ಚಾಥ ದ್ವಿತೀಯೇರ್ಕಮಿತಾಶ್ಶಿವಾಃ ।
ವಾಪ್ಯಸ್ತ್ರಯೋದಶಮಿತಾ ಅಷ್ಟಾದಶಪದಾತ್ಮಿಕಾಃ ॥ ೨೮೨ ॥

ಭದ್ರಮರ್ಕಪದಂ ಶೇಷಂ ಯಥಾಪೂರ್ವಂ ಪ್ರಕಲ್ಪಯೇತ್ ।
ಏತತ್ ರಾಮಲಿಂಗತೋಭದ್ರಂ ಶತಂ ಚ ವಸೂತ್ತರಂ ॥ ೨೮೩ ॥

---

೨೭೯. ಹಿಂದೆ ಅಷ್ಟೋತ್ತರಶತರಾಮತೋಭದ್ರವೆಂದೂ ಲಘುಮುದ್ರಾಂಕಿತವೆಂದೂ ಎರಡು ಬಗೆಯನ್ನು ಹೇಳಿದೆನು. ಈಗ ಅವುಗಳಲ್ಲಿನ ಕೆಲವು ಭೇದಗಳನ್ನು ಹೇಳುತ್ತೇನೆ.

೨೮೦. ಹಿಂದೆ ಹೇಳಿದ ರೇಖೆಗಳ ಜೊತೆಗೆ ಎಂದರೆ ನೂರೆಂಟು ರೇಖೆಗಳ ಜೊತೆಗೆ ಇಪ್ಪತ್ತೆಂಟು ರೇಖೆಗಳನ್ನು ಹೆಚ್ಚಾಗಿ ಎಳೆಯಬೇಕು. ಇವುಗಳಲ್ಲಿ ಎರಡು ಪರಿಧಿಗಳು ಹೆಚ್ಚಾಗುತ್ತವೆ. ಅವುಗಳೊಳಗೆ ಲಿಂಗಗಳನ್ನು ಕಲ್ಪಿಸಬೇಕು.

೨೮೧-೨೮೩. ಮೊದಲಿನ ವರಿಸೆಯಲ್ಲಿ ಇಪ್ಪತ್ತನಾಲ್ಕು ಪದಗಳ ಹದಿನೈದು ಲಿಂಗಗಳು ಬರುತ್ತವೆ. ಹದಿಮೂರು ಪದಗಳದರಲ್ಲಿ ರಚಿಸಿದ ಹದಿನಾರು ವಾಪಿಗಳು ಬರುತ್ತವೆ. ಇದರಲ್ಲಿ ಬರುವ ಭದ್ರವು ಇಪ್ಪತ್ತೈದು ಪದಗಳುಳ್ಳದ್ದು. ಎರಡನೆಯ ವರಿಸೆಯಲ್ಲಿ ಹನ್ನೆರಡು ಲಿಂಗಗಳು ಬರುತ್ತವೆ. ಹದಿನೆಂಟು ಪದಗಳದ್ದು ಹದಿಮೂರು ವಾಪಿಗಳು ಬರುತ್ತವೆ. ಇದು ಹನ್ನೆರಡು ಪದಗಳ ಭದ್ರವು. ಉಳಿದುವನ್ನು ಹಿಂದಿನವುಗಳಂತೆ ರಚಿಸಬೇಕು. ಈ ರಾಮತೋಭದ್ರವು ಒಂದನೂರ ಎಂಟರದು.

ಅಥವಾದ್ಯೇ ರಸಮುದ್ರಾ ರಸೇಶಾ ವಾಪಿಕಾಶ್ಚ ಷಟ್ ।
ತ್ರಯೋದಶಪದಾ ಕಾರ್ಯಾ ಭದ್ರಂ ಚಂದ್ರಕಲಾತ್ಮಕಂ ॥ ೨೮೪ ॥

ದ್ವಿತೀಯೇ ಪಂಚಮುದ್ರಾಶ್ಚ ಲಿಂಗಷಟ್ಕಂ ಚ ವಾಪಿಕಾಃ ।
ತನ್ಮಿತಾಶ್ಚ ಭದ್ರಮರ್ಕಪದಮಗ್ರೇಷ್ಟವಾವಧಿ ॥ ೧೮೫ ॥

ತುರ್ಯಪಂಚತುರ್ಯನೇತ್ರಚಂದ್ರಸಂಖ್ಯಾಶ್ಚ ಮುದ್ರಿಕಾಃ ।
ಷಟ್ನೇತ್ರನೇತ್ರನಯನನೇತ್ರೇಂದುಶಂಕರಾಂಸ್ತಥಾ ॥ ೨೮೬ ॥

ಭದ್ರಂ ಷಟ್ಪದಮುಕ್ತ್ವಾಂಘ್ರಿಷಟ್ಪದಂ ವಿಂಶಪಾದಕಂ ।
ಷೊಡಶಾಂಘ್ರಿಯುಗ್ಮಪಾದಂ ಕ್ರಮಾತ್ ಜ್ಞೇಯಂ ವಿಚಕ್ಷಣೈಃ ॥ ೨೮೭ ॥

ಅಥವಾಷ್ಟಪದೇ ಮುದ್ರಾಂ ವಿಧಾಯ ತತ್ಸ್ಥಲಿಂಗಕಂ ।
ರಚಯೇತ್ ಸ್ಥಾನಕೇ ತುರ್ಯೇ ಭದ್ರಂ ವಿಂಶತ್ಪದಾತ್ಮಕಂ ॥ ೨೮೮ ॥

---

೨೮೪. ಅಥವಾ ಮೊದಲನೆಯ ವರಿಸೆಯಲ್ಲಿ ಆರು ಮುದ್ರೆಗಳು, ಆರು ಲಿಂಗಗಳು ಆರು ವಾಪಿಕೆಗಳು. ಇವು ಹದಿಮೂರು ಪದಗಳಲ್ಲಿ ಏರ್ಪಡುತ್ತವೆ ಇದರಲ್ಲಿ ಭದ್ರವು ಹದಿಮೂರು ಪದಗಳದು.

೨೮೫-೨೮೬. ಎರಡನೆಯ ವರಿಸೆಯಲ್ಲಿ ಐದು ಮುದ್ರೆಗಳೂ ಆರು ಲಿಂಗಗಳೂ ಆರು ವಾಪಿಕೆಗಳೂ ಬರುತ್ತವೆ. ಇದರಲ್ಲಿ ಭದ್ರವು ಹನ್ನೆರಡು ಪದಗಳುಳ್ಳದ್ದು. ಮುಂದೆ ಎಂಟು ವರಿಸೆಗಳವರೆಗೂ ನಾಲ್ಕು, ಐದು, ನಾಲ್ಕು, ಎರಡು, ಒಂದು ಸಂಖ್ಯೆಗಳ ಮುದ್ರೆಗಳೂ ಆರು, ಎರಡು, ಎರಡು, ಎರಡು, ಎರಡು, ಒಂದು ಸಂಖ್ಯೆಯ ಲಿಂಗಗಳೂ ಬರುತ್ತವೆ.

೨೮೭. ಆರು, ಮೂರು, ಆರು ಇಪ್ಪತ್ತು, ಹದಿನಾರು ಪದಗಳುಳ್ಳ ಭದ್ರಗಳು ಕ್ರಮವಾಗಿ ಬರುತ್ತವೆಂದು ಬುದ್ಧಿವಂತಿಕೆಯಿಂದ ತಿಳಿದುಕೊಳ್ಳಬೇಕು.

೨೮೮. ಅಥವಾ ಎಂಟು ಪದಗಳಲ್ಲಿ ಮುದ್ರೆಯನ್ನು ರಚಿಸಬೇಕು. ಆದರಲ್ಲಿ ಆಯಾ ಸ್ಥಾನಗಳಿಗೆ ತಕ್ಕಂತೆ ನಾಲ್ಕು ಸ್ಥಾನಗಳಲ್ಲಿ ಇಪ್ಪತ್ತು ಪದಗಳ ಭದ್ರವು ಏರ್ಪಡುತ್ತದೆ.

ಸರ್ವತ್ರ ಸಮಮುದ್ರಾಸು ಮಧ್ಯೇ ಚ ಪರಿಧಿದ್ವಯಂ ।
ಮುದ್ರಾಸೀಮಾಲಿಂಗಗತಾ ವಾಪ್ಯರ್ಧಾತುರ್ಯಕೋಷ್ಠಕಾಃ ॥ ೨೮೯ ॥

ಲಿಂಗಸ್ಕಂಧಗತಾ ಕೋಷ್ಠಾ ವರ್ಣೈರಿಷ್ಟೈಃ ಪ್ರಕಲ್ಪಯೇತ್ ।
ವಲ್ಲೀವಾಪ್ಯೋ ರ್ಮಧ್ಯಮಾನಿ ಪದಾನ್ಯುರ್ವರಿತಾನಿ ತು ॥ ೨೯೦ ॥

ಭದ್ರಶೃಂಖಲಯೋಗ್ಯಾನಿ ತದರ್ಥಂ ವಿನಿಯೋಜಯೇತ್ ।
ಅಥವಾಽದ್ಯೇ ದಶಮುದ್ರಾಸ್ಸೀಮಾಪರಿಧಯಸ್ತಥಾ ॥ ೨೯೧ ॥

ಭದ್ರಮರ್ಕಪದಂ ಮಧ್ಯೇ ಪರಿಧೀ ದ್ವೌ ಪ್ರಕಲ್ಪಯೇತ್ ।
ಏವಮಗ್ರೇ ಪರಿಧಯಸ್ತೃತೀಯೇಽಷ್ಟೈವಮುದ್ರಿಕಾಃ ॥ ೨೯೨ ॥

ಚತುಷ್ಪಾದಾತ್ಮಕಂ ಭದ್ರಂ ಪಂಚ ಮುದ್ರಾಶ್ಚ ಪಂಚಮೇ ।
ಅರ್ಕಪಾದಾತ್ಮಕಂ ಭದ್ರಂ ನಾತ್ರ ದ್ವೌ ಪರಿಧೀ ಸ್ಮೃತಾ ॥ ೨೯೩ ॥

---

೨೮೯. ಎಲ್ಲದರಲ್ಲೂ ಸಮಾನ ಮುದ್ರೆಯಾದರೆ ಅವುಗಳ ಮಧ್ಯದಲ್ಲಿ ಎರಡು ಪರಿಧಿಗಳು ಬರುತ್ತವೆ. ಮುದ್ರೆ ಸ್ಥಾನದ ಲಿಂಗವೂ ಸಮವಾಗಿಯೇ ಬರುತ್ತವೆ. ವಾಪಿಯ ಒಂದು ಅರ್ಧ ಭಾಗವು ನಾಲ್ಕು ಪದಗಳದಾಗಿರುತ್ತದೆ.

೨೯೦-೨೯೨. ಲಿಂಗದ ಕತ್ತಿನ ಮೇಲೆ ಇರುವ ಪದಗಳನ್ನು ಇಷ್ಟವಾದ ಬಣ್ಣದಿಂದ ತುಂಬಬೇಕು. ವಲ್ಲಿ ವಾಪಿಗಳ ನಡುವೆ ಇರುವ ಪದಗಳನ್ನು ಭದ್ರಕ್ಕೂ ಶೃಂಖಲೆಗೂ ಯೋಗ್ಯವಾಗಿರುವಂತೆ ವಿನಿಯೋಗಿಸಿಕೊಳ್ಳಬೇಕು. ಅದಿಲ್ಲದಿದ್ದರೆ ಮೊದಲನೆಯ ವರಿಸೆಯಲ್ಲಿ ಹತ್ತು ಮುದ್ರೆಗಳೂ, ಹತ್ತು ಸೀಮಾ ಪರಿಧಿಗಳೂ ನಡುವೆ ಹನ್ನೆರಡು ಪದಗಳುಳ್ಳ ಭದ್ರವೂ ಎರಡು ಪರಿಧಿಗಳೂ ಬರುತ್ತವೆ. ಇದೇ ರೀತಿಯಾಗಿ ಮುಂದೆಯೂ ಪರಿಧಿಗಳು ಬರುತ್ತವೆ. ಮೂರನೆಯ ವರಿಸೆಯಲ್ಲಿ ಎಂಟು ಮುದ್ರಿಕೆಗಳೂ ಬರುತ್ತವೆ.

೨೯೩. ನಾಲ್ಕು ಪದಗಳುಳ್ಳ ಭದ್ರವೂ ಬರುತ್ತವೆ. ಐದನೆಯ ವರಿಸೆಯಲ್ಲಿ ಐದು ಮುದ್ರೆಗಳು ಬರುತ್ತವೆ. ಹನ್ನೆರಡು ಪದಗಳುಳ್ಳ ಭದ್ರವು ಏರ್ಪಡುತ್ತವೆ. ಇಲ್ಲಿ ಪರಿಧಿಗಳಿಲ್ಲ.

ಸಪ್ತಮೇಽಗ್ನಿಮಿತಾ ಮುದ್ರಾ ಭದ್ರಂ ತುರ್ಯಪದಾತ್ಮಕಂ ।
ದ್ವಯೋಃ ತ್ರಯೋದಶೇಶಾಶ್ಚ ವಾಪ್ಯಶ್ಚಾಪಿ ಚತುರ್ದಶ ॥ ೨೯೪ ॥
ಭದ್ರಂ ತತ್ತ್ವಮಿತಂ ತುರ್ಯೇ ನವೇಶಾ ದಶವಾಪಿಕಾಃ ।
ಭದ್ರಂ ತತ್ತ್ವಮಿತಂ ಷಷ್ಠೇ ಪಂಚೇಶಾ ವಾಪಿಕಾಶ್ಚ ಷಟ್ ॥ ೨೯೫ ॥
ಭದ್ರಂ ತತ್ವಮಿತಂ ಶೇಷಂ ಯಥಾಪೂರ್ವಂ ಪ್ರಕಲ್ಪಯೇತ್ ।
ಅಥವಾಽದ್ಯೇ ಪಂಚದಶ ಶಿವಾ ನೇತ್ರೇಽಷ್ಟಮುದ್ರಿಕಾಃ ॥ ೨೯೬ ॥
ಶಿವದ್ವಯಂ ತ್ರಿಪಟ್ಪಾದಂ ತ್ರಿಷಟ್ಪಾದಾಶ್ಚ ಮುದ್ರಿಕಾಃ ।
ಷಟ್ತ್ರ್ಯರ್ಯಪಂಚಮುದ್ರಾಃ ಸ್ಯುಬಾಣೇಸಿಂಧುಮಿತಾಸ್ತಥಾ ॥ ೨೯೭ ॥
ಷಷ್ಠೇ ದ್ವೇ ಮುದ್ರಿಕೇ ಮುದ್ರಾ ಗಿರೌ ಮುದ್ರಾಗಜೈಸ್ತಥಾ ।
ಶಿವದ್ವಯಂ ವಾಪಿಕೇ ಚ ಸಪ್ತಮಾಂತಂ ಭವೇದಿದಂ ॥ ೨೯೮ ॥

---

೨೯೪. ಏಳನೆಯ ವರಿಸೆಯಲ್ಲಿ ಮೂರು ಮುದ್ರೆಗಳು ಬರುತ್ತವೆ. ನಾಲ್ಕು ಪದಗಳ ಭದ್ರವು ಏರ್ಪಡುತ್ತವೆ. ಎರಡನೆಯ ವರಿಸೆಯಲ್ಲಿ ಹದಿಮೂರು ಲಿಂಗಗಳೂ ಹದಿನಾಲ್ಕು ವಾಪಿಗಳೂ ಬರುತ್ತವೆ.

೨೯೫-೨೯೬. ನಾಲ್ಕನೆಯ ವರಿಸೆಯಲ್ಲಿ ಇಪ್ಪತ್ತೈದು ಪದಗಳ ಭದ್ರವು ಏರ್ಪಡುತ್ತದೆ. ಒಂಭತ್ತು ಲಿಂಗಗಳು, ಹತ್ತು ವಾಪಿಕೆಗಳು ಬರುತ್ತವೆ. ಆರನೆಯ ವರಿಸೆಯಲ್ಲಿ ಇಪ್ಪತ್ತೈದು ಪದಗಳ ಭದ್ರವು ಏರ್ಪಡುತ್ತದೆ. ಐದು ಲಿಂಗಗಳು ಆರು ವಾಪಿಕೆಗಳ ಈ ಭದ್ರವು ಇಪ್ಪತ್ತೈದು ಪದಗಳುಳ್ಳದ್ದು. ಉಳಿದುವನ್ನು ಅಲ್ಲಿಗೆ ತಕ್ಕಂತೆ ರಚಿಸಬೇಕು. ಅಥವಾ ಮೊದಲನೆಯ ವರಿಸೆಯಲ್ಲಿ ಹದಿನೈದು ಲಿಂಗಗಳೂ ಎರಡನೆಯದರಲ್ಲಿ ಎಂಟು ಮುದ್ರಿಕೆಗಳೂ ಬರುತ್ತವೆ.

೨೯೭-೨೯೮. ಮೂರನೆಯ ವರಿಸೆಯಲ್ಲಿ ಆರು ಪಾದಗಳುಳ್ಳ ಎರಡು ಲಿಂಗಗಳೂ ಆರು ಪಾದಗಳುಳ್ಳ ಆರು ಮುದ್ರಿಕೆಗಳೂ ಬರುತ್ತವೆ. ನಾಲ್ಕನೆಯ ವರಿಸೆಯಲ್ಲಿ ಐದು ಮುದ್ರಿಕೆಗಳೂ ಬರುತ್ತವೆ. ಐದನೆಯದರಲ್ಲಿ ನಾಲ್ಕು ಮುದ್ರಿಕೆಗಳೂ ಆರನೆಯ ವರಿಸೆಯಲ್ಲಿ ಎರಡು ಮುದ್ರಿಕೆಗಳು. ಏಳನೆಯ ವರಿಸೆಯಲ್ಲಿ ಎಂಟು ಮುದ್ರೆಗಳೂ ಎರಡು ಲಿಂಗಗಳೂ ಎರಡು ವಾಪಿಕೆಗಳೂ ಬರುತ್ತವೆ. ಹೀಗೆಯೇ ಏಳನೆಯ ವರಿಸೆಯಲ್ಲಿಯೂ ಬರುತ್ತದೆ.

ಭದ್ರಮಾನಂ ತತ್ತ್ವಕೋಷ್ಠಂ ಷಟ್‌ಷೋಡಶರವಿತರ್ಕ ಚ ।
ವಿಂಶಷೋಡಶಭಿಶ್ಚಾಪಿ ಕ್ರಮೇಣೈವಂ ಪ್ರಕಲ್ಪಯೇತ್ ॥ ೯೯ ॥

ಯದ್ವಾದೌ ಮುದ್ರಿಕಾಮೇಕಾಂ ಮಧ್ಯೇ ಲಿಂಗಂ ಪ್ರಕಲ್ಪಯೇತ್ ।
ಭದ್ರಮಿಂದುಕಲಂ ಕೃತ್ವಾ ತಲ್ಲಿಂಗಂ ರಚಯೇದ್ಗಜೇ ॥ ೧೦೦ ॥

ಭದ್ರಂ ಗಜೇ ತತ್ವಕೋಷ್ಠಂ ಶೇಷಂ ಸರ್ವಂ ತು ಪೂರ್ವವತ್ ।
ಅಥವಾದ್ಯತ್ರಿಪಂಕ್ತಿಷು ಪಂಚಾಬ್ಧ್ಯಗ್ನಿಮಿತಾಶಿವಾ ॥ ೧೦೧ ॥

ಮುದ್ರಾಮಧ್ಯೇ ನಿಯೋಜ್ಯಾಥ ಮರ್ಯಾದಾಪರಿಧಿಸ್ತದಾ ।
ಭದ್ರಸಂಖ್ಯಾ ತು ಪ್ರಥಮಾ ಷಟ್ಪಿದಾ ಚ ದ್ವಯಾರ್ಕಿಕಾ ॥ ೧೦೨ ॥

ದ್ವಿತೀಯಾ ವಿಂಶಕೋಷ್ಠಾ ಸ್ಯಾತ್ ದ್ವೇ ದ್ವೇ ವಾಪ್ಯೌ ಚ ಲಿಂಗಕೇ ।
ರಚಯೇತ್ಪಾರ್ಶ್ವಯೋಸ್ಸಮ್ಯಕ್ ಶೇಷಂ ಸರ್ವಂ ಪುರೋದಿತಂ ॥ ೧೦೩ ॥

---

೯೯. ಇವುಗಳಲ್ಲಿ ಭದ್ರದ ಪರಿಮಾಣವನ್ನು ಇಪ್ಪತ್ತೈದು, ಆರು, ಹದಿನಾರು ಮೂರು, ಇಪ್ಪತ್ತು, ಹದಿನಾರು, ಹದಿನಾರು, ಮನೆಗಳುಳ್ಳದ್ದನ್ನಾಗಿ ಕ್ರಮವಾಗಿಕಲ್ಪಿಸಿಕೊಳ್ಳಬೇಕು.

೧೦೦. ಮತ್ತೊಂದು ವಿಧವೇನೆಂದರೆ:— ಮೊದಲು ಒಂದು ಮುದ್ರಿಕೆಯನ್ನು ರಚಿಸಿ ಅದರ ಮಧ್ಯದಲ್ಲಿ ಒಂದು ಲಿಂಗವನ್ನು ಕಲ್ಪಿಸುವುದು. ಹದಿನಾರು ಮನೆಯ ಭದ್ರವು ಬರುವಂತೆ ಮಾಡಿ ಅಲ್ಲಿ ಲಿಂಗವನ್ನು ರಚಿಸುವುದು.

೧೦೧-೧೦೩. ಈ ಕೋಷ್ಠವು ಗಜದ ಆಕಾರವಾಗಿ ಬರುವುದು. ಇದರಲ್ಲಿ ಇಪ್ಪತ್ತೈದು ಕೋಷ್ಠಗಳಿರುವುವು. ಉಳಿದುವೆಲ್ಲವನ್ನೂ ಹಿಂದಿನದರಂತೆ ರಚಿಸುವುದು. ಅಥವಾ ಮೊದಲಿನ ಮೂರು ವರಿಸೆಗಳಲ್ಲಿ ಕ್ರಮವಾಗಿ ಐದು, ನಾಲ್ಕು, ಮೂರು ಸಂಖ್ಯೆಯ ಲಿಂಗಗಳನ್ನೂ ಮುದ್ರೆಯ ಮಧ್ಯದಲ್ಲಿ ಬರುವಂತೆ ಏರ್ಪಡಿಸಿ ಅನಂತರ ಸೀಮಾ ಪರಿಧಿಯನ್ನೂ ಬರೆಯಬೇಕು. ಭದ್ರ ಪರಿಮಾಣ ಸಂಖ್ಯೆಯು ಒಂದನೆಯದರಲ್ಲಿ ಆರು, ಎರಡನೆಯದರಲ್ಲಿ ಹನ್ನೆರಡು, ಮೂರನೆಯದರಲ್ಲಿ ಇಪ್ಪತ್ತು ಮನೆಗಳಿರಬೇಕು. ಅಲ್ಲಲ್ಲಿ ಎರಡು ಎರಡು ವಾಪಿಗಳೂ ಎರಡೆರಡು ಲಿಂಗಗಳೂ ಬರುತ್ತವೆ. ಇವನ್ನು ಪಕ್ಕಪಕ್ಕದಲ್ಲಿ ಬರುವಂತೆ ಬರೆಯಬೇಕು. ಮಿಕ್ಕುವೆಲ್ಲವೂ ಹಿಂದೆ ಹೇಳಿದಂತೆ ಬರಬೇಕು.

ಅಥವೋಕ್ತಾಃ ಪ್ರಥಮತಸ್ಸಪ್ತ ಷಟ್ಪಂಚತುರ್ಯಕಾಃ ।
ವಹ್ನ್ಯಗ್ನಿದ್ವಿಚಂದ್ರಮುದ್ರಾಸ್ಸೀಮಾಪರಿಧಯಸ್ತಥಾ ॥ ೩೦೪ ॥
ಷಟ್ಸು ಸ್ಥಾನೇಷು ಚ ಶಿವಾಸ್ತುರ್ಯತುರ್ಯಮಿತಾಃ ಸ್ಮೃತಾಃ ।
ವಿಶೇಷಸ್ತು ಲಿಂಗದ್ವಯಂ ಬಾಣೈಃ ತ್ರಿಷಟ್ತ್ರಿಷಟ್ಪದಂ ॥ ೩೦೫ ॥
ವಾಪ್ಯೋಪಿ ತನ್ಮಿತಾಃ ಕಾರ್ಯಾ ಭದ್ರಾಣಿ ವಕ್ಷ್ಯಮಾಣತಃ ।
ತತ್ತ್ವಕೋಷ್ಠ ಕಲಾ ಕೋಷ್ಠಂ ತುರ್ಯಕೋಷ್ಠಂ ಚ ಷಟ್ಪದಂ ॥ ೩೦೬ ॥
ಷಟ್ಪದಂ ಚ ಕಲಾಕೋಷ್ಠಂ ಶೇಷಂ ಸರ್ವಂ ಪುರೋದಿತಂ ।
ಅಥವಾ ಪ್ರಥಮಾದ್ಯಾವತ್ಪಂಚಮಸ್ಥಾನಕಾವಧಿ ॥ ೩೦೭ ॥
ಷಟ್ಷಟ್ಪಂಚತುರ್ಯವಹ್ನೀಮುದ್ರಾಶ್ಚ ಮಧ್ಯಶಂಕರಾಃ ।
ತುರ್ಯನೇತ್ರಾಕ್ಷಿ ನೇತ್ರಾಕ್ಷಿ ಮರ್ಯಾದಾಪರಿಧೀಸ್ತಥಾ ॥ ೩೦೮ ॥
ವಿಶೇಷಸ್ತು ಲಿಂಗದ್ವಯಂ ಬಾಣೈಸ್ತ್ರಿಷಟ್ತ್ರಿಷಟ್ಪದಂ
ಭದ್ರಸಂಖ್ಯೇಂದುಕಲೇಂದುಕಲಾರ್ಕತರ್ಕರಸಾತ್ಮಿಕಾಂ ॥ ೩೦೯ ॥

೩೦೪-೩೦೫. ಇನ್ನೊಂದು ವಿಧವು:— ಮೊದಲಿನಿಂದ ಹಿಡಿದು ನಾಲ್ಕು, ಐದು, ಆರು, ಏಳು, ಈ ವರಿಸೆಗಳಲ್ಲಿ ಒಂದು, ಎರಡು, ಮೂರು, ಮೂರು ಮುದ್ರೆಗಳೂ ಅಷ್ಟೇ ಪರಿಧಿಗಳೂ ಬರುತ್ತವೆ. ಆರು ಸ್ಥಾನಗಳಲ್ಲಿ ನಾಲ್ವತ್ತು ನಾಲ್ಕು ಪದಗಳ ಲಿಂಗಗಳೂ ಬರುತ್ತವೆ. ಇಲ್ಲಿ ವಿಶೇಷವೇನೆಂದರೆ ಎರಡು ಲಿಂಗಗಳು ಅರವತ್ತೆಂಟು ಅರವತ್ತೆಂಟು ಕೋಷ್ಠಗಳಲ್ಲಿ ಏರ್ಪಡುತ್ತವೆ.

೩೦೬. ವಾಪಿಯು ಅದೇ ರೀತಿಯಿಂದಿರಬೇಕು. ಆರನೆಯ ವರಿಸೆಯಲ್ಲಿ ಭದ್ರಗಳು ಇಪ್ಪತ್ತೈದು, ಹದಿನಾರು, ನಾಲ್ಕು, ಆರು, ಆರು, ಹದಿನಾರು ಮನೆಗಳ ಪರಿಮಾಣವುಳ್ಳವು.

೩೦೭-೩೧೦. ಮಿಕ್ಕವು ಮೊದಲಿನಂತೆಯೇ ಇರಬೇಕು. ಅಥವಾ ಮೊದಲನೆಯದರಿಂದ ಮೊದಲುಗೊಂಡು ಐದನೆಯ ವರಿಸೆಯವರೆಗೂ ಆರು, ಆರು, ಐದು, ನಾಲ್ಕು, ಮೂರು ಮುದ್ರಿಕೆಗಳೂ ಮಧ್ಯದಲ್ಲಿ ಲಿಂಗಗಳೂ, ನಾಲ್ಕು, ಎರಡು ಎರಡು, ಎರಡು, ಎರಡು, ಮರ್ಯಾದಾ ಪರಿಧಿಗಳೂ ಏರ್ಪಡಬೇಕು. ಇಲ್ಲಿನ ವಿಶೇಷವೇನೆಂದರೆ ಅರವತ್ತೆಂಟು ಅರವತ್ತೆಂಟು ಮನೆಗಳಿಂದ ಎರಡು ಲಿಂಗಗಳು

ಪ್ರಕಲ್ಪ್ಯರಚಯೇದ್ಬುದ್ಧ್ಯಾ ಶೇಷಂ ಸರ್ವಂ ಪುರೋದಿತಂ ।
ಏವಂ ನಾನಾವಿಧಾ ಭೇದಾ ಬಹವಸ್ಸಂತಿ ಭೋ ದ್ವಿಜ ॥ ೩೧೦ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಮನೋಹರಕಾಂಡೇ ಶ್ರೀರಾಮದಾಸ ವಿಷ್ಣುದಾಸ
-ಸಂವಾದೇ ಉಪನಿಷತ್ತತ್ವವಿಚಾರಪೂರ್ವಕಲಘುರಾಮತೋಭದ್ರ
ವಿಸ್ತಾರೋ ನಾಮ ಚತುರ್ಥಸ್ಸರ್ಗಃ ಸಮಾಪ್ತಃ

ಏರ್ಪಡುತ್ತವೆ. ಭದ್ರ ಸಂಖ್ಯೆಯು ಹದಿನಾರು, ಹದಿನಾರು, ಹನ್ನೆರಡು, ಆರು, ಇರುತ್ತವೆ. ಈ ರೀತಿಯಾಗಿ ರಚಿಸಿ ಉಳಿದುವನ್ನು ಬುದ್ಧಿವಂತಿಕೆಯಿಂದ ಹಿಂದೆ ಹೇಳಿದಂತೆ ರಚಿಸಬೇಕು.

ಇಂತು ಶ್ರೀ ವಾಲ್ಮೀಕಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಶ್ರೀರಾಮದಾಸ
ವಿಷ್ಣುದಾಸರ ಸಂವಾದದಲ್ಲಿ ಲಘುರಾಮತೋಭದ್ರವಿಸ್ತಾರವೆಂಬ
ನಾಲ್ಕನೆಯ ಸರ್ಗವು ಮುಗಿದುದು.

—೦—೦—೦—

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ನಾಲ್ಕನೆಯ ಸರ್ಗದ ಸಾರಾಂಶವು

ಈ ಸರ್ಗದಲ್ಲಿ ಸರ್ವತೋಭದ್ರವನ್ನು ರಚಿಸುವ ಬಗೆಯನ್ನು ವಿವರಿಸುತ್ತಾನೆ, ಅದರಲ್ಲಿ ರಾಮನ ಹೆಸರೂ ಲಿಂಗವೂ ಇರುವುದರಿಂದ ರಾಮತೋಭದ್ರವೆಂಬ ಹೆಸರು ಬಂದಿದೆ. ರಾಮನು ಪೂಜ್ಯನೂ ರುದ್ರನೂ ಪೂಜಕನೂ ಆಗಿರುವರು. ಅಲ್ಲದೆ ಈ ಭದ್ರದಲ್ಲಿ ವಾಪಿ, ನಾಮ, ಲಿಂಗ, ಶೃಂಖಲೆ, ವಲ್ಲಿ, ಚಂದ್ರ, ಪರಿಧಿಗಳೆಂಬ ಭೇದಗಳನ್ನೂ ಯಾವ ಯಾವ ಬಣ್ಣಗಳಿಂದ ತುಂಬ ಬೇಕೆಂಬುದನ್ನೂ ವಿವರಿಸಿದ್ದಾನೆ. ಈ ರಾಮಲಿಂಗತೋಭದ್ರದಲ್ಲಿ ಭೇದಗಳನ್ನು ವಿವರಿಸಿ ಇದರ ಪೂಜೆಯ ರೀತಿ ಆವರಣ ದೇವತೆಗಳು ಆ ವಾಹನೆಯ ಕ್ರಮ ಇವು ವರ್ಣಿತವಾಗಿವೆ.

ಶ್ರೀರಾಮತೋಭದ್ರವನ್ನು ಬ್ರಹ್ಮಾಂಡಕ್ಕೆ ಹೋಲಿಸಿರುವುದಲ್ಲದೆ ಸ್ಥೂಲ ಸೂಕ್ಷ್ಮದೇಹಗಳಿಗೂ ಹೋಲಿಸಿರುವನು. ಈ ಮುದ್ರೆಯೇ ಬ್ರಹ್ಮನು ಎಂಬುದಕ್ಕೆ ಅನೇಕ ಶ್ರುತಿಗಳನ್ನು ಉದಾಹರಿಸಿರುವನು.

ಈ ಸರ್ಗದಲ್ಲಿ ಭದ್ರಗಳ ರಚನೆಯನ್ನು ಬಹು ವಿಧವಾಗಿ ವಿವರಿಸಿರುವುದೇ ಒಂದು ವಿಶೇಷವು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಪಂಚಮಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಪೂರ್ವೋಕ್ತಶ್ರೇಷ್ಠಮುದ್ರೀಯರಾಮತೋಭದ್ರವಿಸ್ತರಾನ್ ।
ವದಾಮ್ಯಹಂ ತವಾಗ್ರೇ ಹಿ ವಿಷ್ಣುದಾಸ ಶ್ರುಣುಷ್ವ ತತ್ ॥ ೧ ॥

ತಿರ್ಯಗೂರ್ಧ್ವಂ ರಕ್ತರೇಖಾ ಏಕಷಷ್ಟಿಮಿತಾಶ್ಶುಭಾಃ ।
ಅಂತಾತ್ಕೃಷ್ಣರಕ್ತಶುಕ್ಲಪೀತಾಃ ಪರಿಧಯಃ ಕ್ರಮಾತ್ ॥ ೨ ॥

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡದ ಐದನೆಯ ಸರ್ಗವು

೧. ಶ್ರೀರಾಮದಾಸನು ಹೇಳಿದನು—ಎಲೈ ವಿಷ್ಣುದಾಸನೇ! ಹಿಂದೆ ರಾಮತೋಭದ್ರವೆಂಬ ಮುದ್ರೆಯನ್ನು ನಿನಗೆ ಹೇಳಿದೆನಷ್ಟೆ! ಅದರಲ್ಲಿ ಅನೇಕ ಬಗೆಗಳಿರುವುವು. ಅವುಗಳು ಹೇಗಾಗುತ್ತವೆ? ಅವುಗಳೆಷ್ಟು ಎಂಬ ವಿಷಯವನ್ನು ಹೇಳುತ್ತೇನೆ.

೨. ಅಡ್ಡಡ್ಡಲಾಗಿಯೂ ಉದ್ದುದ್ದವಾಗಿಯೂ ಅರವತ್ತೊಂದು ರೇಖೆಗಳನ್ನು ಕೆಂಪು ವರ್ಣದಲ್ಲಿ ಎಳೆಯಬೇಕು. ಅವುಗಳಲ್ಲಿ ಕೊನೆಯಿಂದ ಮೊದಲುಮಾಡಿಕೊಂಡು ಕಪ್ಪು, ಕೆಂಪು, ಬಿಳುಪು, ಅರಿಶಿನದ ರಂಗುಗಳನ್ನು ಒಂದೊಂದಕ್ಕೂ ಎಳೆಯಬೇಕು. ಅವು ಪರಿಧಿಗಳು.

ದ್ವಾದಶಾಂತೇ ಪೀತಕೃಷ್ಣರಕ್ತಶುಕ್ಲಾಃ ಪುನಃ ಸ್ಮೃತಾಃ |
ಪಂಚಮಃ ಪೀತವರ್ಣೋಽಪಿ ಸರ್ವತೋಭದ್ರಮಾಲಿಖೇತ್ || ೩ ||

ಬಹಿಃ ಪಂಜ್ಕ್ತೌ ದ್ವಾದಶಾಂತೇ ಸೀಮಾಪರಿಧಯಃ ಸ್ಮೃತಾಃ |
ಪೀತಾ ವಾ ಲೋಹಿತಾಃ ಕಾರ್ಯಾ ಮಧ್ಯೇ ದ್ವೌ ಪರಿಧೀ ಸ್ಮೃತೌ || ೪ ||

ತತೋ ಮಧ್ಯಗೇಹಯೋರ್ದ್ವೇ ಮುದ್ರಿಕೇ ವೇದವರ್ಣಕೇ |
ಚತುಃಪಾರ್ಶ್ವೇಷು ಚತ್ವಾರಿ ನಾಮಾನಿ ಪೂರ್ವವಲ್ಲಿಖೇತ್ || ೫ ||

ಕೋಣಗೇಹೇಷು ಕೋಣೇಂದುಸ್ತ್ರಿಪದಃ ಶುಕ್ಲವರ್ಣಕಃ |
ಏಕಾದಶಪದಾ ಕೃಷ್ಣಾ ಶೃಂಖಲಾ ಪೀತವರ್ಣಕಾ || ೬ ||

---

೩ ಹನ್ನೆರಡಕ್ಕಿಂತ ಮುಂದೆ ಮತ್ತೆ ಅರಿಶಿನ, ಕಪ್ಪು, ಕೆಂಪು, ಬಿಳುಪು, ವರ್ಣವನ್ನು ತುಂಬಬೇಕು. ಇವು ಪರಿಧಿಗಳಾಗುತ್ತವೆ. ಐದನೆಯ ವರಿಸೆಯಲ್ಲಿ ಅರಿಶಿನದ ವರ್ಣವನ್ನು ಬಳಿಯಬೇಕು. ಈ ರೀತಿಯಾಗಿ ಸರ್ವತೋಭದ್ರವನ್ನು ಬರೆಯಬೇಕು.

೪-೫. ಈ ಹನ್ನೆರಡು ಮನೆಯ ಹೊರಗಿರುವುದು ಸೀಮಾ ಪರಿಧಿಗಳು ಎನ್ನಿಸಿಕೊಳ್ಳುತ್ತವೆ. ಇವುಗಳಲ್ಲಿ ಬೇಕಾದ ವರ್ಣದಿಂದ ಎರಡು ಪರಿಧಿಗಳನ್ನು ರಚಿಸಬೇಕು. ಮಧ್ಯದಲ್ಲಿ ಉಳಿದ ಮನೆಗಳಲ್ಲಿ ಎರಡು ಮುದ್ರಿಕೆಗಳನ್ನು ನಾಲ್ಕು ವರ್ಣಗಳಲ್ಲಿ ರಚಿಸಬೇಕು. ನಾಲ್ಕು ಪಕ್ಕಗಳಲ್ಲಿಯೂ ನಾಲ್ಕು ನಾಮಗಳನ್ನು ಹಿಂದಿನ ಸರ್ಗದಲ್ಲಿ ಹೇಳಿರುವಂತೆ ಬರೆಯಬೇಕು.

೬-೭. ಮೂಲೆಯ ಮನೆಗಳಲ್ಲಿ ಮೂರಕ್ಕೆ ಚಂದ್ರರೇಖೆಯನ್ನು ಬಿಳಿಯ ವರ್ಣದಿಂದ ಬರೆಯಬೇಕು. ಹನ್ನೊಂದು ಮನೆಗಳಲ್ಲಿ ಕಪ್ಪು ಬಣ್ಣದ ಸರಪಣಿ ಅನಂತರ ಹತ್ತು ಮನೆಗಳಲ್ಲಿ ಮತ್ತೊಂದು ಸರಪಣಿ ಹಸರು ಬಣ್ಣದ್ದು. ಅನಂತರ

ದಶಪದಾ ಶೃಂಖಲಾನ್ಯಾ ವಲ್ಲರೀ ಹರಿತಾ ಸ್ಮೃತಾ ।
ಏಕೋನವಿಂಶತ್ಪದಜಾ ಭದ್ರಂ ರಕ್ತಂ ನವಾತ್ಮಕಂ ॥ ೭ ॥

ತ್ರಯೋದಶಪದಾ ವಾಪೀ ಸಿತಾನ್ಯಂ ತ್ರಿಪದಾತ್ಮಕಂ ।
ರಕ್ತಂ ಭದ್ರಂ ಪೀತಭದ್ರಂ ತಿರ್ಯಙ್ನವಪದಾತ್ಮಕಂ ॥ ೮ ॥

ಭದ ಯೋಃ ಶೃಂಖಲಾ ರಕ್ತಾ ದ್ವಿಪದ್ಯೈವ ಸಮಂತತಃ ।
ಅಷ್ಟಮುದ್ರಾತ್ಮಕಂ ರಾಮತೋಭದ್ರಂ ತೇ ಮಯೋದಿತಂ ॥ ೯ ॥

ತ್ಯಕ್ತ್ವಾ ಪೀತಾಂ ಶೃಂಖಲಾಂ ವಾ ಲಿಂಗಂ ಕೃಷ್ಣಂ ತ್ರಿಷಟ್ಪದಂ ।
ಖಂಡವಾಪ್ಯಃ ಚತುಷ್ಪಾದಜಾ ಭದ್ರಂ ಲೋಹಿತಂ ರಸೈಃ ॥ ೧೦ ॥

ತಿರ್ಯಕ್ ಭದ್ರೇ ಪೀತವರ್ಣೇ ನಿಧಿಜಂ ವೇದಜಂ ತಥಾ ।
ಲಿಂಗೋರ್ಧ್ವಂ ಮಾಲಿಕಾ ರಕ್ತಾ ತ್ರಿಪದಾ ವಾ ತ್ರಿಲೋಚನಾಃ ॥ ೧೧ ॥

ಹತ್ತೊಂಭತ್ತು ಮನೆಗಳಲ್ಲಿ ಅರಿಶಿನ ಬಣ್ಣದ ವಲ್ಲಿಯನ್ನು ರಚಿಸಬೇಕು. ಇಲ್ಲಿ ಒಂಭತ್ತು ಮನೆಯ ಕೆಂಪು ಬಣ್ಣದ ಭದ್ರವು ಏರ್ಪಡುತ್ತದೆ.

೮. ಹದಿಮೂರು ಬಣ್ಣದ ಒಂದು ವಾಪಿಕೆಯು ಬಿಳಿಯ ಬಣ್ಣದ್ದು. ಇದು ತ್ರಿಪದಾತ್ಮಕವಾದ ಭದ್ರವು. ಇದು ರಕ್ತವರ್ಣದಿಂದಿರಬೇಕು. ಒಂಭತ್ತು ಪದಗಳದ್ದು ಹಳದಿಯ ಬಣ್ಣದ ಒಂದು ಭದ್ರವೂ ಏರ್ಪಡುತ್ತದೆ.

೯ ಈ ಭದ್ರಗಳ ನಡುವೆ ಕೆಂಪು ಬಣ್ಣದ ಸರಪಣಿಯನ್ನು ಬರೆಯಬೇಕು. ಇದು ಎರಡು ಮನೆಗಳದ್ದಾಗಿರಬೇಕು. ಇದೇನೇ ಎಂಟು ಮುದ್ರೆಗಳುಳ್ಳ ರಾಮತೋಭದ್ರವು. ಇದನ್ನು ನಿನಗೆ ಹೇಳಿದ್ದೇನೆ.

೧೦. ಅರಿಶಿನ ವರ್ಣದ ಸರಪಣಿಗಳನ್ನು ಬರೆಯದೆ ಮೂವತ್ತಾರು ಮನೆಗಳದರ ಒಂದು ಲಿಂಗವನ್ನು ರಚಿಸಬೇಕು. ಅದು ಕೃಷ್ಣವರ್ಣದ್ದಾಗಿರಬೇಕು. ಎರಡು ಖಂಡವಾಪಿಕೆಗಳು ನಾಲ್ಕು ಪಾದಗಳದು ಆರುಪಾದಗಳ ಕೆಂಪು ಭದ್ರವು.

೧೧. ಅಡ್ಡಲಾಗಿ ಹಳದಿಯ ಬಣ್ಣದಿಂದ ಎರಡು ಭದ್ರಗಳು ಬರುತ್ತವೆ. ಅವುಗಳಲ್ಲಿ ಒಂದು ಒಂಭತ್ತು ಪದಗಳದು. ಮತ್ತೊಂದು ನಾಲ್ಕು ಪದಗಳದು. ಲಿಂಗದ ಮೇಲುಗಡೆಯಲ್ಲಿ ಒಂದು ಮಾಲಿಕೆಯನ್ನು ಬರೆಯಬೇಕು. ಅದು ಮೂರು ಪದಗಳದ್ದಾಗಿರಬೇಕು. ಮತ್ತು ಕೆಂಪು ಬಣ್ಣದ್ದಾಗಿರಬೇಕು. ಈ ಮೂರು ಪದಗಳ ಮಾಲಿಕೆಯು ಕಣ್ಣುಗಳಂತೆಯೂ ಆಗಿರಬಹುದು.

ಅಷ್ಟಮುದ್ರಾತ್ಮಕಂ ಚೈತತ್ಸಲಿಂಗಂ ರಾಮಭದ್ರಕಂ ।
ತಿರ್ಯಗೂರ್ಧ್ವಂ ತ್ರಿಪಂಚಾಶದ್ರೇಖಾಃ ಸರ್ವಂ ಹಿ ಪೂರ್ವವತ್ ॥ ೧೨ ॥
ಮುದ್ರಿಕಾಪರಿಧೀನಾಂ ಚ ಷಟ್ಕಂ ಸ್ವೇಚ್ಛಂ ಪ್ರಪೂರಯೇತ್ ।
ಚತುರ್ಮುದ್ರಾತ್ಮಕಂ ಚೈತತ್ಸಲಿಂಗಂ ಪಾಹಿ ಪೂರ್ವವತ್ ॥ ೧೩ ॥
ತಿರ್ಯಗೂರ್ಧ್ವಂ ತ್ರಿಸಪ್ತಾಶ್ಚ ರೇಖಾಃ ಕಾರ್ಯಾಸ್ಸುಲೋಹಿತಾಃ ।
ತಾಸು ಚತುರ್ಷು ಪಾರ್ಶ್ವೇಷು ಕಾರ್ಯಾಃ ಪರಿಧಯಃ ಕ್ರಮಾತ್ ॥ ೧೪ ॥
ಕೃಷ್ಣರಕ್ತಶುಕ್ಲಪೀತಾ ದ್ವಾದಶಾಂತೇ ಪದೇಷು ಚ ।
ಕಾರ್ಯಃ ಪುನಶ್ಚತುಃಪಾರ್ಶ್ವೇ ಪರಿಧಿಃ ಪೀತವರ್ಣಕಃ ॥ ೧೫ ॥
ತದಗ್ರೇ ರಕ್ತವರ್ಣಶ್ಚ ಪರಿಧಿರ್ಹಿ ಸಮಂತತಃ ।
ತತೋಽಷ್ಟಪದೋ ಪರಿತಃ ಪರಿಧಿಃ ಪೀತವರ್ಣಕಃ ॥ ೧೬ ॥

---

೧೨. ಇದು ಎಂಟು ಮುದ್ರೆಗಳಿಂದ ಕೂಡಿದ ಸಲಿಂಗರಾಮತೋಭದ್ರವು ಎಂದೆನಿಸಿಕೊಳ್ಳುತ್ತದೆ. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಐವತ್ತ ಮೂರು ಗೆರೆಗಳನ್ನು ಎಳೆಯಬೇಕು.

೧೩. ಉಳಿದುವನ್ನು ಹಿಂದಿನಂತೆಯೇ ಬರೆಯಬೇಕು. ಮುದ್ರಿಕೆ ಪರಿಧಿಗಳನ್ನು ಆರು ಮನೆಗಳಿಂದ ರಚಿಸಬೇಕು. ಇದು ಬಿಳಿಯ ಬಣ್ಣದ್ದಾಗಿರಬೇಕು. ಇದು ಚತುರ್ಮುದ್ರಾತ್ಮಕ ಸಲಿಂಗ ರಾಮತೋ ಭದ್ರವು.

೧೪. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಎಪ್ಪತ್ತಮೂರು ರೇಖೆಗಳನ್ನು ಬರೆಯಬೇಕು. ಇವು ಕೆಂಪು ಬಣ್ಣದ್ದಾಗಿರಬೇಕು. ಅವುಗಳ ನಾಲ್ಕು ದಿಕ್ಕುಗಳಲ್ಲಿಯೂ ಪರಿಧಿಗಳನ್ನು ಊಹಿಸಿ ಬರೆಯಬೇಕು.

೧೫. ಅವುಗಳು ಕಪ್ಪು, ಕೆಂಪು, ಬಿಳುಪು, ಹಸುರು ಬಣ್ಣಗಳುದ್ದಾಗಿರಬೇಕು. ಅನಂತರ ಹನ್ನೆರಡು ಮನೆಗಳನ್ನು ಬಿಟ್ಟು ಮುಂದಿನ ಕೊನೆಯ ಮನೆಗಳಿಗೆ ಹಸುರು ಬಣ್ಣವನ್ನು ಬಳಿದು ನಾಲ್ಕು ದಿಕ್ಕುಗಳಲ್ಲಿಯೂ ಪರಿಧಿಗಳನ್ನು ಮಾಡಬೇಕು.

೧೬. ಅದರ ಮುಂದಕ್ಕೆ ಕೆಂಪು ಬಣ್ಣದಿಂದ ಪರಿಧಿಗಳನ್ನು ಮಾಡಬೇಕು. ಅದರ ಮುಂದಕ್ಕೆ ಎಂಟು ಮನೆಗಳನ್ನು ಬಿಟ್ಟು ಅದರ ಸುತ್ತಲೂ ಹಸುರು ಬಣ್ಣದಿಂದ ಪರಿಧಿಯನ್ನು ಬರೆಯಬೇಕು.

ತತಷ್ಷಷ್ಠಪದೊರ್ಧ್ವಂ ಚ ಪುನಃ ಪೀತಃ ಪ್ರಕಾರಯೇತ್ ।
ಆದ್ಯಸ್ಥಾನೇ ಚ ಸೀಮಾಖ್ಯಃ ಪೀತಾಃ ಪರಿಧಯೋಥ ವಾ ॥ ೧೭ ॥

ರಕ್ತಾ ವೇದಮಿತಾಃ ಕಾರ್ಯಾ ದ್ವಾದಶಾಂತೇ ಪದೇಷು ಚ ।
ಕೊಣಗೇಹೇ ಪೂರ್ವವಚ್ಚ ಮಧ್ಯೇ ಚ ಮುದ್ರಿಕಾತ್ರಯಂ ॥ ೧೮ ॥

ತತೋ ದ್ವಿತೀಯಸ್ಥಾನೇ ಹಿ ಚಂದ್ರಃ ಕೃಷ್ಣಾ ಚ ಶೃಂಖಲಾ ।
ಸಪ್ತಪದಾ ವಲ್ಲರೀ ಚ ಚತುರ್ದಶಸು ಪಾದಿಕಾ ॥ ೧೯ ॥

ವಲ್ಲ್ಯೋರ್ನಿಯೋಜನಂ ಕಾರ್ಯಂ ರಕ್ತಂ ಭದ್ರಂ ಹಿ ಷಟ್ಪದಂ ।
ತ್ರಯೋದಶಪದಾಃ ಕಾರ್ಯಾ ವಾಪ್ಯೋ ವೇದಮಿತಾಸ್ಸಿತಾಃ ॥ ೨೦ ॥

ಷಡ್ವಿಂಶತ್ಪದಜಾಃ ಕಾರ್ಯಾಸ್ತ್ರಿಶಿವಾಃ ಕೃಷ್ಣವರ್ಣಕಾಃ ।
ವಾಪ್ಯಸ್ತ್ರಯೊದಶ ಲೇಖ್ಯಾನಿ ಲಿಂಗಮಧ್ಯೇ ಪದೇಷು ಚ ॥ ೨೧ ॥

---

೧೭. ಅನಂತರ ಅದರ ಮುಂದಕ್ಕೆ ಆರು ಮನೆಗಳನ್ನು ಬಿಟ್ಟು ಮತ್ತೆ ಹಸುರು ಬಣ್ಣದಿಂದ ಪರಿಧಿಗಳನ್ನು ರಚಿಸಬೇಕು. ಈ ಪರಿಧಿಗಳಲ್ಲಿ ಮೊದಲನೆಯದು ಸೀಮಾ ಪರಿಧಿ ಎಂದೆನಿಸಿಕೊಳ್ಳುತ್ತದೆ.

೧೮. ಈ ಪರಿಧಿಯು ನಾಲ್ಕು ಮನೆಗಳುಳ್ಳದ್ದಾಗಿರಬೇಕು. ಇವಕ್ಕೆ ಕೆಂಪು ಬಣ್ಣವನ್ನು ಬೇಕಾದರೂ ಹಾಕಬಹುದು. ಹನ್ನೆರಡು ಮನೆಗಳ ಅಂತ್ಯದಲ್ಲಿ ಕೋಣಗಳ ಮನೆಗಳ ಮಧ್ಯದಲ್ಲಿ ಮೂರು ಮುದ್ರೆಗಳು ಬರುತ್ತವೆ.

೧೯. ಅನಂತರ ಎರಡನೆಯ ವರಿಸೆಯಲ್ಲಿ ಒಂದು ಚಂದ್ರವು ಬರಬೇಕು. ಕಪ್ಪು ಬಣ್ಣದ ಸರಪಣಿಯು ಬರಬೇಕು. ಈ ಸರಪಣಿಯು ಏಳು ಮನೆಗುಳುಳ್ಳದ್ದಾಗಿರಬೇಕು. ಅನಂತರ ಹದಿನಾಲ್ಕು ಮನೆಗಳಿಗೆ ಲತೆಯು ಬರಬೇಕು.

೨೦. ಈ ವಲ್ಲಿಗಳ ಮಧ್ಯದಲ್ಲಿ ಆರು ಮನೆಗಳುಳ್ಳ ಭದ್ರವು ಬರುತ್ತದೆ. ಇದಕ್ಕೆ ರಕ್ತವರ್ಣವನ್ನು ತುಂಬಿರಬೇಕು. ಅನಂತರ ಹದಿಮೂರು ಮನೆಗಳ ಪ್ರಮಾಣದ ವಾಪಿಗಳು ಬರುತ್ತವೆ. ಇವು ಬಿಳಿಯ ಬಣ್ಣದಲ್ಲಿರಬೇಕು.

೨೧. ಅನಂತರ ಇಪ್ಪತ್ತಾರು ಮನೆಯ ಪ್ರಮಾಣದ ಮೂರು ಲಿಂಗಗಳಾಗುತ್ತವೆ. ಇವುಗಳಿಗೆ ಕಪ್ಪು ಬಣ್ಣವನ್ನು ತುಂಬಿರಬೇಕು. ಈ ಲಿಂಗಗಳ ಮಧ್ಯದಲ್ಲಿ ಹದಿಮೂರು ವಾಪಿಗಳು ಬರುತ್ತವೆ.

ರಾಮೇತಿ ರಾಮನಾಮಾನಿ ಮಷ್ಯಾ ತತ್ಕರ್ಣಿಕಾಸ್ಥಲೇ ।
ಮೂರ್ಧಾ ಚತುಷ್ಪದೋ ಜ್ಞೇಯಃ ಪಾದಾಭ್ಯಾಂ ಕಂಠ ಈರಿತಃ ॥ ೨೨ ॥
ಚತುಷ್ಪದೌ ಲಿಂಗಪಾರ್ಶ್ವೌ ಪಾದಸ್ಕಂಧೌ ಹಿ ಷಟ್ಪದೌ ।
ಶಿವನೇತ್ರಸ್ಥಲೇ ಶುಕ್ಲೇ ದ್ವಿಪದೇ ರಕ್ಷಯೇದ್ಧಿಯಾ ॥ ೨೩ ॥
ವಾಪ್ಯುಪರಿಷ್ಟಾಚ್ಛೇಷಾಣೀ ಯಾನಿ ಹ್ಯಷ್ಟಪದಾನಿ ಚ ।
ತೇಷು ರಕ್ತಾನಿ ತ್ರೀಣ್ಯಾದೌ ಪಂಚ ಪೀತಾನಿ ಚೋಪರಿ ॥ ೨೪ ॥
ಮಧ್ಯೇಥ ಸರ್ವತೋಭದ್ರಂ ಪೂರ್ವವಚ್ಚೈವ ನೋ ಪರಂ ।
ಸರ್ವಲಿಂಗರಾಮಭದ್ರತ್ರಯಮೇಕೇ ಮಯೇರಿತಂ ॥ ೨೫ ॥
ಏತದ್ದ್ವಾದಶಮುದ್ರಾಭೀ ರಾಮಲಿಂಗಾತ್ಮಕಂ ಶುಭಂ ।
ಅತಿರಮ್ಯಂ ವಿಚಿತ್ರಂ ಚ ರಾಮತುಷ್ಟ್ಯರ್ಥವಿಸ್ತಾರಿತಂ ॥ ೨೬ ॥

---

೨೨. ಈ ವಾಪಿಗಳಲ್ಲಿ ರಾಮನಾಮಗಳು ಬರುತ್ತವೆ. ಇವನ್ನು ಕಪ್ಪು ಬಣ್ಣದಿಂದ ಬರೆಯಬೇಕು. ಲಿಂಗದ ತಲೆಯು ನಾಲ್ಕು ಪಾದಗಳಿಂದ ಬರುತ್ತದೆ. ಎರಡು ಮನೆಗಳು ಕಾಲುಗಳಿಗೂ ಎರಡು ಮನೆಗಳು ಕಂಠಕ್ಕೂ ಬರುತ್ತವೆ.

೨೩. ಲಿಂಗದ ಪಾರ್ಶ್ವಗಳಾದರೋ ನಾಲ್ಕು ಮನೆಗಳಾಗಿರುತ್ತವೆ. ಕಾಲು ಕತ್ತುಗಳು ಆರು ಮನೆಗಳುಳ್ಳವಾಗಿರುತ್ತವೆ. ಆ ಲಿಂಗದ ಕಣ್ಣುಗಳು ಎರಡು ಮನೆಗಳುಳ್ಳದ್ದಾಗಿ ಬಿಳಿಯ ಬಣ್ಣದಿಂದ ರಚಿತವಾಗಿರಬೇಕು. ಇವನ್ನು ಬುದ್ಧಿವಂತಿಕೆಯಿಂದ ರಚಿಸಬೇಕು.

೨೪. ಈ ವಾಪಿಗಳ ಮೇಲು ಭಾಗದಲ್ಲಿ ಎಂಟು ಮನೆಗಳು ಉಳಿದಿರುತ್ತವೆ. ಅವುಗಳಲ್ಲಿ ಮೊದಲನೆ ಮೂರು ಮನೆಯನ್ನು ಕೆಂಪು ಬಣ್ಣಕ್ಕೆ ರಚಿಸಬೇಕು. ಆಪರ ಮುಂದಿನ ಐದು ಮನೆಗಳನ್ನು ಹಸುರು ಬಣ್ಣದಿಂದ ತುಂಬಬೇಕು.

೨೫. ಮಧ್ಯದಲ್ಲಿ ಸರ್ವತೋ ಭದ್ರವು ಏರ್ಪಡುತ್ತದೆ. ಅದು ಮೊದಲಿನದರಂತೆ ಇರುತ್ತದೆಯೇ ಹೊರತು ವ್ಯತ್ಯಾಸವಿರುವುದಿಲ್ಲ. ಇದೇ ಸರ್ವಲಿಂಗರಾಮತೋ ಭದ್ರವು. ಇವು ಮೂರು ಏರ್ಪಡುತ್ತದೆ.

೨೬. ಇದು ಹನ್ನೆರಡು ಮುದ್ರೆಗಳುಳ್ಳ ರಾಮಲಿಂಗತೋ ಭದ್ರವು. ಇದು ವಿಚಿತ್ರವಾಗಿಯೂ ಮನೋಹರವಾಗಿಯೂ ಇದೆ. ಇದರಲ್ಲಿ ರಾಮನು ಬಹು ತುಷ್ಟಿಯನ್ನು ಹೊಂದುತ್ತಾನೆ.

ತಿರ್ಯಗೂರ್ಧ್ವಮಂಕೆಸಪ್ತರೇಖಾಸ್ಸರ್ವಂ ಹಿ ಪೂರ್ವವತ್ ।
ಚತುರ್ಮುದ್ರಾತ್ಮಕಂ ಭದ್ರಂ ಯಥಾ ತದ್ವಚ್ಚ ಮಧ್ಯಮೇ ॥ ೨೭ ॥

ಆದ್ಯೇ ತಿಸ್ರಃಸ್ಥಲೇ ಮುದ್ರಾ ಸೀಮಾಪರಿಧಯಸ್ತಥಾ ।
ಮಧ್ಯೇ ತ್ರಯಸ್ತ್ರಯೋ ಜ್ಞೇಯಾ ಅಂತೇ ದ್ವೌ ದ್ವೌ ಶುಭೌ ಸ್ಮೃತಾ ॥

ಏತತ್ ಷೋಡಶಮುದ್ರಾಭಿಃ ರಾಮತೋಭದ್ರಮೀರಿತಂ ।
ಅಂತರ್ಗೇಹೇ ಕೃತೇ ಲಿಂಗೇ ಸಲಿಂಗಂ ಷೋಡಶಾತ್ಮಕಂ ॥ ೨೯ ॥

ತಿರ್ಯಗೂರ್ಧ್ವಂ ಭೂಮಿಬಾಣವೇದರೇಖಾಸ್ಸುಲೋಹಿತಾಃ ।
ಅಷ್ಟಮುದ್ರಾತ್ಮಕಂ ಮಧ್ಯೇ ರಾಮತೋಭದ್ರಕಂ ಲಿಖೇತ್ ॥ ೩೦ ॥

---

೨೭. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಎಪ್ಪತ್ತ ಒಂಭತ್ತು ರೇಖೆಗಳನ್ನು ಎಳೆಯಬೇಕು. ಇದರಲ್ಲಿ ಹಿಂದೆ ಹೇಳಿದಂತೆಯೇ ವಾಪಿಗಳನ್ನೂ ಭದ್ರಗಳನ್ನೂ ಬಣ್ಣದಿಂದ ನಿರ್ಮಿಸಬೇಕು. ಇದರ ಆದಿಯಲ್ಲಿ ನಾಲ್ಕು ಮುದ್ರೆಗಳ ಭದ್ರವು ಬರುವುದು. ಮಧ್ಯದಲ್ಲಿಯೂ ಹಾಗೆಯೇ ಬರುವುದು.

೨೮. ಮೊದಲನೆಯ ಸಾಲಿನಲ್ಲಿ ಮೂರು ಜಾಗದಲ್ಲಿ ಮುದ್ರೆಗಳು ಬರುತ್ತವೆ. ಮೂರು ಸೀಮಾ ಪರಿಧಿಗಳೂ ಬರುತ್ತವೆ. ಈ ಸೀಮಾ ಪರಿಧಿಗಳ ಮಧ್ಯದಲ್ಲಿ ಮೂರು ಮೂರು ಮನೆಯದೂ ಕೊನೆಗಳಲ್ಲಿ ಎರಡೆರಡು ಮನೆಗಳದೂ ಬರುತ್ತವೆ.

೨೯. ಇದಕ್ಕೆ ಹದಿನಾರು ಮನೆಗಳ ರಾಮತೋ ಭದ್ರವೆಂದು ಹೆಸರು. ಮಧ್ಯದ ಮನೆಗಳಲ್ಲಿ ಲಿಂಗಗಳನ್ನು ನಿರ್ಮಿಸಿದರೆ ಆ ಲಿಂಗಗಳು ಹದಿನಾರು ಆಗುತ್ತವೆ.

೩೦. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ನಾಲ್ಕುನೂರ ಐವತ್ತೊಂದು ರೇಖೆಗಳನ್ನು ಎಳೆಯಬೇಕು. ಆ ರೇಖೆಗಳು ಕೆಂಪು ಬಣ್ಣದಿಂದಿರಬೇಕು. ಇದರ ಮಧ್ಯದಲ್ಲಿ ಎಂಟು ಮುದ್ರೆಗಳುಳ್ಳ ರಾಮತೋ ಭದ್ರವನ್ನು ರಚಿಸಬೇಕು.

ತಿರ್ಯಗೂರ್ಧ್ವಗಂ ಪರಿಧಯಃ ಪೀತಾಶ್ಚೈವ ಸಮಂತತಃ ।
ದ್ವಾದಶಾಂತೇ ರಚನೀಯಾ ಬಹಿಃ ಪರಿದಯೋಽಪಿ ಚ ॥ ೩೧ ॥

ಪೂರ್ವವತ್ಕೋಣಗೇಹಾನಿ ಮುದ್ರಾಣಾಂ ಚ ತ್ರಯೋಽಧುನಾ ।
ಉಕ್ತೇ ದ್ವೇ ಮುದ್ರಿಕೇ ಪೂರ್ವಂ ತದಧೋ ವೇದಮುದ್ರಿಕಾಃ ॥ ೩೨ ॥

ಮಧ್ಯೇ ಸರ್ವತ್ರ ಪರಿಧಿದ್ವಯಂ ನಾನ್ಯಸ್ಥಲಂ ಕದಾ ।
ತತೋ ರಸಮಿತಾ ಹ್ಯಷ್ಟವಿಶೇಷಃ ಪಂಚಮೇ ಸ್ಥಲೇ ॥ ೩೩ ॥

ಷಣ್ಮುದ್ರಿಕಾ ವೇದ ವಾಪ್ಯಶ್ಚ ಚತುರಶೀತಿಪಾದಿಕಾಃ ।
ವಾಪ್ಯಂತರ್ಗತಕುಂಡಂ ಚ ಕೃಷ್ಣಂ ದ್ವಾದಶಪಾದಜಂ ॥ ೩೪ ॥

ವಾಪೀಪಾರ್ಶ್ವೇಷು ಭದ್ರಾಣಿ ಚತ್ವಾರಿ ಲೋಹಿತಾನಿ ಚ ।
ಪೃಥಕ್ ಪೃಥಕ್ ಪಂಚದಶಪದ್ಯೈಃ ಜ್ಞೇಯಾನಿ ತಾನಿ ಹಿ ॥ ೩೫ ॥

---

೩೧. ಅಡ್ಡಲಾಗಿಯೂ ಉದ್ದವಾಗಿಯೂ ಸುತ್ತಲೂ ಸೀಮಾ ಪರಿಧಿಗಳನ್ನು ರಚಿಸಬೇಕು. ಅವು ಹಸುರು ಬಣ್ಣಕ್ಕಿರಬೇಕು ಇವು ಹನ್ನೆರಡಿರಬೇಕು. ಹೊರಗಡೆ ಅಂದರೆ ಅಂಚಿನಲ್ಲಿಯೂ ಪರಿಧಿಗಳನ್ನು ಬರೆಯಬೇಕು.

೩೨. ಕೋಣಗಳ ಮನೆಗಳೂ ಹಿಂದಿನಂತೆಯೇ ಬರೆಯಲ್ಪಡಬೇಕು. ಆಗ ಮುಂದೆ ಬರುವ ಮುದ್ರೆಯನ್ನು ಹೇಳುತ್ತೇನೆ. ಮೊದಲನೆಯ ಸಾಲಿನಲ್ಲಿ ಎರಡು ಮುದ್ರಿಕೆಗಳೂ ಅದರ ಕೆಳಗೆ ನಾಲ್ಕು ಮುದ್ರೆಗಳೂ ಬರುತ್ತವೆ.

೩೩-೩೪. ಅನಂತರ ಮಧ್ಯದಲ್ಲಿ ಎಲ್ಲಾ ಸಾಲಿನಲ್ಲಿಯೂ ಎರಡೆರಡು ಪರಿಧಿಗಳು ಬರುತ್ತವೆ. ಇನ್ನೆಲ್ಲಿಯೂ ಬರುವುದಿಲ್ಲ. ಅನಂತರ ಐದರ ಸಾಲಿನ ಎಂಟು ಮುದ್ರೆಗಳು ಬರುತ್ತವೆ. ಐದನೆಯ ಸಾಲಿನಲ್ಲಿ ವಿಶೇಷವನ್ನು ಹೇಳುತ್ತೇನೆ. ಆರು ಮುದ್ರೆಗಳೂ ನಾಲ್ಕು ವಾಪಿಗೂ ಬರುತ್ತವೆ. ಇವು ಇಪ್ಪತ್ತನಾಲ್ಕು ಮನೆಗಳುಳ್ಳದ್ದಾಗಿರುತ್ತವೆ. ಆ ವಾಪಿಗಳ ಮಧ್ಯದಲ್ಲಿರುವ ಮನೆಯನ್ನು ಕಪ್ಪು ಬಣ್ಣದಿಂದ ತುಂಬಬೇಕು. ಈ ವಾಪಿಗಳು ಹನ್ನೆರಡು ಮನೆಗಳುಳ್ಳದ್ದಾಗಿರುತ್ತವೆ.

೩೫. ಈ ವಾಪಿಯ ಪಾರ್ಶಗಳಲ್ಲಿ ನಾಲ್ಕು ಭದ್ರಗಳು ಬರುತ್ತವೆ. ಇವು ಕೆಂಪುಬಣ್ಣದಿಂದ ಕೂಡಿರಬೇಕು ಇವು ಒಂದೊಂದೂ ಹದಿನೈದು ಹದಿನೈದು ಮನೆಗಳಿಂದ ಏರ್ಪಡುತ್ತವೆ.

ಷಷ್ಠೇ ಸ್ಥಾನೇ ದ್ವಾದಶೈವ ಮುದ್ರಾ ಅಗ್ರೇ ಚತುರ್ದಶ ।
ಷೋಡಶಾಷ್ಟಾದಶೈವಾಥ ವಿಂಶದ್ದ್ವಾವಿಂಶಮುದ್ರಿಕಾಃ ॥ ೩೬ ॥

ಚತುರ್ವಿಂಶಾಥ ಷಡ್ವಿಂಶ ಹ್ಯಷ್ಟಾವಿಂಶತ್ಸುಮುದ್ರಿಕಾಃ ।
ತ್ರಿಂಶದ್ದ್ವಾತ್ರಿಂಶನ್ಮುದ್ರಾಣಾಂ ಸ್ಥಾನೇ ಷೋಡಶಮುದ್ರಿಕಾಃ ॥ ೩೭ ॥

ವಾಪ್ಯಃ ಷೋಡಶ ವಿಜ್ಞೇಯಾ ಮಧ್ಯೇ ವಾಪೀದ್ವಯಂ ಸ್ಮೃತಂ ।
ಅಷ್ಟೋತ್ತರಸಹಸ್ರಂ ಚ ರಾಮತೋಭದ್ರಮೀರಿತಂ ॥ ೩೮ ॥

ತಿರ್ಯಗೂರ್ಧ್ವಂ ಹಿ ವಸ್ವಂಕಬಾಣರೇಖಾಸ್ಸುಲೋಹಿತಾಃ ।
ಸರ್ವಲಿಂಗರಾಮಭದ್ರತ್ರಯಮೇಕೇ ಪುರೇರಿತಂ ॥ ೩೯ ॥

---

೩೬. ಆರನೆಯ ಸ್ಥಾನದಲ್ಲಿ ಹನ್ನೆರಡು ಮುದ್ರೆಗಳು ಬರುತ್ತವೆ. ಅದರ ಮುಂದಕ್ಕೆ ಹದಿನಾಲ್ಕು ಮುದ್ರೆಗಳು ಬರುತ್ತವೆ. ಅದರ ಮುಂದಕ್ಕೆ ಹದಿನಾರು ಮುದ್ರೆಗಳೂ ಅದರ ಮುಂದೆ ಹದಿನೆಂಟು ಮುದ್ರೆಗಳೂ ಅದರ ಮುಂದೆ ಇಪ್ಪತ್ತು ಮುದ್ರೆಗಳೂ ಅದರ ಮುಂದೆ ಇಪ್ಪತ್ತೆರಡು ಮುದ್ರೆಗಳೂ ಬರುತ್ತವೆ.

೩೭–೩೮. ಅದರ ಮುಂದೆ ಇಪ್ಪತ್ತನಾಲ್ಕೂ ಅದರ ಮುಂದೆ ಇಪ್ಪತ್ತಾರು ಮುದ್ರೆಗಳೂ ಅದರ ಮುಂದೆ ಇಪ್ಪತ್ತೆಂಟು ಮುದ್ರೆಗಳೂ ಮತ್ತು ಅದರ ಮುಂದೆ ಮೂವತ್ತೆರಡು ಮುದ್ರೆಗಳೂ ಬರುತ್ತವೆ. ವಾಪಿಗಳು ಹದಿನಾರು ಬರುತ್ತವೆ. ಮಧ್ಯದಲ್ಲಿ ಎರಡು ವಾಪಿಗಳು ಬರುತ್ತವೆ. ಇದು ಅಷ್ಟೋತ್ತರ ಸಹಸ್ರ ರಾಮತೋ ಭದ್ರವು.

೩೯. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಐನೂರ ತೊಂಭತ್ತೆಂಟು ರೇಖೆಗಳನ್ನು ಎಳೆಯಬೇಕು. ಅವು ಕೆಂಪು ಬಣ್ಣದಲ್ಲಿರಬೇಕು. ಇದು ಮೂರನೆಯ ಬಗೆಯ ಅಷ್ಟೋತ್ತರ ಸಹಸ್ರ ರಾಮತೋ ಭದ್ರವು ಎಂದು ಹೇಳಲ್ಪಟ್ಟಿದೆ. ಇದನ್ನು ಹಿಂದೆ ಹೇಳಿದಂತೆಯೇ ತಿಳಿಯಬೇಕು.

ತದತ್ರ ಮಧ್ಯೇ ಲೇಖ್ಯಂ ಹಿ ಮಧ್ಯಮುದ್ರಾಸ್ಥಲೇ ಶಿವಃ ।
ದ್ವಿಸಪ್ತತಿಪದೈಃ ಕಾರ್ಯಃ ಕೃಷ್ಣವರ್ಣಃ ಪ್ರಕಾರಯೇತ್ ॥ ೪೦ ॥
ಷಟ್ತ್ರಿಂಶದ್ರಾಮನಾಮಾನಿ ನಾ ಲೇಖ್ಯಾನಿ ಚ ಹಸ್ತತಃ ।
ಕೃಷ್ಣಾ ತತ್ಕರ್ಣಿಕಾ ಕಾರ್ಯಾ ಚತುರ್ಭಿಶ್ಚ ಶಿರಃ ಸ್ಮೃತಂ ॥ ೪೧ ॥
ಕಟಿಶ್ಚತುಷ್ಪದೈಃ ಕಾರ್ಯಾ ಪಾರ್ಶ್ವೇ ದ್ವಾದಶ ಪಾದಜೇ ।
ಸ್ಕಂಧೋ ವಿಂಶತ್ಪದೈಃ ಜ್ಞೇಯೋ ಮೂಲಂ ವಿಂಶಪದಾತ್ಮಕಂ ॥ ೪೨ ॥
ಷಡ್ವಿಂಶಪದಜೇ ಜ್ಞೇಯೇ ದ್ವೇ ವಾಪೀ ಶ ಕಲೇ ಸಿತೇ ।
ದ್ವಾಭ್ಯಾಂ ಶಿವಸ್ಯ ವೈ ನೇತ್ರೇ ಸಿತೇ ಶೇಷಪದಾನಿ ಹಿ ॥ ೪೩ ॥
ಪಂಚ ರಕ್ತಾನಿ ಚತ್ವಾರಿ ಪೀತಾನಿ ಶಿವಕರ್ಣಯೋಃ ।
ಸ್ಥಾನೇ ತೃತೀಯೇ ಮುದ್ರಾಶ್ಚ ತಿಸ್ರೋ ದ್ವೌ ಶಂಕರೌ ವರೌ ।
ಸ್ಥಾನೇ ಚತುರ್ಥೇ ಮುದ್ರಾಶ್ಚ ಚತ್ವಾರಸ್ತ್ರಿಶಿವಾಃ ಸ್ಮೃತಾಃ ॥ ೪೪ ॥

೪೦-೪೧. ಇದರಲ್ಲಿ ವಿಶೇಷವೇನೆಂದರೆ ಮಧ್ಯ ಮುದ್ರೆಯ ಸ್ಥಳದಲ್ಲಿ ಎಪ್ಪತ್ತೆರಡು ಮನೆಗಳಿಂದ ಶಿವನು ಏರ್ಪಡುತ್ತಾನೆ. ಇದು ಕೃಷ್ಣವರ್ಣಕ್ಕಿರಬೇಕು. ಮೂವತ್ತಾರು ರಾಮನಾಮಗಳು ಬರುತ್ತವೆ. ಇದರ ಕರ್ಣಿಕೆಯು ಕಪ್ಪುಬಣ್ಣ ಉಳ್ಳದ್ದಾಗಿರಬೇಕು. ಶಿರಸ್ಸು ನಾಲ್ಕು ಪಾದಗಳಿಂದ ಏರ್ಪಡಬೇಕು

೪೨. ಮಧ್ಯಭಾಗವು ನಾಲ್ಕು ಮನೆಗಳಿಂದ ಕೂಡಿರಬೇಕು. ಪಾರ್ಶ್ವಗಳು ಹನ್ನೆರಡು ಮನೆಗಳುಳ್ಳದ್ದಾಗಿರಬೇಕು. ಸ್ಕಂದ ಪ್ರದೇಶವು ಇಪ್ಪತ್ತು ಮನೆಗಳಿಂದ ಏರ್ಪಡಬೇಕು. ಬುಡವೂ ಕೂಡ ಇಪ್ಪತ್ತು ಮನೆಗಳುಳ್ಳದ್ದಾಗಿರಬೇಕು.

೪೩—೪೪. ಇಪ್ಪತ್ತಾರು ಮನೆಗಳಿಂದ ಏರ್ಪಟ್ಟ ಎರಡು ವಾಪಿಗಳಿರಬೇಕು. ಎರಡು ಮನೆಗಳಿಂದ ನೇತ್ರವನ್ನು ರಚಿಸಬೇಕು. ಅವು ಬಿಳಿಯ ಬಣ್ಣದಲ್ಲಿರಬೇಕು. ಉಳಿದ ಮನೆಗಳಲ್ಲಿ ಐದು ಮನೆಗಳು ಕೆಂಪಗೂ ನಾಲ್ಕು ಮನೆಗಳು ಹಸುರಾಗಿಯೂ ಇರಬೇಕು. ಇವು ಶಿವನ ಅಕ್ಕಪಕ್ಕದಲ್ಲಿ ಕಪಿಯ ಸ್ಥಾನದಲ್ಲಿರುವುವು. ಮೂರನೆಯ ಸ್ಥಾನದಲ್ಲಿ ಮೂರು ಮುದ್ರೆಗಳೂ ಎರಡು ಲಿಂಗಗಳೂ ಇರುತ್ತವೆ. ನಾಲ್ಕನೆಯ ಸ್ಥಾನದಲ್ಲಿ ನಾಲ್ಕು ಮುದ್ರೆಗಳೂ ಮೂರು ಲಿಂಗಗಳೂ ಬರುತ್ತವೆ

ಏವಮಗ್ರೇ ಕ್ರಮೇಣೈವ ವಿಶೇಷಂ ಕಥಯಾಮ್ಯಹಂ ।
ಸ್ಥಾನೇ ಚತುರ್ದಶೇ ಮುದ್ರಾಶ್ಚತುರ್ದಶಶಿವಾಸ್ತಥಾ ॥ ೪೫ ॥

ಪಂಚದಶೇ ಹಿ ವಿಜ್ಞೇಯಾ ಏವಮಗ್ರೇ ಧಿಯಾ ಲಿಖೇತ್ ।
ಕೋಣಸ್ಥಗೇಹಯೋಃ ಕಾರ್ಯೌ ದ್ವೌ ಶಿವೌ ಚ ತ್ರಿಷಟ್ಪದೌ ॥ ೪೬ ॥

ಅಷ್ಟಮುದ್ರಾತ್ಮಕೇ ಭದ್ರೇ'ಸಲಿಂಗೇ ಚ ಕೃತೌಯಥಾ ।
ಮುದ್ರಾಭ್ಯೋ ಲಿಂಗವೃದ್ಧಿರ್ಹಿ ತರ್ತವ್ಯಾ ಚರಮಾವಧಿ ॥ ೪೭ ॥

ಸ್ಥಾನೇ ದ್ವಾವಿಂಶತಿತಮೇ ಮುದ್ರಾ ದ್ವಾದಶ ಚೇರಿತಾಃ ।
ತ್ರಯೋವಿಂಶಚ್ಚ ಲಿಂಗಾನಿ ಬಹಿಃ ಪರಿಧಯಸ್ತತಃ ॥ ೪೮ ॥

ಏವಂ ಯುಕ್ತ್ಯಾ ರಚನೀಯಂ ಶೇಷಂ ಸರ್ವಂ ಪುರೋದಿತಂ ।
ಅಷ್ಟೋತ್ತರಸಹಸ್ರಂ ಚ ರಾಮಲಿಂಗಾತ್ಮಕಂ ತ್ವಿದಂ ।
ರಾಮಾಸನಂ ವರಿಷ್ಠಂ ಹಿ ರಾಘವಸ್ಯಾತಿತುಷ್ಟಿದಂ ॥ ೪೯ ॥

೪೫-೪೬. ಈ ರೀತಿಯಲ್ಲಿಯೇ ಮುಂದೆಯೂ ತಿಳಿದುಕೊಳ್ಳಬೇಕು. ವಿಶೇಷವನ್ನು ಹೇಳುತ್ತೇನೆ. ಹದಿನಾಲ್ಕನೆಯ ಸಾಲಿನಲ್ಲಿ ಹದಿನಾಲ್ಕು ಮುದ್ರೆಗಳೂ ಬರುತ್ತವೆ. ಮತ್ತೆ ಹದಿನಾಲ್ಕು ಶಿವಗಳೂ ಬರುತ್ತವೆ. ಹದಿನೈದನೆಯ ಸಾಲಿನಲ್ಲಿ ಹೀಗೆಯೇ ತಿಳಿಯಬೇಕು. ಮತ್ತು ಮುಂದೆಯೂ ಬುದ್ಧಿಯಿಂದ ಊಹಿಸಿ ತಿಳಿದುಕೊಳ್ಳಬೇಕು. ಕೋಣಗಳಲ್ಲಿ ಉಳಿಯುವ ಮನೆಗಳಲ್ಲಿ ಎರಡು ಲಿಂಗಗಳನ್ನು ಮಾಡಬೇಕು. ಅವು ಮೂವತ್ತಾರು ಮನೆಗಳುಳ್ಳವಾಗಿರಬೇಕು.

೪೭. ಇದು ಎಂಟು ಮುದ್ರೆಯ ಭದ್ರವು, ಎರಡು ಮನೆಗಳುಳ್ಳದ್ದಾಗಿರಬೇಕು. ಈ ಮುದ್ರೆಗಳಲ್ಲಿ ಮುಂದು ಮುಂದಕ್ಕೆ ಕೊನೆಯವರೆಗೂ ಲಿಂಗಗಳನ್ನು ಹೆಚ್ಚಿಸಿಕೊಂಡು ಹೋಗುತ್ತಿರಬೇಕು.

೪೮. ಇಪ್ಪತ್ತೆರಡನೆಯ ಸಾಲಿನಲ್ಲಿ ಹನ್ನೆರಡು ಮುದ್ರೆಗಳು ಬರುತ್ತವೆ. ಇಪ್ಪತ್ತಮೂರು ಲಿಂಗಗಳೂ ಹೊರಗೆ ಪರಿಧಿಗಳೂ ಬರುತ್ತವೆ.

೪೯. ಇದೇ ರೀತಿಯಲ್ಲಿ ಯುಕ್ತಿಯಿಂದ ವರ್ತಿಸಬೇಕು. ಹಿಂದೆ ಹೇಳಿದುದನ್ನು ಗಮನದಲ್ಲಿಟ್ಟುಕೊಂಡು ಉಳಿದುವನ್ನು ರಚಿಸಬೇಕು. ಇದು ಅಷ್ಟೋತ್ತರ ಸಹಸ್ರರಾಮ ಲಿಂಗಾತ್ಮಕ ಭದ್ರವು. ಈ ರಾಮಾಸನವು ಉತ್ತಮೋತ್ತಮವಾದುದು. ರಾಮನಿಗೆ ಸಂತೋಷವನ್ನುಂಟುಮಾಡುತ್ತದೆ.

ತಿರ್ಯಗೂರ್ಧ್ವಗಂ ಬಾಣಶಾಸ್ತ್ರಭೂಮಿರೇಖಾಶ್ಚ ಪೂರ್ವವತ್ ।
ಅಷ್ಟಮುದ್ರಾತ್ಮಕಂ ಮಧ್ಯೇ ಪರಿಧಯಸ್ಸಮಂತತಃ ॥ ೩೦ ॥

ತಿರ್ಯಗೂರ್ಧ್ವಂ ದ್ವಾದಶಾಂತೇ ಬಹಿಃ ಪರಿಧಯಸ್ತಥಾ ।
ಮಧ್ಯೇ ಶಿವಮಾಪರಿಧಿದ್ವಯಂ ನಾನ್ಯಸ್ಥಲೇ ಕದಾ ॥ ೩೧ ॥

ನೇತ್ರಸ್ಥಾನೇ ವೇದಮುದ್ರಾವಿಶೇಷಶ್ಚ ತೃತೀಯಕೇ ।
ತಿಸ್ರೋ ವಾಪ್ಯಸ್ತ್ರಿಮುದ್ರಾಶ್ಚ ಹ್ಯಷ್ಟಮೇ ಚ ಚತುರ್ಥಕೇ ॥ ೩೨ ॥

ಪಂಚಮೇ ದಶಮುದ್ರಾಶ್ಚ ಶೇಷಂ ಸರ್ವಂ ಪುರೋದಿತಂ ।
ಅಷ್ಟೋತ್ತರಶತಂ ರಾಮತೋಭದ್ರಂ ತೇ ಮಯೋದಿತಂ ॥ ೩೩ ॥

ತಿರ್ಯಗೂರ್ಧ್ವಂತ್ರಿಪೂರ್ಣಾಕ್ಷಿರೇಖಾಃ ಕಾರ್ಯಾಶ್ಚ ಪೂರ್ವವತ್ ।
ಸರ್ವಲಿಂಗಂ ರಾಮಭದ್ರತ್ರಯಮೇಕೇ ಪುರೋದಿತಂ ॥ ೩೪ ॥

---

೩೦. ಅಡ್ಡಡ್ಡಲಾಗಿಯೂ ಉದ್ದುದ್ದವಾಗಿಯೂ ಒಂದುನೂರ ಅರವತ್ತೊಂದು ರೇಖೆಗಳನ್ನು ಹಿಂದಿನಂತೆ ಎಳೆಯಬೇಕು. ಹೀಗೆ ಮಾಡಿದುದರಲ್ಲಿ ಮಧ್ಯದಲ್ಲಿ ಎಂಟು ಮುದ್ರೆಗಳು ಬರುತ್ತವೆ. ಮತ್ತು ಸುತ್ತಲೂ ಪರಿಧಿಗಳು ಬರುತ್ತವೆ.

೩೧. ಹನ್ನೆರಡು ಪರಿಧಿಗಳಾದ ಮೇಲೆ ಹೊರಗಡೆ ಪರೀಧಿಗಳು ಬರುತ್ತವೆ. ಆಗ ಮಧ್ಯದಲ್ಲಿ ಶಿವಮಾ ಪರಿಧಿಗಳು ಎರಡು ಬರುತ್ತವೆ. ಉಳಿದ ಜಾಗದಲ್ಲಿ ಪರಿಧಿಗಳು ಬರುವುದಿಲ್ಲ.

೩೨-೩೩. ಎರಡನೆಯ ಸ್ಥಳದಲ್ಲಿ ನಾಲ್ಕು ಮುದ್ರೆಗಳು ಬರುತ್ತವೆ. ಮೂರನೆಯ ಸಾಲಿನಲ್ಲಿ ವಿಶೇಷವಿದೆ. ಮೂರು ವಾಪಿಗಳು ಬರುತ್ತವೆ. ಮತ್ತು ಮೂರು ಮುದ್ರೆಗಳು ಬರುತ್ತವೆ ಅಂತೆಯೇ ಎಂಟನೆಯ ನಾಲ್ಕನೆಯ ಮತ್ತು ಐದನೆಯ ಸ್ಥಾನಗಳಲ್ಲಿ ಹತ್ತು ಮುದ್ರೆಗಳು ಬರುತ್ತವೆ. ಉಳಿದುವೆಲ್ಲವೂ ಹಿಂದೆ ಹೇಳಿದಂತೆ ಬರುತ್ತವೆ. ಇದೂ ಕೂಡ ಅಷ್ಟೋತ್ತರ ಶತರಾಮತೋಭದ್ರವೆನ್ನಿಸಿಕೊಳ್ಳುತ್ತದೆ.

೩೪. ಅಡ್ಡಡ್ಡಲಾಗಿಯೂ ಉದ್ದುದ್ದವಾಗಿಯೂ ಇನ್ನೂರು ಮೂರು ರೇಖೆಗಳನ್ನು ಎಳೆಯಬೇಕು. ಇದರಲ್ಲಿ ಎಲ್ಲವೂ ಲಿಂಗಗಳೇ ಬರುತ್ತವೆ. ಮಿಕ್ಕವೆಲ್ಲವೂ ಕೂಡ ಹಿಂದೆ ಹೇಳಿದಂತೆಯೇ ಬರುತ್ತವೆ.

ತದತ್ರ ಮಧ್ಯೇ ಲೇಖ್ಯಂ ಹಿ ಮಧ್ಯಮುದ್ರಾಸ್ಥಲೇ ಸಿತಾ ।
ವಾಪೀಃ ಕಾರ್ಯಾ ದ್ವಾದಶಾಂತೇ ಪರಿಧಯಶ್ಚ ಪೂರ್ವವತ್ ॥ ೫೫ ॥

ತಿರ್ಯಗೂರ್ಧ್ವಂ ಶುಭಾಃ ಕಾರ್ಯಾ ಬಹಿಃ ಪರಿಧಯಸ್ತಥಾ ।
ಸ್ಥಾನೇ ತೃತೀಯೇ ಮುದ್ರಾಶ್ಚ ತಿಸ್ರೋ ದ್ವೌ ಶಂಕರೌ ವರೌ ॥ ೫೬ ॥

ಚತುರ್ಥೇ ವೇದಮುದ್ರಾಶ್ಚ ತ್ರಯಸ್ತೇ ಶಂಕರಾಃ ಸ್ಮೃತಾಃ ।
ಪಂಚಮೇ ಪಂಚಮುದ್ರಾಶ್ಚ ಚತ್ವಾರಶ್ಚ ಹರಾ ವರಾಃ ॥ ೫೭ ॥

ಷಷ್ಠೇ ಸ್ಥಾನೇ ಚ ಷಣ್ಮುದ್ರಾಃ ಶಿವಾಸ್ಸಪ್ತ ಪ್ರಕೀರ್ತಿತಾಃ ।
ಕೋಣಸ್ಥಗೇಹಯೋಃ ಕಾರ್ಯೌ ದ್ವೌ ಹರೌ ಚ ತ್ರಿಷಟ್ಪದೌ ॥ ೫೮ ॥

ಅಷ್ಟಮುದ್ರಾತ್ಮಕೇ ಭದ್ರೇ ಸಲಿಂಗೇ ಚ ಕೃತೌ ಯಥಾ ।
ಸ್ಥಾನೇ ಚ ಸಪ್ತಮೇ ಮುದ್ರಾಃ ಸಪ್ತಲಿಂಗಾನಿ ಚಾಷ್ಟ ವೈ । ॥ ೫೯ ॥

---

೫೫. ಇದರಲ್ಲಿ ಮಧ್ಯದ ಮುದ್ರೆಯ ಸ್ಥಳದಲ್ಲಿ ಬಿಳಿಯ ಬಣ್ಣದಿಂದ ವಾಪಿಯನ್ನು ರಚಿಸಬೇಕು. ಕೊನೆಯಲ್ಲಿ ಹನ್ನೆರಡು ಪರಿಧಿಗಳು ಹಿಂದಿನಂತೆ ಬರುತ್ತವೆ.

೫೬-೫೭. ಇದರಲ್ಲಿ ಮೇಲೆ ಮತ್ತು ಕೆಳಭಾಗದಲ್ಲಿ ಹೊರಗಡೆಯಲ್ಲಿ ಪರಿಧಿಗಳನ್ನು ರಚಿಸಬೇಕು. ಮೂರನೆಯ ಸ್ಥಾನದಲ್ಲಿ ಮೂರು ಮುದ್ರೆಗಳೂ ಎರಡು ಲಿಂಗಗಳೂ ಬರುತ್ತವೆ. ನಾಲ್ಕನೆಯ ಸ್ಥಾನದಲ್ಲಿ ನಾಲ್ಕು ಮುದ್ರೆಗಳೂ ಮೂರು ಲಿಂಗಗಳೂ ಬರುತ್ತವೆ. ಐದನೆಯುದರಲ್ಲಿ ಐದು ಮುದ್ರೆಗಳೂ ನಾಲ್ಕು ಲಿಂಗಗಳೂ ಬರುತ್ತವೆ.

೫೮. ಆರನೆಯ ಸ್ಥಾನದಲ್ಲಿ ಆರು ಮುದ್ರೆಗಳೂ ಏಳು ಲಿಂಗಗಳೂ ಬರುತ್ತವೆ. ಮೂಲೆಯ ಮನೆಗಳಲ್ಲಿ ಎರಡೆರಡು ಲಿಂಗಗಳು ಬರಬೇಕು. ಅದು ಅರವತ್ತು ಮೂರು ಮನೆಗಳುಳ್ಳದ್ದು.

೫೯-೬೦. ಸಲಿಂಗಕವಾದ ಅಷ್ಟಮುದ್ರಾತ್ಮಕ ಭದ್ರದಲ್ಲಿ ಏಳನೆಯ ಸ್ಥಾನದಲ್ಲಿ ಏಳು ಮುದ್ರೆಗಳೂ ಎಂಟು ಲಿಂಗಗಳೂ ಬರುತ್ತವೆ. ಕೋಣಗಳ ಅರವತ್ತು

ಕೋಣಸ್ಥಗೃಹಯೋಃ ಕಾರ್ಯೌ ದ್ವೌ ಹರೌ ಚ ತ್ರಿಷಟ್ಪದಾ ।
ಏಕದಷ್ಟೋತ್ತರಶತಂ ರಾಮಲಿಂಗಾತ್ಮಕಂ ಸ್ಮೃತಂ ॥ ೬೦ ॥

ಷಷ್ಠೇ ಸ್ಥಾನೇ ಕೋಣಗೇಹೇ ಥ ವಾ ಶಂಭುಂ ನ ಕಾರಯೇತ್ ।
ಸ್ಥಾನೇ ತೃತೀಯೇ ಮುದ್ರೈಕಾ ವಾಪ್ಯೌ ದ್ವೌ ದ್ವೌ ಹರಾವಪಿ ॥ ೬೧ ॥

ಏತಚ್ಛತಾತ್ಮಕಂ ಭದ್ರಂ ರಾಮಲಿಂಗಾತ್ಮಕಂ ಮಯಾ ।
ಅಷ್ಟೋತ್ತರಶತೇ ರಾಮತೋಭದ್ರೇ ವಹ್ನಿಸದ್ಮನಿ ॥ ೬೨ ॥

ಷಡೇವ ಮುದ್ರಾಃ ಕರ್ತವ್ಯಾ ಅಂತೇ ಸ್ಥಾನೇ ಹಿ ಪಂಚಮೇ ।
ಪಂಚಮುದ್ರಾಃ ಪಂಚ ವಾಪ್ಯಃ ಶತಮುದ್ರಾತ್ಮಕಂ ತ್ವಿದಂ ॥ ೬೩ ॥

ಅಷ್ಟೋತ್ತರಸಹಸ್ರೇ ಶ್ರೀರಾಮತೋಭದ್ರಕೇ ವರೇ ।
ಬಾಣಸ್ಥಾನೇ ಹಿ ಷಡ್ವಾಪ್ಯೋ ವೇದಮುದ್ರಾಃ ಪ್ರಕಾರಯೇತ್ ॥ ೬೪ ॥

ಮೂರು ಮನೆಗಳಲ್ಲಿ ಎರಡು ಲಿಂಗಗಳನ್ನು ರಚಿಸಬೇಕು. ಇದೂ ಕೂಡ ಅಷ್ಟೋತ್ತರಶತರಾಮತೋಭದ್ರವೆಂದೆನಿಸಿಕೊಳ್ಳುತ್ತದೆ.

೬೧. ಮತ್ತೊಂದು ಬಗೆ ಹೇಗೆಂದರೆ:— ಆರನೆಯ ಸ್ಥಾನದ ಕೋಣದ ಮನೆಗಳಲ್ಲಿ ಲಿಂಗಗಳನ್ನು ರಚಿಸಬಾರದು. ಮೂರನೆಯ ಸ್ಥಾನದಲ್ಲಿ ಒಂದು ಮುದ್ರೆಯೂ ಎರಡು ವಾಪಿಗಳೂ ಎರಡು ಲಿಂಗಗಳೂ ಬರಬೇಕು.

೬೨-೬೩. ಇದು ನೂರು ರಾಮ ಮುದ್ರೆಗಳುಳ್ಳ ಶತರಾಮತೋಭದ್ರವೆಂದೆನಿಸಿಕೊಳ್ಳುತ್ತದೆ. ಅಷ್ಟೋತ್ತರಶತವೆಂದರೆ ನೂರೆಂಟು ಮುದ್ರೆಗಳುಳ್ಳ ರಾಮತೋಭದ್ರದಲ್ಲಿ ಮೂರನೆಯ ಸ್ಥಾನದಲ್ಲಿ ಆರು ಮುದ್ರೆಗಳನ್ನು ರಚಿಸಬೇಕು. ಐದನೆಯ ಸ್ಥಾನದಲ್ಲಿ ಐದು ಮುದ್ರೆಗಳೂ ಐದು ವಾಪಿಗಳೂ ಬರಬೇಕು. ಹೀಗೆ ರಚಿಸಿದರೆ ಇದು ಶತಮುದ್ರಾತ್ಮಕ ರಾಮತೋಭದ್ರವಾಗುತ್ತದೆ.

೬೪-೬೬. ಅಷ್ಟೋತ್ತರ ಸಹಸ್ರ ಎಂದರೆ ಸಾವಿರದ ಎಂಟು ಮುದ್ರೆಗಳುಳ್ಳ ರಾಮತೋ ಭದ್ರದಲ್ಲಿ ಐದನೆಯ ಸ್ಥಾನದಲ್ಲಿ ಆರು ವಾಪಿಗಳೂ ನಾಲ್ಕು ಮುದ್ರೆಗಳೂ ಬರುವಂತೆ ರಚಿಸಬೇಕು. ಇದಕ್ಕೆ ಸಹಸ್ರ ರಾಮತೋ ಭದ್ರವೆಂದು ಹೆಸರು

ಸಹಸ್ರರಾಮಮುದ್ರಾಣಾಂ ರಾಮತೋಭದ್ರಮೀರಿತಂ ।
ಅಷ್ಟೋತ್ತರಸಹಸ್ರೇ ಶ್ರೀರಾಮಲಿಂಗಾತ್ಮಕಾಸನೇ ॥ ೬೫ ॥

ಸ್ಥಾನೇ ಚತುರ್ದಶೇ ಕೋಣಗೇಹೇ ಶಂಭುಂ ನ ಕಾರಯೇತ್ ।
ಮುದ್ರಾಸ್ಥಾನೇ ಚ ದ್ವೌ ವಾಪ್ಯೌ ಮಧ್ಯೇ ಕ್ವಾಪಿ ನ ಕಾರಯೇತ್ ॥

ಸಹಸ್ರರಾಮಮುದ್ರಾಣಾಂ ರಾಮಲಿಂಗಾತ್ಮಕಂ ತ್ವಿದಂ ।
ಷೋಡಶ ರಾಮತೋ ಭದ್ರೇ ಚಾದ್ಯಸ್ಥಾನೇ ತ್ರಿದಿಕ್ಷು ಚ ॥ ೬೭ ॥

ಮಧ್ಯಮುದ್ರಾಸ್ಥಲೇ ವಾಪ್ಯಸ್ತಿಸ್ರಃ ಕಾರ್ಯಾ ಮಹತ್ತಮಾಃ ।
ತ್ರಯೋದಶಾತ್ಮಕಂ ಚೈತದ್ರಾಮತೋಭದ್ರಮೀರಿತಂ ॥ ೬೮ ॥

ಅಥವಾ ದ್ಯಸ್ಥಲೇ ಮಧ್ಯಮುದ್ರಾಸು ವೇದ ದಿಕ್ಷು ಚ ।
ವೇದವಾಪ್ಯೋಽಪರೇಽಸ್ಥಾನೇ ತಿಸ್ರಶ್ಚೈವ ತ್ರಿದಿಕ್ಷು ಚ ॥ ೬೯ ॥

ವಾಪ್ಯಶ್ಚೈತದ್ವಿಜ್ಞಾತವ್ಯಂ ನವಮುದ್ರಾತ್ಮಕಂ ಶುಭಂ ।
ರಾಮತೋಭದ್ರಕಂ ರಮ್ಯಂ ರಾಘವಸ್ಯಾತಿಹರ್ಷದಂ ॥ ೭೦ ॥

ಬರುತ್ತದೆ. ಸಾವಿರದ ಎಂಟು ರಾಮತೋಭದ್ರದ ಹದಿನಾಲ್ಕನೆಯ ಸ್ಥಾನದಲ್ಲಿ ಕೋಣ ಸ್ಥಳದಲ್ಲಿ ಲಿಂಗಗಳನ್ನು ರಚಿಸಬಾರದು. ಮತ್ತು ಮುದ್ರಾಸ್ಥಾನಗಳಲ್ಲಿ ಎರಡು ವಾಪಿಗಳನ್ನೂ ಮಾಡಬೇಕು. ಮಧ್ಯದಲ್ಲಿ ಎಲ್ಲಿಯೂ ವಾಪಿಗಳನ್ನು ರಚಿಸಬಾರದು.

೬೭-೬೮. ಇದಕ್ಕೆ ಸಹಸ್ರ ರಾಮ ಮುದ್ರಾತ್ಮಕ ಭದ್ರವೆಂದು ಹೆಸರು. ಷೋಡಶ ರಾಮತೋಭದ್ರದಲ್ಲಿ ಮೊದಲನೆಯ ಸ್ಥಾನದಲ್ಲಿ ಮೂರು ದಿಕ್ಕುಗಳಲ್ಲಿಯೂ ಮತ್ತು ಮಧ್ಯ ಮುದ್ರೆಯ ಸ್ಥಾನದಲ್ಲಿಯೂ ಮೂರು ದೊಡ್ಡ ದೊಡ್ಡ ವಾಪಿಗಳನ್ನು ಮಾಡಬೇಕು. ಇದು ತ್ರಯೋದಶಾತ್ಮಕ ರಾಮತೋಭದ್ರವು.

೬೯-೭೦. ಮತ್ತು ಇನ್ನೊಂದು ರೀತಿಯಲ್ಲಿ ರಚಿಸಬಹುದು. ಮೊದಲನೆಯ ಸ್ಥಾನದಲ್ಲಿ ಮಧ್ಯ ಮುದ್ರೆಯಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ವಾಪಿಗಳನ್ನು ರಚಿಸಬೇಕು. ಮಿಕ್ಕ ಸ್ಥಳಗಳಲ್ಲಿ ಮೂರು ಮೂರು ದಿಕ್ಕುಗಳಲ್ಲಿಯೂ ಮೂರು ಮೂರು ವಾಪಿಗಳನ್ನು ರಚಿಸಬೇಕು. ಇದಕ್ಕೆ ನವ ಮುದ್ರಾತ್ಮಕ ರಾಮತೋಭದ್ರವೆಂದು ಹೆಸರು. ಇದು ರಮ್ಯವಾದುದು. ರಾಮನಿಗೆ ಪ್ರೀತಿಕರವಾದುದು.

ತಿರ್ಯಗೂರ್ಧ್ವಂ ಬಾಣಪೂರ್ಣಭೂಮಿರೇಖಾಶ್ಚ ಪೂರ್ವವತ್ ।
ತ್ರಯೋದಶಾತ್ಮಕಂ ಮಧ್ಯೇ ಸ್ಥಾನೇ ತೇ ಮುದ್ರಿಕಾತ್ರಯಂ ॥ ೭೧ ॥

ಮುದ್ರಾಮಧ್ಯೇ ಹಿ ದ್ವೌ ವಾಪ್ಯೌ ಪರಿಧಯೋಽರ್ಕಮಧ್ಯಮಾಃ ।
ದ್ವೌ ದ್ವೌ ಸರ್ವತ್ರ ಸಂಯೋಜ್ಯೌ ತತ್ತ್ವಮುದ್ರಾತ್ಮಕಂ ತ್ವಿದಂ ॥ ೭೨ ॥

ಜ್ಞಾತವ್ಯಂ ರಾಮತೋಭದ್ರಂ ತೋಷದಂ ತತ್ತ್ವವಾದಿನಾಂ ।
ಕೋಣಗೇಹೇಷು ಲಿಂಗಾನಿ ನೇತ್ರಸ್ಥಾನೇ ಹಿ ಪಶ್ಚಿಮೇ ॥ ೭೩ ॥

ಕಾರ್ಯಂ ವಾಪಿಸ್ಥಲೇ ಲಿಂಗಂ ಪಂಚವಿಂಶತಿಮಂ ಪರಂ ।
ಪಂಚವಿಂಶತಿಮುದ್ರಾಭೀ ರಾಮಲಿಂಗಾತ್ಮಕಂ ತ್ವಿದಂ ॥ ೭೪ ॥

ಅಥೋಚ್ಯಂತೇ ದೈವತಾನಿ ರಾಮಾಸನಭವಾನಿ ಚ ।
ಮಧ್ಯೇಥ ಸರ್ವತೋಭದ್ರೇ ಸಮಾವಾಹ್ಯಾತ್ರ ತತ್ಸುರಾನ್ ॥ ೭೫ ॥

೭೧-೭೨. ಅಡ್ಡಡ್ಡಲಾಗಿಯೂ ಉದ್ದುದ್ದವಾಗಿಯೂ ಒಂದು ನೂರು ಐದು ರೇಖೆಗಳನ್ನು ಎಳೆಯಬೇಕು. ಇದರ ಮಧ್ಯ ಸ್ಥಾನದಲ್ಲಿ ಹದಿಮೂರು ಪದಗಳ ಮೂರು ಮುದ್ರಿಕೆಗಳೂ ಬರುತ್ತವೆ. ಮುದ್ರೆಗಳ ಮಧ್ಯದಲ್ಲಿ ಎರಡು ವಾಪಿಗಳು ಬರುತ್ತವೆ. ಹನ್ನೆರಡನೆಯ ಸ್ಥಾನದ ಮಧ್ಯದಲ್ಲಿ ಪರಿಧಿಯು ಬರುತ್ತದೆ. ಹಿಂದು ಮುಂವಕ್ಕೆ ಎರಡೆರಡು ಸ್ಥಾನಗಳನ್ನು ಸೇರಿಸಿ ಬರೆಯಬೇಕು. ಇದು ಇಪ್ಪತ್ತೈದು ಮುದ್ರೆಯುಳ್ಳ ರಾಮತೋಭದ್ರವು.

೭೩-೭೪.. ಈ ರಾಮತೋಭದ್ರವು ತತ್ವ ವಾದಿಗಳಿಗೆ ಸಂತೋಷಪ್ರದವು. ಮೂಲೆಯ ಮನೆಗಳಲ್ಲಿ ಲಿಂಗಗಳನ್ನು ರಚಿಸಬೇಕು. ಪಶ್ಚಿಮ ಭಾಗದಲ್ಲಿ ನೇತ್ರ ಸ್ಥಾನದಲ್ಲಿ ಎಂದರೆ ಎರಡನೆಯದರಲ್ಲಿ ವಾಪಿಯ ಸ್ಥಳದಲ್ಲಿ ಲಿಂಗವನ್ನು ರಚಿಸಬೇಕು. ಅಲ್ಲಿ ಇಪ್ಪತ್ತೈದು ಲಿಂಗಗಳು ಏರ್ಪಡಬೇಕು. ಇದು ಇಪ್ಪತ್ತೈದು ಮುದ್ರೆಯ ರಾಮಲಿಂಗತೋಭದ್ರವು.

೭೫-೭೮. ಇನ್ನು ಮುಂದೆ ಈ ರಾಮಾಸನಗಳ ದೇವತೆಗಳನ್ನು ಹೇಳುತ್ತೇನೆ. ಸರ್ವತೋಭದ್ರದ ಮಧ್ಯದಲ್ಲಿ ಆಯಾಯ ದೇವತೆಗಳನ್ನು ಆವಾಹಿಸಬೇಕು. ಅನಂತರ ಹೊರಗಿನ ಲಿಂಗಗಳಲ್ಲಿ ರುದ್ರನನ್ನೂ ವಾಪಿಗಳಲ್ಲಿ ನಳನನ್ನೂ

ತತೋ ಬಹಿಸ್ತು ಲಿಂಗೇಷು ರುದ್ರಂ ವಾಪೀಷು ವೈ ನಲಂ |
ಸುಗ್ರೀವಂ ತತ್ರ ಭದ್ರೇಷು ತಿರ್ಯಗ್ಭದ್ರೇಷು ವೈ ಗವಂ ॥ ೭೬ ॥

ಪೀತಾಸು ಚ ಶೃಂಖಲಾಸು ಹ್ಯಂಗದಂ ಪರಿಚಿಂತಯೇತ್ |
ಪೀತಶೃಂಖಲಾಭಾವೇ ತಂ ತಿರ್ಯಕ್ ಭದ್ರೇ ಚತುಷ್ಪದೇ ॥ ೭೭ ॥

ಕೃಷ್ಣವರ್ಣಶೃಂಖಲಾಸು ಸಮಾವಾಹ್ಯ ವಿಭೀಷಣಂ |
ವಲ್ಲೀಷು ಚ ಜಾಂಬವಂತಂ ಮೈಂದಂ ಖಂಡೇಂದುಷು ಸ್ಮರೇತ್ ॥ ೭೮ ॥

ದ್ವಿವಿದಂ ಪರಿಧಿಷ್ವೇವ ಮುದ್ರಾಯಾಂ ರಾಘವಂ ಸ್ತ್ರಿಯಾ |
ಮುದ್ರಾಯಾಃ ಪಶ್ಚಿಮೇ ಚಾಥ ದಕ್ಷಿಣೇ ಹ್ಯುತ್ತರಂ ಪುರಃ ॥ ೭೯ ॥

ಲಕ್ಷ್ಮಣಂ ಭರತಂ ಚಾಪಿ ಶತ್ರುಘ್ನಂ ವಾಯುನಂದನಂ |
ಪೂಜ್ಯಪೂಜಕಯೋರ್ಮಧ್ಯೇ ಜ್ಞೇಯಾ ಪೂರ್ವದಿಗತ್ರ ಹಿ ॥ ೮೦ ॥

ಸೀಮಾಪರಿಧಿಷ್ವತ್ರೈವ ಸುಷೇಣಂ ಪರಿಚಿಂತಯೇತ್ |
ಸರ್ವತ್ರ ಪದಮಾತ್ರೇಷು ಚಿಂತಯೇತ್ ಸರ್ವವಾನರಾನ್ ॥ ೮೧ ॥

ಉದ್ದುದ್ದ ಭದ್ರಗಳಲ್ಲಿ ಸುಗ್ರೀವನನ್ನೂ ತಿರ್ಯಕ್ ಭದ್ರಗಳಲ್ಲಿ ಗವನನ್ನೂ ಹಸುರು ಸರಪಣಿಗಳಲ್ಲಿ ಅಂಗದನನ್ನೂ ಆವಾಹಿಸಬೇಕು ಈ ಹಸುರಿನದಿಲ್ಲದಿದ್ದರೆ ಚತುಷ್ಪದವುಳ್ಳ ತಿರ್ಯಕ್ ಭದ್ರದಲ್ಲಿ ಆ ಅಂಗದನನ್ನು ಆವಾಹಿಸಬೇಕು. ಕಪ್ಪುಬಣ್ಣದ ಶೃಂಖಲೆಗಳಲ್ಲಿ ವಿಭೀಷಣನನ್ನು ಆವಾಹಿಸಬೇಕು. ವಲ್ಲಿಗಳಲ್ಲಿ ಜಾಂಬವಂತನನ್ನೂ ಇಂದುಗಳಲ್ಲಿ ಮೈಂದನನ್ನೂ ಆವಾಹಿಸಬೇಕು.

೭೯-೮೦. ಪರಿಧಿಗಳಲ್ಲಿ ದ್ವಿವಿದನನ್ನೂ ಮುದ್ರೆಯಲ್ಲಿ ಸೀತಾ ಸಮೇತನಾದ ರಾಮನನ್ನೂ ಮುದ್ರೆಯ ಪಶ್ಚಿಮದಲ್ಲಿ ಲಕ್ಷ್ಮಣನನ್ನೂ ದಕ್ಷಿಣದಲ್ಲಿ ಭರತನನ್ನೂ ಉತ್ತರದಲ್ಲಿ ಶತ್ರುಘ್ನನನ್ನೂ ಪೂರ್ವದಲ್ಲಿ ವಾಯುನಂದನನ್ನೂ ಆವಾಹಿಸಬೇಕು. ಪೂಜ್ಯವಾದ ಮುದ್ರೆಯು ಪೂರ್ವದಿಕ್ಕಿಗಿರಬೇಕು. ಪೂಜೆಮಾಡುವವನು ಪಶ್ಚಿಮಕ್ಕಿರಬೇಕು. ಎಂದರೆ ಮುದ್ರೆಯು ಪಶ್ಚಿಮ ಮುಖವಾಗಿಯೂ ಪೂಜಿಸುವವನು ಪೂರ್ವ ಮುಖವಾಗಿಯೂ ಇರಬೇಕು.

೮೧-೮೨. ಬಿಳಿಯ ಪರಿಧಿಗಳಲ್ಲಿ ಸುಷೇಣನನ್ನೂ ಉಳಿದಿರುವ ಖಾಲಿ ಮನೆಗಳಲ್ಲಿ ಎಲ್ಲಾ ಕಪಿಗಳನ್ನೂ ಆವಾಹಿಸಬೇಕು. ಹೊರಗಿನ ಪರಿಧಿಗಳಲ್ಲಿಯೂ

ಬಹಿಸ್ತ್ರಿಪರಿಧಿಷ್ವೇವ ತ್ರಿವೇಣೀಂ ಪರಿಚಿಂತಯೇತ್ ।
ಚತುರ್ದಿಶ್ವಾಲಾಭಿಮುಖಾ ಹರಾ ರುದ್ರಾಶ್ಚ ವಾಪಿಕಾಃ ॥ ೮೨ ॥

ಕರ್ತವ್ಯಾ ವಾತ್ಮಾಭಿಮುಖಾಃ ಕಾರ್ಯಾ ವಾ ಪದ್ಮಸಮ್ಮುಖಾಃ ।
ಚತುರ್ದಿಕ್ಪಾಲಾಭಿಮುಖಾ ಏವಂ ಭದ್ರೇಷು ಮೇಕಥಿ ॥ ೮೩ ॥

ಪಕ್ಷತ್ರಯೇ ವರಿಷ್ಠಾಸ್ತಾ ವದಂತೀತ್ಥಂ ಮುನೀಶ್ವರಾಃ ।
ಪೂರ್ವೋಕ್ತಭದ್ರೇ ದೇವಾರ್ ಹಿ ಸಂಪೂಜ್ಯಾದೌ ತತಃ ಪರಂ ॥ ೮೪ ॥

ಸಮಾರಭೇದ್ರಾಘವಸ್ಯ ಶ್ರೇಷ್ಠಾಂ ಪೂಜಾಂ ಸವಿಸ್ತರಾಂ ।
ಪದ್ಮಸ್ಯ ಕರ್ಣಿಕಾಯಾಂ ಚ ಸಸೀತಂ ರಾಘವಂ ನ್ಯಸೇತ್ ॥ ೮೫ ॥

ಅಷ್ಟಪದ್ಮದಳೇಷ್ವೇವ ತಸ್ಯಾವರಣದೇವತಾಃ ।
ಪೂಜಯೇದಿತಿ ಸರ್ವತ್ರ ಬುಧೈಸ್ತು ಪರಿಕಥ್ಯತೇ ॥ ೮೬ ॥

ಪದ್ಮೇ ಸಂಕೋಚಮಾಲಕ್ಷ್ಯ ಪ್ರಕಾರಾಂತರಮುಚ್ಯತೇ ।
ಸರ್ವತೋಭದ್ರಕಮಲೇ ಧಾನ್ಯರಾಶೌ ಘಟಂ ನ್ಯಸೇತ್ ॥ ೮೭ ॥

ತ್ರಿವೇಣಿಯನ್ನು ಆವಾಹಿಸಬೇಕು. ನಾಲ್ಕು ದಿಕ್ಪಾಲಕರಿಗೂ ಎದುರಿಗಿರುವಂತೆ ಲಿಂಗವೂ ವಾಪಿಕೆಯೂ ಇರುವಂತೆ ಮಾಡಬೇಕು.

೮೩. ಹಾಗಿಲ್ಲದಿದ್ದರೆ ತನಗೆ ಎದುರಿಗಿರುವಂತೆಯಾಗಲಿ ಪದ್ಮಕ್ಕೆ ಎದುರಿಗಿರುವಂತೆಯಾಗಲಿ ರಚಿಸಬಹುದು ಈ ರೀತಿಯಲ್ಲಿ ಭದ್ರವೂ ಭದ್ರದೇವತೆಗಳೂ ಇರುವಂತೆ ಆವಾಹಿಸಬೇಕು.

೮೪–೮೫. ಈ ಮೂರು ಪ್ರಕಾರಗಳಲ್ಲಿ ದಿಕ್ಪಾಲಕರಿಗೆ ಎದುರಿಗೆ ಬರೆಯುವ ಪಕ್ಷವೇ ಉತ್ತಮವು. ಈ ಮುದ್ರೆಗಳಲ್ಲಿ ದೇವತೆಗಳನ್ನು ಆವಾಹಿಸಿ ಪೂಜಿಸಿ ಆನಂತರ ಶ್ರೀರಾಮನ ಶ್ರೇಷ್ಠವಾದ ಪೂಜೆಯನ್ನು ಆರಂಭಿಸಬೇಕು. ಪದ್ಮದ ಕರ್ಣಿಕೆಯಲ್ಲಿ ಸೀತಾರಾಮರನ್ನಿಡಬೇಕು.

೮೬-೮೭. ಎಂಟು ದಳದ ಪದ್ಮವುಳ್ಳ ಭದ್ರದಲ್ಲಿಯೇ ಆವರಣ ದೇವತೆಗಳನ್ನು ಪೂಜಿಸಬೇಕು ಎಂದು ತಿಳಿದವರು ಹೇಳುತ್ತಾರೆ. ಪದ್ಮಗಳು ಚಿಕ್ಕದಾಗಿರುವುದರಿಂದ ಅವಕ್ಕೆ ತಕ್ಕಂತೆ ಹೇಳುತ್ತೇನೆ. ಸರ್ವತೋ ಭದ್ರಕಮಲದಲ್ಲಿ ಧಾನ್ಯರಾಶಿಯನ್ನು ಹಾಕಬೇಕು. ಅದರ ಮಧ್ಯದಲ್ಲಿ ಕಲಶವನ್ನಿಡಬೇಕು.

ಜಲಪೂರ್ಣಂ ಚ ತಸ್ಯಾಸ್ಯೇ ಕೇತಕೀಪತ್ರಪೂರಿತೇ ।
ತಾಮ್ರಪಾತ್ರಂ ವಿಸ್ತೃತಂ ಚ ನ್ಯಸ್ಯ ತಂಡುಲಪೂರಿತಂ ॥ ೮೮ ॥

ತತ್ರವಸ್ತ್ರೇ ಸಾವರಣಂ ರಾಮಚಂದ್ರಂ ಪ್ರಪೂಜಯೇತ್ ।
ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ॥ ೮೯ ॥

ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ।
ಸರ್ವೇಷು ರಾಮಭದ್ರೇಷು ಮುದ್ರಾ ಪೂಜ್ಯೋ ರಘೂತ್ತಮಃ ॥ ೯೦ ॥

ಪೂಜಕಶ್ಚ ಶಿವೋ ಜ್ಞೇಯೋ ಭದ್ರಾದ್ಯಾ ರಾಮಪಾರ್ಷದಾಃ ।
ಶ್ರೀರಾಮಲಿಂಗತೋಭದ್ರಮತ ಏವೋಚ್ಯತೇ ಬುಧೈಃ ॥ ೯೧ ॥

ಏವಂ ನಾನಾವಿಧಾ ಭೇದಾ ಬಹವಸ್ಸಂತಿ ಭೋ ದ್ವಿಜ ।
ಶ್ರೀಮದ್ರಾಮತೋಭದ್ರಾಣಾಂ ಯೇಷಾಂ ಸಂಖ್ಯಾ ನ ವಿದ್ಯತೇ ॥ ೯೨ ॥

---

೮೮. ಅದರ ತುಂಬ ನೀರನ್ನು ತುಂಬಬೇಕು. ಅದರ ಬಾಯಿಗೆ ತಾಳೆಯ ಹೂವನ್ನಿಡಬೇಕು. ಅದರ ಮೇಲೆ ಅದಕ್ಕನುಗುಣವಾಗಿ ತಾಮ್ರದ ತಟ್ಟೆಯನ್ನಿಟ್ಟು ಅದರ ತುಂಬ ಅಕ್ಕಿಯನ್ನು ಇಡಬೇಕು.

೮೯-೯೦. ಅದರಲ್ಲಿ ವಸ್ತ್ರವನ್ನಿಟ್ಟು ಅದರಲ್ಲಿ ಆವರಣ ದೇವತೆಗಳಿಂದ ಕೂಡಿದ ರಾಮಚಂದ್ರನನ್ನು ಪೂಜಿಸಬೇಕು, ಕಲ್ಲಿನದು, ಮರದ್ದು, ಲೋಹದ್ದು, ಬಚ್ಚಣೆಯದು, ಚಿತ್ರದ್ದು, ಮರಳಿನದು, ಮನೋಮಯವಾದುದು. ರತ್ನಮಯವಾದುದು. ಎಂಬುದಾಗಿ ಪ್ರತಿಮೆಗಳು ಎಂಟು ಬಗೆಯಾಗಿವೆ. ರಾಮತೋಭದ್ರದಲ್ಲೆಲ್ಲದರಲ್ಲಿಯೂ ಮುದ್ರಾರೂಪಿಯಾದ ಶ್ರೀರಾಮಚಂದ್ರನು ಪೂಜ್ಯನು.

೯೧-೯೨. ಪೂಜೆ ಮಾಡುವವನು ಶಿವನು. ಭದ್ರಾದಿಗಳೇ ರಾಮ ಪರಿವಾರವು. ಆದ್ದರಿಂದಲೇ ಇದಕ್ಕೆ ರಾಮತೋಭದ್ರವೆಂದು ಹೆಸರು ಬಂದಿದೆ. ಇದೇ ರೀತಿಯಲ್ಲಿ ಈ ಮುದ್ರೆಗಳಲ್ಲಿ ಬಹು ಬಗೆಯ ಭೇದಗಳಿವೆ. ಆದ್ದರಿಂದ ಈ ರಾಮತೋಭದ್ರವನ್ನು ಲೆಕ್ಕಮಾಡುವಂತೆಯೇ ಇಲ್ಲ. ಹಾಗೆ ಅಸಂಖ್ಯಾತವಾಗಿವೆ.

ಮಯಾ ಭೇದಾಃ ಕಿಯಂತೋತ್ರ ತವಾಗ್ರೇ ವಿನಿವೇದಿತಾಃ ।
ನರೈರ್ಬುಧ್ಯಾ ಪ್ರಕರ್ತವ್ಯಾಃ ಪೂಜನಾರ್ಥಂ ರಮಾಪತೇಃ ॥ ೯೩ ॥

ಹೇಮತಂತುಭವಂ ಚೈವಂ ಕಾರ್ಯಮಾಸನಮುತ್ತಮಂ ।
ರಾಘುನಾಥಂ ಮಹಚ್ಚೈ್ರೇಷ್ಠಂ ಕೌಸ್ಯತಂತುಭವಂ ತು ವಾ ॥ ೯೪ ॥

ಅಥವಾ ಪಟ್ಟಕೂಲಸ್ಯ ಚೈವಂ ಕಾತ್ಯಂ ವರಾಸನಂ ।
ಅಥವಾ ಲೇಖಯೇತ್ಪತ್ರೇ ಸರ್ವಾಭಾವೇ ದ್ವಿಜೋತ್ತಮೈಃ ॥ ೯೫ ॥

ಭೂರ್ಜಪತ್ರೇ ವಿಲಿಖಿತಂ ವಿಶೇಷಾತ್ಸಿದ್ಧಿದಂ ನೃಣಾಂ ।
ವಾ ವಸ್ತ್ರೋಪರಿ ಲೇಖ್ಯಂ ವಾ ಕರ್ತವ್ಯಂ ಚಿತ್ರತಂತುಭಿಃ ॥ ೯೬ ॥

ವಿನಾಸನೇನ ಯಾ ಪೂಜಾ ಸಾ ಪೂಜಾ ನಿಷ್ಫಲಾ ಭವೇತ್ ।
ರಾಮಭದ್ರಾಸನೇ ಪೂಜಾ ಸಾ ಪೂಜಾತಿಫಲಪ್ರದಾ ॥ ೯೭ ॥

೯೩-೯೫. ಅವುಗಳಲ್ಲಿ ಕೆಲವು ಭೇದಗಳನ್ನು ನಿನಗೆ ಹೇಳಿದ್ದೇನೆ. ಜನಗಳು ಅವರವರ ಬುದ್ಧಿಗೆ ತಿಳಿದಂತೆ ಈ ರಾಮತೋಭದ್ರವನ್ನು ಮಾಡಿಕೊಳ್ಳಬಹುದು. ಚಿನ್ನದ ಸರಿಗೆಯಿಂದ ಮಾಡಿದ ಆಸನವು ರಾಮನಿಗೆ ಉತ್ತಮವಾದುದು. ಬೆಳ್ಳಿಯ ಸರಿಗೆಯಿಂದ ಮಾಡಿದ ಆಸನವು ಮಧ್ಯಮವು. ರೇಷ್ಮೆಯಿಂದ ಮಾಡಿದುದೂ ಉತ್ತಮವೇ. ಇದೊಂದೂ ಇಲ್ಲದಿದ್ದರೆ ಎಲೆಯಲ್ಲಿ ಆಸನವನ್ನು ಬರೆದು ಇಡಬೇಕು.

೯೬. ಭುಜ ಪತ್ರೆಯಲ್ಲಿ ಆಸನವನ್ನು ಬರೆದು ಇಟ್ಟರೆ ಬೇಗನೆ ಸಿದ್ಧಿಯನ್ನು ಕೊಡುತ್ತದೆ. ಕೊನೆಯ ಪಕ್ಷ ಬಟ್ಟೆಯ ಮೇಲಾದರೂ ಆಸನವನ್ನು ಬರೆದು ಇಡಬೇಕು. ಆ ಬಟ್ಟೆಗೇನೇ ಚಿತ್ರ ವಿಚಿತ್ರವಾದ ದಾರಗಳನ್ನು ಸೇರಿಸಿ ಆಸನವಾಗುವಂತೆ ಸೇರಿಸಿದರೂ ಉತ್ತಮವು.

೯೭. ಆಸನವಿಲ್ಲದೆ ಪೂಜೆ ಮಾಡಬಾರದು. ಹಾಗೆ ಮಾಡಿದ ಪೂಜೆಯು ಫಲವಿಲ್ಲದೆ ಹೋಗುತ್ತದೆ. ರಾಮಭದ್ರಾಸನದಲ್ಲಿ ಪೂಜೆಮಾಡಿದರೆ ಅದು ಬಹುವಾದ ಫಲವನ್ನು ಕೊಡುತ್ತದೆ.

ಯದ್ಯದ್ರಾಮಪದಂ ಕರ್ಮ ತತ್ತಚ್ಚ ದ್ವಿಜಪುಂಗವೈಃ ।
ರಾಮಾಸನಸ್ಥಿತಂ ರಾಮಂ ಪುರಸ್ಕೃತ್ಯ ಸಮಾರಭೇತ್ ॥ ೯೮ ॥

ರಾಮಭದ್ರಾಸನೈರ್ಹೀನಂ ಯತ್ಕರ್ಮ ತಚ್ಚ ನಿಷ್ಫಲಂ ।
ತಸ್ಮಾದೇವಂ ಸ್ವಮೋನ್ವೈತತ್ಕರ್ತವ್ಯಂ ರಾಮಪೂಜನೇ ॥ ೯೯ ॥

ಅಷ್ಟೋತ್ತರಸಹಸ್ರಂ ಚ ರಾಮಲಿಂಗಾತ್ಮಕಂ ಹಿ ಯತ್ ।
ಆಸನಂ ತದ್ವರಿಷ್ಠಂ ಹಿ ರಾಘವಸ್ಯಾತಿತೋಷದಂ ॥ ೧೦೦ ॥

ತದಧೋ ರಾಮತೋಭದ್ರಮಷ್ಟೋತ್ತರಶತಾತ್ಮಕಂ ।
ತದಧೋ ರಾಮಲಿಂಗಾಖ್ಯಮಷ್ಟೋತ್ತರಶತಾತ್ಮಕಂ ॥ ೧೦೧ ॥

ತದಧೋ ರಾಮತೋಭದ್ರಮಷ್ಟೋತ್ತರಶತಾತ್ಮಕಂ ।
ತದಧಃ ಪಂಚವಿಂಶಚ್ಛ್ರೀರಾಮಭದ್ರಾಸನಂ ಶುಭಂ ॥ ೧೦೨ ॥

---

೯೮. ರಾಮನಿಗೆ ಮಾಡತಕ್ಕ ಪೂಜೆಯೇ ಅಲ್ಲದೆ ರಾಮನ ವಿಷಯವಾದ ಕೆಲಸಗಳು ಯಾವುವುಂಟೋ ಅವೆಲ್ಲವನ್ನೂ ರಾಮಾಸನದಲ್ಲಿ ರಾಮನನ್ನು ಇಟ್ಟೇ ಮಾಡಬೇಕು.

೯೯. ರಾಮತೋಭದ್ರವೆಂಬ ಆಸನವಿಲ್ಲದೆ ರಾಮನನ್ನೇ ಇಟ್ಟು ಮಾಡಿದ ಪೂಜೆಗಳೆಲ್ಲವೂ ಫಲವಿಲ್ಲದವುಗಳಾಗುತ್ತವೆ. ಆದ್ದರಿಂದ ಈ ರಾಮಾಸನವನ್ನು ರಾಮನ ಪೂಜೆಗಳೆಲ್ಲದರಲ್ಲಿಯೂ ಮಾಡಿಯೇ ತೀರಬೇಕು.

೧೦೦. ಈ ಆಸನಗಳೊಳಗೆ ಅಷ್ಟೋತ್ತರಸಹಸ್ರರಾಮತೋಭದ್ರವು ರಾಮ ಪೂಜೆಯಲ್ಲಿ ಉತ್ತಮವು. ರಾಮನಿಗೆ ಬಹು ಸಂತೋಷವನ್ನುಂಟು ಮಾಡುತ್ತದೆ.

೧೦೧-೧೦೫. ಈ ಅಷ್ಟೋತ್ತರಸಹಸ್ರರಾಮಲಿಂಗಾತ್ಮಕಭದ್ರಕ್ಕಿಂತಲೂ ಅಷ್ಟೋತ್ತರರಾಮತೋಭದ್ರವು ನಿಕೃಷ್ಟವು. ಇದಕ್ಕಿಂತಲೂ ಅಷ್ಟೋತ್ತರ ಶತರೂಪವಾದ ರಾಮಲಿಂಗತೋಭದ್ರವು ನಿಕೃಷ್ಟವು. ಇದಕ್ಕಿಂತಲೂ ಅಷ್ಟೋತ್ತರ ಶತರಾಮತೋಭದ್ರವು ನಿಕೃಷ್ಟವು. ಆದಕ್ಕಿಂತಲೂ ಪಂಚವಿಂಶತ್ ಸಂಖ್ಯಾಕವಾದ

ಮಧ್ಯೋ ರಾಮತೋಭದ್ರಂ ಷೋಡಶಾತ್ಮಕಮೀರಿತಂ ।
ತ್ರಯೋದಶಾತ್ಮಕಂ ರಾಮತೋಭದ್ರಂ ತದಧಃ ಸ್ಮೃತಂ ॥ ೧೦೩ ॥

ದ್ವಾದಶಂ ಚ ನವಾಖ್ಯಂ ಚ ಹ್ಯಷ್ಟಮುದ್ರಾತ್ಮಕಂ ತಥಾ ।
ಚತುರ್ಮುದ್ರಾತ್ಮಕಂ ವಾಪಿ ಪೂರ್ವತಶ್ಚಾಪರಂ ಹ್ಯಧಃ ॥ ೧೦೪ ॥

ಏವಂ ಕ್ರಮೇಣ ಜ್ಞೇಯಾನಿ ರಾಮಭದ್ರಾಸನಾನಿ ಹಿ ।
ಶ್ರೇಷ್ಠಾಸನೇಷು ಯಾ ಪೂಜಾ ತಸ್ಯಾಃ ಶ್ರೇಷ್ಠಂ ಫಲಂ ಸ್ಮೃತಂ ॥ ೧೦೫ ॥

ಲಘ್ವಾಸನೇಷು ಯಾ ಪೂಜಾ ತಾದೃಶಂ ತತ್ಫಲಂ ಸ್ಮೃತಂ ।
ಏವಂ ಜ್ಞಾತ್ವಾ ಫಲಂ ಬುಧ್ಯಾ ಶ್ರೇಷ್ಠಮೇವಾಸನಂ ಶನೈಃ ॥ ೧೦೬ ॥

ಯತ್ನೇನೈವ ಪ್ರಕರ್ತವ್ಯಂ ರಾಮೋಪಾಸನಮಾನವೈಃ ।
ಪ್ರತಿವರ್ಷೇ ನವೀನಂ ಚ ಕಾರ್ಯಮಾಸನಮಾದರಾತ್ ॥ ೧೦೭ ॥

ರಾಮಭದ್ರಾಸನವು ನಿಕೃಷ್ಟವು. ಅದಕ್ಕಿಂತಲೂ ಷೋಡಶಾತ್ಮಕವಾದ ರಾಮತೋಭದ್ರವು ನಿಕೃಷ್ಟವು ಅದಕ್ಕಿಂತಲೂ ತ್ರಯೋದಶಾತ್ಮಕವಾದ ರಾಮತೋಭದ್ರವು ನಿಕೃಷ್ಟವು. ಅದಕ್ಕಿಂತಲೂ ನವಾಖ್ಯವಾದ ರಾಮತೋಭದ್ರವು ನಿಕೃಷ್ಟವು. ಅದಕ್ಕಿಂತಲೂ ಅಷ್ಟಮುದ್ರಾತ್ಮಕವಾದ ರಾಮತೋಭದ್ರವು ನಿಕೃಷ್ಟವು. ಅದಕ್ಕಿಂತಲೂ ಚತುರ್ಮುದ್ರಾತ್ಮಕವಾದ ರಾಮತೋಭದ್ರವು ನಿಕೃಷ್ಟವು. ಈ ರೀತಿಯಾಗಿ ಹೆಚ್ಚು ಸಂಖ್ಯೆಯದಕ್ಕಿಂತ ಕಡಿಮೆ ಸಂಖ್ಯೆಯದು ನಿಕೃಷ್ಟವೆಂದೂ ಕಡಿಮೆ ಸಂಖ್ಯೆಯ ಭದ್ರಕ್ಕಿಂತ ಹೆಚ್ಚು ಸಂಖ್ಯೆಯದು ಉತ್ಕೃಷ್ಟವೆಂದೂ ತಿಳಿಯಬೇಕು. ಶ್ರೇಷ್ಠವಾದ ಆಸನದಲ್ಲಿ ಪೂಜೆಗೆ ಶ್ರೇಷ್ಠಫಲವು ಹೇಳಲ್ಪಟ್ಟಿದೆ.

೧೦೬-೧೦೭. ಲಘುವಾದ ಆಸನದಲ್ಲಿ ಪೂಜೆ ಮಾಡಿದರೆ ಅದಕ್ಕೆ ತಕ್ಕಷ್ಟು ಫಲವನ್ನು ಅದರಲ್ಲಿ ಹೊಂದಬಹುದು. ಈ ರೀತಿಯ ಫಲಗಳನ್ನು ಬುದ್ಧಿವಂತಿಕೆಯಿಂದ ಆಲೋಚಿಸಿಕೊಂಡು ಜನರು ಪ್ರಯತ್ನಪಟ್ಟು ಉತ್ತಮಾಸನಗಳನ್ನು ಸಂಪಾದಿಸಿಕೊಳ್ಳಬೇಕು. ಪ್ರತಿವರ್ಷವೂ ಹೊಸ ಹೊಸದಾಗಿ ಆಸನಗಳನ್ನು ಮಾಡಿಕೊಳ್ಳುತ್ತಿರಬೇಕು. ಒಂದೇ ಆಸನದಲ್ಲಿ ಪೂಜೆಮಾಡಿದರೆ ಆ ಆಸನವು ಒಂದು ವರ್ಷದ ಮೇಲೆ ಶುಭ ಪ್ರದವಲ್ಲ. ಎಂದರೆ ಆಸನವು ಒಂದೇ

ಏಕಸ್ಮಿನ್ ಹ್ಯಾಸನೇ ಪೂಜಾ ನ ವರ್ಷಾರ್ದೂರ್ಧ್ವತಶ್ಶುಭಾ ।
ಏವಂ ಶಿಷ್ಯಾಸನಾನಾಂ ಚ ಭೇದಾಃ ಪೃಷ್ಟಾ ತ್ವಯಾ ಪುರಾ ॥ ೧೦೮ ॥

ತವಾಗ್ರೇ ಹಿ ಮಯಾ ಖ್ಯಾತಾಃ ಶ್ರೀರಾಮಸ್ಯಾತಿತೋಷದಾಃ ।
ತ್ವತ್ಪೃಷ್ಟರಾಮತೋಭದ್ರವರ್ಣನಸ್ಯ ಪ್ರಸಂಗತಃ ॥ ೧೦೯ ॥

ಸ್ಮಾರಿತಾ ರಾಮಚಂದ್ರಸ್ಯ ಕಿಂಚಿಲ್ಲೀಲಾ ಮಯಾದ್ಯ ಹಿ ।
ವದಾಮ್ಯಹಂ ತವಾಗ್ರೇ ತಾಂ ತ್ವಂ ಶ್ರುಣುಷ್ವ ದ್ವಿಜೋತ್ತಮ ॥ ೧೧೦ ॥

ಪ್ರತ್ಯಬ್ದಂ ಶ್ರಾವಣೇ ಮಾಸೇ ಗುರುವಾಕ್ಯಾದ್ರಘೂತ್ತಮಃ ।
ಚತ್ವಾರಿಂಶಟ್ಟಂಕಮಿತಸುವರ್ಣಸ್ಯ ಪೃಥಕ್ ಪೃಥಕ್ ॥ ೧೧೧ ॥

ಪ್ರತ್ಯಹಂ ಲಕ್ಷಲಿಂಗಾನಿ ಕೃತ್ವಾ ಪತ್ನ್ಯಾ ಯುತೋಽರ್ಚಯತ್ ।
ಅಷ್ಟೋತ್ತರಸಹಸ್ರೈಶ್ಚ ಲಿಂಗೈರ್ಯದ್ಭದ್ರಮುತ್ತಮಂ ॥ ೧೧೨ ॥

ರೀತಿಯದಾದರೂ ಹೊಸ ಹೊಸದಾಗಿ ಬರೆಸಿಕೊಳ್ಳುತ್ತಿರಬೇಕು. ಎಲೈ ಶಿಷ್ಯನೇ! ನೀನು ಹಿಂದೆ ಆಸನಗಳನ್ನು ಹೇಳೆಂದು ಕೇಳಿದೆಯಷ್ಟೆ! ಅವೆಲ್ಲವನ್ನೂ ಈಗ ನಿನ್ನೆದುರಿಗೆ ಹೇಳಿದ್ದೇನೆ. ಆ ರಾಮತೋಭದ್ರದ ಪ್ರಸಂಗದಿಂದ ಉಳಿದುವನ್ನೂ ಹೇಳಿದ್ದೇನೆ.

೧೧೦. ಎಲೈ ಶಿಷ್ಯನೇ! ರಾಮಚಂದ್ರನ ಈ ಲೀಲೆಯನ್ನು ಸ್ವಲ್ಪ ಮಟ್ಟಿಗೆ ಮಾತ್ರ ಸ್ಮರಿಸಿಕೊಂಡಂತಾಯಿತು. ಇನ್ನೂ ಕೆಲವು ಜ್ಞಾಪಕಕ್ಕೆ ಬರುತ್ತಿವೆ. ಅವನ್ನೂ ಹೇಳುತ್ತೇನೆ ಕೇಳು.

೧೧೧-೧೧೨. ಶ್ರೀರಾಮನು ಗುರುವಿನ ಅಪ್ಪಣೆಯಂತೆ ಶ್ರಾವಣ ಮಾಸದಲ್ಲಿ ನಾಲ್ವತ್ತು ಟಂಕ (ಒಂದನೂರ ಅರವತ್ತು ರೂಪಾಯಿ ಪ್ರಮಾಣವುಳ್ಳ)ಗಳ ಅಳತೆಯಲ್ಲಿ ಒಂದು ಲಿಂಗದಂತೆ ಪ್ರತಿದಿನವೂ ಒಂದು ಲಕ್ಷಲಿಂಗಗಳನ್ನು ಮಾಡಿಸುತ್ತಿದ್ದನು. ಹೀಗೆ ಮಾಡಿದ ಲಿಂಗಗಳನ್ನು ಹೆಂಡತಿಯೊಡನೆ ಕೂಡಿಕೊಂಡು ಪೂಜಿಸುತ್ತಿದ್ದನು. ಅಷ್ಟೋತ್ತರ ಸಹಸ್ರಲಿಂಗಗಳುಳ್ಳ ರಾಮಲಿಂಗತೋಭದ್ರವು ಂಭುವಿಗೆ ಆಸನವೆಂದು ತಿಳಿ.

ತಚ್ಛಂಭೋರಾಸನಂ ಜ್ಞೇಯಂ ಮಹಾಪ್ರೀತಿವಿವರ್ಧನಂ ।
ತನ್ಮಧ್ಯಗತಕಮಲೇ ಚೈಕಂ ಲಿಂಗಂ ನಿವೇಶ್ಯ ಚ ॥ ೧೧೩ ॥

ಷೋಡಶೈರುಪಚಾರೈಸ್ತತ್ಸಂಪೂಜ್ಯ ಸ ರಘೂತ್ತಮಃ ।
ಹೇಮಮುದ್ರಾಂ ದಕ್ಷಿಣಾರ್ಥಂ ದತ್ವಾ ಸಂಪೂಜ್ಯ ಭೂಸುರಂ ॥ ೧೧೪ ॥

ತಸ್ಮೈ ಲಿಂಗಂ ಸಾಸನಂ ತದ್ದದೌ ಪ್ರತ್ಯೇಕಮಾದರಾತ್ ।
ಏವಂ ಸ ಕೋಟಿಲಿಂಗಾನಿ ತ್ರಯಸ್ತ್ರಿಂಶದ್ದಿನೈರ್ದದೌ ॥ ೧೧೫ ॥

ಏವಂ ವ್ರತಂ ಶ್ರಾವಣೇ ಹಿ ಪ್ರತಿವರ್ಷೇಕರೋದ್ವಿಭುಃ ।
ದಿವ್ಯೈರಾಭರಣೈರ್ವಸ್ತ್ರೈಃ ದ್ವಿಜಾ ರಾಮಾರ್ಪಿತೈರ್ಬಭುಃ ॥ ೧೧೬ ॥

ಹೇಮತಂತುಸಮುದ್ಭೂತಾನ್ಯಕರೋದಾಸನಾನಿ ಸಃ ।
ಉದ್ಯಾಪನಂ ಚ ಹವನಂ ಚಕಾರ ರಘುನಂದನಃ ॥ ೧೧೭ ॥

೧೧೩-೧೧೫. ಇದು ಶಂಭುವಿಗೆ ಬಹು ಪ್ರೀತಿಯನ್ನು ಉಂಟು ಮಾಡುತ್ತದೆ. ಆ ಭದ್ರದಲ್ಲಿ ಮಧ್ಯದಲ್ಲಿರುವ ಕಮಲದ ಮಧ್ಯದಲ್ಲಿ ಒಂದು ಲಿಂಗವನ್ನಿಡಬೇಕು. ಅದನ್ನು ಷೋಡಶೋಪಚಾರಗಳಿಂದ ಪೂಜಿಸಿ ಒಂದು ಚಿನ್ನದ ರಾಮಮುದ್ರೆಯನ್ನು ದಕ್ಷಿಣೆಯಾಗಿಟ್ಟು ಒಬ್ಬ ಬ್ರಾಹ್ಮಣನನ್ನು ಪೂಜಿಸಿ ಅವನಿಗೆ ಆ ಆಸನವನ್ನೂ ಆ ಲಿಂಗವನ್ನೂ [illegible] ಕೊಡುತ್ತಿದ್ದನು. ಹೀಗೆ ಆ ಲಕ್ಷ ಲಿಂಗಗಳನ್ನು ಬೇರೆಬೇರೆಯ ಬ್ರಾಹ್ಮಣರಿಗೆ ಕೊಡುತ್ತಿದ್ದನು. ಹೀಗೆಯೇ ಆ ರಾಮನು ಒಂದು ಕೋಟಿ ಲಿಂಗಗಳನ್ನೂ ಮೂವತ್ತೈದು ದಿನಗಳಲ್ಲಿ ದಾನ ಮಾಡುತ್ತಿದ್ದನು.

೧೧೬. ಈ ರೀತಿಯಾದ ವ್ರತವನ್ನು ಶ್ರೀರಾಮನು ಶ್ರಾವಣ ಮಾಸದಲ್ಲಿ ಪ್ರತಿವರ್ಷವೂ ಮಾಡುತ್ತಿದ್ದನು. ಆ ಬ್ರಾಹ್ಮಣರಿಗೆ ದಿವ್ಯವಾದ ಆಭರಣಗಳನ್ನೂ ದಿವ್ಯವಾದ ವಸ್ತ್ರಗಳನ್ನೂ ಕೊಡುತ್ತಿದ್ದನು. ಇದನ್ನು ಧರಿಸಿ ಆ ವಿಪ್ರರು ಪ್ರಕಾಶಿಸುತ್ತಿದ್ದರು.

೧೧೭. ಅವನು ಆ ಆಸನಗಳನ್ನು ಚಿನ್ನದ ಸರಿಗೆಗಳಿಂದ ಸೇರಿಸಿ ಕೊಡಿಸುತ್ತಿದ್ದನು. ಕೊನೆಗೆ ಉದ್ಯಾಪನೆಯನ್ನೂ ಹೋಮಗಳನ್ನೂ ಆ ಶ್ರೀರಾಮನು ಮಾಡಿದನು.

॥ ವಿಷ್ಣುದಾಸ ಉವಾಚ ॥
ಅಷ್ಟೋತ್ತರಸಹಸ್ರೈರ್ಯಲ್ಲಿಂಗತೋಭದ್ರಮೀರಿತಂ ।
ಕಥಂ ಕಾರ್ಯಂ ತಸ್ಯ ಭೇದಾ ವಿಸ್ತರಾದ್ವಕ್ತುಮರ್ಹಸಿ ॥ ೧೧೮ ॥

ಹೇಮತಂತುಸಮುದ್ಭೂತಮಕರೋದಾಸನಂ ವಿಭುಃ ।
ಸಹ್ಯೈಮಾನ್ಯಪಿ ಲಿಂಗಾನಿ ಚಾಕರೋಚ್ಚ ವರಾಣಿ ಹಿ ॥ ೧೧೯ ॥

ದಿವ್ಯೈರಾಭರಣೈರ್ವಸ್ತ್ರೈರಕರೋಚ್ಚ ದ್ವಿಜಾರ್ಚನಂ ।
ಅಶಕ್ತಾ ತದ್ವ್ರತಂ ಸಿದ್ಧ್ಯೇತ್ಕಥಂ ತದ್ವಕ್ತುಮರ್ಹಸಿ ॥ ೧೨೦ ॥

॥ ಶ್ರೀರಾಮದಾಸ ಉವಾಚ ॥
ಶಕ್ತೌ ಚ ಪಟ್ಟಕೂಲಸ್ಯ ಕಂಬಳಸ್ಯಾ ಥವಾ ನರೈಃ ।
ಕಾರ್ಯಂ ತದಥವಾ ವಸ್ತ್ರೈಸ್ತಂತುಭಿಶ್ಚ ಪ್ರಕಾರಯೇತ್ ॥ ೧೨೧ ॥

ಲೇಖ್ಯಂ ವಸ್ತ್ರೇಥ ವಾ ರಂಗೈಃ ಲೇಖ್ಯಂ ಪತ್ರಾದಿಸಂಸ್ಥಲೇ ।
ಅಶಕ್ತಾ ರಾಜತಾನ್ಯೇವ ಲಿಂಗಾನಿ ತಾಮ್ರಜಾನಿ ಚ ॥ ೧೨೨ ॥

---

೧೧೮. ವಿಷ್ಣುದಾಸನು ಹೇಳಿದನು:— ಎಲೈ ಗುರುವೇ! ಅಷ್ಟೋತ್ತರ ಸಹಸ್ರ ಲಿಂಗವೆಂದು ಹೇಳಿದೆಯಲ್ಲ! ಅದನ್ನು ಹೇಗೆ ಮಾಡಬೇಕು? ಅದರ ಭೇದಗಳೇನು? ಇವನ್ನು ವಿಸ್ತಾರವಾಗಿ ಹೇಳು.

೧೧೯-೧೨೦. ಆ ಶ್ರೀರಾಮನು ಚಕ್ರವರ್ತಿಯಾಗಿದ್ದುದರಿಂದ ಚಿನ್ನದ ಸರಿಗೆಗಳ ಆಸನಗಳನ್ನೂ ಚಿನ್ನದ ಲಿಂಗಗಳನ್ನೂ ಲಕ್ಷ ಗಟ್ಟಲೆಯಲ್ಲಿ ಮಾಡಿ ದಾನ ಮಾಡಿದನು. ಮತ್ತು ಬ್ರಾಹ್ಮಣರಿಗೆ ಆಭರಣಗಳನ್ನೂ ವಸ್ತ್ರಗಳನ್ನೂ ಬಹುವಾಗಿ ಕೊಟ್ಟನು. ಆ ಚಕ್ರವರ್ತಿಗೆ ಅದು ಸರಿಹೋಯಿತು. ಅಶಕ್ತನಾದವನು ಈ ವ್ರತವನ್ನು ಮಾಡುವುದು ಹೇಗೆ? ಅದನ್ನು ಹೇಳು.

೧೨೧. ರಾಮದಾಸನು ಹೇಳಿದನು:— ಶಕ್ತನಾಗಿರುವವನು ರೇಷ್ಮೆಯ ನೂಲಿನಿಂದಲಾಗಲಿ, ಇನ್ನೂ ಕೀಳೆಂದರೆ ಕಂಬಳಿನೂಲಿನಿಂದಲಾಗಲಿ ಆಸನವನ್ನು ಮಾಡಿಸಬೇಕು. ಇಲ್ಲದಿದ್ದರೆ ಹತ್ತಿಯ ನೂಲಿನಿಂದ ಆಸನವನ್ನು ಬಗೆಬಗೆಯ ನೂಲನ್ನು ಸೇರಿಸಿ ಮಾಡಿಸಬೇಕು.

೧೨೨-೧೨೩. ಅದೂ ಆಗದಿದ್ದರೆ ಬಟ್ಟೆಯ ಮೇಲೆ ಬಣ್ಣಗಳಿಂದ ಆ ಆಸನವನ್ನು ಬರೆಯಬೇಕು. ಅದೂ ಆಗದಿದ್ದಲ್ಲಿ ರಂಗೋಲಿಯಿಂದ ಶುದ್ಧವಾದ ನೆಲದ ಮೇಲೆ ಬರೆಯಬೇಕು. . ಶಕ್ತನಾದವನು ಚಿನ್ನದಿಂದ ಲಿಂಗಗಳನ್ನು ಮಾಡಿಸಬೇಕು. ಅಶಕ್ತನು ಬೆಳ್ಳಿಯಲ್ಲಿ ಲಿಂಗಗಳನ್ನು ಮಾಡಿಸಬಹುದು. ಮತ್ತು

ಕಿಂ ವಾ ಪಾರದ ಭೂತಾನಿ ಸ್ಫಾಟಿಕಾನ್ಯೌಪಲಾನಿ ವಾ ।
ದಾರುಜಾನಿ ಚಂದನೈರ್ವಾ ಗೋಮಯೇನ ಮೃದಾಪಿ ವಾ । ॥ ೧೨೩ ॥

ಕೃತ್ವಾ ಲಿಂಗಾನಿ ಪೂಜ್ಯಾನಿ ಸ್ವಶಕ್ತ್ಯಾ ಪೂಜಯೇದ್ವಿಜಾನ್ ।
ಇದಾನೀಂ ಲಿಂಗತೋಭದ್ರರಚನಾಂ ತೇ ವದಾಮ್ಯಹಂ ॥ ೧೨೪ ॥

ತಿರ್ಯಗೂರ್ಧ್ವಂ ರಕ್ತರೇಖಾ ದ್ವೇಶತೇಷ್ಟಾದಶ ಸ್ಮೃತಾಃ ।
ತಾಸಾಂ ಪದಾನಾಮೇಕೇನ ಪೂರ್ವಸಂಖ್ಯಾ ಭವೇದಿಹ ॥ ೧೨೫ ॥

ಪೀತಾಃ ಪರಿಧಯಃ ಕಾರ್ಯಾಷ್ಷಟ್ಪದಾಂತೇತ್ರ ಸರ್ವತಃ ।
ಯುಗೇಂದುಸಂಮಿತಾಸ್ತೇಷು ಲಿಂಗಾದಿ ರಚಯೇದ್ಧಿಯಾ ॥ ೧೨೬ ॥

ಅಶಕ್ತನು ತಾಮ್ರದಲ್ಲಿ ಲಿಂಗಗಳನ್ನು ಮಾಡಿಸಬೇಕು. ಅದಕ್ಕೂ ಶಕ್ತಿಯಿಲ್ಲದವನು ಪಾದರಸದ ಲಿಂಗಗಳನ್ನು ಮಾಡಿಸಬಹುದು. ಇನ್ನೂ ಶಕ್ತಿಯಿಲ್ಲದವನು ಸ್ಫಟಿಕ ಲಿಂಗವನ್ನಾಗಲಿ ಕಲ್ಲಿನ ಲಿಂಗವನ್ನಾಗಲಿ ಮರದ ಲಿಂಗವನ್ನಾಗಲಿ ಚಂದನದಿಂದಲಾಗಲಿ ಹಸುವಿನ ಸಗಣಿಯಿಂದಾಗಲಿ ಕೊನೆಗೆ ಮಣ್ಣಿನಿಂದಾಗಲಿ ಲಿಂಗಗಳನ್ನು ಮಾಡಿಸಬೇಕು. ಇವು ಶಕ್ತಿಗನುಗುಣವಾಗಿರಬೇಕು.

೧೨೪. ಈ ರೀತಿಯಲ್ಲಿ ತಮ್ಮ ತಮ್ಮ ಶಕ್ತಿಗನುಗುಣವಾಗಿ ಲಿಂಗಗಳನ್ನು ಮಾಡಿ ಪೂಜಿಸಬೇಕು. ಬ್ರಾಹ್ಮಣರನ್ನು ತಮ್ಮ ಶಕ್ತಿಗನುಗುಣವಾಗಿ ಪೂಜಿಸಬೇಕು. ಇನ್ನು ಮೇಲೆ ಲಿಂಗತೋಭದ್ರ ರಚನೆಯನ್ನು ಹೇಳುತ್ತೇನೆ ಕೇಳು.

೧೨೫. ಅಡ್ಡಡ್ಡಲಾಗಿಯೂ ಉದ್ದುದ್ದವಾಗಿಯೂ ಇನ್ನೂರ ಹದಿನೆಂಟು ಗೆರೆಗಳನ್ನು ಕೆಂಪು ಬಣ್ಣದಿಂದ ಎಳೆಯಬೇಕು. ಇವುಗಳಲ್ಲಿ ಲಿಂಗಗಳನ್ನು ರಚಿಸಿದರೆ ಅಷ್ಟೋತ್ತರಸಹಸ್ರಲಿಂಗತೋ ಭದ್ರವಾಗುತ್ತದೆ.

೧೨೬-೧೨೭. ಆರು ಮನೆಗಳಿಗೆ ಒಂದು ಪರಿಧಿಯಂತೆ ಅರಿಶಿನ ಬಣ್ಣದಿಂದ ರಚಿಸಬೇಕು. ಆ ಪರಿಧಿಗಳು ಹದಿನಾಲ್ಕು ಆಗುತ್ತವೆ. ಅವುಗಳಲ್ಲಿ ಬುದ್ಧಿವಂತಿಕೆಯಿಂದ ಲಿಂಗ ಮುಂತಾದುವನ್ನು ರಚಿಸಬೇಕು. ಈ ಪರಿಧಿಗಳ ನಾಲ್ಕು

ಚತುಷ್ಕೋಣೇಷು ಶಶಿನಸ್ತ್ರಿಪದ್ಯೈಃ ಪರಿಕಲ್ಪಯೇತ್ ।
ತದಗ್ರೇ ಶೃಖಂಲಾಃ ಪಂಚಪಾದ್ಯೈಃ ಕಾರ್ಯಾ ಚ ಸರ್ವತಃ ॥ ೧೨೭ ॥

ಏಕಾದಶಪದಾ ವಲ್ಲೀ ವಾಪೀ ತ್ರಿದಶಪಾದಿಕಾ ।
ಅಷ್ಟಾದಶಪದೈಶ್ಶಂಭುಃ ಸರ್ವತ್ರೈವಂ ಲಿಖೇತ್ಕ್ರಮಾತ್ ॥ ೧೨೮ ॥

ತತ್ರ ಪ್ರಥಮಪರಿಧೇರರ್ವಾಗ್ಲಿಂಗಾನಿ ಯೋಜಯೇತ್ ।
ತ್ರಿರೇಕಾದಶಸಂಖ್ಯಾನಿ ವಾಪ್ಯಸ್ತ್ವೇಕಾಧಿಕಾಸ್ತತಃ ॥ ೧೨೯ ॥

ಭದ್ರೇಽರ್ಕಾರ್ಕಪದ್ಯೈಃ ಕಾರ್ಯೇದ್ವಿತೀಯೇ ಲಿಂಗಮಂತತಃ ।
ಏಕತ್ರಿಂಶನ್ಮಿತಾ ಕಾರ್ಯಾ ಭದ್ರೇ ನವನಕಾತ್ಮಕೇ ॥ ೧೩೦ ॥

ತೃತೀಯೇ ನವನೇತ್ರೇಶಸಂಖ್ಯಾ ಭದ್ರೇಷಟ್ಷಟ್ಪದೇ ।
ತುರ್ಯೇ ಷಡ್ವಿಂಶಲಿಂಗಾನಿ ಭದ್ರೇಽರ್ಕಾರ್ಕಪದೇ ಯುತೇ ॥ ೧೩೧ ॥

ಮೂಲೆಗಳಲ್ಲಿಯೂ ಮೂರು ಮೂರು ಮನೆಗಳಲ್ಲಿ ಚಂದ್ರರನ್ನು ರಚಿಸಬೇಕು. ಆದರ ಮುಂದಕ್ಕೆ ಐದೈದು ಮನೆಗಳಿಗೆ ಸರಪಣಿಗಳನ್ನು ರಚಿಸಬೇಕು. ಹೀಗೆ ಎಲ್ಲಾ ಕಡೆಯಲ್ಲಿಯೂ ಮಾಡಬೇಕು.

೧೨೮-೧೨೯. ಹನ್ನೊಂದು ಮನೆಗಳ ಪರಿಮಾಣದ ವಲ್ಲಿಯೂ ಹದಿಮೂರು ಮನೆಗಳ ಪ್ರಮಾಣದ ವಾಪಿಯೂ ಬರುತ್ತದೆ. ಹದಿನೆಂಟು ಮನೆಗಳ ಪ್ರಮಾಣ ದಲ್ಲಿ ಲಿಂಗವೂ ಏರ್ಪಡುತ್ತದೆ. ಎಲ್ಲಡೆಯಲ್ಲಿಯೂ ಈ ರೀತಿಯಾಗಿ ರಚಿಸ ಬೇಕು. ಈ ಮೊದಲನೆಯ ಸರದಿಯಲ್ಲಿ ಮೊದಲನೆಯ ಪರಿಧಿಗೆ ಮೊದಲೇ ಲಿಂಗವನ್ನೂ ಏರ್ಪಡಿಸಬೇಕು. ಮೂವತ್ತು ಮೂರು ವಾಪಿಗಳೂ ಮೂವತ್ತು ನಾಲ್ಕು ವಾಪಿಗಳೂ ಬರುತ್ತವೆ.

೧೩೦. ನೂರ ನಲವತ್ತು ನಾಲ್ಕು ಮನೆಗಳ ಭದ್ರವು ಏರ್ಪಡುತ್ತದೆ. ಎರ ಡನೆ ಸರದಿಯಲ್ಲಿ ಎಂಭತ್ತೊಂದು ಮನೆಗಳ ಪ್ರಮಾಣವುಳ್ಳ ಮೂವತ್ತೊಂದು ಭದ್ರಗಳು ಬರುತ್ತವೆ.

೧೩೧-೧೩೩. ಮೂರನೆಯ ಸರದಿಯಲ್ಲಿ ಮೂವತ್ತಾರು ಮನೆಗಳ ಪ್ರಮಾ ಣಗಳ ಇಪ್ಪತ್ತೊಂಭತ್ತು ಭದ್ರಗಳು ಬರುತ್ತವೆ. ನಾಲ್ಕನೆಯ ಸರದಿಯಲ್ಲಿ ನೂರ ನಲವತ್ತು ನಾಲ್ಕು ಮನೆಯ ಪ್ರಮಾಣದ ಇಪ್ಪತ್ತು ರಾಮಲಿಂಗಗಳು ಬರುತ್ತವೆ. ಐದನೆಯ ಸರದಿಯಲ್ಲಿ ಎಂಭತ್ತೊಂದು ಮನೆಯ ಇಪ್ಪತ್ತ ನಾಲ್ಕು ಲಿಂಗಗಳು

ಪಂಚಮೋ ತುರ್ಯನೇತ್ರೇಶಾ ಭದ್ರೇ ನವನವಾತ್ಮಕೇ ।
ಷಷ್ಠೇ ದ್ವಾದಶಲಿಂಗಾನಿ ಭದ್ರೇ ಷಟ್ಷಟ್ಪದೇ ಸ್ಮೃತೇ ॥ ೧೩೨ ॥

ಸಪ್ತಮೋ ಲಿಂಗವಿತತಿರೇಶೋನವಿಂಶತ್ಸಂಖ್ಯಕಾಃ ।
ಭದ್ರೇರ್ಕಾಽರ್ಕಪದೇ ಜ್ಞೇಯೋಽಷ್ಟಮೋ ಸಪ್ತದಶೇಶ್ವರಾಃ ॥ ೧೩೩ ॥

ಭದ್ರೇ ನವನವಪದೇ ನವಮೋ ಮನುಶಂಕರಾಃ ।
ಭದ್ರೇ ಶಶಿಕಲಾಸಂಖ್ಯೇ ದಶನೋಽರ್ಕಮಿತಾಶ್ಶಿವಾಃ ॥ ೧೩೪ ॥

ಭದ್ರೇರ್ಕಾಽರ್ಕಪದೇ ಜ್ಞೇಯೋ ತಥಾ ತ್ವೇಕಾದಶೇ ದಶ ।
ಶಿವಾ ನವ ನವಪದೇ ಭದ್ರೇ ಜ್ಞೇಯೋ ಮನೋರಮೇ ॥ ೧೩೫ ॥

ದ್ವಾದಶೇ ಸಪ್ತಲಿಂಗಾನಿ ಭದ್ರೇ ಚಂದ್ರಕಲಾತ್ಮಕೇ ।
ತ್ರಯೋದಶೇ ಪಂಚಹರಾ ಭದ್ರೇರ್ಕಾರ್ಕಪದೇ ಮತೇ ॥ ೧೩೬ ॥

ಬರುತ್ತವೆ. ಆರನೆಯ ಸರದಿಯಲ್ಲಿ ಮೂವತ್ತಾರು ಮನೆಯ ಹನ್ನೆರಡು ಲಿಂಗಗಳು ಬರುತ್ತವೆ. ಏಳನೆಯ ಸರದಿಯಲ್ಲಿ ಹತ್ತೊಂಭತ್ತು ಲಿಂಗಗಳು ಬರುತ್ತವೆ. ನೂರ ನಲವತ್ತು ನಾಲ್ಕು ಮನೆಯ ಭದ್ರವು ಬರುತ್ತದೆ. ಎಂಟನೆಯ ಸರದಿಯಲ್ಲಿ ಹದಿನೇಳು ಲಿಂಗಗಳು ಬರುತ್ತವೆ. ಎಂಭತ್ತೊಂದು ಮನೆಯ ಭದ್ರವು ಏರ್ಪಡುತ್ತದೆ.

೧೩೪-೧೩೬. ಒಂಭತ್ತನೆಯ ಸರದಿಯಲ್ಲಿ ಹದಿನಾಲ್ಕು ಲಿಂಗಗಳು ಏರ್ಪಡುತ್ತವೆ. ಹದಿನಾರು ಭದ್ರಗಳೂ ಬರುತ್ತವೆ. ಹತ್ತನೆಯ ಸರದಿಯಲ್ಲಿ ಹನ್ನೆರಡು ಲಿಂಗಗಳು ಬರುತ್ತವೆ. ಇಲ್ಲಿರುವ ಭದ್ರಗಳು ನೂರ ನಲವತ್ತು ನಾಲ್ಕು ಮನೆಗಳದು. ಹನ್ನೊಂದನೆಯ ಸರದಿಯಲ್ಲಿ ಹತ್ತು ಲಿಂಗಗಳೂ ಎಂಭತ್ತೊಂದು ಮನೆಯ ಭದ್ರಗಳೂ ಬರುತ್ತವೆ ಹನ್ನೆರಡನೆಯ ಸರದಿಯಲ್ಲಿ ಏಳು ಲಿಂಗಗಳೂಹದಿನಾರು ಭದ್ರಗಳೂ ಬರುತ್ತವೆ. ಹದಿಮೂರನೆಯ ಸರದಿಯಲ್ಲಿ ಐದು ಲಿಂಗಗಳೂ

ಚತುರ್ದಶೇ ತ್ರಿಲಿಂಗಾನಿ ಭದ್ರೇ ನವನವಾತ್ಮಕೇ |
ಚರಮೇಂತಸ್ತು ರಚಯೇತ್ಸರ್ವತೋಭದ್ರಮುತ್ತಮಂ ‖ ೧೩೭ ‖

ಖಂಡೇಂದುಸ್ತ್ರಿಪದಃ ಕೋಣೇ ಶೃಂಖಲಾ ಷಟ್ಪದಾತ್ಮಿಕಾ |
ತ್ರಯೋದಶಪದಾ ವಲ್ಲೀ ವಾಪೀ ತತ್ವಮಿತಿರ್ಮತಾ ‖ ೧೩೮ ‖

ಭದ್ರೇ ಷೋಡಶಷೋಡಶಪದೇಽತಃ ಪರಿಧಿರ್ಭವೇತ್ |
ತದಂತರೇ ಪಂಚಪಂಚ ಪದೈಃ ಪದ್ಮಂ ಸಮುದ್ಧರೇತ್ ‖ ೧೩೯ ‖

ವಿಚಿತ್ರಂ ಚಿತ್ರವರ್ಣಂ ಚ ಶ್ವೇತೇಂದುಶ್ಶೃಂಖಲಾಽಸಿತಾ |
ವಾಪೀ ಶುಕ್ಲಾಽಸಿತಶ್ಶಂಭೂ ರಕ್ತಂ ಭದ್ರಂ ಪ್ರಕಲ್ಪಯೇತ್ ‖ ೧೪೦ ‖

ನೂರ ನಲವತ್ತು ನಾಲ್ಕು ಮನೆಯ ಭದ್ರಗಳೂ ಬರುತ್ತವೆ. ಹದಿನಾಲ್ಕನೆಯ ಸರದಿಯಲ್ಲಿ ಮೂರು ಲಿಂಗಗಳೂ ಎಂಭತ್ತು ಮನೆಯ ಭದ್ರಗಳೂ ಬರುತ್ತವೆ. ಕೊನೆಗೆ ಹದಿನೈದನೆಯದರಲ್ಲಿ ಸರ್ವತೋಭದ್ರವನ್ನು ರಚಿಸಬೇಕು.

೧೩೮. ಈ ಸರ್ವತೋಭದ್ರದಲ್ಲಿ ಕೋಣದಲ್ಲಿ ಮೂರು ಮೂರು ಮನೆಗಳ ಇಂದುವನ್ನು ರಚಿಸಬೇಕು. ಆರು ಮನೆಗಳ ಸರಪಣಿಯನ್ನು ರಚಿಸಬೇಕು. ಹದಿಮೂರು ಮನೆಗೆ ವಲ್ಲಿಯು ಬರುತ್ತದೆ. ಇಪ್ಪತ್ತೈದು ಮನೆಗಳ ಪರಿಮಾಣದ ವಾಪಿಯು ಏರ್ಪಡುತ್ತದೆ.

೧೩೯. ಉದ್ದುದ್ದವಾಗಿ ಹದಿನಾರು ಅಡ್ಡಡ್ಡಲಾಗಿ ಹದಿನಾರು ಮನೆಗಳ ಭದ್ರವು ರಚಿತವಾಗುತ್ತದೆ. ಕೊನೆಯಲ್ಲಿ ಪರಿಧಿಗಳು ಬರುತ್ತವೆ. ಅದರೊಳಗೆ ಅಡ್ಡವಾಗಿ ಐದು ಉದ್ದವಾಗಿ ಐದು ಮನೆಗಳ ಚಚ್ಚೌಕಕ್ಕೆ ಪದ್ಮವು ಬರುತ್ತದೆ. ಈ ರೀತಿಯಲ್ಲಿ ಮಾಡಬೇಕು.

೧೪೦. ಆ ಪದ್ಮವನ್ನು ಚಿತ್ರವಿಚಿತ್ರ ವರ್ಣಗಳಿಂದ ತುಂಬಬೇಕು. ಇಂದುವು ಬಿಳಿಯ ಬಣ್ಣಕ್ಕಿರಬೇಕು. ಸರಪಣಿಯು ಕಪ್ಪು ಬಣ್ಣದ್ದಾಗಿರಬೇಕು. ವಾಪಿಗಳೂ ಕೂಡ ಬಿಳಿಯ ಬಣ್ಣಕ್ಕಿದ್ದು ಲಿಂಗವು ಕಪ್ಪು ಬಣ್ಣಕ್ಕಿರಬೇಕು. ಭದ್ರವು ಕೆಂಪುಬಣ್ಣಕ್ಕಿರಬೇಕು. ಈ ರೀತಿಯಾಗಿ ಬಣ್ಣಗಳನ್ನು ತುಂಬಬೇಕು.

ನೀಲಾ ವಲ್ಲೀಶ್ವರಸ್ಕಂಧಕೋಷ್ಠಾಶ್ಚಿತ್ರಾ ಯಥಾರುಚಿ ।
ಯತ್ರ ಯತ್ರ ಪದಾನೀಹ ಶೇಷಭೂತಾನಿ ತಾನಿ ತು ॥ ೧೪೧ ॥

ಯಥಾಯೋಗ್ಯಂ ಧಿಯಾ ತತ್ರ ಶೃಖಂಲಾರ್ಥೇ ನಿಯೋಜಯೇತ್ ।
ಶುಕ್ಲರಕ್ತಕೃಷ್ಣವರ್ಣಾ ಹ್ಯಂತೇ ಪರಿಧಯಸ್ತ್ರಯಃ ॥ ೧೪೨ ॥

ವಾ ಪೂರ್ವಪೀತಪರಿಧಿಂ ದತ್ವಾ ದೇಯಾಸ್ತ್ರಯಾಸ್ತತಃ ।
ಏತೇಷಾಂ ಪರಿಧೀನಾಂ ವೈ ಪದಾನ್ಯಷ್ಟಾಧಿಕಾನಿ ಹಿ ॥ ೧೪೩ ॥

ನೋಕ್ತಾನಿ ಪೂರ್ವಸಂಖ್ಯಾಯಾಂ ಜ್ಞಾತ್ವೇತ್ಥಂ ವೃದ್ಧಿಮಾಚರೇತ್ ।
ಅಗ್ರೇ ಹ್ಯೇವಂ ಹಿ ಬೋದ್ಧವ್ಯಂ ಪರಿಧೀನಾಂ ಚತುಷ್ಟಯೇ ॥ ೧೪೪ ॥

೨೪೧-೨೪೨ ವಲ್ಲಿಯು ನೀಲ್ಲಿಯ ಬಣ್ಣಕ್ಕಿರಬೇಕು. ಲಿಂಗದ ಕತ್ತಿನ ಹತ್ತಿರವಿರುವ ಮೂಲೆಗಳನ್ನು ಇಷ್ಟವಾದ ಬಣ್ಣಗಳಿಂದ ತುಂಬಿ ಚಿತ್ರವರ್ಣವನ್ನುಳ್ಳದ್ದನ್ನಾಗಿ ಮಾಡಬೇಕು. ಮತ್ತೆ ಎಲ್ಲೆಲ್ಲಿ ಮನೆಗಳು ಉಳಿದಿವೆಯೋ ಅವನ್ನು ಅಲ್ಲಲ್ಲಿಗೆ ಅನುಕೂಲವಾಗಿರುವಂತೆ ಬುದ್ಧಿವಂತಿಕೆಯಿಂದ ಸರಪಣಿಗೆ ಉಪಯೋಗಿಸಿಕೊಳ್ಳಬೇಕು. ಕಡೆಯಲ್ಲಿ ಬಿಳಿಯ, ಕೆಂಪಿನ ಕಪ್ಪು ಬಣ್ಣಗಳುಳ್ಳ ಮೂರು ಪರಿಧಿಗಳನ್ನು ರಚಿಸಬೇಕು.

೧೪೩. ಹಾಗಾಗದಿದ್ದರೆ ಮೊದಲನೆಯ ಪರಿಧಿಯನ್ನು ಹಸರು ವರ್ಣದಿಂದ ಬರೆದು ಅನಂತರ ಮೇಲೆ ಹೇಳಿದ ರೀತಿಯಲ್ಲಿ ಮೂರು ಪರಿಧಿಗಳನ್ನು ರಚಿಸಬೇಕು. ಈ ಪರಿಧಿಗಳು ಹಿಂದಿನ ಪರಿಧಿಗಳಿಗಿಂತಲೂ ಎಂಟು ಮನೆಗಳನ್ನು ಹೆಚ್ಚಾಗಿ ಹೊಂದಿರುತ್ತವೆ.

೧೪೪. ಹಿಂದೆ ಈ ಪರಿಧಿಗಳಿಗೆ ಸಂಖ್ಯೆಯನ್ನೇ ಹೇಳಲಿಲ್ಲ. ಆದರೂ ಅಲ್ಲಿನ ಸನ್ನಿವೇಶವನ್ನು ನೋಡಿಕೊಂಡು ಆದಕ್ಕೆ ತಕ್ಕಂತೆ ಹೆಚ್ಚಿಸಿಕೊಳ್ಳಬೇಕು. ಮುಂದೆಯೂ ಕೂಡ ಈ ರೀತಿಯಲ್ಲಿ ನಾಲ್ಕು ಪರಿಧಿಗಳನ್ನು ಹೇಳುತ್ತೇವೆ. ಅಲ್ಲಿಯೂ ಹೀಗೆಂದೇ ತಿಳಿದುಕೊಳ್ಳಬೇಕು.

ಏತದಷ್ಟೋತ್ತರದಶಶತಂ ಲಿಂಗೋದ್ಭವಂ ಸ್ಮೃತಂ ।
ಏಕಸ್ತ್ವಯಂ ಪ್ರಕಾರೋ ಹಿ ಪ್ರಕಾರಾಂತರಮುಚ್ಯತೇ ॥ ೧೪೫ ॥
ದ್ವೇಶತೇ ಸಪ್ತಪಂಚಾಶದ್ರೇಖಾಃ ಪೂರ್ವೋತ್ತರಾಃ ಸ್ಮೃತಾ ।
ಪೀತಾ ಪರಿಧಯಃ ಕಾರ್ಯಾಷ್ಷಟ್ಪದಾಂತೇತ್ರ ಸರ್ವತಃ ॥ ೧೪೬ ॥
ಸಪ್ತೇಂದುಸಂಖ್ಯಾ ರಚಯೇಲ್ಲಿಂಗಾನಾಂ ಯೋಜಯೇದ್ಧಿಯಾ ।
ಸರ್ವತಸ್ತನ್ಮಿತಾ ಚಾದ್ಯಾ ನವನೇತ್ರಮಿತಾ ಪರಾ ॥ ೧೪೭ ॥
ಸಪ್ತಾಕ್ಷಿಸಂಮಿತಾ ತ್ವನ್ಯಾ ವಕ್ಷ್ಯಮಾಣಾನಿ ಧಾರಯ ।
ಬಾಣಾಕ್ಷ್ಯಗ್ನಿನಯನಾ ಚ ನೇತ್ರನೇತ್ರಾಥ ವಿಂಶತಿಃ ॥ ೧೪೮ ॥
ಗಜೇಂದುಗಿರಿಚಂದ್ರಾ ಚ ಬಾಣೇಂದುಹುತಭುಕ್ಶಶೀ ।
ರುದ್ರಾ ದಶಾನ್ಯಾಷ್ಟಮಿತಾ ಷಟ್ಚತ್ವಾರಿತ್ರಿಚಂದ್ರಮಾಃ ॥ ೧೪೯ ॥
ಪ್ರತಿಪಂಕ್ತಿಮೇಕವಾಪೀ ಲಿಂಗೇಭ್ಯಸ್ತ್ವಧಿಕಾ ಭವೇತ್ ।
ಚತುರ್ವಿಂಶತ್ಪದಂ ಲಿಂಗಂ ವಾಪೀ ವಸ್ವಿಂದುಪಾದಿಕಾ ॥ ೧೫೦ ॥

---

೧೪೫. ಇದೇನೇ ಸಾವಿರದ ಎಂಟು ಲಿಂಗತೋಭದ್ರವು ಎಂದು ತಿಳಿಯಬೇಕು. ಈ ಭದ್ರವು ಒಂದು ಪ್ರಕಾರವಾಯಿತು. ಬೇರೆಯ ಪ್ರಕಾರವನ್ನು ಹೇಳುತ್ತೇನೆ.

೧೪೬-೧೫೦. ಅಡ್ಡಡ್ಡವಾಗಿಯೂ ಉದ್ದುದ್ದವಾಗಿಯೂ ಇನ್ನೂರ ಐವತ್ತೇಳು ರೇಖೆಗಳನ್ನು ಎಳೆಯಬೇಕು. ಆರುಮನೆಗಳಾದಮೇಲೆ ಹಸರು ಬಣ್ಣದ ಪರಿಧಿಗಳನ್ನು ಬರೆಯಬೇಕು. ಇದರಲ್ಲಿ ಸಾಧಾರಣವಾಗಿ ಎಲ್ಲೆಡೆಯಲ್ಲಿಯೂ ಹದಿನೇಳು ಪರಿಧಿಗಳು ಬರುತ್ತವೆ. ಮೊದಲನೆಯ ಪರಿಧಿಗಳಲ್ಲಿ ಮೊದಲುಮಾಡಿಕೊಂಡು ಇಪ್ಪತ್ತೊಂಭತ್ತು, ಇಪ್ಪತ್ತೇಳು, ಇಪ್ಪತ್ತೈದು, ಇಪ್ಪತ್ತಮೂರು, ಇಪ್ಪತ್ತೆರಡು, ಹದಿನೆಂಟು, ಹದಿನೇಳು, ಹದಿನೈದು, ಹದಿಮೂರು, ಹನ್ನೊಂದು, ಹತ್ತು, ಎಂಟು, ಆರು, ನಾಲ್ಕು, ಮೂರು, ಒಂದು, ಈ ರೀತಿಯಾಗಿ ಹದಿನಾರು ಸಾಲುಗಳಲ್ಲಿ ಲಿಂಗಗಳು ಬರುತ್ತವೆ. ಪ್ರತಿಯೊಂದು ಪಂಕ್ತಿಯಲ್ಲಿಯೂ ಎಷ್ಟೆಷ್ಟು ಲಿಂಗಗಳು ಬರುತ್ತವೆಯೋ ಆ ಲಿಂಗಗಳಿಗಿಂತಲೂ ಒಂದೊಂದು ವಾಪಿಯು ಹದಿನೆಂಟು ಮನೆಗಳಲ್ಲಿಯೂ ಹೆಚ್ಚಾಗಿ ರಚಿತವಾಗುತ್ತದೆ.

ಭದ್ರಸಂಖ್ಯಾ ಕ್ರಮೇಣೈವ ಜಾನೀಯಾದ್ವಕ್ಷ್ಯಮಾಣತಃ ।
ಪೂರ್ವಪಂಕ್ತೌ ಚ ಪಂಚಮ್ಯಾಂ ನವಮ್ಯಾಂ ಹಿ ತಥೈವ ಚ ॥ ೧೫೧ ॥

ತ್ರಯೋದಶ ಸಪ್ತದಶ್ಯೋರ್ಭದ್ರಂ ವಿಂಶಪದೈಃ ಸ್ಮೃತಂ ।
ದ್ವಿತೀಯಾಯಾಂ ಚ ಷಷ್ಠ್ಯಾಂ ಚ ದಶಮ್ಯಾಂ ಚ ತನೌ ತಥಾ ॥ ೧೫೨ ॥

ಚತುರ್ದಶ್ಯಾಂ ಸ್ಮೃತಂ ಭದ್ರಂ ಪಂಚವಿಂಶಪದೈಃ ಸ್ಮೃತಂ ।
ತೃತೀಯಾಯಾಂ ಚ ಸಪ್ತಮ್ಯಾಮೇಕಾದಶ್ಯಾಂ ತಥೈವ ಚ ॥ ೧೫೩ ॥

ಪಂಚದಶ್ಯಾಂ ಹಿ ಪಂಕ್ತೌ ಚಭದ್ರಂ ತ್ರಿಂಶಪದಾತ್ಮಕಂ ।
ಷಡ್ವಿಂಶದ್ಭಿಃ ಪದೈಃ ಭದ್ರಂ ಚತುರ್ಥ್ಯಾಂ ಚ ತತಃ ಸ್ಮೃತಂ ॥ ೧೫೪ ॥

ವಸ್ವರ್ಕಷೋಡಶೇಷ್ವೇವ ಭದ್ರಂ ಷೋಡಶಪಾದಜಂ ।
ಸರ್ವಕೋಣೇಷು ತ್ರಿಪದಶ್ಚಂದ್ರಶ್ಶೃಂಖಲಿಕಾ ಪದೈಃ ॥ ೧೫೫ ॥

೧೫೦-೧೫೪. ಭದ್ರಸಂಖ್ಯೆಗಳನ್ನು ಮುಂದೆ ಹೇಳುವಂತೆ ತಿಳಿದುಕೊಳ್ಳಬೇಕು. ಒಂದನೆಯದು, ಐದನೆಯದು, ಒಂಭತ್ತನೆಯದು, ಹದಿಮೂರನೆಯದು, ಹದಿನೇಳನೆಯದು, ಆದ ಸಾಲುಗಳಲ್ಲಿ ಇಪ್ಪತ್ತು ಮನೆಗಳ ಭದ್ರವು ಏರ್ಪಡುತ್ತದೆ. ಎರಡು, ಆರು, ಹತ್ತು, ಹದಿನಾಲ್ಕು, ಈ ಸಾಲಗಳಲ್ಲಿ ಇಪ್ಪತ್ತೈದು ಮನೆಗಳ ಭದ್ರವು ಏರ್ಪಡುತ್ತದೆ. ಮೂರು, ಏಳು, ಹನ್ನೊಂದು, ಹದಿನೈದು, ಈ ಪಂಕ್ತಿಯಲ್ಲಿ ಭದ್ರವು ಮೂವತ್ತು ಮನೆಗಳಿಂದ ಏರ್ಪಡುತ್ತದೆ. ನಾಲ್ಕನೆಯ ಸಾಲಿನಲ್ಲಿ ಇಪ್ಪತ್ತಾರು ಮನೆಗಳ ಒಂದು ಹೆಚ್ಚು ಭದ್ರವೂ ಏರ್ಪಡುತ್ತದೆ.

೧೫೫-೧೫೭. ಎಂಟು, ಹನ್ನೆರಡು, ಹದಿನಾರು, ಸಂಖ್ಯೆಯ ಸಾಲುಗಳಲ್ಲಿ ಹದಿನಾರು ಮನೆಗಳ ಒಂದೊಂದು ಭದ್ರವೂ ಹೆಚ್ಚಾಗಿ ಏರ್ಪಡುತ್ತದೆ. ಇವುಗಳ ಎಲ್ಲಾ ಕೋಣಗಳಲ್ಲಿಯೂ ಮೂರು ಮನೆಗಳಿಂದ ಇಂದುವು ಉತ್ಪನ್ನವಾಗುತ್ತದೆ. ಐದು ಮನೆಗಳ ಶೃಂಖಲೆಯೂ ಹುಟ್ಟುತ್ತದೆ. ಹನ್ನೊಂದು ಮನೆಗಳ ಲತೆಯೂ ಬರುತ್ತದೆ. ಇವುಗಳ ಮಧ್ಯದಲ್ಲಿ ಸರ್ವತೋಭದ್ರವು ಬರುತ್ತದೆ. ಇಪ್ಪತ್ತನಾಲ್ಕು

ಪಂಚಭಿರೇಕಾದಶಭಿರ್ಲತಾ ಕಾರ್ಯಾ ತತೋಂತರೇ ।
ಸರ್ವತೋಭದ್ರಕಂ ರಮ್ಯಂ ಚತುರ್ವಿಂಶೈಸ್ತು ವಾಪಿಕಾ ॥ ೧೫೬ ॥

ಭದ್ರಂ ನವಪದಂ ಸರ್ವಪಾರ್ಶ್ವೇಷ್ವೇವಂ ಪ್ರಕಲ್ಪಯೇತ್ ।
ಪರಿಧ್ಯಂತರ್ಭವೇತ್ಪದ್ಮಂ ರಕ್ತಂ ಚಿತ್ರಂ ಯಥಾರುಚಿ ॥ ೧೫೭ ॥

ಕೃಷ್ಣಂ ಲಿಂಗಂ ಶೃಂಖಲಾಽಪಿ ಭದ್ರಂ ರಕ್ತಂ ಚ ವಾಪಿಕಾ ।
ಶ್ವೇತಾ ಶಶೀ ಸಿತೋ ಜ್ಞೇಯಸ್ತಥಾ ನೀಲಾ ಸ್ಮೃತಾ ಲತಾ ॥ ೧೫೮ ॥

ಶಿಷ್ಟಾನೀಹ ಪದಾನ್ಯೇವ ಭದ್ರಾದ್ಯರ್ಥಂ ನಿಯೋಜಯೇತ್ ।
ಪೀತಾಶುಕ್ಲಕೃಷ್ಣರಕ್ತಾ ಅಂತೇ ಪರಿಧಯಃ ಸ್ಮೃತಾಃ ॥ ೧೫೯ ॥

ಅಷ್ಟೋತ್ತರಸಹಸ್ರಾಖ್ಯಂ ಲಿಂಗತೋಭದ್ರಕಂ ತ್ವಿದಂ ।
ಏವಂ ವಿಕಲ್ಪತಃ ಪ್ರೋಕ್ತಾ ರಚನಾ ದ್ವಿವಿಧಾ ಮಯಾ ॥ ೧೬೦ ॥

ಮನೆಗಳ ವಾಪಿಕೆಯುಳ್ಳದ್ದು ಎಂದು ತಿಳಿ. ಕೊನೆಗಳಲ್ಲಿ ಬರುವ ಭದ್ರವು ಒಂಭತ್ತು ಮನೆಗಳ ಪ್ರಯಾಣವುಳ್ಳದ್ದು ಎಂದು ತಿಳಿಯಬೇಕು. ಈ ಪರಿಧಿಗಳ ಮಧ್ಯದಲ್ಲಿ ಪದ್ಮವು ಬರುತ್ತದೆ. ಅದು ಕೆಂಪುಬಣ್ಣದಿಂದ ಕೂಡಿದುದಾಗಿದ್ದರೂ ಸರಿಯೆ ! ಅಥವಾ ಚಿತ್ರವರ್ಣದುದಾಗಿದ್ದರೂ ಸರಿಯೆ, ಇಷ್ಟಬಂದಂತೆ ರಚಿಸಬಹುದು.

೧೫೮-೧೫೯. ಇವುಗಳಲ್ಲಿನ ಲಿಂಗಗಳು ಕಪ್ಪುವರ್ಣಕ್ಕೂ ಶೃಂಖಲೆಯೂ ಕೂಡ ಕಪ್ಪುವರ್ಣಕ್ಕೂ ಇರಬೇಕು. ಭದ್ರವು ಕೆಂಪುಬಣ್ಣಕ್ಕಿರಬೇಕು. ವಾಪಿಕೆಯು ಬಿಳಿಯ ಬಣ್ಣಕಿರಬೇಕು. ಇಂದುವು ಬಿಳಿಯದಾಗಿರಬೇಕು. ಲತೆಯು ಕಪ್ಪಿನ ಬಣ್ಣಕ್ಕೆ ಇರಬೇಕು. ಇವುಗಳಲ್ಲಿ ಹೆಚ್ಚಾಗಿ ಉಳಿದಿರುವ ಮನೆಗಳನ್ನು ಭದ್ರಕ್ಕಾಗಲಿ ಶೃಂಖಲೆಗಾಗಲಿ ಮತ್ತೆ ಯಾವುದಕ್ಕೆ ಆಗಲಿ ಅನುಕೂಲಿಸಿದಂತೆ ಅದಕ್ಕೆ ಸೇರಿಸಿಕೊಳ್ಳಬಹುದು. ಕೊನೆಯಲ್ಲಿಯೂ ಕೂಡ ಹಸುರು, ಬಿಳುಪು, ಕೆಂಪು, ಕಪ್ಪು, ಕೆಂಪುಬಣ್ಣದ ಪರಿಧಿಗಳು ಕ್ರಮವಾಗಿ ಬರಬೇಕು.

೧೬೦. ಇದೂ ಕೂಡ ಅಷ್ಟೋತ್ತರ ಸಹಸ್ರವೆಂಬ ಹೆಸರುಳ್ಳ ಲಿಂಗತೋಭದ್ರವು. ಈ ರೀತಿಯಾಗಿ ಎರಡು ಬಗೆಗಳ ರಚನೆಯನ್ನು ವಿಕಲ್ಪಿಸಿ ಹೇಳಿದ್ದೇನೆ.

ಅಥಾನ್ಯತ್ತೇ ಪ್ರವಕ್ಷ್ಯಾಮಿ ಪ್ರಕಾರಾಂತರಮುತ್ತಮಂ ।
ಸೈಕವಿಂಶಚ್ಛತೈರ್ಲಿಂಗೈರ್ಲಿಂಗತೋಭದ್ರಮಾದರಾತ್ ॥ ೧೬೧ ॥

ಅಷ್ಟಾಷ್ಟ ರೇಖಾಃ ಪ್ರಾಗ್ಯಾಮ್ಯಾಃ ಪಶ್ಚಿಮೋತ್ತರದಿಕ್ಷು ಚ ।
ಸಪ್ತಾಶೀತಿಪದೇಷ್ವೇವ ಲಿಂಗಾನಾಂ ಪಂಚ ಪಂಕ್ತಯಃ ॥ ೧೬೨ ॥

ತಾಸು ಪ್ರಾಥಮಿಕಾಯಾಶ್ಚ ವಿಸ್ತಾರಃ ಕಥ್ಯತೇಽಧುನಾ ।
ಪೃಥಕ್ಕೋಣೇಷು ತ್ರಿಪದೈಃ ಶಶೀ ಶ್ವೇತಸ್ತದಗ್ರತಃ ॥ ೧೬೩ ॥

ಶೃಂಖಲಾ ಕೃಷ್ಣವರ್ಣಾ ಚ ಪದೈಃ ಪಂಚಭಿರುತ್ತಮಾ ।
ತಸ್ಯಾಃ ಪಾರ್ಶ್ವದ್ವಯೇ ಕಾರ್ಯೇ ವಲ್ಲ್ಯೌ ಹರಿತವರ್ಣಕೇ । ॥ ೧೬೪ ॥

ಪೃಥಗೇಕಾದಶಪದೈಸ್ತತಃ ಪೀತೇ ತು ಶೃಂಖಲೇ ।
ಷಡ್ಭಿಃ ಪದೈರುಭಯತೋಭದ್ರಂ ಷೋಡಶಪಾದಜಂ ॥ ೧೬೫ ॥

---

೧೬೧. ಇನ್ನೂ ಉತ್ತಮವಾದ ಬೇರೆಯ ರೀತಿಯನ್ನು ಹೇಳುತ್ತೇನೆ. ಆ ಲಿಂಗತೋಭದ್ರವು ಒಂದನೂರ ಇಪ್ಪತ್ತೊಂದು ಲಿಂಗಗಳುಳ್ಳದ್ದಾಗಿರುತ್ತದೆ.

೧೬೨, ಅಡ್ಡಡ್ಡವಾಗಿಯೂ ಉದ್ದುದ್ದವಾಗಿಯೂ ಎಂಭತ್ತೆಂಟು ಮನೆಗಳನ್ನು ಎಳೆಯಬೇಕು. ಈ ಎಂಭತ್ತೇಳು ಮನೆಗಳಲ್ಲಿ ಐದು ಪಂಕ್ತಿಗಳಲ್ಲಿ ಲಿಂಗಗಳು ಬರುತ್ತವೆ.

೧೬೩-೧೬೪. ಅವುಗಳಲ್ಲಿ ಮೊದಲನೆಯ ಪಂಕ್ತಿಯಲ್ಲಿನ ವಿಸ್ತಾರವನ್ನು ಹೇಳುತ್ತೇನೆ. ಕೋಣಗಳಲ್ಲಿ ಮೂರುಮನೆಗಳ ಇಂದುವು ಬರುತ್ತದೆ. ಅದು ಬಳಿಯ ಬಣ್ಣದ್ದು. ಅದರಮುಂದೆ ಶೃಂಖಲೆಯು ಬರುತ್ತದೆ. ಅದು ಆರುಮನೆಗಳ ಪ್ರಮಾಣದ್ದು. ಕಪ್ಪು ಬಣ್ಣದ್ದಾಗಿರಬೇಕು. ಅದರ ಎರಡು ಪರ್ಶ್ವಗಳಲ್ಲಿಯೂ ಎರಡು ವಲ್ಲಿಗಳನ್ನು ಮಾಡಬೇಕು. ಅವು ಅರಿಶಿನ ಬಣ್ಣಕ್ಕಿರಬೇಕು.

೧೬೫. ಅವು ಒಂದೊಂದೂ ಹನ್ನೊಂದು ಮನೆಗಳುಳ್ಳದ್ದಾಗಿರಬೇಕು. ಅನಂತರ ಎರಡು ಶೃಂಖಲೆಗಳನ್ನು ಮಾಡಬೇಕು. ಅವು ಹಸುರುಬಣ್ಣಕ್ಕಿರಬೇಕು. ಮತ್ತು ಆರುಮನೆಯ ಪ್ರಮಾಣದಲ್ಲಿರಬೇಕು. ಇವುಗಳ ಮಧ್ಯದಲ್ಲಿ ಬರುವ ಭದ್ರವು ಹದಿನಾರು ಮನೆಗಳಿಂದ ಹುಟ್ಟುತ್ತದೆ. ಅದು ಕೆಂಪುಬಣ್ಣಕ್ಕಿರಬೇಕು.

ಆರಕ್ತಂ ಚ ಸಿತಾ ವಾಪ್ಯೋ ದಶಾಷ್ಟಾದಶಪಾದಜಾಃ ।
ಕೃಷ್ಣಾನ್ಯಷ್ಟಾದಶಪದೈರ್ನವಲಿಂಗಾನಿ ಕಾರಯೇತ್ ॥ ೧೬೬ ॥

ಮಸ್ತಕೋಪರಿ ಭದ್ರಸ್ಯ ಲೋಹಿತೇ ಶೃಂಖಲೇ ಶುಭೇ ।
ದ್ವಾಭ್ಯಾಂ ಪದಾಭ್ಯಾಂ ಚ ಪೃಥಕ್ ಮಧ್ಯೇ ಹರಿತಶೃಂಖಲಾ ॥ ೧೬೭ ॥

ರಚಿತಾ ತ್ರಿಪದಾ ರಮ್ಯಾ ವಾಪೀನಾಂ ಮಸ್ತಕೋಪರಿ ।
ಆರಕ್ತೇ ದ್ವೇ ಪದೇ ಕಾರ್ಯೇ ಚೈಕಂ ಹರಿತಮುತ್ತಮಂ ॥ ೧೬೮ ॥

ಉಭಯೋಃ ಪಾರ್ಶ್ವಯೋರ್ಲಿಂಗಮಸ್ತಕಸ್ಯ ಸಿತೇ ಪದೇ ।
ಏವಂ ಸರ್ವತ್ರ ಬೋದ್ಧವ್ಯಂ ಪರಿಧಿಃ ಪೀತವರ್ಣಕಃ ॥ ೧೬೯ ॥

ಸಪ್ತಾಶೀತಿಪದೈಶ್ಚೇಯಂ ಸಮಾಪ್ತಾ ಪ್ರಥಮಾ ತತಃ ।
ಪ್ರೋಚ್ಯತೇಽಗ್ರೇ ದ್ವಿತೀಯಾ ತು ಪಂಕ್ತಿಸ್ತ್ರಿಸಪ್ತಪಾದಜಾ ॥ ೧೭೦ ॥

---

೧೬೬. ಇಲ್ಲಿ ಹದಿನೆಂಟು ಮನೆಗಳಿಂದ ಉತ್ಪನ್ನವಾದ ಹತ್ತು ವಾಪಿಕೆಗಳು ಬರುತ್ತವೆ. ಇವು ಬಿಳಿಯ ಬಣ್ಣಕ್ಕಿರಬೇಕು. ಹದಿನೆಂಟು ಮನೆಗಳಿಂದ ಉತ್ಪನ್ನವಾದ ಒಂಭತ್ತು ಲಿಂಗಗಳು ಬರುತ್ತವೆ. ಇವು ಕಪ್ಪುಬಣ್ಣಕ್ಕಿರಬೇಕು.

೧೬೭. ಭದ್ರದಮೇಲುಗಡೆಯಲ್ಲಿ ಕೆಂಪುಬಣ್ಣದ ಎರಡು ಶೃಂಖಲೆಗಳು ಬರುತ್ತವೆ. ಅದು ಎರಡೆರಡು ಮನೆಯದಾಗಿರುತ್ತದೆ. ಅಲ್ಲದೆ ಭದ್ರದ ಮಧ್ಯದಲ್ಲಿಯೂ ಕೂಡ ಒಂದು ಕೆಂಪುಬಣ್ಣದ ಶೃಂಖಲೆಯನ್ನು ರಚಿಸಬೇಕು.

೧೬೮. ಈ ವಾಪಿಯು ಮೂರು ಮನೆಯದಾಗಿರುತ್ತದೆ. ಈ ವಾಪಿಯ ಮೇಲೆ ಇರುವ ಮೂರು ಮನೆಗಳಲ್ಲಿ ಎರಡು ಮನೆಗಳನ್ನು ಕೆಂಪುಬಣ್ಣದಿಂದಲೂ ಒಂದನ್ನು ಹಸುರು ಬಣ್ಣದಿಂದಲೂ ತುಂಬಬೇಕು.

೧೬೯. ಲಿಂಗದ ತಲೆಯ ಬಳಿ ಎರಡು ಪಕ್ಕಗಳಲ್ಲಿಯೂ ಎರಡೆರಡು ಮನೆಗಳನ್ನು ಬಿಳಿಯ ಬಣ್ಣವನ್ನು ತುಂಬಿ ರಚಿಸಬೇಕು. ಇದೇ ರೀತಿಯಲ್ಲಿ ಮುಂದೆಯೂ ತಿಳಿಯಬೇಕು. ಪರಿಧಿಯು ಹಸುರುಬಣ್ಣದ್ದಾಗಿರಬೇಕು.

೧೭೦. ಮೊದಲನೆಯ ರಚನೆಯು ಎಂಭತ್ತೇಳು ಪದಗಳುಳ್ಳದ್ದು ಅದನ್ನು ಈ ರೀತಿಯಲ್ಲಿ ಹೇಳಿದ್ದೇನೆ. ಅನಂತರ ಎರಡನೆಯ ಪಂಕ್ತಿಯನ್ನು ಹೇಳುತ್ತೇನೆ. ಇದು ಇಪ್ಪತ್ತಮೂರು ಮನೆಗಳಿಂದ ಹುಟ್ಟತಕ್ಕದ್ದು.

ಶಶೀ ಚ ಶೃಂಖಲಾ ವಲ್ಲ್ಯೌ ಶೃಂಖಲೇ ದ್ವೇಽತ್ರ ಪೂರ್ವವತ್ ।
ಭದ್ರಂ ವಿಂಶಪದೈಃ ಜ್ಞೇಯಂ ನವ ವಾಪ್ಯಸ್ತ್ರಯೋದಶೈಃ ॥ ೧೭೧ ॥

ಪದೈರಷ್ಟಾತ್ರ ಲಿಂಗಾನಿ ಭದ್ರಯೋರ್ಮಸ್ತಕೋಪರಿ ।
ದ್ವಾಭ್ಯಾಂ ಕಾರ್ಯೇ ಶೃಂಖಲೇಽತ್ರ ಲೋಹಿತೇ ಹ್ಯುತ್ತರೇ ತಯೋಃ ॥

ದ್ವಿಪದಾ ಶೃಂಖಲಾ ಪೀತಾ ಹರಿತಾ ತ್ರಿಪದಾ ಸ್ಮೃತಾ ।
ಆರಕ್ತಂ ಚ ಪದಂ ಕಾರ್ಯಂ ವಾಪೀನಾಂ ಮಸ್ತಕೋಪರಿ ॥ ೧೭೩ ॥

ಪೂರ್ವವತ್ಸಕಲಂ ಜ್ಞೇಯಮೇಕಷಷ್ಟಿಪದೈಶ್ಶುಭಃ ।
ಪರಿಧಿಃ ಪೀತವರ್ಣಶ್ಚ ಜಾತಾ ಪಂಕ್ತಿರ್ದ್ವಿತೀಯಕಾ ॥ ೧೭೪ ॥

ಊನೈಕೇನ ಪದಾ ಷಷ್ಟಿಪದೈಃ ಪಙ್ಕ್ತಿಸ್ತೃತೀಯಕಾ ।
ಭದ್ರಂ ಷಿಡ್ಭಿಃ ಪದೈಃ ಪ್ರೋಕ್ತಂ ಸಪ್ತಲಿಂಗಾನಿ ಕಾರಯೇತ್ ॥ ೧೭೫ ॥

೧೭೧–೧೭೨. ಚಂದ್ರ, ಶೃಂಖಲೆ, ವಲ್ಲಿಗಳು, ಮೊದಲಿನ ದರದಂತೆ, ಇಲ್ಲಿ ಶೃಂಖಲೆಯು ಎರಡೇ ಆಗಿರುತ್ತದೆ. ಇಲ್ಲಿನ ಭದ್ರವು ಇಪ್ಪತ್ತು ಮನೆಗಳಿಂದ ಹುಟ್ಟುತ್ತದೆ. ಒಂಭತ್ತು ವಾಪಿಗಳು ಬರುತ್ತವೆ. ಹದಿಮೂರು ಮನೆಗಳ ಪ್ರಮಾಣದ ಎಂಟು ಲಿಂಗಗಳು ಏರ್ಪಡುತ್ತವೆ. ಭದ್ರಗಳಮೇಲೆ ಕೆಂಪುಬಣ್ಣದಿಂದ ತುಂಬಲ್ಪಟ್ಟಿರಬೇಕು.

೧೭೩. ಆ ಭದ್ರಗಳ ಕೆಳಗಡೆಯಲ್ಲಿ ಎರಡು ಪದಗಳ ಒಂದು ಹಸುರು ಬಣ್ಣದ ಶೃಂಖಲೆಯೂ ಮೂರು ಮನೆಗಳ ಒಂದು ಅರಿಶಿನ ಬಣ್ಣದ ಶೃಂಖಲೆಯೂ ಬರುತ್ತದೆ. ವಾಪಿಗಳಮೇಲಿನ ಮನೆಗಳನ್ನು ಕೆಂಪುಬಣ್ಣದಿಂದ ತುಂಬಬೇಕು.

೧೭೪. ಈ ವಾಪಿಯಮೇಲಿನ ಮನೆಗಳು ಅರವತ್ತೊಂದು ಏರ್ಪಡುತ್ತವೆ. ಇದೇ ಪರಿಧಿಯು. ಈ ಎರಡನೆಯ ಪಂಕ್ತಿಯ ಶೃಂಖಲೆಯು ಹಸುರು ಬಣ್ಣದ್ದಾಗಿರುತ್ತದೆ.

೧೭೫. ಇನ್ನು ಮೂರನೆಯ ಪಂಕ್ತಿಯನ್ನು ಹೇಳುತ್ತೇನೆ. ಇದು ಐವತ್ತೊಂಭತ್ತು ಮನೆಗಳುಳ್ಳದಾಗಿರುತ್ತದೆ. ಆರಾರು ಮನೆಗಳ ಭದ್ರವು ಏರ್ಪಡುತ್ತದೆ. ಏಳು ಲಿಂಗಗಳು ಬರುತ್ತವೆ.

ವಸುವಾಪ್ಯಃ ಸ್ಮೃತಾಶ್ಶೇಷಂ ಪೂರ್ವವಚ್ಚ ಪ್ರಕೀರ್ತಿತಂ ।
ಸಪ್ತಚತ್ವಾರಿಂಶತ್ಪದ್ಯೈಃ ಪರಿಧಿಶ್ಚ ಪ್ರಕೀರ್ತಿತಃ ॥ ೧೭೬ ॥

ಜಾತಾ ತೃತೀಯಾ ಪಂಕ್ತಿರ್ಹಿ ಚತುರ್ಥ್ಯಥ ನಿಗದ್ಯತೇ ।
ಪಂಚಚತ್ವಾರಿಂಶತ್ಪದ್ಯೈರಿಯಂ ಪಂಕ್ತಿರುದಾಹೃತಾ ॥ ೧೭೭ ॥

ಭದ್ರಮರ್ಕಪದ್ಯೈಃ ಜ್ಞೇಯಂ ಪಂಚ ವಾಪ್ಯೋತ್ರ ಕೀರ್ತಿತಾಃ ।
ತುರ್ಯಲಿಂಗಾನಿ ಕಾರ್ಯಾಣಿ ಭದ್ರಸ್ಯ ಮಸ್ತಕೋಪರಿ ॥ ೧೭೮ ॥

ಆರಕ್ತಾ ಷಟ್ಪದಾ ವಲ್ಲೀ ಪರಿಧಿಸ್ತ್ರಿತ್ರಿಭಿಃ ಪದ್ಯೈಃ ।
ಜಾತಾ ಚತುರ್ಥಪಂಕ್ತಿರ್ಹಿ ಪಂಚಮ್ಯೇಕತ್ರಿಭಿಃ ಪದ್ಯೈಃ ॥ ೧೭೯ ॥

ಭದ್ರಂ ನವಪದ್ಯೈಃ ಜ್ಞೇಯಂ ತ್ರಿವಾಪ್ಯೋ ದ್ವೌಹರೌ ಸ್ಮೃತೌ ।
ತ್ರಿಪದಾ ಶೃಂಖಲಾ ರಕ್ತಾ ಭದ್ರಸ್ಯೋಪರಿ ಕೀರ್ತಿತಾ ॥ ೧೮೦ ॥

---

೧೭೬. ಎಂಟು ವಾಪಿಗಳು ಬರುತ್ತವೆ. ಉಳಿದುವೆಲ್ಲವನ್ನೂ ಮೇಲಿನದರಂತೆ ನೋಡಿಕೊಂಡು ರಚಿಸಿಕೊಳ್ಳಬೇಕು. ಇಲ್ಲಿ ನಾಲ್ವತ್ತೇಳು ಮನೆಯ ಪರಿಧಿಯು ಬರುತ್ತದೆ.

೧೭೭–೧೭೮. ಮೂರನೆಯ ಪಂಕ್ತಿಯನ್ನು ಹೇಳಿದ್ದಾಯಿತು. ನಾಲ್ಕನೆಯದನ್ನು ಹೇಳುತ್ತೇನೆ. ಇಲ್ಲಿ ಬರತಕ್ಕ ಮನೆಗಳು ನಾಲ್ವತ್ತೈದಾಗಿರುತ್ತವೆ. ಇಲ್ಲಿ ಹನ್ನೆರಡು ಮನೆಗಳಿಂದ ಭದ್ರವು ಏರ್ಪಡುತ್ತದೆ. ಐದು ವಾಪಿಗಳು ಬರುತ್ತವೆ. ನಾಲ್ಕು ಲಿಂಗಗಳನ್ನು ರಚಿಸಬೇಕು. ಇದು ಭದ್ರದಮೇಲು ಭಾಗದಲ್ಲಿರುತ್ತದೆ.

೧೭೯–೧೮೦. ಆರು ಮನೆಗಳ ವಲ್ಲಿಯು ಬರುತ್ತದೆ. ಮೂವತ್ತಮೂರು ಮನೆಗಳ ಪರಿಧಿಯು ಏರ್ಪಡುತ್ತದೆ. ಈ ರೀತಿಯಾಗಿ ನಾಲ್ಕನೆಯ ಪಂಕ್ತಿಯು ಮುಗಿಯಿತು. ಐದನೆಯ ಪಂಕ್ತಿಯು ಮುವತ್ತೊಂದು ಮನೆಗಳಿಂದ ಹುಟ್ಟುತ್ತದೆ. ಇದರಲ್ಲಿರುವ ಭದ್ರವು ಒಂಭತ್ತು ಮನೆಗಳದು. ಮೂರು ವಾಪಿಗಳು ಬರುತ್ತವೆ. ಎರಡು ಲಿಂಗಗಳು ಏರ್ಪಡುತ್ತವೆ. ಭದ್ರದ ಮೇಲೆ ಮೂರು ಮನೆಗಳ ಶೃಂಖಲೆಯು ಬರುತ್ತದೆ ಇದು ಕೆಂಪುಬಣ್ಣವುಳ್ಳದ್ದಾಗಿರಬೇಕು.

ಏಕೋನವಿಂಶತಿಪದಃ ಪರಿಧಿಸ್ಸಂಪ್ರಕೀರ್ತಿತಃ ।
ಜಾತೇಯಂ ಪಂಚಮಾ ಪಂಕ್ತಿಸ್ತ್ವಗ್ರೇ ಸಪ್ತದಶೈಃ ಪದೈಃ ॥ ೧೮೧ ॥

ಚತುಷ್ಕೋಣಸಮಂ ತತ್ರ ಸರ್ವತೋಭದ್ರಮಾಲಿಖೇತ್ ।
ತಸ್ಯಾಪಿ ಕ್ರಮ ಏವಾಯಂ ತ್ರಿಪದಶ್ಚ ಶಶೀ ಸಿತಃ ॥ ೧೮೨ ॥

ಕೃಷ್ಣಾಃ ಪಂಚಪದೈಃ ಕಾರ್ಯಾಃ ಶೃಂಖಲಾಸ್ಸರ್ವತಶ್ಶುಭಾಃ ।
ಪದೈರಷ್ಟಾದಶೈರ್ಲಿಂಗಂ ಪಶ್ಚಿಮೇ ತಸ್ಯ ಪಾರ್ಶ್ವಯೋಃ ॥ ೧೮೩ ॥

ತ್ರಯೋದಶಪದೈಃ ವಾಪ್ಯೌ ಭದ್ರೇ ತುರ್ಯಪದಾತ್ಮಕೇ ।
ಯಾಮ್ಯಪ್ರಾಗುತ್ತರೇಷ್ವೇವ ಮಧ್ಯೇ ತಿಸ್ರಶ್ಚ ವಾಪಿಕಾಃ ॥ ೧೮೪ ॥

ಭದ್ರಂ ನವಪದೈಃ ಕಾರ್ಯಂ ವಲ್ಲ್ಯೋ ದಶಪದಾತ್ಮಿಕಾಃ ।
ವಲ್ಲ್ಯೋಃ ಸ್ಥಾನೇ ಪಶ್ಚಿಮೇತ್ರ ಹ್ಯಾದ್ಯಂತೇ ಹರಿತೇ ಪದೇ ॥ ೧೮೫ ॥

ಮಧ್ಯೇತ್ರ ತ್ರುಟಿತಾ ವಲ್ಲೀ ಭದ್ರಂ ಯಚ್ಚ ನವಾತ್ಮಕಂ ।
ತಸ್ಯೋಪರಿ ಪದಾಭ್ಯಾಂ ಹಿ ರಕ್ತಾತ್ರ ಶೃಂಖಲಾ ಸ್ಮೃತಾ ॥ ೧೮೬ ॥

೧೮೧-೧೮೪. ಇಲ್ಲಿನ ಪರಿಧಿಯು ಹತ್ತೊಂಭತ್ತು ಮನೆಗಳಿಂದ ಹುಟ್ಟುತ್ತದೆ. ಈ ರೀತಿಯಾಗಿ ಐದನೆಯ ಪಂಕ್ತಿಯು ಮುಗಿಯಿತು. ಅದರಿಂದ ಮುಂದೆ ಹದಿನೇಳು ಮನೆಗಳ ಪ್ರಮಾಣದ ನಾಲ್ಕು ಮೂಲೆಯೂ ಸಮವಾಗಿರುವ ಒಂದು ಸರ್ವತೋಭದ್ರವನ್ನೂ ರಚಿಸಬೇಕು ಆ ಪಂಕ್ತಿಗೂ ಒಂದು ಕ್ರಮವಿರುವುದು. ಆದರಲ್ಲಿ ಮೂರು ಮನೆಗಳ ಒಂದು ಶಶಿಯು ಬರುತ್ತದೆ. ಅದು ಬಿಳಿಯ ಬಣ್ಣಕ್ಕಿರಬೇಕು. ಸುತ್ತಲೂ ಐದೈದು ಮನೆಗಳ ಶೃಂಖಲೆಗಳನ್ನೂ ಮಾಡಬೇಕು. ಇದಕ್ಕೆ ಕಪ್ಪು ಬಣ್ಣವನ್ನು ಹಾಕಬೇಕು. ಅದರಿಂದ ಮುಂದೆ ಹದಿನೆಂಟು ಮನೆಗಳಿಂದ ಲಿಂಗವು ಏರ್ಪಡುತ್ತದೆ. ಅದರ ಪಾರ್ಶ್ವಗಳಲ್ಲಿ ಹದಿಮೂರು ಹದಿಮೂರು ಮನೆಗಳ ಎರಡು ವಾಪಿಗಳು ಬರುತ್ತವೆ. ನಾಲ್ಕು ಮನೆಗಳ ಭದ್ರವು ಏರ್ಪಡುತ್ತದೆ. ಪೂರ್ವ, ದಕ್ಷಿಣ, ಉತ್ತರದಿಕ್ಕುಗಳಲ್ಲಿ ಮಾತ್ರ ಮಧ್ಯದಲ್ಲಿ ಮೂರು ವಾಪಿಗಳು ಬರುತ್ತವೆ.

೧೮೫-೧೮೬. ಇಲ್ಲಿ ಭದ್ರವನ್ನು ಒಂಭತ್ತು ಮನೆಗಳಿಂದ ಮಾಡಬೇಕು. ಹತ್ತು ಮನೆಗಳ ವಲ್ಲಿಗಳು ಬರುತ್ತವೆ. ಈ ವಲ್ಲಿಗಳಲ್ಲಿ ಆದಿಗೂ ಅಂತ್ಯಕ್ಕೂ ಹಸರು ಬಣ್ಣವನ್ನು ಹಾಕಿ ಮಧ್ಯಕ್ಕೆ ಬಣ್ಣ ಹಾಕದೆ ಹಾಗೆಯೇ ಬಿಟ್ಟಿರಬೇಕು. ಇದಕ್ಕೆ ತ್ರುಟಿತವಲ್ಲಿಯೆಂದು ಹೆಸರು. ಈ ನವಪದಾತ್ಮಕ ಭದ್ರದ ಮೇಲೆ ಎರಡು ಮನೆಗಳ ಒಂದು ಶೃಂಖಲೆಯನ್ನೂ ರಚಿಸಬೇಕು.

ವಾಪಿನಾಂ ಮಸ್ತಕೇ ಕಾರ್ಯಂ ಪದಂ ರಕ್ತಂ ಚ ಪಾರ್ಶ್ವಯೋಃ ।
ಸಿತೇ ದ್ವೇ ದ್ವೇ ಪದೇ ಕಾರ್ಯೇ ಪರಿಧಿಃ ಪಂಚಪಾದಜಃ ॥ ೧೮೭ ॥

ರಕ್ತಮಷ್ಟದಳಂ ಮಧ್ಯೇ ಕಾರ್ಯಂ ನವಪದಾತ್ಮಕಂ ।
ಕರ್ಣಿಕಾ ಪೀತವರ್ಣಾ ಚ ಬಾಹ್ಯಾಃ ಪರಿಧಯಃ ಕ್ರಮಾತ್ ॥ ೧೮೮ ॥

ಪೀತಶುಕ್ಲರಕ್ತಕೃಷ್ಣಾಸ್ಸ್ಯೈಕವಿಂಶಶತಾತ್ಮಕಂ ।
ಕಥಿತಂ ಲಿಂಗತೋಭದ್ರಂ ಸರ್ವೇಷಾಂ ಮುಕುಟೋಪಮಂ ॥ ೧೮೯ ॥

ಪ್ರಕಾರಾಂತರಮನ್ಯಚ್ಚ ಶ್ರುಣು ಶಿಷ್ಯ ಬ್ರವೀಮಿ ತೇ ।
ತಿರ್ಯಗೂರ್ಧ್ವಂ ಕೃತಾ ರೇಖಾಸ್ತ್ರ್ಯಧಿಕಾಶ್ಯತಸಂಖ್ಯಕಾಃ ॥ ೧೯೦ ॥

ಶತಂ ದ್ವ್ಯಧಿಕಕೋಷ್ಠೇಷು ರಚಯೇಲ್ಲಿಂಗಪಂಕ್ತಯಃ ।
ನವಾಷ್ಟರಸಚತ್ವಾರಿ ದ್ವ್ಯೇಕಸಂಖ್ಯಾಶ್ಚತುರ್ದಿಶಂ ॥ ೧೯೧ ॥

---

೧೮೭. ವಾಪಿಗಳ ಮೇಲೆ ಇರುವ ಮನೆಗಳನ್ನು ರಕ್ತ ವರ್ಣದಿಂದ ತುಂಬಬೇಕು. ಪಾರ್ಶ್ವದ ಮನೆಗಳನ್ನು ಬಿಳಿಯ ಬಣ್ಣದಿಂದ ತುಂಬಬೇಕು. ಇಲ್ಲಿ ಐದು ಮನೆಗಳ ಪರಿಧಿಯು ಬರುತ್ತದೆ.

೧೮೮-೧೮೯. ಆದರ ಮುಂದೆ ಮಧ್ಯ ಭಾಗದಲ್ಲಿ ಒಂಭತ್ತು ಮನೆಗಳ ಒಂದು ಪದ್ಮವು ಬರುತ್ತದೆ. ಅದು ರಕ್ತ ವರ್ಣಕ್ಕಿರಬೇಕು. ಕರ್ಣಿಕೆಯು ಅರಿಸಿನ ಬಣ್ಣಕ್ಕಿರಬೇಕು. ಹೊರಗಿನ ಪರಿಧಿಗಳು ಅರಿಸಿನ, ಬೆಳುಪು, ಕೆಂಪು, ಕಪ್ಪು ಬಣ್ಣಗಳಿಗಿರಬೇಕು. ಈ ರೀತಿಯಾಗಿ ಒಂದನೂರ ಇಪ್ಪತ್ತೊಂದು ಎಂದರೆ ಏಕವಿಂಶಶತಾತ್ಮಕಲಿಂಗತೋ ಭದ್ರವನ್ನು ಹೇಳಿದೆನು. ಇದು ಎಲ್ಲಕ್ಕೂ ಉತ್ತಮವಾದುದು.

೧೯೦. ಎಲೈ ಶಿಷ್ಯನೇ! ಬೇರೆ ಒಂದು ರೀತಿಯನ್ನು ಹೇಳುತ್ತೇನೆ ಕೇಳು. ಉದ್ದುದ್ದವಾಗಿಯೂ ಅಡ್ಡಡ್ಡಲಾಗಿಯೂ ಮುನ್ನೂರ ಮೂರು ಗೀಟುಗಳನ್ನು ಎಳೆಯಬೇಕು.

೧೯೧. ಇನ್ನೂರ ಎರಡು ಮನೆಗಳ ಕೋಷ್ಠಗಳಲ್ಲಿ ಲಿಂಗಗಳನ್ನು ರಚಿಸಬೇಕು. ಈ ಲಿಂಗಗಳೇರ್ಪಡುವ ಪಂಕ್ತಿಗಳು ಮೊದಲನೆಯದರಲ್ಲಿ ಒಂಭತ್ತು ಲಿಂಗಗಳೂ ಎರಡನೆಯ ಪಂಕ್ತಿಯಲ್ಲಿ ಎಂಟು ಲಿಂಗಗಳೂ ಮೂರನೆಯದರಲ್ಲಿ ಆರು ಲಿಂಗಗಳೂ ನಾಲ್ಕನೆಯದರಲ್ಲಿ ನಾಲ್ಕು ಲಿಂಗಗಳೂ ಐದನೆಯದರಲ್ಲಿ ಎರಡು ಲಿಂಗಗಳೂ ಆರನೆಜುದರಲ್ಲಿ ಒಂದು ಲಿಂಗವೂ ಬರುತ್ತವೆ. ಈ ರೀತಿಯಾಗಿ ನಾಲ್ಕು ಕಡೆಗಳಲ್ಲಿಯೂ ಮೂವತ್ತು ಮೂವತ್ತು ಲಿಂಗಗಳು ಬರುತ್ತವೆ.

ಲಿಂಗಸಂಖ್ಯಾಧಿಕಾ ವಾಽಪೀ ಪ್ರತಿಪಂಕ್ತಿ ಭವೇದಿಹ ।
ಷಟ್ಸು ಪರಿಧಯಸ್ತತ್ರ ಷಟ್ಪದಾಂತೇ ತುಂ ವಾಪಿಕಾಃ ॥ ೧೯೨ ॥

ಕೋಣೇಷ್ವಿಂದುಃ ಶೃಂಖಲಾ ಚ ವಲ್ಲೀ ಚ ರಚಯೇತ್ಕ್ರಮಾತ್ ।
ತ್ರಿಪಂಚೈಕಾದಶಪದೇ ಲಿಂಗಂ ತ್ರ್ಯಷ್ಟಮಿತಂ ತ್ರಿಷಟ್ ॥ ೧೯೩ ॥

ವಾಪೀ ಭದ್ರಾಣಿ ಕ್ರಮಶಃ ಷಟ್ತ್ರಿಂದ್ವಿಂಶತತ್ತ್ವಜಂ ।
ತ್ರಿಂಶಷತ್ಟ್ರಿಂಶದ್ವಿಂಶಚ್ಚಾಂತಿಮಪಂಕ್ತೇಃಶ್ಚ ಪಾರ್ಶ್ವಕೇ ॥ ೧೯೪ ॥

ಏಕಸ್ಮಿನ್ ರಚಯೇಲ್ಲಿಂಗದ್ವಯಂ ಭದ್ರೇ ರಸಾತ್ಮಕೇ ।
ತಸ್ಯೋಪರಿ ಭವೇತ್ಸರ್ವತೋಭದ್ರಂ ತತ್ರ ವಾಪಿಕಾ ॥ ೧೯೫ ॥

೧೯೨-೧೯೩. ಈ ಪಂಕ್ತಿಗಳಲ್ಲಿ ಯಾವು ಯಾವುದರಲ್ಲಿ ಎಷ್ಟೆಷ್ಟು ಲಿಂಗಗಗಳು ಬರುತ್ತವೆಯೋ ಅದದರಲ್ಲಿ ಆ ಲಿಂಗಸಂಖ್ಯೆಗಿಂತಲೂ ಒಂದೊಂದು ವಾಪಿಯು ಹೆಚ್ಚುಹೆಚ್ಚಾಗಿರುತ್ತದೆ. ಆರು ಸಾಲಿಗೂ ಆರು ಪರಿಧಿಗಳು ಬರುತ್ತದೆ. ಅವುಗಳ ಮುಂದಕ್ಕೆ ವಾಪಿಗಳು ಬರುತ್ತವೆ. ಕೋಣಗಳಲ್ಲಿ ಇಂದುವು ಬರುತ್ತವೆ. ಶೃಂಖಲ ವಲ್ಲಿಗಳನ್ನು ಕ್ರಮವರಿತು ರಚಿಸಬೇಕು. ಇಂದುವು ಮೂರು ಮನೆಗಳದೂ ಶೃಂಖಲೆಯು ಐದು ಮನೆಗಳದೂ ವಲ್ಲಿಯು ಹನ್ನೊಂದು ಮನೆಗಳದೂ ಆಗಿರುತ್ತವೆ. ಲಿಂಗವು ಇಪ್ಪತ್ತು ನಾಲ್ಕು ಮನೆಯ ಪ್ರಮಾಣದ್ದು ಏರ್ಪಡುತ್ತದೆ.

೧೯೪. ವಾಪಿಯು ಹದಿನೆಂಟು ಮನೆಗಳದಾಗಿರುತ್ತದೆ. ಒಂದನೆಯ ಪಂಕ್ತಿಯಲ್ಲಿ ಮೂವತ್ತಾರು ಮನೆಯ ಭದ್ರವೂ ಎರಡನೆಯದರಲ್ಲಿ ಇಪ್ಪತ್ತೈದು ಮನೆಗಳದೂ ಮೂರನೆಯದರಲ್ಲಿ ಮೂವತ್ತು ಮನೆಯದೂ ನಾಲ್ಕನೆಯದರಲ್ಲಿ ಮೂವತ್ತೊಂದು ಮನೆಗಳದೂ ಐದನೆಯದರಲ್ಲಿ ಇಪ್ಪತ್ತು ಮನೆಗಳದೂ ಆಗಿರುತ್ತದೆ.

೧೯೫ ಆರನೆಯದಾದ ಕೊನೆಯದರಲ್ಲಿ ಒಂದು ಪಾರ್ಶ್ವದಲ್ಲಿ ಎರಡು ಲಿಂಗಗಳನ್ನು ರಚಿಸಬೇಕು. ಇದು ಒಂಭತ್ತುಮನೆಯದಾಗಿರುತ್ತದೆ. ಅದರ ಮುಂದಕ್ಕೆ ಸರ್ವತೋಭದ್ರವು ಬರುತ್ತದೆ.

ಚತುರ್ವಿಂಶತ್ಪದಾಭದ್ರಮುಂಕೆಸಂಖ್ಯಾಂ ತತಃ ಪರಂ ।
ಪರಿಧ್ಯಂತೇ ತುರ್ಯತುರ್ಯಪದೈಃ ಪದ್ಮಂ ಸಮುದ್ಧರೇತ್ ॥ ೧೯೬ ॥

ಚಿತ್ರಂ ವಾ ಲೋಹಿತಂ ಲಿಂಗಶೃಂಖಲೇ ಕೃಷ್ಣವರ್ಣಕೇ ।
ಹರಿತಾ ವಲ್ಲರೀ ಭದ್ರಂ ರಕ್ತಂ ಶುದ್ಧೇಬ್ಜವಾಪಿಕೇ ॥ ೧೯೭ ॥

ಏಕವಿಂಶೋತ್ತರಶತಲಿಂಗತೋಭದ್ರಮೀರಿತಂ ।
ಪ್ರಕಾರಾಂತರಮನ್ಯಚ್ಚ ಶೃಣು ಶಿಷ್ಯ ಬ್ರವೀಮಿ ತೇ ॥ ೧೯೮ ॥

ಷಡಧಿಕಾಶೀತಿರೇಖಾಸ್ತಿರ್ಯಗೂರ್ಧ್ವಗಂ ಪ್ರಕಲ್ಪಯೇತ್ ।
ಪಂಚಾಶೀತಿಪದಾನಿ ಸ್ಯುಃ ಪಂಕ್ತಯಸ್ತತ್ರ ಸರ್ವತಃ ॥ ೧೯೯ ॥

ತತ್ರ ಷಟ್ಷಟ್ಪದಾಂತೇ ಸ್ಯಾತ್ಪರಿಧಿಃ ಪೀತವರ್ಣಕಃ ।
ಸರ್ವತೋಽನೇನ ವಿಧಿನಾ ಚತುಃಪರಿಧಯಃ ಕ್ರಮಾತ್ ॥ ೨೦೦ ॥

೧೯೬-೧೯೭. ಅಲ್ಲಿ ವಾಪಿಕೆಗಳು ಇಪ್ಪತ್ತ ನಾಲ್ಕು ಬಂದು ಆ ಭದ್ರವು ಏರ್ಪಡುತ್ತದೆ. ಪರಿಧಿಯ ಕಡೆಯಲ್ಲಿ ಹದಿನಾರು ಮನೆಗಳ ಒಂದು ಪದ್ಮವನ್ನು ಉದ್ಧರಿಸಬೇಕು. ಅದು ಚಿತ್ರ ಚಿತ್ರ ಬಣ್ಣದ್ದಾಗಿರಬಹುದು. ಅಥವಾ ಕೆಂಪಗೂ ಇರಬಹುದು. ಲಿಂಗವೂ ಶೃಂಖಲೆಯೂ ಕಪ್ಪು ಬಣ್ಣಕ್ಕಿರಬೇಕು. ವಲ್ಲಿಯು ಅರಿಶಿನ ಬಣ್ಣಕ್ಕಿರಬೇಕು. ಭದ್ರವು ಕೆಂಪುಬಣ್ಣಕ್ಕಿರಬೇಕು. ಇಂದುವೂ ವಾಪಿಕೆಯೂ ಬಿಳಿಯ ಬಣ್ಣಕ್ಕಿರಬೇಕು.

೧೯೮. ಇದಕ್ಕೆ (ನೂರ ಇಪ್ಪತ್ತೊಂದು) ಏಕವಿಂಶ ಶತೋತ್ತರ ಲಿಂಗತೋಭದ್ರವೆಂದು ಹೆಸರು. ಇನ್ನೂ ಒಂದು ಪ್ರಕಾರವನ್ನು ಹೇಳುತ್ತೇನೆ. ಮನಸ್ಸಿಟ್ಟು ಕೇಳು.

೧೯೯. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಎಂಭತ್ತಾರು ರೇಖೆಗಳನ್ನು ಎಳೆಯಬೇಕು. ಇದರಿಂದ ಎಲ್ಲಾ ಕಡೆಗೂ ಎಂಭತ್ತೈದು ಎಂಭತ್ತೈದು ಮನೆಗಳು ಏರ್ಪಡುತ್ತವೆ.

೨೦೦. ಅವುಗಳಲ್ಲಿ ಆರಾರು ಮನೆಗಳಿಗೆ ಒಂದೊಂದು ಪರಿಧಿಯನ್ನು ರಚಿಸಬೇಕು. ಅದು ಹಸರು ಬಣ್ಣದ್ದಾಗಿರಬೇಕು. ಈ ರೀತಿಯಾಗಿ ಮಾಡಿದರೆ ನಾಲ್ಕು ಪರಿಧಿಗಳು ಬರುತ್ತವೆ.

ತೇಷು ವೈ ಪಂಕ್ತಿಕೋಷ್ಠೇಷು ಲಿಂಗಾದಿ ರಚಯೇದ್ಧಿಯಾ ।
ಕೋಣೇಷು ತ್ರಿಪದಶ್ಚಂದ್ರಸ್ತದಾದಿ ಶೃಂಖಲಾ ಮತಾ ॥ ೨೦೧ ॥

ತತೋ ವಲ್ಲೀ ತತೋ ಭದ್ರಂ ವಾಪೀ ಲಿಂಗಂ ಕ್ರಮಾದ್ಭವೇತ್ ।
ತತ್ರ ಪ್ರಥಮಪಂಕ್ತೌ ತು ಶೃಂಖಲಾ ಪಂಚಪಾದಿಕಾ ॥ ೨೦೨ ॥

ಏಕಾದಶಪದಾ ವಲ್ಲೀ ಶೃಂಖಲಾ ಷಟ್ಪದಾತ್ಮಿಕಾ ।
ಭದ್ರಮೇಕಪದಂ ವಾಪೀ ತ್ರಿಷಟ್ಕೋಷ್ಠೈಃ ಪ್ರಕಲ್ಪಯೇತ್ ॥ ೨೦೩ ॥

ಈಶಾನಸ್ತನ್ನಿತೇ ಕಾರ್ಯ ಏವಂ ತೇ ನವಸಂಖ್ಯಯಾ ।
ಭವಂತಿ ವಾಪ್ಯೋ ದಶ ತಾ ಭದ್ರದ್ವಯಮಭೀಪ್ಸಿತಂ ॥ ೨೦೪ ॥

ದ್ವಿತೀಯಪಂಕ್ತೌ ವಾಪೀ ತು ತ್ರಯೋದಶಪದಾ ಮತಾ ।
ಭದ್ರಂ ತು ಷಡ್ದಶಪದಂ ಶೇಷಂ ಪೂರ್ವಂ ಸಮೀರಿತಂ ॥ ೨೦೫ ॥

೨೦೧-೨೦೨. ಆ ಪಂಕ್ತಿಗಳ ಕೋಷ್ಠಗಳಲ್ಲಿ ಬುದ್ಧಿವಂತಿಕೆಯಿಂದ ಲಿಂಗವೇ ಮುಂತಾದುವುನ್ನು ರಚಿಸಬೇಕು. ಆ ಕೋಣದಲ್ಲಿ ಮೂರು ಮನೆಗಳ ಚಂದ್ರ ನಿರಬೇಕು. ಅದರ ಮೇಲೆ ಶೃಂಖಲೆಯು ಬರಬೇಕು. ಆಮೇಲೆ ವಲ್ಲಿಯೂ ಆಮೇಲೆ ಭದ್ರವೂ ಬರಬೇಕು. ಆಮೇಲೆ ವಾಪಿಯೂ ಅನಂತರ ಲಿಂಗವೂ ಬರಬೇಕು. ಈ ರೀತಿಯಲ್ಲಿ ಕ್ರಮವಾಗಿರಬೇಕು. ಮೊದಲನೆಯ ಪಂಕ್ತಿಯಲ್ಲಿ ಶೃಂಖಲೆಯು ಐದು ಮನೆಗಳಿಗೆ ಬರುತ್ತದೆ.

೨೦೩-೨೦೪. ಹನ್ನೊಂದು ಮನೆಗಳ ಪ್ರಮಾಣದ ವಲ್ಲಿಯು ಬರುತ್ತದೆ. ಆರು ಮನೆಗಳ ಪ್ರಮಾಣದ ಶೃಂಖಲೆಯು ಬರುತ್ತದೆ. ಹದಿನೆಂಟು ವಾಪಿಗಳು ಬರುತ್ತವೆ. ಹನ್ನೆರಡು ಮನೆಗಳ ಒಂದು ಭದ್ರವು ಏರ್ಪಡುತ್ತದೆ. ಅದರಲ್ಲಿ ಲಿಂಗವು ಏರ್ಪಡುತ್ತದೆ. ಈ ರೀತಿಯಾಗಿ ರಚಿಸಿದರೆ ಒಂಭತ್ತು ಲಿಂಗಗಳು ಬರುತ್ತವೆ. ಮತ್ತು ವಾಪಿಗಳು ಹತ್ತು ಬರುತ್ತವೆ. ಯುಕ್ತಿಯಿಂದ ರಚಿಸಿದರೆ ಎರಡು ಭದ್ರಗಳು ಬರುತ್ತವೆ.

೨೦೫-೨೦೬. ಎರಡನೆಯ ಪಂಕ್ತಿಯಲ್ಲಿ ವಾಪಿಯು ಹದಿಮೂರು ಮನೆಗಳಿಗೆ ಬರುತ್ತದೆ. ಹದಿನಾರು ಮನೆಗಳ ಭದ್ರವು ಏರ್ಪಡುತ್ತದೆ. ಉಳಿದವು

ಅಷ್ಟೌ ಲಿಂಗಾನಿ ವಾಪ್ಯಸ್ತು ಭವಂತಿ ನವಸಂಮಿತಾಃ ।
ತೃತೀಯಾಯಾಂ ತುರ್ಯಪದಂ ಭದ್ರಂ ಶೇಷಂ ತು ಪೂರ್ವವತ್ ॥ ೨೦೬ ॥

ಅಷ್ಟೌ ವಾಪ್ಯಸ್ಸಪ್ತಹರಾಃ ಕ್ರಮಶಃ ಸ್ಯುಃ ಸಮುದ್ಧೃತಾಃ ।
ದ್ವೇ ವಾಪ್ಯಾವಂತಿಮೇ ನ್ಯೂನೇ ತ್ರಿಭಿಃ ಕೋಷ್ಠೈಸ್ತು ಸಂಸ್ಮೃತೇ ॥

ಚತುರ್ಥಪಂಕ್ತೌ ವಾಪ್ಯಸ್ತು ಚತಸ್ರಶ್ಶಂಕರತ್ರಯಂ ।
ಭದ್ರಂ ದ್ವಿದಶಕಂ ಜ್ಞೇಯಂ ಶೇಷಂ ಪೂರ್ವವದುದ್ಧರೇತ್ ॥ ೨೦೮ ॥

ಚತುರ್ಥಪರಿಧ್ಯುಪರಿ ಬಾಣಾಂತೇ ಪರಿಧಿರ್ಭವೇತ್ ।
ತತ್ಪಂಕ್ತೌ ಶೃಂಖಲೇ ನ್ಯೂನೇ ಪದೇನೈಕೇನ ವಲ್ಲರೀ ॥ ೨೦೯ ॥

ದ್ವಾಭ್ಯಾಂ ಪದಾಭ್ಯಾಂ ಚಂದ್ರಸ್ತು ಯಥಾಪೂರ್ವಂ ಪ್ರಕಲ್ಪಯೇತ್ ।
ಭದ್ರದ್ವಯಂ ಷಟ್ಷಟ್ಪದಂ ತ್ವನ್ಯೇ ಭದ್ರೇ ನವಾತ್ಮಕೇ ॥ ೨೧೦ ॥

ಮೊದಲಿನಂತೆಯೇ ಬರುತ್ತವೆ. ಈ ಪಂಕ್ತಿಯಲ್ಲಿ ಎಂಟು ಲಿಂಗಗಳೂ ಒಂಭತ್ತು ವಾಪಿಗಳೂ ಬರುತ್ತವೆ. ಮೂರನೆಯ ಪಂಕ್ತಿಯಲ್ಲಿ ನಾಲ್ಕು ಮನೆಗಳ ಭದ್ರವು ಉಳಿದುವೆಲ್ಲವೂ ಮೇಲಿನಂತೆಯೇ. ಇದರಲ್ಲಿ ಎಂಟು ವಾಪಿಗಳೂ ಏಳು ಲಿಂಗಗಳೂ ಕ್ರಮವಾಗಿ ಬರುತ್ತವೆ. ಕೊನೆಯ ಎರಡು ವಾಪಿಗಳಿಗೆ ಮೂರು ಮೂರು ಮನೆಗಳು ಕಮ್ಮಿಯಾಗುತ್ತವೆ.

೨೦೮. ನಾಲ್ಕನೆಯ ಪಂಕ್ತಿಯಲ್ಲಿ ನಾಲ್ಕು ವಾಪಿಗಳೂ ಮೂರು ಲಿಂಗಗಳೂ ಬರುತ್ತವೆ. ಹನ್ನೆರಡು ಮನೆಯ ಭದ್ರವು ಬರುತ್ತದೆ ಉಳಿದುವೆಲ್ಲವೂ ಮೊದಲಿನಂತೆಯೇ ಇರುತ್ತವೆ.

೨೦೯-೨೧೦. ನಾಲ್ಕನೆಯ ಪರಿಧಿಯ ಮುಂದೆ ಐದು ಮನೆಗಳ ಮುಂದೆ ಪರಿಧಿಯು ಮತ್ತೆ ಬರುತ್ತದೆ. ಅಲ್ಲಿನ ಶೃಂಖಲೆಗಳು ಒಂದು ಮನೆಯನ್ನು ಕಮ್ಮಿ ಕಮ್ಮಿಉಳ್ಳದ್ದಾಗಿರುತ್ತವೆ. ಎಂದರೆ ನಾಲ್ಕು ಮನೆಯದಾಗಿರುತ್ತವೆ. ವಲ್ಲಿಯು ಒಂಭತ್ತು ಮನೆಗಳದಾಗಿರುತ್ತದೆ. ಚಂದ್ರವು ಮೂರು ಮನೆಗಳುಳ್ಳದ್ದಾಗಿರುತ್ತದೆ. ಆರಾರು ಮನೆಗಳುಳ್ಳ ಎರಡು ಭದ್ರವು ಬರುತ್ತದೆ. ಮಿಕ್ಕ ಭದ್ರಗಳು ಒಂಭತ್ತು ಮನೆಗಳುಳ್ಳವಾಗಿರುತ್ತವೆ.

ತ್ರಯೋದಶಪದೈರ್ವಾಪೀ ತತ್ರ ತತ್ರ ಪ್ರಕಲ್ಪಯೇತ್ ।
ಭದ್ರಯೋರೂರ್ಧ್ವಂ ಸ್ಯಾದ್ಭದ್ರದ್ವಯಂ ಷಟ್ಷಟ್ಪದಂ ಶುಭಂ ॥ ೨೧೧ ॥

ಸಂಸ್ಪಷ್ಟಾನಿ ಪದ್ಮಾನ್ಯೇವ ಶೃಂಖಲಾರ್ಥೇ ನಿಯೋಜಯೇತ್ ।
ತಸ್ಯೋಪರಿ ಪರಿಧಿಸ್ತು ಬಾಣಾಂತೇ ಪರಿಕಲ್ಪಯೇತ್ ॥ ೨೧೨ ॥

ಉಭಯೋರಂತರೇ ವಾಪೀ ತ್ರಯೋದಶಪದಾತ್ಮಿಕಾ ।
ಭದ್ರದ್ವಯಂ ಷಟ್ಷಟ್ಪದಂ ಶೇಷಂ ಸರ್ವಂ ಯಥೋದಿತಂ ॥ ೨೧೩ ॥

ಅಂತಿಮೇಂತಃ ಪಂಚ ಪಂಚ ಪದೈಃ ಪದ್ಮಂ ಸಮುದ್ಧರೇತ್ ॥ ೨೧೪ ॥

ರಕ್ತಂ ವಾ ಚಿತ್ರವರ್ಣಂ ಚ ಶ್ವೇತಶ್ಚಂದ್ರೋऽಸಿತಾ ಮಪಾ ।
ಶೃಂಖಲಾ ಹರಿತಾ ವಲ್ಲೀ ಪೀತಂ ತಚ್ಛೃಂಖಲಾದ್ವಯಂ ॥ ೨೧೫ ॥

ರಕ್ತಂ ಭದ್ರಂ ಸಿತಾ ವಾಪೀ ಲಿಂಗಂ ಕೃಷ್ಣಂ ಪ್ರಕಲ್ಪಿತಂ ।
ಲಿಂಗಸ್ಕಂಧಗತಾಃ ಕೋಷ್ಠಾಃ ಶೋಭಾ ಕೋಷ್ಠಾಃ ಪ್ರಕಲ್ಪಯೇತ್ ॥

೨೧೧-೨೧೫. ಹದಿಮೂರು ಹದಿಮೂರು ಮನೆಗಳಿಗೆ ವಾಪಿಗಳನ್ನು ಅಲ್ಲಿಯೇ ರಚಿಸಿಕೊಳ್ಳಬೇಕು. ಮುಂದಿನ ಭದ್ರಗಳೂ ಕೂಡ ಆರಾರು ಮನೆಗಳಿಗೆ ಹುಟ್ಟುತ್ತವೆ. ಆ ಜಾಗದಲ್ಲಿ ಬರುವ ಮನೆಗಳನ್ನು ಬುದ್ಧಿವಂತಿಕೆಯಿಂದ ಶೃಂಖಲೆಗೆ ಉಪಯೋಗಿಸಿಕೊಳ್ಳಬೇಕು. ಈ ಶೃಂಖಲೆಯಾದ ಮೇಲೆ ಐದು ಮನೆಗಳ ಮುಂದೆ ಪರಿಧಿಯನ್ನು ರಚಿಸಬೇಕು. ಈ ಶೃಂಖಲೆ ಪರಿಧಿಗಳ ಮಧ್ಯದಲ್ಲಿ ಹದಿಮೂರು ಮನೆಗಳ ವಾಪಿಯನ್ನು ರಚಿಸಬೇಕು. ಇಲ್ಲಿ ಎರಡು ಭದ್ರಗಳು ಬರುತ್ತವೆ. ಅವು ಆರಾರು ಮನೆಗಳ ಪ್ರಮಾಣದುವು. ಉಳಿದುವೆಲ್ಲವೂ ಹಿಂದಿನಂತೆಯೇ ಇರುತ್ತವೆ. ಇವೆಲ್ಲ ಆದಮೇಲೆ ಕಡೆಗೆ ಇಪ್ಪತ್ತೈದು ಮನೆಗಳಿಗೆ ಒಂದು ಪದ್ಮವನ್ನು ರಚಿಸಬೇಕು. ಅದು ರಕ್ತವರ್ಣವಾಗಿರಬಹುದು. ಅಥವಾ ಚಿತ್ರವರ್ಣವಾಗಿರಬಹುದು. ಚಂದ್ರವು ಬಿಳಿಯ ಬಣ್ಣಕ್ಕೂ ಶೃಂಖಲೆಯು ಕಪ್ಪಗೂ ವಲ್ಲಿಯು ಅರಿಸಿನ ಬಣ್ಣಕ್ಕೂ ಆದರ ಶೃಂಖಲೆಗಳು ಹಸುರಾಗಿಯೂ ಇರಬೇಕು.

೨೧೬-೨೧೭. ಭದ್ರವು ಕೆಂಪು ಬಣ್ಣಕ್ಕೂ ವಾಪಿಯು ಬೆಳ್ಳಗೂ ಲಿಂಗವು ಕಪ್ಪಗೂ ಇರಬೇಕು. ಲಿಂಗದ ಮೇಲಿರುವ ಮನೆಗಳು ಅಂದವಾಗಿರುವಂತೆ

ಪದಾನಿ ಶೇಷಭೂತಾನಿ ಯತ್ರ ಕ್ವಚ ಭವಂತಿ ಹಿ ।
ತಾನಿ ತತ್ರ ಯಥಾಯೋಗ್ಯಂ ನಿಯಾ ಸಮ್ಯಜ್ಞಿಯೋಜಯೇತ್ ॥ ೨೧೭ ॥

ಯದ್ವಾ ತುರ್ಯಪರಿಧ್ಯೂರ್ಧ್ವಮೇಕಾದಶಪದಾತ್ಪರಂ ।
ಪರಿಧಿಃ ಸ್ಯಾತ್ತಯೋರ್ಮಧ್ಯೇ ಕೋಣೇ ಚಂದ್ರೋ ಯಥೋದಿತಃ । ೨೧೮ ॥

ಶೃಂಖಲಾ ದಶಪಾದಾ ಸ್ಯಾದ್ವಲ್ಲೀ ಸ್ಯಾದೇಕವಿಂಶತಿಃ ।
ಶೃಂಖಲಾನ್ಯಾ ರುದ್ರಪದಾ ಭದ್ರಂ ತ್ರಿಂಶತ್ಪದಾತ್ಮಕಂ ॥ ೨೧೯ ॥

ಏಕಷಷ್ಟಿಪದೈರ್ವಾಪೀ ಸಮ್ಯಕ್ ಬುದ್ಧ್ವಾ ಪ್ರಕಲ್ಪಯೇತ್ ।
ಅಥವಾ ದ್ವೇ ಪದೇ ಚಾನ್ಯೇ ಸಂಯೋಜ್ಯ ಗಿರಿಹಸ್ತಿಷು ॥ ೨೨೦ ॥

ಪದೇಷು ರಚಯೇದ್ಬುದ್ಧ್ಯಾ ಲಿಂಗಾನಾಂ ಪಂಕ್ತಯಃ ಕ್ರಮಾತ್ ।
ನವಾಷ್ಟರಸತ್ರ್ಯೇಕಾ ಶೇಷಂ ಪೂರ್ವಂ ಯಥೋದಿತಂ ॥ ೨೨೧ ॥

ವರ್ಣವನ್ನು ತುಂಬಬೇಕು. ಇನ್ನೆಲ್ಲೆಲ್ಲಿ ಮನೆಗಳು ಉಳಿದಿವೆಯೋ ಅವನ್ನು ಬುದ್ಧಿವಂತಿಕೆಯಿಂದ ಸ್ಥಳಗಳಿಗನುಗುಣವಾಗಿ ಸೇರಿಸಿಕೊಳ್ಳಬೇಕು.

೨೧೮-೨೧೯. ಹಾಗಿಲ್ಲದಿದ್ದರೆ ನಾಲ್ಕನೆಯ ಪರಿಧಿಯಿಂದ ಮುಂದಕ್ಕೆ ಹನ್ನೊಂದು ಮನೆಯೂ ಸುತ್ತಲೂ ಪರಿಧಿಯು ಬರಬೇಕು. ಅಲ್ಲಿರುವ ಕೋಣಗಳಲ್ಲಿ ಚಂದ್ರನನ್ನು ರಚಿಸಬೇಕು. ಹತ್ತು ಮನೆಗಳ ಶೃಂಖಲೆಯು ಬರುತ್ತದೆ. ಇಪ್ಪತ್ತೊಂದು ಮನೆಗಳ ವಲ್ಲಿಯೂ ಬರುತ್ತದೆ. ಮತ್ತೊಂದು ಹನ್ನೊಂದು ದಳದ ಮನೆಯ ಶೃಂಖಲೆಯು ಬರುತ್ತದೆ. ಅಲ್ಲಿ ಬರುವ ಭದ್ರವು ಮೂವತ್ತು ಮನೆಗಳ ದಾಗಿರುತ್ತದೆ.

೨೨೦-೨೨೧. ಇಲ್ಲಿ ಅರವತ್ತೊಂದು ಮನೆಗಳಿಗೆ ವಾಪಿಯು ಬರುತ್ತದೆ. ಈ ರೀತಿಯಾಗಿ ಬುದ್ಧಿವಂತಿಕೆಯಿಂದ ರಚಿಸಬೇಕು. ಅಥವಾ ಏಳು ಎಂಟು ಇರುವ ಮನೆಗಳನ್ನು ಸೇರಿಸಿ ಬುದ್ಧಿವಂತಿಕೆಯಿಂದ ಲಿಂಗಗಳನ್ನು ರಚಿಸಬಹುದು. ಹೀಗೆ ಮಾಡಿದರೆ ಕ್ರಮವಾಗಿ ಒಂಭತ್ತು, ಎಂಟು, ಆರು, ಮೂರು, ಒಂದು ಈ ರೀತಿಯಾಗಿ ಲಿಂಗಗಳು ಏರ್ಪಡುತ್ತವೆ. ಉಳಿದುವು ಮೊದಲಿನಂತೆಯೇ ಇರುತ್ತವೆ.

ವಿಶೇಷಸ್ತತ್ರ ಭದ್ರೇಷು ಷಡ್ಲಿಂಗೇ ಷೋಡಶಾತ್ಮಕಂ ।
ಏಕಲಿಂಗೇ ವಿಂಶಪದಂ ದ್ವಾಭ್ಯಾಮನ್ಯತ್ರ ಚಾಧಿಕಂ || ೨೨೨ ||

ಪೂರ್ವವತ್ಸರ್ವತೋಭದ್ರಂ ಪದ್ಮವರ್ಣಾಸ್ತು ಪೂರ್ವವತ್ ।
ಪೀತಶುಕ್ಲರಕ್ತಕೃಷ್ಣಾ ಬಹಿಃ ಪರಿಧಯಃ ಸ್ಮೃತಾಃ || ೨೨೩ ||

ಏತದಷ್ಟೋತ್ತರಶತಲಿಂಗತೋಭದ್ರಮೀರಿತಂ ।
ಪ್ರಕಾರಾಂತರಮನ್ಯತ್ತೇ ಶೃಣು ಶಿಷ್ಯ ಬ್ರವೀಮಿ ಯತ್ || ೨೨೪ ||

ತಿರ್ಯಗೂರ್ಧ್ವಂ ಗತಾ ರೇಖಾ ನವಾಷ್ಟಲೋಹಿತಾಃ ಸ್ಮೃತಾಃ ।
ತತ್ಕೋಷ್ಠೇಷ್ವಬ್ಧಿನೇತ್ರಾಗ್ನಿಕೋಷ್ಠಕೈ ರಚಯೇದ್ಧಿಯಾ || ೨೨೫ ||

ಸರ್ವತೋಭದ್ರಕಂ ರಮ್ಯಂ ಪರಿತಃ ಪರಿಧಿರ್ಮತಃ ।
ತತೋ ರಸರಸಾಂತೇಸ್ಯುಶ್ಚತುಃಪರಿಧಯಶ್ಶುಭಾಃ || ೨೨೬ ||

---

೨೨೨. ಇಲ್ಲಿನ ವಿಶೇಷವೇನೆಂದರೆ ಆರು ಲಿಂಗಗಳು ಹದಿನಾರು ಮನೆಗಳ ಪ್ರಮಾಣದವುಗಳಾಗುತ್ತವೆ. ಒಂದು ಲಿಂಗದ್ದು ಇಪ್ಪತ್ತು ಪದಗಳದಾಗಿರುತ್ತದೆ. ಉಳಿದ ಲಿಂಗಗಳು ಹಿಂದೆ ಹೇಳಿದುದಕ್ಕಿಂತ ಎರಡು ಮನೆಗಳು ಹೆಚ್ಚಾಗಿರುತ್ತವೆ.

೨೨೩. ಸರ್ವತೋಭದ್ರವನ್ನು ಮೊದಲಿನಂತೆಯೇ ರಚಿಸಿ ಪದ್ಮವನ್ನೂ ರಚಿಸಿ ಅದಕ್ಕೆ ಹಿಂದೆ ಹೇಳಿದಂತೆಯೇ ಬಣ್ಣವನ್ನು ಹಾಕಬೇಕು. ಹೊರಗಡೆಯ ಪರಿಧಿಗಳು ಅರಿಶಿನ, ಬಿಳುಪು, ಕಪ್ಪು, ಕೆಂಪು ಮಿಶ್ರ ಬಣ್ಣದವುಗಳಾಗಿರಬೇಕು.

೨೨೪. ಇದೇ ಒಂದನೂರುಎಂಟು ಲಿಂಗಗಳು ಎಂದರೆ ಅಷ್ಟೋತ್ತರಶತ ಲಿಂಗತೋಭದ್ರವು ಎಂದೆನಿಸಿಕೊಳ್ಳುತ್ತದೆ. ಮತ್ತೊಂದು ಪ್ರಕಾರವನ್ನು ಹೇಳುತ್ತೇನೆ. ಕೇಳು.

೨೨೫-೨೨೬. ಉದ್ದುದ್ದವಾಗಿಯೂ ಅಡ್ಡಡ್ಡಲಾಗಿಯೂ ಎಂಭತ್ತೊಂಭತ್ತು ಗೆರೆಗಳನ್ನು ಎಳೆಯಬೇಕು. ಇದು ಕೆಂಪು ಬಣ್ಣಕ್ಕಿರಬೇಕು. ಆ ಮನೆಗಳಲ್ಲಿ ಉದ್ದವಾಗಿ ಹದಿನೆಂಟು ಅಡ್ಡವಾಗಿ ಹದಿನೆಂಟು ಮನೆಗಳನ್ನು ತೆಗೆದುಕೊಂಡು ಮುನ್ನೂರ ಇಪ್ಪತ್ತ ನಾಲ್ಕು ಮನೆಗಳ ಒಂದು ಸರ್ವತೋ ಭದ್ರವನ್ನು ರಚಿಸಬೇಕು. ಸುತ್ತಲೂ ಪರಿಧಿಗಳಿರಬೇಕು. ಅನಂತರ ಮೂವತ್ತಾರು ಮನೆಗಳನ್ನು ಬಿಟ್ಟು ಒಂದೊಂದು ಪರಿಧಿಗಳನ್ನು ರಚಿಸಿ ಸುತ್ತ ನಾಲ್ಕು ಪರಿಧಿಗಳನ್ನು ರಚಿಸಬೇಕು.

ತತ್ರ ಚತುರ್ಷು ಪಾರ್ಶ್ವೇಷು ಕೋಣೇಂದುಸ್ತ್ರಿಪದಃ ಸ್ಮೃತಃ ।
ಶೃಂಖಲಾ ಪಂಚಭಿರ್ವಲ್ಲೀ ತ್ವೇಕಾದಶಪದಾ ಮತಾ ॥ ೨೨೭ ॥

ಲಿಂಗಂ ಚತುರ್ವಿಂಶಪದಂ ವಾಪೀ ತ್ವಷ್ಟಾದಶಾ ಭವೇತ್ ।
ನವ ಸಪ್ತ ತಥಾ ಪಂಚ ಯುಗನೇತ್ರಮಿತಾಶ್ಶಿನಾಃ ॥ ೨೨೮ ॥

ಪಂಚಪಂಕ್ತಯ ಏವ ಸ್ಯುರ್ವಾಪಿಕ್ಯೈಕಾಧಿಕಾ ತತಃ ।
ತುರ್ಯಲಿಂಗಾನಿ ದ್ವೇ ವಾಪ್ಯೌ ತ್ರಯೋದಶಪದಾತ್ಮಿಕೇ ॥ ೨೨೯ ॥

ಷಡಂಕಾರ್ಕರಸರಸಭದ್ರಸಂಖ್ಯಾ ಕ್ರಮಾದ್ಭವೇತ್ ।
ಸರ್ವತೋಭದ್ರಕೇ ವಾಪೀ ಯುಗನೇತ್ರಮಿತಾ ತಥಾ ॥ ೨೩೦ ॥

ನವಕೋಷ್ಠಮಿತಂ ಭದ್ರಂ ಶೇಷಂ ಸರ್ವಂ ತು ಪೂರ್ವವತ್ ।
ತತೋಂತಃ ಪರಿಧಿಃ ಕಾರ್ಯಸ್ತತ್ರ ಪದ್ಮಂ ಸಮುದ್ಧರೇತ್ ॥ ೨೩೧ ॥

---

೨೨೭. ಅಲ್ಲಿನ ನಾಲ್ಕು ಪಾರ್ಶ್ವಗಳಲ್ಲಿಯೂ ಕೋಣಗಳಲ್ಲಿ ಮೂರು ಮೂರು ಮನೆಯ ಚಂದ್ರನನ್ನು ರಚಿಸಬೇಕು. ಐದೈದು ಮನೆಗಳ ವಲ್ಲಿಯು ರಚಿಸಲ್ಪಡಬೇಕು. ಹನ್ನೊಂದು ಮನೆಗಳ ವಲ್ಲಿಯೂ ಬರುತ್ತದೆ.

೨೨೮-೨೩೦. ಇಪ್ಪತ್ತ ನಾಲ್ಕು ಮನೆಗಳ ಪ್ರಮಾಣದಲ್ಲಿ ಲಿಂಗವು ಬರುತ್ತದೆ. ಹದಿನೆಂಟು ಮನೆಗಳ ಪ್ರಮಾಣದಲ್ಲಿ ವಾಪಿಯು ಬರುತ್ತದೆ. ಒಂಭತ್ತು ಏಳು, ಐದು, ನಾಲ್ಕು, ಎರಡು ಸಂಖ್ಯೆಯಲ್ಲಿ ಕ್ರಮವಾಗಿ ಲಿಂಗಗಳು ಉದ್ಧೃತವಾಗುತ್ತವೆ. ಐದು ಪಂಕ್ತಿಗಳು ಬರುತ್ತನೆ. ಎಷ್ಟೆಷ್ಟು ಲಿಂಗಗಳು ಆ ಪಂಕ್ತಿಗಳಲ್ಲಿ ಬರುತ್ತವೆಯೋ ಅವಕ್ಕಿಂತಲೂ ಒಂದೊಂದು ವಾಪಿಯು ಹೆಚ್ಚಾಗಿ ಬರುತ್ತವೆ. ಹದಿಮೂರು ಪದಗಳಿರುವ ಭದ್ರದಲ್ಲಿ ನಾಲ್ಕು ಲಿಂಗಗಳೂ ಎರಡು ವಾಪಿಗಳೂ ಬರುತ್ತವೆ. ಇವುಗಳಲ್ಲಿ ಆರು, ಒಂಭತ್ತು, ಹನ್ನೆರಡು, ಆರು, ಆರು ಮನೆಗಳುಳ್ಳ ಭದ್ರಗಳು ಕ್ರಮವಾಗಿ ಬರುತ್ತವೆ. ಸರ್ವತೋಭದ್ರದಲ್ಲಿ ವಾಪಿಯು ಇಪ್ಪತ್ತು ನಾಲ್ಕು ಮನೆಗಳ ಪ್ರಮಾಣದಲ್ಲಿ ಬರುತ್ತದೆ.

೨೩೧-೨೩೨ ಇಲ್ಲಿ ಒಂಭತ್ತು ಮನೆಗಳುಳ್ಳ ಭದ್ರವು ಬರುತ್ತದೆ. ಮಿಕ್ಕುದೆಲ್ಲವೂ ಹಿಂದೆ ಹೇಳಿದಂತೆ ಬರುತ್ತವೆ. ಕೊನೆಯಲ್ಲಿ ಪರಿಧಿಯನ್ನು ರಚಿಸಿ

ಶ್ವೇತೋಬ್ಜಶ್ಶೃಂಖಲಾ ಕೃಷ್ಣಾ ನೀಲಾ ವಲ್ಲರಿಕಾರುಣಂ ।
ಭದ್ರಂ ವಾಪೀ ಸಿತಾ ಕೃಷ್ಣಂ ಲಿಂಗಂ ಪರಿಧಯೋಂತಿಮಾಃ ॥ ೨೩೨ ॥

ಪೀತಶುಕ್ಲರಕ್ತಕೃಷ್ಣಾ ಜ್ಞೇಯಾಃ ಪೀತಾಶ್ಚ ಮಧ್ಯಮಾಃ ।
ಏತದಷ್ಟೋತ್ತರಶತಲಿಂಗತೋಭದ್ರಮೀರಿತಂ ॥ ೨೩೩ ॥

ತಿರ್ಯಗೂರ್ಧ್ವಗಂ ಪಂಚ ಪಂಚ ರೇಖಾಃ ಕಾರ್ಯಾಸ್ಸುಲೋಹಿತಾಃ ।
ತತ್ಕೋಷ್ಠೇಷು ಪರಿಧಯಃ ಷಟ್ಸುಂಪಂತೇ ತ್ರಯಃ ಸ್ಮೃತಾಃ ॥ ೨೩೪ ॥

ತ್ರಿದ್ವ್ಯೇಕಲಿಂಗರಚನಾ ಚತುರ್ವಿಂಶತಿಪಾದಿಕಾ ।
ವಾಪೀತ್ವಷ್ಟಾಶದಪದಾ ಷಟ್ತ್ರಿಂಶದ್ದ್ವಿದಶಾಂಕಕಂ ॥ ೨೩೫ ॥

ಅದರೊಳಗೆ ಪದ್ಮವನ್ನು ಉದ್ಧರಿಸಬೇಕು. ಬಿಳಿಯ ಚಂದ್ರವೂ ಕೃಷ್ಣ ಶೃಂಖಲೆಯೂ ನೀಲಿಯ ವಲ್ಲಿಯೂ ಕೆಂಪು ಭದ್ರವೂ ಬಿಳಿಯ ವಾಪಿಯೂ ಕಪ್ಪು ಲಿಂಗವೂ ಬರುತ್ತವೆ.

೨೩೩. ಕೊನೆಯ ಪರಿಧಿಗಳು ಅರಿಶಿನ, ಬಿಳುಪು, ಕೆಂಪು ಕಪ್ಪು ಬಣ್ಣದ್ದಾಗಿರಬೇಕು. ಮಧ್ಯದ ಪರಿಧಿಗಳು ಅರಿಶಿನವಾಗಿರಬೇಕು. ಇದು ಅಷ್ಟೋತ್ತರಶತಲಿಂಗತೋರಾಮ ಭದ್ರವು.

೨೩೪. ಉದ್ದುದ್ದವಾಗಿಯೂ ಅಡ್ಡಡ್ಡಲಾಗಿಯೂ ಐವತ್ತೈದು ರೇಖೆಗಗಳನ್ನು ಎಳೆಯಬೇಕು. ಅವಕ್ಕೆ ಕೆಂಪು ಬಣ್ಣವನ್ನು ಹಾಕಿರಬೇಕು. ಅದರ ಮನೆಗಳಲ್ಲಿ ಹನ್ನೆರಡು ಹನ್ನೆರಡು ಮನೆಗಳಿಗೆ ಒಂದೊಂದು ಪರಿಧಿಯನ್ನು ಎಳೆಯಬೇಕು. ಹೀಗೆಳೆದರೆ ಒಳಗೆ ಮೂರು ಪರಿಧಿಗಳು ಬರುತ್ತವೆ.

೨೩೫. ಹೀಗೆಳೆದರೆ ಒಂದನೆಯದರಲ್ಲಿ ಮೂರು ಲಿಂಗಗಳೂ ಎರಡನೆಯದರಲ್ಲಿ ಎರಡು ಲಿಂಗಗಳೂ ಮೂರನೆಯದರಲ್ಲಿ ಒಂದು ಲಿಂಗವೂ ಬರುತ್ತವೆ. ಇವು ಇಪ್ಪತ್ತ ನಾಲ್ಕು ಮನೆಗಳ ಪ್ರಮಾಣಗಳಲ್ಲಿ ಬರುತ್ತವೆ. ಒಂದನೆಯದರಲ್ಲಿ ಮೂವತ್ತಾರು ಮನೆಯ ಭದ್ರವೂ ಎರಡನೆಯದರಲ್ಲಿ ಇಪ್ಪತ್ತು ಮನೆಗಳ ಭದವೂ ಮೂರನೆಯದರಲ್ಲಿ ಒಂಭತ್ತು ಮನೆಗಳ ಭದ್ರವೂ ಏರ್ಪಡುತ್ತದೆ.

ಭದ್ರಂ ಭದ್ರಂ ಪೀತಮನ್ಯದ್ಭದ್ರಪಾರ್ಶ್ವೇ ಪ್ರಕಲ್ಪಯೇತ್ ।
ಪ್ರಥಮಂ ನವಪಾದಂ ಸ್ಯಾದ್ದ್ವಿತೀಯಂ ಷಟ್ಪದಾತ್ಮಕಂ ॥ ೨೩೬ ॥

ವಾಪೀಪಾರ್ಶ್ವೇ ಚ ತ್ರಿಪದಾ ಶೃಂಖಲಾ ಲೋಹಿತಾ ಭವೇತ್ ।
ಪ್ರತಿಪಾರ್ಶ್ವೇ ಭವೇದೇತಚ್ಛೃಂಖಲಾ ಪಂಚಪಾದಿಕಾ ॥ ೨೩೭ ॥

ಏಕಾದಶಪದಾ ವಲ್ಲೀ ತ್ರಿಪದಶ್ಚಂದ್ರ ಈರಿತಃ ।
ಚತುರ್ವಿಂಶಪದೈಃ ಜ್ಞೇಯಂ ಲಿಂಗಂ ಪರಮಸುಂದರಂ ॥ ೨೩೮ ॥

ಭದ್ರಮರ್ಕಪದಂ ಲಿಂಗಮಷ್ಟಾವಿಂಶತ್ಪದಾತ್ಮಕಂ ।
ಲಿಂಗಮಸ್ತಕಪಾರ್ಶ್ವಸ್ಥೇ ಪದಾನಿ ಪೀತಕಾನಿ ತು ॥ ೨೩೯ ॥

---

೨೩೬. ಈ ಭದ್ರವು ಹಳದಿಯ ಬಣ್ಣಕ್ಕಿರಬೇಕು. ಈ ಭದ್ರಗಳ ಪಾರ್ಶ್ವದಲ್ಲಿ ಒಂದನೆಯದರಪಾರ್ಶ್ವದಲ್ಲಿ ಒಂಭತ್ತು ಮನೆಗಳ ಮತ್ತೊಂದು ಭದ್ರವೂ ಎರಡನೆಯದರಪಾರ್ಶ್ವದಲ್ಲಿ ಆರು ಮನೆಗಳೂ ಬರುತ್ತವೆ. ಇವನ್ನು ಹಳದಿಯ ಬಣ್ಣಕ್ಕೆ ಇಡಬೇಕು.

೨೩೭. ವಾಪಿಗಳ ಪಕ್ಕದಲ್ಲಿ ಮೂರು ಮೂರು ಮನೆಗಳ ಶೃಂಖಲೆಯು ಬರುತ್ತದೆ. ಇದನ್ನು ಕೆಂಪುಬಣ್ಣದಿಂದ ತುಂಬಿರಬೇಕು. ಮಿಕ್ಕ ಎಲ್ಲಾ ಪಾರ್ಶ್ವಗಳಲ್ಲಿಯೂ ಈ ಶೃಂಖಲೆಯು ಐದು ಮನೆಗಳ ಪ್ರಮಾಣದ್ದಾಗಿ ಬರುತ್ತದೆ.

೨೩೮. ಹನ್ನೊಂದು ಮನೆಗಳ ವಲ್ಲಿಯು ಬರುತ್ತದೆ. ಮೂರು ಮನೆಗಳ ಪ್ರಮಾಣದಲ್ಲಿ ಚಂದ್ರವು ಬರುತ್ತದೆ. ಇಪ್ಪತ್ತನಾಲ್ಕು ಮನೆಗಳಲ್ಲಿ ಲಿಂಗವು ಏರ್ಪಡುತ್ತದೆ. ಇದು ಬಹು ಸುಂದರವಾದದು.

೨೩೯. ಮಧ್ಯದಲ್ಲಿಯೂ ಮೂರು ಮನೆಗಳ ಒಂದು ಚಂದ್ರವೂ ಮೂರು ಮನೆಗಳ ಶೃಂಖಲೆಯೂ ಆರು ಮನೆಗಳ ಪ್ರಮಾಣದ ಲತೆಯೂ ಬರುತ್ತದೆ. ಇಲ್ಲಿ ಬರುವ ಭದ್ರವು ಹನ್ನೆರಡು ಮನೆಗಳದಾಗಿ ಲಿಂಗವು ಇಪ್ಪತ್ತೆಂಟು ಮನೆಗಳ ಪ್ರಮಾಣದಲ್ಲಿ ಏರ್ಪಡುತ್ತದೆ. ಈ ಲಿಂಗಗಳ ಮೇಲುಗಡೆಯಲ್ಲಿರುವ ಮನೆಗಳು ಹಳದಿಯ ಬಣ್ಣಕ್ಕಿರಬೇಕು.

ಲಿಂಗಂ ಕೃಷ್ಣಂ ಸಿತಾ ವಾಪೀ ಭದ್ರಂ ರಕ್ತಂ ಸಿತಶ್ಶಶೀ ।
ಶೃಂಖಲಾ ಕೃಷ್ಣಾ ಹರಿತಾ ವಲ್ಲೀ ವರ್ಣಾಸ್ತ್ವಿತೀರಿತಾಃ ॥ ೨೪೦ ॥

ಪರಿಧಿಃ ಪೀತವರ್ಣಸ್ಸ್ಯಾತ್ಪದಾನ್ಯುರ್ವರಿತಾನಿ ತು ।
ಯಥೇಷ್ಟಂ ರಂಜಯೇದೇತದ್ವಾಬಾಣಾಕ್ಷಿಲಿಂಗಸಾಧನಂ ॥ ೨೪೧ ॥

ಪೀತಶುಕ್ಲರಕ್ತಕೃಷ್ಣಾ ಬಾಹ್ಯಾಃ ಪರಿಧಯಃ ಕ್ರಮಾತ್ ।
ಪ್ರಕಾರಾಂತರಮನ್ಯದ್ವಾ ಶ್ರುಣು ಶಿಷ್ಯ ಬ್ರವೀಮ್ಯಹಂ ॥ ೨೪೨ ॥

ಚಂದ್ರಾಬ್ಧಿಪದಸಂಖ್ಯಾಸು ಸರ್ವತಸ್ತತ್ತ್ವಸಂಮಿತಂ ।
ಲಿಂಗಪೀಠಂ ವಿರಚಯೇತ್ಷಡಂತೇ ಪರಿಧೀ ಮತಾ ॥ ೨೪೩ ॥

ತಯೋರರ್ವಾಕ್ ಲಿಂಗಪಂಕ್ತಿದ್ವಯಂ ಸಮ್ಯಕ್ಪ್ರಕಲ್ಪಯೇತ್ ।
ಅಷ್ಟಾದಶಪದಂ ಲಿಂಗಂ ವಾಪೀ ತ್ರಿದಶಪಾದಿಕಾ ॥ ೨೪೪ ॥

---

೨೪೦. ಲಿಂಗವು ಕಪ್ಪು ಬಣ್ಣದ್ದಾಗಿಯೂ ವಾಪಿಯು ಬಿಳಿಯ ಬಣ್ಣದ್ದಾಗಿಯೂ ಭದ್ರವು ಕೆಂಪು ಬಣ್ಣದ್ದಾಗಿಯೂ ಚಂದ್ರನು ಬಿಳಿಯ ಬಣ್ಣವುಳ್ಳದ್ದಾಗಿಯೂ ಇರಬೇಕು. ಮತ್ತು ಶೃಂಖಲೆಯು ಕಪ್ಪು ಬಣ್ಣಕ್ಕೂ ವಲ್ಲಿಯು ಹಳದಿಯ ಬಣ್ಣಕ್ಕೂ ಇರಬೇಕು. ಎಂದರೆ ಈ ರೀತಿಯಾದ ಬಣ್ಣಗಳನ್ನು ತುಂಬಿರಬೇಕು.

೨೪೧. ಪರಿಧಿಯು ಹಸರು ಬಣ್ಣಕ್ಕಿರಬೇಕು. ಉಳಿದ ಮನೆಗಳನ್ನು ಇಷ್ಟ ಬಂದ ಬಣ್ಣಗಳಿಂದ ತುಂಬಿ ರಂಜಿಸುವಂತೆ ಮಾಡಬೇಕು. ಇದೇ ಇಪ್ಪತ್ತೈದು ಲಿಂಗಗಳುಳ್ಳ ಲಿಂಗತೋಭದ್ರವು.

೨೪೨. ಹೊರಗಿರುವ ಪರಿಧಿಗಳನ್ನು ಹಳದಿ, ಬಿಳುಪು, ಕೆಂಪು, ಮತ್ತು ಕಪ್ಪುಬಣ್ಣಗಳಿಂದ ತುಂಬಬೇಕು. ಈ ರೀತಿಯದಲ್ಲದೆ ಇದನ್ನೇ ಮತ್ತೊಂದು ಪ್ರಕಾರದಲ್ಲಿ ಹೇಳುತ್ತೇನೆ. ಕೇಳು.

೨೪೩-೨೪೪ ನಾಲ್ವತ್ತೊಂದು ಮನೆಗಳನ್ನು ಮೇಲಿನಿಂದಲೂ ಕೆಳಗಿನಿಂದಲೂ ತೆಗೆದುಕೊಂಡು ಕೆಳಭಾಗದ ಇಪ್ಪತ್ತೈದು ಮನೆಗಳಲ್ಲಿ ಲಿಂಗ ಪೀಠವನ್ನು ಮಾಡಬೇಕು. ಈ ರೀತಿಯಾಗಿ ಆರನ್ನು ಮಾಡಬೇಕು. ಕೊನೆಯಲ್ಲಿ ಎರಡು ಪರಿಧಿಗಳನ್ನೂ ರಚಿಸಬೇಕು. ಅದರ ಹಿಂದೆಯೇ ಎರಡು ಲಿಂಗ ಪಂಕ್ತಿಗಳನ್ನು ರಚಿಸಿರಬೇಕು. ಅಲ್ಲಿ ಹದಿನೆಂಟು ಮನೆಗಳಿಗೆ ಲಿಂಗವು ಬರುತ್ತದೆ. ವಾಪಿಯು

ತ್ರಿಪದೋಬ್ಜಃ ಶೃಂಖಲಾ ಚ ಪಂಚಪಾದೇಶವಲ್ಲರೀ ।
ಪ್ರಥಮಾಯುಗಲಿಂಗಾನ್ಯಾ ಪಂಕ್ತಿರ್ಲಿಂಗದ್ವಯಾನ್ವಿತಾ ॥ ೨೪೫ ॥

ಆದೌ ಭದ್ರಂ ನವಪದಂ ಪರಂ ಭದ್ರಂ ತು ಷಟ್ಪದಂ ।
ಪರಿಧ್ಯಂತೇ ತ್ರಯಸ್ತ್ರಿಂಶತ್ಕೋಷ್ಠೈರ್ಲಿಗಂ ಪ್ರಕಲ್ಪಯೇತ್ ॥ ೨೪೬ ॥

ಮೂಲಸ್ಕಂಧಾ ಸಪ್ತಸಪ್ತ ಪದಜೌ ಷಟ್ಪದೈಶ್ಶಿರಃ ।
ಪಂಚಪಂಚ ಪದೈಃ ಪಾರ್ಶ್ವೈಃ ಕಟಿಶ್ಯಂಭೋಸ್ತ್ರಿಪಾದಜಃ ॥ ೨೪೭ ॥

ಚತುರ್ದಿಕ್ಷು ಹರಸ್ಯಾಸ್ಯ ಚತುರ್ಭದ್ರಂ ನವಾಷ್ಟ್ರಿಕಂ ।
ಚಂದ್ರೋತ್ರ ತ್ರಿಪದೋ ಜ್ಞೇಯಃ ಶೃಂಖಲಾ ದ್ವಿಪದಾ ಸ್ಮೃತಾ ॥

ಹದಿಮೂರು ಮನೆಗಳಿಗೆ ಬರುತ್ತದೆ. ಮೂರು ಮನೆಗಳಿಗೆ ಚಂದ್ರವೂ ಐದು ಮನೆಗಳ ಪ್ರಮಾಣದ ಶೃಂಖಲೆಯೂ ಲಿಂಗವೂ ವಲ್ಲಿಯೂ ಕೂಡ ಪಾದಗಳಿಗೆ ಬರುತ್ತವೆ. ಇದರಲ್ಲಿ ಮೊದಲನೆಯ ಪಂಕ್ತಿಯಲ್ಲಿ ನಾಲ್ಕು ಲಿಂಗವೂ ಎರಡನೆಯದರಲ್ಲಿ ಎರಡು ಲಿಂಗವೂ ಬರುತ್ತದೆ.

೨೪೬. ಮೊದಲನೆಯದರಲ್ಲಿ ಭದ್ರವು ಒಂಭತ್ತು ಮನೆಗಳದು. ಎರಡನೆಯದರಲ್ಲಿ ಆರು ಮನೆಗಳ ಭದ್ರವು ಬರುತ್ತದೆ. ಪರಿಧಿಯ ಒಳಗಡೆ ಮೂವತ್ತು ಮೂರು ಮನೆಗಳ ಪ್ರಮಾಣದಲ್ಲಿ ಒಂದು ಲಿಂಗವನ್ನು ಏರ್ಪಡಿಸಬೇಕು.

೨೪೭. ಬುಡವೂ ಕತ್ತಿನ ಭಾಗವೂ ಏಳೇಳು ಮನೆಗಳಿಂದ ಹುಟ್ಟುತ್ತದೆ. ಎಂದರೆ ಹದಿನಾಲ್ಕು ಮನೆಗಳು ಒಂದೊಂದಕ್ಕೂ ಇರುತ್ತದೆ. ತಲೆಯು ಆರು ಮನೆಗಳಿಂದ ಹುಟ್ಟುತ್ತದೆ. ಪಾರ್ಶ್ವವು ಐದೈದು ಮನೆಗಳಿಂದಲೂ ಸೊಂಟ ಭಾಗವು ಮೂರು ಮನೆಗಳಿಂದಲೂ ಹುಟ್ಟುತ್ತದೆ.

೨೪೮. ಈ ಲಿಂಗದ ನಾಲ್ಕು ಕಡೆಗಳಿಗೂ ನಾಲ್ಕು ಭದ್ರಗಳು ಉಂಟಾಗುತ್ತವೆ. ಅವು ಇಪ್ಪತ್ತೊಂಭತ್ತು ಮನೆಯ ಪ್ರಮಾಣದಲ್ಲಿರುತ್ತವೆ. ಇಲ್ಲಿ ಬರುವ ಚಂದ್ರವು ಮೂರು ಮನೆಗಳದಾಗಿಯೂ ಶೃಂಖಲೆಯು ಎರಡು ಮನೆಗಳದಾಗಿಯೂ ಇರುತ್ತದೆ.

ವಲ್ಲಿರೀ ಪಂಚಪಾದಾ ಸ್ಯಾಚ್ಛೃಂಖಲಾನ್ಯಾ ತ್ರಿಪಾದಜಾ ।
ಲಿಂಗಸ್ಕಂಧಗತಾ ಕೋಷ್ಠಾಃ ಪೀತಾಃ ಕಾರ್ಯಾ ಶುಭಾವಹಾಃ ॥ ೨೪೯ ॥

ಅನ್ಯಾನಿ ಶೇಷಭೂತಾನಿ ಪದಾನಿ ಪೂರಯೇದ್ಧಿಯಾ ।
ಯಥೇಚ್ಛಂ ವೈ ಪರಿಧಯಃ ಕಾರ್ಯಾ ವೇದಮಿತಾ ಬಹಿಃ ॥ ೨೫೦ ॥

ಪಂಚವಿಂಶಚ್ಛಿವೈರೇತೌ ಪ್ರಕಾರೌ ದ್ವೌ ಮಯೋದಿತೌ ।
ಅತಿಪ್ರಿಯೌ ಶಂಕರಾಯ ಜ್ಞಾತವ್ಯೌ ದ್ವಿಜಸತ್ತಮ ॥ ೨೫೧ ॥

ನಮಸ್ಕೃತ್ವಾ ಮಹದ್ಬ್ರಹ್ಮ ಗುರುಪಾದಸರೋರುಹಂ ।
ಸಂಸಾರತಾರಕಂ ವಕ್ಷ್ಯೇ ಕಥಾಮಧ್ಯಾತ್ಮಸಂಗ್ರಹಾಂ ॥ ೨೫೨ ॥

ಪಂಚವಿಂಶತಿಸಂಖ್ಯಾಕಲಿಂಗತೋಭದ್ರಮೀಪ್ಸಿತಂ ।
ಕೇನಚಿತ್ಕಲ್ಪಿತಂ ತತ್ಕಿಂ ತತ್ತ್ವಂ ತತ್ಕಥ್ಯತೇ ಸ್ಫುಟಂ ॥ ೨೫೩ ॥

---

೨೪೯ ಐದು ಮನೆಗಳ ವಲ್ಲಿಯೂ ಮತ್ತೊಂದು ಶೃಂಖಲೆಯು ಮೂರು ಮನೆಗಳದಾಗಿಯೂ ಇರುತ್ತದೆ. ಲಿಂಗದ ಸ್ಕಂಧ ಪ್ರದೇಶದ ಮನೆಗಳನ್ನು ಅರಿಶಿನ ಬಣ್ಣದಿಂದ ತುಂಬಿರಬೇಕು.

೨೫೦. ಉಳಿದ ಮನೆಗಳನ್ನು ಬುದ್ಧಿವಂತಿಕೆಯಿಂದ ಸ್ಥಳಾನುಗುಣವಾಗಿ ತುಂಬಬೇಕು. ಮತ್ತು ಈ ಭದ್ರದ ನಾಲ್ಕು ದಿಕ್ಕಿಗೂ ಹೊರಗಡೆಗೆ ನಾಲ್ಕು ಪರಿಧಿಗಳನ್ನೂ ರಚಿಸಬೇಕು.

೨೫೧. ಇಪ್ಪತ್ತೈದು ಲಿಂಗಗಳು ಬರುವ ಈ ಎರಡು ಪ್ರಕಾರಗಳನ್ನೂ ಹೇಳಿದ್ದೇನೆ. ಇವು ಶಿವನಿಗೆ ಬಹು ಪ್ರಿಯವೆಂಬುದಾಗಿ ನೀನು ಖಂಡಿತವಾಗಿಯೂ ತಿಳಿ.

೨೫೨. ಆ ಪರ ಬ್ರಹ್ಮನಿಗೂ ಗುರುವಿನ ಪಾದಗಳಿಗೂ ನಮಸ್ಕರಿಸಿ ಸಂಸಾರದಿಂದ ಪಾರು ಮಾಡುವ ಆಧ್ಯಾತ್ಮ ತತ್ವವನ್ನು ಹೇಳುತ್ತೇನೆ.

೨೫೩. ಪಂಚವಿಂಶತಿ ಎಂದರೆ ಇಪ್ಪತ್ತೈದು ಸಂಖ್ಯೆಗಳುಳ್ಳ ಲಿಂಗತೋಭದ್ರವನ್ನು ಮಾಡಿಕೊಳ್ಳಲು ಅಪೇಕ್ಷೆಪಡುವುದು ಏತಕ್ಕೆಂದರೆ ಅದರ ತತ್ವವನ್ನು ಹೇಳುತ್ತೇನೆ, ಕೇಳು.

ಲಿಂಗತೋಭದ್ರಮಿತ್ಯೇತನ್ನಿರುಕ್ತಮರ್ಥವದ್ಭವೇತ್ ।
ಲಿಂಗಂ ಗಮಕಮಿತ್ಯಾಹುರ್ಜ್ಞಾನಂ ಜ್ಞಾಪಕಮಿತ್ಯಪಿ ॥ ೨೫೪ ॥

ಪೀಯೂಷವಾಪನಾದ್ವಾಪೀ ಭದ್ರಂ ಭದ್ರಸಮೀಕ್ಷಣಾತ್ ।
ಸಾರ್ಥ್ಯಶಬ್ದಾಃ ಪ್ರಸಿದ್ಧಂ ಹಿ ವರ್ತಂತೇ ಸಾಧನೇಷ್ವಪಿ ॥ ೨೫೫ ॥

ತಸ್ಮಿನ್ ಶುಕ್ಲಮುತನೀಲಮಿತ್ಯಾದಿಶ್ರುತಿಶಾಸನಾತ್ ।
ವರ್ಣಾ ಅಪಿ ಪರಸ್ಮಿಂಸ್ತೂಪಾಸನಾರ್ಥಂ ಭವಂತಿ ಹಿ ॥ ೨೫೬ ॥

ತದ್ಬ್ರಹ್ಮ ಪರಮಂ ಲಿಂಗಂಮಂಗಳಂ ಭದ್ರವಾಚಕಂ ।
ಮಂಗಳಂ ಮಂಗಳಾನಾಂ ಚ ಶಿವಂ ಶಾಂತಮಿತಿಸ್ಫುಟಂ ॥ ೨೫೭ ॥

---

೨೫೪. ಲಿಂಗತೋ ಭದ್ರವೆಂದು ಹೆಸರನ್ನು ಇಟ್ಟಿರುತ್ತದೆಯಷ್ಟೆ ಆ ಹೆಸರು ಅರ್ಥವತ್ತಾಗಿ ಇರುತ್ತದೆ. ಲಿಂಗವೆಂದರೆ ಗಮಕವೆಂದೂ ಜ್ಞಾನವೆಂದೂ ಜ್ಞಾಪಕವೆಂದೂ ಅರ್ಥವಾಗುತ್ತದೆ.

೨೫೫. ಪೀಯೂಷವೆಂದರೆ ಅಮೃತವನ್ನೂ ವಾಪನವೆಂದರೆ ತುಂಬಿರುವುದರಿಂದ ವಾಪಿಯೆಂದೂ ಭದ್ರವೆಂದರೆ ಮಂಗಳವನ್ನು ಕಾಣುವುದರಿಂದ ಭದ್ರವೆಂದೂ ಸಾರ್ಥಕವಾದ ಹೆಸರುಗಳು ಬಂದಿವೆ. ಈ ರೀತಿಯಾದ ಅರ್ಥಕೊಡುವ ಶಬ್ದಗಳು ನಾವು ಪೂಜಿಸುವ ಸಾಧನವಾದ ಈ ಭದ್ರದಲ್ಲಿರುತ್ತದೆ.

೨೫೬. ಆದರಲ್ಲಿ ಬಿಳುಪು ಅಥವಾ ನೀಲ ಎಂದು ಶ್ರುತಿಯಲ್ಲಿಯೇ ಹೇಳಿರುವುದರಿಂದ ಬಣ್ಣಕ್ಕೂ ಕೂಡ ಆ ಲಿಂಗದಲ್ಲಿ ಉಪಾಸನೆ ಮಾಡುವುದಕ್ಕೆ ಇರಬೇಕೆಂದು ಹೇಳಿದಂತೆಯೇ ಆಗಿದೆ.

೨೫೭. ಆ ಲಿಂಗವೇ ಪರಬ್ರಹ್ಮವು. ಅದೇ ಮಂಗಳವು. ಮಂಗಳ ವಾಚಕವಾಗಿಯೂ ಇರುತ್ತದೆ. ಮಂಗಳವೂ ಅಲ್ಲದೆ ಮಂಗಳಗಳಿಗೂ ಮಂಗಳವು. ಇದೇ ಹೆಸರುಳ್ಳ ಅರ್ಥದಿಂದ ಶಿವನೆಂದೂ ಶಾಂತವೆಂದೂ ಹೇಳಲು ಬರುತ್ತದೆ.

ಲೀಯಂತೇ ಯತ್ರಭೂತಾನಿರ್ಗಚ್ಛಂತಿ ಯತಃ ಪುನಃ ।
ತೇನ ಲಿಂಗಂ ಪರಂ ವ್ಯೋಮ ನಿಷ್ಕಲಃ ಪರಮಶ್ಶಿವಃ ॥ ೨೫೮ ॥

ಸತ್ವಂ ರಜಸ್ತಮೋವರ್ಣತ್ರಯಂ ಮಾಯಾಸು ವೇಷ್ಟಿತಂ ।
ಮನಶ್ಚಂದ್ರೋ ಮಹಾಮೋಹಶ್ಶೃಂಖಲಾ ಸ್ನೇಹವಲ್ಲಿಕಾ ॥ ೨೫೯ ॥

ತೈರಿದಂ ಸರ್ವತಸ್ತತ್ತ್ವಂ ವೇಷ್ಟಿತಂ ಘಟವ್ಯೋಮವತ್ ।
ತಿರ್ಯಗೂರ್ಧ್ವಮಹಂಕಾರಃ ಪ್ರಸೃತಃ ಪಟತಂತುವತ್ ॥ ೨೬೦ ॥

ತೇನ ಸ್ಥಾನಾನಿ ಜಾತಾನಿ ಕಕ್ಷಾಣಾಂ ಚತುರಷ್ಟ ಹಿ ।
ಗುಣಾಸ್ತೇಷು ಪ್ರಪೂರ್ಯಂತೇ ಯಥಾ ಚಿತ್ರಪಟೋ ಭವೇತ್ ॥ ೨೬೧ ॥

---

೨೫೮. ಯಾವ ಪರಮಾತ್ಮನಲ್ಲಿ ಭೂತಗಳು ಲೀನವಾಗಿದ್ದು ಮತ್ತೆ ಹೊರಗೆಬರುತ್ತವೆಯೋ ಆದ್ದರಿಂದಲೇ ಆ ಬ್ರಹ್ಮನಿಗೆ ಲಿಂಗವೆಂಬ ಹೆಸರು ಬಂದಿದೆ. ಇದೇ ನಿಷ್ಕಳನೂ ಪರಮನೂ ಶಿವನೂ ಆಗಿದೆ.

೨೫೯. ಮಾಯೆಗೆ ಸತ್ವ ರಜ ಸ್ತಮೋಗುಣಗಳೇ ಆಧಾರ. ಆದ್ದರಿಂದಲೇ ಅದು ಪ್ರಕಾಶಿಸುತ್ತಿದೆ. ಚಂದ್ರನೆಂಬುದೇ ಮನಸ್ಸು. ಶೃಂಖಲೆ ಯೆಂಬುದೇ ಮಹಾ ಮೋಹ. ವಲ್ಲಿ ಎಂಬುದೇ ಸ್ನೇಹವು. ಇವುಗಳಿಂದಲೇ ಎಲ್ಲವೂ ಕೂಡಿದೆ. ಇದಕ್ಕೆ ಉದಾಹರಣೆಯಾಗಿ ಲೋಕದಲ್ಲಿ ಘಟವೇ ಮುಂತಾದುವನ್ನು ಕಾಣ ಬಹುದು.

೨೬೦. ಅಹಂಕಾರವು ಮೇಲೂ ಕೆಳಗೂ ಎಲ್ಲಾ ಕಡೆಯೂ ಹರಡಿಕೊಂಡಿವೆ. ಇದು ಬಟ್ಟೆಗೆ ತಂತುಗಳಿರುವಂತೆ ಆವರಿಸಿಕೊಂಡಿರುವುದು. ಇದರಿಂದ ಲೋಕದಲ್ಲಿ ಎಂಭತ್ತನಾಲ್ಕು ಲಕ್ಷದ ರೀತಿಯಲ್ಲಿ ಪ್ರಾಣಿಗಳವೆ ಎಂದಂತಾಯಿತು. ಲೋಕದಲ್ಲಿ ಪರಬ್ರಹ್ಮವು ಎಂಭತ್ತು ನಾಲ್ಕು ಲಕ್ಷ ಜಾತಿಯ ಪ್ರಾಣಿಗಳಲ್ಲಿ ಹೇಗೆ ತೋರುತ್ತಿರುವುದೋ ಹಾಗೆ ಈ ಭದ್ರವು ಎಂಭತ್ತ ನಾಲ್ಕು ಲಕ್ಷದ ರೀತಿಯಲ್ಲಿ ರುವುದೆಂರ್ಥವು.) ಬಟ್ಟೆಗಳ ನೂಲಿಗೆ ಬಣ್ಣವನ್ನು ಹಾಕಿದರೆ ಅದು ಚಿತ್ರಪಟ ನಾಗುವಂತೆ ಈ ಬ್ರಹ್ಮನಿಗೂ ಗುಣಗಳು ಸೇರಿಕೊಂಡು ನಾನಾ ಬಗೆಯಾಗಿ ಕಾಣುತ್ತವೆ.

೨೬೧-೨೬೩ ಮೊದಲು ಬ್ರಹ್ಮತತ್ವವು ಒಂದೇ ಇದ್ದುದು. ಆ ತತ್ವದ ಜೊತೆಗೆ ಮಾಯೆಯು ಸೇರಿದುದರಿಂದ ತನಗೆ ಬಹು ಪ್ರಕಾರವಾಗಿ ಆಗಬೇಕೆಂಬ

ಆಸೀದೇಕಂ ಪುರಾ ತತ್ವಂ ತಸ್ಮಿನ್ ಮಾಯಾನಿಯೋಗತಃ ।
ಕಾಮೋ ಃಬಹುಧಾ ಭವತಿ ಭವೇಯಮಿತಿ ಸಾದರಂ ॥ ೨೬೨ ॥

ಏಕಸ್ಸನ್ನಿತಿ ಚಾತ್ಮಾನಂ ಸ್ವಯಮಕುರುತೇತಿ ಚ ।
ಇಂದ್ರೋಮಾಯಾಭಿರಿತಿ ಚ ಏಕಧಾ ಬಹುಧೇತಿ ಹಿ ॥ ೨೬೩ ॥

ಊಚುಶ್ಚ ಶ್ರುತಯಸ್ಸಾರ್ಥ್ಯೋ ಬ್ರಹ್ಮಣೋ ಭವನಂ ಪ್ರತಿ ।
ತಜ್ಜಲಾನಿತಿ ಚ ಶುತ್ಯಾ ನ ತತೋಽಸ್ತಿ ಹಿ ಕಿಂಚನ ॥ ೨೬೪ ॥

ಯದ್ಯಪ್ಯೇವಂ ತಥಾಪ್ಯಸ್ಮಿನ್ನ ಸ್ಥಿತಿರ್ಮೋಹತೋ ಭವೇತ್ ।
ಯಾವದಹಂಕೃತೋಭಾವಃ ತಾವತ್ಸಂಸಾರ ಆಯಾತಃ ॥ ೨೬೫ ॥

ಭಿನ್ನೇಹಮಿತಿಹೃದ್ಗ್ರಂಥೌ ನ ಸಂಸಾರಸ್ತದಾಶ್ರಯಃ ।
ಗತೇ ತೇಜಸ್ಯಂಬು ಯಾತಿ ಸ್ವಪ್ನೋ ನಿದ್ರಾನುಗೋ ಯಥಾ ॥ ೨೬೬ ॥

ಇಚ್ಛೆಯುಂಟಾಗಿ ಬಹು ಪ್ರಕಾರವಾಗಿ ಆಗುತ್ತದೆ. ಇದಕ್ಕೆ ಬಹುದಾಭವೆಯಂ ಏಕಸ್ಸನ್, ಆತ್ಮಾನಂ ಸ್ವಯಮಕುರುತ, 'ಇಂದ್ರೋಮಾಯಾಭಿಃ' ಏಕಧಾ ಬಹುದಾ, ಲಂಬ ಶ್ರುತಿಗಳೇ ಪ್ರಮಾಣಗಳು.

೨೬೪. ಈ ಶ್ರುತಿಗಳು ಬ್ರಹ್ಮನು ಬಹು ಬಗೆಯಾಗಿ ಆಗುತ್ತಾನೆ. ಎಂಬುದನ್ನು ವಿವರಿಸಿ ಹೇಳಿವೆ. "ತಜ್ಜಲಾನ್, ನತತೋಽಸ್ತಿಹಿಕಿಂಚನ, ಎಂಬ ಶ್ರುತಿಗಳೂ ಪರಬ್ರಹ್ಮನ ನಾನಾತ್ಮವನ್ನೇ ವಿವರಿಸಿವೆ.

೨೬೫. ಬ್ರಹ್ಮವು ಈ ಶ್ರುತಿಯಲ್ಲಿ ಹೇಳಿರುವಂತೆ ಮಾಯಾ ಯೋಗದಿಂದ ಬಹುವಾಗಿದ್ದರೂ ಆ ಬಹುವಾಗಿರುವಿಕೆಯು ಮೋಹ ಮೂಲಕವಾದುದು. ಅಹಂಕಾರವಿರುವವರೆಗೂ ಈ ಸಂಸಾರವು ತಪ್ಪದೆ ಇದ್ದೇ ಇರುತ್ತದೆ. ಬಂದೇ ಬರುತ್ತದೆ.

೨೬೬. ಆ ಸ್ವಾಮಿಯು ಇಂಥವನೆಂದು ತಿಳಿದ ಮೇಲೆ ಹೃದಯದ ಅಜ್ಞಾನವು ಹೋಗಿ ಸಂಶಯಗಳೆಲ್ಲವೂ ಕೂಡ ಹೋಗುತ್ತವೆ ಆಗ ಈ ಅಜ್ಞಾನಾಶ್ರಯವಾದ ಸಂಸಾರವು ಇರುವುದಿಲ್ಲ. ಎಂದರೆ ಪರಮಾತ್ಮನನ್ನು ತಿಳಿದವನು ಹುಟ್ಟು ಸಾವುಗಳನ್ನೂ ತಪ್ಪಿಸಿಕೊಂಡು ಪರಮಾತ್ಮನಲ್ಲಿ ಸೇರಿ ಹೋಗುತ್ತಾನೆ. ಬಿಸಿಲ್ಗುದುರೆಯಲ್ಲಿ ನೀರು ಕಾಣುತ್ತಿದ್ದು ಬಿಸಿಲು ಹೋದ ಮೇಲೆ ನೀರು ಹೋಗುವುದು. ನಿದ್ರೆಯು ಹೋದಮೇಲೆ ಸ್ವಪ್ನವೂ ಹೋಗುವುದು. ಎಂದರೆ ಬಿಸಿಲನ್ನು ಶ್ರಯಿಸಿಕೊಂಡು ನೀರೂ ನಿದ್ದೆಯನ್ನೂ ಆಶ್ರಯಿಸಿಕೊಂಡು ಸ್ವಪ್ನವೂ ಬಂದಿರುವುವು. ಕಾರಣ ಭೂತಗಳಾದ ಬಿಸಿಲು ನಿದ್ದೆಗಳು ಹೋದ ಮೇಲೆ ಅವುಹೋಗುವುವು. ಅಂತೆಯೇ ಅಜ್ಞಾನ ಕಾರಣಗಳಾದ ಪದಾರ್ಥಗಳು ನಾಶವಾದರೆ ಬ್ರಹ್ಮವು ತಿಳಿಯುತ್ತದೆ.

ಏತದರ್ಥಂ ವಿರಕ್ತಸ್ಸನ್ ಜಿಜ್ಞಾಸುಃ ಶ್ರೇಯಮುತ್ತಮಂ ।
ಆಶ್ರಯೇತ್ಸದ್ಗುರುಂ ಸಾಕ್ಷಾದ್ಬ್ರಹ್ಮಭೂತಂ ನಿರಾಮಯಂ ॥ ೨೬೭ ॥

ತೇನ ಪ್ರಬೋಧಿತಸ್ಸಿದ್ಧಿಮಾತ್ಮಾನಂ ಸಂತಮಾತ್ಮನಿ ।
ಜಾನೀಯಾದ್ಬ್ರಹ್ಮಭಾವೇನ ಜಗಚ್ಚಿತ್ರಂ ಸ್ಥಿತಂ ಸದಾ ॥ ೨೬೮ ॥

ಈಶ್ವರಸ್ಸರ್ವಭೂತಾನಾಂ ಹೃದ್ದೇಶೇ ಸಂಸ್ಥಿತೋಽಮಲಃ
ಏಕೋಽದ್ವಿತೀಯಃ ಪರಮಃ ನಾಂತಃ ಪ್ರಜ್ಞಾದಿಲಕ್ಷಣಃ ॥ ೨೬೯ ॥

ಅಕ್ಷರಸ್ಸಚ್ಚಿದಾನಂದೋಽಮರೋಽಜರ ಉತ್ತಮಃ ।
ನಿರ್ವಿಕಾರೋನಿರಾಕಾರೋ ನಿರಾಮಯ ಉದೀರಿತಃ ॥ ೨೭೦ ॥

---

೨೬೭. ಇದಕ್ಕೋಸ್ಕರವೇ ಮನುಷ್ಯನು ವಿರಕ್ತನಾಗಿ ತನಗೆ ಬೇಕಾದ ಉತ್ತಮ ಶ್ರೇಯಸ್ಸನ್ನೂ ಚರ್ಚಿಸುತ್ತಾ ಅದರಲ್ಲಿಯೇ ಆಸೆಯುಳ್ಳವನಾಗಿ ಬ್ರಹ್ಮಭೂತವಾದ ಸದ್ಗುರುವನ್ನು ಆಶ್ರಯಿಸಬೇಕು.

೨೬೮. ಆ ಗುರುವಿನ ಉಪದೇಶದಿಂದ ಸಿದ್ಧಿಯನ್ನು ಹೊಂದಿ ತನ್ನಲಿರುವ ಆತ್ಮನನ್ನು ತಿಳಿಯಬೇಕು. ಆಗ ತಾನೂ ಬ್ರಹ್ಮಭೂತನಾಗಿ ಜಗತ್ತಿನ ರೂಪದಲ್ಲಿಯೂ ಚಿದ್ರೂಪದಲ್ಲಿಯೂ ಇರುವ ಆ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

೨೬೯. ಈಶ್ವರನಾದ ಆ ಪರಮಾತ್ಮನು ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ಇದ್ದುಕೊಂಡಿರುವನು. ಅವನು ನಿರ್ಮಲನು, ಏಕನು, ಅವನಂತಿರುವವನು ಮತ್ತೊಬ್ಬನಿಲ್ಲ. ಉತ್ಕೃಷ್ಟನು. ಅವನಿಗೆ ಕೊನೆಯೇ ಇಲ್ಲ. ಅವನಿಗೆ ಸರ್ವಜ್ಞಾನವೇ ಲಕ್ಷಣವು.

೨೭೦. ಅವನು ನಾಶ ರಹಿತನು. ಸದ್ರೂಪನೂ, ಚಿದ್ರೂಪನೂ ಆನಂದರೂಪನೂ ಆಗಿರುವನು. ಸಾಯುವವನಲ್ಲ. ಮುಪ್ಪನ್ನೂ ಹೊಂದತಕ್ಕವನಲ್ಲ. ಎಲ್ಲರಿಗಿಂತಲೂ ಶ್ರೇಷ್ಠನು. ಅವನಿಗೆ ವಿಕಾರಾದಿಗಳಿಲ್ಲ. ಅವರಿಗೆ ಆಕಾರವೂ ಇಲ್ಲ. ರೋಗವೂ ಇಲ್ಲ.

ಅಲಿಂಗೋಽರೂಪ ಏವಾಸಾವೇಕತ್ವಗಣನಾತ್ಪರಃ ।
ಮಾಯಯಾ ಲಿಂಗರೂಪೀವ ಹ್ಯೇಕ ಇತ್ಯಭಿಧೀಯತೇ || ೨೭೧ ||

ಪುರುಷಶ್ಚ ಪ್ರಕೃತಿಶ್ಚ ವ್ಯಕ್ತೋಽಹಂಕಾರ ಏವ ಚ ।
ಚತುರ್ಲಿಂಗಾನಿ ಪ್ರೋಕ್ತಾನಿ ಲಕ್ಷ್ಯಕಾನಿ ಶಿವಸ್ಯ ಚ || ೨೭೨ ||

ಕಾರ್ಯಕಾರಣಭೂತಾನಾಮೇಕಮೇವ ಹಿ ಪಂಚಕಂ ।
ಸತ್ತ್ವಂ ರಜಸ್ತಮ ಇತಿ ವಸುಲಿಂಗಾನಿ ಚಾತ್ಮನಃ || ೨೭೩ ||

ದಶೇಂದ್ರಿಯಾಣಿ ಚ ಮನೋ ಬುದ್ಧಿರ್ದ್ವಾದಶಕಂ ಸ್ಮೃತಂ ।
ಲಿಂಗಾನಾಂ ಪರಮೇಶಸ್ಯ ವಿವೇಕೋಽತ್ರ ಪ್ರತಿಷ್ಠಿತಃ || ೨೭೪ ||

---

೨೭೧. ಆತನ ಆಕಾರವು ಇಂತಹುದೆಂದು ಹೇಳಲು ಸಾಧ್ಯವಿಲ್ಲ. ಅವನಿಗೆ ರೂಪವೇ ಇಲ್ಲ. ಅವನನ್ನು ಒಂದು ಎಂದೆಣಿಸಿದರೆ ಎರಡು ಎಂದೆಣಿಸಲು ಅವನಂತಹವನು ಮತ್ತೊಬ್ಬನಿಲ್ಲ. ಅವನು ಮಾಯೆಯನ್ನಾಶ್ರಯಿಸಿದಾಗ ಅನೇಕ ಅವತಾರಗಳನ್ನು ಹೊಂದುತ್ತಾನೆ. ಶುದ್ಧನಾಗಿದ್ದಾಗ ಏಕನೇ ಆಗಿರುವನು.

೨೭೨-೨೭೩. ಅಂತಹ ಪರಮಾತ್ಮನಿಗೆ ಪುರುಷನೆಂದೂ ಪ್ರಕೃತಿಯೆಂದೂ ವ್ಯಕ್ತವೆಂದೂ ಅಹಂಕಾರವೆಂದೂ ಲಕ್ಷ್ಯಕಗಳು ನಾಲ್ಕೆಂದು ಹೇಳಲ್ಪಟ್ಟಿವೆ. ಈ ರೀತಿಯಾಗಿ ಕಾರ್ಯಕಾರಣಭೂತವಾದುದಕ್ಕೆ ಐದು ಲಿಂಗಗಳು, ಇವು ಪಂಚಾತ್ಮಕವಾದ ಒಂದೇ ಲಿಂಗವಾಗಿರುವುದು ಎಂದೇ ಭಾವಿಸಲ್ಪಟ್ಟಿದೆ. ಆಲಕ್ಷ್ಯಕವಾದ ಐದು ಲಿಂಗಗಳ ಜೊತೆಗೆ ಸತ್ವರಜಸ್ತಮೋಗುಣಗಳು ಸೇರಿದರೆ ಆತ್ಮನಿಗೆ ಎಂಟು ಸ್ವರೂಪವು ಏರ್ಪಡುತ್ತದೆ.

೨೭೪. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು ಬುದ್ಧಿ, ಎಂಬುವು ಎರಡು, ಇವು ಸೇರಿದರೆ ಹನ್ನೆರಡು. ಈ ಹನ್ನೆರಡು ಲಿಂಗವೂ ಆ ಪರಮಾತ್ಮನಿಗೆ ಲಿಂಗ ರೂಪಗಳೆಂದು ಹೇಳಲ್ಪಟ್ಟಿವೆ.

ಇತಿಕಾರಣಲಿಂಗಾನಿ ಕಾರ್ಯಲಿಂಗಾನ್ಯನೇಕಶಃ ।
ಶತಂ ಸ ಹಸ್ರಮಯುತಂಕೋಟಿಶಸ್ಸಂತಿ ಸಂಖ್ಯಯಾ ॥ ೨೭೫ ॥

ಸರ್ವಾಣಿ ಜ್ಞಾಪಕಾನ್ಯೇವ ಶಿವಸ್ಯ ಪರಮಾತ್ಮನಃ ।
ವಸ್ತುತಸ್ತು ಪರಂ ತತ್ತ್ವಂ ಸಜಾತೀಯಾದಿಹೀನಕಂ ॥ ೨೭೬ ॥

ವಿಚಾರೇ ವರ್ತಮಾನೇ ತು ತಂತ್ವಾದ್ಯೇವ ಪಟಾದಿ ನ ।
ಏವಂ ಸರ್ವಂ ಶಿವೋ ಭಾತಿ ನ ಸರ್ವಂ ಶಿವ ಏವ ಹಿ ॥ ೧೭೭ ॥

ಬಿಂದುನಾದಮಕಾರಾದಿ ಮಾತ್ರಾತ್ರಯಮುದೀರಿತಃ ।
ಆತ್ಮೈವ ಪಂಚಧಾ ಸಾಕ್ಷಾತ್ತಥಾ ಬ್ರಹ್ಮೇಶ್ವರೋ ಹರಿಃ ॥ ೨೭೮ ॥

---

೨೭೫. ಈ ರೀತಿಯಾಗಿ ಆತ್ಮನ ಕಾರಣ ಲಿಂಗಗಳನ್ನು ಹೇಳಿದ್ದಾಯಿತು. ಮುಂದೆ ಕಾರ್ಯಲಿಂಗಗಳೇನೆಂದು ವಿಚಾರಿಸಿದರೆ ಅವು ನೂರು. ಸಾವಿರ, ಹತ್ತು ಸಾವಿರ, ಲಕ್ಷ, ಕೋಟಿ ಈ ರೀತಿಯಾಗಿ ಅನೇಕ ಸಂಖ್ಯೆಗಳಲ್ಲಿವೆ.

೨೭೬. ಇವೆಲ್ಲವೂ ಪರಮಾತ್ಮನಾದ ಶಿವನಿಗೆ ಜ್ಞಾಪಕ ಲಿಂಗಗಳು. ಸರಿಯಾದ ಸ್ಥಿತಿಯಲ್ಲಿ ವಿಚಾರ ಮಾಡಿದರೆ ಈ ಪರಮಾತ್ಮ ತತ್ವವು ಸಜಾತೀಯ ವಿಜಾತೀಯ ಸ್ವಗತ ಭೇದಗಳಿಲ್ಲದೆ ಒಂದೇ ಆಗಿರುವುದು.

೨೭೭. ನಾವು ಸರಿಯಾಗಿ ವಿಚಾರ ಮಾಡುತ್ತ ಹೋದರೆ ಪಂಚೆ ಎನಿಸಿಕೊಂಡ ಪದಾರ್ಥವು ನೂಲಿನ ತಂತುಗಳೇ ಆಗಿರುವುದು. ಒಂದು ವಿಧವಾದ ನೂಲಿನ ಸೇರುವಿಕೆಯನ್ನು ಪಂಚೆ ಎಂದು ಕರೆಯುತ್ತೇವೆ. ಅಲ್ಲಿ ಪಂಚೆಯು ಬೇರೆಯಿಲ್ಲ. ಅವೆಲ್ಲವೂ ನೂಲೇನೇ. ಅದೇ ರೀತಿಯಾಗಿ ಎಲ್ಲವೂ ಶಿವನೇ. ಶಿವನೇ ಎಲ್ಲವೂ ಆಗಿ ಪ್ರಕಾಶಿಸುತ್ತಿರುವನು.

೨೭೮-೨೮೦. ಬಿಂದು, ನಾದ, ಅಕಾರ, ಉಕಾರ, ಮಕಾರ, ರೂಪವಾದ ಓಂ ಎಂಬ ಪಂಚಾಯತನ ರೂಪವಾಗಿ ಆತ್ಮನನ್ನು ಹೇಳಿದ್ದಾರೆ. ಈ ಓಂಕಾರವು ಮೂರು ಮಾತ್ರೆಗಳುಳ್ಳದೆಂದೂ ಹೇಳಲ್ಪಟ್ಟಿದೆ. ಇದೇ ಆತ್ಮವು ಎಂದು ತಿಳಿಯಬೇಕು. ಈ ಐದು ರೀತಿಯಲ್ಲಿರುವ ಆತ್ಮನನ್ನು ನಾವು ಸಾಕ್ಷಾತ್ಕರಿಸಿ

ವಿಧಿರುದ್ರೌ ಪಂಚ ಪಂಚ ಸದ್ಯೋಜಾತಾದಿರೂಪಕಃ ।
ಶುದ್ಧೋ ಸಾಕ್ಷೀ ತಥಾ ಪ್ರಾಜ್ಞಸ್ತೇಜಸಾ ವಿಶ್ವ ಏವ ಚ ॥ ೨೭೯ ॥

ಸಚ್ಚಿತ್ಸುಖತ್ರಯಂ ನಾಮರೂಪೇ ಬ್ರಹ್ಮೈವಕೇವಲಂ ।
ಜಾತಂ ಪಂಚಾತ್ಮಕಂ ನಾನ್ಯತ್ ಬ್ರಹ್ಮೈವೇದಮಿತಿ ಶ್ರುತಿಃ ॥ ೨೮೦ ॥

ಪ್ರಧಾನಂ ಮಹದಹಂ ಚ ಪಂಚ ತನ್ಮಾತ್ರಕಂ ಚ ತತ್ ।
ಅಷ್ಟಪ್ರಕೃತಿರಿತ್ಯೇತಚ್ಛಾಸ್ತ್ರೇಷು ಪರಿಗೀಯತೇ ॥ ೨೮೧ ॥

ಅಷ್ಟಮೂರ್ತಿಸ್ವರೂಪಂ ಸದ್ಭವಶರ್ವಾದಿನಾಮಭೃತ್ ।
ವಸ್ವಷ್ಟಕಸ್ವರೂಪೇಣ ಮಾಯಯಾ ಭಾತಿ ಸರ್ವತಃ ॥ ೨೮೨ ॥

ಕೊಳ್ಳುತ್ತೇವೆ. ಆ ಸಾಕ್ಷಾತ್ಕಾರಕ್ಕೆ ಯೋಗ್ಯವಾದುದೇ ಬ್ರಹ್ಮನು, ಈಶ್ವರನು, ಹರಿಯು, ವಿಧಿಯು, ರುದ್ರನು ಎಂದು ಐದು ಬಗೆಯಾಗಿಯೂ ಸದ್ಯೋಜಾತ, ವಾಮದೇವ, ಅಘೋರ, ಈಶಾನ, ತತ್ಪುರುಷರೆಂಬ ಐದು ಲಿಂಗ ರೂಪವಾಗಿಯೂ ಇರುವುದು. ಈ ಐದೂ ಕೂಡ ಶುದ್ಧವು. ಸಾಕ್ಷಿಯು, ಪ್ರಾಜ್ಞವು, ತೇಜಸ್ಸವು, ವಿಶ್ವವು ಎಂದೆನಿಸಿಕೊಳ್ಳುತ್ತವೆ. ಸತ್ತು, ಚಿತ್ತು, ಸುಖವು, ನಾಮವು, ರೂಪವು, ಎಂದು ಹೆಸರನ್ನು ಹೊಂದುತ್ತವೆ. ಈ ರೀತಿಯಾಗಿ ಪಂಚಾತ್ಮಕವಾಗಿರುವುದೂ ಆ ಪರಬ್ರಹ್ಮವೇ. ಇದಕ್ಕೆ "ಬ್ರಹ್ಮೈವೇದಂ" ಎಂಬ ಶ್ರುತಿಯೇ ಪ್ರಮಾಣವು.

೨೮೧. ಪ್ರಧಾನ, ಮಹತ್ತು, ಅಹಂಕಾರ, ಪಂಚತನ್ಮಾತ್ರಗಳು ಎಂದೂ ಇದಕ್ಕೆ ಹೆಸರು. ಈ ಪ್ರಧಾನ, ಮಹತ್ತು, ಅಹಂಕಾರ, ಪಂಚತನ್ಮಾತ್ರಗಳನ್ನೇ ಅಷ್ಟ ಪ್ರಕೃತಿಗಳೆಂದೂ ಶಾಸ್ತ್ರಕಾರರು ಹೇಳುತ್ತಾರೆ.

೨೮೨. ಆ ಪರಮೇಶ್ವರನೇ ಅಷ್ಟಮೂರ್ತಿ ಸ್ವರೂಪವನ್ನು ಹೊಂದಿ ಭವ, ಶರ್ವ, ಎಂಬುವೇ ಮುಂತಾದ ನಾಮರೂಪಗಳನ್ನು ಹೊಂದುತ್ತಾನೆ. ಅಷ್ಟವಸುಗಳ ರೂಪವನ್ನೂ ಹೊಂದಿ ಆ ಪರಮಾತ್ಮನೇ ಮಾಯೆಯಿಂದ ಎಲ್ಲಾ ಕಡೆಯಲ್ಲಿಯೂ ಪ್ರಕಾಶಿಸುತ್ತಾನೆ.

ಜ್ಯೋತಿರ್ಲಿಂಗದ್ವಿಷಟ್ಕಂ ಚ ದ್ವಾದಶಾದಿತ್ಯನಾಮಕಂ ।
ದಶೇಂದ್ರಿಯಮನೋಬುದ್ಧಿನಾಮಭಿರ್ಭಾತಿ ಸತ್‌ಸ್ಫುಟಂ ॥ ೨೮೩ ॥

ದಶೇಂದ್ರಿಯಾಣಿ ಚ ಪ್ರಾಣಪಂಚಕಂ ಭೋಗ್ಯಪಂಚಕಂ ।
ಚೇತಶ್ಚತುಷ್ಕಮಾತ್ಮೈವ ಪಂಚವಿಂಶಮತೋ ಬುಧೈಃ ॥ ೨೮೪ ॥

ಲಕ್ಷಾಣಾಂ ಚತುರಾಶೀತಿ ಭೋಗಾಯತನವಿಸ್ತರಃ ।
ತಸ್ಯೈವ ಕಲ್ಪ್ಯತೇ ಭ್ರಾಂತ್ಯಾ ಕರ್ಮಭಿರ್ಗುಣಭೇದತಃ ॥ ೨೮೫ ॥

ಜಾಗ್ರತ್ಸ್ವಪ್ನಸುಷುಪ್ತಿಂ ಚ ಭೋಗಸ್ಥಾನಾನಿ ಚಾತ್ಮನಃ ।
ಭೋಗೋ ಭೋಕ್ತಾ ಭೋಜಯಿತಾ ಸರ್ವಂ ಬ್ರಹ್ಮೈವ ನ ಪೃಥಕ್ ।

---

೨೮೩. ಈ ಪರಮಾತ್ಮನು ಜ್ಯೋತಿರ್ಲಿಂಗವೇ ಮೊದಲಾದ ಆರು ಲಿಂಗಗಳಾಗಿಯೂ ಖಗ, ಸೂರ್ಯ ಮುಂತಾದ ಹನ್ನೆರಡು ಆದಿತ್ಯರ ರೂಪವಾಗಿಯೂ ಹತ್ತು ಇಂದ್ರಿಯಗಳು ಮನಸ್ಸು ಬುದ್ಧಿ ಎಂಬುದಾಗಿಯೂ ಹೆಸರನ್ನು ಹೊಂದುತ್ತಾನೆ. ಅಂತೆಯೇ ಬೇರೆಬೇರೆ ಹೆಸರಿನಿಂದ ಎಲ್ಲಾ ಕಡೆಯಲ್ಲಿಯೂ ಕಾಣುತ್ತಾನೆ.

೨೮೪. ಹತ್ತು ಇಂದ್ರಿಯಗಳು, ಐದು ಪ್ರಾಣಗಳು, ಭೋಗ್ಯ ಪಂಚಕವು ನಾಲ್ಕು ಅಂತಃಕರಣಗಳು ಆತ್ಮನು. ಒಟ್ಟು ಇಪ್ಪತ್ತೈದು ಆಗುತ್ತಾನೆ. ಈ ಪಂಚವಿಂಶತಿ ತತ್ವಗಳು ಆ ಪರಬ್ರಹ್ಮರೂಪವಾದ ಲಿಂಗವೇ ಆಗಿರುವುದು.

೨೮೫. ಆ ಪರಮಾತ್ಮನು ಭ್ರಾಂತಿಯೊಡಗೂಡಿ ಗುಣ ಕರ್ಮಗಳನ್ನು ಹೊಂದಿ ಎಂಭತ್ತುನಾಲ್ಕು ಲಕ್ಷ ಜಾತಿಯ ಜೀವರಾಶಿಗಳಲ್ಲಿಯೂ ಭೋಗಾಯತನ ಶರೀರವನ್ನು ಹೊಂದಿ ವಿಸ್ತಾರವಾಗುತ್ತಾನೆ.

೨೮೬. ಜಾಗ್ರದವಸ್ಥೆ, ಸುಷುಪ್ತ್ಯವಸ್ಥೆ, ಸ್ವಪ್ನಾವಸ್ಥೆ ಎಂಬುದಾಗಿ ಆ ಆತ್ಮನಿಗೆ ಮೂರು ಭೋಗಸ್ಥಾನಗಳಿರುವುವು. ಭೋಗವೂ, ಭೋಗಿಸುವವನೂ, ಭೋಗಿಸುವಂತೆ ಮಾಡುವವನೂ ಎಲ್ಲವೂ ಈ ಪರಪ್ರಬಹ್ಮನೇ ಆಗಿರುವನು.

ಅಧ್ಯಾತ್ಮಮಧಿದೈವಂ ಚ ಹ್ಯಧಿಭೂತಮಿತಿ ತ್ರಿಧಾ ।
ಸ್ಥೂಲಂ ಸೂಕ್ಷ್ಮಂ ಕಾರಣಂ ಚ ಸರ್ವಂ ಬ್ರಹ್ಮೈವ ನ ಪೃಥಕ್ ॥ ೨೮೭ ॥

ಏತತ್ಜ್ಞಾನಂ ಚ ಧ್ಯಾನಂ ಚ ವಿವೇಕಶ್ಚ ವಿರಾಗಿತಾ ।
ಜೀವೇಶ್ವರಜಗದ್ಭಾನಮಾತ್ಮೈವೇತಿ ನ ತು ಪೃಥಕ್ ॥ ೨೮೮ ॥

ಸರ್ವಂ ಖಲ್ವಿದಮಿತಿ ಚೇದಂ ಸರ್ವಂ ಯದಯಮಾತ್ಮಾ ।
ಬ್ರಹ್ಮೈವೇದಂ ಸರ್ವಮಿತಿ ಶ್ರುತಯಃ ಪ್ರವದಂತಿ ಹಿ ॥ ೨೮೯ ॥

ಅಯಂ ಸಿದ್ಧಸ್ಯ ವಿಷಯೋ ಯತ್ಸರ್ವಾತ್ಮನಿ ದರ್ಶನಂ ।
ಆರುರುಕ್ಷುಶ್ಶಾಂತದಾಂತಸ್ತಿತಿಕ್ಷುಸ್ಸರ್ವತೋ ಭವೇತ್ ॥ ೨೯೦ ॥

---

೨೮೭. ಅಧ್ಯಾತ್ಮ, ಅಧಿದೈವ, ಅಧಿಭೂತ, ಎಂಬ ಮೂರೂ ಬ್ರಹ್ಮವೇ ಆಗಿರುವುದು. ಸ್ಥೂಲ, ಸೂಕ್ಷ್ಮ, ಕಾರಣ ಇವೂ ಆ ಬ್ರಹ್ಮವೇ ಆಗಿರುವುವು. ಬೇರೆ ಯಾವುದೂ ಅಲ್ಲ.

೨೮೮. ಈ ಬ್ರಹ್ಮ ಜ್ಞಾನವು ಧ್ಯಾನವು, ವಿವೇಕ, ವೈರಾಗ್ಯ, ಜೀವ ಈಶ್ವರ ಜಗತ್ತು, ಭಾನ ಇವೆಲ್ಲವೂ ಕೂಡ ಆತ್ಮವೇ ಹೊರತು ಬೇರೆಯಲ್ಲ.

೨೮೯. "ಸರ್ವಂಖಲ್ವಿದಂಬ್ರಹ್ಮ, ಇದಗ್ ಸರ್ವಂ, ಯದಯಮಾತ್ಮಾ, ಬ್ರಹ್ಮೈವೇದಂಸರ್ವಂ" ಎಂದರೆ ಸರ್ವವೂ ಈ ಬ್ರಹ್ಮವೇ. ಸರ್ವವೂ ಇದೇನೆ, ಇದೆಲ್ಲವೂ ಆತ್ಮನೇ, ಈ ಎಲ್ಲವೂ ಬ್ರಹ್ಮವೇ ಎಂದು ಶ್ರುತಿಯು ಹೇಳಿದೆ.

೨೯೦. ಎಲ್ಲವೂ ಆತ್ಮವೆಂದು ಹೇಳಿರುವುದು ಯಾವುದುಂಟೋ ಅದು ವೇದದಲ್ಲಿ ವ್ಯಕ್ತವಾಗಿರುವ ಸಿದ್ಧವಾದ ವಿಷಯವೇ ಹೊರತು ಬೇರೆಯದಲ್ಲ. ಶಾಸ್ತ್ರ ಜ್ಞಾನವನ್ನು ಹೊಂದಿ ಎಲ್ಲವೂ ಬ್ರಹ್ಮವೆಂದೇ ತಿಳಿದಿರುವವನೂ ಆರುರುಕ್ಷುವೂ ಶಾಂತನೂ, ದಾಂತನೂ, ತಿತಿಕ್ಷುವೂ ಆಗಿರುವವನು ಬ್ರಹ್ಮಭೂತನಾಗುವನು.

ಸ್ವದೇಶೇ ಪ್ರಾಪ್ತಪುರುಷಂ ನಿಬಧ್ನಂತಿ ವಶೀಕೃತಂ ।
ತೇನಾಮೀ ವಿಷಯಾಃ ಪ್ರೋಕ್ತಾ ಮುಮುಕ್ಷುಸ್ತಾನ್ ವಿವರ್ಜಯೇತ್ ॥

ವಿವಿಕ್ತಸೇವೀ ಲಘ್ವಾಶೀತ್ಯಾದಿಭಾಗವತಂ ವಚಃ ।
ಕಿಂ ಬಹೂಕ್ತೇನ ವಿಧಿನಾ ಸಮಾಪ್ತಂ ಶಾಸ್ತ್ರಹೃದ್ಗತಃ ॥ ೨೯೨ ॥

ದತ್ತಂ ಮೇ ಗುರುಣಾ ಕಿಮಪ್ಯಜಡಮಾನಂದಾತ್ಮವಸ್ತ್ವದ್ವಯಂ ।
ಯತ್ಸೇವಾತ ಇದಂ ತದಾತ್ಮಕಮಹಂ ತ್ವಂ ಚಾಶು ನಷ್ಟಂ ತಮಃ ।
ಅಪೂರ್ಣಂ ಸಹಸೋದಿತಂ ಮಹಖುತಂ ಗಂಭೀರಮವ್ಯಾಕೃತಂ ।
ಯೇನಾಚ್ಛಾದಿತಮಿಂದುಸೂರ್ಯಪವನಂ ವಿಶ್ವಂ ವಿಶೇಷಾತ್ಮಕಮ್ ॥

---

೨೯೧. ಪ್ರಪಂಚದಲ್ಲಿ ಯಾವ ಯಾವ ಪದಾರ್ಥಗಳಿವೆಯೋ ಅವೆಲ್ಲವೂ ವಿಷಯಗಳೆನಿಸಿಕೊಳ್ಳುತ್ತವೆ. ಎಂದರೆ ಇಂದ್ರಿಯಗಳು ಒಂದಲ್ಲ ಒಂದು ವಿಧದಲ್ಲಿ ಆ ಪದಾರ್ಥವನ್ನು ಗ್ರಹಿಸುತ್ತವೆ. ಆ ಪದಾರ್ಥಗಳು ಮನುಷ್ಯನಿಗೆ ಆಸೆಯನ್ನು ಹುಟ್ಟಿಸಿ ಅವನ ಮನಸ್ಸನ್ನು ತನ್ನ ಅಧೀನವನ್ನಾಗಿ ಮಾಡಿಕೊಳ್ಳುತ್ತವೆ. ಎಂದರೆ ಮನುಷ್ಯನು ಪದಾರ್ಥಕ್ಕೆ ವಶನಾಗಿ ಹೋಗುತ್ತಾನೆ. ವಿಷಯಗಳನ್ನು ಎಂದರೆ ಇಂದ್ರಿಯಗಳನ್ನು ಎಳೆಯುವುದರಿಂದ ಆ ಪದಾರ್ಥಗಳಿಗೂ ವಿಷಯಗಳೆಂದು ಹೆಸರು. ಈ ರೀತಿಯಲ್ಲಿ ತನ್ನ ಸ್ವಾಧೀನವನ್ನಾಗಿ ಮಾಡಿಕೊಳ್ಳುವ ಆ ವಿಷಯಗಳನ್ನು ಮೋಕ್ಷಾರ್ಥಿಯು ಬಿಟ್ಟು ಬಿಡಬೇಕು.

೨೯೨. ವಿವಿಕ್ತ ಸೇವಿಯೆಂದರೆ ಜನಗಳ ಸಂಗವು ಇಲ್ಲದೆ ಹೆಣ್ಣು, ಮಣ್ಣು, ಹೊನ್ನುಗಳ ಆಸೆಯನ್ನು ಬಿಟ್ಟು ರಹಸ್ಯ ಸ್ಥಳದಲ್ಲಿ ಸಮಾಹಿತ ಮನಸ್ಸಿನಿಂದಿದ್ದುಕೊಂಡು ಮಿತ ಭೋಜನ ಮಾಡಿಕೊಂಡು ಬ್ರಹ್ಮಾಸಕ್ತನಾಗಿರಬೇಕೆಂದು ಭಾಗವತದಲ್ಲಿ ಹೇಳಿದೆ. ಬಹಳದಿಂದೇನು ಶಾಸ್ತ್ರಗಳೆಲ್ಲವನ್ನೂ ಆಲೋಚಿಸಿದರೂ ಇದೇ ವಿಷಯವು. ಹೇಳಲ್ಪಟ್ಟಿದೆ.

೨೯೩. ಎಲೈ ವಿಷ್ಣುದಾಸನೇ! ಗುರುವು ನನಗೆ ಒಂದು ವಿಧವಾದ ಎಂದರೆ ಜಡವಲ್ಲದ ಆನಂದಾತ್ಮಕವಾದ ಅದ್ವಯವಾದ ವಸ್ತುವನ್ನು ಉಪದೇಶಿಸಿದನು. ಅದರ ಸೇವೆಯಿಂದ ನಾನು ಅದರಲ್ಲಿಯೇ ಸೇರಿ ಹೋದೆನು. ನೀನೂ ಅದರಲ್ಲಿ ಸೇರಿ ಹೋಗಿದ್ದೀಯೆ. ನಮ್ಮಗಳ ಅಜ್ಞಾನವು ನಾಶವಾಯಿತು. ಆ ಪದಾರ್ಥವು ಎಲ್ಲಾ ಕಡೆಯಲ್ಲಿಯೂ ತುಂಬಿರುವುದು ಅದು ಸತ್ಯ ಮತ್ತು ತೇಜೋರೂಪವಾದುದು ಗಂಭೀರವಾದುದು. ಸ್ವಭಾವಸಿದ್ಧವಾದುದು. ಅದು ಚಂದ್ರ ಸೂರ್ಯ, ವಾಯು ಮುಂತಾದವರನ್ನೂ ಒಟ್ಟಿನಲ್ಲಿ ಪ್ರಪಂಚವೆಲ್ಲವನ್ನೂ ಆವರಿಸಿಕೊಂಡಿರುವುದು.

ತಿರ್ಯಗೂರ್ಧ್ವಗತಾ ರೇಖಾಶ್ಚತ್ವಾರಿಂಶತ್ಸಮಾಶ್ಶುಭಾಃ ।
ತಾಸಾಮಂಕತ್ರಿಕೋಷ್ಠೇಷು ಪರಿಧೀ ದ್ವೌ ಪ್ರಕಲ್ಪಯೇತ್ ॥ ೨೯೪ ॥

ಸಪ್ತಾಂತೇ ಪ್ರಥಮಾನ್ಯಾಸ್ತು ತತೋ ಬಾಣಾಂತಕೋಷ್ಠಕೇ ।
ತನ್ಮಧ್ಯೇ ರುದ್ರರುದ್ರೇಷು ಪದೇಷ್ವಷ್ಟಾದಶೈಃ ಪದೈಃ ॥ ೨೯೫ ॥

ಲಿಂಗಮೇಕಂ ಖಂಡವಾಪ್ಯೌ ತುರ್ಯತುರ್ಯ ಪದಾತ್ಮಕೇ ।
ಅಷ್ಟಕೋಷ್ಠಾತ್ಮಕಂ ಭದ್ರಂ ಪ್ರೋಕ್ತಂ ಪಾರ್ಶ್ವಚತುಷ್ಟಯೇ ॥ ೨೯೬ ॥

ಶೃಂಖಲಾ ದ್ವಿಪದಾ ಚಂದ್ರಸ್ತ್ರಿಪದೋ ವಲ್ಲರೀ ತಥಾ ।
ಪಂಚಪಾದೈಃ ಸ್ಮೃತಾ ವಲ್ಲ್ಯಃ ತ್ರಿಪಾರ್ಶ್ವೇಷು ನಿವೇಶಯೇತ್ ॥

ದ್ವಿತೀಯೇ ತ್ರಿಪದಶ್ಚಂದ್ರಃ ಶೃಂಖಲಾ ವೇದಪಾದಿಕಾ ।
ವಲ್ಲೀ ನವಪದಾ ಭದ್ರತ್ರಯಂ ನವಪದಾತ್ಮಕಂ ॥ ೨೯೮ ॥

೨೯೪-೨೯೭. ಅಡ್ಡಡ್ಡಲಾಗಿಯೂ ಉದ್ದುದ್ದವಾಗಿಯೂ ನಾಲ್ವತ್ತುನಾಲ್ಕು ರೇಖೆಗಳನ್ನು ಎಳೆಯಬೇಕು. ಅವುಗಳಲ್ಲಿ ಮೂವತ್ತೊಂಭತ್ತು ಮನೆಗಳಿಗೆ ಎರಡು ಪರಿಧಿಗಳನ್ನು ಕಲ್ಪಿಸಬೇಕು. ಮೊದಲನೆಯ ಪಂಕ್ತಿಯು ಏಳು ಮನೆಗೂ ಸುತ್ತಲೂ ಬರುವುದು. ಉಳಿದುವು ಐದು ಮನೆಗಳ ಸುತ್ತಲೂ ಬರುತ್ತವೆ. ಇವುಗಳ ಮಧ್ಯದಲ್ಲಿ ಒಂದು ನೂರ ಇಪ್ಪತ್ತೊಂದು ಮನೆಗಳಲ್ಲಿ ಹದಿನೆಂಟು ಮನೆಗಳ ಅಳತೆಯಲ್ಲಿ ಒಂದು ಲಿಂಗವು ಬರುತ್ತದೆ. ನಾಲ್ಕು ನಾಲ್ಕು ಮನೆಗಳ ಎರಡು ಖಂಡ ವಾಪಿಕೆಗಳು ಬರುತ್ತವೆ. ಇದು ಅಷ್ಟ ಕೋಷ್ಠಾತ್ಮಕ ಭದ್ರವೆಂದೆನಿಸಿಕೊಳ್ಳುತ್ತದೆ. ಈ ಭದ್ರದ ನಾಲ್ಕು ಕಡೆಗಳಲ್ಲಿಯೂ ಎರಡು ಮನೆಗಳ ಶೃಂಖಲೆಯೂ ಮೂರು ಮನೆಗಳ ಚಂದ್ರವೂ ಬರುತ್ತವೆ. ಐದು ಐದು ಮನೆಗಳ ವಲ್ಲಿಗಳು ಮೂರು ಕಡೆಗಳಲ್ಲಿ ಬರುತ್ತವೆ.

೨೯೮-೨೯೯ ಎರಡನೆಯ ವರಿಸೆಯಲ್ಲಿ ಮೂರು ಮನೆಗಳ ಚಂದ್ರನೂ ನಾಲ್ಕು ಮನೆಗಳ ಶೃಂಖಲೆಯೂ ಒಂಭತ್ತು ಮನೆಗಳ ವಲ್ಲಿಯೂ ಬರುತ್ತವೆ. ಒಂಭತ್ತು ಒಂಭತ್ತು ಮನೆಗಳ ಮೂರು ಭದ್ರಗಳು ಬರುತ್ತವೆ. ಹದಿಮೂರು

ತ್ರಯೋದಶಪದಂ ವಾಪೀದ್ವಯಂ ಪಾರ್ಶ್ವೇತು ಶೃಂಖಲೇ ।
ದ್ವಿಪದೇ ರಕ್ತವರ್ಣೇ ಚ ಭದ್ರಂ ತುರ್ಯಪದಂ ಹರಿತ್ ॥ ೨೯೯ ॥

ಪ್ರತಿಪಾರ್ಶ್ವೇ ಭವೇದೇತತ್ಪೃಥವಾಧಸ್ಸುಯೋಜಯೇತ್ ।
ಪ್ರತಿಪಾರ್ಶ್ವೇ ಚತುರ್ಲಿಂಗಂ ವಾಪೀನಾಂ ಪಂಚಕಂ ತಥಾ ॥ ೩೦೦ ॥

ಅಷ್ಟಾದಶಪದಂ ಲಿಂಗಂ ವಾಪೀ ತ್ರಯೋದಶಾತ್ಮಿಕಾ ।
ಭದ್ರಂ ರಸಪದೈಃ ಜ್ಞೇಯಂ ವಲ್ಲೀ ರುದ್ರಪದಾತ್ಮಿಕಾ ॥ ೩೦೧ ॥

ಶೃಂಖಲಾ ಪಂಚಭಿಃ ಪಾದೈಸ್ತ್ರಿಪದಶ್ಚಂದ್ರ ಈರಿತಃ ।
ಲಿಂಗೋಪರಿತನಾ ವೀಥೀ ನೀಲಾವಲ್ಯಾನಿ ಯೋಜಯೇತ್ ॥ ೩೦೨ ॥

ಯದ್ವಾ ರಸಾಂತೇ ಪರಿಧಿಂ ವಿಧಾಯ ತದನಂತರಂ ।
ತ್ರಿಲಿಂಗಾನ್ಯೇಕಲಿಂಗಂ ಚ ದ್ವಯೋಃ ಪಂಕ್ತ್ಯೋಃ ಪ್ರಕಾರಯೇತ್ ॥

ಮನೆಗಳ ಎರಡು ವಾಪಿಗಳೂ ಪಾರ್ಶ್ವದಲ್ಲಿ ಶೃಂಖಲೆಗಳೂ ಬರುತ್ತವೆ. ಇವು ಎರಡು ಮನೆಗಳ ಪ್ರಮಾಣದವು. ಇವನ್ನು ರಕ್ತವರ್ಣವಾಗಿ ರಚಿಸಬೇಕು. ನಾಲ್ಕು ಮನೆಗಳ ಭದ್ರವು ಬರುತ್ತದೆ. ಇದು ಅರಿಸಿನ ಬಣ್ಣದ್ದಾಗಿರಬೇಕು.

೩೦೦. ಪ್ರತಿ ಪಾರ್ಶ್ವದಲ್ಲಿಯೂ ಈ ಲಿಂಗವು ಬರುತ್ತದೆ. ಒಂದರ ಕೆಳಗೆ ಒಂದು ಬರುತ್ತದೆ. ಪಾರ್ಶ್ವಗಳೊಂದೊಂದರಲ್ಲಿಯೂ ನಾಲ್ಕು ನಾಲ್ಕು ಲಿಂಗಗಳು ಬರುತ್ತವೆ. ಐದೈದು ವಾಪಿಗಳೂ ಬರುತ್ತವೆ.

೩೦೧-೩೦೨. ಒಟ್ಟಿನಲ್ಲಿ ಹದಿನೆಂಟು ಮನೆಗಳ ಲಿಂಗವೂ ಹದಿಮೂರು ಮನೆಗಳ ಪ್ರಮಾಣದ ವಾಪಿಯೂ ಒಂಭತ್ತು ಮನೆಗಳ ಪ್ರಮಾಣದ ಭದ್ರವೂ ಹನ್ನೊಂದು ಮನೆಗಳ ಪ್ರಮಾಣದ ವಲ್ಲಿಯೂ ಬರುತ್ತವೆ. ಐದು ಮನೆಗಳ ಪ್ರಮಾಣದಲ್ಲಿ ಶೃಂಖಲೆಯೂ ಮೂರು ಮನೆಗಳ ಪ್ರಮಾಣದಲ್ಲಿ ಚಂದ್ರನೂ ಬರುತ್ತವೆ. ಲಿಂಗದ ಮೇಲೆ ಇರುವ ಮನೆಗಳಲ್ಲಿ ನೀಲಿಬಣ್ಣದಿಂದ ವಲ್ಲಿಗಳನ್ನು ರಚಿಸಬೇಕು.

೩೦೩-೩೦೪. ಇನ್ನೊಂದು ವಿಧವು. ಆರು ಮನೆಗಳಾದ ಮೇಲೆ ಪರಿಧಿಯನ್ನು ರಚಿಸಿ ಆಮೇಲೆ ಮೊದಲನೆಯದರಲ್ಲಿ ಮೂರು ಲಿಂಗಗಳನ್ನೂ ಎರಡನೆಯದರಲ್ಲಿ ಒಂದು ಲಿಂಗವನ್ನೂ ರಚಿಸಬೇಕು. ಮೊದಲು ಹದಿನಾರು ಮನೆಗಳ

ಆದೌ ಚಂದ್ರಕಲಂ ಭದ್ರಂ ಪದಮರ್ಕಪದೈಃ ಸ್ಮೃತಂ ।
ಶೃಂಖಲಾ ಪಂಚಭಿರ್ವಲ್ಲೀ ರುದ್ರಕೋಷ್ಠಾ ಸಮೀರಿತಾ ॥ ೩೦೪ ॥

ವಾಪೀಚತುಷ್ಟಯಂ ಪೂರ್ವಂ ಪರಂ ವಾಪೀದ್ವಯಂ ಸ್ಮೃತಂ ।
ಪೂರ್ವವತ್ಸಕಲಂ ಜ್ಞೇಯಂ ಬಾಹ್ಯಾಃ ಪರಿಧಯಃ ಕ್ರಮಾತ್ ॥ ೩೦೫ ॥

ಪೀತಶುಕ್ಲರಕ್ತಕೃಷ್ಣಾ ಜ್ಞೇಯಾಸ್ಸಂಖ್ಯಾಧಿಕಾಶ್ಶುಭಾಃ ।
ಏತತ್ಸಪ್ತೇಂದುಲಿಂಗಾಖ್ಯಂ ಪೀಠಂ ಸಮ್ಯಗುದಾಹೃತಂ ॥ ೩೦೬ ॥

ಅಥವಾಸ್ಮಿನ್ ತ್ರಿಕೋಷ್ಠಾನಿ ವರ್ಧಯಿತ್ವಾ ಕ್ರಮೇಣ ತು ।
ಷಷ್ಠಾಂತೇ ಪರಿಧೀ ಕಾರ್ಯೌ ತತ್ರ ಲಿಂಗಾನಿ ಯೋಜಯೇತ್ ॥ ೩೦೭ ॥

ಪ್ರಥಮೇ ತ್ರೀಣಿ ಲಿಂಗಾನಿ ದ್ವಿತೀಯೇ ಚೈಕಮೀರಿತಂ ।
ಚತುರ್ವಿಂಶಪದೈರ್ಲಿಗಂ ವಾಪ್ಯಷ್ಟಾದಶಪಾದಜಾ ॥ ೩೦೮ ॥

ಭದ್ರವು ಏರ್ಪಡುತ್ತದೆ. ಹನ್ನೆರಡು ಮನೆಗಳ ಪದವಿರಬೇಕು. ಐದು ಮನೆಗಳ ಪ್ರಮಾಣದಲ್ಲಿ ಶೃಂಖಲೆಯೂ ಹನ್ನೊಂದು ಮನೆಗಳ ಪ್ರಮಾಣದಲ್ಲಿ ವಲ್ಲಿಯೂ ಬರುತ್ತದೆ.

೩೦೫. ಮೊದಲನೆಯ ವರಿಸೆಯಲ್ಲಿ ನಾಲ್ಕು ವಾಪಿಗಳೂ ಎರಡನೆಯದರಲ್ಲಿ ಎರಡು ವಾಪಿಗಳೂ ಬರುತ್ತವೆ. ಉಳಿದುವೆಲ್ಲವೂ ಹಿಂದಿನದರಂತೆ. ಹೊರಗಡೆಯಲ್ಲಿನ ಪರಿಧಿಗಳು ನಾಲ್ಕು ಹಿಂದೆ ಹೇಳಿದಂತೆ ಬರೆಯಬೇಕು.

೩೦೬. ಅವು ಹಳದಿ, ಬಿಳುಪು, ಕೆಂಪು, ಕಪ್ಪು ಬಣ್ಣಗಳುಳ್ಳದ್ದಾಗಿರಬೇಕು. ಇದಕ್ಕೆ ಸಪ್ತೇಂದು ಲಿಂಗ ಪೀಠವೆಂದು ಹೆಸರು. ಇದು ಉತ್ತಮವು.

೩೦೭. ಇನ್ನೊಂದು ವಿಧವು ಮೇಲೆ ಹೇಳಿರುವ ಮನೆಗಳ ಜೊತೆಗೆ ಮೂರು ಮನೆಗಳನ್ನು ಹೆಚ್ಚಿಸಬೇಕು. ಆರು ಮನೆಗಳಾದ ಮೇಲೆ ಪರಿಧಿಗಳನ್ನೂ ರಚಿಸಬೇಕು. ಅದರೊಳಗೆ ಲಿಂಗಗಳನ್ನೂ ರಚಿಸಬೇಕು.

೩೦೮. ಹೀಗೆ ಮಾಡಿದರೆ ಮೊದಲನೆಯ ವರಿಸೆಯಲ್ಲಿ ಮೂರು ಲಿಂಗಗಳೂ ಎರಡನೆಯ ವರಿಸೆಯಲ್ಲಿ ಒಂದು ಲಿಂಗವೂ ಬರುತ್ತದೆ. ಈ ಲಿಂಗವು ಇಪ್ಪತ್ತನಾಲ್ಕು ಮನೆಗಳ ಪ್ರಮಾಣದಲ್ಲಿಯೂ ವಾಪಿಯು ಹದಿನೆಂಟು ಮನೆಗಳ ಪ್ರಮಾಣದಲ್ಲಿಯೂ ಹುಟ್ಟುತ್ತದೆ.

ಆದೌ ವೇದಮಿತಾ ವಾಪ್ಯೋ ದ್ವೇ ವಾಪ್ಯೌ ಚ ದ್ವಿತೀಯಕೇ ।
ಆದೌ ನವಪದಂ ಭದ್ರಂ ದ್ವಿತೀಯೇರ್ಕಪದಂ ಸ್ಮೃತಂ ॥ ೩೦೯ ॥

ಚಂದ್ರವಲ್ಲ್ಯಾದಿಪೂರ್ವೋಕ್ತಂ ಮಧ್ಯೇ ಲಿಂಗಂ ಪ್ರಕಾರಯೇತ್ ।
ಅಷ್ಟಾವಿಂಶಪದೈಃ ಜ್ಞೇಯಂ ಚತುಷ್ಪಾದೈಃ ಶಿರಃ ಕಟಿಃ ॥ ೩೧೦ ॥

ಅರ್ಕಹ್ಯರ್ಕಪದೇ ಖಂಡವಾಪ್ಯೌ ದ್ವಿಪದಶೃಂಖಲಾಃ ।
ಪಂಚಪಾದಾ ಸ್ಮೃತಾ ವಲ್ಲೀ ತ್ರಿಪದಾ ಪೀತಶೃಂಖಲಾ ॥ ೩೧೧ ॥

ಅರ್ಕಪಾದೈಶ್ಚತುರ್ದಿಕ್ಷು ಮಧ್ಯೇ ಭದ್ರಚತುಷ್ಟಯಂ ।
ಚಂದ್ರಶ್ಚ ತ್ರಿಪದಃ ಕೋಣೇ ಶಿವಮಸ್ತಕಪಾರ್ಶ್ವಕೇ ॥ ೩೧೨ ॥

---

೩೦೯. ಮೊದಲು ನಾಲ್ಕು ವಾಪಿಗಳೂ ಎರಡನೆಯದರಲ್ಲಿ ಎರಡು ವಾಪಿಕೆಗಳೂ ಬರುತ್ತವೆ. ಮೊದಲನೆಯದರಲ್ಲಿ ಒಂಭತ್ತು ಮನೆಗಳ ಭದ್ರವೂ ಎರಡನೆಯದರಲ್ಲಿ ಹನ್ನೆರಡು ಮನೆಗಳ ಭದ್ರವೂ ಬರುತ್ತದೆ.

೩೧೦. ಚಂದ್ರಗಳೂ ವಲ್ಲಿಗಳೂ ಮೊದಲು ಹೇಳಿದಂತೆಯೇ ಬರುತ್ತವೆ. ಮತ್ತು ಅಷ್ಟಷ್ಟೇ ಮನೆಗಳ ಪ್ರಮಾಣವುಳ್ಳದ್ದು, ಇವುಗಳ ಮಧ್ಯದಲ್ಲಿ ಲಿಂಗವನ್ನು ರಚಿಸಬೇಕು. ಈ ಲಿಂಗವು ಹದಿನೆಂಟು ಮನೆಗಳ ಪ್ರಮಾಣವುಳ್ಳದು ಈ ಲಿಂಗದ ತಲೆಯೂ ಸೊಂಟವೂ ನಾಲ್ಕು ನಾಲ್ಕು ಮನೆಗಳ ಪ್ರಮಾಣವುಳ್ಳದ್ದು.

೩೧೧. ಇಲ್ಲಿ ಎರಡು ಖಂಡ ವಾಪಿಗಳೂ ಬುರತ್ತವೆ. ಅವು ಹನ್ನೆರಡು ಹನ್ನೆರಡು ಮನೆಗಳ ಪ್ರಮಾಣವುಳ್ಳದ್ದು. ಎರಡೆರಡು ಮನೆಗಳ ಶೃಂಖಲೆಗಳನ್ನೂ ರಚಿಸಬೇಕು. ಇಲ್ಲಿ ಐದು ಮನೆಗಳ ವಲ್ಲಿಯು ಬರುತ್ತದೆ. ಮೂರು ಮನೆಗಳ ಪ್ರಮಾಣದ ಶೃಂಖಲೆಯು ಬರುತ್ತದೆ. ಇದು ಅರಿಸಿನ ಬಣ್ಣದಲ್ಲಿರಬೇಕು.

೩೧೨. ನಾಲ್ಕು ಕಡೆಗಳಲ್ಲಿಯೂ ಹನ್ನೆರಡು ಮನೆಗಳ ಪ್ರಮಾಣದಲ್ಲಿ ಪರಿಧಿಯನ್ನು ರಚಿಸಿದರೆ ಮಧ್ಯದಲ್ಲಿ ನಾಲ್ಕು ಭದ್ರಗಳು ಬರುತ್ತವೆ. ಕೋಣ ಪ್ರದೇಶದಲ್ಲಿ ಮೂರು ಮನೆಗಳ ಚಂದ್ರನು ಬರುತ್ತದೆ. ಅವು ಲಿಂಗದ ತಲೆಯ ಪಕ್ಕಗಳಲ್ಲಿ ಬರುತ್ತವೆ.

ನೇತ್ರಾರ್ಥಂ ದ್ವೇಪದೇ ಶುಕ್ಲೇ ಶೇಷಾಣಿ ಚ ಪದಾನಿ ಹಿ ।
ಲಿಂಗಪಾರ್ಶ್ವೇ ಪಂಚಪಂಚ ಯಥೇಚ್ಛಂ ತಾನಿ ಪೂರಯೇತ್ ॥ ೩೧೩ ॥

ಪೀತಶುಕ್ಲರಕ್ತಕೃಷ್ಣಾ ಬಹಿಃ ಪರಿಧಯೋ ಮತಾಃ ।
ಏತತ್ಸಪ್ತದಶಲಿಂಗೈರ್ಲಿಂಗತೋಭದ್ರಮೀರಿತಂ ॥ ೩೧೪ ॥

ದಶಕಂ ಕರಣಾನಾಂ ಚ ಪ್ರಾಣಾನಾಂ ಪಂಚಕಂ ಮನಃ ।
ಷೋಡಶೇವಮಾಃ ಕಲಾ ಆತ್ಮಾ ಸಾಕ್ಷೀ ಸಪ್ತದಶಸ್ಮೃತಃ ॥ ೩೧೫ ॥

ಅರ್ಕಲಿಂಗಾತ್ಮಕಂ ಭದ್ರಂ ಶ್ರುಣು ಶಿಷ್ಯ ಮಯೋಚ್ಯತೇ ।
ಪ್ರಾಗುದೀಚ್ಯಾಯತಾ ರೇಖಾಃ ಷಟ್ತ್ರಿಂಶದ್ಧಿ ಪ್ರಕಲ್ಪಯೇತ್ ॥ ೩೧೬ ॥

---

೩೧೩. ಉಳಿದ ಮನೆಗಳ ಪೈಕಿ ಲಿಂಗದ ಕಣ್ಣಿಗೋಸ್ಕರ ಎರಡು ಮನೆಗಳನ್ನು ಬಿಳಿಯ ಬಣ್ಣದಿಂದ ತುಂಬಬೇಕು. ಇನ್ನೂ ಉಳಿದಿರುವ ಮನೆಗಳಲ್ಲಿ ಲಿಂಗದ ಪಾರ್ಶ್ವಗಳಲ್ಲಿ ಐದೈದು ಮನೆಗಳನ್ನು ತೆಗೆದುಕೊಂಡು ಬೇಕಾದ ಬಣ್ಣದಿಂದ ತುಂಬಬೇಕು.

೩೧೪. ಹೊರಗಿರುವ ನಾಲ್ಕು ಕಡೆಯ ಪರಿಧಿಗಳನ್ನೂ ಹಳದಿ, ಬಿಳುಪು, ಕೆಂಪು, ಕಪ್ಪು ಬಣ್ಣಗಳಿಂದ ತುಂಬಬೇಕು. ಒಟ್ಟಿನಲ್ಲಿ ಹದಿನೇಳು ಲಿಂಗಗಳು ಬಂದಂತಾಗುತ್ತದೆ. ಇದಕ್ಕೆ ಸಪ್ತದಶಲಿಂಗತೋಭದ್ರವೆಂದು ಹೆಸರು.

೩೧೫. ಈ ಹದಿನೇಳನ್ನು ರಚಿಸಲು ಕಾರಣವೇನೆಂದರೆ ಇದರ ತತ್ವವು ಹೀಗಿರುವುದು:— ಬಹಿರಿಂದ್ರಿಯಗಳು ಐದು. ಅಂತರಿಂದ್ರಿಯಗಳು ಐದು. ಪ್ರಾಣಗಳು ಐದು. ಮನಸ್ಸು ಒಂದು. ಒಟ್ಟು ಹದಿನಾರು. ಇವೆಲ್ಲಕ್ಕೂ ಸಾಕ್ಷಿಯಾಗಿರುವವನು ಆತ್ಮನು ಸೇರಿದರೆ ಹದಿನೇಳಾಗುವುದು. ಅದಕ್ಕೆ ಸದೃಶವಾಗಿ ಈ ಭದ್ರವು ರಚಿತವಾಗಿದೆಯೆಂದು ತಿಳಿಯಬೇಕು.

೩೧೬-೩೧೭. ಎಲೈ ಶಿಷ್ಯನೇ! ಒಂಭತ್ತು ಲಿಂಗಗಳ ಭದ್ರವನ್ನು ಹೇಳುತ್ತೇನೆ. ಕೇಳು. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಮೂವತ್ತಾರು ಮೂವತ್ತಾರು ರೇಖೆಗಳನ್ನು ರಚಿಸಬೇಕು. ಅವುಗಳಲ್ಲಿ ಒಟ್ಟು ಒಂದು ಸಾವಿರದ

ಪದಾನಿ ದ್ವಾದಶಶತಂ ಪಂಚವಿಂಶತಿರೇವ ಚ ।
ಖಂಡೇಂದುಸ್ತ್ರಿಪದಃ ಕೋಣೇ ಶೃಂಖಲಾ ಷಟ್ಪದಾ ಸ್ಮೃತಾ ॥ ೩೧೭ ॥

ತ್ರಯೋದಶಪದಾ ವಲ್ಲೀ ಭದ್ರಂ ತು ನವಭಿಃ ಪದೈಃ ।
ಭದ್ರೋರ್ಧ್ವಂ ತ್ರಿಪದಾ ಜ್ಞೇಯಾ ದ್ವಿತೀಯಾ ಪೀತಶೃಂಖಲಾ ॥ ೩೧೮ ॥

ತ್ರಯೋದಶಪದಾ ವಾಪೀ ಲಿಂಗಮಷ್ಟಾದಶೈಃ ಸ್ಮೃತಂ ।
ಲಿಂಗಂ ನಿಯಮ್ಯ ಪಂಕ್ತೌ ತು ಶೋಭಾಕೋಷ್ಠಾಶ್ಚತುರ್ದಶ ॥ ೩೧೯ ॥

ತೇಷಾಮುಪರಿ ಪಂಕ್ತೌ ತು ಕೋಷ್ಠಾ ಸಪ್ತದಶೈವ ತು ।
ಪೂಜಾಪಂಕ್ತಿಸ್ಸಿತಾ ಜ್ಞೇಯಾ ಪರಿತಃ ಪರಿಕಲ್ಪಿತಾ ॥ ೩೨೦ ॥

ಪೂಜಾಪಂಕ್ತ್ಯಂತರಾಪಂಕ್ತೌ ಕೋಷ್ಠಾ ಅಶೀತಿಸಂಖ್ಯಯಾ ।
ಪರಿಧಿಸ್ಸ ಚ ವಿಜ್ಞೇಯೋ ಮಂಡಲಾಂತರಯೋರ್ದ್ವಯೋಃ ॥ ೩೨೧ ॥

ಇನ್ನೂರ ಇಪ್ಪತ್ತೈದು ಮನೆಗಳಾಗುತ್ತವೆ. ಕೋಣ ಪ್ರದೇಶದಲ್ಲಿ ಮೂರು ಮನೆಗಳ ಖಂಡೇಂದುವು ಬರುತ್ತದೆ. ಆರು ಮನೆಗಳ ಪ್ರಮಾಣದ ಶೃಂಖಲೆಯು ಬರುತ್ತದೆ.

೩೧೮-೩೧೯. ಹದಿಮೂರು ಮನೆಗಳ ವಲ್ಲಿಯು ಬರುತ್ತದೆ. ಒಂಭತ್ತು ಮನೆಗಳ ಭದ್ರವು ಏರ್ಪಡುತ್ತದೆ. ಭದ್ರದ ಮೇಲೆ ಮೂರು ಮನೆಗಳ ಪ್ರಮಾಣದ ಮತ್ತೊಂದು ಶೃಂಖಲೆಯು ಬರುತ್ತದೆ. ಇದು ಅರಿಶಿನದ ಬಣ್ಣಕ್ಕಿರಬೇಕು. ಹದಿಮೂರು ಮನೆಗಳ ವಾಪಿಯು ಬರುತ್ತದೆ. ಹದಿನೆಂಟು ಮನೆಗಳ ಪ್ರಮಾಣದಲ್ಲಿ ಲಿಂಗವು ಏರ್ಪಡುತ್ತದೆ. ಈ ಪಂಕ್ತಿಯಲ್ಲಿ ಲಿಂಗವನ್ನು ರಚಿಸಿ ನಾಲ್ಕು ಕಡೆಗೂ ಹದಿನಾಲ್ಕು ಮನೆಗಳ ಪ್ರಮಾಣದಿಂದ ಶೋಭಾ ಕೋಷ್ಠಗಳನ್ನು ರಚಿಸಬೇಕು.

೩೨೦-೩೨೧. ಅದರ ಮುಂದಿನ ಪಂಕ್ತಿಯಲ್ಲಿ ಹದಿನೇಳು ಮನೆಗಳ ಕೋಷ್ಠವು ಬರುತ್ತದೆ. ಅಲ್ಲಿ ಪೂಜಾ ಪಂಕ್ತಿಯು ಬಿಳಿಯ ಬಣ್ಣದಲ್ಲಿರಬೇಕು. ಇದನ್ನು ಕೋಷ್ಠದ ಸುತ್ತಲೂ ರಚಿಸಬೇಕು ಪೂಜಾ ಪಂಕ್ತಿಯ ಒಳಗಡೆಯಲ್ಲಿ ಕೋಷ್ಠವು ಎಂಭತ್ತು ಮನೆಗಳಿಂದ ಏರ್ಪಡುತ್ತದೆ. ಈ ಎರಡು ಮಂಡಲಗಳ ಮಧ್ಯದಲ್ಲಿ ಒಂದು ಪರಿಧಿಯನ್ನು ರಚಿಸಬೇಕು.

ಪರಿಧ್ಯಂತರಕೋಷ್ಠೇಷು ಸರ್ವತೋಭದ್ರಮಾಲಿಖೇತ್ ।
ವಿಶೇಷಶ್ಚಾತ್ರ ವಿಜ್ಞೇಯೋ ಶೃಂಖಲಾ ಷಟ್ಪದಾ ಭವೇತ್ ॥ ೩೨೨ ॥

ತ್ರಯೋದಶಪದಾ ವಲ್ಲೀ ಭದ್ರಂ ತು ದ್ವಾದಶೈಃ ಪದೈಃ ।
ಪಂಚವಿಂಶತ್ಪದಾ ವಾಪೀ ಪರಿಧಿಷ್ಷೋಡಶಾತ್ಮಕಃ ॥ ೩೨೩ ॥

ಮಧ್ಯೇ ನವಪದೈಃ ಪದ್ಮಂ ಕರ್ಣಿಕಾ ಕೇಸರಾನ್ವಿತಂ ।
ಸತ್ವಂ ರಜಸ್ತಮೋವರ್ಣಾಃ ಪರಿತೋ ಮಂಡಲಸ್ಯ ಚ ॥ ೩೨೪ ॥

ತ್ರಯಃ ಪರಿಧಯಃ ಕಾರ್ಯಾಸ್ತತ್ರ ದ್ವಾರಾಣಿ ಕಾರಯೇತ್ ।
ಸಿತೇಂದುಃ ಶೃಂಖಲಾ ಕೃಷ್ಣಾ ವಲ್ಲೀ ನೀಲಾ ಪ್ರಪೂರಯೇತ್ ॥ ೩೨೫ ॥

ಭದ್ರಂ ರಕ್ತಂ ಶೃಂಖಲಾನ್ಯಾ ಪೀತಾ ವಾಪೀ ಸಿತಾ ಸ್ಮೃತಾ ।
ಲಿಂಗಾನಿ ಕೃಷ್ಣವರ್ಣಾನಿ ಪಾರ್ಶ್ವೇ ತು ದ್ವಾದಶೈವ ತು ॥ ೩೨೬ ॥

೩೨೨-೩೨೩. ಪರಿಧಿಯ ಒಳಗಿನ ಕೋಷ್ಠಗಳಲ್ಲಿ ಸರ್ವತೋ ಭದ್ರವನ್ನು ರಚಿಸಬೇಕು. ಇಲ್ಲಿನ ವಿಶೇಷವೇನೆಂದರೆ ಆರು ಮನೆಗಳ ಶೃಂಖಲೆಯು ಬರುತ್ತದೆ. ಹದಿಮೂರು ಮನೆಗಳ ವಲ್ಲಿಯು ಬರುತ್ತದೆ. ಹನ್ನೆರಡು ಮನೆಗಳಿಂದ ಭದ್ರವು ಬರುತ್ತದೆ. ಇಪ್ಪತ್ತೈದು ಮನೆಗಳ ವಾಪಿಯೂ ಹದಿನಾರು ಮನೆಗಳ ಪರಿಧಿಯೂ ಬರುತ್ತವೆ.

೩೨೪-೩೨೫. ಮಧ್ಯದಲ್ಲಿ ಒಂಭತ್ತು ಮನೆಗಳ ಪದ್ಮವು ಬರುತ್ತದೆ. ಅದಕ್ಕೆ ಕರ್ಣಿಕೆಯನ್ನೂ ಕೇಸರವನ್ನೂ ಕಲ್ಪಿಸಬೇಕು. ಈ ಮಂಡಲದ ಸುತ್ತಲೂ ಬಿಳಿಯ ಕೆಂಪಿನ, ಕಪ್ಪಿನ ಬಣ್ಣದ ಪರಿಧಿಗಳನ್ನೂ ರಚಿಸಬೇಕು. ಅಲ್ಲಿ ಬಾಗಿಲು ಬಂದಿರುವಂತೆ ರಚಿಸಬೇಕು. ಬಿಳಿಯ ಬಣ್ಣದ ಇಂದುವೂ ಕಪ್ಪು ಬಣ್ಣದ ಶೃಂಖಲೆಯೂ ನೀಲಿಯ ವರ್ಣದ ವಲ್ಲಿಯೂ ಬರಬೇಕು.

೩೨೬. ಭದ್ರವು ಕೆಂಪು ಬಣ್ಣಕ್ಕಿರಬೇಕು. ಶೃಂಖಲೆಯು ಹಳದಿಯ ಬಣ್ಣಕ್ಕಿರಬೇಕು. ವಾಪಿಯು ಬಿಳಿಯ ಬಣ್ಣಕ್ಕಿರಬೇಕು. ಲಿಂಗಗಳು ಕಪ್ಪು ಬಣ್ಣಕ್ಕಿರಬೇಕು. ಈ ಲಿಂಗಗಳು ಪಾರ್ಶ್ವ ಭಾಗದಲ್ಲಿ ಹನ್ನೆರಡು ಬರುತ್ತವೆ.

ಪರಿಧಿಃ ಪೀತವರ್ಣಸ್ಸ್ಯಾತ್ಕಮಲಂ ಪಂಚವರ್ಣಕಂ ।
ಕರ್ಣಿಕಾ ಚ ಕೇಸರಾಣಿ ಪೀತವರ್ಣಾನಿ ಕಾರಯೇತ್ ॥ ೩೨೭ ॥

ಪ್ರಕಾರಾಂತರಮನ್ಯತ್ತೇ ಶೃಣು ಶಿಷ್ಯ ಮಯೋಚ್ಯತೇ ।
ಪೂರ್ವೋತ್ತರಗತಾ ರೇಖಾ ಸಪ್ತವಿಂಶನ್ಮಿತಾಶ್ಶುಭಾಃ ॥ ೩೨೮ ॥

ತತ್ಷಟ್ತ್ರಿಂಶತ್ಪದೇಷ್ವೇವಂ ಸರ್ವತೋಭದ್ರಮುತ್ತಮಂ ।
ಅಬ್ಧಿನೇತ್ರಾಗ್ನಿಕೋಷ್ಠೈಶ್ಚ ರಚಯೇತ್ಪೂರ್ವವಚ್ಛುಭಂ ॥ ೩೨೯ ॥

ಪರಿಧಿಸ್ತತ್ಸಮಂತಾಚ್ಚ ಪ್ರಕಲ್ಪ್ಯಃ ಪೀತವರ್ಣಕಃ ।
ಅಷ್ಟೋತ್ತರಶತೈರ್ಲಿಂಗತೋಭದ್ರಂ ಕಥಿತಂ ಯಥಾ ॥ ೩೩೦ ॥

ತಸ್ಯ ಚತುರ್ಷು ಪಾರ್ಶ್ವೇಷು ರಚಯೇದರ್ಕಲಿಂಗಕಂ ।
ಕೋಣೇ ಕೋಣೇ ತ್ರಿಪದೋಬ್ಜಃ ಶೃಂಖಲಾ ಸಪ್ತಪಾದಿಕಾ ॥ ೩೩೧ ॥

---

೩೨೭. ಪರಿಧಿಯು ಹಳದಿಯ ಬಣ್ಣಕ್ಕಿರಬೇಕು. ಕಮಲವು ಐದು ಬಣ್ಣಗಳಿಂದಲೂ ಕೂಡಿರಬೇಕು. ಕರ್ಣಿಕೆಯೂ ಕೇಸರಗಳೂ ಹಳದಿಯ ಬಣ್ಣಕ್ಕಿರಬೇಕು.

೩೨೮-೩೨೯. ಇನ್ನೊಂದು ಪ್ರಕಾರವನ್ನು ಹೇಳುತ್ತೇನೆ ಕೇಳು. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಇಪ್ಪತ್ತೇಳು ಗೆರೆಗಳನ್ನು ಎಳೆಯಬೇಕು. ಇದರಲ್ಲಿ ಮೂವತ್ತಾರು ಮನೆಗಳ ಪ್ರಮಾಣದ ಸರ್ವತೋಭದ್ರವನ್ನು ರಚಿಸಬೇಕು. ಇದರಲ್ಲಿ ಕೋಷ್ಠವು ಮುನ್ನೂರ ಇಪ್ಪತ್ತನಾಲ್ಕು ಮನೆಗಳಿಂದ ರಚಿತವಾಗುತ್ತದೆ.

೩೩೦-೩೩೧. ಸುತ್ತಲೂ ಪರಿಧಿಯನ್ನೂ ರಚಿಸಿ ಹೊಂಬಣ್ಣವನ್ನು ತುಂಬಬೇಕು. ಇದು ಹಿಂದೆ ಹೇಳಿದ ಅಷ್ಟೋತ್ತರ ಶತಲಿಂಗತೋ ಭದ್ರದಂತೆಯೇ ಬರುತ್ತದೆ. ಇದರ ನಾಲ್ಕು ಪಕ್ಕಗಳ ಪಂಕ್ತಿಗಳಲ್ಲಿಯೂ ಹನ್ನೆರಡು ಲಿಂಗಗಳನ್ನು ರಚಿಸಬೇಕು. ಕೋಣ ಪ್ರದೇಶಗಳಲ್ಲಿ ಮೂರು ಮೂರು ಮನೆಗಳ ಚಂದ್ರನು ಬರಬೇಕು. ಏಳು ಮನೆಗಳ ಶೃಂಖಲೆಯೂ ಬರಬೇಕು.

ವಲ್ಲೀ ಮನುಪದಾ ಭದ್ರಂ ಷಟ್ಪದಂ ತ್ರೀಂದುವಾಪಿಕಾ ।
ಲಿಂಗಂಷಡ್ವಿಂಶಪದಜಂ ಭದ್ರಂ ಸ್ಯಾದ್ವಾಪಿಕೋಪರಿ ॥ ೩೩೨ ॥

ಲಿಂಗಪಾರ್ಶ್ವಪದಾನ್ಯೇವ ಷಟ್ಪೀತಾನಿ ಪ್ರಕಲ್ಪಯೇತ್ ।
ಲಿಂಗೋಪರಿತನಾ ವೀಥೀ ನೀಲಾ ವಲ್ಲ್ಯೋರ್ನಿಯೋಜಯೇತ್ ॥ ೩೩೩ ॥

ಚತುಃಪದೈರ್ಲಿಂಗಶಿರಸ್ತಥಾ ಪರಿಧಯೋ ಬಹಿಃ ।
ಸರ್ವಾಣಿ ತು ಯಥಾಪೂರ್ವಮುಕ್ತವರ್ಣೈಸ್ಸುರಂಜಯೇತ್ ॥ ೩೩೪ ॥

ಚತುರ್ವಿಂಶತಿರಾಲೇಖ್ಯಾ ರೇಖಾಃ ಪ್ರಾಗ್ದಕ್ಷಿಣಾಯತಾಃ ।
ಕೋಣೇಷು ಶೃಂಖಲಾ ಪಂಚಪದಾವಲ್ಲ್ಯಶ್ಚ ಪಾರ್ಶ್ವತಃ ॥ ೩೩೫ ॥

ಪದೈರ್ನವಭಿರಾಲೇಖ್ಯಾಶ್ಚತುರ್ಭಿರ್ಲಘುಶೃಂಖಲಾಃ ।
ಲಘುವಲ್ಲ್ಯಃ ಪದೈಷ್ಷಡ್ಭಿಸ್ತತೋಽಷ್ಟಾದಶಭಿಃ ಪದೈಃ ॥ ೩೩೬ ॥

---

೩೩೨. ವಲ್ಲಿಯು ಹದಿನಾಲ್ಕು ಮನೆಗಳಿಂದ ಹುಟ್ಟುತ್ತದೆ. ಆರು ಮನೆಗಳ ಭದ್ರವು ಬರಬೇಕು. ಇಂದುವೂ ವಾಪಿಕೆಯೂ ಮೂರು ಮೂರು ಮನೆಗಳ ಪ್ರಮಾಣದವು. ಲಿಂಗವು ಇಪ್ಪತ್ತೈದು ಮನೆಗಳಿಂದ ಹುಟ್ಟುತ್ತದೆ. ಈ ಭದ್ರವು ವಾಪಿಕೆಯ ಮೇಲೆ ಬರಬೇಕು.

೩೩೩. ಲಿಂಗದ ಪಾರ್ಶ್ವದಲ್ಲಿರುವ ಆರು ಮನೆಗಳನ್ನು ಹಳದಿಯ ಬಣ್ಣಕ್ಕೆ ತುಂಬಬೇಕು. ಲಿಂಗದ ಮೇಲೆ ಇರುವ ಮನೆಗಳನ್ನು ನೀಲಿಯ ಬಣ್ಣವನ್ನು ವೀಥಿಗೂ ವಲ್ಲಿಗೂ ಉಪಯೋಗಿಸಬೇಕು.

೩೩೪. ನಾಲ್ಕು ಮನೆಗಳಿಂದ ಲಿಂಗದ ತಲೆಯು ಏರ್ಪಡುತ್ತದೆ. ಅಂತೆಯೇ ಹೊರಗಡೆಯಲ್ಲಿ ಪರಿಧಿಗಳನ್ನೂ ರಚಿಸಬೇಕು. ಇವೆಲ್ಲವನ್ನೂ ಹಿಂದೆ ಹೇಳಿರುವಂತೆಯೇ ಆ ಬಣ್ಣಗಳಿಂದ ರಚಿಸಬೇಕು.

೩೩೫–೩೩೬. ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಇಪ್ಪತ್ತನಾಲ್ಕು ಇಪ್ಪತ್ತನಾಲ್ಕು ರೇಖೆಗಳನ್ನು ಎಳೆಯಬೇಕು. ಕೋಣಗಳಲ್ಲಿ ಐದೈದು ಪದಗಳಿಗೆ ಶೃಂಖಲೆಗಳನ್ನು ರಚಿಸಬೇಕು. ಪಾರ್ಶ್ವದಲ್ಲಿ ಒಂಭತ್ತು ಮನೆಗಳ ಪ್ರಮಾಣದ ವಲ್ಲಿಗಳನ್ನು ರಚಿಸಬೇಕು ಅನಂತರ ನಾಲ್ಕು ಮನೆಗಳ ಪ್ರಮಾಣದ ಲಘು ಶೃಂಖಲೆಗಳನ್ನು ರಚಿಸಬೇಕು. ಆರಾರು ಮನೆಗಳಿಂದ ಲಘು ವಲ್ಲಿಗಳನ್ನು ರಚಿಸಬೇಕು.

ಕೃತ್ವಾ ಲಿಂಗಾನಿ ವಾಪ್ಯಸ್ತು ತ್ರಯೋದಶಭಿರಂತರಾ ।
ತತೋ ವೀಥೀದ್ವಯೇನೈವ ಪೀಠಂ ಕುರ್ಯಾದ್ವಿಚಕ್ಷಣಃ ॥ ೩೩೭ ॥

ತಸ್ಯ ಪಾದಾಃ ಪಂಚಪದಾ ದ್ವಾರಣ್ಯಪಿ ತಥೈವ ಚ ।
ಏಕಾಶೀತಿಪದಂ ಮಧ್ಯೇ ಪದ್ಮಂ ಸ್ವಸ್ತಿಕಮಿಷ್ಯತೇ ॥ ೩೩೮ ॥

ಕೋಣೇಷು ಶೃಂಖಲಾ ಕಾರ್ಯಾ ಪದೈಸ್ತ್ರಿಭಿರತಃಪರಂ ।
ಪದೈಶ್ಚತುರ್ಭಿರ್ದಿಕ್ಷುಸ್ಯುಃ ಭದ್ರಾಣ್ಯೇಷಾಂ ಸಮಂತತಃ ॥ ೩೩೯ ॥

ಏಕಾದಶಪದೇ ವಲ್ಲ್ಯೋ ಮಧ್ಯೇಷ್ಟದಳಮಾಲಿಖೇತ್ ।
ಪದ್ಮಂ ನವಪದಂ ಹ್ಯೇತಲ್ಲಿಂಗತೋಭದ್ರಮಿಷ್ಯತೇ ॥ ೩೪೦ ॥

---

೩೩೭. ಅನಂತರ ಹದಿನೆಂಟು ಮನೆಗಳಿಂದ ಲಿಂಗಗಳನ್ನು ರಚಿಸಬೇಕು. ಆದರೊಳಗೆ ಹದಿಮೂರು ಮನೆಗಳ ಪ್ರಮಾಣದ ವಾಪಿಗಳನ್ನು ರಚಿಸಬೇಕು. ಅನಂತರ ಎರಡು ವೀಥಿಗಳನ್ನು ರಚಿಸಿ ಪೀಠವನ್ನು ಬುದ್ಧಿವಂತಿಕೆಯಿಂದ ರಚಿಸಬೇಕು.

೩೩೮. ಈ ಪೀಠವನ್ನು ಐದು ಮನೆಗಳಿಂದ ರಚಿಸಬೇಕು. ದ್ವಾರಗಳು ಐದು ಮನೆಗಳಿಂದಲೇ ಇರಬೇಕು. ಮಧ್ಯದಲ್ಲಿ ಎಂಭತ್ತೊಂದು ಮನೆಗಳ ಪ್ರಮಾಣದ ಪದ್ಮವು ಬರುತ್ತದೆ. ಇದಕ್ಕೆ ಸ್ವಸ್ತಿಕ ಭದ್ರವೆಂದು ಹೆಸರು.

೩೩೯. ಕೋಣಗಳಲ್ಲಿ ಮೂರು ಮೂರು ಮನೆಗಳ ಶೃಂಖಲೆಗಳನ್ನು ರಚಿಸಬೇಕು. ಅದರ ಮುಂದೆ ಬರುವ ಶೃಂಖಲೆಗಳು ನಾಲ್ಕು ಮನೆಗಳದಾಗಿರುತ್ತವೆ. ಇವುಗಳ ನಾಲ್ಕು ದಿಕ್ಕುಗಳಲ್ಲಿಯೂ ಸುತ್ತಲೂ ಭದ್ರಗಳು ಏರ್ಪಡುತ್ತದೆ.

೩೪೦. ಹನ್ನೊಂದು ಮನೆಗಳ ಪ್ರಮಾಣದಲ್ಲಿ ವಲ್ಲಿಗಳು ಹುಟ್ಟುತ್ತವೆ. ಮಧ್ಯದಲ್ಲಿ ಅಷ್ಟದಳದ ಪದ್ಮವು ಬರುತ್ತದೆ. ಈ ಪದ್ಮವು ಒಂಭತ್ತು ಮನೆಗಳಿಂದ ಬರುತ್ತದೆ. ಇದು ಲಿಂಗತೋಭದ್ರವೆನಿಸಿಕೊಳ್ಳುತ್ತದೆ.

ಶೃಂಖಲಾ ಕೃಷ್ಣವರ್ಣೇನ ವಲ್ಲೀ ನೀಲೇನ ಪೂರಯೇತ್ ।
ರಕ್ತೇನ ಶೃಂಖಲಾ ಲಘ್ವೀ ವಲ್ಲೀ ಪೀತೇನ ಪೂರಯೇತ್ ॥ ೩೪೧ ॥

ಲಿಂಗಾನಿ ಕೃಷ್ಣವರ್ಣಾನಿ ಶ್ವೇತೇನಾಪ್ಯಥ ವಾಪಿಕಾ ।
ಪೀಠಂ ಸ್ವಪಾದಂ ಶ್ವೇತೇನ ಪೀತೇನ ದ್ವಾರಪೂರಣಂ ॥ ೩೪೨ ॥

ಮಧ್ಯೇ ಸ್ಯುಃ ಶೃಂಖಲಾ ರಕ್ತಾ ವಲ್ಲೀ ನೀಲೇನ ಪೂರಯೇತ್ ।
ಭದ್ರಾಣಿ ಪೀತವರ್ಣಾನಿ ಪೀತಾ ಪಂಕಜಕರ್ಣಿಕಾ ॥ ೩೪೩ ॥

ದಳಾನಿ ಶ್ವೇತವರ್ಣಾನಿ ಯದ್ವಾ ಚಿತ್ರಾಣಿ ಕಲ್ಪಯೇತ್ ।
ತಿಸ್ರೋ ರೇಖಾ ಬಹಿಃ ಕಾರ್ಯಾಃ ಸಿತರಕ್ತಾಸಿತಾಃ ಕ್ರಮಾತ್ ॥ ೩೪೪ ॥

ಊರ್ಧ್ವಲಿಂಗೋದ್ಭವಂ ಹ್ಯಷ್ಟಲಿಂಗತೋಭದ್ರಮುಚ್ಯತೇ ।
ಅನ್ಯನ್ಮಯಾತಿರಮ್ಯಂ ತಚ್ಛೃಣು ಶಿಷ್ಯಾತ್ರ ಕೌತುಕಾತ್ ॥ ೩೪೫ ॥

---

೩೪೧. ಇದರಲ್ಲಿನ ಶೃಂಖಲೆಯನ್ನು ಕಪ್ಪುಬಣ್ಣದಿಂದಲೂ ವಲ್ಲಿಯನ್ನೂ ನೀಲಿಯಬಣ್ಣದಿಂದಲೂ ತುಂಬಬೇಕು ಸಣ್ಣ ಶೃಂಖಲೆಯನ್ನು ಕೆಂಪುಬಣ್ಣದಿಂದಲೂ ಸಣ್ಣ ವಲ್ಲಿಯನ್ನು ಹಳದಿಯ ಬಣ್ಣದಿಂದಲೂ ತುಂಬಬೇಕು.

೩೪೨. ಲಿಂಗಗಳನ್ನು ಕಪ್ಪುಬಣ್ಣದಿಂದಲೂ ವಾಪಿಕೆಗಳನ್ನು ಬಿಳಿಯ ಬಣ್ಣದಿಂದಲೂ ತುಂಬಬೇಕು. ಪೀಠವನ್ನು ಬಿಳಿಯ ಬಣ್ಣದಿಂದಲೂ ದ್ವಾರಗಳನ್ನು ಹಳದಿಯ ಬಣ್ಣದಿಂದಲೂ ತುಂಬಬೇಕು.

೩೪೩. ಮಧ್ಯದ ಶೃಂಖಲೆಯು ಕೆಂಪುಬಣ್ಣದಿಂದಲೂ ವಲ್ಲಿಗಳು ನೀಲಿಯ ಬಣ್ಣದಿಂದಲೂ ಇರಬೇಕು. ಭದ್ರವು ಹಳದಿಯ ಬಣ್ಣಕ್ಕಿರಬೇಕು. ಮತ್ತು ಕಮಲದ ಕರ್ಣಿಕೆಯೂ ಹಳದಿಯ ಬಣ್ಣಕ್ಕಿರಬೇಕು.

೩೪೪. ಈ ಪಂಕಜದ ದಳಗಳು ಬಿಳಿಯ ಬಣ್ಣಕ್ಕಿರಬೇಕು. ಅಥವಾ ಚಿತ್ರವರ್ಣಕ್ಕಿದ್ದರೂ ಆಗಬಹುದು. ಭದ್ರದ ಹೊರಗೆ ಮೂರು ರೇಖೆಗಳನ್ನು ಎಳೆಯ ಬೇಕು. ಅವು ಬಿಳುಪು, ಕೆಂಪು, ಕಪ್ಪುಬಣ್ಣಗಳಾಗಿರಬೇಕು.

೩೪೫. ಈ ರೀತಿಯಲ್ಲಿ ನಿರ್ಮಿತವಾದ ಭದ್ರಕ್ಕೆ ಅಷ್ಟಲಿಂಗೋದ್ಭವ ಭದ್ರವೆಂಬದಾಗಿ ಹೆಸರು. ಮತ್ತೊಂದು ವಿಚಿತ್ರವೂ ರಮ್ಯವೂ ಆದುದನ್ನು ಹೇಳುತ್ತೇನೆ. ಅದನ್ನು ಕೇಳು.

ಅಷ್ಟಾವಿಂಶತಿರೇಖಾಶ್ಚ ತಿರ್ಯಗೂರ್ಧ್ವಂ ಸಮಂತತಃ ।
ಸಪ್ತವಿಂಶತಿಕೋಷ್ಠೇಷು ಷಡಂತೇ ಪರಿಧಯಸ್ಸ್ಮೃತಾಃ ॥ ೩೪೬ ॥

ಕೋಣೇಷು ತ್ರಿಪದೈಶ್ಚಂದ್ರಃ ಶೃಂಖಲಾ ಪಂಚಪಾದಿಕಾ ।
ವಲ್ಯರ್ಕಪಾದಜಾ ಭದ್ರಷಟ್ಕಂ ಷಟ್ಷಟ್ಪದಾತ್ಮಕಂ ॥ ೩೪೭ ॥

ಊರ್ಧ್ವೇ ಭದ್ರೇ ರವಿಪದೇ ಪದೈರಷ್ಟಾದಶೈಶ್ಶಿವಾಃ ।
ಆತ್ಮನೋಭಿಮುಖಾಸ್ಸರ್ವೇ ಕಾರ್ಯಾ ಅಷ್ಟಾ ಶುಭಾವಹಾಃ ॥ ೩೪೮ ॥

ತ್ರಯೋದಶಾಂಘ್ರಿಜಾ ವಾಪೀ ತತ್ತ್ರಯಂ ಪಶ್ಚಿಮೇ ಸ್ಮೃತಂ ।
ಪೂರ್ವೇ ತ್ವೇಕಾ ದ್ವೇ ಶಕಲೇ ಶೇಷಂ ಸರ್ವಂ ತು ಪೂರ್ವವತ್ ॥ ೩೪೯ ॥

ತಿರ್ಯಕ್‌ಭದ್ರೇ ವೇದಪದೇ ಪದನ್ಯೂನೋರ್ಧ್ವವಲ್ಲರೀ ।
ದಕ್ಷಿಣೋತ್ತರತಶ್ಚಾಪಿ ವಾಪೀನಾಂ ಶಕಲಾಷ್ಟಕಂ ॥ ೩೫೦ ॥

---

೩೪೬. ಉದ್ದುದ್ದವಾಗಿಯೂ ಅಡ್ಡಡ್ಡಲಾಗಿಯೂ ಇಪ್ಪತ್ತೆಂಟು ರೇಖೆಗಳನ್ನು ಎಳೆಯಬೇಕು. ಹೀಗೆ ಎಳೆದರೆ ಇಪ್ಪತ್ತೇಳು ಮನೆಗಳಾಗುತ್ತವೆ. ಕೊನೆಯಲ್ಲಿರುವ ಆರು ಮನೆಗಳು ಪರಿಧಿಗಳಾಗುತ್ತವೆ.

೩೪೭. ಮೂಲೆಗಳಲ್ಲಿರುವ ಮೂರು ಮನೆಗಳಲ್ಲಿ ಚಂದ್ರವು ಏರ್ಪಡುತ್ತದೆ. ಐದು ಮನೆಗಳಲ್ಲಿ ಶೃಂಖಲೆಯು ಹುಟ್ಟುತ್ತದೆ. ವಾಪಿಯು ಹನ್ನೆರಡು ಪಾದಗಳಿಂದ ಹುಟ್ಟುತ್ತದೆ. ಆರಾರು ಮನೆಗಳ ಆರು ಭದ್ರಗಳು ಹುಟ್ಟುತ್ತವೆ.

೩೪೮. ಮೇಲಿನ ಭದ್ರವು ಹನ್ನೆರಡು ಮನೆಗಳುಳ್ಳದ್ದು. ಇಲ್ಲಿ ಹದಿನೆಂಟು ಮನೆಗಳ ಅಳತೆಯಲ್ಲಿ ಲಿಂಗಗಳು ಉತ್ಪನ್ನವಾಗುತ್ತವೆ. ಎಲ್ಲವೂ ಕೂಡ ತನಗೆ ಎದುರಾಗಿರುವಂತೆ ರಚಿತವಾಗುತ್ತವೆ. ಇಂಥವು ಎಂಟು ಆಗುತ್ತವೆ.

೩೪೯. ಇದರ ಪಶ್ಚಿಮಕ್ಕೆ ಹದಿಮೂರು ಮನೆಗಳ ವಾಪಿಯು ಬರುತ್ತದೆ. ಪೂರ್ವದಲ್ಲಿ ಒಂದು ವಾಪಿಯು ಬರುತ್ತದೆ. ಎರಡು ಮನೆಗಳು ಬರುತ್ತವೆ. ಉಳಿದುವೆಲ್ಲಾ ಹಿಂದಿನಂತೆ.

೩೫೦. ಅಡ್ಡಲಾಗಿರುವ ಭದ್ರವು ನಾಲ್ಕು ಇವೆ. ಇದರಲ್ಲಿ ಹದಿನೇಳು ಮನೆಗಳ ಮೇಲುಭಾಗದ ವಲ್ಲಿಯು ಏರ್ಪಡುತ್ತದೆ. ದಕ್ಷಿಣೋತ್ತರವಾಗಿ ಎಂಟು ಮನೆಗಳ ವಾಪಿಯು ಬರುತ್ತದೆ.

ಉಭಯೋರ್ಲಿಂಗಯೋರ್ಮಾಲಾ ಸತ್ರಿಭಿರ್ನಯನೈಃ ಸ್ಮೃತಾ ।
ಸರ್ವತ್ರ ನೇತ್ರೇ ದ್ವೇ ಜ್ಞೇಯೇ ದಕ್ಷಿಣೋತ್ತರಯೋಸ್ತ್ರಿಭಿಃ ॥ ೩೫೧ ॥

ಪೃಥಕ್ಚತ್ವಾರಿಭದ್ರಾಣಿ ಹ್ಯಧೋಭದ್ರೇ ಚತುಷ್ಪದೇ ।
ದಕ್ಷಿಣೋತ್ತರದಿಗ್ಭಾಗೇ ಪೂರ್ವವಲ್ಲ್ಯೌ ಚ ಸಂಧಯೇತ್ ॥ ೩೫೨ ॥

ತ್ರ್ಯಂತೇ ಮಧ್ಯೇ ತು ಪರಿಧಿಃ ಪಂಚವಿಂಶೈರ್ಜಲೇರುಹಂ ।
ಶೃಂಖಲಾ ದ್ವಿಪದಾ ಮಧ್ಯೇ ವಲ್ಲೀ ಷಟ್ಪದಜಾ ಸ್ಮೃತಾ ॥ ೩೫೩ ॥

ವಾಪ್ಯಃಪಂಚ ಪದೈಃ ಜ್ಞೇಯಾ ಭದ್ರಂ ವೇದಪದಾತ್ಮಕಂ ।
ಸಿತಾ ವಾಪೀ ಶಿವಃ ಕೃಷ್ಣಃ ಪದ್ಮಭದ್ರೇ ಚ ಲೋಹಿತೇ ।
ತಿರ್ಯಕ್ ಭದ್ರೇ ಲಿಂಗಮಾಲೇ ಪರಿಧೀ ಪೀತವರ್ಣಕೌ ॥ ೩೫೪ ॥

---

೩೫೧. ಇಲ್ಲಿರುವ ಲಿಂಗಗಳಿಗೆ ಮೂರು ಮೂರು ಕಣ್ಣುಗಳುಂಟು. ಲಿಂಗಕ್ಕೆ ಎಲ್ಲಾ ಕಡೆಯಲ್ಲಿಯೂ ಎರಡೆರಡೇ ಕಣ್ಣುಗಳು ಇರುವುವು. ದಕ್ಷಿಣೋತ್ತರವಾಗಿರುವ ಲಿಂಗಗಳಲ್ಲಿ ಮಾತ್ರ ಮೂರು ಮೂರು ಕಣ್ಣುಗಳಿರುವುವು.

೩೫೨-೩೫೩. ಮತ್ತೊಂದು ಪ್ರಕಾರವೇನೆಂದರೆ ನಾಲ್ಕು ನಾಲ್ಕು ಭದ್ರಗಳನ್ನು ಬೇರೆ ಬೇರೆಯಾಗಿ ಮಾಡಬೇಕು. ಕೆಳಗಿನ ಭದ್ರಗಳು ನಾಲ್ಕು ಮನೆಗಳದಾಗಿರಬೇಕು. ದಕ್ಷಿಣದಲ್ಲಿಯೂ ಉತ್ತರದಲ್ಲಿಯೂ ಎರಡು ವಲ್ಲಿಗಳು ಬರಬೇಕು. ಮಧ್ಯದಲ್ಲಿ ಒಂದು ಪರಿಧಿಯು ಬರಬೇಕು. ಇಪ್ಪತ್ತೈದು ಮನೆಗಳ ಒಂದು ಕಮಲವು ಬರಬೇಕು. ಮಧ್ಯದಲ್ಲಿ ಎರಡು ಮನೆಗಳ ಶೃಂಖಲೆಯು ಬರುತ್ತದೆ. ಆರು ಮನೆಗಳ ವಲ್ಲಿಯು ಬರಬೇಕು.

೩೫೪. ಐದು ಮನೆಗಳ ವಾಪಿಯು ಬರುತ್ತದೆ. ಭದ್ರವು ನಾಲ್ಕು ಮನೆಗಳಿಂದ ಹುಟ್ಟುತ್ತದೆ. ವಾಪಿಯು ಬೆಳ್ಳಗೂ ಶಿವನು ಕೃಷ್ಣ ವರ್ಣಕ್ಕೂ ಪದ್ಮವೂ ಭದ್ರವೂ ಕೆಂಪಗೂ ಇರಬೇಕು.

ನೇತ್ರೇಂದೂ ಧವಳೌ ಕೃಷ್ಣಾ ಶೃಂಖಲಾ ಹರಿತಾ ಲತಾ ।
ಪದತ್ರಯಂ ಹಿ ವಾಪ್ಯೂರ್ಧ್ವಂ ತದ್ಯಥಾರುಚಿ ಪೂರಯೇತ್ ॥ ೩೫೫ ॥

ಪೀತಶುಕ್ಲರಕ್ತಕೃಷ್ಣಾ ಬಹಿಃ ಪರಿಧಯಃ ಸ್ಮೃತಾಃ ।
ಅಷ್ಟಲಿಂಗಾತ್ಮಕಂ ಜ್ಞೇಯಂ ಲಿಂಗತೋಭದ್ರಮುತ್ತಮಂ ॥ ೩೫೬ ॥

ಅಥಾನ್ಯೌ ದ್ವೌ ಪ್ರಕಾರೌ ಪ್ರೋಚ್ಯೇತೇ ಶೃಣು ತಾವಪಿ ।
ದ್ವಾತ್ರಿಂಶಚ್ಚರಣೇಷ್ವೇವಂ ಚತುರ್ಲಿಂಗಂ ತಥಾಷ್ಟಕಂ ॥ ೩೫೭ ॥

ಯುಕ್ತ್ಯಾ ವಿರಚಯೇತ್ತತ್ರ ವಿಶೇಷೋಥ ನಿಗದ್ಯತೇ ।
ಆದ್ಯೇ ಲಿಂಗಂ ಚತುರ್ವಿಂಶಪದಮಷ್ಟೇಂದುವಾಪಿಕಾ ॥ ೩೫೮ ॥

ಭದ್ರಂ ವಿಂಶಪದಂ ಚಾನ್ಯಲ್ಲಿಂಗಮಷ್ಟಾದಶಾತ್ಮಕಂ ।
ಭದ್ರಂ ನವಪದಂ ಶೇಷಂ ಯಾವದವಧಿಯೋಜಯೇತ್ ॥ ೩೫೯ ॥

---

೩೫೫. ತಿರ್ಯಕ್ ಭದ್ರದ ಲಿಂಗದ ಮೂಲೆಯಲ್ಲಿ ಪರಿಧಿಗಳು ಹೊಂಬಣ್ಣಕ್ಕಿರಬೇಕು. ನೇತ್ರಗಳೂ ಇಂದುವೂ ಬೆಳ್ಳಗಿರಬೇಕು. ಶೃಂಖಲೆಯು ಕಪ್ಪಗೂ ಲತೆಯು ಅರಿಸಿನ ಬಣ್ಣಕ್ಕೂ ಇರಬೇಕು.

೩೫೬. ವಾಪಿಯ ಮೇಲಿರುವ ಮೂರು ಮನೆಗಳನ್ನೂ ಬೇಕಾದ ಬಣ್ಣಗಳಿಂದ ತುಂಬಿಕೊಳ್ಳಬಹುದು. ಹೊರಗಿನ ಪರಿಧಿಗಳು ಅರಿಸಿನ, ಬಿಳುಪು, ಕೆಂಪು ಕಪ್ಪು ಬಣ್ಣಗಳುಳ್ಳವಾಗಿರಬೇಕು.

೩೫೭. ಇದು ಅಷ್ಟಲಿಂಗಾತ್ಮಕ ಲಿಂಗತೋಭದ್ರವು. ಉತ್ತಮವಾದುದು. ಇನ್ನೂ ಎರಡು ರೀತಿಗಳನ್ನು ಹೇಳುತ್ತೇನೆ. ಅವನ್ನೂ ಕೂಡ ಮನಸ್ಸಿಟ್ಟು ಕೇಳು.

೩೫೮. ಮೂವತ್ತೆರಡು ಮನೆಗಳಲ್ಲಿ ನಾಲ್ಕು ಮತ್ತು ಎಂಟು ಲಿಂಗಗಳು ಬರುತ್ತವೆ. ಇವನ್ನು ಯುಕ್ತಿಯಿಂದ ರಚಿಸಬೇಕು. ಇಲ್ಲಿನ ವಿಶೇಷವನ್ನು ಹೇಳುತ್ತೇನೆ.

೩೫೯. ಮೊದಲನೆಯದರಲ್ಲಿ ಇಪ್ಪತ್ತನಾಲ್ಕು ಮನೆಗಳ ಪ್ರಮಾಣದ ಲಿಂಗವು ಬರುತ್ತದೆ. ಹದಿನೆಂಟು ವಾಪಿಕೆಗಳು ಬರುತ್ತವೆ. ಮತ್ತೊಂದು ಭದ್ರವು ಇಪ್ಪತ್ತು ಮನೆಗಳುಳ್ಳದು. ಇಲ್ಲಿನ ಲಿಂಗವು ಹದಿನೆಂಟು ಮನೆಗಳಿಂದ ಬರುತ್ತದೆ.

ರೇಖಾಸ್ತ್ವಷ್ಟಾದಶ ಪ್ರೋಕ್ತಾಶ್ಚತುರ್ಲಿಂಗಸಮುದ್ಭವೇ ।
ಕೋಣೇಂದುಸ್ತ್ರಿಪದಶ್ವೇತಸ್ತ್ರಿಪದೈಃ ಕೃಷ್ಣಶೃಂಖಲಾ ॥ ೩೬೦ ॥

ವಲ್ಲೀ ಸಪ್ತಪದಾ ನೀಲಾ ಭದ್ರಂ ರಕ್ತಂ ಚತುಷ್ಪದಂ ।
ಭದ್ರಪಾರ್ಶ್ವೇ ಮಹಾಲಿಂಗಂ ಕೃಷ್ಣಮಷ್ಟಾದಶೈಃ ಪದೈಃ ॥ ೩೬೧ ॥

ಶಿವಪಾರ್ಶ್ವೇ ತು ವಾಪೀಂ ಚ ಕುರ್ಯಾತ್ಪಂಚಪದಾಂ ಸಿತಾಂ ।
ಪದಮೇಕಂ ತಥಾ ಪೀತಂ ಭದ್ರಂ ವಾಪ್ಯಸ್ತು ಮಧ್ಯತಃ ॥ ೩೬೨ ॥

ಶಿರಸಿ ಶೃಂಖಲಾ ಪಾರ್ಶ್ವಂ ಕುರ್ಯಾತ್ಪೀತಂ ಪದತ್ರಯಂ ।
ಲಿಂಗಾನಾಂ ಸ್ಕಂಧತಃ ಕೋಷ್ಠವಿಂಶತಿಶ್ಚಿತ್ರವರ್ಣಕಾ ॥ ೩೬೩ ॥

---

೩೬೦. ಭದ್ರವು ಒಂಭತ್ತು ಮನೆಗಳಿಂದ ಹುಟ್ಟುತ್ತದೆ. ಉಳಿದುವನ್ನು ಕೊನೆಯ ವರೆಗೆ ನೋಡಿ ಅನುಕೂಲವಿದ್ದಂತೆ ಸೇರಿಸಿಕೊಳ್ಳಬೇಕು. ನಾಲ್ಕು ಲಿಂಗಗಳು ಹುಟ್ಟುವ ಭದ್ರದಲ್ಲಿ ಹದಿನೆಂಟು ರೇಖೆಗಳನ್ನು ಎಳೆಯಬೇಕು.

೩೬೧. ಕೋಣೇಂದುವು ಮೂರು ಮನೆಗಳುಳ್ಳದ್ದು. ಬೆಳ್ಳಗಿರಬೇಕು. ಮೂರು ಮನೆಗಳಿಂದ ಶೃಂಖಲೆಯನ್ನು ಕಪ್ಪು ಬಣ್ಣದಲ್ಲಿ ಎಳೆಯಬೇಕು. ವಲ್ಲಿಯು ಏಳು ಮನೆಗಳಿಂದ ನೀಲಿಯ ಬಣ್ಣದಲ್ಲಿರಬೇಕು. ನಾಲ್ಕು ಮನೆಗಳುಳ್ಳ ಭದ್ರವು ಏರ್ಪಡುತ್ತದೆ. ಇದು ರಕ್ತವರ್ಣಕ್ಕಿರಬೇಕು.

೩೬೨. ಭದ್ರದ ಪಕ್ಕದಲ್ಲಿ ಒಂದು ಮಹಾ ಲಿಂಗವು ಬರುತ್ತದೆ. ಇದನ್ನು ಹದಿನೆಂಟು ಮನೆಗಳ ಪ್ರಮಾಣದಲ್ಲಿ ಕರಿಯ ಬಣ್ಣದಿಂದ ರಚಿಸಬೇಕು. ಲಿಂಗದ ಪಾರ್ಶ್ವದಲ್ಲಿ ವಾಪಿಯು ಬರುತ್ತದೆ. ಇದು ಐದು ಮನೆಗಳ ಪ್ರಮಾಣದ್ದಾಗಿದ್ದು ಬೆಳ್ಳಗಿರಬೇಕು.

೩೬೩-೩೬೪. ತಳಗೆ ಕಾಲಿನ ಭಾಗವು ಒಂದು ಮನೆಯದಾಗಿ ಅದು ಹರಿದ್ವರ್ಣಕ್ಕಿರಬೇಕು. ಅದೇ ಭದ್ರವು. ವಾಪಿಗಳು. ಮಧ್ಯದಲ್ಲಿ ಬರುತ್ತವೆ. ತಲೆಯ ಮೇಲೆಗಡೆ ಶೃಂಖಲೆಯು ಬರುತ್ತದೆ. ಪಾರ್ಶ್ವದಲ್ಲಿರುವ ಮೂರು ಪಾದಗಳನ್ನು

ಪರಿಧಿಃ ಪೀತವರ್ಣಸ್ತು ಪದ್ಯೈಃ ಷೋಡಶಭಿಃ ಸ್ಮೃತಃ ।
ಪದ್ಯೈಸ್ತು ನವಭಿಃ ಪಶ್ಚಾತ್ಪದ್ಮಂ ಚಿತ್ರಂ ಸಕರ್ಣಿಕಂ ॥ ೩೬೪ ॥

ತಿರ್ಯಗೂರ್ಧ್ವಂ ಗತಾ ರೇಖಾಃ ಕಾರ್ಯಾಸ್ಸ್ನಿಗ್ಧಾಸ್ತ್ರಯೋದಶ ।
ಕೋಣೇಂದುಸ್ತ್ರಿಪದಃ ಕಾರ್ಯಃ ಶೃಂಖಲಾ ತ್ರಿಪದಾ ಸ್ಮೃತಾ ॥ ೩೬೫ ॥

ವಲ್ಲೀ ಚ ಷಟ್ಪದಾ ನೀಲಾ ರಕ್ತಂ ಭದ್ರಂ ಪ್ರಕಲ್ಪಯೇತ್ ।
ಪದ್ಯೈಃ ದ್ವಾದಶಭಿಃ ಸ್ಪಷ್ಟಂ ಉತ್ತರೇ ಪೂರ್ವದಕ್ಷಿಣೇ ॥ ೩೬೬ ॥

ಪಶ್ಚಿಮಾಯಾಂ ಮಹಾರುದ್ರಮಷ್ಟಾವಿಂಶತಿಕೋಷ್ಠಕೈಃ ।
ಲಿಂಗಪಾರ್ಶ್ವೇ ತಥಾ ಮೂರ್ಧ್ನಿ ಹ್ಯಷ್ಟಕೋಷ್ಠಾಸ್ತು ಪೀತಕಾಃ ॥ ೩೬೭ ॥

ಅರಿಶಿನ ಬಣ್ಣಕ್ಕೆ ಮಾಡಿರಬೇಕು. ಲಿಂಗಗಳ ಮೇಲಿರುವ ಇಪ್ಪತ್ತು ಮನೆಗಳು ಕೆಂಪು ಬಣ್ಣಕ್ಕಿರಬೇಕು. ಪರಿಧಿಯು ಹೊಂಬಣ್ಣಕ್ಕಿರಬೇಕು. ಅದು ಹದಿನಾರು ಮನೆಗಳ ಪ್ರಮಾಣಕ್ಕಿರಬೇಕು.

೩೬೫. ಅನಂತರ ಒಂಭತ್ತು ಮನೆಗಳಿಂದ ಪದ್ಮವು ಏರ್ಪಡುತ್ತದೆ. ಅದು ಚಿತ್ರವರ್ಣದಲ್ಲಿರಬೇಕು. ಅದಕ್ಕೆ ಕರ್ಣಿಕೆಯನ್ನು ರಚಿಸಬೇಕು. ಇನ್ನೊಂದು ಪ್ರಕಾರವೇನೆಂದರೆ ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಹದಿಮೂರು ರೇಖೆಗಳನ್ನು ಎಳೆಯಬೇಕು.

೩೬೬. ಕೋಣೇಂದುವು ಮೂರು ಮನೆಗಳುಳ್ಳದ್ದಾಗಿರಬೇಕು. ಶೃಂಖಲೆಯು ಮೂರು ಮನೆಗಳುಳ್ಳದ್ದಾಗಿರಬೇಕು. ವಲ್ಲಿಯು ಆರು ಮನೆಗಳದಾಗಿರಬೇಕು. ಅದು ನೀಲಿಯ ಬಣ್ಣಕ್ಕಿರಬೇಕು. ಭದ್ರವನ್ನು ಕೆಂಪು ಬಣ್ಣಕ್ಕೆ ಬರೆಯಬೇಕು.

೩೬೭. ಹೀಗೆ ಮಾಡಿದರೆ ಉತ್ತರದಲ್ಲಿ ಹನ್ನೆರಡು ಮನೆಗಳಿಂದ ಭದ್ರವು ಬರುತ್ತದೆ. ಪೂರ್ವ, ದಕ್ಷಿಣ, ಪಶ್ಚಿಮಗಳಲ್ಲಿ ಇಪ್ಪತ್ತ ನಾಲ್ಕು ಮನೆಗಳಿಂದ ರುದ್ರರನ್ನು ಎಂದರೆ ಲಿಂಗಗಳನ್ನು ರಚಿಸಬೇಕು.

ಲಿಂಗಮೇಕಂ ತಥಾ ಗೌರ್ಯಾಸ್ತಿಲಕಂ ಪ್ರೋಕ್ತಮಂಡಲೇ ।
ಪೂಜಯೇನ್ಮಂಡಲಂ ಚೈವ ತಸ್ಯ ಗೌರೀ ಪ್ರಸೀದತಿ ॥ ೩೬೮ ॥

ಪ್ರಾಗುದೀಚ್ಯಾಂ ಗತಾ ರೇಖಾಃ ಕುರ್ಯಾದೇಕೋನವಿಂಶತಿಃ ।
ಖಂಡೇಂದುಸ್ತ್ರಿಪದಃ ಕೋಣೇ ಶೃಂಖಲಾ ಪಂಚಭಿಃ ಪದೈಃ ॥ ೩೬೯ ॥

ಏಕಾದಶಪದಾ ವಲ್ಲೀ ಭದ್ರಂ ತು ನವಭಿಃ ಪದೈಃ ।
ಚತುರ್ವಿಂಶತ್ಪದಾ ವಾಪೀ ಪರಿಧಿರ್ವಿಂಶಕೈಃ ಪದೈಃ ॥ ೩೭೦ ॥

ಮಧ್ಯೇ ಷೋಡಶಭಿಃ ಕೋಷ್ಠೈಃ ಪದ್ಮಮಷ್ಟದಳಂ ಸ್ಮೃತಂ ।
ಶ್ವೇತೇಂದುಃ ಶೃಂಖಲಾ ಕೃಷ್ಣಾ ವಲ್ಲೀ ನೀಲೇನ ಪೂರಯೇತ್ ॥ ೩೭೧ ॥

ಭದ್ರಾರುಣಂ ಸಿತಾ ವಾಪೀ ಪೀತೇ ಪರಿಧಿಕರ್ಣಿಕೇ ।
ರಕ್ತಂ ವಾ ಚಿತ್ರಿತಂ ಪದ್ಮಂ ಬಾಹ್ಯಾಸ್ಸತ್ತ್ವರಜಸ್ತಮಾಃ ॥ ೩೭೨ ॥

---

೩೬೮. ಲಿಂಗ ಪಾರ್ಶ್ವದಲ್ಲಿಯೂ ಅಂತೆಯೇ ಕತ್ತಿನ ಬಳಿಯಲ್ಲಿಯೂ ಎಂಟು ಮನೆಗಳನ್ನು ಹರಿದ್ವರ್ಣಕ್ಕೆ ಬರೆಯಬೇಕು. ಈ ಮಂಡಲದಲ್ಲಿ ರಚಿಸಿದ ಲಿಂಗವು ಗೌರಿಯ ಅನುಗ್ರಹವನ್ನು ಉಂಟು ಮಾಡುತ್ತದೆ.

೩೬೯. ಈ ಮಂಡಲವನ್ನು ಪೂಜಿಸಿದರೆ ಅವನಿಗೆ ಗೌರಿಯು ಪ್ರಸನ್ನಳಾಗುತ್ತಾಳೆ. ಮತ್ತೊಂದು ಪ್ರಕಾರವೇನೆಂದರೆ ಉದ್ದುದ್ದವಾಗಿಯೂ ಅಡ್ಡಡ್ಡವಾಗಿಯೂ ಹತ್ತೊಂಭತ್ತು ಗೆರೆಗಳನ್ನು ಎಳೆಯಬೇಕು.

೩೭೦. ಕೋಣ ಪ್ರದೇಶದಲ್ಲಿ ಮೂರು ಮನೆಗಳ ಖಂಡೇಂದುವನ್ನು ರಚಿಸಬೇಕು. ಐದು ಮನೆಗಳ ಶೃಂಖಲೆಯು ರಚಿತವಾಗಬೇಕು. ಹನ್ನೊಂದು ಮನೆಗಳ ವಲ್ಲಿಯು ಬರುತ್ತದೆ. ಒಂಭತ್ತು ಮನೆಗಳ ಭದ್ರವು ಏರ್ಪಡುತ್ತದೆ.

೩೭೧. ಇಪ್ಪತ್ತ ನಾಲ್ಕು ಮನೆಗಳ ವಾಪಿಯು ಬರುತ್ತದೆ. ಇಪ್ಪತ್ತು ಮನೆಗಳ ಪರಿಧಿಯು ಬರುತ್ತದೆ. ಮಧ್ಯದಲ್ಲಿ ಹದಿನಾರು ಮನೆಗಳಿಂದ ಒಂದು ಅಷ್ಟದಳ ಪದ್ಮವನ್ನು ರಚಿಸಬೇಕು.

೩೭೨. ಇಂದುವು ಬೆಳ್ಳಗೂ ಶೃಂಖಲೆಯು ಕಪ್ಪಗೂ ವಲ್ಲಿಯು ನೀಲಿಯ ಬಣ್ಣವಾಗಿಯೂ ಇರಬೇಕು. ಭದ್ರವು ಕೆಂಪಗೂ ವಾಪಿಯು ಬೆಳ್ಳಗೂ ಪರಿಧಿಯೂ ಪದ್ಮದ ಕರ್ಣಿಕೆಯೂ ಅರಿಸಿನ ಬಣ್ಣಕ್ಕಿರಬೇಕು.

ಸರ್ವತೋಭದ್ರಕಂ ಚೇದಂ ಕರ್ತವ್ಯಂ ಸರ್ವಕರ್ಮಸು ।
ಏವಂ ಲಿಂಗತೋಭದ್ರಾಣಾಂ ರಚನಾಃ ಕಥಿತಾ ಮಯಾ ॥ ೩೭೩ ॥

ಏತಾಶ್ಶಿವಪರಾ ಜ್ಞೇಯಾ ನ ಯೋಗ್ಯಾ ವಿಷ್ಣುಪೂಜನೇ ।
ರಾಮಲಿಂಗಾತ್ಮಕಂ ಚೇದಂ ಯೋಗ್ಯಂ ಶ್ರೀವಿಷ್ಣೋರರ್ಹಣ ಚ ॥ ೩೭೪ ॥

ಪೂಜನೇ ತ್ವೇಕ ಏವಾತ್ರ ತದ್ವಿಸ್ತಾರೇಣ ಕಥ್ಯತೇ ।
ಶಿವಸ್ಯ ಪೂಜನೇ ಲಿಂಗಮುಪಾಸ್ಯಂ ಪರಿಚಿಂತಯೇತ್ ॥ ೩೭೫ ॥

ಉಪಾಸಿಕಾ ರಾಮಮುದ್ರಾ ಜ್ಞೇಯಾ ತದ್ವದ್ಭವಾನಪಿ ।
ಲಿಂಗತೋಭದ್ರವಚ್ಚಾತ್ರ ಸಮಾವಾಹ್ಯಾತ್ರ ಬುದ್ಧಿತಃ ॥ ೩೭೬ ॥

---

೩೭೩. ಪದ್ಮವನ್ನು ಕೆಂಪಗಾಗಲಿ ಚಿತ್ರ ವರ್ಣದಲ್ಲಾಗಲಿ ಬರೆಯಬಹುದು ಹೊರಗಿನ ಮನೆಗಳು ಕೆಂಪು, ಕಪ್ಪು ಬಿಳಿಯ ಬಣ್ಣದಿಂದ ಕೂಡಿರಬೇಕು. ಇದು ಸರ್ವತೋಭದ್ರವು. ಇದನ್ನೇ ಎಲ್ಲಾ ಕರ್ಮಗಳಲ್ಲಿಯೂ ಮಾಡಬೇಕು. ಉತ್ತಮವು.

೩೭೪. ಈ ರೀತಿಯಾಗಿ ಲಿಂಗತೋಭದ್ರಗಳ ರಚನೆಯನ್ನು ಹೇಳಿರುವೆನು ಇವೆಲ್ಲವೂ ಶಿವ ಪೂಜೆಯಲ್ಲಿ ಯೋಗ್ಯವಾದುವೇ ಹೊರತು ವಿಷ್ಣು ಪೂಜೆಯಲ್ಲಿ ಯೋಗ್ಯವಾದುವಲ್ಲ.

೩೭೫. ವಿಷ್ಣು ಪೂಜೆಯಲ್ಲಿ ರಾಮಲಿಂಗತೋಭದ್ರವೊಂದೇ ಯೋಗ್ಯವಾದುದು. ಅದು ಒಂದೇ ಯೋಗ್ಯವಾದುದರಿಂದ ಅವನ್ನೇ ವಿಸ್ತಾರವಾಗಿ ಹೇಳುತ್ತೇನೆ.

೩೭೬. ಶಿವನ ಪೂಜೆ ಮಾಡುವಾಗ ಉಪಾಸ್ಯನಾದ ಶಿವನನ್ನು ಧ್ಯಾನಿಸಬೇಕು. ಉಪಾಸಕವು ರಾಮ ಮುದ್ರೆಯೆಂದು ತಿಳಿಯಬೇಕು. ಅಲ್ಲದೆ ಆ ಆವಾಹಿತ ದೇವತೆಗಳನ್ನು ತಿಳಿಯಬೇಕು.

ರಾಮತೋಭದ್ರಕಂ ಯಚ್ಚ ಜ್ಞೇಯಂ ವಿಷ್ಣುಪರಂ ಹಿ ಯತ್ ।
ರಮಾರಾಮೇತಿ ವರ್ಣೈರ್ಯಚ್ಚಿಹ್ನಿತಂ ಭದ್ರಕಂ ಕೃತಂ । ॥ ೩೭೭ ॥

ಧಿಯಾ ದೇವೀಪರಂತಚ್ಚ ಜ್ಞಾತವ್ಯಂ ಸರ್ವಕರ್ಮಸು ॥ ೩೭೮ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಮನೋಹರಕಾಂಡೇ ರಾಮದಾಸ ವಿಷ್ಣುದಾಸ ಸಂವಾದೇ ರಾಮಲಿಂಗತೋಭದ್ರಾಣಾಂ ತಥಾ ಲಿಂಗತೋಭದ್ರಾಣಾಂ ರಚನಾ ಪ್ರಕಾರಕಥನಂ ನಾಮ ಪಂಚಮಸ್ಸರ್ಗಃ ಸಮಾಪ್ತಃ

---

೩೭೭. ಲಿಂಗತೋಭದ್ರದಂತೆಯೇ ಇಲ್ಲಿಯೂ ಎಲ್ಲಾ ದೇವತೆಗಳನ್ನೂ ಆವಾಹಿಸಬೇಕು. ಈ ರಾಮತೋಭದ್ರವು ವಿಷ್ಣು ಪರವೆಂದೇ ತಿಳಿ.

೩೭೮. "ರಮಾ ರಾಮ" ಎಂಬ ವರ್ಣಗಳಿಂದ ಬರೆಯಲ್ಪಟ್ಟ ರಾಮತೋಭದ್ರಕವು ದೇವೀಪರ ವೆಂಬುದಾಗಿ ತಿಳಿ. ಇದು ಎಲ್ಲಾ ಕರ್ಮಗಳಿಗೂ ಯೋಗ್ಯವು.

ಇಂತು ಶ್ರೀ ವಾಲ್ಮೀಕಿವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀ ಆನಂದರಾಮಾಯಣದ ಮನೋಹರಕಾಂಡದಲ್ಲಿ ರಾಮದಾಸ ವಿಷ್ಣುದಾಸರ ಸಂವಾದದಲ್ಲಿ ರಾಮಲಿಂಗತೋಭದ್ರ ಮತ್ತು ಲಿಂಗತೋಭದ್ರಗಳ ರಚನಾಪ್ರಕಾರ ಕಥನವೆಂಬ ಐದನೆಯ ಸರ್ಗವು ಮುಗಿದುದು.

—o—o—o—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಐದನೆಯ ಸರ್ಗದ ಸಾರಾಂಶವು

ರಾಮತೋಭದ್ರವನ್ನು ಹಿಂದಿನ ಸರ್ಗದಲ್ಲಿ ಸಂಕ್ಷೇಪವಾಗಿ ಹೇಳಿದೆನು. ಅದನ್ನು ಇಲ್ಲಿ ವಿಸ್ತಾರವಾಗಿ ಹೇಳುವೆನು.

ಅವುಗಳನ್ನು ದೊಡ್ಡದಾಗಿ ಬರೆಯುವ ರೀತಿ ಚಿಕ್ಕದು ಮಾಡುವ ರೀತಿಗಳನ್ನು ಗೀಟುಗಳ ವ್ಯತ್ಯಾಸದಿಂದ ಹೇಳುವನು. ಅಲ್ಲದೆ ಲಿಂಗರಹಿತವಾದುದು. ರಾಮತೋಭದ್ರವೆಂದೂ ಲಿಂಗಗಳು ಮಾತ್ರವೇ ಇರತಕ್ಕದ್ದು ಲಿಂಗತೋಭದ್ರವೆಂದೂ ಎನ್ನಿಸಿಕೊಳ್ಳುತ್ತದೆ. ರಾಮನಾಮ ಲಿಂಗಗಳು ಎರಡೂ ಇದ್ದರೆ ಅದು ರಾಮಲಿಂಗತೋಭದ್ರ ಎನ್ನಿಸಿಕೊಳ್ಳುತ್ತದೆ.

ಇವುಗಳಲ್ಲಿ ಯಾವುದು ಪೂಜೆಗೆ ಯೋಗ್ಯವೆಂಬುದನ್ನು ವಿಸ್ತರಿಸುತ್ತ ಹೆಚ್ಚು ಮನೆಗಳಿಂದ ಕೂಡಿದುದಕ್ಕೆ ಹೆಚ್ಚು ಫಲವೆಂದೂ ಕ್ರಮವಾಗಿ ಕಡಿಮೆಯಾಗುವುವಕ್ಕೆ ಅದಕ್ಕನುಗುಣವಾದ ಫಲವೆಂದೂ ವಿವರಿಸುತ್ತಾನೆ. ಯಾವ ರೀತಿಯಾದ ಫಲವಿದ್ದರೂ ಕೂಡ ಆಸನವಿಲ್ಲದೆ ರಾಮನ ಪೂಜೆಯೇ ಕೂಡದು.

ಈ ಭದ್ರದಲ್ಲಿ ಲಿಂಗ, ಪರಿಧಿ, ವಾಪಿ, ಶೃಂಖಲೆ ಚಂದ್ರಗಳೆಂಬುವು ಇವೆ. ಮತ್ತು ಕಮಲವೂ ಇದೆ. ಅವಕ್ಕೆ ದೇವತೆಗಳೂ ಅಧಿ ದೇವತೆಗಳೂ ಇದ್ದಾರೆ. ಅವನ್ನು ಅವುಗಳಲ್ಲಿ ಆವಾಹಿಸಬೇಕು. ಅಲ್ಲದೆ ಇವು ಒಂದೊಂದಕ್ಕೂ ಬೇರೆ ಬೇರೆ ಬಣ್ಣಗಳೂ ಉಂಟು. ಇವು ಅರ್ಥವತ್ತಾಗಿವೆ.

ಇವಕ್ಕೆ ಆಧ್ಯಾತ್ಮವಿಚಾರವನ್ನೂ ವಿವರಿಸುತ್ತಾನೆ. ಒಟ್ಟಿನಲ್ಲಿ ಈ ಸರ್ಗದಲ್ಲಿ ಲಿಂಗತೋಭದ್ರದ ವಿವರಣೆಯೇ ಇರುವುದಲ್ಲದೆ ಅವುಗಳ ಭೇದಗಳನ್ನು ನಾನಾ ರೀತಿಯಲ್ಲಿ ವಿವರಿಸಿರುವನು.

॥ ಶ್ರೀರಸ್ತು ॥

ಅಥ ಸರ್ವತೋಭದ್ರದೇವತಾ ಲಿಖ್ಯಂತೇ

ಪ್ರಾಣಾನಾಯಮ್ಯ । ದೇಶಕಾಲೌ ಸ್ಮೃತ್ವಾ । ರಾಮತೋಭದ್ರ ದೇವತಾ ಸ್ಥಾಪನಂ ವಾ ರಾಮಲಿಂಗತೋಭದ್ರದೇವತಾಸ್ಥಾಪನಂ ವಾ ರಾಮಾ ರಾಮತೋಭದ್ರದೇವತಾಸ್ಥಾಪನಂ ವಾ ಕರಿಷ್ಯ ಇತಿ ಸಂಕಲ್ಪ್ಯ ॥ ಬ್ರಹ್ಮಾಜಜ್ಞಾನಮಿತಿಮಂತ್ರಸ್ಯ । ವಾಮದೇವಋಷಿಃ । ತ್ರಿಷ್ಟುಪ್ ಛಂದಃ । ಬ್ರಹ್ಮಾ ದೇವತಾ । ಬ್ರಹ್ಮಸ್ಥಾಪನೇ ವಿನಿಯೋಗಃ । ಬ್ರಹ್ಮಜಜ್ಞಾನಂ ಪ್ರಥಮಂಪುರಸ್ತಾತ್–ಸರ್ವತೋಭದ್ರಮಧ್ಯೇಬ್ರಹ್ಮಾಣಮಾವಾಹಯಾಮಿ। ಉತ್ತರೇ ವಾಪೀಪ್ರಾಂತಭಾಗೇ ಆಪ್ಯಾಯಸ್ವಸಮೇತುತೇ ಸೋಮಾಯ ನಮಃ ಸೋಮಮಾವಾಹಯಾಮಿ ॥ ೨ ॥

ಸರ್ವತೋಭದ್ರದ ದೇವತೆಗಳನ್ನು ಹೇಳುತ್ತೇನೆ.

೧. ಸರ್ವತೋಭದ್ರದ ದೇವತೆಗಳನ್ನು ಹೇಳುತ್ತೇನೆ. ಪ್ರಾಣಾಯಾಮ ವನ್ನು ಮಾಡಿ ದೇಶಕಾಲಗಳನ್ನು ಉಚ್ಚರಿಸಿ ರಾಮತೋಭದ್ರದ ದೇವತಾ ಸ್ಥಾಪನವನ್ನಾಗಲಿ ಅಥವಾ ರಾಮಲಿಂಗತೋಭದ್ರದ ದೇವತಾ ಸ್ಥಾಪನವನ್ನಾಗಲಿ ಅಥವಾ ರಾಮ ರಾಮತೋಭದ್ರದ ದೇವತಾ ಸ್ಥಾಪನವನ್ನಾಗಲಿ ಅಥವಾ ರಮಾರಾಮತೋಭದ್ರದ ದೇವತಾ ಸ್ಥಾಪನವನ್ನಾಗಲಿ ಮಾಡುತ್ತೇನೆ. ಎಂದು ಸಂಕಲ್ಪವನ್ನು ಮಾಡಬೇಕು.

ಬ್ರಹ್ಮಜಜ್ಞಾನವೆಂಬ ಮಂತ್ರಕ್ಕೆ ವಾಮದೇವನು ಋಷಿಯು, ಬ್ರಹ್ಮನು ದೇವತೆಯು, ಬ್ರಹ್ಮನ ಸ್ಥಾಪನೆಯಲ್ಲಿ ವಿನಿಯೋಗವು. ಬ್ರಹ್ಮಜಜ್ಞಾನಂ ಮಂತ್ರವನ್ನು ಹೇಳಿ ಸರ್ವತೋಭದ್ರದ ಮಧ್ಯದಲ್ಲಿ ಬ್ರಹ್ಮನನ್ನು ಆವಾಹಿಸುತ್ತೇನೆ.

೨. ಉತ್ತರದ ವಾಪಿಯ ಭಾಗದಲ್ಲಿ ಆಪ್ಯಾಯಸ್ವ ಎಂಬ ಮಂತ್ರವನ್ನು ಹೇಳಿ ಸೋಮಾಯನಮಃ ಸೋಮನನ್ನು ಆವಾಹಿಸುತ್ತೇನೆ.

ಈಶಾನ್ಯಾಂ ಖಂಡೇಂದೌ ತಮೀಶಾನಂಜಗತಃ--- ಈಶಾನಾಯನಮಃ ಈಶಾನಮಾವಾಹಯಾಮಿ ‖ ೩ ‖

ಪೂರ್ವೇ ವಾಪ್ಯಾಂ ತ್ರಾತಾರಮಿಂದ್ರ—ಇಂದ್ರಾಯನಮಃ ಇಂದ್ರಮಾವಾಹಾಯಾಮಿ ‖ ೪ ‖

ಆಗ್ನೇಯ್ಯಾಂ ಖಂಡೇಂದೌ ಅಗ್ನಿದೂತಂ ಅಗ್ನಿಯೇನಮಃ ಅಗ್ನಿಮಾವಾಹಯಾಮಿಂ ದಕ್ಷಿಣೇ ವಾಪ್ಯಾ ಯಮಾಯತ್ವಾಂಗಿರ ಯಮಾಯನಃ ಯಮಮಾವಾಹಯಾಮಿ ನೈರುತ್ಯಾಂ ಖಂಡೇಂದೌ ಅಸುನ್ವಂತ— ನಿರ್ಋತಯೇ ನಮಃ ನಿರ್ಋತಿಮಾವಾಹಯಾಮಿ ‖ ೫ ‖

ಪಶ್ಚಿಮೇ ವಾಪ್ಯಾಂ ತತ್ವಾಯಾಮಿ—ವರುಣಾಯ ನಮಃ ವರುಣಮಾವಾಹಯಾಮಿ ‖ ೬ ‖

ವಾಯವ್ಯೇ ಖಂಡೇಂದೌ ಆನೋನಿಯುದ್ಭಿಃ—ವಾಯವೇ ನಮಃ ವಾಯುಮಾವಾಹಯಾಮಿ ‖ ೭ ‖

ವಾಯುಸೋಮಮಧ್ಯೇ ಭದ್ರೇ ನಿವೇಶನೀಸಂಗಮನೀ—ಧ್ರುವಂ ಅಧ್ವರಂ ಸೋಮಂ ಅಪಂ ಅನಿಲಂ ಅನಲಂ ಪ್ರತ್ಯೂಷಂ ಪ್ರಭಾಸಂ ಇತ್ಯಷ್ಟವಸೂನಾವಾಹಯಾಮಿ ‖ ೮ ‖

---

೩. ಈಶಾನಕ್ಯದ ಖಂಡೇಂದುವಿನಲ್ಲಿ ತಮೀಶಾನಂ ಎಂಬ ಮಂತ್ರವನ್ನು ಹೇಳಿ ಈಶಾನಾಯನಮಃ ಈಶಾನವನ್ನು ಆವಾಹಿಸುತ್ತೇನೆ.

೪-೮. ಪೂರ್ವದ ವಾಪಿಯಲ್ಲಿ ತ್ರಾತಾರಮಿಂದ್ರ ಎಂಬ ಮಂತ್ರವನ್ನು ಹೇಳಿ ಇಂದ್ರಾಯನಮಃ ಇಂದ್ರನನ್ನು ಆವಾಹಿಸುತ್ತೇನೆ. ಆಗ್ನೇಯದ ಖಂಡೇಂದುವಿನಲ್ಲಿ ಅಗ್ನಿಂ ದೂತಂ ಎಂಬ ಮಂತ್ರವನ್ನು ಹೇಳಿ ಅಗ್ನಯೇನಮಃ ಅಗ್ನಿಯನ್ನು ಆವಾಹಿಸುತ್ತೇನೆ. ದಕ್ಷಿಣದ ವಾಪಿಯಲ್ಲಿ ಯಮಾಯತ್ವಾಂಗಿರ ಎಂಬ ಮಂತ್ರವನ್ನು ಹೇಳಿ ಯಮಾಯನಮಃ ಯಮನನ್ನು ಆವಾಹಿಸುತ್ತೇನೆ. ನೈಋತ್ಯದ ಖಂಡೇಂದುವಿನಲ್ಲಿ ಅಸುನ್ವಂತಂ ಎಂಬ ಮಂತ್ರವನ್ನು ಹೇಳಿ ನಿಋತಿಯನ್ನು ಆವಾಹಿಸುತ್ತೇನೆ. ಪಶ್ಚಿಮದ ವಾಪಿಯಲ್ಲಿ ತತ್ವಾಯಾಮಿ ಎಂಬ ಮಂತ್ರವನ್ನು ಹೇಳಿ ವರುಣಾಯನಮಃ ವರುಣನನ್ನು ಆವಾಹಿಸುತ್ತೇನೆ.

ಸೋಮೇಶಾನಮಧ್ಯೇ ಭದ್ರೇ ನಮಸ್ತೇರುದ್ರ—ವೀರಭದ್ರಂ ಶಂಭುಂ ಗಿರಿಶಂ ಅಜೈಕಪಾದಂ ಅಹಿರ್ಬುಧ್ನ್ಯಂ ಪಿನಾಕಿನಂ ಭುವನಾಧೀಶ್ವರಂ ಕಪಾಲಿನಂ ದಿಕ್ಪತಿಂ ಸ್ಥಾಣುಂ ರುದ್ರಂ ಇತ್ಯೇಕಾದಶರುದ್ರಾನಾವಾಹಯಾಮಿ ॥ ೯ ॥

ತಶಾನೇಂದ್ರಮಧ್ಯೇ ಭದ್ರೇ ಆ ಕೃಷ್ಣೇನ—ಭಗಂ ವರುಣಂ ಸೂರ್ಯಂ ವೇದಾಂಗಂ ಭಾನುಂ ರವಿಂ ಗಭಸ್ತಿಂ ಹಿರಣ್ಯರೇತಸಂ ದಿವಾಕರಂ ಮಿತ್ರಂ ಆದಿತ್ಯಂ ವಿಷ್ಣುಂ ಇತಿದ್ವಾದಶಾದಿತ್ಯಾನಾವಾಹಯಾಮಿ ॥ ೧೦ ॥

ಇಂದ್ರಾಗ್ನಿಮಧ್ಯೇ ಭದ್ರೇ ಅಶ್ವಿನಾತೇಜಸಾ—ಅಶ್ವಿನೀಕುಮಾರಾಭ್ಯಾಂ ನಮಃ ಅಶ್ವಿನಾ ದೇವಾವಾಹಯಾಮಿ ॥ ೧೧ ॥

ಅಗ್ನಿಮಯಮಧ್ಯೇ ಭದ್ರೇ ಓಂಸಮಾಶ್ಚರ್ಷಣಿಧೃತೋ—ಸಪ್ತೈತ್ರಕಾನ್ ವಿಶ್ವಾನ್ ದೇವಾನಾವಾಹಯಾಮಿ ॥ ೧೨ ॥

---

೯. ವಾಯವ್ಯದ ಖಂಡೇಂದುವಿನಲ್ಲಿ ಅನೋನಿಯುದ್ಭಿಃ ಎಂಬ ಮಂತ್ರವನ್ನು ಹೇಳಿ ವಾಯವೇನಮಃ ವಾಯುವನ್ನು ಅವಾಹಿಸುತ್ತೇನೆ.

೧೦-೧೫. ವಾಯುಸೋಮರ ಮಧ್ಯದ ಭದ್ರದಲ್ಲಿ ನಿವೇಶನೀಸಂಗಮನೀವಸೂನಾಂ ಎಂಬ ಮಂತ್ರವನ್ನು ಹೇಳಿ ಧ್ರುವ, ಅಧ್ವರ, ಸೋಮ, ಅಪ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ, ಎಂಬ ಹೆಸರುಳ್ಳ ಅಷ್ಟವಸುಗಳನ್ನು ಆವಾಹಿಸುತ್ತೇನೆ. ಸೋಮ ಈಶಾನರ ಮಧ್ಯದ ಭದ್ರದಲ್ಲಿ ನಮಸ್ತೇರುದ್ರ ಎಂಬ ಮಂತ್ರವನ್ನು ಹೇಳಿ ವೀರಭದ್ರ, ಶಂಭು, ಗಿರಿಶ, ಅಜೈಕಪಾದ ಅಹಿರ್ಬುಧ್ನ್ಯ, ಪಿನಾಕಿ, ಭುವನಾಧೀಶ್ವರ, ಕಪಾಲಿ, ದಿಕ್ಪತಿ, ಸ್ಥಾಣು, ರುದ್ರ, ಎಂಬ ಹೆಸರುಳ್ಳ ಏಕಾದಶರುದ್ರರನ್ನು ಆವಾಹಿಸುತ್ತೇನೆ. ಈಶಾನ ಇಂದ್ರರ ಮಧ್ಯದ ಭದ್ರದಲ್ಲಿ ಆ ಕೃಷ್ಣೇನ ಎಂಬ ಮಂತ್ರವನ್ನು ಹೇಳಿ ಭಗ, ವರುಣ, ಸೂರ್ಯ, ವೇದಾಂಗ, ಭಾನು, ಕವಿ, ಗಭಸ್ತಿ, ಹಿರಣ್ಯರೇತಸ, ದಿವಾಕರ, ಮಿತ್ರ. ಆದಿತ್ಯ, ವಿಷ್ಣು, ಎಂಬ ಹೆಸರುಳ್ಳ ದ್ವಾದಶಾದಿತ್ಯರನ್ನು ಆವಾಹಿಸುತ್ತೇನೆ. ಇಂದ್ರಾಗ್ನಿಯರ ಮಧ್ಯದ

ಯಮನಿರ್ಋತಿಮಧ್ಯೇ ಭದ್ರೇ ಅಭಿತ್ಯಂದೇವಂ—ಯಕ್ಷೇಭ್ಯೋ ನಮಃ ಯಕ್ಷಾನಾವಾಹಯಾಮಿ ॥ ೧೩ ॥

ನಿರ್ಋತಿವರುಣಯೋರ್ಮಧ್ಯೇ ಭದ್ರೇ ಆಯಂಗೌಃ--ಭೂತನಾಗೇಭ್ಯೋ ನಮಃ ಭೂತಾನ್ನಾಗಾನಾವಾಹಯಾಮಿ ॥ ೧೪ ॥

ವರುಣವಾಯುಮಧ್ಯೇ ಭದ್ರೇ ನದೀಭ್ಯಃಪೌಜಿಷ್ಠಂ—ಗಂಧರ್ವಾಪ್ಸರೋಭ್ಯೋ ನಮಃ ಗಂಧರ್ವಾಪ್ಸರಸ ಆವಾಹಯಾಮಿ ॥ ೧೫ ॥

ಬ್ರಹ್ಮಸೋಮಮಧ್ಯೇ ವಾಪ್ಯಾಂ ಯದಕ್ರಂದಃ—ಸ್ಕಂದಾಯನಮಃ ಸ್ಕಂದಮಾವಾಹಯಾಮಿ ॥ ೧೬ ॥

ನಮಶ್ಶಂಭವೇ—ನಂದೀಶ್ವರಾಯ ನಮಃ ನಂದೀಶ್ವರಮಾವಾಹಯಾಮಿ ॥

ಭದ್ರಂಕರ್ಣೇಭಿಃ—ಶೂಲಾಯನಮಃ ಶೂಲಮಾವಾಹಯಾಮಿ ॥ ೧೮ ॥

ವಿಶ್ವಕರ್ಮಾಹ್ಯಜ ಮಹಾಕಾಲಾಯನಮಃ—ಮಹಾಕಾಲಮಾವಾಹಯಾಮಿ

ಭದ್ರದಲ್ಲಿ ಅಶ್ವಿನಾತೇಜಸಾ ಚಕ್ಷುಃ ಎಂಬ ಮಂತ್ರವನ್ನು ಹೇಳಿ ಅಶ್ವಿನೀ ಕುಮಾರಾಭ್ಯಾಂನಮಃ ಅಶ್ವಿನೀ ದೇವತೆಗಳನ್ನು ಆವಾಹಿಸುತ್ತೇನೆ. ಅಗ್ನಿಯ ಮರಮಧ್ಯದ ಭದ್ರದಲ್ಲಿ ಸಮಾಶ್ಚರ್ಷಣಿಧೃತಃ ಎಂಬ ಮಂತ್ರವನ್ನು ಹೇಳಿ ಸಪೈತೃಕರಾದ ವಿಶ್ವೇದೇವರನ್ನು ಆವಾಹಿಸುತ್ತೇನೆ. ಯಮ ನಿಋಋತಿಗಳ ಮಧ್ಯದ ಭದ್ರದಲ್ಲಿ ಅಭಿತ್ಯಂದೇವಂ ಎಂಬ ಮಂತ್ರವನ್ನು ಹೇಳಿ ಯಕ್ಷೇಭ್ಯೋ ನಮಃ ಯಕ್ಷರನ್ನು ಆವಾಹಿಸುತ್ತೇನೆ.

೧೬-೨೦. ನಿಋಋತಿವರುಣರ ಮಧ್ಯದ ಭದ್ರದಲ್ಲಿ ಆಯಂಗೌಃ ಎಂಬ ಮಂತ್ರವನ್ನು ಹೇಳಿ ಭೂತನಾಗೇಭ್ಯೋನಮಃ ಭೂತನಾಗರನ್ನು ಆವಾಹಿಸುತ್ತೇನೆ. ವರುಣವಾಯುಗಳ ಮಧ್ಯದ ಭದ್ರದಲ್ಲಿ ನದೀಭ್ಯಃ ಪೌಂಜಿಷ್ಠಂ ಎಂಬ ಮಂತ್ರವನ್ನು ಹೇಳಿ ಗಂಧರ್ವಾಪ್ಸರೋಭ್ಯೋನಮಃ ಗಂಧರ್ವಾಪ್ಸರಸರನ್ನು ಆವಾಹಿಸುತ್ತೇನೆ. ಬ್ರಹ್ಮಸೋಮರ ಮಧ್ಯದ ವಾಪಿಯಲ್ಲಿ ಯದಕ್ರಂದಃ ಪ್ರಥಮಂ ಎಂಬ ಮಂತ್ರವನ್ನು ಹೇಳಿ ಸ್ಕಂದಾಯನಮಃ ಸ್ಕಂದನನ್ನು

ಬ್ರಹ್ಮೇಶಾನಮಧ್ಯೇ ವಲ್ಲೀಷು ಅದಿತಿರ್ದ್ಯೌರ-ಋಕ್ಷಾದೀನಾವಾಹಯಾಮಿ ॥

ಬ್ರಹ್ಮೇಂದ್ರ ಮಧ್ಯೇ ವಾಪ್ಯಾಂ ಶ್ರೀಶ್ಚ ತೇ-ದುರ್ಗಾಯೈ ನಮಃ ದುರ್ಗಾಮಾ ವಾಹಯಾಮಿ ॥ ೨೧ ॥

ಇದಂ ವಿಷ್ಣುಃ ವಿಷ್ಣವೇ ನಮಃ ವಿಷ್ಣುಮಾವಾಹರಾಮಿ ॥ ೨೨ ॥

ಬ್ರಹ್ಮಾಗ್ನಿಮಧ್ಯೇ ವಲ್ಲೀಷು ಉದೀರತಾ ಸ್ವಧಾಯೈ ನಮಃ ಸ್ವಧಾಮಾವಾಹಾಮಿ ॥ ೨೩ ॥

ಬಹ್ಮಯಮಮಧ್ಯೇ ವಾಪ್ಯಾಂ ಪರಂಮೃತ್ಯೋ—ಮೃತ್ಯವೇ ನಮಃ ಮೃತ್ಯುಮಾವಾಹಯಾಮಿ ॥ ೨೪ ॥

ಬ್ರಹ್ಮನಿರ್ಋತಿಮಧ್ಯೇ ವಲ್ಲೀಷು ಗಣಾನಾಂತ್ವಾ-ಗಣಪತಯೇ ನಮಃ ಗಣಪತಿ ಮಾವಾಹಯಾಮಿ ॥ ೨೫ ॥

ಬ್ರಹ್ಮವರುಣಮಧ್ಯೇ ವಾಪ್ಯಾಂ ಶನ್ನೋದೇವಿ ಅದ್ಭ್ಯೋ ನಮಃ ಅಪ ಆವಾಹಯಾಮಿ ॥ ೨೬ ॥

ಆವಾಹಿಸುತ್ತೇನೆ. ನಮಃ ಶಂಭವೇ ಎಂಬ ಮಂತ್ರವನ್ನು ಹೇಳಿ ನಂದೀಶ್ವರಾಯನಮಃ ನಂದೀಶ್ವರನನ್ನು ಆವಾಹಿಸುತ್ತೇನೆ. ಭದ್ರಂಕರ್ಣೇಭಿಃ ಎಂಬ ಮಂತ್ರವನ್ನು ಹೇಳಿ ಶೂಲಾಯನಮಃ ಶೂಲವನ್ನು ಆವಾಹಿಸುತ್ತೇನೆ.

೨೧-೨೫. ವಿಶ್ವಕರ್ಮಾಹ್ಯಜ ಎಂಬ ಮಂತ್ರವನ್ನು ಹೇಳಿ ಮಹಾಕಾಲಾಯನಮಃ ಮಹಾಕಾಲನನ್ನು ಆವಾಹಿಸುತ್ತೇನೆ. ಬ್ರಹ್ಮೇಶಾನರ ಮಧ್ಯದ ವಲ್ಲಿಗಳಲ್ಲಿ ಅದಿತಿರ್ದ್ಯೌ ಎಂಬ ಮಂತ್ರವನ್ನು ಹೇಳಿ ಋಕ್ಷಾದಿಗಳನ್ನು ಆವಾಹಿಸುತ್ತೇನೆ. ಬ್ರಹ್ಮೇಂದ್ರರ ಮಧ್ಯದ ವಾಪಿಯಲ್ಲಿ ಶ್ರೀಶ್ಚತೇ ಎಂಬ ಮಂತ್ರವನ್ನು ಹೇಳಿ ದುರ್ಗಾಯೈನಮಃ ದುರ್ಗೆಯನ್ನು ಆವಾಹಿಸುತ್ತೇನೆ. ಇಂದು ವಿಷ್ಣುಃ ಎಂಬ ಮಂತ್ರವನ್ನು ಹೇಳಿ ವಿಷ್ಣವೇನಮಃ ವಿಷ್ಣುವನ್ನು ಆವಾಹಿಸುತ್ತೇನೆ. ಬ್ರಹ್ಮಾಗ್ನಿಗಳ ಮಧ್ಯದಲ್ಲಿ ವಲ್ಲಿಗಳಲ್ಲಿ ಉದೀರತಾ ಎಂಬ ಮಂತ್ರವನ್ನು ಹೇಳಿ ಸ್ವಧಾಯೈನಮಃ ಸ್ವಧೆಯನ್ನು ಆವಾಹಿಸುತ್ತೇನೆ.

೨೬-೩೦. ಬ್ರಹ್ಮ ಯಮರ ಮಧ್ಯದಲ್ಲಿರುವ ವಾಪಿಯಲ್ಲಿ ಪರಂಮೃತ್ಯೋ ಎಂಬ ಮಂತ್ರವನ್ನು ಹೇಳಿ ಮೃತ್ಯವೇನಮಃ ಮೃತ್ಯುವನ್ನು ಆವಾಹಿಸುತ್ತೇನೆ.

ಬ್ರಹ್ಮವಾಯುಮಧ್ಯೇ ವಲ್ಲೀಷು ಮಾರುತೋಯಸ್ಯ=ಮರುತೇನಮಃ ಮರುತಂ ಆವಾಹಯಾಮಿ ॥ ೨೭ ॥

ಬ್ರಹ್ಮಣಃಪಾದಮೂಲೇ ಕರ್ಣಿಕಾಧಃ ಸ್ಯೋನಾಪೃಥಿವೀ—ಪೃಥ್ವ್ಯೈ ನಮಃ ಪೃಥ್ವೀಮಾವಾಹಯಾಮಿ ॥ ೨೮ ॥

ತತ್ರೈವಪಂಚನದ್ಯಃ—ಗಂಗಾದಿಸರ್ವನದೀದೇವತಾಭ್ಯೋ ನಮಃ ಗಂಗಾದಿಸರ್ವ ನದೀರಾವಾಹಯಾಮಿ ॥ ೨೯ ॥

ತತ್ರೈವ ಧಾಮ್ನೋಧಾಮ್ನೋರಾಜಂ ಸಪ್ತಸಾಗರೇಭ್ಯೋ ನಮಃ ಸಪ್ತಸಾಗರಾನಾವಾವಾಹಯಾಮಿ ॥ ೩೦ ॥

ತತಃ ಕರ್ಣಿಕೋಪರಿ ನಾಮಮಂತ್ರೇಣ ಮೇರವೇ ನಮಃ ಮೇರುಂ ಮಾವಾವಿರುಮಿ ॥ ೩೧ ॥

ತತಃ ಪೀಠಪರಿಧೌ ಸೋಮಾದಿಸನ್ನಿಧೌ ಕ್ರಮೇಣ ಆಯುಧಾನಿ ಸೋಮಸಮೀಪೇ ಗದಾಯೈ ನಮಃ ಗದಾಮಾವಾಹಯಾಮಿ ॥ ೩೨ ॥

ಬ್ರಹ್ಮನಿರ್ ಋತಿಗಳ ಮಧ್ಯದ ವಲ್ಲಿಗಳಲ್ಲಿ ಗಣಾನಾಂತ್ವಾ ಎಂಬ ಮಂತ್ರವನ್ನು ಹೇಳಿ ಗಣಪತಯೇನಮಃ ಗಣಪತಿಯನ್ನು ಆವಾಹಿಸುತ್ತೇನೆ. ಬ್ರಹ್ಮ ವರುಣರ ಮಧ್ಯದಲ್ಲಿರುವ ವಾಪಿಯಲ್ಲಿ ಶನ್ನೋದೇವಿ ಎಂಬ ಮಂತ್ರವನ್ನು ಹೇಳಿ ಅದ್ಭ್ಯೋನಮಃ ನೀರನ್ನು ಆವಾಹಿಸುತ್ತೇನೆ. ಬ್ರಹ್ಮವಾಯುಗಳ ಮಧ್ಯದಲ್ಲಿರುವ ವಲ್ಲಿಗಳಲ್ಲಿ ಮಾರುತೋಯಸ್ಯ ಎಂಬ ಮಂತ್ರವನ್ನು ಹೇಳಿ ಮರುತೇನಮಃ ಮರುತ್ತನ್ನು ಆವಾಹಿಸುತ್ತೇನೆ. ಬ್ರಹ್ಮನ ಪಾದಮೂಲದಲ್ಲಿರುವ ಕರ್ಣಿಕೆಯ ಕೆಳಗೆ ಸ್ಯೋನಾಪೃಥಿವೀ ಎಂಬ ಮಂತ್ರವನ್ನು ಹೇಳಿ ಪೃಥಿವ್ಯೈನಮಃ ಪೃಥಿವಿಯನ್ನು ಆವಾಹಿಸುತ್ತೇನೆ.

೩೧-೩೬. ಅಲ್ಲಿಯೇ ಪಂಚ ನದಿಗಳನ್ನು ಆವಾಹಿಸಬೇಕು. ಸರಸ್ವತಿ ಎಂಬ ಮಂತ್ರವನ್ನು ಹೇಳಿ ಗಂಗಾದಿ ಸರ್ವನದೀಭ್ಯೋನಮಃ ಗಂಗಾದಿ ಸರ್ವನದಿಗಳನ್ನು ಆವಾಹಿಸುತ್ತೇನೆ. ಅಲ್ಲಿಯೇನೆ. ಧಾಮ್ನೋ ಧಾಮ್ನೋ ರಾಜಂಸ್ತತೋವರುಣ ಎಂಬ ಮಂತ್ರವನ್ನು ಹೇಳಿ ಸಪ್ತಸಾಗರೇಭ್ಯೋನಮಃ

ಈಶಾನಸಮೀಪೇ ಶೂಲಾಯ ನಮಃ ಶೂಲಮಾವಾಹಯಾಮಿ ॥ ೩೩ ॥

ಇಂದ್ರಸಮೀಪೇ ವಜ್ರಾಯ ವಜ್ರಮಾವಾಹಯಾಮಿ ॥ ೩೪ ॥

ಅಗ್ನಿಸಮೀಪೇ ಶಕ್ತಯೇ ನಮಃ ಶಕ್ತಿಮಾವಾಹಯಾಮಿ ॥ ೩೫ ॥

ಯಮಸಮೀಪೇ ದಂಡಾಯ ನಮಃ ದಂಡಮಾವಾಹಯಾಮಿ ॥ ೩೬ ॥

ನಿಋತಿಸಮೀಪೇ ಖಡ್ಗಾಯ ನಮಃ ಖಡ್ಗಮಾವಾಹಯಾಮಿ ॥ ೩೭ ॥

ವರುಣಸಮೀಪೇ ಪಾಶಾಯ ನಮಃ ಪಾಶಮಾವಾಹಯಾಮಿ ॥ ೩೮ ॥

ವಾಯುಸಮೀಪೇ ಅಂಕುಶಾಯ ನಮಃ ಅಂಕುಶಮಾವಾಹಯಾಮಿ ॥

ಪುನಃ ಸೋಮಸ್ಯೋತ್ತರೇ ಗದಾಸಮೀಪೇ ಗೌತಮಾಯ ನಮಃ ಗೌತಮಮಾವಾಹಯಾಮಿ ॥ ೪೦ ॥

ಈಶಾನ್ಯಾಂ ಭರದ್ವಾಜಾಯ ನಮಃ ಭರದ್ವಾಜಮಾವಾಹಯಾಮಿ ॥ ೪೧ ॥

ಸಪ್ತಸಾಗರಗಳನ್ನು ಆವಾಹಿಸುತ್ತೇನೆ. ಆಮೇಲೆ ಕರ್ಣಿಕೆಯಮೇಲೆ ನಾಮ ಮಂತ್ರದಿಂದ ಮೇರವೇ ನಮಃ ಮೇರುವನ್ನು ಆವಾಹಿಸುತ್ತೇನೆ ಆಮೇಲೆ ಪೀಠಪರಿಧಿಯಲ್ಲಿ ಸೋಮಾದಿಗಳ ಹತ್ತಿರದಲ್ಲಿ ಕ್ರಮವಾಗಿ ಆಯುಧಗಳನ್ನು ಆವಾಹಿಸಬೇಕು. ಸೋಮನ ಹತ್ತಿರದಲ್ಲಿ ಗದಾಯೈನಮಃ ಗದೆಯನ್ನು ಆವಾಹಿಸುತ್ತೇನೆ. ಈಶಾನನ ಸಮೀಪದಲ್ಲಿ ಶೂಲಾಯನಮಃ ಶೂಲವನ್ನು ಆವಾಹಿಸುತ್ತೇನೆ. ಇಂದ್ರನ ಹತ್ತಿರದಲ್ಲಿ ವಜ್ರಾಯನಮಃ ವಜ್ರವನ್ನು ಆವಾಹಿಸುತ್ತೇನೆ.

೩೭–೪೪. ಅಗ್ನಿಯ ಸಮೀಪದಲ್ಲಿ ಶಕ್ತಯೇನಮಃ ಶಕ್ತಿಯನ್ನು ಆವಾಹಿಸುತ್ತೇನೆ. ಯಮನ ಸಮೀಪದಲ್ಲಿ ದಂಡಾಯನಮಃ ದಂಡವನ್ನು ಆವಾಹಿಸುತ್ತೇನೆ. ನಿಋತಿಯ ಸಮೀಪದಲ್ಲಿ ಖಡ್ಗಾಯನಮಃ ಖಡ್ಗವನ್ನು ಆವಾಹಿಸುತ್ತೇನೆ. ವರುಣನ ಸಮೀಪದಲ್ಲಿ ಪಾಶಾಯನಮಃ ಪಾಶವನ್ನು ಆವಾಹಿಸುತ್ತೇನೆ. ವಾಯುವಿನ ಸಮೀಪದಲ್ಲಿ ಅಂಕುಶಾಯನಮಃ ಅಂಕುಶವನ್ನು

ಪೂರ್ವೇ ವಿಶ್ವಾಮಿತ್ರಾಯ-ನಮಃ ವಿಶ್ವಾಮಿತ್ರಮಾವಾಹಯಾಮಿ ॥

ಆಗ್ನೇಯ್ಯಾಂ ಕಶ್ಯಪಾಯ-ನಮಃ ಕಶ್ಯಪಮಾವಾಹಯಾಮಿ ॥ ೪೩ ॥

ದಕ್ಷಿಣೇ ಜಮದಗ್ನಯೇ ನಮಃ ಜಮದಗ್ನಿಮಾವಾಹಯಾಮಿ ॥ ೪೪ ॥

ನೈಋತ್ಯಾಂ ವಸಿಷ್ಠಾಯ ನಮಃ ವಸಿಷ್ಠಮಾವಾಹಯಾಮಿ ॥ ೪೫ ॥

ಪಶ್ಚಿಮೇ ಅತ್ರಯೇ ನಮಃ ಅತ್ರಿಮಾವಾಹಯಾಮಿ ॥ ೪೬ ॥

ವಾಯವ್ಯಾಂ ಅರುಂಧತ್ಯೈ ನಮಃ ಅರುಂಧತೀಮಾವಾಹಯಾಮಿ ॥

ಪುನಃ ಪೂರ್ವಾದಿಕ್ರಮೇಣ ಪೂರ್ವೇ ವಿಶ್ವಾಮಿತ್ರ ಸಮೀಪೇ ಐಂದ್ರ್ಯೈನಮಃ ಐಂದ್ರೀಮಾವಾಹಯಾಮಿ ॥ ೪೭ ॥

ಆಗ್ನೇಯ್ಯಾಂ ಕೌಮಾರ್ಯೈ ನಮಃ ಕೌಮಾರೀಮಾವಾಹಯಾಮಿ ॥ ೪೯ ॥

ದಕ್ಷಿಣೇ ಬ್ರಾಹ್ಮ್ಯೈ ನಮಃ ಬ್ರಾಹ್ಮೀಮಾವಾಹಯಾಮಿ ॥ ೫೦ ॥

ಆವಾಹಿಸುತ್ತೇನೆ. ಮತ್ತೆ ಸೋಮನ ಉತ್ತರದಲ್ಲಿ ಗದೆಯ ಸಮೀಪದಲ್ಲಿ ಗೌತಮಾಯನಮಃ ಗೌತಮನನ್ನು ಆವಾಹಿಸುತ್ತೇನೆ. ಈಶಾನ್ಯದಲ್ಲಿ ಭರದ್ವಾಜಾಯನಮಃ ಭರದ್ವಾಜನನ್ನು ಆವಾಹಿಸುತ್ತೇನೆ. ಪೂರ್ವದಲ್ಲಿ ವಿಶ್ವಾಮಿತ್ರಾಯ ನಮಃ ವಿಶ್ವಾಮಿತ್ರನನ್ನು ಆವಾಹಿಸುತ್ತೇನೆ.

೪೫-೫೦. ಆಗ್ನೇಯದಲ್ಲಿ ಕಶ್ಯಪಾಯನಮಃ ಕಶ್ಯಪನನ್ನು ಆವಾಹಿಸುತ್ತೇನೆ. ದಕ್ಷಿಣದಲ್ಲಿ ಜಮದಗ್ನಯೇನಮಃ ಜಮದಗ್ನಿಯನ್ನು ಆವಾಹಿಸುತ್ತೇನೆ. ನೈರುತ್ಯದಲ್ಲಿ ವಸಿಷ್ಠಾಯನಮಃ ವಸಿಷ್ಠನನ್ನು ಆವಾಹಿಸುತ್ತೇನೆ. ಪಶ್ಚಿಮದಲ್ಲಿ ಅತ್ರಯೇನಮಃ ಅತ್ರಿಯನ್ನು ಆವಾಹಿಸುತ್ತೇನೆ. ವಾಯುವ್ಯದಲ್ಲಿ ಅರುಂಧಿತ್ಯೈನಮಃ ಅರುಂಧತಿಯನ್ನು ಆವಾಹಿಸುತ್ತೇನೆ. ಮತ್ತು ಪೂರ್ವಾದಿಕ್ರಮದಿಂದ— ಪೂರ್ವದಲ್ಲಿ ವಿಶ್ವಾಮಿತ್ರನ ಸಮೀಪದಲ್ಲಿ ಐಂದ್ರ್ಯೈನಮಃ ಐಂದ್ರಿಯನ್ನು ಆವಾಹಹಿಸುತ್ತೇನೆ.

ನೈಋತ್ಯಾಂ ವಾರಾಹ್ಯೈ ನಮಃ ವಾರಾಹೀಮಾವಾಹಯಾಮಿ || ೫೧ ||

ಪಶ್ಚಿಮೇ ಚಾಮುಂಡಾಯೈ ನಮಃ ಚಾಮುಂಡಾಮಾವಾಹಯಾಮಿ ||

ವಾಯುವ್ಯೇ ವೈಷ್ಣವ್ಯೈ ನಮಃ ವೈಷ್ಣವೀಮಾವಾಹಯಾಮಿ || ೫೩ ||

ಉತ್ತರೇ ಮಾಹೇಶ್ವರ್ಯೈ ನಮಃ ಮಹೇಶ್ವರೀಮಾವಾಹಯಾಮಿ || ೫೪ ||

ಈಶಾನ್ಯಾಂ ವೈನಾಯಕ್ಯೈ ನಮಃ ವೈನಾಯಕೀಮಾವಾಹಯಾಮಿ ||

ಅಷ್ಟದಳಮಧ್ಯೇ ಸೂರ್ಯಾಯ ನಮಃ ಸೂರ್ಯಮಾವಾಹಯಾಮಿ || ೫೬ ||

ಬಾಹ್ಯಪೂರ್ವಾದ್ಯಷ್ಟದಿಕ್ಷು ಯಥಾಸ್ಥಾನೇಷು ಪೂರ್ವೇ ಸೋಮಾಯ ನಮಃ ಸೋಮಮಾವಾಹಯಾಮಿ || ೫೭ ||

ಆಗ್ನೇಯ್ಯಾಂ ಭೌಮಾಯ ನಮಃ ಭೌಮಮಾವಾಹಯಾಮಿ || ೫೮ ||

ದಕ್ಷಿಣೇ ಬುಧಾಯ ನಮಃ ಬುಧಮಾವಾಹಯಾಮಿ || ೫೯ ||

೫೧-೫೭. ಆಗ್ನೇಯದಲ್ಲಿ ಕೌಮಾರ್ಯೈನಮಃ ಕೌಮಾರಿಯನ್ನು ಆವಾಹಿಸುತ್ತೇನೆ. ದಕ್ಷಿಣದಲ್ಲಿ ಬ್ರಾಹ್ಮ್ಯೈನಮಃ ಬ್ರಾಹ್ಮಿಯನ್ನು ಆವಾಹಿಸುತ್ತೇನೆ. ನೈಋತ್ಯದಲ್ಲಿ ವಾರಾಹ್ಯೈನಮಃ ವಾರಾಹಿಯನ್ನು ಆವಾಹಿಸುತ್ತೇನೆ ಪಶ್ಚಿಮದಲ್ಲಿ ಚಾಮುಂಡಿಯೈನಮಃ ಚಾಮುಂಡಿಯನ್ನು ಆವಾಹಿಸುತ್ತೇನೆ. ವಾಯುವ್ಯದಲ್ಲಿ ವೈಷ್ಣವ್ಯೈನಮಃ ವೈಷ್ಣವಿಯನ್ನು ಆವಾಹಿಸುತ್ತೇನೆ. ಉತ್ತರದಲ್ಲಿ ಮಹೇಶ್ವರ್ಯೈ ನಮಃ ಮಹೇಶ್ವರಿಯನ್ನು ಆವಾಹಿಸುತ್ತೇನೆ. ಈಶಾನ್ಯದಲ್ಲಿ ವೈನಾಯಕ್ಯೈ ನಮಃ ವೈನಾಯಕಿಯನ್ನು ಆವಾಹಿಸುತ್ತೇನೆ.

೫೮–೬೦. ಅಷ್ಟದಳ ಮಧ್ಯದಲ್ಲಿ ಸೂರ್ಯಾಯನಮಃ ಸೂರ್ಯನನ್ನು ಆವಾಹಿಸುತ್ತೇನೆ. ಹೊರಗಡೆಯಲ್ಲಿ ಪೂರ್ವದಿಂದ ಮೊದಲುಮಾಡಿಕೊಂಡು ಎಂಟುದಿಕ್ಕುಗಳಲ್ಲಿ ಆಯಾಯ ಜಾಗದಲ್ಲಿ:—ಪೂರ್ವದಲ್ಲಿ ಸೋಮಾಯನಮಃ

ನೈಋತ್ಯಾಂ ಬೃಹಸ್ಪತಯೇ ನಮಃ ಬೃಹಸ್ಪತಿಮಾವಾಹಯಾಮಿ ।

ಪಶ್ಚಿಮೇ ಶುಕ್ರಾಯ ನಮಃ ಶುಕ್ರಮಾವಾಹಯಾಮಿ ॥ ೬೧ ॥

ವಾಯವ್ಯಾಂ ಶನೈಶ್ಚರಾಯ ನಮಃ ಶನೈಶ್ಚರಮಾವಾಹಯಾಮಿ ।

ಉತ್ತರೇ ರಾಹವೇ ನಮಃ ರಾಹುಮಾವಾಹಯಾಮಿ ॥ ೬೩ ॥

ಈಶಾನ್ಯಾಂ ಕೇತವೇ ನಮಃ ಕೇತುಮಾವಾಹಯಾಮಿ ॥ ೬೪ ॥

ಏತಾ ದೇವತಾಸ್ಸರ್ವತೋಭದ್ರೇ ಪ್ರತಿಷ್ಠಾಪ್ಯ ತತಃ ಪರಿಧಿಭೂತಪಂಕ್ತೌ

ಸುಷೇಣಾಯ ನಮಃ ಸುಷೇಣಮಾವಾಹಯಾಮಿ ॥ ೬೫ ॥

ಸರ್ವೇಷು ಲಿಂಗೇಷು ರುದ್ರಾಯ ನಮಃ ರುದ್ರಮಾವಾಹಯಾಮಿ ॥ ೬೬ ॥

ಸರ್ವಾಸು ವಾಪೀಷು ನಳಾಯ ನಮಃ ನಳಮಾವಾಹಯಾಮಿ ॥ ೬೭ ॥

ಸರ್ವೇಷು ಭದ್ರೇಷು ಸುಗ್ರೀವಾಯ ನಮಃ ಸುಗ್ರೀವಮಾವಾಹಯಾಮಿ ।

ಸೋಮನನ್ನು ಆವಾಹಿಸುತ್ತೇನೆ. ಆಗ್ನೇಯದಲ್ಲಿ ಭೌಮಾಯನಮಃ ಭೌಮನನ್ನು ಆವಾಹಿಸುತ್ತೇನೆ.

೬೧-೬೪. ದಕ್ಷಿಣದಲ್ಲಿ ಬುಧಾಯನಮಃ ಬುಧನನ್ನು ಆವಾಹಿಸುತ್ತೇನೆ. ನೈರುತ್ಯದಲ್ಲಿ ಬೃಹಸ್ಪತಯೇನಮಃ ಬೃಹಸ್ಪತಿಯನ್ನು ಆವಾಹಿಸುತ್ತೇನೆ. ಪಶ್ಚಿಮದಲ್ಲಿ ಶುಕ್ರಾಯನಮಃ ಶುಕ್ರನನ್ನು ಆವಾಹಿಸುತ್ತೇನೆ. ವಾಯುವ್ಯದಲ್ಲಿ ಶನೈಶ್ಚರಾಯನಮಃ ಶನೈಶ್ಚರನನ್ನು ಆವಾಹಿಸುತ್ತೇನೆ.

೬೫-೬೮. ಉತ್ತರದಲ್ಲಿ ರಾಹವೇನಮಃ ರಾಹುವನ್ನು ಆವಾಹಿಸುತ್ತೇನೆ. ಈಶಾನ್ಯದಲ್ಲಿ ಕೇತವೇನಮಃ ಕೇತುವನ್ನು ಆವಾಹಿಸುತ್ತೇನೆ. ಈ ದೇವತೆಗಳನ್ನು ಸರ್ವತೋಭದ್ರದಲ್ಲಿ ಪ್ರತಿಷ್ಠೆಮಾಡಿ, ಆಮೇಲೆ ಪರಿಧಿಯ ಪಂಕ್ತಿಗಳಲ್ಲಿ ಸುಷೇಣಾಯನಮಃ ಸುಷೇಣನನ್ನು ಆವಾಹಿಸುತ್ತೇನೆ. ಎಲ್ಲಾ ಲಿಂಗಗಳಲ್ಲಿಯೂ ರುದ್ರಾಯನಮಃ ರುದ್ರನನ್ನು ಆವಾಹನೆ ಮಾಡುತ್ತೇನೆ.

ಸರ್ವೇಷು ತಿರ್ಯಗ್ಭದ್ರೇಷು ಗವಾಯ ನಮಃ ಗವಮಾವಾಹಯಾಮಿ ॥

ಸರ್ವಾಸು ಪೀತಶೃಂಖಲಾಸು ಅಂಗದಾಯ ನಮಃ ಅಂಗದಮಾವಾಹಯಾಮಿ ॥ ೭೦ ॥

ಸರ್ವಾಸು ಕೃಷ್ಣಶೃಂಖಲಾಸು ವಿಭೀಷಣಾಯ ನಮಃ ವಿಭೀಷಣಮಾವಾಹಯಾಮಿ ॥ ೭೧ ॥

ಸರ್ವಾಸು ವಲ್ಲೀಷು ಜಾಂಬವತೇ ನಮಃ ಜಾಂಬವತಮಾವಾಹಯಾಮಿ ॥

ಸರ್ವೇಷು ಖಂಡೇಷು ಮೈಂದಾಯ ನಮಃ ಮೈಂದಮಾವಾಹಯಯಮಿ ॥

ಸರ್ವಾಸುಪರಿಧಿಷು ದ್ವಿವಿದಾಯ ನಮಃ ದ್ವಿವಿದಮಾವಾಹಯಾಮಿ ॥

ಮುದ್ರಾಯಾಂ ರಾಮಜಾನಕೀಭ್ಯಾಂ ನಮಃ ರಾಮಜಾನಕ್ಯಾ ಆವಾಹಯಾಮಿ ॥ ೭೫ ॥

ಮುದ್ರಾಯಾಃ ಪಶ್ಚಿಮೇ ಪೀತಪರಿಧೌ ಲಕ್ಷ್ಮಣಾಯ ನಮಃ ಲಕ್ಷ್ಮಣಮಾವಾಹಯಾಮಿ ॥ ೭೬ ॥

ಮುದ್ರಾಯಾ ಉತ್ತರೇ ಭರತಾಯ ನಮಃ ಭರತಮಾವಾಹಯಾಮಿ ॥

೬೯–೭೩. ಎಲ್ಲಾ ವಾಪಿಗಳಲ್ಲಿಯೂ ನಲಾಯನಮಃ ನಲನನ್ನು ಆವಾಹಿಸುತ್ತೇನೆ. ಎಲ್ಲಾ ಭದ್ರಗಳಲ್ಲಿಯೂ ಸುಗ್ರೀವಾಯನಮಃ ಸುಗ್ರೀವನನ್ನು ಆವಾಹಿಸುತ್ತೇನೆ. ಎಲ್ಲಾ ತಿರ್ಯಕ್ ಭದ್ರಗಳಲ್ಲಿಯೂ ಗವಾಯನಮಃ ಗವನನ್ನು ಆವಾಹಿಸುತ್ತೇನೆ. ಎಲ್ಲಾ ಪೀತಶೃಂಖಲನೆಗಳಲ್ಲಿ ಅಂಗದಾಯನಮಃ ಅಂಗದನನ್ನು ಆವಾಹಿಸುತ್ತೇನೆ.

೭೩–೭೬. ಎಲ್ಲಾ ಕೃಷ್ಣಶೃಂಖಲೆಗಳಲ್ಲಿ ವಿಭೀಷಣಾಯನಮಃ ವಿಭೀಷಣನನ್ನು ಆವಾಹಿಸುತ್ತೇನೆ. ಎಲ್ಲಾ ವಲ್ಲಿಗಳಲ್ಲಿಯೂ ಜಾಂಬವಂತಾಯನಮಃ ಜಾಂಬುವಂತನನ್ನು ಆವಾಹಿಸುತ್ತೇನೆ. ಎಲ್ಲಾ ಖಂಡಗಳಲ್ಲಿಯೂ ಮೈಂದಾಯ ನಮಃ ಮೈಂದನನ್ನು ಆವಾಹಿಸುತ್ತೇನೆ. ಎಲ್ಲಾ ಖಂಡಗಳಲ್ಲಿಯೂ ದ್ವಿವಿದಾಯ ನಮಃ ದ್ವಿವಿದನನ್ನು ಆವಾಹಿಸುತ್ತೇನೆ.

೭೭–೮೦. ಮುದ್ರೆಯಲ್ಲಿ ರಾಮಜಾನಕೀಭ್ಯಾಂನಮಃ ರಾಮಜಾನಕಿಯರನ್ನು ಆವಾಹಿಸುತ್ತೇನೆ. ಮುದ್ರೆಯ ಪಶ್ಚಿಮದ ಪೀತಪರಿಧಿಯಲ್ಲಿ ಲಕ್ಷ್ಮಣಾಯ

ದಕ್ಷಿಣೇ ಶತ್ರುಘ್ನಾಯ ನಮಃ ಶತ್ರುಘ್ನಮಾವಾಹಯಾಮಿ ॥ ೭೮ ॥

ಬಹಿಸ್ತ್ರಿಪರಿಧಿಷು ಶ್ವೇತಪರಿಧೌ ಭಾಗೀರಥ್ಯೈ ನಮಃ ಭಾಗೀರಥೀಮಾವಾಹಯಾಮಿ ॥ ೭೯ ॥

ರಕ್ತಪರಿಧೌ ಸರಸ್ವತ್ಯೈ ನಮಃ ಸರಸ್ವತೀಮಾವಾಹಯಾಮಿ ॥ ೮೦ ॥

ಕೃಷ್ಣಪರಿಧೌ ಯಮುನಾಯೈ ನಮಃ ಯಮುನಾಮಾವಾಹಯಾಮಿ ॥

ಏವಮೇವ ರಾಮಭದ್ರೇಪಿ ಆವಾಹನಂ ಕಾರ್ಯಂ. ರಾಮನಾಮಭದ್ರೇ ಮುದ್ರಾಯಾಮೇವ ವಿಶೇಷಃ. ಆದೌ ರಮಾಮಾವಾಹ್ಯ ರಾಮಂ ಆವಾಹಯೇತ್ ಏವಮಾವಾಹನಂ ಕೃತ್ವಾ ಷೋಡಶೋಪಚಾರೈಃ ಪೂಜಯೇತ್॥ ಶೇಷಾನ್ನೇನ ದಿಗ್ಬಲಿಃ ಕಾರ್ಯಃ.

ಇತ್ಯಾನಂದರಾಮಾಯಣಾಂತರ್ಗತ ರಾಮತೋಭದ್ರ
ದೇವತಾ ಸ್ಥಾಪನಂ

ನಮಃ ಲಕ್ಷ್ಮಣನನ್ನು ಆವಾಹಿಸುತ್ತೇನೆ. ಮುದ್ರೆಯ ಉತ್ತರದಲ್ಲಿ ಭರತಾಯ ನಮಃ ಭರತನನ್ನು ಆವಾಹಿಸುತ್ತೇನೆ. ಮುದ್ರೆಯ ದಕ್ಷಿಣದಲ್ಲಿ ಶತ್ರುಘ್ನಾಯ ನಮಃ ಶತ್ರುಘ್ನನನ್ನು ಆವಾಹಿಸುತ್ತೇನೆ.

೮೨--೮೫. ಮುದ್ರೆಯ ಮುಂದೆ ವಾಯುಪುತ್ರಾಯನಮಃ ವಾಯುಪುತ್ರನನ್ನು ಆವಾಹಿಸುತ್ತೇನೆ. ಹೊರಗಿನ ಮೂರು ಪರಿಧಿಗಳಲ್ಲಿ ಶ್ವೇತಪರಿಧಿಯಲ್ಲಿ ಭಾಗೀರಥ್ಯೈನಮಃ ಭಾಗೀರಥಿಯನ್ನು ಆವಾಹಿಸುತ್ತೇನೆ. ರಕ್ತಪರಿಧಿಯಲ್ಲಿ ಸರತ್ಯೈನಮಃ ಸರಸ್ವತಿಯನ್ನು ಆವಾಹಿಸುತ್ತೇನೆ. ಕೃಷ್ಣ ಪರಿಧಿಯಲ್ಲಿ ಯಮುನಾಯೈನಮಃ ಯಮುನೆಯನ್ನು ಆವಾಹಿಸುತ್ತೇನೆ.

ಈ ರೀತಿಯಲ್ಲಿ ರಮಾರಾಮಭದ್ರದಲ್ಲಿಯೂ ಆವಾಹನೆಗಳನ್ನು ಮಾಡಬೇಕು. ರಮಾರಾಮಭದ್ರದ ಮುದ್ರೆಯಲ್ಲಿ ಮಾತ್ರ ವಿಶೇಷವಿದೆ. ಏನೆಂದರೆ ಮೊದಲು ರಮೆಯನ್ನು ಆವಾಹಿಸಿ ಅನಂತರ ರಾಮನನ್ನು ಆವಾಹಿಸಬೇಕು. ಈ ರೀತಿಯಾಗಿ ಆವಾಹನೆಗಳನ್ನು ಮಾಡಿ ಷೋಡಶೋಪಚಾರಗಳಿಂದ ಪೂಜಿಸಬೇಕು. ಶೇಷಾನ್ನದಿಂದ ದಿಗ್ಬಲಿಯನ್ನು ಹಾಕಬೇಕು.

ಇಂತು ಆನಂದರಾಮಾಯಣಾಂತರ್ಗತವಾದ ರಾಮತೋಭದ್ರದ
ದೇವತಾ ಸ್ಥಾಪನೆಯು.

॥ ಶ್ರೀರಾಮದಾಸ ಉವಾಚ ॥

ಶಿಷ್ಯ ಯದ್ಯತ್ಪ್ರಿಯಂ ತಸ್ಯೈ ರಾಮಾಯ ತದ್ವದಾಮ್ಯಹಂ ।
ಮಾಸೇಷು ಚೈತ್ರಮಾಸಸ್ತು ರಾಘವಸ್ಯಾತಿವಲ್ಲಭಃ ॥ ೧ ॥

ಪಕ್ಷಯೋಃಸ್ಸಿತಪಕ್ಷಸ್ತು ಪ್ರಿಯೋಽಸ್ತಿ ರಾಘವಸ್ಯ ಹಿ ।
ಸರ್ವಾಸು ತಿಥಿಷು ಶ್ರೇಷ್ಠಾ ನವಮೀ ರಾಘವಪ್ರಿಯಾ ॥ ೨ ॥

ಸೂರ್ಯವಂಶಸಮುದ್ಭೂತಸ್ತಸ್ಮಾಚ್ಚ ಭಾನುವಾಸರಃ ।
ಪ್ರಿಯೋಽತಿರಾಘವಸ್ಯೈವ ನಕ್ಷತ್ರೇಷು ಪುನರ್ವಸುಃ ॥ ೩ ॥

ಚಂಪಕಃ ಪುಷ್ಪಜಾತೌ ಹಿ ತುಲಸೀ ಚ ತಥೈವ ಚ ।
ಅಥವಾ ನವಕಂ ಚಾಽಪಿ ಪುಷ್ಪಾಣಾಂ ರಾಘವಪ್ರಿಯಂ ॥ ೪ ॥

ಜಾತಿಶ್ಚಂಪಕಮಂದಾರೌ ತುಲಸೀ ಮುನಿಮಾಲತೀ ।
ದಮನಃ ಕೇತಕೀ ಸಿಂಹೀ ಪುಷ್ಪಾಣಾಂ ನವಕಂ ಸ್ಮೃತಂ ॥ ೫ ॥

೧-೨, ಶ್ರೀರಾಮದಾಸನು ಹೇಳಿದನು--ಎಲೈ ಶಿಷ್ಯನೇ! ರಾಮನಿಗೆ ಯಾವು ಯಾವುದು ಪ್ರಿಯವೋ ಅದನ್ನು ಹೇಳುತ್ತೇನೆ. ಕೇಳು. ಮಾಸಗಳಲ್ಲಿ ಚೈತ್ರಮಾಸವು ರಾಮನಿಗೆ ಬಹು ಪ್ರಿಯವಾದುದು. ಪಕ್ಷಗಳಲ್ಲಿ ಶುಕ್ಲಪಕ್ಷವೂ ತಿಥಿಗಳಲ್ಲಿ ನವಮೀತಿಥಿಯೂ ರಾಮನಿಗೆ ಪ್ರಿಯವಾದುವು.

೩ ಈ ರಾಮನು ಸೂರ್ಯವಂಶದಲ್ಲಿ ಹುಟ್ಟಿದವನಾದುದರಿಂದ ಅವನಿಗೆ ಭಾನುವಾರವು ಪ್ರಿಯವಾದುದು. ನಕ್ಷತ್ರಗಳಲ್ಲಿ ಪುನರ್ವಸುನಕ್ಷತ್ರವು ರಾಮನಿಗೆ ಪ್ರಿಯವಾದುದು.

೪-೫. ಹೂವಿನ ಜಾಗಗಳಲ್ಲಿ ಸಂಪಿಗೆಯ ಹೂವೂ, ಪತ್ರಗಳಲ್ಲಿ ತುಳಸೀ ಪತ್ರವೂ, ಅಥವಾ ಒಂಭತ್ತು ಹೂಗಳೂ ರಾಘವನಿಗೆ ಪ್ರಿಯವಾದುವು. ಅವಾವುವೆಂದರೆ ಜಾಜಿ, ಸಂಪಗೆ, ಪಾರಿಜಾತ, ತುಲಸಿ, ಅಗಸೆ, ಮಲ್ಲೆ, ದವನ, ತಾಳೆ, ಸಿಂಹೀ ಈ ಒಂಭತ್ತು.

ತಥಾ ನವವಿಧಂ ಚಾನ್ನಂ ರಾಘವಸ್ಯಾತಿವಲ್ಲಭಂ ।
ಮೋದಕೋ ಲಡ್ಡುಕೋ ಮಂಡೋ ಪೂರ್ಣಗರ್ಭಾಥ ಫೇಣಿಕಾ ॥ ೬ ॥

ವಟಿಕಃ ಪರ್ಪಟಃ ಖಾದ್ಯಂ ಘೃತಪಕ್ವಂ ನವತ್ವಿತಿ ।
ಏತಾನಿ ನವಭಕ್ಷ್ಯಾಣಿ ರಾಘವಸ್ಯ ಪ್ರಿಯಾನಿ ಹಿ ॥ ೭ ॥

ಅಥವಾನ್ಯತ್ ಪ್ರವಕ್ಷ್ಯಾಮಿ ದಿವ್ಯಾನ್ನನವಕಂ ಶುಭಂ ।
ಮೋದಕೋ ಲಡ್ಡುಕೋ ಮಂಡೋ ವಟಿಕೋ ಫೇಣಿಕೋ ತಥಾ ॥

ವರಾನ್ನಮೋದನಂ ಶಾಕಂ ಪಾಯಸಂ ನವಕಂ ಶುಭಂ ।
ಅನ್ಯಚ್ಛೃಣುಷ್ವ ಭೋ್ಯೇ ಶಿಷ್ಯ ನವಾನ್ನಂ ರಾಘವಪ್ರಿಯಂ ॥ ೯ ॥

ಏಕಾಶೀತಿಕುಡವಂ ಚ ಗೋಕ್ಷೀರಂ ತಂಡುಲಸ್ತಥಾ ।
ಸಪಾದದ್ವಿಕುಡವಾಶ್ಚ ಮುದ್ಗಾಶ್ಚ ವಿತುಷಾಸ್ತಥಾ ॥ ೧೦ ॥

೬-೭. ಅದೇ ರೀತಿಯಲ್ಲಿ ಶ್ರೀರಾಮನಿಗೆ ಒಂಭತ್ತು ಬಗೆಯ ಅನ್ನಗಳು ಪ್ರಿಯವಾದುದು. ಮೋದಕ (ಖರ್ಜೀಕಾಯಿ) ಲಡ್ಡು ಉಂಡೆಗಳು ಮಂಡಿಗೆ, ಹೂರ್ಣವನ್ನು ಒಳಗೆ ಇಟ್ಟುಮಾಡುವ ಸುಗಿಲುಂಡೆ, ಫೇಣಿ, ವಡೆ, ಹಪ್ಪಳ, ಖಾಡ್ಯ (ಚಕ್ಕುಲಿ) ಘೃತಪಕ್ವ ಎಂಬುವು ಒಂಭತ್ತು ಭಕ್ಷ್ಯಗಳು ರಾಮನಿಗೆ ಪ್ರಿಯವಾದುದು.

೮-೯. ದಿವ್ಯವಾದ ಒಂಭತ್ತು ಬಗೆಯ ಅನ್ನಗಳನ್ನು ಹೇಳುತ್ತೇನೆ. ಕಡುಬು, ಲಡ್ಡು, ಮಂಡಿಗೆ, ಫೇಣಿ, ಅನ್ನ, ವರಾನ್ನ, ಶಾಖವು (ಪಲ್ಯಗಳು) ಪಾಯಸ, ಸಾಧಾರಣದ ಅನ್ನ ಇವು ಒಂಭತ್ತು ಅನ್ನಗಳು. ರಾಘವನಿಗೆ ಪ್ರಿಯವಾದ ಬೇರೆ ಒಂಭತ್ತು ಅನ್ನಗಳನ್ನೂ ಹೇಳುತ್ತೇನೆ. ಕೇಳು.

೧೦-೧೩. ಎಂಭತ್ತೊಂದು ಕುಡುವ ಹಸುವಿನಹಾಲು, ಅಂತೆಯೇ ಅಕ್ಕಿ ಎರಡೂಕಾಲು ಕುಡುವ, ಹೆಸರುಬೇಳೆ ಹೊಟ್ಟಿಲ್ಲದ್ದು ಒಂದು ಕುಡುವ, ಸಕ್ಕರೆ ಒಂಭತ್ತು ಕುಡುವ, ಮೂರು ಕುಡುವ ಜೇನುತುಪ್ಪ, ಒಂದು ಕುಡುವದ ಎಂಟನೆಯ ಒಂದು ಭಾಗದಷ್ಟು ಮೆಣಸು, ಅಷ್ಟೇ ಜಾಯಿಕಾಯಿ, ಜಾಯಿಪತ್ರೆ,

ಕುಡವಸ್ತ್ವೇಕ ಏವಾಥ ಶರ್ಕರಾ ಕುಡವಾ ನವ ।
ತ್ರಿಕುಡವಂ ಮಧು ಪ್ರೋಕ್ತಂ ಘೃತಂ ಚ ಕುಡವದ್ವಯಂ ॥ ೧೧ ॥

ಮರಿಚಂ ಕುಡವಾಷ್ಟಾಂಶಮಿತಂ ಜಾತೀಫಲಂ ತಥಾ ।
ಕುಡವಸ್ತ್ವೇಕ ಏವಾಥ ಜಾತಿಪತ್ರಸ್ತಥೈವ ಚ ॥ ೧೨ ॥

ಗ್ರಾಹ್ಯಾ ಮಾರೀಚಮಾನೇನ ನವಾನ್ನಂ ನವಭಿಸ್ತ್ವಿದಂ ।
ತೋಷದಂ ರಾಮಚಂದ್ರಸ್ಯ ಭಕ್ತ್ಯಾ ಕಾರ್ಯಂ ಸದಾ ನರೈಃ ॥ ೧೩ ॥

ಲಘುನವಾನ್ನಂ ವಕ್ಷ್ಯಾಮಿ ನೈವೇದ್ಯಾರ್ಥಂ ನಿರಂತರಂ ।
ಕುಡುವಾ ನವ ಗೋಕ್ಷೀರಂ ತಂಡುಲಾಃಕುಂಡವಸ್ಯ ಚ ॥ ೧೪ ॥

ಚತುರ್ಥಾಂಶಮಿತಾ ಗ್ರಾಹ್ಯಾಃ ಕುಡವಾಷ್ಟಾಂಶಸಂಮಿತಾಃ ।
ಗ್ರಾಹ್ಯಾ ವಿತುಷಮುದ್ಗಾಶ್ಚ ಕುಡವಾರ್ಧಸಿತಾ ಸ್ಮೃತಾ ॥ ೧೫ ॥

ಘೃತಂ ಮುದ್ಗಸಮಂ ಗ್ರಾಹ್ಯಂ ತಾವನ್ಮಾನಂ ಮಧು ಸ್ಮೃತಂ ।
ತಾವನ್ಮಾನಂ ಶ್ರೀಫಲಂ ಚ ಮರೀಚಂ ಟಂಕಸಮಿತಂ ॥ ೧೬ ॥

ಒಂದು ಕುಡುವ ಈ ರೀತಿಯಾಗಿ ಈ ಒಂಭತ್ತು ಸೇರಿಸಿಮಾಡಿದ ಅನ್ನವು ನವಾನ್ನವೆಂದೆನಿಸಿಕೊಳ್ಳುವುದು. ಇದು ರಾಮಚಂದ್ರನಿಗೆ ಸಂತೋಷವನ್ನುಂಟು ಮಾಡುತ್ತದೆ. ಇದನ್ನು ನರರು ಯಾವಾಗಲೂ ಮಾಡಬೇಕು. (ಇವು ಒಂಭತ್ತು ಆಗುತ್ತವೆ)

೧೪-೧೭. ನೈವೇದ್ಯಕ್ಕೋಸ್ಕರ ಲಘುನವಾನ್ನವನ್ನು ಹೇಳುತ್ತೇನೆ. ಅದನ್ನು ಯಾವಾಗಲೂ ಮಾಡಬಹುದು. ಒಂಭತ್ತು ಕುಡುವದಷ್ಟು ಹಸುವಿನ ಹಾಲು, ಕಾಲುಕುಡುವ ಅಕ್ಕಿ, ಹೊಟ್ಟು ತೆಗೆದ ಹೆಸರುಬೇಳೆ ಕುಡುವದ ಎಂಟನೆಯ ಒಂದುಭಾಗ, ಅರ್ಧಕುಡುವದಷ್ಟು ಸಕ್ಕರೆ, ತುಪ್ಪವು ಎಂಟನೆಯ ಒಂದುಕುಡುವ, ಎಂಟನೆಯ ಒಂದು ಕುಡುವಜೇನು, ಎಂಟನೆಯ ಒಂದುಕುಡುವ ಬಿಲ್ವಪತ್ರೆ, ಇದಕ್ಕೆ ಲಘುನವಾನ್ನವೆಂದು ಹೆಸರು (ಕುಡುವವೆಂದರೆ ಹನ್ನೆರಡು

ಟಂಕಾರ್ಧಾ ಜಾತಿಪತ್ರಶ್ಚ ನವಾನ್ನಂ ಲಘು ಕೀರ್ತಿತಂ ।
ಕುಡವೋರ್ಕಥಲೂಕಶ್ಚ ಟಂಕೋ ಮಾಷಚತುಷ್ಟಯಂ ॥ ೧೭ ॥
ಲಘುನವಾನ್ನಮೇತಚ್ಚ ರಾಘವಾಯ ನಿವೇದಯೇತ್ ।
ನಿರಂತರಂ ಹಿ ಪೂಜಾಯಾಂ ರಾಘವಸ್ಯಾತಿಹರ್ಷದಂ ॥ ೧೮ ॥
ಚೂತಜಂಬುಕಪಿತ್ಥಾಶ್ಚ ಬೀಜಪೂರಂ ಚ ದಾಡಿಮಂ ।
ಖರ್ಜೂರೀ ನಾರಿಕೇಳಂ ಚ ಕದಳೀಫಲಮೇವ ಚ ॥ ೧೯ ॥
ಪನಸಂ ಚೇತಿ ರಾಮಾಯ ಫಲಾನಿ ನವಸರ್ವದಾ ॥
ಏತಾನ್ಯತಿಪ್ರಿಯಾಣ್ಯತ್ರ ಪೂಜಾಯಾಂ ತನ್ನಿವೇದಯೇತ್ ॥ ೨೦ ॥
ಸೀತಾಫಲಂ ಚ ಜಂಬೀರಂ ನಾರಂಗಂ ಸ್ನಿಗ್ಧಮಜ್ಜಕಂ ।
ಜಾತೀಫಲಂ ಮಾತುಲಿಂಗಂ ತಥಾ ದ್ರಾಕ್ಷಾಫಲಂ ಶುಭಂ ॥ ೨೧ ॥
ಉರ್ವಾರುಕಂ ತಥಾ ಧಾತ್ರೀ ಫಲಂ ಚೈತಾನಿ ವೈ ನವ ।
ಫಲಾನಿ ರಾಮಪೂಜಾಯಾಮುಕ್ತಾನಿ ಮುನಿಭಿಸ್ಸದಾ ॥ ೨೨ ॥

ಥಲೂಕ ಥಲೂಕವೆಂದರೆ ಅಳತೆಯನ್ನು ಮಾಡುವ ಬಳ್ಳ ಟಂಕವೆಂದರೆ ನಾಲ್ಕು ಮಾಷ (ಉದ್ದಿನಕಾಳಿನಷ್ಟು)

೧೮. ಈ ಲಘುನವಾನ್ನವನ್ನು ರಾಘವನಿಗೆ ನಿವೇದನಮಾಡತಕ್ಕದ್ದು. ನಿತ್ಯವೂ ಪೂಜೆಮಾಡುವಾಗ ಇದನ್ನು ರಾಘವನಿಗೆ ನಿವೇದನಮಾಡಿದರೆ ಬಹು ಸಂತೋಷವಾಗುತ್ತದೆ

೧೯-೨೦. ಮಾವಿನಹಣ್ಣು, ನೇರಳೆಹಣ್ಣು, ಬೇಲದಹಣ್ಣು, ಮಾದಲದ ಹಣ್ಣು, ದಾಳಿಂಬೆಹಣ್ಣು, ಖರ್ಜೂರದಹಣ್ಣು, ತೆಂಗಿನಕಾಯಿ, ಬಾಳೆಯಹಣ್ಣು, ಹಲಸಿನಹಣ್ಣು, ಎಂಬದಾಗಿ ಒಂಭತ್ತು ಬಗೆಯ ಹಣ್ಣುಗಳೂ ರಾಮನಿಗೆ ಬಹು ಪ್ರಿಯವಾದುದು ಇದನ್ನು ರಾಮನಿಗೆ ನಿವೇದನವನ್ನು ಮಾಡಬೇಕು.

೨೧-೨೨. ಸೀತಾಫಲ, ನಿಂಬೆಹಣ್ಣು, ಕಿತ್ತಲೆಹಣ್ಣು, ಸ್ನಿಗ್ಧಮಜ್ಜಕ (ಖರ್ಜೂರ) ಜಾತೀಫಲ ಮಾದಳ, ದ್ರಾಕ್ಷಾಫಲ, ಉರ್ವಾರುಕ (ಸೌತೆಕಾಯಿ) ನೆಲ್ಲಿಹಣ್ಣು, ಈ ಒಂಭತ್ತು ಹಣ್ಣುಗಳು ರಾಮನಿಗೆ ನಿವೇದನಮಾಡತಕ್ಕವೆಂದು ಮುನಿಗಳು ಹೇಳುತ್ತಾರೆ.

ನವೋಪಚಾರಸ್ತಾಂಬೂಲೋ ರಾಘವಾಯ ನಿವೇದಯೇತ್ ।
ನಾಗವಲ್ಲೀ ಕ್ರಮುಕಂ ಚ ಖದಿರಸ್ಸಾಥ ಏವ ಚ ॥ ೨೩ ॥

ಜಾತಿಪತ್ರೀ ಲವಂಗಂ ಚ ಜಾತೀಫಲವರಾಂಗಕೇ ।
ಏಲಾಚೇತಿ ನವವಿಧಸ್ತಾಂಬೂಲಃ ಕೀರ್ತ್ಯತೇ ಬುಧೈಃ ॥ ೨೪ ॥

ನವರಾಜೋಪಚಾರಾಂಶ್ಚ ರಾಘವಾಯ ನಿವೇದಯೇತ್ ।
ಛತ್ರಂ ಸಿಂಹಾಸನಂ ಯಾನಂ ಚಾಮರಂ ವ್ಯಜನಂ ತಥಾ ॥ ೨೫ ॥

ಪಾನತಾಂಬೂಲಪಾತ್ರಂ ಚ ಪಾತ್ರಂ ನಿಷ್ಠೀವನಸ್ಯ ಚ ।
ವಸ್ತ್ರಕೋಶಶ್ಚೇತಿ ರಾಜ್ಞಾಮುಪಚಾರಾ ನವ ಸ್ಮೃತಾಃ ॥ ೨೬ ॥

ನವಾಥ ಭೋಗ್ಯವಸ್ತೂನಿ ರಾಘವಾಯ ನಿವೇದಯೇತ್ ।
ಚಂದನಂ ಪುಷ್ಪಮಾಲಾಂ ಚ ದ್ರವ್ಯಂ ಪರಿಮಳಂ ತಥಾ ॥ ೨೭ ॥

ಆವಂತಸೋ ಫಲಂ ಚಾಪಿ ಸುಗಂಧಂ ತೈಲಮುತ್ತಮಂ ।
ತಾಂಬೂಲಂ ಕಸ್ತೂರಿಕಾಪಿ ತಥಾ ರಕ್ತಾಕ್ಷತಾಶ್ಶುಭಾಃ ॥ ೨೮ ॥

೨೩-೨೪. ರಾಮನಿಗೆ ನವೋಪಚಾರ ತಾಂಬೂಲವನ್ನು ನಿವೇದನಮಾಡಬೇಕು. ಅವಾವುವೆಂದರೆ ವೀಳೆಯದೆಲೆ, ಅಡಕೆ, ಕಗ್ಗಲಿಪುಡಿ (ಕಾಚು) ಸುಣ್ಣ, ಜಾಯಿಕಾಯಿ, ಲವಂಗ, ಜಾಯಿಪತ್ರೆ, ಕೊಗುರಿ, ಏಲಕ್ಕಿ ಇವಿಷ್ಟು ಕೂಡಿದರೆ ನವವಿಧ ತಾಂಬೂಲವೆಂದು ತಿಳಿದವರು ಹೇಳುತ್ತಾರೆ.

೨೫-೨೬. ನವರಾಜೋಪಚಾರಗಳನ್ನು ರಾಮನಿಗೆ ನಿವೇದಿಸಬೇಕು. ಅವಾವುವೆಂದರೆ, ಛತ್ರಿ, ಸಿಂಹಾಸನ, ಯಾನ, ಚಾಮರ, ಬೀಸಣಿಗೆ, ಪಾನಪಾತ್ರ, ತಾಂಬೂಲಪಾತ್ರ, ತಂಬುಲವನ್ನು ಉಪಯೋಗಿಸುವ ಪೀಕದಾನಿ ಎಂಬ ಪಾತ್ರೆ. ಬಟ್ಟೆಯ ಪೆಟ್ಟಿಗೆ ಇವು ಒಂಭತ್ತೂ ರಾಜರಿಗೆ ನವೋಪಚಾರಗಳೆನಿಸಿಕೊಳ್ಳುತ್ತವೆ.

೨೭-೨೮. ರಾಮನಿಗೆ ಒಂಭತ್ತು ಭೋಗ್ಯವಸ್ತುಗಳನ್ನು ಕೊಡಬೇಕು. ಅವಾವುವೆಂದರೆ:—ಚಂದನ, ಹೂವಮಾಲೆ, ಪರಿಮಳದ್ರವ್ಯ, ತಲೆಗೆ ಒಡವೆ, ಫಲ, ಸುಗಂಧತೈಲ, ತಾಂಬೂಲ, ಕಸ್ತೂರಿ, ರಕ್ತಾಕ್ಷತೆ, ಇವಿಷ್ಟು ಭೋಗ್ಯ ವಸ್ತುಗಳು. ಇವನ್ನು ರಾಮನಿಗೆ ಅರ್ಪಿಸಬೇಕು.

ಏತಾನಿ ಭೋಗ್ಯವಸ್ತೂನಿ ರಾಘವಾಯ ನಿವೇದಯೇತ್ ।
ನವೋಪಚಾರಾಶ್ಶಯ್ಯಾಪಿ ರಾಘವಾಯ ಸಮರ್ಪಯೇತ್ ॥ ೨೯ ॥

ಪರ್ಯಂಕಂ ಮಾಲಿಕಾ ರಮ್ಯಾ ವಿತಾನಂ ಚೋಪಬರ್ಹಣಂ ।
ಆದರ್ಶೋ ದೀಪಿಕಾ ತೋಯಪಾತ್ರಂ ಪ್ರಾವರಣಂ ಶುಭಂ ॥ ೩೦ ॥

ವ್ಯಜನಶ್ಚೇತಿ ಶಯ್ಯಾಯಾಶ್ಚೋಪಚಾರಾ ನವ ಸ್ಮೃತಾಃ।
ನವ ವಸ್ತ್ರಾಣಿ ರಾಮಾಯ ದೇಯಾನ್ಯತಿಮಹಾಂತಿ ಚ ॥ ೩೧ ॥

ಪಿತಾಂಬರಮುತ್ತರೀಯಂ ಚೋಷ್ಣೀಷಂ ಕಂಚುಕಂ ತಥಾ ।
ಉಷ್ಣೀಷೋರ್ಧ್ವಸ್ಥಿತಂ ದಿವ್ಯಂ ತಥಾ ಚ ಕಟಿಬಂಧನ ॥ ೩೨ ॥

ಮುಖಶೋಧನವಸ್ತ್ರಂ ಚ ತ್ರಿಮುಖಂ ಹ್ಯಂಕಯೋಗ್ಯಕಂ ।
ತಥಾ ಪ್ರಾವರಣಂ ದಿವ್ಯಂ ನವವಸ್ತ್ರಾಣಿ ಭೋ ದ್ವಿಜ ॥ ೩೩ ॥

ನವ ದಿವ್ಯಾಸ್ತ್ವಲಂಕಾರಾ ದೇಯಾಶ್ರೀರಾಘವಾಯ ಹಿ ।
ಕುಂಡಲೇ ಕಂಕಣೇ ಮಾಲಾ ಕೇಯೂರೇ ನೂಪುರೇ ತಥಾ ॥ ೩೪ ॥

೨೯-೩೦. ಒಂಭತ್ತು ಉಪಚಾರಗಳಿಂದ ಕೂಡಿದ ಹಾಸಿಗೆಯನ್ನು ಶ್ರೀರಾಮನಿಗೆ ನಿವೇದಿಸಬೇಕು. ಅವಾವುವೆಂದರೆ:—ಮಂಚ, ಮೆತ್ತನೆಯ ಸುಪ್ಪತ್ತಿಗೆ, ಮೇಲ್ಕಟ್ಟು, ದಿಂಬು. ಕನ್ನಡಿ, ದೀಪ, ನೀರಿನ ಪಾತ್ರೆ (ಜಲಕುಂಭ) ಹೊದ್ದೆಯುವ ಬಟ್ಟೆ, ಬಿಸಣಿಗೆ ಇವು ಹಾಸಿಗೆಯ ನವೋಪಚಾರಗಳು.

೩೧-೩೩. ಶ್ರೀರಾಮನಿಗೆ ಉತ್ತಮವಾದ ವಸ್ತ್ರಗಳನ್ನು ಕೊಡಬೇಕು, ಅವಾವುವೆಂದರೆ;—ಪಿತಾಂಬರ, ಹೊದೆಯುವ ಬಟ್ಟೆ, ತಲೆಗೆ ಪಾಗು, ಅಂಗಿ, ಪಾಗಿನಮೇಲಿನ ಬಟ್ಟೆ, ನಡುಕಟ್ಟು ಮುಖವನ್ನು ಒರೆಸಿಕೊಳ್ಳುವ ಬಟ್ಟೆ, ತೊಡೆಯಮೇಲೆ ಹಾಕಿಕೊಳ್ಳುವ ಮೂರು ಮೂಲೆಯ ವಸ್ತ್ರ, ಕಂಕುಳು ಕೆಳಗೆ ಹಾಕಿಹೊದೆಯುವ ಉತ್ತರೀಯ ಬಟ್ಟೆ, ಇವು ಒಂಭತ್ತು ನವವಸ್ತ್ರಗಳು ಎಂದು ತಿಳಿ.

೩೪-೩೫. ನವದಿವ್ಯಾಲಂಕಾರಗಳನ್ನು ಶ್ರೀರಾಮನಿಗೆ ಒಪ್ಪಿಸಬೇಕು. ಅವಾವುವೆಂದರೆ;—ಕರ್ಣಾಭರಣಗಳು, ಕೈಬಳೆಗಳು, ಕತ್ತಿನಹಾರ, ಭುಜಕೀರ್ತಿ.

ಪದಕಂ ಕಟಿಸೂತ್ರಂ ಚ ಶೃಂಖಲಾ ಮುದ್ರಿಕೇತಿ ಚ।
ಏತೇ ನವ ತ್ವಲಂಕಾರಾ ದೇಯಾ ರಾಮಾಯ ಭಕ್ತಿತಃ ॥ ೩೫ ॥

ಏವಂ ಶಿಷ್ಯ ಮಯಾಖ್ಯಾತಾ ರಾಮಪ್ರೀತಿದಾನಿ ಮಹಾಚ ಚ।
ನವಕಾನ್ಯತಿರಮ್ಯಾಣಿ ತವಾಗ್ರೇಕೀರ್ತಿತಾನಿ ಹಿ ॥ ೩೬ ॥

ಮುಖ್ಯಾಸ್ತ್ವತ್ರ ಪದಾರ್ಥಾ ಹಿ ನವಕೇಷು ಮಯಾ ಸ್ಮೃತಾಃ।
ಏಭ್ಯಸ್ತ್ವನ್ಯೇ ಪದಾರ್ಥಾಶ್ಚ ಯೇ ಯೇ ಸಂತಿ ಸಹಸ್ರಶಃ ॥ ೩೭ ॥

ಕೇಸರ್ವೇ ತಾಘುವಾಯಾತಿ ಭಕ್ತ್ಯಾ ದೇಯಾಸ್ತು ಪೂಜನೇ।
ಪ್ರತ್ಯಹಂ ರಾಮಚಂದ್ರಸ್ಯ ತ್ರಿಕಾಲಂ ಪೂಜನಂ ಶನೈಃ ॥ ೩೮ ॥

ಕಾರ್ಯಂ ವಿತ್ತಾನುಸಾರೇಣ ನ ಕದಾ ಶಾಠ್ಯಮಾಚರೇತ್।
ಪ್ರತಿಪದ್ದಿನಮಾರಭ್ಯ ಯಾವಚ್ಚ ನವಮೀತಿಥಿಃ ॥ ೩೯ ॥

ಕಾಲಂದಿಗೆಗಳು, ಪದಕ, ಉಡಿದಾರ, ಕೈಗೆ ಸರಪಣಿ, ಉಂಗುರ, ಈ ಒಂಭತ್ತು ಅಲಂಕಾರಗಳನ್ನು ಶ್ರೀರಾಮನಿಗೆ ಕೊಡಬೇಕು.

೩೬. ಎಲೈ ಶಿಷ್ಯನೇ! ರಾಮನಿಗೆ ಬಹುವಾದ ಪ್ರೀತಿಯುನ್ನುಂಟು ಮಾಡುವ ಅತಿ ರಮ್ಯವಾದ ಈ ನವಕಗಳನ್ನು ನಿನಗೆ ಹೇಳಿದ್ದೇನೆ.

೩೭-೩೮. ನಾನು ರಾಮನಿಗೆ ಮುಖ್ಯವಾದುದನ್ನು ಈ ನವಕಗಳಲ್ಲಿ ಹೇಳಿದ್ದೇನೆ. ಈ ನವಕಗಳಲ್ಲದೆ ಇನ್ನೂ ಸಾವಿರಾರು ಸಂಖ್ಯೆಯಲ್ಲಿ ಯಾವ ಯಾವ ಪದಾರ್ಥಗಳು ಇವೆಯೋ ಅವನ್ನು ರಾಮನ ಪೂಜೆಯಲ್ಲಿ ಭಕ್ತಿಯಿಂದ ಕೊಡಬಹುದು ರಾಮನಿಗೆ ಪ್ರತಿನಿತ್ಯವೂ ಮೂರು ಕಾಲಗಳಲ್ಲಿಯೂ ಪೂಜೆಯನ್ನು ನಿಧಾನವಾಗಿ ಮಾಡಬೇಕು.

೩೯-೪೦. ತನ್ನ ವಿಭವಕ್ಕೆ ಅನುಸಾರವಾಗಿ ಮನುಷ್ಯನು ವೆಚ್ಚಮಾಡಿ ಪೂಜಿಸಬೇಕು ಜಿಪುಣತನವನ್ನು ಯಾವಾಗಲೂ ಮಾಡಲೇ ಬಾರದು. ಪಾಡ್ಯದಿಂದ ಮೊದಲುಮಾಡಿಕೊಂಡು ನವಮಿಯುವರೆಗೂ ಪೂರ್ತಿಯಾಗಿ

ತಾವದ್ವಿಶೇಷಃ ಕಾರ್ಯಂಚ ಪ್ರತ್ಯಹಂ ರಾಮಪೂಜನಂ ।
ವಿಚಿತ್ರೈರ್ಮಂಟಪಾದ್ಯೈಶ್ಚ ಸಂಪೂಜ್ಯ ರಘುನಂದನಂ ॥ ೪೦ ॥

ಪಾರಾಯಣಂ ತದಗ್ರೇ ಹಿ ಕರ್ತವ್ಯಂ ನವಭಿರ್ದಿನೈಃ ।
ಆನಂದರಾಮಚರಿತಂ ಪಠನೀಯಂ ತು ಸರ್ವದಾ ॥ ೪೧ ॥

ನವಮ್ಯಾಂ ರಾಘವಂ ರಾಮತೀರ್ಥೇ ವಾಹನಸಂಸ್ಥಿತಂ ।
ನೀತ್ವಾ ಮಂಗಳತೂರ್ಯಾದ್ಯೈರ್ಧ್ವಜಾದ್ಯೈರ್ದುಂದುಭಿಸ್ವನೈಃ ॥ ೪೨ ॥

ಅಭಿಷೇಕಸ್ತತ್ರ ಕಾರ್ಯೋ ರುದ್ರಸೂಕ್ತೈಸ್ಸುಪುಣ್ಯದೈಃ ।
ತಥಾ ಪುರುಷಸೂಕ್ತೇನ ಶ್ರೀಸೂಕ್ತೇನ ತಥೈವ ಚ ॥ ೪೩ ॥

ವಿಷ್ಣುಸೂಕ್ತಾದಿಭಿಸ್ಸೂಕ್ತೈರಭಿಷಿಚ್ಯ ರಘೂತ್ತಮಂ ।
ಪೂಜನಂ ವಿಸ್ತರೇಣಾಥ ಕೃತ್ವಾ ಗೇಹಂ ಸಮಾನಯೇತ್ ॥ ೪೪ ॥

ಪ್ರತಿದಿನವೂ ವಿಶೇಷ ರೀತಿಯಿಂದ ಪೂಜೆಯನ್ನು ಮಾಡಬೇಕು. ಮಂಟಪ ಮುಂತಾದುವನ್ನು ಬಹು ಚೆನ್ನಾಗಿ ಕಟ್ಟಿ ಅಂದವಾಗಿ ಮಾಡಿರಬೇಕು.

೪೧. ಆ ರಾಮದೇವರ ಮುಂದುಗಡೆಯಲ್ಲಿ ಒಂಭತ್ತು ದಿನವೂ ರಾಮನ ಕಥೆಯಾದ ಆನಂದರಾಮಾಯಣವನ್ನು ಪಾರಾಯಣಮಾಡಬೇಕು. ಆನಂದ ರಾಮಾಯಣವನ್ನು ಯಾವಾಗಲೂ ಪಾರಾಯಣಮಾಡುತ್ತಿರಬೇಕು.

೪೨. ನವಮಿಯ ದಿವಸ ರಾಮನನ್ನು ವಾಹನದಮೇಲೆ ಕೂರಿಸಿಕೊಂಡು ಮಂಗಳವಾದ್ಯವನ್ನು ಧ್ವನಿಮಾಡಿಸುತ್ತ ಛತ್ರಚಾಮರ, ಧ್ವಜ ಮುಂತಾದುವುಗಳನ್ನು ಹಿಡಿದು ಸೇವಿಸುತ್ತಾ ನಗಾರಿಗಳನ್ನು ಬಡಿಸಿಕೊಂಡು ರಾಮತೀರ್ಥಕ್ಕೆ ಹೋಗಬೇಕು.

೪೩–೪೪. ಅಲ್ಲಿ ವೇದಮಂತ್ರಗಳನ್ನು ಹೇಳಿ ರುದ್ರಸೂಕ್ತ, ಪುರುಷ ಸೂಕ್ತ, ಶ್ರೀಸೂಕ್ತ, ವಿಷ್ಣುಸೂಕ್ತ ಮುಂತಾದುವುಗಳನ್ನು ಹೇಳಿ ಆ ರಾಮನಿಗೆ ಅಭಿಷೇಕಮಾಡಬೇಕು. ಅಲ್ಲಿ ವಿಸ್ತಾರವಾಗಿ ಪೂಜೆಯನ್ನು ಮಾಡಬೇಕು. ಅಲ್ಲಿ ವಿಸ್ತಾರವಾಗಿ ಪೂಜೆಯನ್ನು ಮಾಡಿಕೊಂಡು ಅನಂತರ ಮನೆಗೆ ಅಂತೆಯೇ ವಾದ್ಯಗಳೊಡನೆ ಬರಬೇಕು.

ತತೋ ಹರೇಃ ಕೀರ್ತನಾನಿ ಸ್ವಯಂ ಕಾರ್ಯಾಣಿ ವಾ ಪರೈಃ ।
ಗಾಯಕೈಃ ಕಾರಣೀಯಾನಿ ವೇಶ್ಯಾಭಿರ್ನರ್ತನಾನ್ಯಪಿ ॥ ೪೫ ॥

ತತಸ್ಸ್ವಯ ಮುಪೋಷ್ಯಾಥ ಭಕ್ತ್ಯಾ ವಿಪ್ರಪ್ರಪೂಜನಂ ।
ಕಾರ್ಯಂ ವೈ ಗಾಯಕಾನಾಂ ಚ ಪೂಜನಂ ವಿಸ್ತರೇಣ ಹಿ ॥ ೪೬ ॥

ರಾತ್ರೌ ಜಾಗರಣಂ ಕಾರ್ಯಂ ಕಥಾಭಿರ್ಗೀತನೃತ್ಯಕೈಃ ।
ದಶಮ್ಯಾಂ ಪ್ರಾತರುತ್ಥಾಯ ಸ್ನಾತ್ವಾ ಸಂಪೂಜ್ಯ ರಾಘವಂ ॥ ೪೭ ॥

ಮಧ್ಯಾಹ್ನೇ ರಾಮಚಂದ್ರಸ್ಯ ಪೂಜನಂ ಬ್ರಾಹ್ಮಣೇಷು ಹಿ ।
ಕಾರ್ಯಂ ತಸ್ಯ ವಿಧಾನಂ ತೇ ವದಾಮ್ಯದ್ಯ ಶೃಣುಷ್ವ ತತ್ ॥ ೪೮ ॥

ಏಕಂ ಯುಗ್ಮಂ ತು ವಿಪ್ರಸ್ಯ ವಿಪ್ರಾಷ್ಟಂ ಚ ನಿಮಂತ್ರಯೇತ್ ।
ಭೂಮಿಂ ಗೃಹೇ ವಿಲಿಪ್ಯಾಥ ಗೋಮಯೇನಾತಿವಿಸ್ತೃತಾಂ ॥ ೪೯ ॥

---

೪೫. ಮನೆಗೆ ಬಂದಮೇಲೆ ತಾನು ಹರಿಯ ಕೀರ್ತನೆಯನ್ನು ಮಾಡಿಸ ಬೇಕು ಗಾಯಕರಿಂದ ಗಾನವನ್ನೂ ವೇಶ್ಯೆಯರಿಂದ ನರ್ತನವನ್ನೂ ಮಾಡಿಸ ಬೇಕು.

೪೬. ಕರ್ತನಾದವನು ಉಪವಾಸವಿದ್ದು ಭಕ್ತಿಯಿಂದ ಬ್ರಾಹ್ಮಣರ ಪೂಜೆಯನ್ನು ಮಾಡಬೇಕು. ಅನಂತರ ಗಾಯಕರಿಗೂ, ನರ್ತಕರಿಗೂ ಗೌರವಿಸಿ ಪೂಜೆಯನ್ನು ಮಾಡಬೇಕು.

೪೭. ರಾತ್ರಿಯೆಲ್ಲಾ ಜಾಗರಣೆಯನ್ನು ಮಾಡಬೇಕು. ಆಗ ರಾಮ ಸಂಬಂಧವಾದ ಕಥೆಗಳನ್ನು ಹೇಳುತ್ತ ಗಾನವನ್ನು ಮಾಡುತ್ತ ನರ್ತನವನ್ನು ಮಾಡುತ್ತಲಿರಬೇಕು. ದಶಮಿಯ ದಿನ ಬೆಳಗ್ಗೆ ಸ್ನಾನಮಾಡಿ ರಾಮನಿಗೆ ಪೂಜಿಸಬೇಕು.

೪೮. ಮಧ್ಯಾಹ್ನದಲ್ಲಿ ರಾಮಚಂದ್ರನ ಪೂಜೆಯನ್ನು ಮಾಡಬೇಕು. ಬ್ರಾಹ್ಮಣರನ್ನು ಕರೆದು ಅವರಲ್ಲಿ ಈ ರಾಮಚಂದ್ರನನ್ನು ಆವಾಹಿಸಬೇಕು. ಆ ಆವಾಹನದ ವಿಧಾನವನ್ನು ಹೇಳುತ್ತೇನೆ. ಕೇಳು.

೪೯-೫೦. ಒಬ್ಬ ಬ್ರಾಹ್ಮಣ ದಂಪತಿಗಳಿಗೆ ಹೇಳಬೇಕು. ಎಂಟು ಜನ ಬ್ರಾಹ್ಮಣರಿಗೆ ಆ ಮಂತ್ರಣವನ್ನು ಕೊಡಬೇಕು. ಮನೆಯಲ್ಲಿ ನೆಲವನ್ನು ದೊಡ್ಡದಾಗಿ ಹಸುವಿನ ಸಗಣಿಯಿಂದ ಸಾರಿಸಬೇಕು. ರಂಗವಲ್ಲಿಯಿಂದ

ರಂಗವಲ್ಯಾಶ್ಚ ಪದ್ಮಾನಿ ನೀಲಪೀತಾದಿವರ್ಣಕೈಃ ।
ತತ್ರ ಸಮಂತತಃ ಕೃತ್ವಾ ಮಧ್ಯೇ ಸಿಂಹಾಸನಂ ಶುಭಂ ॥ ೦೫ ॥

ಸ್ಥಾಪ್ಯ ತತ್ರ ಮಹಾವಸ್ತ್ರೈರಾಸನಂ ಪರಿಕಲ್ಪಯೇತ್ ।
ಅಷ್ಟೋತ್ತರಂಸಹಸ್ರಂ ಚ ರಾಮಲಿಂಗಾತ್ಮಕಂ ಶುಭಂ ॥ ೫೧ ॥

ಅಥವಾಷ್ಟೋತ್ತರಶತಂ ರಾಮಲಿಂಗಾತ್ಮಕಂ ಶುಭಂ ।
ಅಷ್ಟೋತ್ತರಸಹಸ್ರಂ ವಾ ರಾಮತೋಭದ್ರಮುತ್ತಮಂ ॥ ೫೨ ॥

ಅಥವಾಷ್ಟೋತ್ತರಶತಂ ರಾಮತೋಭದ್ರಮುತ್ತಮಂ ।
ಸಿಂಹಾಸನಂ ನಿಧಾಯಾಥ ರಾಮಸ್ಯಾಸನಮುಜ್ಜ್ವಲಂ ॥ ೫೩ ॥

ಭದ್ರೋಪರಿ ಸಪತ್ನೀಕಂ ತತ್ರ ವಿಪ್ರಂ ನಿವೇಶಯೇತ್ ।
ಪಶ್ಚಿಮಾಭಿಮುಖೇ ವಾಮಭಾಗೇ ತತ್ ಸ್ತ್ರೀಂ ನಿವೇಶಯೇತ್ ॥ ೫೪ ॥

ಪದ್ಮಾಸನವನ್ನು ಇಡಬೇಕು. ಅವುಗಳಿಗೆ ಹಸುರು ಹಳದಿ ಮುಂತಾದ ಬಣ್ಣಗಳಿಂದ ಅಲಂಕರಿಸಬೇಕು. ಈ ರೀತಿಯಾಗಿಸುತ್ತಲೂ ಮಾಡಿ ಮಧ್ಯದಲ್ಲಿ ಸಿಂಹಾಸನವನ್ನಿಡಬೇಕು.

೫೧-೫೩. ಅದನ್ನು ಬಟ್ಟೆ ಮುಂತಾದುವುಗಳಿಂದ ಹೊದ್ದಿಸಿ ಅದರ ಮಧ್ಯದಲ್ಲಿ ಬಟ್ಟೆಯಿಂದ ಆಸನವನ್ನು ಕಟ್ಟಸಬೇಕು. ಸಾವಿರದೆಂಟು ರಾಮ ಲಿಂಗಾತ್ಮಕವಾದ ಅಥವಾ ನೂರೆಂಟು ರಾಮಲಿಂಗಾತ್ಮಕವಾದ ಅಥವಾ ಸಾವಿರ ದೆಂಟು ರಾಮತೋಭದ್ರವನ್ನಾಗಲಿ ಅಥವಾ ನೂರೆಂಟು ರಾಮತೋಭದ್ರವನ್ನಾಗಲಿ ರಾಮಾಸನವನ್ನು ಇಡಬೇಕು.

೫೪. ಆ ಭದ್ರದಮೇಲೆ ಹೆಂಡತಿಯೊಡನೆ ಕೂಡಿದ ಬ್ರಾಹ್ಮಣನನ್ನು ಕೂರಿಸಬೇಕು. ಈ ಬ್ರಾಹ್ಮಣನನ್ನು ಪಶ್ಚಿಮಾಭಿಮುಖವಾಗಿ ಕೂರಿಸಿ ಅವನ ಎಡಗಡೆಯಲ್ಲಿ ಅವನ ಹೆಂಡತಿಯನ್ನು ಕೂರಿಸಬೇಕು.

ಸೀತಾರಾಮೌ ತು ದಂಪತ್ಯೋರಾವಾಹ್ಯ ತದನಂತರಂ ।
ತತ್ಪೃಷ್ಠೇ ಲಕ್ಷ್ಮಣಂ ವಿಪ್ರಂ ಚಿಂತಯೇಚ್ಚ ತತಃ ಪರಂ ॥ ೫೫ ॥

ಭರತಂ ರಾಮಸವ್ಯೇ ತು ಆವಾಹ್ಯ ಭೂಸುರೇ ತಥಾ ।
ರಾಮವಾಮೇ ತು ಶತ್ರುಘ್ನಮಾವಾಹ್ಯ ಭೂಸುರೇ ತಥಾ ॥ ೫೬ ॥

ವಿಪ್ರೇಂಜನಿಸುತಂ ಚಾಪಿ ರಾಮಸ್ಯಾಗ್ರೇ ವಿಚಿಂತಯೇತ್ .
ರಾಮಸ್ಯ ವಾಯುದಿಗ್ಭಾಗಾತ್ಸುಗ್ರೀವಾದೀನ್ವಿಚಿಂತಯೇತ್ ॥ ೫೭ ॥

ಚತುಷ್ಕೋಣೇಷು ವಿಪ್ರೇಷು ತತಃ ಪೂಜನಮಾಚರೇತ್ ।
ನವಾಯತನಪೂಜೇಯಂ ಜ್ಞೇಯಾ ಶ್ರೀರಾಘವಾಯ ಹಿ ॥ ೫೮ ॥

೫೫-೫೬. ಆ ದಂಪತಿಗಳಲ್ಲಿ ಸೀತಾರಾಮರನ್ನು ಆವಾಹಿಸಬೇಕು. ಆ ದಂಪತಿಗಳ ಹಿಂದೆ ಒಬ್ಬ ಬ್ರಾಹ್ಮಣನನ್ನು ಕೂರಿಸಿ ಅವನಲ್ಲಿ ಲಕ್ಷ್ಮಣನನ್ನು ಆವಾಹಿಸಬೇಕು. ಆ ರಾಮನ ಬಲದಲ್ಲಿ ಒಬ್ಬ ಬ್ರಾಹ್ಮಣನನ್ನು ಕೂರಿಸಿ ಅವನಲ್ಲಿ ಭರತನನ್ನೂ ಆ ರಾಮನ ಎಡದಲ್ಲಿ ಒಬ್ಬ ಬ್ರಾಹ್ಮಣನನ್ನು ಕೂರಿಸಿ ಅವನಲ್ಲಿ ಶತ್ರುಘ್ನನನ್ನೂ ಆವಾಹಿಸಬೇಕು.

೫೭. ರಾಮನ ಎದುರಿಗೆ ಒಬ್ಬ ಬ್ರಾಹ್ಮಣನನ್ನು ಕೂರಿಸಿ ಅವನಲ್ಲಿ ಹನುಮಂತನನ್ನು ಆವಾಹಿಸಬೇಕು. ವಾಯುವ್ಯವೇ ಮುಂತಾದ ನಾಲ್ಕು ದಿಕ್ಕುಗಳಲ್ಲಿಯೂ ಸುಗ್ರೀವಾದಿಗಳನ್ನು ಆವಾಹಿಸಬೇಕು. ಎಂದರೆ ರಾಮನ ವಾಯುವ್ಯದಿಕ್ಕಿನಲ್ಲಿ ಬ್ರಾಹ್ಮಣನನ್ನು ಕೂರಿಸಿ ಅವನಲ್ಲಿ ವಿಭೀಷಣನನ್ನೂ ರಾಮನಿಗೆ ಆಗ್ನೇಯದಿಕ್ಕಿನಲ್ಲಿ ಒಬ್ಬ ಬ್ರಾಹ್ಮಣನನ್ನು ಕೂರಿಸಿ ಅವನಲ್ಲಿ ಅಂಗದನನ್ನೂ ರಾಮನ ನೈರುತ್ಯದಿಕ್ಕಿನಲ್ಲಿ ಒಬ್ಬ ಬ್ರಾಹ್ಮಣನನ್ನು ಕೂರಿಸಿ ಅವನಲ್ಲಿ ಜಾಂಬವಂತನನ್ನೂ ಆವಾಹಿಸಬೇಕು. ಹೀಗೆ ಒಂಭತ್ತು ಜನರಾದರೂ ದಂಪತಿಗಳಿಬ್ಬರದ್ದೂ ಒಂದೇ ಒಂದು ಲೆಕ್ಕ.

೫೮. ಈ ರೀತಿಯಾಗಿ ಎಲ್ಲರಲ್ಲಿಯೂ ಎಲ್ಲರನ್ನೂ ಆವಾಹಿಸಿ ಅನಂತರ ಪೂಜೆಗೆ ಮೊದಲು ಮಾಡಬೇಕು. ಈ ಪೂಜೆಗೆ ರಾಮನವಾಯತನ ಪೂಜೆ ಎಂದು ಹೆಸರು.

ಅಥವಾ ಪಂಚಾಯತನಂ ಪಂಚವಿಪ್ರೇಷು ಚಿಂತಯೇತ್ ।
ಸಸೀತಂ ಶಕ್ತಿಹೀನೇನ ನರೇಣ ಸರ್ವದಾ ಭುವಿ ॥ ೫೯ ॥

ಅಥವಾ ಯತಿನಂ ರಾಮಸ್ಥಾನೇ ಭಕ್ತ್ಯಾ ನಿವೇಶಯೇತ್ ।
ಪೂಗೀಫಲಮಯೀಂ ಸೀತಾಂ ಯತಿವಾಮೇ ನಿವೇಶ್ಯ ಚ ॥ ೬೦ ॥

ಕಾರ್ಯಂ ಸಮ್ಯಕ್ಪೂಜನಂ ಚ ತತೋ ಗೇಹೇ ಸುವಾಸಿನೀಂ ।
ಸೀತಾಂ ಮತ್ವಾ ಪುನಃ ಪೂಜ್ಯ ಭೋಜನೀಯಾ ಸವಿಸ್ತರಂ ॥ ೬೧ ॥

ಆದೌ ಸೀತಾರಾಘವಯೋಃ ಕೃತ್ವಾ ಪೂಜನಮುತ್ತಮಂ ।
ತತಃ ಪೂಜಾ ತು ಸರ್ವೇಷಾಂ ಕಾರ್ಯಾ ನಾನೋಪಚಾರಕೈಃ ॥ ೬೨ ॥

---

೫೯. ಅದಾಗದಿದ್ದರೆ ಐದು ಜನ ಬ್ರಾಹ್ಮಣರಲ್ಲಿ ಐದು ಜನರನ್ನು ಆವಾಹಿಸಿ ಪಂಚಾಯತನ ಪೂಜೆಯನ್ನು ಮಾಡಬೇಕು. ಈ ಪಂಚಾಯತನ ಪೂಜೆಯಲ್ಲಿ ಸೀತೆ, ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಹನುಮಂತರನ್ನು ಆವಾಹಿಸಬೇಕು. ಈ ಪಂಚಾಯತನ ಪೂಜೆಯನ್ನು ಶಕ್ತಿಯಿಲ್ಲದವನು ಮಾಡಬೇಕು.

೬೦. ಆ ಪಂಚಾಯತನ ಪೂಜೆಯನ್ನೂ ಮಾಡಲು ಶಕ್ತಿಯಿಲ್ಲದೆ ಹೋದರೆ ಸಿಂಹಾಸನದಮೇಲೆ ರಾಮನ ಸ್ಥಾನದಲ್ಲಿ ಯತಿಯನ್ನು ಕೂರಿಸಬೇಕು. ಆ ಯತಿಯ ಎಡಗಡೆಯಲ್ಲಿ ಒಂದು ಅಡಕೆಯ ಗೋಟನ್ನಿಟ್ಟು ಆದರಲ್ಲಿ ಸೀತೆಯನ್ನು ಆವಾಹಿಸಬೇಕು.

೬೧. ಅನಂತರ ಅವರಿಬ್ಬರಿಗೂ ಪೂಜೆಯನ್ನು ಮಾಡಬೇಕು. ಆ ರೀತಿಯಾಗಿ ಪೂಜಿಸಿ ಮುಗಿದಮೇಲೆ ಮನೆಯೊಳಗೆ ಒಬ್ಬಳು ಮುತ್ತೈದೆಯನ್ನು ಸೀತೆಯೆಂದು ತಿಳಿದುಕೊಂಡು ಮತ್ತೆ ಪೂಜಿಸಿ ಚೆನ್ನಾಗಿ ತೃಪ್ತಿಯಾಗುವಂತೆ ಭೋಜನ ಮಾಡಿಸಬೇಕು.

೬೨. ಮೊದಲು ಸೀತಾರಾಮರನ್ನು ಚೆನ್ನಾಗಿ ಪೂಜಿಸಿ ಅನಂತರ ಎಲ್ಲರಿಗೂ ಅನೇಕ ವಿಧವಾದ ಉಪಚಾರಗಳಿಂದ ಪೂಜಿಸಬೇಕು.

ಕ್ರಮೇಣ ಲಕ್ಷ್ಮಣಾದೀನಾಮುಪಚಾರೈಸ್ತು ಷೋಡಶೈಃ |
ಅಥವಾ ಸಹತಂತ್ರೇಣ ರಾಮಪೂಜನಮಾಚರೇತ್ || ೬೩ ||

ಆದಾವಾವಾಹ್ಯ ವಿಪ್ರೇಷು ದೇಯಮಾಸನಮುತ್ತಮಂ |
ತತಃ ಪ್ರಕ್ಷಾಲ್ಯ ಪಾದೌ ಚ ಸರ್ವೇಷಾಂ ಚ ಪೃಥಕ್ ಪೃಥಕ್ || ೬೪ ||

ಯತಿಪಾದೋದಕಂ ಭಿನ್ನಂ ಸ್ಥಾಪನೀಯಂ ಸರೋತ್ತಮೈಃ |
ತತಃ ಪೃಥಕ್ಪೃಥಗರ್ಘ್ಯಾನ್ ದತ್ವಾ ಸುಚಂದನಾದಿಭಿಃ || ೬೫ ||

ತತಶ್ಚಾಚಮನಂ ದತ್ವಾ ಸ್ನಾನಾರ್ಥಂ ಜಲಮುತ್ಸೃಜೇತ್ |
ತತೋ ವಸ್ತ್ರಂ ಸಮರ್ಪ್ಯಾಥ ದೇಯಾನ್ಯಾಭರಣಾನಿ ಹಿ || ೬೬ ||

---

೬೩. ಮೊದಲು ಸೀತಾರಾಮರನ್ನು ಚೆನ್ನಾಗಿ ಷೋಡಶೋಪಚಾರದಿಂದ ಪೂಜಿಸಿ ಅನಂತರ ಲಕ್ಷ್ಮಣಾದಿಗಳೊಬ್ಬಬ್ಬರನ್ನೂ ಬೇರೆ ಬೇರೆಯಾಗಿ ಷೋಡಶೋಪಚಾರಗಳಿಂದ ಪೂಜಿಸಬೇಕು. ಅದಿಲ್ಲದಿದ್ದರೆ ಸಮಾನ ತಂತ್ರದಿಂದಲಾದರೂ ರಾಮನ ಪೂಜೆಯನ್ನು ಮಾಡಬೇಕು.

೬೪. ಮೊದಲು ಬ್ರಾಹ್ಮಣರಲ್ಲಿ ಆಯಾ ದೇವತೆಗಳನ್ನು ಆವಾಹನೆ ಮಾಡಬೇಕು. ಅನಂತರ ಆಸನವನ್ನು ಅವರಿಗೆಲ್ಲಾ ಕೊಡಬೇಕು. ಅನಂತರ ಒಬ್ಬೊಬ್ಬರಿಗೂ ಬೇರೆ ಬೇರೆಯಾಗಿ ಕಾಲುಗಳನ್ನು ತೊಳೆಯಬೇಕು.

೬೫. ನವಾಯತನದಲ್ಲಿಯಾಗಲಿ, ಪಂಚಾಯತನದಲ್ಲಿಯಾಗಲೀ, ರಾಮನ ಸ್ಥಾನದಲ್ಲಿ ಯತಿಯನ್ನಿಟ್ಟಿದ್ದರೆ ಅವನ ಪಾದೋದಕವನ್ನು ಬೇರೆಯಾಗಿ ತೆಗೆದಿಡಬೇಕು. ಉಳಿದವರೆಲ್ಲರ ಪಾದೋದಕವನ್ನೂ ಒಂದೇ ಪಾತ್ರೆಯಲ್ಲಿಟ್ಟರ ಬಹುದು. ದಂಪತಿಗಳನ್ನು ಕೂರಿಸಿದ್ದರೆ ಎಲ್ಲರ ಪಾದೋದಕವನ್ನೂ ಒಂದು ಪಾತ್ರೆಯಲ್ಲಿಯೇ ಇಟ್ಟರಬಹುದು ಅನಂತರ ಕ್ರಮದಂತೆ ಒಬ್ಬೊಬ್ಬರಿಗೂ, ಬೇರೆ ಬೇರೆಯಾಗಿ ಚಂದ್ರನಾರ್ಘ್ಯವನ್ನು ಕೊಡಬೇಕು.

೬೬. ಅನಂತರ ಆಚಮನವನ್ನು ಮಾಡಿಸಬೇಕು. ಸ್ನಾನಕ್ಕೆ ನೀರನ್ನು ಕೊಟ್ಟು ಸ್ನಾನವನ್ನು ಮಾಡಿಸಬೇಕು. ಅನಂತರ ವಸ್ತ್ರಗಳನ್ನು ಕೊಡಬೇಕು. ಆಮೇಲೆ ಆಭರಣಗಳನ್ನು ಕೊಡಬೇಕು.

ಸಮರ್ಪ್ಯ ಬ್ರಹ್ಮಸೂತ್ರಾಣಿ ಗಂಧಂ ಧೇಯಂ ಮನೋಹರಂ ।
ತತೋ ರಕ್ತಾಕ್ಷತಾ ದೇಯಾಃ ಪುಷ್ಪಮಾಲಾಸ್ತಥಾ ಪರಾಃ ॥ ೬೭ ॥

ತತೋ ಮಾಂಗಲ್ಯವಸ್ತೂನಿ ತತಶ್ಛತ್ರಂ ಚ ಚಾಮರಂ ।
ವ್ಯಜನಂ ಚ ತತೋ ದೇಯಂ ದೇಯಸ್ತೂಣೀರಕಸ್ತಥಾ ॥ ೬೮ ॥

ದೇಯಾ ಬಾಣಾಶ್ಚ ಚಾಪಾನಿ ದೇಯಾನಿ ಚ ಪೃಥಕ್ಪೃಥಕ್ ।
ದತ್ವಾ ಪರಿಮಳಾದೀನಿ ಭೋಗ್ಯವಸ್ತೂನಿ ವಿಸ್ತರಾತ್ ॥ ೬೯ ॥

ಧೂಪೋ ದೇಯಸ್ತಥಾ ದೀಪೋ ನೈವೇದ್ಯೋ ದೀಯತಾಂ ತತಃ ।
ಅಥವಾನ್ನಚ್ಛರ್ಕರಾದಿ ನೈವೇದ್ಯಾರ್ಥಂ ಸಮರ್ಪಯೇತ್ ॥ ೭೦ ॥

ನಾನಾಫಲಾನಿ ದೇಯಾನಿ ದೇಯಸ್ತಾಂಬೂಲ ಉತ್ತಮಃ ।
ದಕ್ಷಿಣಾಂ ಚ ತತೋ ದತ್ವಾ ದೇಯೋ ಮುಕುರ ಉಜ್ಜ್ವಲಃ ॥ ೭೧ ॥

---

೬೭. ಅನಂತರ ಯಜ್ಞೋಪವೀತವನ್ನು ಸಮರ್ಪಿಸಬೇಕು. ಆಮೇಲೆ ಉತ್ತಮವಾದ ಗಂಧವನ್ನು ಕೊಡಬೇಕು. ಆಮೇಲೆ ರಕ್ತಾಕ್ಷತೆಗಳನ್ನು ಕೊಡಬೇಕು. ಆಮೇಲೆ ಪುಷ್ಪಮಾಲೆಗಳನ್ನು ಕೊಡಬೇಕು.

೬೮-೬೯. ಆಮೇಲೆ ಮಂಗಳವಸ್ತುಗಳನ್ನೂ ಛತ್ರಚಾಮರಗಳನ್ನೂ ಕೊಡಬೇಕು. ಆಮೇಲೆ ವ್ಯಜನವನ್ನು ಕೊಡಬೇಕು. ಆಮೇಲೆ ಬತ್ತಳಿಕೆಯನ್ನು ಕೊಡಬೇಕು. ಆಮೇಲೆ ಕೈಗೆ ಬಾಣವನ್ನೂ ಧನುಸ್ಸನ್ನೂ ಕೊಡಬೇಕು. ಈ ರೀತಿಯಾಗಿ ಎಲ್ಲರಿಗೂ ಬೇರೆ ಬೇರೆಯಾಗಿ ಕೊಡಬೇಕು. ಅನಂತರ ಪರಿಮಳ ವಸ್ತುಗಳನ್ನೂ ಆಮೇಲೆ ಭೋಗ್ಯವಸ್ತುಗಳನ್ನೂ ಕೊಡಬೇಕು.

೭೦. ಅನಂತರ ಧೂಪವನ್ನೂ, ದೀಪವನ್ನೂ, ನೈವೇದ್ಯವನ್ನೂ ಸಮರ್ಪಿಸಬೇಕು. ಅದಾಗದಿದ್ದರೆ ಸಕ್ಕರೆಯೇ ಮುಂತಾದುವನ್ನು ನೈವೇದ್ಯಕ್ಕೆ ಕೊಡಬಹುದು.

೭೧-೭೨. ಅನಂತರ ಫಲಗಳನ್ನೂ ತಾಂಬೂಲವನ್ನೂ ಕೊಡಬೇಕು. ಆಮೇಲೆ ದಕ್ಷಿಣೆಯನ್ನೂ ಕೊಡಬೇಕು. ಆಮೇಲೆ ಒಳ್ಳೆಯ ಕನ್ನಡಿಯನ್ನು

ನಿರಾಜನಂ ತತಃ ಕೃತ್ವಾ ಮಂತ್ರಪುಷ್ಪಾಣಿ ದೀಯತಾಂ ।
ಪ್ರದಕ್ಷಿಣಾ ನಮಸ್ಕಾರಾನ್ನವ ಕೃತ್ವಾ ತತಃ ಪರಂ ॥ ೭೨ ॥

ನೃತ್ಯಗೀತಾದಿಕಂ ಕೃತ್ವಾ ಪ್ರಾರ್ಥಯೇದ್ರಘುನಾಯಕಂ ।
ವಿನಿಮೀಲ್ಯ ಕರೌ ಪಾದೌ ರಾಮಾಗ್ರೇ ಸಂಸ್ಥಿತೈರ್ನರೈಃ ॥ ೭೩ ॥

ವಾಮೇ ಭೂಮಿಸುತಾ ಪುರಸ್ತು ಹನುಮಾನ್ ಪೃಷ್ಠೇ ಸುಮಿತ್ರಾಸುತಶ್ಶ
ತ್ರುಘ್ನೋ ಭರತಶ್ಚ ಪಾರ್ಶ್ವದಳಯೋರ್ವಾಯವ್ಯ ಕೋಣಾದಿಷು ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಂ ರಾಮಂ ಭಜೇ ಶ್ಯಾಮಲಂ ॥

ರಾಮೋ ಹತ್ವಾ ದಶಾಸ್ಯಂ ದ್ವಿಜವಚನಗುರುತ್ವೇನ ಯಾತ್ರಾಶ್ಚ ಯಜ್ಞಾನ್
ಕೃತ್ವಾ ಭುಕ್ತ್ವಾತಿಭೋಗಾನವನಿತಲವಿಶಂತೀಂ ಗೃಹೀತ್ವಾಥ ಸೀತಾಂ ।
ಲಬ್ಧ್ವಾ ನಾನಾಸ್ನುಷಾಸ್ತ್ವಸ್ತ್ವವನಿ ತಲಗತಾನ್ಪಾರ್ಥಿವಾದೀಂಶ್ಚ ಜಿತ್ವಾ
ಕೃತ್ವಾ ನಾನೋಪದೇಶಾನ್ಗಜಪುರನಿಕಟೇ ಸ್ವೀಯಲೋಕಂ ಜಗಾಮ ॥

ಕೊಡಬೇಕು. ಆಮೇಲೆ ಆರತಿಯನ್ನೆತ್ತಿ ಮಂತ್ರಪುಷ್ಪವನ್ನೂ ಸಮರ್ಪಿಸಬೇಕು. ಅನಂತರ ಒಂಭತ್ತುಬಾರಿ ಪ್ರದಕ್ಷಿಣ ನಮಸ್ಕಾರಗಳನ್ನುಮಾಡಬೇಕು.

೭೩. ಅನಂತರ ನೃತ್ಯಗೀತಗಳನ್ನು ಮಾಡಿ ರಾಮನನ್ನು ಪ್ರಾರ್ಥಿಸಿಕೊಳ್ಳಬೇಕು. ರಾಮೋಪಾಸಕನಾದವನು ಶ್ರೀರಾಮಮೂರ್ತಿಯಾದ ಬ್ರಾಹ್ಮಣನ ಕಾಲುಗಳನ್ನು ತನ್ನ ಕೈಗಳಿಂದ ಮುಚ್ಚಿ ಹಿಡಿದುಕೊಂಡು ಈ ರೀತಿಯಾಗಿ ಪ್ರಾರ್ಥಿಸಿಕೊಳ್ಳಬೇಕು.

೭೪. ಎಡಗಡೆಯಲ್ಲಿ ಸೀತೆಯೂ, ಎದುರಿಗೆ ಹನುಮಂತನೂ, ಹಿಂದೆ ಲಕ್ಷ್ಮಣನೂ, ಅಕ್ಕಪಕ್ಕಗಳಲ್ಲಿ ಭರತ ಶತ್ರುಘ್ನರೂ, ವಾಯುವ್ಯಾದಿಕೋಣ ದಿಕ್ಕುಗಳಲ್ಲಿ ಸುಗ್ರೀವ, ವಿಭೀಷಣ, ಯುವರಾಜನಾದ ಅಂಗದ, ಜಾಂಬುವಂತರಿದ್ದುಕೊಂಡು ಮಧ್ಯದಲ್ಲಿ ಕುಳಿತಿರುವ ನೀಲೋತ್ಪಲದಂತೆ ಬಣ್ಣವುಳ್ಳ ರಾಮನನ್ನು ಭಜಿಸುತ್ತೇನೆ.

೭೫. ಶ್ರೀರಾಮನು ರಾವಣನನ್ನು ಕೊಂದು ಬ್ರಾಹ್ಮಣನ ಮಾತಿನ ಗೌರವದಿಂದ ಯಾತ್ರೆಗಳನ್ನೂ ಯಜ್ಞಗಳನ್ನೂ ಮಾಡಿ ಅನೇಕ ಭೋಗಗಳನ್ನು ಅನುಭವಿಸಿ ಪಾತಾಳಲೋಕಕ್ಕೆ ಹೋಗುತ್ತಿರುವ ಸೀತೆಯನ್ನು ಹಿಡಿದು ಕರೆದುಕೊಂಡು ಅನೇಕ ದೇಶದ ರಾಜಪುತ್ರಿಯರನ್ನು ಸೊಸೆಯರನ್ನಾಗಿ ಹೊಂದಿ ಪ್ರಪಂಚದ ರಾಜರೆಲ್ಲರನ್ನೂ ಗೆದ್ದು ಲೋಕಕ್ಕೆ ಅನೇಕ ಉಪದೇಶಗಳನ್ನು ಮಾಡಿ ಹಸ್ತಿನಾಪುರದ ಸಮೀಪದಲ್ಲಿ ವೈಕುಂಠಕ್ಕೆ ಹೋದನು.

ನವಕಾಂಡಮಯಂ ಶ್ಲೋಕಂ ಪಠಿತ್ವೇವಂ ಹರೇಃ ಪುರಃ ।
ತತಃ ಕ್ಷಮಾಪ್ಯ ಶ್ರೀರಾಮಂ ಪೂಜಾಂ ತಸ್ಮೈ ಸಮರ್ಪಯೇತ್ ॥ ೭೬ ॥

ಮಯಾ ಮಾಸವ್ರತೇ ರಾಮ ನವಮ್ಯಾಂ ಯತ್ಪ್ರಪೂಜನಂ ।
ಪಾರಾಯಣಾದಿಕಂ ಸರ್ವಂ ನವರಾತ್ರೇಽಪಿ ಯತ್ಕೃತಂ ॥ ೭೭ ॥

ತತ್ಸರ್ವಂ ತೇಽರ್ಪಿತಂ ತ್ವದ್ಯ ಪ್ರಸನ್ನೋ ಭವ ಮೇ ಪ್ರಭೋ ।
ನವಾಯತನಪೂಜೇಯಂ ಯಾ ಕೃತಾ ನವಮೀದಿನೇ ॥ ೭೮ ॥

ನವವಿಪ್ರೇಷು ಸಾಪ್ಯದ್ಯ ತೇಽರ್ಪಿತಾ ರಾಮ ವೈ ಮಯಾ ।
ತ್ವಂ ಗೃಹಾಣ ಯಥಾಶಕ್ತ್ಯಾ ಕೃತಾಂ ತಾಂ ತ್ವಂ ಪ್ರಸೀದ ಮೇ ॥ ೭೯ ॥

ಏವಂ ಸಮರ್ಪ್ಯ ರಾಮಾಯ ಸಕಲಂ ಪೂಜನಾದಿಕಂ ।
ತತೋ ಭೋಜನರೀತ್ಯಾ ತಾನ್ ಸನ್ನಿವೇಶ್ಯಾಥ ಭೋಜಯೇತ್ ॥ ೮೦ ॥

---

೭೬. ಒಂಭತ್ತು ಕಾಂಡದಲ್ಲಿಯೂ ಹೇಳಿರುವ ವಿಷಯುಗಳನ್ನು ಒಳಗೊಂಡಿರುವ ಈ ಶ್ಲೋಕಗಳನ್ನು ಆ ಸ್ವಾಮಿಯ ಮುಂದೆ ಹೇಳಿ ಅನಂತರ ಆ ಶ್ರೀರಾಮನನ್ನು ಕ್ಷಮಾಪಣೆಯನ್ನು ಕೇಳಿಕೊಂಡು ಆ ಪೂಜೆಯನ್ನು ಆ ರಾಮನಿಗೆ ಅರ್ಪಿಸಬೇಕು.

೭೭. ಎಲೈ ರಾಮನೇ! ನಾನು ಮಾಡಿದ ಮಾಸವ್ರತದಲ್ಲಿ ನವಮಿಯ ದಿವಸ ಮಾಡಿದ ಪೂಜೆಯೂ ಪಾರಾಯಣಾದಿಗಳೂ ಮತ್ತು ನವರಾತ್ರಿಯಲ್ಲಿ ಯಾವು ಯಾವುದನ್ನು ಮಾಡಿರುವೆನೋ ಅದೆಲ್ಲವನ್ನೂ ಕೂಡ ನಿನಗೆ ಈಗ ಅರ್ಪಿಸಿದ್ದೇನೆ. ಎಲೈ ಪ್ರಭುವೇ! ನನಗೆ ಪ್ರಸನ್ನನಾಗು.

೭೮-೭೯. ನವಮಿಯ ದಿನದಲ್ಲಿ ಒಂಭತ್ತು ಜನ ಬ್ರಾಹ್ಮಣರನ್ನು ಆಮಂತ್ರಿಸಿ ನವಾಯತನ ಪೂಜೆಯನ್ನು ನಾನು ಮಾಡಿರುವೆನು. ಆ ಪೂಜೆಯನ್ನು ಈಗ ನಾನು ನಿನಗೆ ಸಮರ್ಪಿಸಿದ್ದೇನೆ. ನೀನು ಸ್ವೀಕರಿಸಿ ನನಗೆ ಪ್ರಸನ್ನನಾಗು.

೮೦-೮೧. ಈ ರೀತಿಯಾಗಿ ಪೂಜೆ ಮುಂತಾದುವುಗಳನ್ನು ರಾಮನಿಗೆ ಸಮರ್ಪಿಸಬೇಕು. ಅನಂತರ ಭೋಜನದ ರೀತಿಯಿಂದ ಎಲ್ಲರನ್ನೂ ಕೂರಿಸಿ

ಪುನರ್ದತ್ವಾ ತು ತಾಂಬೂಲಂ ದಕ್ಷಿಣಾಂ ಚ ವಿಸರ್ಜಯೇತ್ ।
ತತಸ್ಸ್ವಯಂ ವಿಪ್ರತೀರ್ಥಂ ಗೃಹೀತ್ವಾ ನ್ಯೈ ತತಃ ಪರಂ ॥ ೮೧ ॥

ಯತಿಪಾದೋದಕಂ ಪ್ರಾಶ್ಯ ದೇವತೀರ್ಥಂ ತತಃ ಪರಂ ।
ಗೃಹೀತ್ವಾ ಭೋಜನಂ ಕಾರ್ಯಂ ಸುಹೃನ್ಮಿತ್ರಜನೈಸ್ಸಹ ॥ ೮೨ ॥

ಸಮರ್ಪಿತಂ ಯದ್ಯತಯೇ ತತ್ತಚ್ಚ ಬ್ರಾಹ್ಮಣಾಯ ಹಿ ।
ದೇಯಂ ಸ್ವಗುರವೇ ಸರ್ವಂ ಬ್ರಹ್ಮಸೂತ್ರಾದಿಕಂ ಶುಭಂ ॥ ೮೩ ॥

ಏವಂ ವ್ರತಂ ರಾಘವಸ್ಯ ಪಕ್ಷೇ ಪಕ್ಷೇ ಪ್ರಕಾರಯೇತ್ ।
ಅಥವಾ ಶುಕ್ಲಪಕ್ಷೇ ಹಿ ಕಾರ್ಯಂ ವ್ರತಮಿದಂ ಶುಭಂ ॥ ೮೪ ॥

ಮಾಸೇ ಮಾಸೇ ಸದೈವ ರಾಮೋಪಾಸಕಮಾನವೈಃ ।
ಏವಂ ಮಾಸವ್ರತಂ ಪ್ರೋಕ್ತಂ ರಾಘವಸ್ಯಾತಿತೋಷದಂ ॥ ೮೫ ॥

ಭೋಜನವನ್ನು ಮಾಡಿಸಬೇಕು. ಅನಂತರ ತಾಂಬೂಲ ದಕ್ಷಿಣೆಯನ್ನು ಕೊಟ್ಟು ಅವರನ್ನು ಕಳುಹಿಸಬೇಕು. ಅನಂತರ ತಾನು ಆ ಬ್ರಾಹ್ಮಣರ ಪಾದೋದಕವನ್ನು ತೆಗೆದುಕೊಳ್ಳಬೇಕು. ಅನಂತರ ಯತಿಯ ಪಾದೋದಕವನ್ನು ತೆಗೆದುಕೊಳ್ಳ ಬೇಕು. ಅನಂತರ ದೇವರ ತೀರ್ಥವನ್ನು ತೆಗೆದುಕೊಳ್ಳಬೇಕು. ಅನಂತರ ಬಂದು ಮಿತ್ರರೊಡನೆ ಭೋಜನಮಾಡಬೇಕು.

೮೩. ತಾನು ಪೂಜೆಮಾಡುವಾಗ ಯತಿಗೆ ಕೊಟ್ಟ ಯಜ್ಞೋಪವಿತ ಮುಂತಾದ ಆ ಯತಿಯು ಉಪಯೋಗಿಸಿದ ಪದಾರ್ಥಗಳನ್ನು ಬ್ರಾಹ್ಮಣನಾದ ತನ್ನ ಗುರುವಿಗೆ ಕೊಟ್ಟುಬಿಡಬೇಕು.

೮೪. ಈ ರೀತಿಯಾಗಿ ಶ್ರೀರಾಮುವ್ರತವನ್ನು ಶುಕ್ಲಪಕ್ಷದಲ್ಲಿ ಮಾಡ ಬೇಕು. ಹಾಗಾಗದಿದ್ದರೆ ಶುಕ್ಲಪಕ್ಷದಲ್ಲಿ ಈ ಶುಭವ್ರತವನ್ನು ಮಾಡಬೇಕು.

೮೫. ಮಾಸ ಮಾಸದ ಶುಕ್ಲಪಕ್ಷದಲ್ಲಿಯೂ ರಾಮೋಪಾಸಕರಾದವರು ಈ ವ್ರತವನ್ನು ಮಾಡಬೇಕು. ಇದಕ್ಕೆ ಮಾಸವ್ರತವೆಂದು ಹೆಸರು. ಇದು ರಾಮನಿಗೆ ಬಹು ಸಂತೋಷಕರವಾದುದು.

ಸಂತಿ ವ್ರತಾನ್ಯನೇಕಾನಿ ಜಗತ್ಯಾಂ ಪುಣ್ಯದಾನಿ ಹಿ ।
ತಥಾಪ್ಯನೇನ ಸದೃಶಂ ನ ಭೂತಂ ನ ಭವಿಷ್ಯತಿ ॥ ೮೬ ॥

ವ್ರತಾನಾಮುತ್ತಮಂ ಚೈತದ್ಭುಕ್ತಿಮುಕ್ತಿಪ್ರದಾಯಕಂ ।
ಅವಶ್ಯಮೇವ ಕರ್ತವ್ಯಂ ರಾಮೋಪಾಸಕಮಾನವೈಃ ॥ ೮೭ ॥

ಏವಂ ಶಿಷ್ಯ ಮಯಾ ಪ್ರೋಕ್ತಂ ವ್ರತಾನಾಮುತ್ತಮಂ ವ್ರತಂ ।
ಸವಿಸ್ತಾರಂ ತವಾಗ್ರೇ ಹಿ ರಾಘವಸ್ಯಾತಿತೋಷದಂ ॥ ೮೮ ॥

॥ ವಿಷ್ಣುದಾಸ ಉವಾಚ ॥

ಶ್ರೀರಾಮನವಮೀಮಾಸವ್ರತಸ್ಯೋದ್ಯಾಪನಂ ವದ ।
ಕದಾ ಕಾರ್ಯಂ ಕಥಂ ಕಾರ್ಯಂ ಗುರೋ ಕೃತ್ವಾ ಕೃಪಾಂ ಮಯಿ ॥ ೮೯ ॥

---

೮೬. ಜಗತ್ತಿನಲ್ಲಿ ಪುಣ್ಯವನ್ನು ಉಂಟುಮಾಡುವ ವ್ರತಗಳು ಅನೇಕವಾಗಿರುವುವು. ಆದರೆ ಈ ವ್ರತದಂತಹ ವ್ರತವು ಹಿಂದೆಯೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ.

೮೭. ಈ ವ್ರತವು ವ್ರತಗಳೊಳಗೆಲ್ಲಾ ಉತ್ತಮ ವ್ರತವು. ಭುಕ್ತಿಯನ್ನು ಮುಕ್ತಿಯನ್ನೂ ಕೊಡುತ್ತದೆ. ಆದ್ದರಿಂದ ರಾಮನ ಉಪಾಸಕರಾದ ಮಾನವರು ಅವಶ್ಯಕವಾಗಿ ಮಾಡಬೇಕು.

೮೮. ಎಲೈ ಶಿಷ್ಯನೇ ! ಈ ರೀತಿಯಾಗಿ ವ್ರತದೊಳಗೆಲ್ಲಾ ಉತ್ತಮವಾದ ವ್ರತವನ್ನು ನಿನಗೆ ವಿಸ್ತಾರವಾಗಿ ಹೇಳಿದ್ದೇನೆ. ರಾಮನಿಗೆ ಬಹು ಸಂತೋಷವಾದುದು.

೮೯. ವಿಷ್ಣುದಾಸನು ಹೇಳಿದನು-ಎಲೈ ಗುರುವೇ ! ಶ್ರೀರಾಮನವಮಿಯ ಮಾಸವ್ರತದ ಉದ್ಯಾಪನೆಯನ್ನು ಹೇಳು ಅದನ್ನು ಹೇಗೆ ಮಾಡಬೇಕು ? ಯಾವಾಗ ಮಾಡಬೇಕು ? ಎಲೈ ಗುರುವೇ ! ನನ್ನಲ್ಲಿ ಕೃಪೆಯಿಟ್ಟು ಹೇಳು.

॥ ಶ್ರೀರಾಮದಾಸ ಉವಾಚ ॥

ಸಮ್ಯಕ್ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು ।
ನವಸಂವತ್ಸರಂ ಮಾಸನವಮೀವ್ರತಮುತ್ತಮಂ ॥ ೯೦ ॥

ಕೃತ್ವಾ ಚೋತ್ಥಾಪನಂ ಕಾರ್ಯಂ ಚೈತ್ರೇ ಶ್ರೀರಾಮಜನ್ಮನಿ ।
ನವಮ್ಯಾಂ ಸಮುಪೋಷ್ಯಾಥ ಕರ್ತವ್ಯಮಧಿವಾಸನಂ ॥ ೯೧ ॥

ಗೃಹೇ ಬೃಂದಾವನೇ ಚಾಥ ಗೋಷ್ಠೇ ದೇವಗೃಹಾದಿಷು ।
ಸುಮಾರ್ಜನಂ ಗೋಮಯೇನ ಕಾರ್ಯಂ ವಾ ಚಂದನಾದಿಭಿಃ ॥ ೯೨ ॥

ತತಃ ಪಾಷಾಣಚೂರ್ಣೈಶ್ಚ ನಾನಾಪದ್ಮಾದಿಕಾನಿ ಹಿ ।
ಭುವಿ ಸಂಲೇಖನೀಯಾನಿ ನೀಲಪೀತಾದಿವರ್ಣಕೈಃ ॥ ೯೩ ॥

ರಂಜನೀಯಾನಿ ರಮ್ಯಾಣಿ ತತಃ ಪತ್ರಾದಿ ಸಂಸ್ಥಲೇ ।
ಪೂರ್ವೋಕ್ತರಾಮಭದ್ರಾಣಾಂ ಮಧ್ಯೇ ತ್ವೇಕಂ ವರಾಸನಂ ॥ ೯೪ ॥

೯೦-೯೧. ಶ್ರೀರಾಮದಾಸನು ಹೇಳಿದನು-ಎಲೈ ಶಿಷ್ಯನೇ! ನೀನು ಕೇಳಿದುದು ಚೆನ್ನಾಗಿದೆ. ಸಮಾಧಾನ ಮನಸ್ಸಿನಿಂದ ಕೇಳು. ಈ ಮಾಸವ್ರತವನ್ನು ಒಂಭತ್ತು ವರ್ಷಗಳವರೆಗೂ ಮಾಡಿ ಅನಂತರ ಶ್ರೀರಾಮ ನವಮಿಯದಿನ ಉದ್ಯಾಪನೆಯನ್ನು ಮಾಡಬೇಕು. ಆ ದಿನ ಉಪೋಷ್ಯವಿದ್ದು ರಾಮನಿಗೆ ಅಧಿವಾಸನೆಯನ್ನು ಮಾಡಿಸಬೇಕು.

೯೨ ಮನೆಯಲ್ಲಾಗಲೀ ಬೃಂದಾವನದ ಬಳಿಯಲ್ಲಾಗಲೀ, ಹಸುವಿನ ಕೊಟ್ಟಿಗೆಯಲ್ಲಾಗಲೀ, ದೇವಸ್ಥಾನಗಳಲ್ಲಾಗಲೀ, ಹಸುವಿನ ಸಗಣಿಯಿಂದಾಗಲೀ ಅಥವಾ ಗಂಧದಿಂದಾಗಲಿ ನೆಲವನ್ನು ಸಾರಿಸಬೇಕು.

೯೩. ಅನಂತರ ಆ ಜಾಗದಲ್ಲಿ ರಂಗವಲ್ಲಿಯಿಂದಲೂ ಬಗೆ ಬಗೆಯ ಬಣ್ಣಗಳಿಂದಲೂ ಚಿತ್ರ ವಿಚಿತ್ರವಾಗಿ ಪದ್ಮಕವೇ ಮುಂತಾದ ಹಸೆಗಳನ್ನು ಬರೆಯಬೇಕು.

೯೪. ಅನೇಕ ಬಗೆಯ ಎಲೆಗಳನ್ನೂ, ಮಾವಿನ ಚಿಗುರು ಮುಂತಾದುವನ್ನೂ ತಂದು ಆ ಸ್ಥಳವನ್ನು ಅಲಂಕರಿಸಬೇಕು. ಹಿಂದೆ ಹೇಳಿದ ರಾಮಭದ್ರವೇ ಮುಂತಾದುವುಗಳಲ್ಲಿ ಒಂದು ಆಸನವನ್ನು ನಿರ್ಮಿಸಿಕೊಳ್ಳಬೇಕು.

ಲಿಖಿತ್ವಾ ಚಿತ್ರವರ್ಣೈಶ್ಚ ಪ್ರೋಕ್ತೈರೇವಂ ಸುರಂಜನೈಃ ।
ತಸ್ಯೋಪರಿ ಮಹಾನ್ರಮ್ಯಶ್ಚಿತ್ರವರ್ಣಶ್ಚ ಮಂಟಪಃ ॥ ೯೫ ॥

ದೇಯೋ ದ್ವಾರಾಣಿ ಚತ್ವಾರಿ ಕಾರ್ಯಾಣಿ ತೋರಣಾನಿ ಚ ।
ಕದಲೀಸ್ತಂಭಯುಕ್ತಾನಿ ಇಕ್ಷುದಂಡಯುತಾನಿ ಚ ॥ ೯೬ ॥

ನಾನಾಘಂಟಾಕಿಂಕಿಣೀಭಿರ್ಧ್ವನಿತಾನ್ಯುಜ್ವಲಾನಿ ಚ ।
ರವಸ್ಯಾದರ್ಶಮಂಡಿತಾನಿ ವಿಚಿತ್ರಾಣಿ ಶುಭಾನಿ ಚ ॥ ೯೭ ॥

ಚಿತ್ರಧ್ವಜೈರ್ವಿಚಿತ್ರೈಶ್ಚ ಮುಕ್ತಾಹಾರೈರ್ಯುತಾನ್ಯಪಿ ।
ಅಥ ತದ್ರಾಮಭದ್ರಸ್ಥೇ ಕಲಶೇ ವಾರಿಪೂರಿತೇ ॥ ೯೮ ॥

---

೯೫. ಆ ಆಸನಗಳನ್ನು ಬರೆದು ಅದನ್ನು ಬಣ್ಣಗಳಿಂದ ಅಲಂಕರಿಸಬೇಕು. ಅದರ ಮೇಲೆ ಸುಂದರವಾದ ಮಂಟಪಗಳನ್ನು ಕಟ್ಟಬೇಕು.

೯೬. ಆ ಮಂಟಪಕ್ಕೆ ನಾಲ್ಕು ಕಡೆಗೂ ನಾಲ್ಕು ಬಾಗಿಲುಗಳನ್ನು ಇಡಬೇಕು. ಅವುಗಳಿಗೆ ತೋರಣ ಮುಂತಾದುವನ್ನೂ ಕಟ್ಟಿ ಅಲಂಕರಿಸಬೇಕು. ಬಾಳೆಯ ಕಂಬಗಳನ್ನು ಕಟ್ಟಿ, ಕಬ್ಬು ಮುಂತಾದುವನ್ನು ನಿಲ್ಲಿಸಿ ಅಲಂಕರಿಸಬೇಕು.

೯೭. ಮತ್ತು ಗಂಟೆಗಳನ್ನೂ, ಗೆಜ್ಜೆಗಳನ್ನೂ, ಕಟ್ಟಬೇಕು. ಚೆನ್ನಾಗಿರುವ ಕನ್ನಡಿಗಳನ್ನೂ ಸರಿಯಾಗಿ ಕಟ್ಟಿರಬೇಕು. ವಿಚಿತ್ರವಿಚಿತ್ರವಾಗಿ ನೋಡಲು ಮನೋಹರವಾಗಿರಬೇಕು.

೯೮. ಬಣ್ಣಬಣ್ಣದ ಧ್ವಜಗಳನ್ನು ಕಟ್ಟಿರಬೇಕು. ಮುತ್ತಿನ ಹಾರಗಳನ್ನು ಜೋಲಾಡುವಂತೆ ಬಿಟ್ಟಿರಬೇಕು. ಆ ಮಂಟಪದೊಳಗೆ ರಾಮತೋಭದ್ರಾಸನವನ್ನು ಇಟ್ಟು ಅದರ ಮೇಲೆ ನೀರನ್ನು ತುಂಬಿ ಒಂದು ತಾಮ್ರದ ಕಲಶವನ್ನು ಇಡಬೇಕು.

ತಾಮ್ರಪಾತ್ರೇ ರಾಮಭದ್ರಂ ನವಾಯತನಚಿಹ್ನಿತಂ ।
ಸೀತಯಾ ಪೂಜಯೇದ್ರಾತ್ರೌ ಮಹೋತ್ಸಾಹಪುರಸ್ಸರಂ ॥ ೯೯ ॥

ನವಪಲಮಿತಾಂ ಮೂರ್ತಿಂ ಹೈಮೀಂ ಕೃತ್ವಾ ಪ್ರಪೂಜಯೇತ್ ।
ಸೀತಾ ಹೈಮೀ ಪ್ರಕರ್ತವ್ಯಾ ಶುಭಾಷ್ಟಪಲಸಂಮಿತಾ ॥ ೧೦೦ ॥

ರಾಜತಾಸ್ತೇ ಲಕ್ಷ್ಮಣಾದ್ಯಾಃ ಪೃಥಕ್ಪಂಚಪಲೈಸ್ಸ್ಮೃತಾಃ ।
ಅಶಕ್ತೌ ಚ ತದರ್ಧೇನ ತದರ್ಧಾರ್ಧೇನ ವಾ ಪುನಃ ॥ ೧೦೧ ॥

ತಸ್ಯಾಪ್ಯರ್ಧಂ ತದರ್ಧಾರ್ಧಂ ವಿತ್ತಶಾಠ್ಯಂ ನ ಕಾರಯೇತ್ ।
ಷೋಡಶೈರುಪಚಾರೈಶ್ಚ ಪೂಜೋಕ್ತಾ ನಿಶಿ ಜಾಗರಃ ॥ ೧೦೨ ॥

---

೯೯. ಆ ತಾಮ್ರ ಪಾತ್ರೆಯ ಕಲಶದಲ್ಲಿ ನವಾಯತನದಿಂದ ಕೂಡಿರುವ ರಾಮಭದ್ರನನ್ನೂ, ಸೀತೆಯನ್ನೂ ಆ ರಾತ್ರಿಯೆಲ್ಲವೂ ಬಹುವಾದ ವಿಜೃಂಭಣೆಯಿಂದ ಪೂಜಿಸಬೇಕು.

೧೦೦. ಆ ರಾಮಭದ್ರ ಪ್ರತಿಮೆಯನ್ನು ಒಂಭತ್ತು ಪಲಗಳಷ್ಟಿರುವ ಚಿನ್ನದಿಂದ ಮಾಡಿಸಿರಬೇಕು. ಸೀತೆಯನ್ನೂ ಕೂಡ ಎಂಟು ಪಲಗಳ ಚಿನ್ನದಿಂದ ಮಾಡಿಸಿರಬೇಕು.

೧೦೧. ಲಕ್ಷ್ಮಣನೇ ಮುಂತಾದ ಆವರಣದ ದೇವತೆಗಳನ್ನು ಒಂದೊಂದನ್ನೂ ಐದೈದು ಪಲಂ ಬೆಳ್ಳಿಯಿಂದ ಮಾಡಿಸಿರಬೇಕು. ಶಕ್ತಿಯಿಲ್ಲದಿದ್ದರೆ ಅವುಗಳ ಅರ್ಧಭಾಗವಾಗಲೀ ಆ ಚಿನ್ನ, ಬೆಳ್ಳಿಗಳ ಪ್ರಮಾಣವಿರಬೇಕು.

೧೦೨. ಅದೂ ಇಲ್ಲದಿದ್ದರೆ ಅದರ ಅರ್ಧಭಾಗವಾಗಲಿ ಇರಬೇಕು. ಯಾವ ರೀತಿಯಿಂದಲೂ ದುಡ್ಡಿನಲ್ಲಿ ಜಿಪುಣತನವನ್ನು ಮಾಡಬಾರದು. ಷೋಡಶೋಪಚಾರಗಳಿಂದ ಪೂಜೆಯನ್ನು ಮಾಡಿ ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು.

ದಶಮ್ಯಾಂ ಪ್ರಾತರುತ್ಥಾಯ ಸ್ನಾತ್ವಾ ಸಂಪೂಜ್ಯ ರಾಘವಂ ।
ರಾಮಮಂತ್ರೇಣ ಹವನಂ ಕಾರ್ಯಂ ನವಸಹಸ್ರಕಂ ॥ ೧೦೩ ॥

ತಿಲಾದ್ಯೈಃ ಪಾಯಸಾದ್ಯೈಶ್ಚ ನವಾನ್ನೇನಾಥವಾ ಸ್ಮೃತಂ ।
ತದ್ದಶಾಂಶೇನ ಕ್ಷೀರೇಣ ತರ್ಪಣಂ ಹಿ ಪ್ರಕಾರಯೇತ್ ॥ ೧೦೪ ॥

ತಸ್ಯಾಪಿ ಚ ದಶಾಂಶೇನ ಮಾರ್ಜನಂ ದ್ವಿಜಭೋಜನಂ ।
ಕರ್ಮಮುದ್ರಾಂ ಹಸ್ತಮುದ್ರಾಂ ವಸನೇ ಬ್ರಹ್ಮಸೂತ್ರಕಂ ॥ ೧೦೫ ॥

ಚಿತ್ರಾಸನಮುತ್ತರೀಯಂ ಮುಕುಟಂ ಝರ್ಝರೀಂ ತಥಾ ।
ಕಾಂಸ್ಯಪಾತ್ರಂ ಭೋಜನಸ್ಯ ನವಾನ್ನೇನ ಪ್ರಪೂರಿತಂ ॥ ೧೦೬ ॥

೧೦೩-೧೦೪. ದಶಮಿಯ ದಿನ ಬೆಳಗ್ಗೆ ಸ್ನಾನಮಾಡಿ ರಾಮನನ್ನು ಪೂಜಿಸಿ ಅನಂತರ ಅವನವನ ಗೃಹ್ಯಸೂತ್ರದಂತೆ ಅಗ್ನಿ ಪ್ರತಿಷ್ಠೆಯನ್ನು ಮಾಡಿಕೊಂಡು ರಾಮಮಂತ್ರದಿಂದ ಒಂಭತ್ತು ಸಾವಿರ ಹೋಮವನ್ನು ಮಾಡಬೇಕು. ಎಳ್ಳು ಮುಂತಾದವುಗಳಿಂದಲೋ, ಪಾಯಸದಿಂದಲೋ ಆ ಒಂಭತ್ತುಸಾವಿರ ಹೋಮ ಗಳನ್ನೂ ಮಾಡಬೇಕು. ಹೋಮದ ಹತ್ತನೆಯ ಒಂದು ಭಾಗದ ಸಂಖ್ಯೆಯಿಂದ ಹಾಲಿನಲ್ಲಿ ತರ್ಪಣವನ್ನು ಮಾಡಬೇಕು.

೧೦೫. ಅದರ ಹತ್ತಿರದಲ್ಲೊಂದು ಪಾಲು ಎಂದರೆ ತೊಂಭತ್ತು ಮಂದಿ ಯಿಂದ ಮಾರ್ಜನವನ್ನು ಮಾಡಿಸಬೇಕು. ಅವರಿಗೆ ಭೋಜನ ಮುಂತಾದು ವನ್ನು ಮಾಡಿಸಬೇಕು. ದಕ್ಷಣೆ ಮುಂತಾದುವುಗಳಿಂದ ಸತ್ಕರಿಸಬೇಕು ಬ್ರಾಹ್ಮ ಣರು ಪ್ರತಿಯೊಬ್ಬರಿಗೂ ಪವಿತ್ರದುಂಗುರವನ್ನೂ, ಮುದ್ರೆಯುಂಗುರವನ್ನೂ ಕೊಡಬೇಕು. ವಸ್ತ್ರಗಳನ್ನೂ, ಯಜ್ಞೋಪವೀತವನ್ನೂ ಕೊಡಬೇಕು.

೧೦೬. ಚಿತ್ರಾಸನ, ಮಕುಟ, ಉತ್ತರೀಯ, ಕಿರೀಟ ಡಕ್ಕೆವಾದ್ಯ, ಇವನ್ನು ಕೊಡಬೇಕು. ನವಾನ್ನಗಳಿಂದ ಕೂಡಿದ ಕಂಚಿನ ಪಾತ್ರೆಯನ್ನು ಕೊಡಬೇಕು.

ಘೃತಪಾತ್ರಂ ಕಾಂಸ್ಯಮಯಂ ನವಾನ್ನೋಪರಿ ಸಂಸ್ಥಿತಂ ।
ಪಾದುಕೇ ಪುಸ್ತಕಂ ದಿವ್ಯಂ ಯತ್ಕಿಂಚಿದ್ರಾಘವಸ್ಯ ಚ ॥ ೧೦೭ ॥

ತಾಂಬೂಲಂ ದಕ್ಷಿಣಾಂ ಚಾಪಿ ಪ್ರತ್ಯೇಕಂ ಭೂಸುರಾಯ ಹಿ ।
ಅರ್ಪಯೇತ್ಸಕಲಂ ಚೇತ್ಥಮೇವಂ ಸರ್ವಾನ್ ಸಮರ್ಪಯೇತ್ ॥ ೧೦೮ ॥

ಅತೋ ಗುರುಂ ಸಮಭ್ಯರ್ಚ್ಯ ತಸ್ಮೈ ಧೇನುಂ ಸಮರ್ಪಯೇತ್ ।
ತಾಮರ್ಚಾಮರ್ಪಯೇತ್ಸರ್ವಾಂ ಗುರವೇ ದಕ್ಷಣಾನ್ವಿತಾಂ ॥ ೧೦೯ ॥

ತತೋ ಗುರುಂ ಪ್ರಾರ್ಥಯೇತ್ತಂ ಪ್ರಣಮ್ಯ ಚ ಪುನಃ ಪುನಃ ।
ಮಾಸೇ ಮಾಸೇ ನವಮ್ಯಾಂ ತು ಸೋದ್ಯಾಪನವ್ರತಂ ಮಯಾ ॥ ೧೧೦ ॥

---

೧೦೭. ಒಂದು ಕಂಚಿನ ಬಟ್ಟಲಲ್ಲಿ ತುಪ್ಪವನ್ನು ತುಂಬಿಕೊಡಬೇಕು. ಅದನ್ನು ಆ ನವಾನ್ನದ ಮೇಲಿಟ್ಟಿರಬೇಕು. ಪಾದುಕೆಗಳನ್ನೂ ರಾಮನ ಚರಿತ್ರೆಯುಳ್ಳ ಯಾವುದಾದರೂ ಒಂದು ರಾಮಾಯಣವನ್ನು ಕೊಡಬೇಕು.

೧೦೮. ಪ್ರತ್ಯೇಕ ಪ್ರತ್ಯೇಕವಾಗಿ ಅವರಿಗೆ ತಾಂಬೂಲವನ್ನೂ, ದಕ್ಷಿಣೆಯನ್ನೂ ಕೊಡಬೇಕು. ಈ ರೀತಿಯಾಗಿಟ್ಟು ಎಲ್ಲವನ್ನೂ ಅವರವರಿಗೆ ಸಮರ್ಪಿಸಬೇಕು.

೧೦೯. ಅನಂತರ ಗುರುವನ್ನು ಪೂಜಿಸಬೇಕು. ಅವನಿಗೆ ಕರೆಯುವ ಹಸುವನ್ನು ಕೊಡಬೇಕು. ಆ ಬ್ರಾಹ್ಮಣರಿಗೆ ಕೊಟ್ಟಂತೆಯೇ ಈ ಗುರುವಿಗೂ ದಕ್ಷಿಣೆಯನ್ನು ಕೊಡಬೇಕು.

೧೧೦. ಅನಂತರ ಆ ಗುರುವಿಗೆ ಅನೇಕಬಾರಿ ನಮಸ್ಕಾರ ಮಾಡುತ್ತ ಇಂತೆಂದು ಪ್ರಾರ್ಥಿಸಿಕೊಳ್ಳಬೇಕು. ಎಲೈ ಗುರುವೇ ! ತಿಂಗಳು ತಿಂಗಳಿನಲ್ಲಿಯೂ ನವಮಿಯ ದಿನ ಉದ್ಯಾಪನೆಯಿಂದ ಕೂಡಿದ ಈ ವ್ರತವನ್ನು ಮಾಡಿದೆನು.

ಯತ್ಕೃತಂ ನವವರ್ಷಾಣಿ ತೇನ ತುಷ್ಯತು ರಾಘವಃ ।
ಅಗ್ರೇಪಿ ಯಾವಜ್ಜೀವಾನಿ ತಾವತ್ಕಾಲಂ ಕರೋಮ್ಯಹಂ ॥ ೧೧೧ ॥

ವ್ರತಾನಾಮುತ್ತಮಂ ಚೇದಂ ತುಷ್ಟ್ಯರ್ಥಂ ರಾಘವಸ್ಯ ಚ ।
ಗುರೋ ತ್ವತ್ಕೃಪಯಾ ರಾಮೋ ಮಾಂ ಪ್ರಸೀದತು ಸೀತಯಾ ॥ ೧೧೨ ॥

ಏವಂ ಸಂಪ್ರಾರ್ಥ್ಯ ಸ್ವೀಯಂ ತಂ ಗುರುಂ ನತ್ವಾ ವಿಸರ್ಜಯೇತ್ ।
ತತಃ ಸ್ವಯಂ ಹಿ ಭುಂಜೀತ ಸುಹೃನ್ಮಿತ್ರಸುತಾದಿಭಿಃ ॥ ೧೧೩ ॥

ಏವಮುದ್ಯಾಪನಂ ಕೃತ್ವಾ ಕಾರ್ಯಮಗ್ರೇ ವ್ರತಂ ಪುನಃ ।
ಮಾಸೇ ಮಾಸೇ ರಾಘವಸ್ಯ ನ ತ್ಯಾಜ್ಯಂ ಸರ್ವಥಾ ನರೈಃ ॥ ೧೧೪ ॥

---

೧೧೧. ಇದನ್ನು ಈ ರೀತಿಯಾಗಿ ಒಂಭತ್ತು ವರ್ಷಗಳವರೆಗೂ ಮಾಡಿರುವೆನು. ಇದರಿಂದ ಶ್ರೀರಾಮನು ಸಂತೋಷಗೊಳ್ಳಲಿ. ಮುಂದೆಯೂ ಕೂಡ ನಾನು ಬದುಕಿರುವವರೆಗೂ ಮಾಡುವೆನು.

೧೧೨. ಇದು ವ್ರತಗಳಲ್ಲೆಲ್ಲಾ ಉತ್ತಮವಾದ ವ್ರತವು. ರಾಮನಿಗೆ ವಿಶೇಷವಾಗಿ ತೃಪ್ತಿಯನ್ನುಂಟುಮಾಡತಕ್ಕದ್ದು. ಎಲೈ ಗುರುವೇ ! ಈ ವ್ರತವನ್ನು ನಿನ್ನ ಕೃಪೆಯಿಂದ ಮಾಡಿದ್ದೇನೆ. ಆ ರಾಮನೂ, ಸೀತೆಯೂ ನನಗೆ ಪ್ರಸನ್ನರಾಗಲಿ.

೧೧೩. ಈ ರೀತಿಯಾಗಿ ತನ್ನ ಗುರುವನ್ನು ಪ್ರಾರ್ಥಿಸಿಕೊಂಡು ನಮಸ್ಕರಿಸಿ ಅನಂತರ ಅವನನ್ನು ಕಳುಹಿಸಬೇಕು. ಅನಂತರ ಬಂಧು ಮಿತ್ರನೊಡನೆ ಕೂಡಿಕೊಂಡು ತಾನು ಭೋಜನವನ್ನು ಮಾಡಬೇಕು.

೧೧೪. ಈ ರೀತಿಯಾಗಿ ಉದ್ಯಾಪನೆಯನ್ನು ಮಾಡಿದರೂ ಆಮೇಲೆ ಮತ್ತೆ ವ್ರತವನ್ನು ತಿಂಗಳು ತಿಂಗಳಲ್ಲಿಯೂ ಮಾಡುತ್ತಿರಬೇಕು. ಅದನ್ನು ಖಂಡಿತವಾಗಿಯೂ ಬಿಡಕೂಡದು.

ಏಕಾದಶೀವ್ರತಂ ನಿತ್ಯಂ ಯಥಾ ತತ್ಕ್ರಿಯತೇ ನರೈಃ ।
ತಥಾ ಮಾಸವ್ರತಂ ಚೇದಂ ನಿತ್ಯಮೇವ ಸ್ಮೃತಂ ಬುಧೈಃ ॥ ೧೧೫ ॥
ಅಶಕ್ತೇನ ಯಥಾಶಕ್ತ್ಯಾ ಕಾರ್ಯಮುದ್ಯಾಪನಂ ವ್ರತಂ ।
ಉಪೋಷ್ಯಾ ನವಮೀ ಶುಕ್ಲಾ ಸರ್ವದೈವ ನರೈರ್ಭುವಿ ॥ ೧೧೬ ॥
ನವಮ್ಯಾಂ ಶುಕ್ಲಪಕ್ಷೇ ಯೋ ಭುಂಕ್ತೇಽನ್ನಂ ಮೂಢಧೀಃ ನರಃ ।
ರೌರವೇ ಕಲ್ಪಪರ್ಯಂತಂ ತಸ್ಯ ವಾಸಃ ಸ್ಮೃತೋ ಬುಧೈಃ ॥ ೧೧೭ ॥
ಏವಂ ಶಿಷ್ಯ ತ್ವಯಾ ಯಚ್ಚ ಪೃಷ್ಟಂ ತತ್ತೇ ನಿವೇದಿತಂ ।
ಕಾ ತೇಽನ್ಯಾ ಶ್ರೋತುಮಿಚ್ಛಾಽಸ್ತಿ ತಾಂ ವದಸ್ವ ವದಾಮಿ ತೇ ॥ ೧೧೮ ॥

॥ ವಿಷ್ಣುದಾಸ ಉವಾಚ ॥

ಗುರೋ ತ್ವಯಾ ರಾಘವಸ್ಯ ಶ್ರೀರಾಮನವಮೀವ್ರತಂ ।
ಮಾಸೇ ಮಾಸೇ ಪ್ರಕರ್ತವ್ಯಮಿತಿ ಪ್ರೋಕ್ತಂ ಮಮಾಗ್ರತಃ ॥ ೧೧೯ ॥

---

೧೧೫. ಏಕಾದಶಿ ವ್ರತವನ್ನು ಜನರು ಹೇಗೆ ನಿತ್ಯ ವ್ರತವನ್ನಾಗಿ ಆಚರಿಸುವರೋ ಹಾಗೆಯೇ ಈ ಮಾಸ ವ್ರತವನ್ನು ನಿತ್ಯ ವ್ರತವೆಂದು ತಿಳಿದು ಮಾಡುತ್ತಿರಬೇಕು.

೧೧೬. ಅಶಕ್ತನಾದವನೂ ಕೂಡ ತನ್ನ ಶಕ್ತಿಯಿದ್ದಷ್ಟರಲ್ಲಿಯೇ ಈ ವ್ರತವನ್ನು ಮಾಡಬೇಕು. ಅದಕ್ಕನುಗುಣವಾಗಿ ಉದ್ಯಾಪನೆಯನ್ನು ಮಾಡಬೇಕು. ಶುದ್ಧ ನವಮಿಯ ದಿನ ಜನರು ಉಪೋಷ್ಯವಿದ್ದೇ ಇರಬೇಕು.

೧೧೭. ಶುಕ್ಲಪಕ್ಷದ ನವಮಿಯ ದಿವಸ ಯಾವನು ಅನ್ನವನ್ನು ಊಟ ಮಾಡುವನೋ ಅವನು ಒಂದು ಕಲ್ಪದವರೆಗೂ ರೌರವನರಕದಲ್ಲಿ ವಾಸಿಸುವನು. ಅದು ನಿಶ್ಚಯವು. ಹೀಗೆಂದು ತಿಳಿದವರು ಹೇಳುತ್ತಾರೆ.

೧೧೮. ಎಲೈ ಶಿಷ್ಯನೇ! ನೀನು ಕೇಳಿದುದನ್ನು ಈ ರೀತಿಯಾಗಿ ವಿವರಿಸಿ ಹೇಳಿದ್ದೇನೆ. ಇನ್ನು ಯಾವುದನ್ನು ಕೇಳಬೇಕೆಂದು ಇಚ್ಛೆಯಿದೆಯೋ ಅದನ್ನು ಕೇಳು. ಹೇಳುತ್ತೇನೆ.

೧೧೯-೧೨೦. ವಿಷ್ಣುದಾಸನು ಹೇಳಿದನು. ಎಲೈ ಗುರುವೇ! ಶ್ರೀರಾಮನವಮೀ ವ್ರತವನ್ನು ತಿಂಗಳು ತಿಂಗಳಲ್ಲಿಯೂ ಮಾಡಬೇಕೆಂದು ನೀನು ಹೇಳಿದೆ.

ತತ್ಕೇನಾಚರಿತಂ ಪೂರ್ವಂ ಸಿದ್ಧಿರ್ಲಬ್ಧಾತ್ರ ಕೇನ ಹಿ ।
ತತ್ಸರ್ವಂ ವಿಸ್ತರೇಣೈವ ವದ ಕೃತ್ವಾ ಕೃಪಾಂ ಮಯಿ ॥ ೧೨೦ ॥

ಅನ್ಯತ್ತೇ ಪ್ರಷ್ಟುಮಿಚ್ಛಾಮಿ ತತ್ತ್ವಂ ಮಾಂ ವಕ್ತುಮರ್ಹಸಿ ।
ಅಶಕ್ತೇನ ನರೇಣೇದಂ ವ್ರತಂ ಕಾರ್ಯಂ ಕಥಂ ಮಹತ್ ॥ ೧೨೧ ॥

॥ ಶ್ರೀರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ಶಿಷ್ಯ ಸಾವಧಾನಮನಾಃ ಶೃಣು ।
ಆಸೀತ್ಪುರಾ ದ್ವಿಜಃ ಕಶ್ಚಿತ್ಕೇರಲೇ ರಾಮತತ್ಪರಃ ॥ ೧೨೨ ॥

ನಾಭೂತ್ತಸ್ಯ ವಿವಾಹೋತ್ರ ನಿರ್ಧನಸ್ಯ ಜನಸ್ಯ ಚ ।
ನಾಸ್ತೀತ್ತಸ್ಯೈ ಗೇಹಮಪಿ ನ ಮಾತಾ ನ ಪಿತಾಪಿ ಚ ॥ ೧೨೩ ॥

ತಸ್ಯೈಕೋ ನಿಯಮಶ್ಚಾಸೀದ್ದರಿದ್ರಸ್ಯ ಚ ತಂ ಶೃಣು ।
ನಿತ್ಯಂ ಪ್ರಾತಃ ಸಮುತ್ಥಾಯ ಕೃತಮಾಲಾನದೀಜಲೇ ॥ ೧೨೪ ॥

ಅದನ್ನು ಹಿಂದೆ ಯಾರು ಮಾಡಿದರು? ನನ್ನ ಮೇಲೆ ಕೃಪೆಮಾಡಿ ಅವೆಲ್ಲವನ್ನೂ ಹೇಳು.

೧೨೧. ಇದೂ ಅಲ್ಲದೆ ಇನ್ನೂ ಒಂದನ್ನು ನಿನ್ನಲ್ಲಿ ಕೇಳಬೇಕಾಗಿರುವುದು. ಅದನ್ನೂ ನೀನು ನನಗೆ ಹೇಳಬೇಕು. ಅಶಕ್ತನಾಗಿರುವವನು ಈ ದೊಡ್ಡ ವ್ರತವನ್ನು ಮಾಡುವುದು ಹೇಗೆ ? ಹೇಳು.

೧೨೨. ಶ್ರೀರಾಮದಾಸನು ಹೇಳಿದನು.– ಎಲೈ ಶಿಷ್ಯನೇ ! ನೀನು ಕೇಳಿದುದು ಸರಿ. ಮನಸ್ಸಿಟ್ಟು ಕೇಳು. ಕೇರಳ ದೇಶದಲ್ಲಿ ರಾಮನಲ್ಲಿಯೇ ಭಕ್ತಿಯನ್ನಿಟ್ಟುಕೊಂಡಿದ್ದ ಒಬ್ಬ ಬ್ರಾಹ್ಮಣನಿದ್ದನು.

೧೨೩. ಅವನಿಗೆ ಹಣವೂ ಸಹಾಯಕರೂ ಇರಲಿಲ್ಲ. ಆದ್ದರಿಂದ ಅವನಿಗೆ ವಿವಾಹವೇ ಆಗಲಿಲ್ಲ. ಅವನಿಗೆ ಮನೆಯಾಗಲಿ ತಂದೆತಾಯಿಗಳಾಗಲಿ ಇರಲಿಲ್ಲ.

೧೨೪. ಅವನು ದರಿದ್ರನಾದರೂ ಅವನಿಗೆ ಒಂದು ವ್ರತವಿದ್ದಿತು. ಅದನ್ನು ಹೇಳುತ್ತೇನೆ ಕೇಳು. ಅವನು ದಿನವೂ ಬೆಳಿಗ್ಗೆ ಎದ್ದು ಕೃತಮಾಲೆಯೆಂಬ ನದಿಯಲ್ಲಿ ಸ್ನಾನ ಮಾಡುವನು.

ಸ್ನಾತ್ವಾ ನದೀಸಿಕತಾಯಾಂ ಸಿಕತಾವೇದಿಕಾ ನವ ।
ಕೃತ್ವಾ ತತ್ರ ಜನಕಜಾಸಹಿತಂ ರಘುನಂದನಂ ॥ ೧೨೫ ॥

ಪತ್ರ ನಿರ್ಮಿತಶ್ರೀರಾಮಲಿಂಗಾತ್ಮಕವರಾಸನೇ ।
ಮಧ್ಯಮಾಯಾಂ ವೇದಿಕಾಯಾಂ ಸಂಸ್ಥಾಪ್ಯ ಧಾತುನಿರ್ಮಿತಂ ॥ ೧೨೬ ॥

ಅಷ್ಟದಿಕ್ಷು ವೇದಿಕಾಸು ತರುಪತ್ರಾಸನೇ ಪೃಥಕ್ ।
ಸಮಂತತೋ ರಾಘವಸ್ಯ ಲಕ್ಷ್ಮಣಾದೀನ್ನ್ಯವೇಶಯತ್ ॥ ೧೨೭ ॥

ತತಸ್ಸ ರಾಘವಂ ಪ್ರಾಹ ರಾಮ ರಾಜೀವಲೋಚನ ।
ಕರ್ತುಮಾವಶ್ಯಕಂ ಕರ್ಮ ಗಂತುಮರ್ಹಸಿ ಸತ್ವರ- ॥ ೧೨೮ ॥

ಇತ್ಯುಕ್ತ್ವಾ ತಂ ಸ್ವಯಂ ಪೃಷ್ಠೇ ನಿವೇಶ್ಯ ರಘುನಂದನಂ ।
ಕಿಯದ್ದೂರಂ ರಹೋ ವೃಕ್ಷಖಂಡೇ ಗತ್ವಾ ದ್ವಿಜೋತ್ತಮಃ ॥ ೧೨೯ ॥

೧೨೫-೧೨೭. ನಿತ್ಯಕರ್ಮಗಳನ್ನು ಮಾಡಿಕೊಂಡು ಆ ನದಿಯ ಮರಳಿನ ಮೇಲೆ ಹೋಗಿ ಒಂಭತ್ತು ಜಗಲಿಗಳನ್ನು ಮಾಡುವನು. ಶ್ರೀರಾಮಾದಿ ನವ ಮೂರ್ತಿಗಳನ್ನು ಧಾತುಗಳಿಂದ ನಿರ್ಮಿಸಿಕೊಂಡಿರುವನು ಆ ಮರಳು ಜಗಲಿಗಳ ಮಧ್ಯದಲ್ಲಿ ಆ ರಾಮಲಿಂಗಾತ್ಮಕ ಆಸನವನ್ನು ಹಾಕಿ ಪ್ರತಿಷ್ಠಿಸಿ ಉಳಿದುವುಗಳ ಮೇಲೆ ಎಲೆಯ ಆಸನಗಳನ್ನು ಇಡುವನು. ಮಧ್ಯದಲ್ಲಿ ಸೀತಾರಾಮರನ್ನಿಟ್ಟು ಸುತ್ತಲೂ ಕ್ರಮವಾಗಿ ಲಕ್ಷ್ಮಣನೇ ಮುಂತಾದವರನ್ನು ಇಡುವನು.

೧೨೮. ಅನಂತರ ಆ ರಾಮನನ್ನು ಕುರಿತು ಎಲೈ ರಾಜೀವಲೋಚನನಾದ ರಾಮನೇ! ಅವಶ್ಯಕವಾದ ಕೆಲಸಗಳನ್ನು ಮಾಡಲು ಬೇಗನೆ ಹೋಗು ಎಂದು ಹೇಳುವನು.

೧೨೯-೧೩೦. ಹೀಗೆ ಹೇಳಿ ಆ ರಾಮನನ್ನು ಬೆನ್ನಿನ ಮೇಲಿಟ್ಟುಕೊಂಡು ಸ್ವಲ್ಪ ದೂರದವರೆಗೆ ಹೋಗಿ ಆ ಮರಗಳ ಗುಂಪಿನಲ್ಲಿ ಯಾರೂ ಕಾಣದಂತೆ

ರಾಮಂ ತೃಣಭುವಿ ಸ್ಥಾಪ್ಯ ತದಗ್ರೇ ಪಾತ್ರಮುತ್ತಮಂ ।
ಸಜಲಂ ಮೃತ್ತಿಕಾಂ ಚಾಪಿ ಸಂಸ್ಥಾಪ್ಯ ಹಿ ಜವೇನ ಹಿ ॥ ೧೩೦ ॥

ಕಿಂಚಿದ್ದೂರಂ ಸ್ವಯಂ ಗತ್ವಾ ಸ್ಥಿತವಾನ್ ಸ ಕಿಯತ್ ಕ್ಷಣಂ ।
ರಾಮಾಂತಿಕಂ ಪುನರ್ಗತ್ವಾ ಪಾದಪ್ರಕ್ಷಾಲನಾದಿಕಂ ॥ ೧೩೧ ॥

ಅಕರೋನ್ಮೃತ್ತಿಕಾಶೌಚಂ ಸ ತಸ್ಯ ಸ್ವಕರೇಣ ಹಿ ।
ದತ್ವಾನ್ಯಪಾತ್ರತೋಽಯೇನ ರಾಮಾಯಾಚಮನಂ ತತಃ ॥ ೧೩೨ ॥

ದಂತಕಾಷ್ಠೇನ ತದ್ದಂತಾನ್ಸಂಶೋಧ್ಯ ಭಕ್ತಿಪೂರ್ವಕಂ ।
ಗಂಡೂಷಾರ್ಥಂ ಜಲಂ ದತ್ವಾ ಕವೋಷ್ಣಂ ಶೀತಲಂ ಪುನಃ ॥ ೧೩೩ ॥

ಸಮರ್ಪ್ಯಾಚಮನಾರ್ಥಂ ಸ ವಸ್ತ್ರೇಣಾಸ್ಯಂ ಪ್ರಮಾರ್ಜಯತ್ ।
ಸಂಮಾರ್ಜ್ಯ ಹಸ್ತೌ ಪಾದೌ ಚ ರಾಮಸ್ಯ ವಾಸಸಾ ದ್ವಿಜಃ ॥ ೧೩೪ ॥

ಆ ರಾಮಮೂರ್ತಿಯನ್ನು ಹುಲ್ಲಿರುವ ನೆಲದಮೇಲಿಟ್ಟು ಅದರ ಮುಂದೆ ನೀರಿನ ಪಾತ್ರೆಯನ್ನೂ, ಮೃತ್ತಿಕೆಯನ್ನೂ ಇಟ್ಟು ಬೇಗನೆ ಕೊಂಚ ದೂರ ಹಿಂದಕ್ಕೆ ಹೋಗುವನು.

೧೩೧-೧೩೨. ಅಲ್ಲಿ ಅಲ್ಪ ಸ್ವಲ್ಪ ಕಾಲವಿದ್ದುಕೊಂಡು ಮತ್ತೆ ರಾಮನ ಬಳಿಗೆ ಹೋಗುವನು. ಪಾದ ಪ್ರಕ್ಷಾಳನ ಮುಂತಾದುವನ್ನು ಮಾಡಿಸುವನು. ಮತ್ತು ಮೃತ್ತಿಕಾ ಶೌಚನವನ್ನು ಮಾಡಿಸುವನು. ಅನಂತರ ಬೇರೆಯ ನೀರನ್ನು ಕೊಟ್ಟು ಆಚಮನವನ್ನು ಮಾಡಿಸುವನು.

೧೩೩-೧೩೪. ಹಲ್ಲುಜ್ಜುವ ಕಡ್ಡಿಯನ್ನು ತೆಗೆದುಕೊಂಡು ಅದರ ಹಲ್ಲುಗಳನ್ನು ತಿಕ್ಕಿ ತೊಳೆಯುವನು. ಅನಂತರ ಬಾಯನ್ನು ಮುಕ್ಕುಳಿಸಲು ಉಗುರು ಬೆಚ್ಚಗಿರುವ ನೀರನ್ನು ಕೊಡುವನು. ಅನಂತರ ಮತ್ತೆ ತಣ್ಣೀರನ್ನು ಕೊಡುವನು. ಆದರಿಂದ ಆಚಮನವನ್ನು ಮಾಡಿಸುವನು. ಆಮೇಲೆ ವಸ್ತ್ರದಿಂದ ಮುಖವನ್ನು ಒರಸುವನು. ಅನಂತರ ಮತ್ತೆ ಬಟ್ಟೆಯಿಂದ ಕೈಕಾಲುಗಳನ್ನು ಒರಸುವನು.

ಶಂ ವಿಗೃಹ್ಯ ಪುನಃ ಪೃಷ್ಠೇ ನಮ್ರೀಭೂತಶ್ಶನೈಶ್ಶನೈಃ ।
ಸಿಕತಾವೇದಿಕಾಯಾಂ ಚ ಪೂರ್ವಸ್ಥಾನೇ ನ್ಯವೇಶಯತ್ ॥ ೧೩೫ ॥

ಏವಂ ಸೀತಾಂ ಲಕ್ಷ್ಮಣಂ ಚ ಭರತಂ ಲವಣಾಂತಕಂ ।
ಸುಗ್ರೀವಾದೀನ್ ಪೃಥಕ್ ನೀತ್ವಾವಶ್ಯಕಾದೀನ್ಯಕಾರಯತ್ ॥ ೧೩೬ ॥

ತತಃ ಪೃಥಕ್ಕವೋಷ್ಣೇನ ತೈಲಾಭ್ಯಂಗಾನ್ ವಿಧಾಯ ಸಃ ।
ನೀರೇಣ ಸ್ನಾಪಯತ್ಸರ್ವಾನ್ ಕೃತ್ವಾ ಚೋದ್ವರ್ತನಾನ್ಯಪಿ ॥ ೧೩೭ ॥

ತತೋ ಭೂರ್ಜಾದಿಪತ್ರಾಣಿ ವಸ್ತ್ರಾರ್ಥಂ ಸ ಪೃಥಗ್ದದೌ ।
ತತಃ ಪತ್ರೈಃ ಫಲೈಃ ಪುಷ್ಪೈರ್ಲಬ್ಧೈಸ್ತಾನರ್ಚಯತ್ಕ್ರಮಾತ್ ॥ ೧೩೮ ॥

ತತಸ್ಸ ಸ್ಥೂಲವ್ರೀಹೀಣಾಂ ಕೃತ್ವೌದನಮನುತ್ತಮಂ ।
ಸ್ನಾತ್ವಾ ಮಾಧ್ಯಾಹ್ನಿಕಂ ಕೃತ್ವಾ ಪುನಸ್ಸಂಪೂಜ್ಯ ರಾಘವಂ ॥ ೧೩೯ ॥

---

೧೩೫. ಅನಂತರ ಆ ಪ್ರತಿಮೆಯನ್ನು ಬೆನ್ನಿನ ಮೇಲಿಟ್ಟುಕೊಂಡು ನಮ್ರನಾಗಿ ಮೆಲ್ಲ ಮೆಲ್ಲಗೆ ಬರುತ್ತಾ ಆ ಮರಳಿನ ವೇದಿಕೆಯ ಮೇಲೆ ಮತ್ತೆ ಇಡುವನು.

೧೩೬ ಇದೇ ರೀತಿಯಾಗಿ ಸೀತೆ, ಲಕ್ಷ್ಮಣ, ಭರತ, ಶತ್ರುಘ್ನ, ಸುಗ್ರೀವನೇ ಮುಂತಾದವರನ್ನು ಬೇರೆಯಾಗಿ ಕರೆದುಕೊಂಡು ಹೋಗಿ ಅವಶ್ಯಕವಾದಂತಹ ಜಲಬಾಧೆ, ಮಲಬಾಧೆಗಳನ್ನು ಮಾಡಿಸುವನು.

೧೩೭. ಅನಂತರ ಬೆಚ್ಚಗಿರುವ ನೀರಿನಿಂದ ಅವೆಲ್ಲಕ್ಕೂ ತೈಲಾಭ್ಯಂಜನವನ್ನು ಮಾಡಿಸುವನು. ಅನಂತರ ನಲುಗು ಮುಂತಾದ ಅಲಂಕಾರಗಳನ್ನು ಮಾಡುವನು.

೧೩೮. ಅನಂತರ ವಸ್ತ್ರಕ್ಕೋಸ್ಕರ ಬೇರೆಬೇರೆಯಾಗಿ ಭುಜ ಪತ್ರೆಗಳನ್ನು ಕೊಡುವನು. ಅನಂತರ ಪತ್ರೆಗಳಿಂದಲೂ, ಪುಷ್ಪಗಳಿಂದಲೂ ಕೂಡ ತಾನು ಸಿಕ್ಕಿದಷ್ಟನ್ನು ತಂದು ಅವರನ್ನು ಪೂಜಿಸುವನು.

೧೩೯. ಅನಂತರ ದಪ್ಪ ಭತ್ತದ ಅಕ್ಕಿಯಲ್ಲಿ ಉತ್ತಮವಾದ ಅನ್ನವನ್ನು ಮಾಡುವನು. ಮತ್ತೆ ಸ್ನಾನಮಾಡಿ ಮಾಧ್ಯಾಹ್ನಿಕವನ್ನು ಮಾಡಿಕೊಂಡು ಮತ್ತೆ ರಾಮನನ್ನು ಪೂಜಿಸುವನು.

ದತ್ತ್ವಾದನಸ್ಯ ನೈವೇದ್ಯಂ ವೈಶ್ವದೇವಂ ವಿಧಾಯ ಚ ।
ಕಿಂಚಿದ್ಭಿಕ್ಷಾಮತಿಥಯೇ ಮತ್ಸ್ಯನ್ಗಾಮಂಡಜಾದಿಕಾನ್ ॥ ೧೪೦ ॥

ದತ್ವಾ ಪೃಥಕ್ಪೃಥಗ್ವಿಪ್ರಶ್ಚಕ್ರೇ ರಾಮಾಜ್ಞಯಾಶನಂ ।
ತತೋ ರಾಮಂ ಪುನಃ ಪೃಷ್ಠೇ ಸಮಾರೋಹಯದಾದರಾತ್ ॥ ೧೪೧ ॥

ತತಸ್ಸೀತಾಂ ತತಸ್ಸರ್ವಾನ್ ಲಕ್ಷ್ಮಣಾದೀನ್ ಕ್ರಮೇಣ ಹಿ ।
ಪೂಜೋಪಕರಣಂ ಸರ್ವಂ ಪೇಟಿಕಾಯಾಂ ನಿಧಾಯ ಸಃ ॥ ೧೪೨ ॥

ಕೃತ್ವಾ ತಾಂ ಪೇಟಿಕಾಂ ಕಕ್ಷೇ ಜಗನ್ನಾಥಂ ಶನೈರ್ದ್ವಿಜಃ ।
ಸ ವನಾರಾಮೋಪವನಂ ಗತ್ವಾ ರಾಮಂ ವಚೋಽಬ್ರವೀತ್ ॥ ೧೪೩ ॥

ರಾಮ ರಾಜೀವಪತ್ರಾಕ್ಷ ವನಾರಾಮಾದಿಕೌತುಕಂ ।
ಜಾನಕೀಸಹಿತಃ ಪಶ್ಯ ನಾನಾಂಡಜ ಮೃಗಾದಿಕಾನ್ ॥ ೧೪೪ ॥

೧೪೦-೧೪೨. ಅನಂತರ ತಾನು ಮಾಡಿದ ಅನ್ನದ ನೈವೇದ್ಯವನ್ನರ್ಪಿಸುವನು. ವೈಶ್ವದೇವವನ್ನು ಮಾಡುವನು. ಆದರಲ್ಲಿ ಸ್ವಲ್ಪ ಭಿಕ್ಷವನ್ನು ಅತಿಥಿಗೆ ಕೊಡುವನು. ಮತ್ತು ಆ ನದಿಯಲ್ಲಿರುವ ಮೀನುಗಳಿಗೆ ಸ್ವಲ್ಪವನ್ನು ಹಾಕುವನು, ಗೋವಿಗೆ ಸ್ವಲ್ಪವನ್ನು ಕೊಡುವನು. ಕಾಗೆಗೆ ಸ್ವಲ್ಪವನ್ನು ಹಾಕುವನು. ಅನಂತರ ರಾಮನ ಅಪ್ಪಣೆಯನ್ನು ಹೊಂದಿ ತಾನು ಊಟ ಮಾಡುವನು. ಅನಂತರ ರಾಮನನ್ನು ಬೆನ್ನಿನಮೇಲೆ ಒಂದು ಕ್ಷಣಕಾಲ ಹೊತ್ತುಕೊಂಡಿರುವನು. ಹೀಗೆ ಎಲ್ಲರನ್ನೂ ಒಂದೊಂದು ಕ್ಷಣಕಾಲವಿಟ್ಟುಕೊಂಡಿದ್ದು ಆಮೇಲೆ ಆ ಪ್ರತಿಮೆಗಳನ್ನೂ ಪೂಜೆಯ ಪದಾರ್ಥಗಳನ್ನೂ ಪೆಟ್ಟಿಗೆಯಲ್ಲಿಡುವನು.

೧೪೩. ಅನಂತರ ಆ ಬ್ರಾಹ್ಮಣನು ಆ ಪೆಟ್ಟಿಗೆಯನ್ನು ಕಂಕುಳಲ್ಲಿಟ್ಟುಕೊಂಡು ವನಗಳಿಗೂ ಕಾಡಿಗೂ ಹೋಗುತ್ತಾ ಜಗನ್ನಾಥನಾದ ರಾಮನನ್ನು ಕುರಿತು ಇಂತೆಂದು ಹೇಳುವನು.

೧೪೪. ರಾಮನೆ! ರಾಜೀವ ಪತ್ರಾಕ್ಷನೆ! ಈ ವನ ಮತ್ತು ತೋಟ ಇವುಗಳ ಸೊಬಗನ್ನು ನೋಡು. ಇಲ್ಲಿರತಕ್ಕ ಬಗೆಬಗೆಯ ಮೃಗಗಳನ್ನೂ, ಪಕ್ಷಿಗಳನ್ನೂ ಜಾನಕಿಯೊಡನೆ ನೋಡು.

ತತೋ ಯಯೌ ಗ್ರಾಮಹಟ್ಟಂ ದರ್ಶಯತ್ಕೌತುಕಂ ವಿಭುಂ ।
ಸಂಮರ್ದೇ ತಾಡಯಾಮಾಸ ಮಾರ್ಗಾರ್ಥಂ ಯರ್ಷ್ಟಿ ಸ ಯಷ್ಟಿನಾ ॥

ತೇಽಪಿ ತತ್ಕೌತುಕಾವಿಷ್ಟಾ ಜನಾಃ ಕೋಪಂ ನ ಮೇನಿರೇ ।
ಏವಂ ನಾನಾಕೌತುಕಾನಿ ದರ್ಶಯಾಮಾಸ ರಾಘವಂ ॥ ೧೪೬ ॥

ತತಶ್ಶೂನ್ಯೇ ತೃಣಗೃಹೇ ರಾಮಂ ತಾನವರುಹ್ಯ ಚ ।
ಕಾಷ್ಠನಿರ್ಮಿತಪರ್ಯಂಕೇ ಕಾರಯಾಮಾಸ ನಿದ್ರಿತಾನ್ ॥ ೧೪೭ ॥

ತತೋ ವೇಗಾದ್ಧಟ್ಟಮಧ್ಯೇ ಗತ್ವಾ ಸ ಬ್ರಾಹ್ಮಣೋತ್ತಮಃ ।
ಯಾಚ್ಞಯಾ ತಂಡುಲಾನ್ ತೈಲಂ ಘೃತಂ ಶಾಕಂ ಫಲಾನಿ ಚ ॥ ೧೪೮ ॥

ನಾಗವಲ್ಲೀದಳಾದೀನಿ ಕ್ರಮುಕಂ ಕುಂಕುಮಾದಿಕಂ ।
ಲಬ್ಧ್ವಾ ತಾಮ್ರಮಯಂ ಕಿಂಚಿದ್ದ್ರವ್ಯಂ ರಾಮಾಂತಿಕಂ ಯಯೌ ॥

---

೧೪೫. ಅನಂತರ ಗ್ರಾಮಕ್ಕೆ ಹೋಗಿ ಅಂಗಡಿಗೆ ಹೋಗುವನು. ಅಲ್ಲಿನ ಸೊಬಗನ್ನು ಆ ರಾಮನಿಗೆ ತೋರಿಸುವನು. ಅಲ್ಲಿ ಜನಗಳ ಗುಂಪು ಸೇರಿ ಬರುತ್ತಿರಲು ಅವರನ್ನು ದಾರಿ ಬಿಡುವುದಕ್ಕೋಸ್ಕರ ಹೊಡೆಯುತ್ತಿದ್ದನು.

೧೪೬. ಅವರೂ ಕೂಡ ಅವನ ಕೌತುಕವನ್ನು ನೋಡುತ್ತ ಅವನ ಮೇಲೆ ಕೋಪವನ್ನು ಮಾಡುತ್ತಿರಲಿಲ್ಲ. ಈ ರೀತಿಯಾಗಿ ಅವನು ರಾಮನಿಗೆನಾನಾ ಕೌತುಕಗಳನ್ನು ತೋರಿಸುವನು.

೧೪೭. ಅನಂತರ ಅವನು ಶೂನ್ಯವಾದ ಒಂದು ಹುಲ್ಲು ಮನೆಗೆ ಹೋಗುವನು. ಅಲ್ಲಿ ರಾಮನನ್ನೂ ಅವನ ಅನುಯಾಯಿಗಳನ್ನೂ ಕೆಳಗೆ ಇಳಿಸುವನು. ಮರದಿಂದ ಮಾಡಿರುವ ಮಂಚದ ಮೇಲೆ ಅಲ್ಲಿ ಅವರನ್ನು ಮಲಗಿಸುವನು.

೧೪೮-೧೪೯. ಆ ಬ್ರಾಹ್ಮಣನು ರಾಮನು ನಿದ್ದೆ ಮಾಡುವ ಮಧ್ಯದಲ್ಲಿ ಗ್ರಾಮಕ್ಕೆ ಅಂಗಡಿಗೆ ಹೋಗುವನು. ಅಲ್ಲಿ ಯಾಚನೆ ಮಾಡಿಕೊಂಡು ಅಕ್ಕಿ, ಎಣ್ಣೆ, ತುಪ್ಪ, ಹಣ್ಣು, ಕಾಯಿಪಲ್ಯಗಳು, ವೀಳೆಯದೆಲೆ, ಅಡಿಕೆ, ಕುಂಕುಮಗಳನ್ನೂ, ತಾಮ್ರದ ಕಾಸುಗಳನ್ನೂ ಸಂಪಾದಿಸಿಕೊಂಡು ಮತ್ತೆ ರಾಮನ ಬಳಿಗೆ ಬರುವನು.

ತದ್ಗ್ರಾಮವಾಸಿನಸ್ಸರ್ವೇ ಯೇ ಯೇ ಹಟ್ಟೇ ಸ್ಥಿತಾ ಜನಾಃ ।
ಸ್ವಸ್ವನಾನಾವ್ಯವಸಾಯುತತ್ಪರಾಸ್ತೇ ದ್ವಿಜೋತ್ತಮಂ ॥ ೧೫೦ ॥

ಶ್ರೀರಾಮನಿಷ್ಠಂ ತಂ ದೃಷ್ಟ್ವಾ ದದುಸ್ತದ್ಯಾಚಿತಂ ಮುದಾ ॥
ವಿಪ್ರಶ್ಶೂನ್ಯಗೃಹೇ ರಾಮಂ ರಾಮಾಗ್ರೇ ದೀಪಯುತ್ತಮಂ ॥ ೧೫೧ ॥

ಪ್ರಜ್ವಾಲ್ಯಾರಾರ್ತಿಕಂ ಕೃತ್ವಾ ಗಂಧಾದ್ಯೈಃ ಪರಿಪೂಜ್ಯ ಚ ।
ವೀಜಯಾಮಾಸ ರಾಮಾರ್ದ್ರೇ ಪಲ್ಲವೇನ ಮುದಾನ್ವಿತಃ ॥ ೧೫೨ ॥

ತತಃ ಸ್ತುತ್ವಾ ಮುಹುರ್ಜಪ್ತ್ವಾ ಕೃತ್ವಾ ಚಾಪಿ ಪ್ರದಕ್ಷಿಣಾಃ ।
ಚಕಾರ ಕೀರ್ತನಂ ವಕ್ಷ್ಯಮಾಣೈಸ್ಸನ್ಮನುಭಿರ್ದ್ವಿಜಃ ॥ ೧೫೩ ॥

ತತಸ್ತಾನ್ಯಾಚಿತಾನ್ಯೇವ ವಸ್ತೂನಿ ಮಿಶ್ರಿತಾನಿ ಹಿ ।
ಪೃಥಕ್ಕೃತ್ವಾ ತು ಸರ್ವೇಷಾಂ ತ್ರೀನ್ ಭಾಗಾಂಶ್ಚ ಚಕಾರ ಸಃ ॥ ೧೫೪ ॥

೧೫೦-೧೫೧. ಆ ಗ್ರಾಮದ ಜನರೂ ಅಂಗಡಿಯಲ್ಲಿದ್ದವರೂ ವ್ಯವಸಾಯಗಾರರಾಗಿದ್ದವರೂ ಕೂಡ ಈ ಬ್ರಾಹ್ಮಣನು ಶ್ರೀರಾಮ ಪೂಜೆಯಲ್ಲಿ ನಿಷ್ಠನಾಗಿರುವುದನ್ನು ನೋಡಿ ಅವನು ಯಾಚಿಸುವುದೆಲ್ಲವನ್ನೂ ಸಂತೋಷದಿಂದ ಕೊಡುತ್ತಿದ್ದರು. ಈ ಬ್ರಾಹ್ಮಣನು ಆ ಶೂನ್ಯವಾದ ಮನೆಗೆ ಹೋಗಿ ಆ ರಾಮನ ಮುಂದೆ ದೀಪವನ್ನು ಹತ್ತಿಸಿ ಇಡುತ್ತಿದ್ದನು.

೧೫೨-೧೫೩. ಆರತಿಯನ್ನು ಎತ್ತಿ, ಗಂಧಾದಿಗಳಿಂದ ಪೂಜಿಸಿ ಅನಂತರ ಚಿಗುರುಗಳನ್ನು ತೆಗೆದುಕೊಂಡು ಅವುಗಳಿಂದ ಬೀಸುತ್ತಿದ್ದನು. ಅನಂತರ ಸ್ತುತಿಸಿ, ರಾಮಾಷ್ಟಾಕ್ಷರಿಯನ್ನು ಜಪಿಸಿ ಪ್ರದಕ್ಷಿಣೆಯನ್ನು ಮಾಡಿ ಮುಂದೆ ಹೇಳುವ ಮಂತ್ರಗಳಿಂದ ಕೀರ್ತನೆ ಮಾಡುತ್ತಿದ್ದನು.

೧೫೪-೧೫೫. ಅನಂತರ ತಾನು ಯಾಚಿಸಿ ತಂದ ವಸ್ತುಗಳನ್ನು ಮೂರು ಪಾಲಾಗಿ ಮಾಡುತ್ತಿದ್ದನು. ಅವುಗಳಲ್ಲಿ ಎರಡು ಭಾಗಗಳನ್ನು ತನ್ನ ಹತ್ತಿರ

ದ್ವೌ ಭಾಗೌ ಸ ಸ್ವನಿಕಟೇ ಸ್ಥಾಪ್ಯೈಕಂ ಭಾಗಮುತ್ತಮಂ ।
ಮಿತ್ರಗೇಹೇ ನ್ಯಾಸಭೂತಂ ನವಮ್ಯರ್ಥಂ ಚಕಾರ ಸಃ ॥ ೧೫೫ ॥

ತತಃ ಸ್ವಯಂ ದ್ವಾರಮಧ್ಯೇ ಚಕಾರ ಶಯನಂ ದ್ವಿಜಃ ।
ಪುನಃ ಪ್ರಭಾತೇ ಚೋತ್ಥಾಯಾಚಮ್ಯ ಗೀತಾದಿಭಿಃ ಪ್ರಭುಂ ॥ ೧೫೬ ॥

ತಾಲವಾದ್ಯೈಃ ಪ್ರಬೋಧ್ಯಾಥ ತಾನ್ಪೃಷ್ಠೇ ಸ್ಥಾಪ್ಯ ಪೂರ್ವವತ್ ।
ನದೀತೀರಂ ಯಯೌ ವಿಪ್ರಃ ಪೂಜಯಾಮಾಸ ಪೂರ್ವವತ್ ॥ ೧೫೭ ॥

ಏವಂ ನಿತ್ಯಂ ಪೂಜನಂ ಚ ಚಕಾರಾದೃತಮಾನಸಃ ।
ನವಮ್ಯಾಂ ಚ ವಿಶೇಷೇಣ ಪೂಜಯಿತ್ವಾಥ ರಾಘವಂ ॥ ೧೫೮ ॥

ಸ್ವಯಮುಪೋಷಣಂ ಕೃತ್ವಾ ಸ್ವಯಂ ಚಕ್ರೇ ಸುಕೀರ್ತನಂ ।
ರಾತ್ರೌ ಜಾಗರಣಂ ಚಾಪಿ ರಾಘವಂ ಪೂಜ್ಯ ವೈ ಪುನಃ ॥ ೧೫೯ ॥

ಇಟ್ಟುಕೊಂಡು ಮತ್ತೊಂದು ಭಾಗವನ್ನು ಮಿತ್ರನ ಬಳಿ ಉಗ್ರಾಣದ ಮನೆಯಲ್ಲಿ ನವಮಿಯ ದಿನಕ್ಕೋಸ್ಕರ ಕೂಡಿಡುತ್ತಿದ್ದನು.

೧೫೬-೧೫೭. ಆಮೇಲೆ ತಾನು ಬಾಗಿಲಿನ ಮಧ್ಯದಲ್ಲಿ ಮಲಗುತ್ತಿದ್ದನು. ಮತ್ತೆ ಬೆಳಗ್ಗೆ ಎದ್ದು ಆಚಮನ ಮಾಡಿ ಗೀತಗಳನ್ನು ಹೇಳುತ್ತಾ ತಾಲವಾದ್ಯವನ್ನು ಬಾರಿಸುತ್ತ ಆ ಸ್ವಾಮಿಯನ್ನು ಎಚ್ಚರಿಸಿ ಮೊದಲಿನಂತೆ ಹೆಗಲಿನ ಮೇಲಿಟ್ಟುಕೊಂಡು ನದಿಯ ತೀರಕ್ಕೆ ಹೋಗುತ್ತಿದ್ದನು. ಅಲ್ಲಿ ಹಿಂದೆ ಹೇಳಿದಂತೆಯೇ ಮತ್ತೆ ಪೂಜಿಸುತ್ತಿದ್ದನು.

೧೫೮. ಅವನು ಈ ರೀತಿಯಾಗಿ ನಿತ್ಯವೂ ದೃಢವಾದ ಮನಸ್ಸಿನಿಂದ ಆ ಶ್ರೀರಾಮನನ್ನು ಪೂಜಿಸುತ್ತಿದ್ದನು. ನವಮಿಯ ದಿವಸ ವಿಶೇಷ ಪೂಜೆಯನ್ನು ಮಾಡುತ್ತಿದ್ದನು.

೧೫೯-೧೬೦. ಆದಿನ ತಾನು ಉಪವಾಸವನ್ನು ಮಾಡಿ ಕೀರ್ತನೆ ಮಾಡುತ್ತಿದ್ದನು. ಮತ್ತೆ ರಾತ್ರಿಯಲ್ಲಿ ಪೂಜಿಸಿ ಜಾಗರಣೆಯನ್ನು ಮಾಡುತ್ತಿದ್ದನು

ಚಕಾರ ಕೀರ್ತನೈಶ್ಚಾಥ ನರ್ತನಾದ್ಯೈಃ ಸ್ವಯಂಕೃತೈಃ ।
ತತಃ ಪ್ರಭಾತೇ ಶ್ರೀರಾಮಂ ದಶಮ್ಯಾಂ ಪರಿಪೂಜ್ಯ ಚ ॥ ೧೬೦ ॥

ಪ್ರತಿಪದ್ದಿನಮಾರಭ್ಯ ನವರಾತ್ರೇಥ ಯತ್ಕೃತಂ ।
ಆನಂದರಾಮಚರಿತಪಾರಾಯಣಮನುತ್ತಮಂ ॥ ೧೬೧ ॥

ತತ್ಸಮಾಪ್ಯ ಪೂಜಯಿತ್ವಾ ಪುಸ್ತಕಂ ಬ್ರಾಹ್ಮಣಾನ್ನವ ।
ನಿಮಂತ್ರಿತಾನ್ಸಮಾಹೂಯ ತೇಷ್ವೇವೈಕಂ ಸಪತ್ನಿಕಂ ॥ ೧೬೨ ॥

ದ್ವಿಜಮಾಕಾರಯಾಮಾಸ ತತಸ್ಸಂಚಿತತಂಡುಲಾಃ ।
ಮಿತ್ರಗೇಹೇ ನ್ಯಾಸಭೂತಾಸ್ತೇಷಾಂ ಕೃತ್ವೌದನಂ ಶುಭಂ ॥ ೧೬೩ ॥

ತಥಾ ಸಂಚಿತಶಾಕಾದಿ ತಥಾ ಲಬ್ಧಾನಿ ಯಾನಿ ಸಃ ।
ತಾನಿ ಸರ್ವಾಣಿ ಸಂಸ್ಕೃತ್ಯ ವರಾನ್ನಾದೀನಿ ಚಾಕರೋತ್ ॥ ೧೬೪ ॥

ಆಗ ತಾನೇ ಕೀರ್ತನೆಗಳನ್ನು ಹಾಡುತ್ತ ನರ್ತನವನ್ನು ಮಾಡುತ್ತಿದ್ದನು. ಮತ್ತೆ ದಶಮಿಯ ದಿನ ಪೂಜೆ ಮಾಡುವನು.

೧೬೧-೧೬೩. ಅನಂತರ ಪಾಡ್ಯದಿಂದ ಆರಂಭಿಸಿ ತಾನು ಪಾರಾಯಣ ಮಾಡುತ್ತಿದ್ದ ಆನಂದ ರಾಮಾಯಣದ ಪಾರಾಯಣವನ್ನು ಪೂರ್ತಿ ಮಾಡುವನು. ಪುಸ್ತಕಕ್ಕೂ ಪೂಜಿಸುವನು. ಒಂಭತ್ತು ಜನ ಬ್ರಾಹ್ಮಣರಿಗೆ ಹೇಳಿ ಕರೆದು ಅವರಲ್ಲಿಯೇ ಒಬ್ಬನಿಗೆ ಹೆಂಡತಿಯೊಡನೆ ಬರಬೇಕೆಂದು ಹೇಳುತ್ತಿದ್ದನು. ಅನಂತರ ತಾನು ಸಂಪಾದಿಸಿ ಸ್ನೇಹಿತನ ಮನೆಯಲ್ಲಿಟ್ಟಿದ್ದ ಅಕ್ಕಿಯನ್ನು ತರುತ್ತಿದ್ದನು.

೧೬೪. ಆ ಅಕ್ಕಿಯ ಅನ್ನವನ್ನು ಮಾಡಿ ಅಂತೆಯೇ ತಾನು ತಂದಿದ್ದ ಕಾಯಿಪಲ್ಯಗಳನ್ನು ಅದರದರ ಅನುಗುಣವಾಗಿ ಬೇಯಿಸಿ ಪಲ್ಯ, ಹುಳಿ ಮುಂತಾದುವನ್ನು ಮಾಡುತ್ತಿದ್ದನು. ಅವೆಲ್ಲವನ್ನೂ ಬಹು ರುಚಿಯಾಗಿರುವಂತೆ ಪಾಕ ಮಾಡುತ್ತಿದ್ದನು.

ವಾಲುಕಾವೇದಿಕಾಯಾಂ ವೈ ಮಧ್ಯೇ ಪತ್ನೀಯುತಂ ದ್ವಿಜಂ ।
ಅಷ್ಟಕೋಣೇಷು ವಿಪ್ರಾಂಸ್ತಾನಷ್ಟಸಂವೇಶ್ಯ ವೈ ಕ್ರಮಾತ್ ॥ ೧೬೫ ॥

ಷೋಡಶೈರುಪಚಾರೈಸ್ತಾನ್ ಪೂಜಯಾಮಾಸ ಭಕ್ತಿತಃ ।
ರಂಭಾದಳೇಷು ಚ ತತೋ ವಿಸ್ತೀರ್ಣೇಷು ದ್ವಿಜೋತ್ತಮಃ ॥ ೧೬೬ ॥

ಚಕಾರ ತೈಃ ಕೃತೈರನ್ನೈಸ್ಸ ಮುದಾ ಪರಿವೇಷಣಂ ।
ತತಸ್ತೇ ಭೋಜನಂ ಚಕ್ರುಸ್ತದ್ಭಕ್ತ್ಯಾಽತಿಮುದಾನ್ವಿತಾಃ ॥ ೧೬೭ ॥

ತತೋ ದತ್ವಾ ಸುತಾಂಬೂಲಂ ದಕ್ಷಿಣಾಂ ತಾನ್ ಪ್ರಣಮ್ಯ ಚ ।
ವಿಸರ್ಜಯಾಮಾಸ ವಿಪ್ರಾಂಸ್ತಾಂಸ್ತತಶ್ಚಕ್ರೇಽಶನಂ ದ್ವಿಜಃ ॥ ೧೬೮ ॥

ಏವಂ ವಿಪ್ರೋ ಮಾಸಿ ಮಾಸಿ ನವಾಯತನಪೂಜನಂ ।
ನವಮ್ಯಾಃ ಪಾರಣಾಯಾಶ್ಚ ದಿವಸೇ ದಶಮೀದಿನೇ ॥ ೧೬೯ ॥

---

೧೬೫. ಆ ನದಿಯ ಮರಳಿನ ಮೇಲೆ ಮಾಡಿರುವ ಜಗಲಿಗಳ ಮಧ್ಯದ ಜಗುಲಿಯಲ್ಲಿ ದಂಪತಿಯಾಗಿದ್ದ ಒಬ್ಬ ಬ್ರಾಹ್ಮಣನನ್ನು, ರಾಮನ ಮತ್ತು ಸೀತೆಯ ಸ್ಥಾನದಲ್ಲಿ ಕೂರಿಸುತ್ತಿದ್ದನು.

೧೬೬-೧೬೭. ಷೋಡಷೋಪಚಾರಗಳಿಂದ ಅವರನ್ನು ಪೂಜಿಸುತ್ತಿದ್ದನು. ಅನಂತರ ಬಾಳೆಯ ಎಲೆಗಳನ್ನು ತಂದು ಅವನ್ನು ಅವರ ಮುಂದೆ ಹಾಕಿ ಅದರಲ್ಲಿ ತಾನು ಮಾಡಿದ ಅಡಿಗೆಯನ್ನು ಬಡಿಸುತ್ತಿದ್ದನು. ಆ ಬ್ರಾಹ್ಮಣರೆಲ್ಲರೂ ಬಹು ಸಂತೋಷದಿಂದ ಊಟ ಮಾಡುತ್ತಿದ್ದರು.

೧೬೮. ಅವರಿಗೆ ಚೆನ್ನಾಗಿ ಭೋಜನ ಮಾಡಿಸಿ ಅನಂತರ ತಾಂಬೂಲ ದಕ್ಷಿಣೆಗಳನ್ನು ಕೊಟ್ಟು ನಮಸ್ಕರಿಸಿ ಅವರನ್ನು ಕಳುಹಿಸಿ ಅನಂತರ ತಾನು ಭೋಜನ ಮಾಡುತ್ತಿದ್ದನು.

೧೬೯-೧೭೦. ಈ ರೀತಿಯಾಗಿ ಆ ಬ್ರಾಹ್ಮಣನು ಮಾಸ ಮಾಸದಲ್ಲಿಯೂ ನವಾಯತನ ಪೂಜೆಯನ್ನು ಮಾಡುತ್ತ ನವಮಿಯ ದಿವಸ ಉಪವಾಸವಿದ್ದು ದಶಮಿಯ ದಿನ ತಾನು ಯಾಚಿಸಿ ತಂದ ಪದಾರ್ಥಗಳಿಂದ ಒಂಭತ್ತು ಜನ

ಚಕಾರ ನವವಿಪ್ರೇಷು ಯಾಚ್ನಾಂ ಕೃತ್ವಾಪಿ ಭಕ್ತಿತಃ ।
ಏವಂ ಗತಾನಿ ವರ್ಷಾಣಿ ನವ ತಸ್ಯ ದ್ವಿಜನ್ಮನಃ ॥ ೧೭೦ ॥

ಏಕದಾ ಶ್ರಾವಣೇ ಮಾಸಿ ತದ್ಗ್ರಾಮೇ ಸೇನಯಾ ನೃಪಃ ।
ಕಶ್ಚಿದ್ಯಯೌ ತದಾ ವಿಪ್ರಃ ಸ್ವಸ್ಥಲೇ ನಿಶಿ ನಿದ್ರಿತಃ ॥ ೧೭೧ ॥

ಏತಸ್ಮಿನ್ನಂತರೇ ವೃಷ್ಟಿಪೀಡಿತಾ ನೃಪಸೇವಕಾಃ ।
ಗ್ರಾಮೇ ಗೇಹಾನಿ ವಿವಿಶುಃ ಶೂನ್ಯಗೇಹಂ ಯಯುರ್ದಶ ॥ ೧೭೨ ॥

ಅಶ್ವಾರೂಢಾಸ್ಸಹಸ್ರಾಸ್ತೇ ದ್ವಾರಮಧ್ಯೇ ದ್ವಿಜೋತ್ತಮಂ ।
ದೃಷ್ಟ್ವಾ ವಿನಿದ್ರಿತಂ ಪ್ರಾಹುರ್ದ್ವಿಜೋತ್ತಿಷ್ಠ ಜವೇನ ಹಿ ॥ ೧೭೩ ॥

ಮಾರ್ಗಂ ದೇಹಿ ವಯಂ ವೃಷ್ಟ್ಯಾ ಪೀಡಿತಾ ಸ್ಸುಚಿರಂ ಬಹಿಃ ।
ಶೂನ್ಯಗೇಹೇತ್ರ ಸ್ಥಾಸ್ಯಾಮಃ ಸುಖಂ ಸಾಶ್ವಾಸ್ಸಸೇವಕಾಃ ॥ ೧೭೪ ॥

ಬ್ರಾಹ್ಮಣರನ್ನು ಕರೆದು ನವಾಯತನ ಪೂಜೆಯನ್ನು ಮಾಡಿ ಅವರನ್ನು ಊಟ ಮಾಡಿಸಿ ತಾನೂ ಊಟ ಮಾಡುತ್ತಿದ್ದನು. ಈ ರೀತಿಯಾಗಿ ಆ ಬ್ರಾಹ್ಮಣನು ಒಂಭತ್ತು ವರ್ಷಗಳವರೆಗೂ ಮಾಡಿದನು.

೧೭೧. ಹೀಗಿರಲು ಒಂದು ಸಾರಿ ಶ್ರಾವಣ ಮಾಸದಲ್ಲಿ ಆ ಊರಿಗೆ ಸೇನೆಯೊಡನೆ ಒಬ್ಬ ರಾಜನು ಬಂದನು. ಆಗ ಈ ಬ್ರಾಹ್ಮಣನು ತಾನು ವಾಸಿಸುತ್ತಿದ್ದ ಹುಲ್ಲಿನ ಮನೆಯಲ್ಲಿಯೇ ನಿದ್ರೆ ಮಾಡುತ್ತಿದ್ದನು.

೧೭೨. ಆಗ ಬಹುವಾದ ಮಳೆ ಬಂದಿತು. ಆ ರಾಜ ಸೇವಕರು ಮಳೆಯಲ್ಲಿ ನೆನೆದು ಆ ಗ್ರಾಮದಲ್ಲಿರುವ ಮನೆಗಳೊಳಕ್ಕೆ ಹೋದರು. ಈತನು ಮಲಗಿದ್ದ ಹಾಳು ಮನೆಗೂ ಹತ್ತು ಜನರು ಬಂದರು.

೧೭೩. ಕುದುರೆಯ ಮೇಲೆ ಕುಳಿತು ಸಾವಿರಾರು ಜನರು ಹೊರಗಡೆ ನಿಂತಿದ್ದರು. ಆಗ ಒಳಗೆ ಬಂದವರು ಬಾಗಿಲಿನ ಮಧ್ಯದಲ್ಲಿ ಮಲಗಿರುವ ಈ ಬ್ರಾಹ್ಮಣನನ್ನು ನೋಡಿ ಎಲೈ ಬ್ರಾಹ್ಮಣನೇ ! ಬೇಗ ಏಳು, ಬೇಗ ಏಳು.

೧೭೪. ಎಲೈ ಬ್ರಾಹ್ಮಣನೇ! ನಾವು ಹೊರಗಿದ್ದುಕೊಂಡು ಬಹಳ ಹೊತ್ತಿನಿಂದ ಮಳೆಯಲ್ಲಿ ನೆನೆಯುತ್ತಿದ್ದೇವೆ ಜಾಗವನ್ನು ಬಿಡು. ಈ ಪಾಳು ಮನೆಯಲ್ಲಿ ಕುದುರೆಯನ್ನು ಕಟ್ಟಿಕೊಂಡು ನಾವೂ, ನಮ್ಮ ಆಳುಗಳೂ ಸುಖವಾಗಿರಬೇಕು ಎಂದರು.

ತತ್ತೇಷಾಂ ವಚನಂ ಶ್ರುತ್ವಾ ಸಂಭ್ರಮೇಣ ದ್ವಿಜೋಽಬ್ರವೀತ್ ।
ರಾಮಚಂದ್ರಸ್ಸೀತಯಾತ್ರ ನಿದ್ರಿತೋಽಸ್ತಿ ಸ್ವಬಂಧುಭಿಃ ॥ ೧೭೫ ॥

ನ ವರ್ತತೇಽತ್ರ ಯುಷ್ಮಾಕಂ ಸ್ಥಲಂ ಸತ್ಯಂ ವಚೋ ಮಮ ।
ಗಚ್ಛಧ್ವಂ ನಗರೇ ನಾನಾಸ್ಥಲಾನ್ಯನ್ಯಾನಿ ಸಂತಿ ಹಿ ॥ ೧೭೬ ॥

ತತ್ತಸ್ಯ ವಚನಂ ಶ್ರುತ್ವಾ ರಾಜದೂತಾಃ ಪುನರ್ದ್ವಿಜಂ ।
ಪ್ರೋಚುಸ್ತೇ ಹ್ಯಸ್ತಿ ಶ್ರೀರಾಮಸ್ಸೋಽಪಿ ನಿರ್ಯಾತು ವೈ ಬಹಿಃ ॥ ೧೭೭ ॥

ಸೀತಯಾ ಬಂಧುಭಿರ್ಯುಕ್ತಃ ಸ್ಥಲಂ ನೋ ದೇಹಿ ಭೋ ದ್ವಿಜ ।
ಪುನರಾಹ ದ್ವಿಜಸ್ತಾನ್ ಸ ಕಥಂ ರಾಮಂ ವಿನಿದ್ರಿತಂ ॥ ೧೭೮ ॥

ಪ್ರಬುದ್ಧಂ ವೈ ಕರೋಮ್ಯದ್ಯ ನಿಶಾಯಾಂ ರಾಜಸೇವಕಾಃ ।
ಯುಷ್ಮಾಕಂ ಪ್ರಾರ್ಥನಾತ್ವದ್ಯ ಕ್ರಿಯತೇ ವೈ ಮಯಾ ಮುಹುಃ ॥

---

೧೭೫ ಅವರ ಈ ಮಾತನ್ನು ಕೇಳಿ ಆ ಬ್ರಾಹ್ಮಣನು ಅವಸರದಿಂದ ಇಂತೆಂದನು. ಎಲೈ ಸೇನೆಯವರಿರಾ! ರಾಮಚಂದ್ರನೂ, ಸೀತೆಯೊಡನೆಯೂ, ಅವನ ತಮ್ಮಂದಿರೊಡನೆಯೂ ಇಲ್ಲಿ ಸುಖವಾಗಿ ನಿದ್ರಿಸುತ್ತಾ ಇರುವರು.

೨೭೬. ಇಲ್ಲಿ ನಿಮಗೆ ಸ್ಥಳವು ದೊರಕುವುದಿಲ್ಲ. ಇಲ್ಲವೂ ಇಲ್ಲ. ನಾನು ಸುಳ್ಳು ಹೇಳುವುದಿಲ್ಲ. ಸತ್ಯವನ್ನೇ ಹೇಳುತ್ತೇನೆ, ಹೋಗಿರಿ. ಊರಿನಲ್ಲಿ ಅಲ್ಲಲ್ಲೇ ಅನೇಕ ಬಗೆಯ ಜಾಗಗಳು ನಿಲ್ಲಲೂ, ಕುಳಿತುಕೊಳ್ಳಲೂ, ಕುದುರೆಯನ್ನು ಕಟ್ಟಲೂ ಸಿಕ್ಕುತ್ತವೆ ಎಂದನು.

೧೭೭-೧೭೯. ಆ ಬ್ರಾಹ್ಮಣನ ಮಾತನ್ನು ಕೇಳಿ ಆ ರಾಜ ದೂತರು ಮತ್ತೆ ಆ ಬ್ರಾಹ್ಮಣನನ್ನು ಕುರಿತು ಎಲೈ ಬ್ರಾಹ್ಮಣನೇ! ಶ್ರೀ ರಾಮನು ಇಲ್ಲಿದ್ದರೆ ಅವನೂ ಕೂಡ ಹೊರಗೆ ಹೋಗಲಿ. ಸೀತೆಯೂ, ತಮ್ಮಂದಿರೂ, ಅವನೊಡನೆ ಹೊರಗೆ ಹೋಗಲಿ. ನಮಗೆ ಸ್ಥಳವನ್ನು ಕೊಡು ಎಂದರು. ಅನಂತರ ಆ ಬ್ರಾಹ್ಮಣನು ಅವರನ್ನು ಕುರಿತು ಎಲೈ ರಾಜ ಸೇವಕರಿರಾ! ರಾಮನು ರಾತ್ರಿಯಲ್ಲಿ ಮಲಗಿ ನಿದ್ರೆ ಹೋಗುತ್ತಾ ಇರುವನು. ಅವನನ್ನು ಈ ರಾತ್ರಿಯಲ್ಲಿ ಹೇಗೆ ತಾನೇ ಎಬ್ಬಿಸಲಿ? ಆದ್ದರಿಂದ ನಿಮ್ಮನ್ನು ನಾನು ಇಷ್ಟನ್ನು ಕೇಳಿಕೊಳ್ಳುತ್ತೇನೆ.

ಪ್ರಣಮ್ಯ ವಿಧಿವದ್ಯೂಯಂ ಗಚ್ಛಧ್ವಂ ವೈ ಸ್ಥಲಾಂತರಂ ।
ತತಸ್ತನ್ನಿಗ್ರಹಂ ದೃಷ್ಟ್ವಾ ತೇತಿವೃಷ್ಟ್ಯಾಪ್ರಪೀಡಿತಾಃ ॥ ೧೮೦ ॥

ತಂ ವಿಪ್ರಂ ತಾಡಯಾಂಚಕ್ರುಸ್ತದಾ ಪ್ರಾಹ ದ್ವಿಜೋತ್ತಮಃ ।
ರಾಮಂ ಬಹಿಃ ಕರೋಮ್ಯದ್ಯ ತಿಷ್ಠಧ್ವಂ ರಾಜಸೇವಕಾಃ ॥ ೧೮೧ ॥

ಇತ್ಯುಕ್ತ್ವಾಚಮ್ಯ ಶ್ರೀರಾಮಂ ಭೂಸುರೋ ವಾಕ್ಯಮಬ್ರವೀತ್ ।
ರಾಮೋತ್ತಿಷ್ಠ ಬಹಿರ್ದುಷ್ಟಾಸ್ತಿಷ್ಠಂತಾಸ್ಸಂತ್ಯಶ್ವಸಂಸ್ಥಿತಾಃ ॥ ೧೮೨ ॥

ತೇಷಾಂ ವಸ್ತುಂ ಸ್ಥಲಂ ದೇಹಿ ವಯಂ ಯಾಮೋ ಬಹಿರ್ನಿಶಿ ।
ಇತ್ಯುಕ್ತ್ವಾ ನಿಜಪೃಷ್ಠೇ ತಾನಾರೋಹಯುತ್ಸ ಪೂರ್ವವತ್ ॥ ೧೮೩ ॥

---

೧೮೦. ನೀವು ಈ ಶ್ರೀ ರಾಮನಿಗೆ ಅನೇಕ ಬಾರಿ ನಮಸ್ಕರಿಸಿ ಬೇರೆಯ ಸ್ಥಳಕ್ಕೆ ಹೋಗಿರಿ ಎಂದನು. ಎಷ್ಟು ಹೇಳಿದರೂ ಆ ಬ್ರಾಹ್ಮಣನು ಒಪ್ಪಲಿಲ್ಲ. ಈಸೈನ್ಯದವರಾದರೋ ಬಹವಾಗಿ ಮಳೆಯಲ್ಲಿ ನೆನೆದಿದ್ದರು.

೧೮೧. ಆದ್ದರಿಂದ ಅವರಿಗೆ ಕೋಪ ಬಂದು ಆ ಬ್ರಾಹ್ಮಣನನ್ನು ಬಹುವಾಗಿ ಹೊಡೆದರು. ಆಗ ಆ ಬ್ರಾಹ್ಮಣನು ಎಲೈ ರಾಜ ಸೇವಕರಿರಾ! ಈಗಲೇ ರಾಮನನ್ನು ಹೊರಕ್ಕೆ ಕರೆದುಕೊಂಡು ಹೋಗುತ್ತೇನೆ. ಸ್ವಲ್ಪ ನಿಲ್ಲಿರಿ ಎಂದನು.

೧೮೨. ಹೀಗೆಂದು ಹೇಳಿ ಆಚಮನ ಮಾಡಿ ರಾಮನನ್ನು ಕುರಿತು ಆ ಬ್ರಾಹ್ಮಣನು ಇಂತೆಂದನು. ಎಲೈ ರಾಮನೆ! ಮೇಲಕ್ಕೇಳು. ಹೊರಗಡೆಯಲ್ಲಿ ಕುದುರೆಯ ಮೇಲೆ ಕುಳಿತುಕೊಂಡು ದುಷ್ಟರು ಬಂದು ನಿಂತಿದ್ದಾರೆ.

೧೮೩. ಅವರು ಇರುವುದಕ್ಕೆ ಸ್ಥಳವನ್ನು ಕೊಡು. ನಾವು ಈ ರಾತ್ರಿಯಲ್ಲಿಯೇ ಹೊರಕ್ಕೆ ಹೋಗೋಣ. ಹೀಗೆಂದು ಹೇಳಿ ಅವರನ್ನು ತನ್ನ ಹೆಗಲ ಮೇಲೆ ಹಿಂದಿನಂತೆಯೇ ಹೊತ್ತುಕೊಂಡನು.

ತತಃ ಕೃತ್ವಾ ಮಹಾಕ್ರೋಶಂ ವಸ್ತ್ರಾದೀನಾಂ ದ್ವಿಜೋತ್ತಮಃ ।
ಧೃತ್ವಾ ಕಕ್ಷೇ ತೋಯಕುಂಭಂ ಧೃತ್ವಾ ರಾಮಂ ಕರೇಣ ಸಃ ॥ ೧೮೪ ॥

ಯಷ್ಟಿಂ ಧೃತ್ವಾ ಸವ್ಯಹಸ್ತೇ ಶನೈರ್ದ್ವಾರಾದ್ಬಹಿರ್ಯಯೌ ।
ತೇ ದ್ವಿಜಂ ತಾದೃಶಂ ದೃಷ್ಟ್ವಾ ಭ್ರಾಂತಂ ತಂ ಮೇನಿರೇ ಖಲಾಃ ॥ ೧೮೫ ॥

ತತೋ ದೃಷ್ಟ್ವಾತಿವೃಷ್ಟಿಂ ಸ ಗೇಹಾಗ್ರಾಧೋಬಹಿರ್ದ್ವಿಜಃ ।
ನಮ್ರೀಭೂತಸ್ತದಾ ತಸ್ಥೌ ಗೇಹೇ ಸಂವಿವಿಶುಃ ಖಲಾಃ ॥ ೧೮೬ ॥

ತತೋತಿಶ್ರಮಿತೋ ವಿಪ್ರಶ್ಚಿಂತಯಾಮಾಸ ಚೇತಸಿ ।
ಪುರಾಣೇ ವಾಯುಪುತ್ರಸ್ಯ ಮಯಾ ಸಾರಂ ಶ್ರುತಂ ಬಹು ॥ ೧೮೭ ॥

ತತ್ಸರ್ವಂ ತು ಮೃಷಾತ್ವದ್ಯ ಕಿಮಸ್ತ್ಯತ್ರ ಪ್ರಯೋಜನಂ ।
ಇತಿ ನಿಶ್ಚಿತ್ಯ ವಿಪ್ರಸ್ಸ ಕ್ರೋಧೇನ ಮಹತಾವೃತಃ ॥ ೧೮೮ ॥

೧೮೪-೧೮೫. ಅನಂತರ ಆ ಬಟ್ಟೆಗಳ ಪಟ್ಟಿಗೆಯನ್ನೂ, ನೀರಿನ ಪಾತ್ರೆಯನ್ನೂ ಕಂಕುಳಲ್ಲಿ ಇರುಕಿಕೊಂಡು ಬಲಗೈಯ್ಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಎಡಗೈಯ್ಯಲ್ಲಿ ರಾಮನ ಮೂರ್ತಿಯನ್ನು ಹಿಡಿದುಕೊಂಡು ಬಹುವಾಗಿ ಕೋಪ ಮಾಡಿಕೊಂಡು ಹೊರಗೆ ಹೊರಟನು. ಅವರೆಲ್ಲರೂ ಆ ಬ್ರಾಹ್ಮಣನನ್ನು ನೋಡಿ ಇವನು ಹುಚ್ಚನೆಂದು ತಿಳಿದುಕೊಂಡರು.

೧೮೬. ಹೊರಗೆ ಬಹುವಾಗಿ ಮಳೆಯು ಸುರಿಯುತ್ತಿದ್ದುದನ್ನು ನೋಡಿ ಆ ಬ್ರಾಹ್ಮಣನು ಆ ಮನೆಯ ಸೂರಿನ ಕೆಳಗೆ ಬಗ್ಗಿ ನಿಂತುಕೊಂಡನು. ಆ ಸೈನಿಕರೆಲ್ಲರೂ ಮನೆಯೊಳಕ್ಕೆ ಹೋದರು.

೧೮೭. ಇದರಿಂದ ಆ ಬ್ರಾಹ್ಮಣನಿಗೆ ಬಹುವಾಗಿ ಆಯಾಸವಾಗಲು ಮನಸ್ಸಿನಲ್ಲಿ ಇಂತೆಂದು ಯೋಚಿಸಿದನು. ಪುರಾಣದಲ್ಲಿ ಹನುಮಂತನಿಗೆ ಬಹು ಶಕ್ತಿ ಇರುವುದೆಂದು ಅನೇಕ ಬಾರಿ ಕೇಳಿದ್ದೇನೆ.

೧೮೮. ಅದೆಲ್ಲವೂ ಈಗ ಸುಳ್ಳಾಯಿತು. ಅದರಿಂದ ಪ್ರಯೋಜನವೇನಾಯಿತು? ಏನೂ ಇಲ್ಲ. ಎಂಬುದಾಗಿ ಆ ಬ್ರಾಹ್ಮಣನು ನಿಶ್ಚಯಿಸಿಕೊಂಡು ಬಹು ಕೋಪಗೊಂಡನು.

ಶೀಘ್ರಂ ಘಟಂ ಭುವಿ ಸ್ಥಾಪ್ಯ ವಾಮಹಸ್ತೇನ ಮಾರುತೇಃ ।
ಪುಚ್ಛಂ ಧೃತ್ವಾ ಪ್ರಾಕ್ಷಿಪತ್ತಮಾಕಾಶೇ ವೇಗವತ್ತರಃ ॥ ೧೮೯ ॥

ತದಾ ಸಾ ಮಾರುತೇರ್ಧಾತುಮಯೀ ಮೂರ್ತಿಶ್ಶುಭಾವಹಾ ।
ಗತ್ವಾಽಽಕಾಶೇ ಗರ್ಜನಾಂ ವೈ ಚಕಾರಾತಿಭಯಂಕರಂ ॥ ೧೯೦ ॥

ತಾಂ ಗರ್ಜನಾಂ ಮಹಾವೀರಾ ಗ್ರಾಮಸ್ಥಾಶ್ಚ ಬಹಿಃ ಸ್ಥಿತಾಃ ।
ಶ್ರುತ್ವಾತಿಭಯಸಂತ್ರಸ್ತಾ ಮೃತಾಸರ್ವೇ ಕ್ಷಣೇನ ಹಿ ॥ ೧೯೧ ॥

ಅಶ್ವಾ ನಾಗಾ ವೃಷಾದ್ಯಾಶ್ಚ ಮೃತಾಸ್ಸರ್ವೇ ತದಾ ಕ್ಷಣಾತ್ ।
ಯದ್ಯದ್ಗ್ರಾಮೇ ಚಹಿರ್ವಾಪಿ ಚರಂ ಪುರುಷಸಂಜ್ಞಿತಂ ॥ ೧೯೨ ॥

ಪುತ್ರಗರ್ಭಾಶ್ಚ ನಾರೀಣಾಂ ಸರ್ವೇ ಪ್ರಾಪುಃ ಕ್ಷಯಂ ತದಾ ।
ತದಾ ಸ ಪುರುಷಸ್ತ್ವೇತೋ ನ ಮೃತೋ ಬ್ರಾಹ್ಮಣೋತ್ತಮಃ ॥ ೧೯೩ ॥

---

೧೮೯. ಆಗ ಆ ನೀರಿನ ಪಾತ್ರೆಯನ್ನು ಬೇಗನೆ ಕೆಳಗಿಟ್ಟು ಎಡಗೈಯಿಂದ ಆ ಮಾರುತಿಯ ಬಾಲವನ್ನು ಹಿಡಿದು ಆ ಪ್ರತಿಮೆಯನ್ನು ಆಕಾಶಕ್ಕೆ ವೇಗವಾಗಿ ಎಸೆದನು.

೧೯೦. ಆಗ ಆ ಮಾರುತಿಯ ಧಾತುಮಯವಾದ ಮೂರ್ತಿಯು ಆಕಾಶಕ್ಕೆ ಹೋಗಿ ಬಹು ಭಯಂಕರವಾಗಿ ಗರ್ಜನೆಯನ್ನು ಮಾಡಿತು.

೧೯೧. ಆ ಗರ್ಜನೆಯನ್ನು ಆ ವೀರರೂ, ಊರಿನಲ್ಲಿರುವವರೂ, ಹೊರಗಿರುವವರೂ, ಕೇಳಿ ಬಹುವಾಗಿ ಭಯಗೊಂಡು ಕ್ಷಣಕಾಲದಲ್ಲಿಯೇ ಸತ್ತು ಹೋದರು.

೧೯೨. ಕುದುರೆಗಳೂ, ಆನೆಗಳೂ, ಗೂಳಿಗಳೂ, ಎತ್ತುಗಳೂ, ಎಲ್ಲವೂ ಕೂಡ ಕ್ಷಣಕಾಲದಲ್ಲಿಯೇ ಸತ್ತು ಬಿದ್ದುವು. ಗ್ರಾಮದ ಹೊರಗಿದ್ದ ಮತ್ತು ಒಳಗಿದ್ದ ಪುರುಷನೆಂಬ ಹೆಸರು ಹೊಂದಿರತಕ್ಕದ್ದೆಲ್ಲವೂ ಸತ್ತು ಹೋದುವು.

೧೯೩. ಗರ್ಭಿಣಿ ಹೆಂಗಸರ ಹೊಟ್ಟೆಯಲ್ಲಿದ್ದ ಗಂಡು ಎಂಬುದು ಕೂಡ ನಾಶವಾಯಿತು. ಇಷ್ಟು ಗಂಡು ಪ್ರಾಣಿಗಳಲ್ಲಿ ಪುರುಷರ ಸಂಜ್ಞೆಯುಳ್ಳ ಈ ಬ್ರಾಹ್ಮಣನು ಒಬ್ಬನು ಮಾತ್ರ ಮೃತನಾಗಲಿಲ್ಲ.

ಕೃಪಯಾ ರಾಮಚಂದ್ರಸ್ಯ ಮಾರುತೇಃ ಕೃಪಯಾಪಿ ಚ ।
ತತಃ ಪ್ರಭಾತೇ ತಾ ನಾರ್ಯಃ ಸರ್ವಾಸ್ಸ್ವಪುರುಷಾನ್ ಮೃತಾನ್ ॥ ೧೯೪ ॥

ದೃಷ್ಟ್ವಾತಿವಿಸ್ಮಯಂ ಪ್ರಾಪುಸ್ತಾಭಿರ್ನೈವ ಶ್ರುತೋ ಧ್ವನಿಃ ।
ತದಾ ವಿಪ್ರಂ ಜೀವಿತಂ ತಂ ದೃಷ್ಟ್ವಾ ಪಂಕೇಽಪಿ ಮಾರುತಿಂ ॥ ೧೯೫ ॥

ಪತಿತಂ ವಿಸ್ಮಯಾವಿಷ್ಟಾಃ ಪಪ್ರಚ್ಛುಸ್ತಂ ದ್ವಿಜೋತ್ತಮಂ ।
ತತಸ್ಸ ಸಕಲಂ ವೃತ್ತಂ ನಾರೀಸ್ಸಂಶ್ರಾವಯತ್ತದಾ ॥ ೧೯೬ ॥

ತತಃ ಸ್ತಾಃ ಪ್ರಾರ್ಥಯಿತ್ವಾ ತಂ ಚಕ್ರುಃ ಸ್ವೀಯಪುರಾಧಿಪಂ ।
ಸೋಽಪಿ ರಾಮಾಜ್ಞಯಾ ರಾಜ್ಯಂ ಚಕಾರ ತತ್ಪುರಸ್ಯ ಚ ॥ ೧೯೭ ॥

ಪುರಸ್ಥಿತಾನಾಂ ನಾರೀಣಾಂ ಸ ಏವಾಸೀತ್ಪತಿಸ್ತದಾ ।
ತನ್ಮಾರುತೇರ್ಗರ್ಜಿತಂ ಹಿ ಕಾಲೇ ಕಾಲೇ ತು ಪೂರ್ವವತ್ ॥ ೧೯೮ ॥

---

೧೯೪. ರಾಮಚಂದ್ರನ ಕೃಪೆಯಿಂದಲೂ, ಮಾರುತಿಯ ಕೃಪೆಯಿಂದಲೂ ಇವನೊಬ್ಬನು ಮಾತ್ರ ಬದುಕಿದ್ದನು. ಬೆಳಗ್ಗೆ ಎದ್ದು ಹೆಂಗಸರೆಲ್ಲರೂ ತಮ್ಮ ತಮ್ಮ ಗಂಡಂದಿರು ಸತ್ತು ಹೋಗಿರುವುದನ್ನು ನೋಡಿ ಆಶ್ಚರ್ಯಪಟ್ಟರು.

೧೯೫. ಹೆಣ್ಣು ಪ್ರಾಣಿಗಳಿಗೆ ಆ ಧ್ವನಿಯು ಕೇಳದಿದ್ದುದರಿಂದ ಅವರೊಬ್ಬರೂ ಸಾಯಲಿಲ್ಲ. ಆ ಬ್ರಾಹ್ಮಣನು ಬದುಕಿರುವುದನ್ನೂ, ಮಾರುತಿಯ ಪ್ರತಿಮೆಯು ಕೊಚ್ಚೆಯಲ್ಲಿ ಬಿದ್ದಿರುವುದನ್ನೂ ನೋಡಿದರು.

೧೯೬. ಇದರಿಂದ ಅವರಿಗೆ ಆಶ್ಚರ್ಯವಾಯಿತು. ಆಗ ಅವರು ಆ ಬ್ರಾಹ್ಮಣನನ್ನು ಇದರ ವಿಷಯವೇನೆಂದು ಕೇಳಿದರು. ಆವನು ಅವರಿಗೆಲ್ಲಾ ನಡೆದ ವಿಷಯವನ್ನು ಹೇಳಿದನು.

೧೯೭. ಆಗ ಅವರೆಲ್ಲರೂ ಅವನನ್ನು ಪ್ರಾರ್ಥಿಸಿಕೊಂಡು ತಮ್ಮ ಊರಿಗೆ ಯಜಮಾನನನ್ನಾಗಿ ಮಾಡಿಕೊಂಡರು. ಅವನೂ ಕೂಡ ಆ ರಾಮನ ಅಪ್ಪಣೆಯಿಂದ ಆ ಊರನ್ನು ಆಳುತ್ತಿದ್ದನು.

೧೯೮. ಆ ಊರಿನಲ್ಲಿರುವ ಹೆಂಗಸರಿಗೆಲ್ಲಾ ಅವನೇ ಗಂಡನಾದನು. ಆ ಮಾರುತಿಯ ಗರ್ಜನೆಯು ವರ್ಷಕ್ಕೊಂದು ಬಾರಿ. ಆ ಕಾಲವು ಬಂದಾಗಲೆಲ್ಲಾ ಮೊದಲಿನಂತೆಯೇ ಈಗಲೂ ಕೇಳಿ ಬರುತ್ತಿದೆ.

ಅದ್ಯಾಪಿ ಶ್ರೂಯತೇ ತಸ್ಮಿನ್ನಗರೇ ಘನಶಬ್ದವತ್ ।
ತಚ್ಛ್ರುತ್ವಾ ಪುತ್ರಗರ್ಭಾಶ್ಚ ಪ್ರಸ್ಖಲಂತಿ ಹಿ ಯೋಷಿತಾಂ ॥ ೧೯೯ ॥

ಸ್ತ್ರಿಯಸ್ಸಹಸ್ರಶಶ್ಚಾಸನ್ ಪುರುಷಸ್ತ್ವೇಕ ಏವ ಸಃ ।
ತದಾರಭ್ಯ ತತ್ ಸ್ತ್ರೀರಾಜ್ಯಂ ಕಥ್ಯತೇ ಮಾನವೋತ್ತಮೈಃ । ॥ ೨೦೦ ॥

ತತಃ ಕಾಲಾಂತರೇಣೈವ ಸ ವಿಪ್ರಶ್ಚ ಮೃತೋ ಯದಾ ।
ತತಃ ಸ್ವಪೂರ್ವಪುಣ್ಯೇನ ವಿಷ್ಣುಸಾಯುಜ್ಯಮಾಪ ಸಃ ॥ ೨೦೧ ॥

ತತಸ್ತಾಭಿಸ್ತು ನಾರೀಭಿಃ ಕಶ್ಚಿತ್ಪಾಂಥಸ್ಸಮಾಗತಃ ।
ಸ ಏವ ಕ್ರಿಯತೇ ಭರ್ತಾ ನ ತಂ ತಾ ಮೋಚಯಂತಿ ಹಿ ॥ ೨೦೨ ॥

ಜ್ಞಾತ್ವಾ ತಂ ಗರ್ಜನಾಕಾಲಂ ಪುರುಷಾನ್ವಿವರೇಷು ಹಿ ।
ಗೋಪಯಿತ್ವಾ ದುಂದುಭೀನಾಂ ಶಂಖಾನಾಂ ನಿಸ್ಸ್ವನಾಧಿಭಿಃ ॥ ೨೦೩ ॥

---

೧೯೯. ಆದರೆ ಅದು ಗುಡಿಗಿನಂತೆ ಕೇಳಿ ಬರುತ್ತಿರುವುದು. ಅದನ್ನು ಕೇಳಿದ ಕೂಡಲೇ ಆ ಹೆಂಗಸರಲ್ಲಿ ಗರ್ಭಿಣಿಯಾದವರು ಗಂಡು ಗರ್ಭವನ್ನು ಧರಿಸಿದ್ದರೆ ಅವೆಲ್ಲವೂ ಬಿದ್ದು ಹೋಗುತ್ತವೆ.

೨೦೦. ಹೀಗಿರುವುದರಿಂದ ಆ ಊರಿನಲ್ಲಿ ಹೆಂಗಸರು ಸಾವಿರಾರು ಸಂಖ್ಯೆಯಲ್ಲಿರುವರು. ಆದರೆ ಇವನೊಬ್ಬನೆ ಆ ಊರಿಗೆಲ್ಲ ಗಂಡಸು. ಆಗಿನಿಂದ ಮೊದಲು ಅದನ್ನು ಸ್ತ್ರೀ ರಾಜ್ಯವೆಂದು ಕರೆಯುತ್ತಾರೆ.

೨೦೧. ಅನಂತರ ಆ ಬ್ರಾಹ್ಮಣನು ಕೆಲವು ಕಾಲದ ಮೇಲೆ ಸತ್ತು ತಾನು ಮಾಡಿದ ಪೂರ್ವ ಪುಣ್ಯದಿಂದ ಆ ವೈಕುಂಠದಲ್ಲಿ ವಿಷ್ಣು ಸಾಯುಜ್ಯವನ್ನು ಹೊಂದಿದನು.

೨೦೨. ಅನಂತರ ಆ ಹೆಂಗಸರು ಯಾವನಾದರೂ ಹೊರಗಿನಿಂದ ಗಂಡಸು ಬಂದರೆ ಅವನನ್ನೇ ಗಂಡನನ್ನಾಗಿ ಮಾಡಿಕೊಳ್ಳುತ್ತಾರೆ. ಅವನನ್ನು ಅವರು ಬಿಡುವುದೇ ಇಲ್ಲ.

೨೦೩–೨೦೪. ಆ ಗರ್ಜನಾ ಕಾಲವು ಬಂದಾಗ ಆ ಹೆಂಗಸರು ಗಂಡಸರನ್ನು ಗುಹೆಗಳಲ್ಲಿ ಬಚ್ಚಿಡುತ್ತಾರೆ. ಮತ್ತು ದುಂದುಭಿ, ಶಂಖ, ಮುಂತಾದ

ನ ಶ್ರಾವಯಂತಿ ತೇಷಾಂ ತಂ ಧ್ವನಿಂ ಮಾರುತಿಸಂಭವಂ ।
ಅತಿಕ್ರಾಂತೇ ತು ತತ್ಕಾಲೇ ತಾ ಪುನರ್ಜೀವಿತಾನಿತಿ ॥ ೨೦೪ ॥

ಕೃತ್ವಾ ನಾನೋತ್ಸವೈಃ ಪೂಜ್ಯತೈರ್ಭೋಗಂ ತಾ ಭಜಂತಿಹಿ ।
ನಾರ್ಯಾ ತಚ್ಛಾಸ್ಯತೇ ರಾಜ್ಯಂ ಸದೈವ ದ್ವಿಜಸತ್ತಮ ॥ ೨೦೫ ॥

ಸ್ತ್ರೀಣಾಮೇವ ಸದೋತ್ಪತ್ತಿರ್ಜಾಯತೇ ಪುರುಷಸ್ಯ ನ ।
ತದ್ರಾಜ್ಯನಿಕಟಸ್ಥಾ ಯೇ ದೇಶಾಸ್ತೇಷ್ವಪಿ ಭೋ ದ್ವಿಜ ॥ ೨೦೬ ॥

ಮಾರುತೇಃಶಬ್ದಸಂಸ್ಪೃಷ್ಟವಾಯುನಾ ಸ್ಪರ್ಶಿತಾ ನರಾಃ ।
ಅಶಕ್ತಾ ಏವ ಜಾಯಂತೇ ನ ತೇಷ್ವಾಸೀತ್ಸುಪೌರುಷಂ ॥ ೨೦೭ ॥

ಅತಸ್ತೇಷಾಮಶಕ್ತಾನಾಂ ವೀರ್ಯಕ್ಷೀಣತಯಾ ದ್ವಿಜ ।
ಭವಂತಿ ದುಹಿತಾ ಏವ ಕ್ವಚಿತ್ಪುತ್ರಃ ಪ್ರಜಾಯತೇ ॥ ೨೦೮ ॥

ಧ್ವನಿಮಾಡಿ ಆ ಮಾರುತಿಯ ಧ್ವನಿಯು ಕೇಳದಂತೆ ಮಾಡುತ್ತಾರೆ ಆ ಕಾಲವು ಕಳೆದುಹೋದ ಮೇಲೆ ಅವರು ಮತ್ತೆ ಬದುಕಿ ಬಂದರೆಂದು ತಿಳಿಯುತ್ತಾರೆ.

೨೦೫. ಇದರಿಂದ ಸಂತೋಷಗೊಂಡು ಅನಂತರ ಅವರು ಬಗೆಬಗೆಯ ಉತ್ಸವಗಳನ್ನು ಮಾಡುತ್ತಾರೆ. ಅವರೊಡನೆ ಅನೇಕವಾದ ಭೋಗಗಳನ್ನು ಅನುಭವಿಸುತ್ತಾರೆ. ಅಲ್ಲಿನ ರಾಜ್ಯವನ್ನು ಆ ಬ್ರಾಹ್ಮಣನು ಸತ್ತಮೇಲೆ ಆ ಹೆಂಗಸರೇ ಆಳುತ್ತಿರುತ್ತಾರೆ.

೨೦೬. ಆಗಿನಿಂದ ಹೆಂಗಸರು ಹೆಣ್ಣು ಮಕ್ಕಳನ್ನೇ ಹೆರುವರು. ಗಂಡು ಮಕ್ಕಳನ್ನು ಹೆರುವುದೇ ಇಲ್ಲ. ಆ ರಾಜ್ಯದಲ್ಲದೆ ಆ ರಾಜ್ಯದ ಹತ್ತಿರದ ರಾಜ್ಯದಲ್ಲಿಯೂ ಕೂಡ ಹೆಣ್ಣು ಪ್ರಜೆಗಳು ಆಗುವರೇ ಹೊರತು ಗಂಡು ಸಂತಾನವಾಗುವುದಿಲ್ಲ.

೨೦೭. ಆ ಮಾರುತಿಯು ಗರ್ಜಿಸಿದ ಗರ್ಜನದ ಸ್ಪರ್ಶವಾದ ವಾಯುವು ಬಂದು ಸ್ಪರ್ಶಿಸಿದ ಪುರುಷರೂ ಕೂಡ ಅಶಕ್ತರಾಗಿಯೇ ಆಗುತ್ತಾರೆ. ಅವರಲ್ಲಿ ಪೌರುಷವೇ ಇರುವುದಿಲ್ಲ.

೨೦೮. ಆ ಮಾರುತಿಯ ಶಬ್ದದ ಗಾಳಿಯ ಸ್ಪರ್ಶದಿಂದ ಅಶಕ್ತರಾದ ಆ ಗಂಡಸರ ವೀರ್ಯದಿಂದ ಹೆಣ್ಣು ಮಕ್ಕಳೇ ಹುಟ್ಟುತ್ತವೆ. ಎಲ್ಲೋ ಅಪುರೂಪವಾಗಿ ಗಂಡು ಮಕ್ಕಳಾಗುವುದೂ ಉಂಟು.

ಆಧಿಕ್ಯೇ ರಜಸಃ ಕನ್ಯಾ ಶುಕ್ರಾಧಿಕ್ಯೇ ಸುತೋ ಭವೇತ್ ।
ನಪುಂಸಕಸ್ಸಮತ್ವೇನ ಯಥೇಚ್ಛಾ ಪಾರಮೇಶ್ವರೀ ॥ ೨೦೯ ॥

ಅನ್ಯತ್ತೇ ಕಾರಣಂ ವಚ್ಮಿ ನ ಭವಂತಿ ಸುತಾ ಯತಃ ।
ಕಾರಣಂ ಶ್ರುಣು ತಸ್ಯೇದಂ ವಿಷ್ಣುದಾಸ ದ್ವಿಜೋತ್ತಮ ॥ ೨೧೦ ॥

ತೇಷು ದೇಶೇಷು ನಾರ್ಯಶ್ಚ ನಿಜರಾಜ್ಯಮದೇನ ಹಿ ।
ರತಿಕಾಲೇಽಧಃ ಪುರುಷಂ ಕೃತ್ವಾ ಕ್ರೀಡಾಂ ಭಜಂತಿ ತಾಃ ॥ ೨೧೧ ॥

ನ ಸ್ತ್ರೀಯಾಂ ರತಿಕಾಲೇ ತಾಃ ಪೃಷ್ಟಿಂ ಭೂಮಿಂ ಸ್ಪೃಶಂತಿ ಹಿ ।
ಅತ ಏವ ರತಿಕಾಲೇ ಶುಕ್ರಂ ತು ಸ್ರವತೇ ಬಹಿಃ ॥ ೨೧೨ ॥

ಸೂಕ್ಷ್ಮಚ್ಛಿದ್ರೇ ಯಥಾಗರ್ಭಸ್ಥಾನೇ ತನ್ನೈವ ಗಚ್ಛತಿ ।
ನಾಸಾನಯನಕರ್ಣಾನಾಂ ದ್ವೇ ದ್ವೇ ರಂಧ್ರೇ ಪ್ರಕೀರ್ತಿತೇ ॥ ೨೧೩ ॥

---

೨೦೯. ಗರ್ಭದಲ್ಲಿ ಸೇರತಕ್ಕ ಪದಾರ್ಥಗಳಲ್ಲಿ ರಜಸ್ಸು ಹೆಚ್ಚಾಗಿದ್ದರೆ ಕನ್ಯೆಯೂ, ಶುಕ್ಲವು ಹೆಚ್ಚಾಗಿದ್ದರೆ ಗಂಡೂ ಆಗುತ್ತವೆ. ಎರಡೂ ಸಮವಾದರೆ ನಪುಂಸಕರಾದ ಮಕ್ಕಳು ಹುಟ್ಟುತ್ತಾರೆ. ಇದರ ಮೇಲಿನ ಹೆಚ್ಚು ಕಡಿಮೆಗಳು ಪರಮೇಶ್ವರನ ಇಚ್ಛೆಗೆ ಸೇರಿದುದು.

೨೧೦-೨೧೧. ಆ ದೇಶದಲ್ಲಿ ಮಕ್ಕಳಾಗದಿರಲು ಮತ್ತೊಂದು ಕಾರಣವನ್ನು ಹೇಳುತ್ತೇನೆ ಕೇಳು. ಆ ದೇಶದಲ್ಲಿ ಹೆಂಗಸರು ತಾವು ತಮ್ಮ ರಾಜ್ಯದ ಮದದಿಂದ ಕ್ರೀಡೆಯ ಕಾಲದಲ್ಲಿ ಗಂಡನನ್ನು ಕೆಳಗಡೆ ಮಲಗಿಸಿಕೊಂಡು ಸುಖವನ್ನು ಅನುಭವಿಸುತ್ತಾರೆ.

೨೧೨. ಪುಷ್ಟಿಯನ್ನು ಕೊಡುವ ನೆಲವನ್ನು ಅವರು ರತಿಕಾಲದಲ್ಲಿ ಮುಟ್ಟುವುದಿಲ್ಲ. ಅವರು ಈ ಪುರುಷಾಯಿತವನ್ನು ಆಚರಿಸುವುದರಿಂದ ಗಂಡಸಿನ ಸಂಬಂಧವಾದ ಶುಕ್ಲವು ಹರಿದು ಹೋಗುತ್ತದೆ.

೨೧೩. ಗರ್ಭ ಸ್ಥಾನಕ್ಕೆ ಸೂಕ್ಷ್ಮಚ್ಛಿದ್ರದಿಂದ ವೀರ್ಯವು ಹೋಗಬೇಕು ಹಾಗೆ ಹೋಗಲು ಈ ಪುರುಷಾಯಿತದಲ್ಲಿ ಸಾಧ್ಯವಾಗುವುದಿಲ್ಲ. ಮೂಗು, ಕಣ್ಣು, ಕಿವಿ ಇವುಗಳಲ್ಲಿ ಎರಡೆರಡು ರಂಧ್ರಗಳಿವೆ.

ಮೇಹನಾಪಾನವಕ್ತ್ರಾಣಾಮೇಕೈಕಂ ರಂಧ್ರಮುಚ್ಯತೇ ।
ದಶಮಂ ಮಸ್ತಕೇ ಪ್ರೋಕ್ತಂ ರಂಧ್ರಾಣೀತಿ ನೃಣಾಂ ವಿದುಃ ॥ ೨೧೪ ॥

ಸ್ತ್ರೀಣಾಂ ತ್ರಿಣ್ಯಧಿಕಾನಿ ಸ್ಯುಃ ಸ್ತನಯೋಃ ಗರ್ಭವರ್ತ್ಮನಃ ।
ಸೂಚಿಕಾಗ್ರಸಮಾನ್ಯೇವ ತಾನಿ ಛಿದಾಣಿ ಸಂತಿ ಹಿ ॥ ೨೧೫ ॥

ಗರ್ಭಚ್ಛಿದ್ರಂ ರತಿಕಾಲೇ ಕಿಂಚಿದ್ವಿಕಸಿತಂ ದ್ವಿಜ ।
ಭೂತ್ವಾ ಮಾರ್ಗಂ ತು ವೀರ್ಯಾಯ ದದಾತಿ ಪುರುಷಸ್ಯ ಚ ॥ ೨೧೬ ॥

ತನ್ಮಾರ್ಗೇಣ ಗತಂ ವೀರ್ಯಂ ಚೇತ್ಸಮ್ಯಕ್ಪುರುಷಸ್ಯ ಚ ।
ಗರ್ಭಸ್ಥಾನೇ ತದಾ ಪುತ್ರೋ ಜಾಯತೇ ನಾತ್ರ ಸಂಶಯಃ ॥ ೨೧೭ ॥

ಸ್ವಲ್ಪಂ ಪ್ರವಿಷ್ಟಂ ವೀರ್ಯಂ ಚ ತಥಾ ಕನ್ಯಾ ಪ್ರಜಾಯತೇ ।
ರಜಸಶ್ಚಾಧಿಕತ್ವೇನ ಜಾನೀಹ್ಯೇವಂ ವಿನಿಶ್ಚಯಂ । ॥ ೨೧೮ ॥

---

೨೧೪. ಮೂತ್ರವನ್ನು ಬಿಡುವ ಸ್ಥಳ, ಮಲವು ವಿಸರ್ಜನೆಯಾಗುವ ಸ್ಥಾನ, ಬಾಯಿ ಇವುಗಳಲ್ಲಿ ಒಂದೊಂದು ರಂಧ್ರಗಳಿವೆ. ತಲೆಯಲ್ಲಿ ಬ್ರಹ್ಮ ರಂಧ್ರವೆಂಬ ಒಂದು ರಂಧ್ರವಿರುವುದು. ಈ ರೀತಿಯಾಗಿ ಗಂಡಸಾದವನಿಗೆ ಹತ್ತು ದ್ವಾರಗಳಿರುವುವು.

೨೧೫. ಹೆಂಗಸರಿಗೆ ಸ್ತನಗಳಲ್ಲಿ ಎರಡು ರಂಧ್ರಗಳು ಹೆಚ್ಚಾಗಿರುವುವು. ಅಲ್ಲದೆ ಗರ್ಭವನ್ನು ಧರಿಸುವ ಕೋಶಕ್ಕೆ ಬೇರೆಯಾಗಿ ಒಂದು ರಂಧ್ರವಿರುವುದು. ಈ ಮೂರು ರಂಧ್ರಗಳೂ ಸೂಜಿಯ ಮೊನೆಯಷ್ಟಿರುತ್ತವೆ.

೨೧೬. ಈ ಗರ್ಭ ಕೋಶಕ್ಕೆ ದಾರಿಯಾದ ರಂಧ್ರವು ರತಿಕಾಲದಲ್ಲಿ ಸ್ವಲ್ಪವಾಗಿ ಬಾಯಿ ಬಿಡುವುದು. ಹಾಗೆ ಬಾಯಿಬಿಟ್ಟು ಪುರುಷನ ವೀರ್ಯವು ಗರ್ಭಕೋಶಕ್ಕೆ ಹೋಗಲು ದಾರಿಯನ್ನು ಕೊಡುತ್ತದೆ.

೨೧೭–೨೧೮. ಆ ಮಾರ್ಗದಿಂದ ಪುರುಷನ ವೀರ್ಯವು ಹೆಚ್ಚಾಗಿ ಹೋಗಿ ನಿಂತಲ್ಲಿ ಆಗ ಗಂಡು ಮಗುವು ಆಗುತ್ತದೆ. ಇದರಲ್ಲಿ ಸಂಶಯವಿಲ್ಲ. ಆ ವೀರ್ಯವು ಸ್ವಲ್ಪವೇ ಹೋಗಿ ನಿಂತಲ್ಲಿ ಆಗ ಹೆಣ್ಣು ಮಗುವು ಉಂಟಾಗುತ್ತದೆ. ಅದಕ್ಕೆ ರಜಸ್ಸು ಹೆಚ್ಚಾಗಿ ನಿಲ್ಲುವುದೇ ಕಾರಣವಾಗಿರುವುದು. ಈ ರೀತಿಯಾಗಿ ನಿಶ್ಚಯಿಸಲ್ಪಟ್ಟಿದೆ ಎಂದು ತಿಳಿ.

ತಸ್ಮಾದ್ಯದಾಽಧಶ್ಶೇತೇ ವೈ ತದ್ದೇಶೇಷು ನರೋತ್ತಮಃ ।
ರತಿಕಾಲೇ ತಸ್ಯ ವೀರ್ಯಮೂರ್ಧ್ವಗಂ ಗಚ್ಛತಿ ನೈವ ತತ್ । ॥ ೨೧೯ ॥

ಯದಿ ದೈವವಶಾತ್ಕಿಂಚಿದ್ಗತಂ ಸ್ತ್ರೀರಂಧ್ರಮಾರ್ಗತಃ ।
ತದಾ ದೈವವಶಾತ್ಪುತ್ರೋ ಜಾಯತೇ ಸೋಽಪಿ ಷಂಡವತ್ ॥ ೨೨೦ ॥

ಅತ ಏವ ಹಿ ತದ್ದೇಶೇ ಬಹುಕನ್ಯಾ ಭವಂತಿ ಹಿ ।
ಏವಂ ತೇ ಕಾರಣಂ ಪ್ರೋಕ್ತಂ ಕನ್ಯೋತ್ಪತ್ತೇರ್ದ್ವಿಜೋತ್ತಮ ॥ ೨೨೧ ॥

ಏವಂ ಸರ್ವೇಷು ದೇಶೇಷು ಚೇನ್ನಾರ್ಯಾ ಅಧಿಕಂ ಬಲಂ ।
ಅಸ್ತಿ ತರ್ಹಿ ಭವೇತ್ಕನ್ಯಾ ಪುತ್ರಃ ಪುರುಷಸಾರತಃ ॥ ೨೨೨ ॥

ತಸ್ಮಾತ್ಪುತ್ರಾರ್ಥಿನಾ ನಾರೀ ಪೋಷಣೀಯಾ ಕದಾಪಿ ನ ।
ಪೋಷಯೇಚ್ಚ ಸದಾತ್ಮಾನಂ ನಾನಾಖಾದ್ಯರಸಾಯನೈಃ ॥ ೨೨೩ ॥

---

೨೧೯. ಆ ದೇಶದಲ್ಲಿ ಪುರುಷರು ಕೆಳಭಾಗದಲ್ಲಿ ಮಲಗುತ್ತಾರೆ. ಆದ್ದರಿಂದ ವೀರ್ಯವು ಮೇಲು ಮುಖವಾಗಿ ಹೋಗಲು ಸಾಧ್ಯವಾಗುವುದಿಲ್ಲ.

೨೨೦. ಒಂದು ವೇಳೆ ದೈವೇಚ್ಛೆಯಿಂದ ಆ ಹೆಂಗಸಿನ ರಂಧ್ರದ ಮಾರ್ಗದಿಂದ ಹೋದರೆ ದೈವಾಧೀನದಿಂದ ಷಂಡನಾಗಿಯೇ ಆ ಗಂಡು ಮಗುವು ಹುಟ್ಟುವುದು.

೨೨೧. ಆದ್ದರಿಂದಲೇ ಆ ದೇಶದಲ್ಲಿ ಕನ್ಯೆಯರು ಹೆಚ್ಚಾಗಿರುವರು. ಈ ರೀತಿಯಾಗಿ ಕನ್ಯೋತ್ಪತ್ತಿಗೆ ಕಾರಣಗಳನ್ನು ಹೇಳಿದ್ದೇನೆ.

೨೨೨. ಯಾವ ದೇಶದಲ್ಲಿಯಾದರೂ ಸರಿಯೆ. ಹೆಂಗಸರಿಗೆ ಬಲವು ಅಧಿಕವಾಗಿದ್ದರೆ ಕನ್ಯೆಯರು ಹೆಚ್ಚಾಗಿ ಹುಟ್ಟುತ್ತಾರೆ. ಗಂಡು ಮಗುವಾಗ ಬೇಕಾದರೆ ಪುರುಷನ ಸಾರವೇ ಹೆಚ್ಚಾಗಿ ಬೇಕಾಗಿರುವುದು.

೨೨೩. ಆದ್ದರಿಂದ ಗಂಡು ಮಕ್ಕಳಾಗಬೇಕೆಂದು ಅಪೇಕ್ಷಿಸುವವನು ಉತ್ತಮವಾದ ಪದಾರ್ಥವನ್ನು ಕೊಟ್ಟು ಅದರಿಂದ ಹೆಂಗಸನ್ನು ಬಲಪಡಿಸಬಾರದು ಆಕೆಯು ಬಲಹೀನವಾಗಿಯೇ ಇರಬೇಕು. ಆ ಪುರುಷನು ತಾನು ಮಾತ್ರ ಅನೇಕ ಬಗೆಯ ತಿಂಡಿಗಳನ್ನು ತಿಂದುಕೊಳ್ಳುತ್ತ ಬಲವಾಗಿರಬೇಕು.

ಅತ ಏವ ಹಿ ವೈದ್ಯಾಶ್ಚ ಪಾಲನೀಯಾ ಸ್ಸದಾ ನರೈಃ ।
ಬಲಾಬಲಪ್ರನೇತ್ತಾರಸ್ತ್ರೈಃ ಜ್ಞೇಯಂ ಸ್ವಬಲಾಬಲಂ ॥ ೨೨೪ ॥

ಪುಷ್ಟದೇಹಂ ನಿರೀಕ್ಷ್ಯಾಥ ನ ಜ್ಞೇಯಂ ತ್ವಧಿಕಂ ಬಲಂ ।
ವಾತೇನಾಽಪಿ ಪುಮಾನ್ಪುಷ್ಟೋ ಜಾಯತೇತ್ರ ಸದೈವ ಹಿ ॥ ೨೨೫ ॥

ಅತೋ ವೈದ್ಯಂ ವಿನಾ ತಚ್ಚ ನ ಜ್ಞಾಸ್ಯತಿ ಬಲಾ ಬಲಂ ।
ಅತೋ ವೈದ್ಯಾಸ್ತೇ ಪ್ರಷ್ಟವ್ಯಾಸ್ಸದಾ ಭಕ್ತಿಪುರಸ್ಸರಾಃ ॥ ೨೨೬ ॥

ಮಂತ್ರೇ ತೀರ್ಥೇ ದ್ವಿಜೇ ದೈವೇ ವೈದ್ಯೇಥ ಗಣಕೇ ಗುರೌ ।
ಯಾದೃಶೀ ಭಾವನಾ ಸ್ವೀಯಾ ಸಿದ್ಧಿರ್ಭವತಿ ತಾದೃಶೀ ॥ ೨೨೭ ॥

ಅತೋ ವೈದ್ಯೋಕ್ತಮಾರ್ಗೇಣ ಸದಾ ಗಚ್ಛೇನ್ನರೋತ್ತಮಃ ।
ಬಲಾಬಲವಿಚಾರೇಣ ಪುತ್ರಾ ಏವ ಭವಂತಿ ಹಿ ॥ ೨೨೮ ॥

---

೨೨೪. ಆದ್ದರಿಂದಲೇ ಮನುಷ್ಯರು ವೈದ್ಯರನ್ನು ಸಂಗ್ರಹಿಸಿಟ್ಟುಕೊಂಡು ಅವರನ್ನು ಕಾಪಾಡುತ್ತಿರಬೇಕು. ಆ ವೈದ್ಯರು ಪುರುಷರ ಮತ್ತು ಸ್ತ್ರೀಯರ ಬಲಾಬಲಗಳನ್ನು ತಿಳಿದುಕೊಳ್ಳುತ್ತಾರೆ. ಆದರಿಂದ ತನ್ನ ಬಲವನ್ನೂ, ತನ್ನ ಹೆಂಗಸಿನ ಬಲವನ್ನೂ ತಿಳಿದುಕೊಳ್ಳಬೇಕು.

೨೨೫. ಪುರುಷನಾಗಲೀ, ಸ್ತ್ರೀಯಾಗಲೀ ದಪ್ಪವಾಗಿರುವುದನ್ನು ನೋಡಿ ಅವರು ಹೆಚ್ಚು ಬಲಿಷ್ಠರಾಗಿರುವರೆಂದು ತಿಳಿಯಕೂಡದು. ದೇಹದಲ್ಲಿ ವಾಯುವು ಹೆಚ್ಚುವುದರಿಂದಲೂ ದೇಹವು ದಪ್ಪವಾಗುವುದು.

೨೨೬. ಆದ್ದರಿಂದ ವೈದ್ಯರಿಂದಲ್ಲದೆ ಮತ್ತೊಬ್ಬರಿಂದಲೂ ಆ ಬಲಾಬಲಗಳು ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ವೈದ್ಯರನ್ನು ತಮ್ಮ ವಿಷಯವನ್ನು ಭಕ್ತಿಯಿಂದ ವಿಚಾರಿಸಿ ತಿಳಿಯಬೇಕು.

೨೨೭. ಮಂತ್ರ, ತೀರ್ಥ, ಬ್ರಾಹ್ಮಣ, ದೇವರು, ವೈದ್ಯ, ಜೋಯಿಸ, ಗುರು ಇವರಲ್ಲಿ ಪುರುಷನಿಗೆ ಯಾವ ರೀತಿಯಾಗಿ ಭಾವನೆಯಿರುವುದೋ ಸಿದ್ಧಿಯೂ ಅದೇ ರೀತಿಯಾಗಿ ಉಂಟಾಗುವುದು.

೨೨೮. ಆದ್ದರಿಂದಲೇ ಮನುಷ್ಯನು ವೈದ್ಯನು ಹೇಳುವ ದಾರಿಯಲ್ಲಿಯೇ ಹೋಗಬೇಕು. ಅವನಿಂದಲೇ ಬಲಾಬಲಗಳನ್ನು ತಿಳಿದುಕೊಳ್ಳಬೇಕು. ಆದರಿಂದಲೇ ಗಂಡಾಗಲೀ ಹೆಣ್ಣಾಗಲಿ ಆಗುತ್ತದೆ.

ಏಕ ಏವ ವರಃ ಪುತ್ರಃ ಕಿಂ ಜಾತಾ ದಶಕನ್ಯಕಾಃ ।
ಪುನ್ನಾಮ್ನೋ ನರಕಾತ್ಪುತ್ರಸ್ತಾರಯೇತ್ಸ್ವಕುಲಂ ಕ್ಷಣಾತ್ ॥ ೨೨೯ ॥

ಕನ್ಯಾ ಸ್ವೀಯದುರಾಚಾರಾತ್ ಕ್ಷಣಾನ್ನಿಜಪಿತುಃ ಕುಲಂ ।
ತಥಾ ಭರ್ತುಃ ಕುಲಂ ಚಾಪಿ ನರಕೇ ಪಾತಯೇಚ್ಚ ಸಾ ॥ ೨೩೦ ॥

ತಸ್ಮಾನ್ನರೈಶ್ಚ ಪುತ್ರಾರ್ಥಂ ಯತ್ನಃ ಕಾರ್ಯಸ್ತ್ವಹರ್ನಿಶಂ ।
ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಪಿ ಗಯಾಂ ವ್ರಜೇತ್
ಯಜೇತ ವಾಶ್ವಮೇಧೇನ ನೀಲಂ ವಾ ವೃಷಮುತ್ಸೃಜೇತ್ । ॥ ೨೩೧ ॥

ಜೀವತೋ ವಾಕ್ಯಕರಣಾತ್ಪ್ರತ್ಯಬ್ದಂ ಭೂರಿಭೋಜನಾತ್ ।
ಗಯಾಯಾಂ ಪಿಂಡದಾನೇನ ತ್ರಿಭಿಃ ಪುತ್ರಸ್ಯ ಪುತ್ರತಾ ॥ ೨೩೨ ॥

---

೨೨೯. ಒಬ್ಬನೇ ಒಬ್ಬ ಗಂಡುಮಗನಾದರೂ ಕೂಡ ಅದೇ ಉತ್ತಮವು. ಹತ್ತು ಜನ. ಹೆಣ್ಣುಮಕ್ಕಳಾದರೂ ಕೂಡ ಅದರಿಂದ ಉಪಯೋಗವೇನೂ ಇಲ್ಲ. ಆ ಪುತ್ರನು ಪುಂಎಂಬ ಹೆಸರುಳ್ಳ ನರಕದ ದೆಸೆಯಿಂದ ತನ್ನನ್ನೂ ತನ್ನ ಕುಲವನ್ನೂ ಕ್ಷಣಕಾಲದಲ್ಲಿಯೇ ಉದ್ಧರಿಸುತ್ತಾನೆ.

೨೩೦. ಈ ಕನ್ಯೆಯು ತನ್ನ ಕೆಟ್ಟನಡತೆಯಿಂದ ತನ್ನ ತಂದೆಯ ಕುಲವನ್ನೂ ಗಂಡನ ಕುಲವನ್ನೂ ಕ್ಷಣಕಾಲದಲ್ಲಿಯೇ ನರಕದಲ್ಲಿ ಕೆಡಗುತ್ತಾಳೆ.

೨೩೧. ಆದ್ದರಿಂದಲೇ ಮನುಷ್ಯರು ಗಂಡುಮಗುವನ್ನು ಹೊಂದುವುದರಲ್ಲಿ ಹಗಲೂ ರಾತ್ರಿಯೂ ಪ್ರಯತ್ನಿಸುತ್ತಿರಬೇಕು. ಅನೇಕ ಜನ ಗಂಡುಮಕ್ಕಳನ್ನು ಪಡೆಯಬೇಕು. ಅವರಲ್ಲಿ ಒಬ್ಬನಾದರೂ ಗಯೆಗೆ ಹೋದರೂ ಹೋದಾನು. ಆದಿಲ್ಲದಿದ್ದರೆ ಅಶ್ವಮೇಧಯಾಗವನ್ನಾದರೂ ಮಾಡಿಯಾನು. ಅಥವಾ ನೀಲಸಂಜ್ಞೆಯುಳ್ಳ ಬಸವನನ್ನಾದರೂ ಬಿಟ್ಟಾನು.

೨೩೨. ತಂದೆಯು ಜೀವಿಸಿರುವಾಗ ಅವನ ಮಾತನ್ನು ಉಲ್ಲಂಘಿಸದೆ ನಡೆಸುವುದರಿಂದಲೂ ವರ್ಷದ ಶ್ರಾದ್ಧದ ದಿವಸಗಳಲ್ಲಿ ಪಿತೃಗಳನ್ನುದ್ದೇಶಿಸಿ ಭೂರಿಭೋಜನವನ್ನು ಮಾಡಿಸುವುದರಿಂದಲೂ ಗಯೆಯಲ್ಲಿ ಪಿತೃಗಳನ್ನು ಕುರಿತು ಪಿಂಡವನ್ನು ಕೊಡುವುದರಿಂದಲೂ ಈ ಮೂರು ಕೃತ್ಯಗಳಿಂದ ತಂದೆಗೆ ಮಗನು ಮಗನಾಗಿರುವನು ಎಂದೆನಿಸಿಕೊಳ್ಳುತ್ತಾನೆ.

ಏವಂ ಶಿಷ್ಯ ತ್ವಯಾ ಪೃಷ್ಟಮಶಕ್ತೇನ ಕಥಂ ವ್ರತಂ ॥
ಕಾರ್ಯಂ ತಚ್ಚ ಮಯಾ ಸರ್ವಂ ಭೂಸುರಸ್ಯ ಕಥಾನಕಂ ॥ ೨೩೩ ॥

ತವಾಗ್ರೇ ಕಥಿತಂ ರಮ್ಯಂ ತ್ವತ್ತೋಷಾರ್ಥಮನುತ್ತಮಂ ।
ತಸ್ಯ ವ್ರತಸ್ಯ ಸಾಮರ್ಥ್ಯಾತ್ಸ ದರಿದ್ರೋ ದ್ವಿಜೋತ್ತಮಃ ॥ ೨೩೪ ॥

ಲಬ್ಧ್ವಾ ತದ್ವಿಪುಲಂ ರಾಜ್ಯಂ ಭುಕ್ತ್ವಾ ಭೋಗಾನ್ ಮನೋರಮಾನ್ ।
ಸಾಯುಜ್ಯಂ ಪ್ರಾಪ ವಿಷ್ಣೋಶ್ಚ ಸ್ವಾಯುಷಶ್ಚ ಕ್ಷಯೇ ದ್ವಿಜಃ ॥ ೨೩೫ ॥

ಏವಂ ತದ್ರಾಮಚಂದ್ರಸ್ಯ ವ್ರತಂ ಕೋತ್ರ ತು ನಾಚರೇತ್ ।
ಸುಖೇನ ಮುಕ್ತಿದಂ ಚಾತ್ರ ಪರಲೋಕೇ ವಿಮುಕ್ತಿದಂ ॥ ೨೩೬ ॥

ಮುನಿಭಿಶ್ಚ ಸುರೈರ್ನಾಗೈರ್ಗಂಧರ್ವೈಃ ಕಿನ್ನರೈರ್ನೃಪೈಃ ।
ಸದಾನುಭವಿತಂ ಚೇದಂ ವ್ರತಾನಾಮುತ್ತಮಂ ವ್ರತಂ ॥ ೨೩೭ ॥

---

೨೩೩. ಎಲೈ ಶಿಷ್ಯನೇ ! ನೀನು ಅಶಕ್ತನು ವ್ರತವನ್ನುಹೇಗೆ ಮಾಡುವುದು ? ಎಂದು ಕೇಳಿದೆಯಲ್ಲ ! ಅದನ್ನು ಮಾಡುವ ರೀತಿಯನ್ನೂ ಆ ಬ್ರಾಹ್ಮಣನ ಕಥೆಯನ್ನೂ ವಿವರಿಸಿ ಹೇಳಿದ್ದೇನೆ.

೨೩೪-೨೩೫. ನಿನಗೂ ಕೂಡ ಸಂತೋಷವಾಗಲೆಂದು ನಿನ್ನೆದುರಿಗೆ ಈ ಕಥೆಯನ್ನು ಹೇಳಿರುವೆನು. ಈ ವ್ರತದ ಮಹಿಮೆಯಿಂದಲೇ ಆ ದರಿದ್ರನಾದ ಬ್ರಾಹ್ಮಣನು ಆ ದೊಡ್ಡ ರಾಜ್ಯವನ್ನೇ ಹೊಂದಿ ಉತ್ತಮೋತ್ತಮವಾದ ಭೋಗಗಳನ್ನು ಅನೇಕವಾಗಿ ಅನುಭವಿಸಿ ತನ್ನ ಆಯುಸ್ಸು ಮುಗಿದಮೇಲೆ ವಿಷ್ಣುವಿನ ಸಾಯುಜ್ಯವನ್ನು ಹೊಂದಿದನು.

೨೩೬ ಈರೀತಿಯಾಗಿರುವ ಈ ರಾಮಚಂದ್ರನ ವ್ರತವನ್ನು ಯಾರು ತಾನೇ ಮಾಡಲಾರರು? ಆ ವ್ರತವು ಈ ಲೋಕದಲ್ಲಿ ಸುಖವಾಗಿ ಅನ್ನವನ್ನೂ ಸೌಖ್ಯವನ್ನೂ ಕೊಡುವುದಲ್ಲದೆ ಪರಲೋಕದಲ್ಲಿಯೂ ಕೂಡ ಮುಕ್ತಿಯನ್ನು ಕೊಡುತ್ತದೆ.

೨೩೭. ಮುನಿಗಳೂ, ಸುರರೂ, ನಾಗರೂ, ಗಂಧರ್ವರೂ, ಕಿನ್ನರರೂ ಅನೇಕಜನ ರಾಜರೂ ಈ ಉತ್ತಮವಾದ ವ್ರತವನ್ನು ಮಾಡಿರುವರು. ಮಾಡುತ್ತಲೂ ಇರುವರು.

ಸ್ತ್ರೀಪುತ್ರಧನದಂ ಚೈತತ್ಸರ್ವಸೌಖ್ಯಪ್ರದಂ ನೃಣಾಂ ।
ಇಹ ಲೋಕೇ ಪರೇ ಚಾಪಿ ವಿಷ್ಣೋಸ್ಸಾಯುಜ್ಯದಾಯಕಂ ॥ ೨೩೮ ॥

ಸಂತಿ ವ್ರತಾನ್ಯನೇಕಾನಿ ಸ್ವರ್ಗೇ ಮರ್ತ್ಯೇ ರಸಾತಲೇ ।
ತಥಾಪಿ ಮಾಸನವಮೀಸಮಾನಂ ವ್ರತಮುತ್ತಮಂ ॥ ೨೩೯ ॥

ವಿಷ್ಣುದಾಸ ದ್ವಿಜಶ್ರೇಷ್ಠ ನ ಭೂತಂ ನ ಭವಿಷ್ಯತಿ ।
ತಸ್ಮಾತ್ಸದಾ ನರೈಃ ಕಾರ್ಯಂ ವ್ರತಂ ಚೇದಂ ಮಹತ್ತರಂ ॥ ೨೪೦ ॥

ಏವಂ ತ್ವಯಾ ಯಥಾ ಪೃಷ್ಟಂ ತಥಾ ತೇ ವಿನಿವೇದಿತಂ ॥
ಕಿಮನ್ಯಚ್ಛ್ರೋತುಮಿಚ್ಛಾಸ್ತಿ ತದ್ವದಸ್ವ ವದಾಮಿ ತೇ ! ॥ ೨೪೧ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಮನೋಹರಕಾಂಡೇ ಆದಿಕಾವ್ಯೇ ನವಮೀಕಥಾವರ್ಣನಂ ನಾಮ ಷಷ್ಠಸ್ಸರ್ಗಃ ಸಮಾಪ್ತಃ

---

೨೩೮. ಈ ವ್ರತವು ಒಳ್ಳೆಯ ಹೆಂಡಿರನ್ನು ಕೊಡುತ್ತದೆ ಪುತ್ರರನ್ನೂ ಧನವನ್ನೂ ಕೊಡುತ್ತದೆ. ಮನುಷ್ಯರಿಗೆ ಎಲ್ಲಾ ಸೌಖ್ಯವನ್ನೂ ಕೊಡುತ್ತದೆ. ಈ ಲೋಕದಲ್ಲಿ ಈ ರೀತಿಯಾದ ಸೌಖ್ಯಗಳನ್ನು ಕೊಟ್ಟು ಪರಲೋಕದಲ್ಲಿ ಅ ವಿಷ್ಣುವಿನ ಸಾಯುಜ್ಯವನ್ನು ಕೊಡುತ್ತದೆ.

೨೩೯-೨೪೦. ಸ್ವರ್ಗಲೋಕ, ಮರ್ತ್ಯಲೋಕ, ಪಾತಾಳಲೋಕದಲ್ಲಿ ಅನೇಕ ವ್ರತಗಳಿವೆ. ಆದರೂ ಕೂಡ ಮಾಸ ನವಮಿಗೆ ಸಮಾನವಾದ ವ್ರತವು ಹಿಂದೆ ಇರಲೂ ಇಲ್ಲ. ಮುಂದೆ ಇರುವುದೂ ಇಲ್ಲ. ಆದ್ದರಿಂದಲೇ ಈ ಉತ್ತಮ ವಾದ, ಮಹತ್ತರವಾದ ವ್ರತವನ್ನು ಮಾಡಬೇಕು.

೨೪೧. ಎಲೈ ಶಿಷ್ಯನೇ! ನೀನು ಕೇಳಿರುವ ವಿಷಯವನ್ನು ಹೇಳಿರುವೆನು. ಇನ್ನೇನನ್ನು ಕೇಳಬೇಕೆಂಬ ಇಚ್ಛೆಯು ನಿನಗಿರುವುದು? ಅದನ್ನು ಹೇಳು. ವಿವರಿಸುತ್ತೇನೆ.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀ ಆನಂದರಾಮಾಯಣದ ಮನೋಹರಕಾಂಡದಲ್ಲಿ ನವಮೀಕಥಾವರ್ಣನ ವೆಂಬ ಆರನೆಯ ಸರ್ಗವು ಮುಗಿದುದು.

—o—o—o—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಆರನೆಯ ಸರ್ಗದ ಸಾರಾಂಶವು

ಹಿಂದಿನ ಸರ್ಗದಲ್ಲಿ ರಾಮತೋಭದ್ರ, ಲಿಂಗತೋಭದ್ರಗಳೆಂಬ ಆಸನಗಳನ್ನು ವಿವರಿಸಿದನಷ್ಟೆ. ಅವುಗಳಲ್ಲಿ ರಾಮನನ್ನು ಕೂರಿಸುವ ಬಗೆಯನ್ನೂ, ಆವರಣ ದೇವತೆಗಳನ್ನೂ, ಅವುಗಳ ಆವಾಹನೆಗಳನ್ನೂ ಈಗ ವಿವರಿಸುತ್ತಾನೆ. ಅವನ್ನು ಪೂರ್ವದಿಕ್ಕಿನಿಂದ ಮೊದಲುಮಾಡಿಕೊಂಡು ಉತ್ತರದಿಕ್ಕಿನ ಕೊನೆಯವರೆಗೂ ಹೇಳುತ್ತಾನೆ.

ಅಲ್ಲದೆ ರಾಮನಿಗೆ ಪೂಜೆ ಹೊಂದಲು ಪ್ರಿಯವಾದ ಕಾಲ ದೇಶಗಳನ್ನೂ ಪ್ರಿಯವಾದ ಆಹಾರ ಮತ್ತು ಪುಷ್ಪಗಳನ್ನೂ ವಿವರಿಸುತ್ತಾನೆ. ಅವು ಒಂದೊಂದೂ ಕೂಡ ಒಂಭತ್ತೊಂಭತ್ತರಂತೆ ಇರಬೇಕೆಂದೂ ಹೇಳುವನು. ಮತ್ತು ಲಘುಪೂಜೆ ಮಹಾಪೂಜೆಗಳ ಕ್ರಮವನ್ನು ವಿವರಿಸುವನು. ಪಾರಾಯಣವನ್ನು ಮಾಡುವ ಕಾಲವನ್ನೂ ವಿವರಿಸುವನು.

ರಾಮನವಮೀ ವ್ರತದ ವಿಷಯ ಅದರ ಉದ್ಯಾಪನೆಗಳನ್ನೂ ಸಾಂಗವಾಗಿ ವಿವರಿಸುವನು. ಶ್ರೀರಾಮನವಮಿಯ ವ್ರತವನ್ನು ತಿಂಗಳು ತಿಂಗಳಿಗೂ ಮಾಡ ಬೇಕೆಂದು ಹೇಳಿ ಅದರ ವಿಷಯದಲ್ಲಿ ಸಿದ್ಧಿಯನ್ನು ಹೊಂದಿದ ಒಬ್ಬ ಮಹಾ ಪುರುಷನ ಕಥೆಯನ್ನು ಹೇಳುವನು.

ಕೇರಳ ದೇಶದಲ್ಲಿ ಒಬ್ಬ ಬ್ರಾಹ್ಮಣನು ಇದ್ದುಕೊಂಡಿದ್ದನು. ಅವನ್ನು ರಾಮ, ಸೀತೆ, ಲಕ್ಷ್ಮಣ, ಭರತ, ಶತ್ರುಘ್ನ, ಹನುಮಂತರ ಪ್ರತಿಮೆಯನ್ನಿಟ್ಟು ಕೊಂಡಿದ್ದು ಯಾಚನೆಯಿಂದ ಪದಾರ್ಥಗಳನ್ನು ಸಂಪಾದಿಸಿಕೊಂಡು ತರುತ್ತಾ ನವಮಿಯ ವ್ರತವನ್ನು ಮಾಡುತ್ತಿದ್ದನು.

ಹೀಗಿರಲು ಒಂದು ದಿನ ಮಳೆ ಬಂದಾಗ ಯಾವುದೋ ನಿಮಿತ್ತದಿಂದ ಅಲ್ಲಿಗೆ ಬಂದಿದ್ದ ರಾಜಭಟರು ತಮ್ಮ ಕುದುರೆಗಳನ್ನು ಅವನ ಮನೆಯಲ್ಲಿ ಕಟ್ಟಲು

ಆತನನ್ನು ಹೊರಗೆ ಹೊರಡಿಸಿದರು. ಹೊರಕ್ಕೆ ಬಂದ ಆ ಬ್ರಾಹ್ಮಣನು ಕೋಪಗೊಂಡು ವಾಯುಪುತ್ರನ ಪ್ರತಿಮೆಯನ್ನು ಆಕಾಶಕ್ಕೆ ಎಸೆಯಲು ಅದು ಗರ್ಜಿಸಿತು. ಆ ಧ್ವನಿಯನ್ನು ಕೇಳಿದ ಪುರುಷ ಸಂಜ್ಞೆಯುಳ್ಳ ಪ್ರಾಣಿಗಳೆಲ್ಲವೂ ಸತ್ತು ಹೋದುವು. ಇವನೊಬ್ಬನು ಮಾತ್ರ ಉಳಿದುಕೊಂಡಿದ್ದನು. ಇದೆಲ್ಲವನ್ನೂ ತಿಳಿದ ಆ ಊರಿನ ಹೆಂಗಸರು ಅವನನ್ನೇ ಗಂಡನನ್ನಾಗಿ ಹೊಂದಿದರು. ಮತ್ತು ಆ ರಾಜ್ಯವನ್ನು ಹೆಂಗಸರೇ ಆಳುತ್ತ ಬಂದರು. ಆ ವಾಯುಪುತ್ರನ ಗರ್ಜನೆಯು ವರ್ಷವರ್ಷಕ್ಕೂ ಕೇಳುತ್ತ ಬಂದುದರಿಂದ ವರ್ಷಕ್ಕೊಮ್ಮೆ ಗಂಡುಗಳೆಲ್ಲವೂ ಸಾಯುತ್ತ ಬಂದುವು. ಇದು ರಾಮನವಮೀ ವ್ರತದಿಂದ ಸಿದ್ಧಿಯನ್ನು ಹೊಂದಿದ ಫಲವೆಂದು ವಿವರಿಸಿದ್ದಾನೆ.

ಆ ಕೇರಳ ದೇಶದಲ್ಲಿ ಗಂಡಸರು ಇಲ್ಲದಿರಲು ಇದೊಂದು ಕಾರಣವನ್ನು ಪೌರಾಣಿಕರೀತಿಯಲ್ಲಿ ಹೇಳಿ ಅವರು ಆಚರಿಸುವ ಕೃತ್ಯಗಳಿಂದಲೂ ಗಂಡು ಸಂತಾನವು ಆಗಲು ಸಾಧ್ಯವಿಲ್ಲವೆಂದು ಆಧುನಿಕ ರೀತಿಯಲ್ಲಿ ಕ್ರಮವಾದ ಕಾರಣವನ್ನೂ ವಿವರಿಸುತ್ತಾನೆ.

ಈ ರೀತಿಯಲ್ಲಿ ನವಮಿಯುವ್ರತಕ್ಕೆ ಪ್ರಾಶಸ್ತ್ಯವನ್ನು ವಿವರಿಸಿರುವನು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಸಪ್ತಮಸ್ಸರ್ಗಃ

॥ ಶ್ರೀರಾಮದಾಸ ಉವಾಚ ॥

ಶೃಣುಷ್ವ ವಿಷ್ಣುದಾಸ ತ್ವಂ ಯತ್ತೇಽಹಂ ಪ್ರವದಾಮ್ಯಹಂ ।
ತುಷ್ಟ್ಯರ್ಥಂ ರಾಮಚಂದ್ರಸ್ಯ ನಿತ್ಯಂ ಪತ್ರೇ ತು ಮಾನವೈಃ ॥ ೧ ॥

ಲೇಖನೀಯಂ ರಾಮನಾಮ ಶತಂ ಚ ನವ ಪ್ರತ್ಯಹಂ ।
ಅಥವಾಷ್ಟೋತ್ತರಶತಂ ಪೂಜನೀಯಂ ಸವಿಸ್ತರಂ ॥ ೨ ॥

ಏವಂ ಕೋಟಿಮಿತಂ ಲೇಖ್ಯಂ ಲಕ್ಷಂ ವಾ ತು ತತಃ ಪರಂ ।
ಹವನಂ ಹಿ ದಶಾಂಶೇನ ಕರ್ತವ್ಯಂ ವಿಧಿಪೂರ್ವಕಂ ॥ ೩ ॥

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡದ ಏಳನೆಯ ಸರ್ಗವು

೧ ಶ್ರೀ ರಾಮದಾಸನು ಹೇಳಿದನು—ಎಲೈ ವಿಷ್ಣುದಾಸನೇ! ನಿನಗೆ ಮತ್ತೊಂದು ವಿಷಯವನ್ನು ಹೇಳುತ್ತೇನೆ. ಕೇಳು. ಜನರು ರಾಮಚಂದ್ರನ ತೃಪ್ತಿಗೋಸ್ಕರವಾಗಿ ನಿತ್ಯವೂ ಕಾಗದದಮೇಲೆ ಅವನ ಹೆಸರನ್ನು ಬರೆಯಬೇಕು.

೨ ಆ ಕಾಗದದಮೇಲೆ ರಾಮಚಂದ್ರನ ಹೆಸರನ್ನು ಶ್ರೀರಾಮ ಶ್ರೀರಾಮ ಎಂಬುದಾಗಿ ಒಂಭೈನೂರುಸಾರಿ ಬರೆಯಬೇಕು. ನೂರೆಂಟುಬಾರಿಯಾದರೂ ಬರೆಯಬಹುದು. ಹಾಗೆ ಬರೆದು ಅವನ್ನು ಷೋಡಶೋಪಚಾರಗಳಿಂದ ಪೂಜಿಸಬೇಕು.

೩. ಈ ರೀತಿಯಾಗಿ ಒಂದು ಕೋಟಿಬಾರಿ ಬರೆಯಬೇಕು. ಅಥವಾ ಒಂದು ಲಕ್ಷಬಾರಿಯಾದರೂ ಬರೆಯಬೇಕು ಅದರ ಹತ್ತರದಲ್ಲಿ ಒಂದು ಭಾಗ ದಷ್ಟು ಬಾರಿ ಹೋಮವನ್ನು ಮಾಡಬೇಕು.

ಇದಂವಿಷ್ಣುರಿತಿ ಋಚಾ ತಿಲಾಜ್ಯೈಃ ಪಾಯಸೇನ ವಾ ।
ನವಾನ್ನೇನಾಥ ವಾ ಕಾರ್ಯಂ ರಾಘವಂ ಪರಿಪೂಜ್ಯ ಚ ॥ ೪ ॥

ಹವನಾಂಗೇ ರಾಘವಾದಿದೇವಾನಾಂ ಪೂಜನೇ ನರೈಃ ।
ಅಸಮರ್ಥೈಸ್ತು ಭದ್ರಂ ಚ ಸ್ಥಾಪನೀಯಂ ಪ್ರಯತ್ನತಃ ॥ ೫ ॥

ಅಷ್ಟೋತ್ತರಸಹಸ್ರಂ ಚ ರಾಮಲಿಂಗಾತ್ಮಕಂ ಶುಭಂ ।
ಅಥವಾಷ್ಟೋತ್ತರಶತಂ ರಾಮಲಿಂಗಾತ್ಮಕಂ ಶುಭಂ ॥ ೬ ॥

ಅಷ್ಟೋತ್ತರಸಹಸ್ರಂ ವಾ ರಾಮತೋಭದ್ರಮುತ್ತಮಂ ।
ಅಥವಾಷ್ಟೋತ್ತರಶತಂ ರಾಮತೋಭದ್ರಮುತ್ತಮಂ ॥ ೭ ॥

ಏವಂ ಹೋಮಂ ಲೇಖನಂ ಚ ಪೂಜನಾದಿ ಚ ಯತ್ಕೃತಂ ।
ಅರ್ಪಯೇದ್ರಘುನಾಥಾಯ ತತ್ಸರ್ವಂ ತ್ವತಿಭಕ್ತಿತಃ ॥ ೮ ॥

॥ ವಿಷ್ಣುದಾಸ ಉವಾಚ ॥

ತ್ವಯಾ ಗುರೋ ಶುಭಂ ಪ್ರೋಕ್ತಂ ರಾಮನಾಮವಿಲೇಖನಂ ।
ನ ತಸ್ಯೋದ್ಯಾಪನಂ ಪ್ರೋಕ್ತಂ ತದ್ವದಸ್ವ ಮಮಾಧುನಾ ॥ ೯ ॥

---

೪. ರಾಮನಿಗೆ ಪೂಜೆಯಾದಮೇಲೆ ಇದಂ ವಿಷ್ಣು ಎಂಬ ಋಕ್ಕನ್ನು ಹೇಳಿ ಆರಳನ್ನಾಗಲೀ, ಪಾಯಸವನ್ನಾಗಲೀ ತೆಗೆದುಕೊಂಡು ಹೋಮವನ್ನು ಮಾಡಬೇಕು.

೫-೭. ಹವನವಾದಮೇಲೆ ಆ ಹವನಾಂಗವಾಗಿ ರಾಮನನ್ನು ಪೂಜಿಸಬೇಕು. ಹಾಗೆ ಪೂಜಿಸಲು ಅಸಮರ್ಥನಾದವನೂ ಕೂಡ ಸಾವಿರದೆಂಟು ರಾಮಲಿಂಗತೋಭದ್ರವನ್ನಾಗಲೀ ನೂರೆಂಟು ರಾಮಲಿಂಗತೋಭದ್ರವನ್ನಾಗಲೀ ಸ್ಥಾಪಿಸಬೇಕು.

೮. ಈ ರೀತಿಯಾಗಿ ಹೋಮವನ್ನು ಲೇಖನವನ್ನು ಯಾವುದನ್ನು ಮಾಡಿರುವನೋ ಅದೆಲ್ಲವನ್ನೂ ರಾಮನಿಗೆ ಅತಿಭಕ್ತಿಯಿಂದ ಸಮರ್ಪಿಸಬೇಕು.

೯. ವಿಷ್ಣುದಾಸನು ಹೇಳಿದನು–ಎಲೈ ಗುರುವೇ ! ಶುಭವಾದ ರಾಮನಾಮವನ್ನು ಬರೆಯುವಿಕೆಯನ್ನು ಹೇಳಿದೆ. ಆದರ ಉದ್ಯಾಪನೆಯನ್ನು ಮಾತ್ರ ಹೇಳಲೇ ಇಲ್ಲ. ಈಗ ಅದನ್ನು ಹೇಳು.

॥ ಶ್ರೀರಾಮದಾಸ ಉವಾಚ ॥

ಶ್ರೃಣು ಶಿಷ್ಯ ಭವಿಷ್ಯಾಂ ತೇ ಕಥಾಂ ವಕ್ಷ್ಯಾಮಿ ಭೂತವತ್ ।
ರಾಮನಾಮೋದ್ಯಾಪನಾಂ ಸವಿಸ್ತರೇಣ ಮನೋರಮಾಂ ॥ ೧೦ ॥

ಪಾಂಡುಪುತ್ರೋ ಮಹಾವೀರೋ ಬಂಧುಭಿಶ್ಚ ಯುಧಿಷ್ಠಿರಃ ।
ಸ್ತ್ರಿಯಾ ಮಾತ್ರಾ ರಾಜ್ಯಭ್ರಷ್ಟೋ ವನೇ ವಾಸಂ ಕರಿಷ್ಯತಿ ॥ ೧೧ ॥

ತಂ ದ್ರಷ್ಟುಂ ದ್ವಾಪರೇ ಕೃಷ್ಣಃ ಕದಾ ಗಚ್ಛತಿ ವೈ ವನೇ ।
ತಂ ಕೃಷ್ಣಂ ಪೂಜಯಿತ್ವಾ ತು ತಸ್ಮೈ ಪ್ರಶ್ನಂ ಕರಿಷ್ಯತಿ ॥ ೧೨ ॥

॥ ಯುಧಿಷ್ಠಿರ ಉವಾಚ ॥

ದೇವ ದೇವ ಜಗನ್ನಾಥ ಭಕ್ತಾನಾಂ ವರದಾಯಕ ।
ಕಿಂಚಿತ್ತ್ವಾಂ ಪ್ರಷ್ಟುಮಿಚ್ಛಾಮಿ ಮಯಿ ತುಷ್ಟೋಸಿ ಚೇತ್ಪ್ರಭೋ ॥

---

೧೦. ಶ್ರೀರಾಮದಾಸನು ಹೇಳಿದನು–ಎಲೈ ಶಿಷ್ಯನೇ! ಮುಂದೆ ನಡೆಯತಕ್ಕ ಕಥೆಯನ್ನು ಹಿಂದೆ ನಡೆದಂತೆಯೇ ಹೇಳುತ್ತೇನೆ. ಕೇಳು. ರಾಮ ರಾಮನಾಮದ ಉದ್ಯಾಪನೆಯನ್ನು ವಿಸ್ತಾರವಾಗಿ ಹೇಳುತ್ತೇನೆ.

೧೧. ಮಹಶಕ್ತನಾದ ಪಾಂಡುವಿನ ಮಗನಾದ ಯುಧಿಷ್ಠಿರನು ರಾಜ್ಯಭ್ರಷ್ಟನಾಗಿ ತಾಯಿ ತಮ್ಮಂದಿರು ಹೆಂಡರುಗಳೊಡನೆ ಕಾಡಿಗೆ ಹೋಗಿ ವಾಸಮಾಡುವನು.

೧೧. ದ್ವಾಪರದಲ್ಲಿ ಶ್ರೀಕೃಷ್ಣನು ಆ ಯುಧಿಷ್ಠರನನ್ನು ನೋಡಲು ಹೋದಾಗ ಆ ಕಾಡಿನಲ್ಲಿ ಯುಧಿಷ್ಠಿರನು ಆ ಕೃಷ್ಣನನ್ನು ಪೂಜಿಸಿ ಅವನನ್ನು ಕುರಿತು ಪ್ರಶ್ನಿಸುವನು.

೧೩. ಯುಧಿಷ್ಠಿರನು ಹೇಳಿದನು--ದೇವ ದೇವನೇ! ಜಗನ್ನಾಥನೇ! ಭಕ್ತರಿಗೆ ವರವನ್ನು ಕೊಡತಕ್ಕವನೇ! ನೀನು ನನ್ನ ವಿಷಯದಲ್ಲಿ ಸಂತೋಷ ಗೊಂಡಿದ್ದರೆ ಒಂದು ವಿಷಯವನ್ನು ಕೇಳಬೇಕೆಂದಿದ್ದೇನೆ.

ಲಕ್ಷ್ಮೀಪ್ರಾಪ್ತಿಕರಂ ಪುಣ್ಯಂ ಪುತ್ರಪೌತ್ರಪ್ರವರ್ಧನಂ ।
ವ್ರತಮಾಖ್ಯಾಹಿ ದೇವೇಶ ರಾಜ್ಯಭ್ರಷ್ಟಸ್ಯ ಮೇಧುನಾ ॥ ೧೪ ॥

॥ ಶ್ರೀಕೃಷ್ಣ ಉವಾಚ ॥

ಗುಹ್ಯಾದ್ಗುಹ್ಯತಮಂ ಶ್ರೋತುಂ ಯದಿ ವಾಂಛಸಿ ಭೂಪತೇ ।
ತದಾ ನಿಗದತೋ ಮತ್ತಸ್ಸಕಾಶಾಚ್ಛೃಣು ಸಾದರಂ ॥ ೧೫ ॥

ರಾಮನಾಮ್ನಃ ಪರಂ ನಾಸ್ತಿ ಮೋಕ್ಷಲಕ್ಷ್ಮೀಪ್ರದಾಯಕಂ ।
ತೇಜೋರೂಪಂ ಯದವ್ಯಕ್ತಂ ರಾಮನಾಮಾಭಿಧೀಯತೇ ॥ ೧೬ ॥

ತಸ್ಮಾತ್ತನ್ನಾಮ ಜಪ್ತ್ವಾ ವೈ ರಾಮರೂಪೋ ಭವೇನ್ನರಃ ।
ಏತದೇವ ಹಿ ರಾಮೇಣ ಮಾರುತಿಂ ಪ್ರತಿಭಾಷಿತಂ ॥ ೧೭ ॥

---

೧೪. ಎಲೈ ದೇವನೇ! ನಾನು ರಾಜ್ಯದಿಂದ ಭ್ರಷ್ಟನಾಗಿದ್ದೇನೆ ಇಂತಹ ನನಗೆ ಪುಣ್ಯಕರವಾದ ಲಕ್ಷ್ಮಿಯನ್ನು ಒದಗಿಸುವ ಮಕ್ಕಳು ಮೊಮ್ಮಕ್ಕಳನ್ನು ಹೆಚ್ಚಿಸುವ ಯಾವುದಾದರೂ ಒಂದು ವ್ರತವನ್ನು ಹೇಳು.

೧೫. ಶ್ರೀಕೃಷ್ಣನು ಹೇಳಿದನು-ಎಲೈ ಭೂಪತಿಯೇ! ಗುಟ್ಟಿನಲ್ಲಿಯೂ ಗುಟ್ಟಾದ ವಿಷಯವಿರುವುದು. ನಿನಗೆ ಅದರಲ್ಲಿ ಇಷ್ಟವಿದ್ದರೆ ನಾನು ಹೇಳುತ್ತೇನೆ. ಆದರದಿಂದ ಕೇಳು.

೧೬. ಮೋಕ್ಷವನ್ನು ಕೊಡತಕ್ಕದ್ದೂ, ಲಕ್ಷ್ಮಿಯನ್ನು ಕೊಡತಕ್ಕದ್ದೂ ಕೂಡ ರಾಮನಾಮಕ್ಕಿಂತ ಬೇರೊಂದು ಯಾವುದೂ ಇಲ್ಲ. ಯಾವುದು ಅವ್ಯಕ್ತವಾದ ತೇಜೋರೂಪ ಬ್ರಹ್ಮವೋ ಅದೇ ರಾಮನಾಮದಿಂದ ಹೇಳಲ್ಪಡುತ್ತದೆ.

೧೭. ಆದ್ದರಿಂದ ಆ ರಾಮನಾಮವನ್ನು ಜಪಿಸಿದರೆ ಅವನು ರಾಮರೂಪನೇ ಆಗುವನು. ರಾಮನು ಇದೇ ವಿಷಯವನ್ನು ಕುರಿತು ಮಾರುತಿಗೆ ಹೇಳಿರುವನು.

॥ ಯುಧಿಷ್ಠಿರ ಉವಾಚ ॥

ಕಸ್ಮಿನ್ಕಾಲೇ ಹನುಮತೇ ರಾಮೋಽಸ್ಯೈಪೋಪದೇಶಿತಂ ।
ಏತದ್ವಿಸ್ತಾರತೋ ಬ್ರೂಹಿ ಸುಮತೇ ರುಕ್ಮಿಣೀಪತೇ ॥ ೧೮ ॥

॥ ಶ್ರೀಕೃಷ್ಣ ಉವಾಚ ॥

ಪುರಾ ರಾಮಾವತಾರೇ ಚ ಸೀತಾ ನೀತಾ ಸುರಾರಿಣಾ ।
ಹನೂಮಂತಂ ಸಮಾಹೂಯ ರಾಮಚಂದ್ರೋಽಬ್ರವೀದ್ವಚಃ ॥ ೧೯ ॥

॥ ಶ್ರೀರಾಮಚಂದ್ರ ಉವಾಚ ॥

ವಾಯುಸೂನೋ ಮಹಾವೀರ ಸೀತಾನ್ವೇಷಣಹೇತವೇ ।
ಸಮಸ್ತಾಂ ದಕ್ಷಿಣದಿಶಂ ಗತ್ವಾ ಶುದ್ಧಿಂ ಸಮಾನಯ ॥ ೨೦ ॥

॥ ಶ್ರೀ ಹನುಮಾನುವಾಚ ॥

ರಘುನಾಥ ಜಗನ್ನಾಥ ದಕ್ಷಿಣಸ್ಯಾಂ ಹಿ ಸಾಗರಃ ।
ಬಹವೋ ರಾಕ್ಷಸಾಸ್ಸಂತಿ ತತ್ರ ಶಕ್ತಿಃ ಕಥಂ ಮಮ ॥ ೨೧ ॥

---

೧೮. ಯುಧಿಷ್ಠಿರನು ಹೇಳಿದನು--ಎಲೈ ಕೃಷ್ಣನೇ ! ರಾಮನು ಹನುಮಂತನಿಗೆ ಉಪದೇಶಿಸಿದುದು ಯಾವ ಕಾಲದಲ್ಲಿ ? ಬುದ್ಧಿವಂತನಾದ ರುಕ್ಮಿಣೀಪತಿಯೇ ? ಇದನ್ನು ವಿಸ್ತಾರವಾಗಿ ಹೇಳು.

೧೯. ಶ್ರೀಕೃಷ್ಣನು ಹೇಳಿದನು-ಪೂರ್ವದಲ್ಲಿ ರಾಮಾವತಾರವನ್ನು ವಿಷ್ಣುವು ಮಾಡಿದಾಗ ಸುರಾರಿಯಾದ ರಾವಣನು ಸೀತೆಯನ್ನು ಕದ್ದುಕೊಂಡು ಹೋದನು. ಆಗ ರಾಮನು ಹನುಮಂತನನ್ನು ಕರೆದು ಇಂತೆಂದು ಹೇಳಿದನು.

೨೦. ಶ್ರೀರಾಮಚಂದ್ರನು ಹೇಳಿದನು—ಮಹಾವೀರನಾದ ವಾಯುಸೂನುವೇ ! ಸೀತೆಯನ್ನು ಹುಡುಕಿಕೊಂಡು ಬರುವುದಕ್ಕೋಸ್ಕರ ನೀನು ದಕ್ಷಿಣದ ದಿಕ್ಕಿಗೆಲ್ಲಾ ಹೋಗಿ ಸಂಚರಿಸಿ ಆಕೆಯ ಸುದ್ದಿಯನ್ನು ತೆಗೆದುಕೊಂಡು ಬಾ.

೨೧. ಶ್ರೀ ಹನುಮಂತನು ಹೇಳಿದನು—ಜಗನ್ನಾಥನಾದ ರಘುನಾಥನೇ ! ದಕ್ಷಿಣದಿಕ್ಕಿನಲ್ಲಿ ಸಮುದ್ರವು ಇರುವುದು. ಅಲ್ಲದೆ ಬಹು ಜನ ರಾಕ್ಷಸರಿರುವರು. ಅಲ್ಲಿಗೆ ಹೋಗಲು ನನಗೆ ಶಕ್ತಿಯು ಹೇಗೆ ಬರಬೇಕು ?

॥ ಶ್ರೀರಾಮಚಂದ್ರ ಉವಾಚ ॥

ಮಾರುತೇ ರಾವಣಾದೀನಾಂ ರಾಕ್ಷಸಾನಾಂ ನಿವಾರಕಂ ।
ಮಂತ್ರಂ ದದಾಮಿ ಸುಗಮಂ ಯೇನ ಸರ್ವಜಯೋ ಭವೇತ್ ॥ ೨೨ ॥

॥ ಹನುಮಾನುವಾಚ ॥

ಮಹಾರಾಜ ಕೃಪಾಸಿಂಧೋ ದೀನಾನಾಂ ತ್ವಂ ಸುತಾರಕಃ ।
ಉಪದೇಶೋಧುನಾ ಕಾರ್ಯಸ್ತಸ್ಯ ಮಂತ್ರಸ್ಯ ತತ್ವತಃ ॥ ೨೩ ॥

॥ ಶ್ರೀರಾಮದಾಸ ಉವಾಚ ॥

ಇತಿ ಶ್ರುತ್ವಾ ಚ ತದ್ವಾಕ್ಯಂ ರಹಸ್ಯಾಹೂಯ ಸತ್ವರಂ ।
ಮಾರುತೇರ್ದಕ್ಷಿಣೇ ಕರ್ಣೇ ಶ್ರೀರಾಮೇತ್ಯುಪದೇಶಿತಃ ॥ ೨೪ ॥

ತಸ್ಯ ಮಂತ್ರಸ್ಯ ಸಕಲಂ ಪುರಶ್ಚರಣಮುತ್ತಮಂ ।
ಲಕ್ಷಸಂಖ್ಯಂ ವಿಧಾಯಾಶು ಪ್ರತಸ್ಥೇ ದಕ್ಷಿಣಾಂ ದಿಶಂ ॥ ೨೫ ॥

---

೨೨. ಶ್ರೀರಾಮಚಂದ್ರನು ಹೇಳಿದನು-ಎಲೈ ಮಾರುತಿಯೇ ! ರಾವಣನೇ ಮುಂತಾದ ರಾಕ್ಷಸರನ್ನು ತಡೆಯುವ ಒಂದು ಸುಲಭವಾದ ಮಂತ್ರವನ್ನು ಉಪದೇಶಿಸುತ್ತೇನೆ. ಅದು ಬಹು ಸುಲಭವಾಗಿ ತಿಳಿಯತಕ್ಕದ್ದಾಗಿದೆ. ಅದರಿಂದ ಎಲ್ಲೆಡೆಯಲ್ಲಿಯೂ ಜಯವಾಗುತ್ತದೆ.

೨೩. ಹನುಮಂತನು ಹೇಳಿದನು-ಮಹಾರಾಜನೇ ! ಕೃಪಾಸಮುದ್ರನೇ ! ದೀನರನ್ನು ಕಾಪಾಡುವವನೇ ! ಆ ಮಂತ್ರದ ಸರಿಯಾದ ಉಪದೇಶವನ್ನು ಈವಾಗ ಮಾಡತಕ್ಕದ್ದು.

೨೪. ಶ್ರೀರಾಮದಾಸನು ಹೇಳಿದನು—ಹನುಮಂತನು ಹೀಗೆ ಹೇಳಿದುದನ್ನು ಕೇಳಿ ಅವನನ್ನು ರಹಸ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಆ ಮಾರುತಿಯ ಬಲಗಡೆಯ ಕಿವಿಯಲ್ಲಿ ಶ್ರೀರಾಮ ಎಂಬುದಾಗಿ ಉಪದೇಶ ಮಾಡಿದನು.

೨೫-೨೬. ಅನಂತರ ಆ ಹನುಮಂತನು ಆ ಮಂತ್ರವನ್ನು ಲಕ್ಷಬಾರಿ ಜಪಿಸಿ ಅನಂತರ ದಕ್ಷಿಣದಿಕ್ಕಿಗೆ ಸೀತೆಯನ್ನು ಹುಡುಕಲು ಹೊರಟನು.

ತನ್ಮಂತ್ರಸ್ಯ ಪ್ರಭಾವೇನ ನಾನಾಜಲಚರಾಕುಲಂ ।
ದುರ್ಗಮಂ ಸಾಗರಂ ತೀರ್ತ್ವಾ ಲಂಕಾಮಧ್ಯೇ ಸಮಾಯಯೌ ॥ ೨೬ ॥

ನ ಸ ಲೇಭೇ ತತ್ರ ಶುದ್ಧಿಮಶೋಕಾಖ್ಯಂ ವನಂ ಗತಃ ।
ವೃಕ್ಷಮೂಲೇ ಸ್ಥಿತಾಂ ಸೀತಾಂ ದೂರತೋಗ್ರೇ ದದರ್ಶ ಸಃ ॥ ೨೭ ॥

ತಾಂ ದೃಷ್ಟ್ವಾ ಶೀಘ್ರಮಾಗತ್ಯ ಹರ್ಷನಿರ್ಭರಮಾನಸಃ ।
ಸೀತಾಯಾಶ್ಚರಣೌ ನತ್ವಾ ದಂಡವತ್ಪತಿತೋ ಭುವಿ ॥ ೨೮ ॥

ಅತ್ಯಂತಂ ಸೂಕ್ಷ್ಮವಪುಷಂ ಬಾಲಕಾಕಾರಸಂಯುತಂ ।
ತಂ ಭೂಮೌ ಪತಿತಂ ದೃಷ್ಟ್ವಾ ಸೀತಾ ವಚನಮಬ್ರವೀತ್ ॥ ೨೯ ॥

ಆ ಮಂತ್ರದ ಪ್ರಭಾವದಿಂದಲೇ ಅನೇಕ ಬಗೆಯಾದ ನೀರಿನ ದುಷ್ಟಪ್ರಾಣಿಗಳಿಂದ ಕೂಡಿರುವ ದಾಟಲು ಅಸಾಧ್ಯವಾದ ಸಮುದ್ರವನ್ನು ದಾಟಿ ಲಂಕೆಯ ಮಧ್ಯಕ್ಕೆ ಬಂದನು.

೨೭. ಆ ಲಂಕೆಯ ಮಧ್ಯದಲ್ಲಿ ಸೀತೆಯ ಸುದ್ದಿಯು ಸಿಕ್ಕದಿರಲು ಅಶೋಕ ವೆಂಬ ವನಕ್ಕೆ ಬಂದನು. ಅಲ್ಲಿ ಎದುರಿಗೆ ಒಂದು ಮರದ ಬುಡದಲ್ಲಿ ಕುಳಿತಿರುವ ಸೀತೆಯನ್ನು ನೋಡಿದನು.

೨೮. ಆಕೆಯನ್ನು ನೋಡಿ ಹರ್ಷದಿಂದ ಕೂಡಿದ ಮನಸ್ಸುಳ್ಳವನಾಗಿ ಆಕೆಯ ಬಳಿಗೆ ಬಂದು ದೀರ್ಘದಂಡವಾಗಿ ನಮಸ್ಕರಿಸುತ್ತ ನೆಲದಮೇಲೆಯೇ ಮಲಗಿದನು.

೨೯. ಬಹುವಾಗಿ ಸಣ್ಣ ಪ್ರಾಣಿಯಾಗಿ ಮಗುವಿನ ಆಕಾರವನ್ನು ಹೊಂದಿ ನೆಲದಮೇಲೆ ನಮಸ್ಕಾರಮಾಡುತ್ತ ಮಲಗಿರುವ ಆ ಹನುಮಂತನನ್ನು ನೋಡಿ ಸೀತೆಯು ಇಂತೆಂದಳು.

ಆಗತೋಽಸಿ ಕುತೋ ಬಾಲ ಕುತ್ರ ತ್ವಂ ಕಸ್ಯ ಬಾಲಕಃ ।

॥ ಹನುಮಾನುವಾಚ ॥

ಸೀತಾ ಮಾತಾ ಪಿತಾ ರಾಮೋ ರಾಮಚಂದ್ರಸಮೀಪತಃ ॥ ೩೦ ॥

ಸಮಾಗತೋಽಸ್ಮಿ ಹನುಮಾನ್ ಗ್ರಾಹ್ಯೇಯಂ ಮುದ್ರಿಕಾ ತ್ವಯಾ ।
ರಾಮನಾಮಾಂಕಿತಾಂ ಮುದ್ರಾಂ ಶುದ್ಧಕಾಂಚನನಿರ್ಮಿತಾಂ ॥ ೩೧ ॥

ಜ್ಞಾತ್ವಾ ರಾಮಸ್ಯ ಸಾ ಸೀತಾ ಪರಮಂ ತೋಷಮಾಯಯೌ ।
ತಾಂ ಜ್ಞಾತ್ವಾ ತೋಷಸಹಿತಾಮಾಂಜನೇಯೋಽಬ್ರವೀದ್ವಚಃ ॥ ೩೨ ॥

ಮಾತಃ ಕ್ಷುಧಾಸ್ತ್ಯತಿ ಮಮ ತ್ವದ್ಯ ವಿಕ್ಲೇಶಕಾರಿಣೀ ।
ಅಸ್ಮಿನ್ವನೇತಿಮಧುರಃ ಫಲಸಂಘೋಽತಿದುರ್ಲಭಃ ॥ ೩೩ ॥

---

೩೦. ಸೀತೆಯು ಹೇಳಿದಳು—ಎಲೈ ಬಾಲನೇ! ನೀನು ಎಲ್ಲಿಂದ ಬಂದಿದ್ದೀಯೆ? ನೀನು ಎಲ್ಲಿಯವನು? ಯಾರ ಮಗನು? ಹನುಮಂತನು ಹೇಳಿದನು–ಅಮ್ಮ, ನನಗೆ ಸೀತೆಯೇ ತಾಯಿಯು, ರಾಮನೇ ತಂದೆಯು. ಆ ರಾಮಚಂದ್ರನ ಸಮೀಪದಿಂದ ಬಂದಿದ್ದೇನೆ.

೩೧–೩೨. ನನ್ನ ಹೆಸರು ಹನುಮಂತನೆಂಬುದಾಗಿರುವುದು. ಈ ಮುದ್ರಿಕೆಯನ್ನು ನೀನು ತೆಗೆದುಕೋ ಎಂದು ಕೊಡಲು ಸೀತೆಯು ರಾಮನ ಹೆಸರನ್ನು ಬರೆದಿರುವ ಉತ್ತಮವಾದ ಚಿನ್ನದಿಂದ ಮಾಡಿರುವ ಆ ಉಂಗುರವನ್ನು ರಾಮನದೆಂದು ತಿಳಿದುಕೊಂಡು ತೆಗೆದುಕೊಂಡು ನೋಡಿ ಬಹುವಾಗಿ ಸಂತೋಷಗೊಂಡಳು ಆಂಜನೇಯನು ಸೀತೆಯು ಸಂತೋಷಗೊಂಡಿರುವುದನ್ನು ನೋಡಿ ಆಕೆಯನ್ನು ಕುರಿತು ಇಂತೆಂದನು.

೩೩. ಅಮ್ಮ ಈಗ ನನಗೆ ಹಸಿವು ಬಹುವಾಗಿದೆ. ಅದರಿಂದ ನಾನು ಬಳಲುತ್ತಿದ್ದೇನೆ ಈ ವನದಲ್ಲಿ ಯಾವುವೋ ಅನೇಕ ಬಗೆಯ ಹಣ್ಣುಗಳು ಗೊಂಚಲು ಗೊಂಚಲಾಗಿವೆ. ಇವು ಮತ್ತೆಲ್ಲಿಯೂ ದೊರಕದ ಅಪೂರ್ವವಾದ ಹಣ್ಣುಗಳೂ ಆಗಿವೆ.

ತವಾಜ್ಞಯಾಹಂ ಸೀತೇದ್ಯ ಕರಿಷ್ಯೇ ಭಕ್ಷಣಂ ಧ್ರುವಂ ।

॥ ಸಿತೋವಾಚ ॥

ಭೋ ಬಾಲಕ ಮಹಾವೀರ ರಾವಣೋಽಸ್ತಿ ವನಾಧಿಪಃ ॥ ೩೪ ॥

ನ ಶಕ್ತಿರ್ನ ಚ ಶಕ್ಯಂ ತೇ ಕಥಂ ತ್ವಂ ಭಕ್ಷಯಿಷ್ಯಸಿ ।

॥ ಹನುಮಾನುವಾಚ ॥

ಶ್ರೀರಾಮೇತಿ ಪರೋ ಮಂತ್ರಶ್ಶಸ್ತ್ರಂ ಮೇ ಹೃದಯಾಂತರೇ ॥ ೩೫ ॥

ತೇನ ಸರ್ವಾಣಿ ರಕ್ಷಾಂಸಿ ತೃಣರೂಪಾಣಿ ಸಾಂಪ್ರತಂ ।
ಇತ್ಯುಕ್ತ್ವಾಥ ತದೀಯಾಜ್ಞಾಂ ಗೃಹಿತ್ವಾ ವನಭೂರುಹಾನ್ ॥ ೩೬ ॥

ಉನ್ಮೂಲನಂ ಚಕಾರಾಥ ಶ್ರುತ್ವಾ ರಕ್ಷಾಂಸಿ ಚಾಯಯುಃ ।
ಯುದ್ಧಂ ಚ ತುಮುಲಂ ಜಾತಂ ಪಶ್ಚಾನ್ಮಂತ್ರಪ್ರಭಾವತಃ ॥ ೩೭ ॥

---

೩೪. ಎಲೈ ಸೀತೆಯೇ! ನೀನು ಅಪ್ಪಣೆಮಾಡಿದರೆ ನಿನ್ನ ಅಪ್ಪಣೆಯ ಮೇರೆಗೆ ನಾನು ಇವನ್ನು ತಿಂದು ಹಸಿವನ್ನು ಅಡಗಿಸಿಕೊಳ್ಳುತ್ತೇನೆ. ಖಂಡಿತ. ಸೀತೆಯು ಹೇಳಿದಳು—ಎಲೈ ಬಾಲಕನೇ! ಮಹಾ ವೀರನಾದ ರಾವಣನು ಈ ವನಕ್ಕೆ ಅಧಿಪತಿಯಾಗಿರುವನು.

೩೫. ನಿನಗಾದರೋ ಶಕ್ತಿಯಿಲ್ಲ. ನಿನಗೆ ಇದು ಶಕ್ಯವೂ ಅಲ್ಲ. ಆದ್ದರಿಂದ ನೀನು ಇದನ್ನು ಹೇಗೆ ತಿನ್ನುತ್ತೀಯೆ? ಎಂದಳು. ಹನುಮಂತನು ಹೇಳಿದನು—ಶ್ರೀರಾಮ ಎಂಬ ಉತ್ತಮವಾದ ಮಂತ್ರರೂಪವಾದ ಶಸ್ತ್ರವು ಹೃದಯದೊಳಗೆ ಇರುವುದು.

೩೬. ಆದ್ದರಿಂದ ರಾಕ್ಷಸರೆಲ್ಲರೂ ಈಗ ನನಗೆ ಹುಲ್ಲಿಗೆ ಸಮರಾದವರಾಗಿದ್ದಾರೆ. ಹೀಗೆಂದು ಹೇಳಿ ಆಕೆಯ ಅಪ್ಪಣೆಯನ್ನು ಹೊಂದಿ ಅಲ್ಲಿರುವ ಮರಗಳನ್ನು ಕಿತ್ತೊಗೆದನು.

೩೭. ಇದನ್ನು ಆ ರಾಕ್ಷಸರು ಕೇಳಿ ಅಲ್ಲಿಗೆ ಬಂದರು. ಆಗ ಅವರಿಗೂ ಹನುಮಂತನಿಗೂ ತುಮುಲಯುದ್ಧವು ನಡೆಯಿತು. ಅನಂತರ ಈ ರಾಮ ಮಂತ್ರದ ಪ್ರಭಾವದಿಂದ ಹನುಮಂತನು ಆ ರಾಕ್ಷಸರನ್ನೆಲ್ಲಾ ಕೊಂದನು.

ದಳಿತಂ ರಾಕ್ಷಸಬಲಂ ದಗ್ಧಾ ಲಂಕಾ ಹನೂಮತಾ ।
ಪುನರ್ಗತ್ವಾಶೋಕವನಂ ಸೀತಾಂ ನತ್ವಾ ಚ ಮಾರುತಿಃ ॥ ೩೮ ॥

ತದಲಂಕಾರಮಾದಾಯ ರಾಮಚಂದ್ರಂ ಸಮಾಯಯೌ ।
ರಾಮಾಯಾಲಂಕೃತಂ ದತ್ವಾ ತಸ್ಥೌ ತತ್ಪಾದಸನ್ನಿಧೌ ॥ ೩೯ ॥

ರಾಮೋಽಲಂಕೃತಿಮಾದಾಯ ತಚ್ಛ್ರುತ್ವಾ ಮುದಿತೋಽಭವತ್ ।
ರಾಮನಾಮಪ್ರಭಾವೋಽಯಂ ಮಹಾರಾಜ ಯುಧಿಷ್ಠಿರ ॥ ೪೦ ॥

ತಸ್ಮಾತ್ತ್ವಮಪಿ ರಾಜೇಂದ್ರ ರಾಮನಾಮ ಜಪಂ ಕುರು ।

॥ ಯುಧಿಷ್ಠಿರಉವಾಚ ॥

ಕಥಂ ಜಪೋ ವಿಧೇಯೋಽಸ್ಯ ಪುರಶ್ಚರಣಕಂ ಫಲಂ ॥ ೪೧ ॥

---

೩೮. ಅನಂತರ ಆ ಹನುಮಂತನು ಆ ಲಂಕಾಪಟ್ಟಣವನ್ನೇ ಸುಟ್ಟು ಬಿಟ್ಟನು. ಮತ್ತೆ ಅಶೋಕವನಕ್ಕೆ ಹೋದನು. ಸೀತೆಗೆ ನಮಸ್ಕರಿಸಿದನು.

೩೯. ಅವಳ ಕೈಯಿಂದ ಚೂಡಾಮಣಿಯೆಂಬ ಒಡವೆಯನ್ನು ತೆಗೆದು ಕೊಂಡು ರಾಮಚಂದ್ರನ ಬಳಿಗೆ ಬಂದನು. ರಾಮನಿಗೆ ಆ ಒಡವೆಯನ್ನು ಕೊಟ್ಟು ಅವನ ಪಾದಸನ್ನಿಧಿಯಲ್ಲಿ ನಿಂತುಕೊಂಡನು.

೪೦. ರಾಮನು ಆ ಒಡವೆಯನ್ನು ತೆಗೆದುಕೊಂಡು ಆ ಸೀತೆಯ ವಿಷಯ ವನ್ನು ಕೇಳಿ ಸಂತೋಷಪಟ್ಟನು. ಎಲೈ ಮಹಾರಾಜನಾದ ಯುಧಿಷ್ಠಿರನೇ! ಈ ರಾಮನಾಮದ ಪ್ರಭಾವವು ಈ ರೀತಿಯಾದುದು.

೪೧. ಎಲೈ ರಾಜನೇ! ಆದ್ದರಿಂದ ನೀನೂ ಕೂಡ ರಾಮನಾಮದ ಜಪವನ್ನು ಮಾಡು. ಯುಧಿಷ್ಠಿರನು ಹೇಳಿದನು—ಈ ರಾಮನಾಮದ ಮಂತ್ರದ ಜಪವನ್ನು ಹೇಗೆ ಮಾಡಬೇಕು? ಪುನಶ್ಚರಣೆ ಮಾಡುವುದರಿಂದ ಬರುವ ಫಲವೇನು?

ಕಥಮುದ್ಯಾಪನಂ ಚೈವ ಸರ್ವಮಾಖ್ಯಾಹಿ ಯತ್ನತಃ ।
॥ ಶ್ರೀಕೃಷ್ಣ ಉವಾಚ ॥
ಸ್ನಾತ್ವಾ ಶುಚಿಸ್ಥಲೇ ಜಾಪ್ಯೋ ತುಲಸೀಮಾಲಯೇತಿ ಚ ॥ ೪೨ ॥

ಅಥವಾ ಪುಸ್ತಕೇ ಲೇಖ್ಯಂ ಸ್ಮರಣಂ ಹೃದಯೇಥವಾ ।
ಕೋಟಿಸಂಖ್ಯಾಪರಿಮಿತಮಥವಾ ಲಕ್ಷಸಮ್ಮಿತಂ ॥ ೪೩ ॥

ಮಂತ್ರಾ ನಾನಾವಿಧಾಸ್ಸಂತಿ ಶತಶೋ ರಾಘವಸ್ಯ ಚ ।
ತೇಭ್ಯಸ್ತ್ವೇಕಂ ವದಾಮ್ಯದ್ಯ ತವ ಮಂತ್ರಂ ಯುಧಿಷ್ಠಿರ ॥ ೪೪ ॥

ಶ್ರೀಶಬ್ಧಪೂರ್ವಂ ಜಯಶಬ್ದಮಧ್ಯಂ
ಜಯದ್ವಯೇನಾಪಿ ಪುನಃ ಪ್ರಯುಕ್ತಂ
ತ್ರಿಸ್ಸಪ್ತಕೃತ್ವೋ ರಘುನಾಥನಾಮ ।
ಜಪೋ ನಿಹನ್ಯಾದ್ದ್ವಿಜಕೋಟಿಹತ್ಯಾಃ ॥ ೪೫ ॥

೪೨-೪೩. ಉದ್ಯಾಪನೆಯನ್ನು ಹೇಗೆ ಮಾಡಬೇಕು? ಅದೆಲ್ಲವನ್ನೂ ಕೂಡ ಸರಿಯಾಗಿ ಹೇಳು. ಶ್ರೀ ಕೃಷ್ಣನು ಹೇಳಿದನು—ಮನುಷ್ಯನು ಸ್ನಾನ ಮಾಡಿ ನಿತ್ಯಕರ್ಮಗಳನ್ನು ಮಾಡಿಕೊಂಡು ಶುಚಿಯಾದ ಸ್ಥಳದಲ್ಲಿ ಕುಳಿತುಕೊಂಡು ತುಲಸೀಮಾಲೆಯನ್ನು ಹಿಡಿದು ಜಪವನ್ನು ಮಾಡಬೇಕು. ಅಥವಾ ಮಂತ್ರವನ್ನು ಪುಸ್ತಕದಲ್ಲಿ ಬರೆಯಬೇಕು. ಅಥವಾ ಮನಸ್ಸಿನಲ್ಲಿಯೇ ಜಪಿಸಬೇಕು. ಒಂದು ಲಕ್ಷದಷ್ಟನ್ನಾದರೂ ಮಾಡಬೇಕು.

೪೪. ರಾಮಮಂತ್ರಗಳು ನಾನಾ ಬಗೆಯಾಗಿ ಸಾವಿರಾರು ರೀತಿಯಲ್ಲಿವೆ. ಎಲೈ ಯುಧಿಷ್ಠಿರನೇ! ಅವುಗಳೊಳಗೆ ನಿನಗೆ ಒಂದು ಮಂತ್ರವನ್ನು ಹೇಳುತ್ತೇನೆ.

೪೫. ಶ್ರೀ ಶಬ್ದವೇ ಮೊದಲಲ್ಲಿ ಇರಬೇಕು. ಜಯ ಶಬ್ದವು ಮಧ್ಯದಲ್ಲಿ ಇರಬೇಕು. ಮತ್ತೆ ಜಯ ಶಬ್ದವನ್ನು ಎರಡು ಬಾರಿ ಉಪಯೋಗಿಸಬೇಕು. ಎಂದರೆ "ಶ್ರೀ ರಾಮ ಜಯ ರಾಮ ಜಯ ಜಯ ರಾಮ" ಎಂದಾಗುವುದು. ಇದನ್ನು ಇಪ್ಪತ್ತೊಂದು ಬಾರಿ ಜಪಿಸಿದರೆ ಕೋಟಿ ಬ್ರಹ್ಮಹತ್ಯೆಗಳನ್ನಾದರೂ ನಾಶಮಾಡುತ್ತದೆ.

ಅನೇನೈವ ಚ ಮಂತ್ರೇಣ ಜಪಃ ಕಾರ್ಯಸ್ಸುಮೇಧಸಾ ।
ಲಕ್ಷಸಂಖ್ಯೇ ಕೃತೇ ತಸ್ಮಿನ್ನುದ್ಯಾಪನವಿಧಿಂ ಚರೇತ್ ॥ ೪೬ ॥

ಜಪಾಚ್ಛತಗುಣಂ ಪುಣ್ಯಂ ರಾಮನಾಮಪ್ರಲೇಖನೇ ।
ಲಕ್ಷೇ ಲಕ್ಷೇ ಪೃಥಕ್ಕಾರ್ಯ ಮುದ್ಯಾಪನಮನುತ್ತಮಂ ॥ ೪೭ ॥

ಉದ್ಯಾಪನವಿಧಾನಂ ಚ ಸಂಕ್ಷೇಪೇಣ ವದಾಮಿ ತೇ ।
ಪೂರ್ವೇದ್ಯುರುಪವಾಸೀ ಸ್ಯಾದ್ರಾತ್ರೌ ಮಂಡಪಿಕಾಂತರೇ ॥ ೪೮ ॥

ರಾಮಲಿಂಗಾತ್ಮಕೇ ಭದ್ರೇ ರಾಮತೋಭದ್ರಕೇಽಥವಾ ।
ಅಷ್ಟೋತ್ತರಸಹಸ್ರಾಖ್ಯೇ ಹ್ಯಷ್ಟೋತ್ತರಶತೇಽಥವಾ ॥ ೪೯ ॥

ಧಾನ್ಯರಾಶೌ ಮಧ್ಯದೇಶೇ ಕಲಶಂ ಸ್ಥಾಪಯೇತ್ತತಃ ।
ತನ್ಮುಖೇ ತಾಮ್ರಪಾತ್ರೇ ವೈ ವರವಸ್ತ್ರೋಪಶೋಭಿತೇ ॥ ೫೦ ॥

---

೪೬. ಬುದ್ಧಿವಂತನಾದವನು ಈ ಮಂತ್ರವನ್ನು ಜಪಿಸಬೇಕು. ಇದನ್ನು ಒಂದು ಲಕ್ಷ ಸಂಖ್ಯೆಯಷ್ಟು ಜಪ ಮಾಡಿದ ಮೇಲೆ ಉದ್ಯಾಪನೆಯನ್ನು ಮಾಡಬೇಕು.

೪೭. ರಾಮನಾಮವನ್ನು ಜಪಿಸಿದರೆ ಎಷ್ಟು ಪುಣ್ಯವು ಬರುವುದೋ ಅದಕ್ಕಿಂತಲೂ ನೂರರಷ್ಟು ಹೆಚ್ಚಿನಷ್ಟು ಪುಣ್ಯವು ಆ ರಾಮನಾಮವನ್ನು ಬರೆಯುವುದರಿಂದ ಬರುತ್ತದೆ. ಒಂದು ಲಕ್ಷ ರಾಮನಾಮವನ್ನು ಬರೆದ ಮೇಲೆ ಅದಕ್ಕೆ ಒಂದು ಬಾರಿ ಉದ್ಯಾಪನೆಯನ್ನು ಮಾಡಬೇಕು. ಇಂತೆಯೇ ಪ್ರತಿಯೊಂದು ಲಕ್ಷಗಳಿಗೂ ಉದ್ಯಾಪನೆಯನ್ನು ಮಾಡುತ್ತಿರಬೇಕು.

೪೮-೪೯. ಈ ಉದ್ಯಾಪನ ವಿಧಿಯನ್ನು ನಿನಗೆ ಸಂಕ್ಷೇಪವಾಗಿ ಹೇಳುತ್ತೇನೆ. ಹಿಂದಿನ ದಿವಸ ಉಪವಾಸವಿರಬೇಕು. ರಾತ್ರಿಯಲ್ಲಿ ಮಂಟಪದ ಮಧ್ಯದಲ್ಲಿ ಸಾವಿರದೆಂಟು ಅಥವಾ ನೂರೆಂಟು ರಾಮಲಿಂಗಾತ್ಮಕವನ್ನು ಅಥವಾ ರಾಮತೋಭದ್ರಾತ್ಮಕವನ್ನು ರಚಿಸಬೇಕು.

೫೦-೫೧. ಅದರ ಮಧ್ಯದಲ್ಲಿ ಧಾನ್ಯರಾಶಿಯನ್ನು ಹಾಕಬೇಕು. ಅದರ ಮಧ್ಯದಲ್ಲಿ ಕಲಶ ಸ್ಥಾಪನೆ ಮಾಡಬೇಕು. ಅದರ ಮುಂದೆ ಒಂದು ತಾಮ್ರದ

ಸೀತಾಲಕ್ಷ್ಮಣಸಂಯುಕ್ತಾಂ ರಾಘವಪ್ರತಿಮಾಂ ಶುಭಾಂ।
ಆಮಾಷಾತ್ಪಲಪರ್ಯಂತಾಂ ಸೌವರ್ಣೀಂ ಪ್ರತಿಮಾಂ ಯಜೇತ್ ॥ ೫೧ ॥

ರಾಜತೀಂ ವಾ ತಾಮ್ರಮಯೀಂ ವಿತ್ತಶಾಠ್ಯಂ ನ ಕಾರಯೇತ್ ।
ಉಪಚಾರೈಷ್ಷೋಡಶಭಿಃ ಪೂಜಯೇತ್ಸುಸಮಾಹಿತಃ ॥ ೫೨ ॥

ರಾಮನಾಮಾಂಕಿತಂ ಹೇಮಪತ್ರಂ ತತ್ಪುರತೋಽರ್ಚಯೇತ್ ।
ಕಥಾಂ ಶ್ರುತ್ವಾ ಚ ವಿಧಿವದ್ದೇವದೇವಂ ಕ್ಷಮಾಪಯೇತ್ ॥ ೫೩ ॥

ಸಾಪರಾಧಂ ಚ ಶರಣಂ ತ್ವದ್ಭಕ್ತಿನಿರತಂ ಹಿ ಮಾಂ ।
ದೀನನಾಥ ಕೃಪಾಸಿಂಧೋ ತ್ರಾಹಿ ಸಂಸಾರಸಾಗರಾತ್ ॥ ೫೪ ॥

ತಟ್ಟೆಯನ್ನಿಟ್ಟು ಅದರಲ್ಲಿ ಸೀತಾ ರಾಮ ಲಕ್ಷ್ಮಣ ಪ್ರತಿಮೆಗಳನ್ನಿಡಬೇಕು. ಅವಕ್ಕೆ ಉತ್ತಮವಾದ ವಸ್ತ್ರಗಳನ್ನು ಹೊದ್ದಿಸಬೇಕು. ಆ ಪ್ರತಿಮೆಗಳು ಒಂದು ಮಾಷದ ಪ್ರಮಾಣದಿಂದ ಮೊದಲು ಮಾಡಿಕೊಂಡು ಒಂದು ಪಲಪರ್ಯಂತವಾಗಿರಬಹುದು.

೫೨. ಚಿನ್ನದಲ್ಲಿ ಮಾಡಿಸದಿದ್ದರೆ ಬೆಳ್ಳಿಯದಾದರೂ ಆಗಬಹುದು. ಇಲ್ಲವೇ ತಾಮ್ರದ್ದಾದರೂ ಆಗಬಹುದು. ಜಿಪುಣತನವನ್ನು ಮಾಡಬಾರದು. ನಿಯಮದಿಂದಿದ್ದು ಜಿತೇಂದ್ರಿಯನಾಗಿ ಕಲಶಕ್ಕೂ ಪ್ರತಿಮೆಗಳಿಗೂ ಷೋಡಶೋಪಚಾರಗಳಿಂದ ಪೂಜಿಸಬೇಕು.

೫೩. ಒಂದು ತಗಡಿನಲ್ಲಿ ರಾಮನಾಮವನ್ನು ಬರೆದು ಅದನ್ನು ಆ ಪ್ರತಿಮೆಗಳ ಮುಂದುಗಡೆಯಲ್ಲಿಟ್ಟಿರಬೇಕು. ಅದನ್ನು ಪೂಜಿಸಬೇಕು. ಅನಂತರ ಕಥೆಯನ್ನು ಕೇಳಿ ಆ ಸ್ವಾಮಿಯನ್ನು ಕ್ಷಮಿಸುವಂತೆ ಕೇಳಿಕೊಳ್ಳಬೇಕು.

೫೪. ಎಲೈ ದೀನನಾಥನೇ ಕೃಪಾಸಿಂಧುವೆ! ನಾನು ಅಪರಾಧಗಳನ್ನು ಮಾಡಿದ್ದೇನೆ. ನಿನ್ನನ್ನು ಶರಣು ಹೊಂದಿದ್ದೇನೆ. ಯಾವಾಗಲೂ ನಿನ್ನಲ್ಲಿಯೇ ಭಕ್ತಿಯನ್ನಿಟ್ಟುಕೊಂಡಿರುವೆನು. ಇಂತಹ ನನ್ನನ್ನು ಈ ಸಂಸಾರ ಸಾಗರದಿಂದ ಕಾಪಾಡು.

ರಾತ್ರಿ ಜಾಗರಣಂ ಕೃತ್ವಾ ಗೀತವಾದ್ಯೈಶ್ಚ ಮಂಗಲೈಃ |
ತತಃ ಪ್ರಭಾತಸಮಯೇ ಸ್ನಾತ್ವಾ ಹೋಮಂ ಸಮಾರಭೇತ್ || ೫೫ ||

ದಶಾಂಶೇನೈವ ಹೋಮಸ್ಸ್ಯಾತ್ತದ್ದಶಾಂಶೇನ ತರ್ಪಣಂ |
ಗವ್ಯೇನ ಪಯಸಾ ಕಾರ್ಯಂ ರಾಮಮಂತ್ರೇಣ ಯತ್ನತಃ || ೫೬ ||

ತಸ್ಯಾಪಿ ಚ ದಶಾಂಶೇನ ಕುರ್ಯಾದ್ಬ್ರಾಹ್ಮಣಭೋಜನಂ |
ಆಚಾರ್ಯಾಯ ಸವತ್ಸಾಂ ಗಾಂ ಸಾಲಂಕಾರಾಂ ಸವಾಸಸಾಂ || ೫೭ ||

ಭಕ್ತ್ಯಾರ್ಪಯೇತ್ಸಸುವರ್ಣಾಂ ವ್ರತಸಂಪೂರ್ಣಹೇತವೇ |
ಅನ್ಯಾನಪಿ ದ್ವಿಜಾನ್ ಸ್ತೋಷ್ಯ ರಾಜ್ಯಂ ಲಕ್ಷ್ಮೀಂ ಸಮಾಪ್ನುಯಾತ್ ||೫೮||

---

೫೫. ಆ ರಾತ್ರಿಯಲ್ಲಿ ಜಾಗರಣೆ ಮಾಡುತ್ತ ಮಂಗಳಕರವಾದ ಗೀತ, ನೃತ್ಯ, ವಾದ್ಯಗಳಿಂದ ಕಾಲವನ್ನು ಕಳೆಯಬೇಕು. ಅನಂತರ ಬೆಳಗ್ಗೆ ಸ್ನಾನ ಮಾಡಿ ಹೋಮವನ್ನು ಮಾಡಬೇಕು.

೫೬. ಲಕ್ಷಕ್ಕೆ ಉದ್ಯಾಪನೆ ಮಾಡುವುದರಿಂದ ಅದರ ಹತ್ತನೆಯ ಒಂದು ಭಾಗದಷ್ಟು ಎಂದರೆ ಹತ್ತು ಸಾವಿರ ಬಾರಿ ಹೋಮವನ್ನು ಮಾಡಬೇಕು. ಆ ಹೋಮವನ್ನು ಹಸುವಿನ ತುಪ್ಪದಿಂದಲಾಗಲಿ ಹಾಲಿನಿಂದಲಾಗಲಿ ಮಾಡಬೇಕು. ಹೋಮದಲ್ಲಿ ರಾಮಮಂತ್ರವನ್ನು ಹೇಳಬೇಕು. ಅದರಲ್ಲಿ ಹತ್ತನೆಯರಷ್ಟು ಎಂದರೆ ಒಂದುಸಾವಿರ ಬಾರಿ ತರ್ಪಣವನ್ನು ಮಾಡಬೇಕು.

೫೭. ಅದರಲ್ಲಿ ಹತ್ತನೆಯ ಒಂದು ಭಾಗದಷ್ಟು ಎಂದರೆ ನೂರುಜನ ಬ್ರಾಹ್ಮಣರಿಗೆ ಹೇಳಿ ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು. ಆಚಾರ್ಯನಾದವನಿಗೆ ಒಂದು ಕರೆಯುವ ಹಸುವನ್ನು ಕರುವಿನೊಡನೆ ಕೊಡಬೇಕು. ಅದಕ್ಕೆ ಬಟ್ಟೆಯನ್ನು ಹೊದ್ದಿಸಿ ಅಲಂಕರಿಸಿರಬೇಕು.

೫೮. ಜೊತೆಯಲ್ಲಿ ದಕ್ಷಿಣೆಯನ್ನಿಟ್ಟು ಭಕ್ತಿಯಿಂದ ದಾನಮಾಡಬೇಕು. ಹಾಗೆ ಕೊಟ್ಟರೆ ವ್ರತವು ಸಂಪೂರ್ಣವಾಗುತ್ತದೆ. ಮಿಕ್ಕ ಬ್ರಾಹ್ಮಣರಿಗೂ ಭೋಜನದಿಂದಲೂ ದಕ್ಷಿಣೆಯಿಂದಲೂ ಸಾಧ್ಯವಾದಮಟ್ಟಿಗೂ ಸಂತೋಷಪಡಿಸಬೇಕು. ಹೀಗೆ ಮಾಡಿದರೆ ರಾಜ್ಯವನ್ನೂ ಸಂಪತ್ತನ್ನೂ ಹೊಂದುತ್ತಾನೆ.

ಪುತ್ರಾರ್ಥೀ ಲಭತೇ ಪುತ್ರಾನ್ ಧನಾರ್ಥೀ ಲಭತೇ ಧನಂ ।
ನಾನಾದಾನಾನಿ ತೀರ್ಥಾನಿ ಪ್ರದಕ್ಷಿಣತಪಾಂಸಿ ಚ ॥ ೫೯ ॥

ತಾನಿ ಸರ್ವಾಣಿ ಲಕ್ಷಾಂಶಸಮಾನ್ಯಸ್ಯ ಭವಂತಿ ನ ।
ನಿಷ್ಕಾಮೋ ವಾ ಸಕಾಮೋವಾ ಯಃ ಕುರ್ಯಾದ್ಭಕ್ತಿಸಂಯುತಃ ॥ ೬೦ ॥

ತಸ್ಯ ಸರ್ವೇಪಿ ಕಾಮಾಸ್ಸ್ಯುರಿಹ ಲೋಕೇ ಪರತ್ರ ಚ ।
ಲಿಖಿತ್ವಾ ಪುಸ್ತಕಂ ವಾಪಿ ವರಂ ರಾಮಾಯಣಸ್ಯ ಚ ॥ ೬೧ ॥

ಏವಮುದ್ಯಾಪನಂ ಕಾರ್ಯಂ ಶ್ಲೋಕಸಙ್ಖ್ಯಾದಶಾಂಶತಃ ।
ಪೂರ್ವವದ್ಧವನಂ ಕಾರ್ಯಂ ತದ್ದಶಾಂಶಾಚ್ಚ ತರ್ಪಣಂ ॥ ೬೨ ॥

ತಸ್ಯಾಪಿ ಚ ದಶಾಂಶೇನ ಕುರ್ಯಾದ್ಬ್ರಾಹ್ಮಣಭೋಜನಂ ।
ಪೂರ್ವಶ್ಲೋಕೇನ ವಾಕ್ಯೇನ ಹವನಾದಿ ಪ್ರಕೀರ್ತಿತಂ ॥ ೬೩ ॥

---

೫೯. ಮಕ್ಕಳನ್ನು ಅಪೇಕ್ಷಿಸುವವರು ಮಕ್ಕಳನ್ನೂ, ಧನವನ್ನು ಅಪೇಕ್ಷಿಸುವವರು ಧನವನ್ನೂ ಹೊಂದುತ್ತಾರೆ. ನಾನಾ ತೀರ್ಥಗಳ ಸ್ನಾನಗಳೂ, ನಾನಾ ದಾನಗಳ ಫಲಗಳೂ, ಪ್ರದಕ್ಷಿಣೆಗಳೂ, ತಪಸ್ಸುಗಳೂ ಇವೆಲ್ಲವೂ ಕೂಡ ಇದರ ಲಕ್ಷದ ಒಂದು ಭಾಗಕ್ಕೆ ಸಮವಾಗಲಾರವು.

೬೦-೬೧ ಅವನು ನಿಷ್ಕಾಮನಾಗಿಯಾಗಲಿ ಸಕಾಮನಾಗಿಯಾಗಲಿ ಭಕ್ತಿಯಿಂದ ಈ ರೀತಿಯಾಗಿ ಬರೆದು ಉದ್ಯಾಪನೆಯನ್ನು ಮಾಡಿದರೆ ಅವನಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಎಲ್ಲಾ ಇಷ್ಟಗಳೂ ಫಲಿಸುತ್ತವೆ. ರಾಮಾಯಣದ ಪುಸ್ತಕವನ್ನೇ ಆದರೂ ಬರೆದು ಈ ರೀತಿಯಾಗಿ ಮಾಡಿದರೆ ಬಹು ಉತ್ತಮವು.

೬೨-೬೩ ಒಂದು ಲಕ್ಷಶ್ಲೋಕಗಳನ್ನು ಬರೆದಮೇಲೆ ಅದರ ಹತ್ತನೆಯ ಒಂದು ಭಾಗದಷ್ಟು ಹೋಮವನ್ನು ಮಾಡಿ ಹಿಂದಿನಂತೆ ಉದ್ಯಾಪನೆಯನ್ನು ಮಾಡಬೇಕು. ಅದರ ದಶಾಂಶದ ತರ್ಪಣವನ್ನೂ, ಅದರ ದಶಾಂಶದ ಬ್ರಾಹ್ಮಣ ಭೋಜನವನ್ನೂ ಮಾಡಿಸಬೇಕು ಹಿಂದಿನ ಶ್ಲೋಕಗಳಲ್ಲಿ ಹವನದ ಮಂತ್ರಗಳನ್ನೂ ಉಳಿದ ವಿಷಯಗಳನ್ನೂ ಹೇಳಿದ್ದೇನೆ.

ಅಥವಾ ಗ್ರಂಥಶ್ಲೋಕಾನಾಂ ದಶಾಂಶೈಃ ಹವನಂ ಸ್ಮೃತಂ ।
ಅಥವಾಗ್ರೇ ವಕ್ಷ್ಯಮಾಣರೀತ್ಯಾ ವೈ ಶಕುನಸ್ಯ ಚ ॥ ೬೪ ॥

ಶ್ಲೋಕಂ ನಿಷ್ಕಾಸ್ಯ ವೈ ಗ್ರಂಥಾದಾಚರೇದ್ಧವನಾದಿಕಂ ।
ಅಥವಾ ರಾಮಗಾಯತ್ರ್ಯಾ ರಾಮಮಂತ್ರೈಸ್ತು ವಾಚರೇತ್ ॥ ೬೫ ॥

ಹೇಮಪತ್ರೇ ತ್ವೇಕ ಏವ ಲೇಖ್ಯಶ್ಲೋಕಶ್ಶುಭಾವಹಃ ।
ಅರ್ಚಯಿತ್ವಾ ಪೂರ್ವವಚ್ಚ ಹೇಮಪತ್ರಂ ಸವಿಸ್ತರಂ ॥ ೬೬ ॥

ರಾಮಮೂರ್ತೇಃ ಪುರಃ ಸ್ಥಾಪ್ಯಂ ಸರ್ವಂ ತದ್ಗುರವೇರ್ಪಯೇತ್ ।
ಶ್ರೀರಾಮಕವಿತಾಂ ಕೃತ್ವಾ ತ್ವೇವಮುದ್ಯಾಪನಂ ನರೈಃ ॥ ೬೭ ॥

ಅವಶ್ಯಮೇವ ಕರ್ತವ್ಯಂ ಕವಿತಾಫಲಮೀಪ್ಸುಭಿಃ ।
ದೇವಾಲಯಗಜಾಶ್ವಾನಾಂ ವೃಕ್ಷಾಣಾಂ ವಾಪಿ ಕೂಪಯೋಃ ॥ ೬೮ ॥

೬೪-೬೫. ಅಥವಾ ಆ ರಾಮಾಯಣದಲ್ಲಿ ತಾನು ಬರೆದಿರುವಂತೆ ಲಕ್ಷ ಶ್ಲೋಕಗಳಿಗೆ ಎಷ್ಟು ಲಕ್ಷ ಗ್ರಂಥಗಳು ಆಗುವುವೆಂಬುವುದನ್ನು ನೋಡಿ ಅದರಂತೆ ಹೋಮವನ್ನು ಮಾಡಬೇಕು. ಅಥವಾ ಮುಂದೆಹೇಳುವ ಶಕುನದಂತೆ ಆ ಗ್ರಂಥದಿಂದ ಶ್ಲೋಕಗಳನ್ನುತೆಗೆದು ಅದನ್ನು ಹೇಳುತ್ತ ಹತ್ತನೆಯ ಒಂದಂಶದಿಂದ ಹೋಮವನ್ನು ಮಾಡಬೇಕು. ಅದಿಲ್ಲದಿದ್ದರೆ ರಾಮಗಾಯತ್ರಿಯಿಂದಾಗಲಿ, ರಾಮಮಂತ್ರಗಳಿಂದಾಗಲಿ ಹೋಮವನ್ನು ಮಾಡಬಹುದು.

೬೬. ಆ ಪ್ರತಿಮೆಯ ಮುಂದೆ ಇಡುವ ಚಿನ್ನದ ತಗಡಿನಲ್ಲಿ ತಾನು ಬರೆದಿರುವ ಲಕ್ಷಶ್ಲೋಕಗಳಲ್ಲಿ ಒಂದು ಚೆನ್ನಾಗಿಯೂ, ಶುಭವಾಗಿಯೂ, ಇರುವ ಶ್ಲೋಕವನ್ನು ಬರೆದಿಡಬೇಕು. ಹಿಂದಿನಂತೆಯೇ ಅದನ್ನು ಪೂಜಿಸಬೇಕು

೬೭. ರಾಮಮೂರ್ತಿಯ ಮುಂದೆ ಇಟ್ಟು ಅವೆಲ್ಲವನ್ನೂ ಪೂಜೆಯಾದ ಮೇಲೆ ಅದನ್ನು ಗುರುವಿಗೆ ಕೊಟ್ಟುಬಿಡಬೇಕು. ಇದೇ ರೀತಿಯಾಗಿ ಶ್ರೀರಾಮನ ಮೇಲೆ ಕವಿತೆಯನ್ನು ರಚಿಸಿ ಉದ್ಯಾಪನೆಯನ್ನು ಮಾಡಬಹುದು.

೬೮-೭೦. ಹೀಗೆ ಮಾಡಿದರೆ ಕವಿತೆಯು ಹೆಚ್ಚುತ್ತದೆ. ಕವಿತೆಯ ಫಲವೂ ಉಂಟಾಗುತ್ತದೆ. ಆ ಕವಿತೆಯಲ್ಲಿ ದೇವಾಲಯ ಆನೆ, ಕುದುರೆ, ಬಾವಿ,

ಸರ್ಪಾಣಾನಾಂ ಪಣ್ಯಾನಾಂ ಚಿಹ್ನಾರ್ಥಂ ಯೋಷಿತಾಂ ನೃಣಾಂ ।
ಕಾವ್ಯಾನಾಂ ಚ ಕವೀನಾಂ ಚ ಪಶ್ವಾದೀನಾಂ ಚ ಸರ್ವಶಃ ॥ ೬೯ ॥

ರಾಜಪ್ರಾಸಾದವಾಸ್ತೂನಾಂ ನಾಮಕರ್ಮ ವಿಶಿಷ್ಯತೇ ।
ವಿನಾ ಕರ್ಣೋಪದೇಶೇನ ಸ್ಥಾವರಾಣಾಂ ವಿಧಾನಕಂ ॥ ೭೦ ॥

ಕೃತ್ವಾ ನಾಮ ಕರ್ಮಣಶ್ಚ ಕಾರ್ಯಮುದ್ಯಾಪನಂ ತತಃ ।
ಲಕ್ಷಪುಷ್ಪೈಃ ಪೂಜನಾದಿ ಯದ್ಯಚ್ಛ್ರೀರಾಘವಸ್ಯ ಚ ॥ ೭೧ ॥

ಸಂತೋಷಾರ್ಥಂ ಕೃತಂ ತಸ್ಯ ಕಾರ್ಯಮುದ್ಯಾಪನಂ ವರಂ ।
ಏವಂ ರಾಜನ್ ಮಯಾ ಸರ್ವಂ ತವಾಗ್ರೇ ವಿನಿವೇದಿತಂ ॥ ೭೨ ॥

ರಾಮನಾಮ ಪ್ರಭಾವೇಣ ಸ್ವೀಯಂ ರಾಜ್ಯಂ ಲಭಿಷ್ಯಸಿ।

॥ ಶ್ರೀರಾಮದಾಸ ಉವಾಚ ॥

ಯುಧಿಷ್ಠಿರಸ್ತು ತಚ್ಛ್ರುತ್ವಾ ಕರಿಷ್ಯತಿ ಯಥಾವಿಧಿ ॥ ೭೩ ॥

ಕೊಳ, ಸರೋವರ ಅಂಗಡಿಗಳು, ಮಾರುವ ಪದಾರ್ಥಗಳು, ಹೆಂಗಸರು, ಗಂಡಸರು, ಕಾವ್ಯ, ಕವಿ, ಪಶುಗಳು, ಮೃಗವೇ ಮುಂತಾದುವು ಅರಮನೆ ವಾಸ್ತುಶಿಲ್ಪಗಳು, ಇವುಗಳ ಹೆಸರು, ಅವುಗಳ ಕ್ರಮ, ನಿರ್ಮಾಣದ ರೀತಿ ಇವುಗಳ ಹೆಸರನ್ನೂ ತಿಳಿಸಬೇಕು. ಕರ್ಣೋಪದೇಶವಿಲ್ಲದೆ ಈ ರೀತಿಯಾಗಿ ಕವನವನ್ನು ಮಾಡ ಬಹುದು.

೭೧-೭೨. ತಾನು ಮಾಡಿರುವ ಕೃತಿಗೆ ಹೆಸರಿಡಬೇಕು. ಅನಂತರ ಉದ್ಯಾಪನೆಯನ್ನು ಮಾಡಬೇಕು ರಾಘವನ ಪ್ರೀತ್ಯರ್ಥವಾಗಿ ಲಕ್ಷಪುಷ್ಪಗಳಿಂದ ಪೂಜೆಮಾಡಿ ಉದ್ಯಾಪನೆಯನ್ನು ಮಾಡಬೇಕು. ಅವನ ಸಂತೋಷಕ್ಕಾಗಿ ಯಾವ ಹೂವಿನಿಂದ ಬೇಕಾದರೂ ಲಕ್ಷಪೂಜೆಯನ್ನು ಮಾಡಿ ಉದ್ಯಾಪನೆಯನ್ನು ಮಾಡಬಹುದು. ಇದು ಒಳ್ಳೆಯದು. ಎಲೈ ಧರ್ಮರಾಜನೇ! ಈ ರೀತಿಯಾಗಿ ನಿನ್ನ ಮುಂದೆ ಎಲ್ಲವನ್ನೂ ಹೇಳಿದ್ದೇನೆ.

೭೩. ಈ ರಾಮನಾಮದ ಪ್ರಭಾವದಿಂದ ನೀನು ನಿನ್ನ ರಾಜ್ಯವನ್ನು ಹೊಂದುತ್ತೀಯೆ. ಶ್ರೀರಾಮದಾಸನು ಹೇಳಿದನು-ಯುಧಿಷ್ಠಿರನು ಕೃಷ್ಣನು ಹೇಳಿದುದನ್ನು ಕೇಳಿ ಅದನ್ನು ವಿಧಿಗನುಗುಣವಾಗಿ ಮಾಡುವನು.

ಮಾಸತ್ರಯೇಣ ತಸ್ಯೈವ ರಾಜ್ಯಪ್ರಾಪ್ತಿರ್ಭವಿಷ್ಯತಿ ।
ಅಂತೇ ಚ ಪರಮಂ ಸ್ಥಾನಂ ಗಮಿಷ್ಯತಿ ಮನೋರ್ಬಲಾತ್ ॥ ೭೪ ॥

ಏವಂ ಕಥಾ ಭವಿಷ್ಯಾ ಚ ತವಾಗ್ರೇ ವಿನಿವೇದಿತಾ ।
ರಾಮನಾಮಮಹಿಮಾನಮಿಮಂ ನರಶ್ಶೃಣೋತಿಯಃ ॥ ೭೫ ॥

ಪರಮಭಕ್ತಿಸಮೇತಃ ಪುತ್ರಪೌತ್ರಜವತ್ಸುಖಂ ।
ಭುವಿ ಭುಕ್ತ್ವಾ ಪ್ರಾಪ್ನುಯಾತ್ಪರಮಮೋಕ್ಷಪದಂಚ ಸಃ ॥ ೭೬ ॥

ನಿತ್ಯಂ ವ್ಯಾಖ್ಯಾ ಶ್ರೀರಾಮಾಗ್ರೇ ಕರ್ತವ್ಯಾ ತ್ವತಿ ಭಕ್ತಿತಃ ।
ಆನಂದರಾಮಚರಿತಸ್ಯಾಥವಾನ್ಯಸ್ಯ ವಿಸ್ತರಾತ್ ॥ ೭೭ ॥

ಸರ್ಗಸ್ಯ ವಾರ್ಧಸರ್ಗಸ್ಯ ಪಾದಸರ್ಗಸ್ಯ ವಾ ತಥಾ ।
ನವಶ್ಲೋಕಮಿತಾ ವಾಪಿ ಶ್ಲೋಕಮಾತ್ರಸ್ಯ ವಾ ತಥಾ ॥ ೭೮ ॥

ಶ್ಲೋಕಾರ್ಧಂ ಶ್ಲೋಕಪಾದಂ ವಾನಂದರಾಮಾಯಣಸ್ಥಿತಂ ।
ಯೇ ಪಠಂತಿ ನರಾ ನಿತ್ಯಂ ತೇ ನರಾ ಮುಕ್ತಿಭಾಗಿನಃ ॥ ೭೯ ॥

---

೭೪. ಇದರ ಪ್ರಭಾವದಿಂದ ಮೂರು ತಿಂಗಳೊಳಗಾಗಿಯೇ ರಾಜ್ಯ ಪ್ರಾಪ್ತಿಯಾಗುವುದು. ಮಂತ್ರದ ಬಲದಿಂದ ಕೊನೆಯಲ್ಲಿ ವೈಕುಂಠವನ್ನು ಹೊಂದುತ್ತಾನೆ

೭೫-೭೬. ಎಲೈ ಶಿಷ್ಯನೇ ! ಈ ರೀತಿಯಾಗಿ ಭವಿಷ್ಯದ ಕಥೆಯನ್ನು ಕೂಡ ನಿನ್ನೆದುರಿಗೆ ಹೇಳಿದ್ದೇನೆ. ಈ ರಾಮನಾಮದ ಮಹಿಮೆಯನ್ನು ಯಾವ ಮನುಷ್ಯನು ಭಕ್ತಿಯಿಂದ ಕೇಳುವನೋ ಅವನು ಮಕ್ಕಳು ಮೊಮ್ಮಕ್ಕಳುಗಳನ್ನು ಹೊಂದುತ್ತಾನೆ. ಭೂಮಿಯಲ್ಲಿ ಉತ್ತಮವಾದ ಸೌಖ್ಯವನ್ನು ಅನುಭವಿಸಿ ಕೊನೆಯಲ್ಲಿ ಮೋಕ್ಷವನ್ನೂ ಹೊಂದುತ್ತಾನೆ.

೭೭. ಈ ಆನಂದರಾಮಾಯಣವನ್ನು ಆಗಲಿ ಮತ್ತಾವುದಾದರೂ ರಾಮಾಯಣವನ್ನೇ ಆಗಲೀ ಶ್ರೀ ರಾಮನ ಎದುರಿನಲ್ಲಿ ವಿಸ್ತಾರವಾಗಿ ವ್ಯಾಖ್ಯಾನ ಮಾಡಬೇಕು.

೭೮-೭೯. ಈ ಆನಂದರಾಮಾಯಣದಲ್ಲಿ ಯಾರು ಒಂದು ಸರ್ಗವನ್ನಾಗಲಿ ಅಥವಾ ಅರ್ಧ ಸರ್ಗವನ್ನಾಗಲೀ ಅಥವಾ ಕಾಲು ಸರ್ಗವನ್ನಾಗಲಿ ಓದು ತ್ತಾರೆಯೋ ಅವರು ಮುಕ್ತಿಯನ್ನು ಹೊಂದುತ್ತಾರೆ.

ಯೇಶ್ವತ್ಥಮೂಲೇ ಮುನಿವೃಕ್ಷಮೂಲೇ
ತಥಾ ತುಲಸ್ಯಾಶ್ಚ ಸಮೀಪದೇಶೇ ।
ಪುಣ್ಯಸ್ಥಲೇ ಮಸ್ಕರಿಭೂಸುರಾಗ್ರೇ
ಶ್ರೀರಾಮಚಂದ್ರಸ್ಯ ಪುರಸ್ಸದೈವ ॥ ೪೦ ॥

ತಥಾ ಸಭಾಯಾಂ ದ್ವಿಜವೃಂದಮಧ್ಯೇ
ನದ್ಯಾಸ್ತಟೇ ವಾ ರಘುನಾಯಕಸ್ಯ ।
ಆನಂದರಾಮಾಯಣಮಾದರೇಣ
ಪಠಂತಿ ಧನ್ಯಾ ಭುವಿ ಮಾನವಾಸ್ತೇ ॥ ೪೧ ॥

ರಾಮಾಯಣಂ ಲಿಖಿತ್ವಾ ತು ದಾತವ್ಯಂ ಭೂಸುರಾಯ ಹಿ ।
ಸಮಗ್ರಂ ವಾ ಕಾಂಡಮೇಕಂ ಸರ್ಗೋ ವಾತಿಸುಪುಣ್ಯದಃ ॥ ೪೨ ॥

ಸರ್ಗಸ್ತ್ವೇಕಃ ಪ್ರತ್ಯಹಂ ಹಿ ಲಿಖಿತ್ವಾ ಭೂಸುರಾಯ ಹಿ ।
ಸಂಪೂಜ್ಯ ದೇಯಶ್ಚಾನಂದರಾಮಾಯಣಸಮುದ್ಭವಃ ॥ ೪೩ ॥

೪೦-೪೧. ಯಾರು ಈ ಆನಂದರಾಮಾಯಣವನ್ನು ಅರಳಿಯಮರದ ಬುಡದಲ್ಲಾಗಲಿ ಅಗಸೆಯಮರದ ಬುಡದಲ್ಲಿಯಾಗಲೀ ತುಲಸಿಯ ಸಮೀಪದಲ್ಲಿಯಾಗಲೀ ಪುಣ್ಯಸ್ಥಳದಲ್ಲಿಯಾಗಲೀ ಯತಿಗಳ ಮುಂದಾಗಲೀ ಬ್ರಾಹ್ಮಣರ ಮುಂದಾಗಲೀ ಶ್ರೀರಾಮಚಂದ್ರನ ಮುಂದುಗಡೆಯಲ್ಲಾಗಲೀ ಸಭೆಯಲ್ಲಿಯಾಗಲೀ ಬ್ರಾಹ್ಮಣರ ಗುಂಪಿನಲ್ಲಿಯಾಗಲೀ ನದಿಯ ದಡದಲ್ಲಿಯಾಗಲೀ ಆದರದಿಂದ ಓದುತ್ತಾರೆಯೋ ಅವರೇ ಭೂಮಿಯಲ್ಲಿ ಧನ್ಯರು.

೪೨. ರಾಮಾಯಣವನ್ನು ಬರೆದು ಬ್ರಾಹ್ಮಣನಿಗೆ ದಾನಮಾಡಬೇಕು. ಪೂರ್ತಿಯಾಗಿ ಆಗದಿದ್ದರೆ ಒಂದು ಕಾಂಡವನ್ನಾಗಲೀ ಅದೂ ಆಗದಿದ್ದರೆ ಒಂದು ಸರ್ಗವನ್ನಾಗಲೀ ಕೊಡಬೇಕು. ಇದರಿಂದ ಬಹು ಪುಣ್ಯವು ಬರುತ್ತದೆ.

೪೩-೪೪. ಈ ಆನಂದರಾಮಾಯಣದಲ್ಲಿ ನಿತ್ಯವೂ ಒಂದೊಂದು ಸರ್ಗದಂತೆ ಬರೆದು ಬ್ರಾಹ್ಮಣರಿಗೆ ಪೂಜಿಸಿ ದಾನಮಾಡಬೇಕು. ಹಾಗೆ ಬರೆಯಲು ಅಶಕ್ತನಾದರೆ

ಅಶಕ್ತೇನ ನವಶ್ಲೋಕಾಸ್ಸದಾ ದೇಯಾ ವಿಲೇಖ್ಯ ಚ ।
ಪ್ರೀತ್ಯರ್ಥಂ ರಾಮಚಂದ್ರಸ್ಯ ವಿಪ್ರೇಭ್ಯಃ ಪರಿಪೂಜ್ಯ ವೈ ॥ ೮೪ ॥

ನಿತ್ಯದಾನಮೇತದೇವ ಕರ್ತವ್ಯಂ ಸರ್ವದಾ ನರೈಃ ।
ನಿತ್ಯಂ ಸುವರ್ಣಮುದ್ರಾಯಾ ದಾನೇನ ಯತ್ಫಲಂ ಸ್ಮೃತಂ ॥ ೮೫ ॥

ತತ್ಫಲಂ ಪ್ರತ್ಯಹಂ ಸರ್ಗದಾನೇನ ಲಭ್ಯತೇ ನರೈಃ ।
ನಾನೇನ ಸದೃಶಂ ದಾನಂ ರಾಘವಸ್ಯಾತಿತೋಷದಂ ॥ ೮೬ ॥

ತಸ್ಮಾದವಶ್ಯಮೇವೈತದ್ದಾನಂ ಕಾರ್ಯಂ ನಿರಂತರಂ ।
ಶ್ರೀರಾಮಚಂದ್ರತುಷ್ಟ್ಯರ್ಥಂ ನವಪೂಗಿಫಲೈಃ ತಥಾ ॥ ೮೭ ॥

ನಾಗವಲ್ಲೀನವದಳೈಸ್ತಾಂಬೂಲಸ್ಯೋಪಚಾರಕೈಃ ।
ಪೃಥಕ್ ನವಭೂಸುರೇಭ್ಯೋ ದೇಯೋ ನಿತ್ಯಂ ಸದಕ್ಷಿಣಃ ॥ ೮೮ ॥

ಒಂಭತ್ತು ಶ್ಲೋಕಗಳನ್ನಾದರೂ ಬರೆದು ದಾನಮಾಡಬೇಕು. ಹೀಗೆ ಮಾಡಿದರೆ ರಾಮಚಂದ್ರನಿಗೆ ಪ್ರೀತಿಯುಂಟಾಗುತ್ತದೆ.

೮೫-೮೬. ಇದನ್ನು ಜನರು ನಿತ್ಯದಾನವನ್ನಾಗಿ ಮಾಡಿಕೊಂಡು ಇಟ್ಟು ಕೊಳ್ಳಬೇಕು. ಹಾಗೆ ದಾನಮಾಡಿದರೆ ನಿತ್ಯವೂ ರಾಮಸುವರ್ಣ ಮುದ್ರೆಯನ್ನು ದಾನಮಾಡುವುದರಿಂದ ಯಾವ ಫಲವು ಬರುತ್ತದೆಯೋ ಆ ಫಲವು ಈ ಸರ್ಗದ ದಾನದಿಂದ ಬರುತ್ತದೆ. ರಾಘವನಿಗೆ ಸಂತೋಷವನ್ನುಂಟುಮಾಡುವ ದಾನವು ಇದಕ್ಕಿಂತಲೂ ಬೇರೆಯಾದುದು ಮತ್ತೊಂದಿಲ್ಲ.

೮೭-೮೮. ಆದ್ದರಿಂದ ಬಿಡದೆ ನಿತ್ಯವೂ ಈ ದಾನವನ್ನು ಮಾಡುತ್ತಿರಬೇಕು. ಈ ದಾನವನ್ನು ಮಾಡುವಾಗ ಒಂಭತ್ತು ಅಡಿಕೆ ಒಂಭತ್ತು ವೀಳೆಯದೆಲೆ ಅದಕ್ಕೆ ಸರಿಯಾದ ತಾಂಬೂಲದ ವಸ್ತುಗಳು ಇವನ್ನು ಇಟ್ಟು ಬೇರೆ ಬೇರೆಯಾಗಿ ಒಂಭತ್ತು ಜನ ಬ್ರಾಹ್ಮಣರಿಗೆ ನಿತ್ಯವೂ ಕೊಡಬೇಕು.

ಅಶಕ್ತೇನೈಕ ಏವಾಪಿ ದೇಯಸ್ತಾಂಬೂಲ ಉತ್ತಮಃ ।
ನ ತಾಂಬೂಲಸಮಂ ದಾನಂ ಕಿಂಚಿದಸ್ತಿ ಜಗತ್ತ್ರಯೇ ॥ ೮೯ ॥

ತಾಂಬೂಲಶ್ಶುದ್ಧಿದಃ ಪ್ರೋಕ್ತಸ್ತಾಂಬೂಲೋ ಮಂಗಳಪ್ರದಃ ।
ತಾಂಬೂಲಃ ಶ್ರೀಕರೋ ಜ್ಞೇಯಸ್ತಾಂಬೂಲೋ ರಾಘವಪ್ರಿಯಃ ॥

ತಸ್ಮಾತ್ಪ್ರಯತ್ನತಸ್ತತ್ರ ದೇಯಸ್ತಾಂಬೂಲ ಉತ್ತಮಃ ।
ಸದಾ ರಾಮಂ ಪೂಜಯೇಚ್ಚ ಸದಾ ರಾಮಂ ವಿಚಿಂತಯೇತ್ ॥ ೯೧ ॥

ಶ್ರೀರಾಮಸ್ಮರಣಂ ನಿತ್ಯಂ ಕಾರ್ಯಂ ಭಕ್ತ್ಯಾ ಮುಹುರ್ಮುಹುಃ ।
ಯಸ್ಯ ವಾಣ್ಯಾಂ ರಾಮನಾಮ ಹಸ್ತೌ ಪೂಜನತತ್ಪರೌ ॥ ೯೨ ॥

ಶ್ರೀರಾಮಚರಿತಾನ್ಯೇವ ಶ್ರೋತುಕಾಮಾ ಚ ಯಚ್ಛ್ರುತಿಃ ।
ರಾಮತೀರ್ಥಾನಿ ರಾಮೇಶಂ ರಾಮಕ್ಷೇತ್ರಾಣಿ ಯಾನಿ ಚ ॥ ೯೩ ॥

ಯದಂಘ್ರೀ ಗಂತುಕಾಮೌ ತು ರಾಮಪೂಜೋತ್ಸವಾನ್ ವರಾನ್ ।
ಸಂದೃಷ್ಟುಕಾಮೌ ಯನ್ನೇತ್ರೌ ಸ ಧನ್ಯಃ ಪುರುಷಃ ಸ್ಮೃತಃ ॥ ೯೪ ॥

---

೮೯. ಅಶಕ್ತನಾದವನು ಒಬ್ಬನಿಗೆ ಒಂದೇ ತಾಂಬೂಲವನ್ನು ಕೊಡಬಹುದು ತಾಂಬೂಲಕ್ಕೆ ಸಮವಾದ ದಾನವು ಪ್ರಪಂಚದಲ್ಲಿ ಮತ್ತೊಂದಿಲ್ಲ.

೯೦. ತಾಂಬೂಲವು ಶುದ್ಧಿಯನ್ನುಂಟುಮಾಡುತ್ತದೆ. ತಾಂಬೂಲವು ಮಂಗಳವನ್ನುಂಟುಮಾಡುತ್ತದೆ. ತಾಂಬೂಲವು ಸಂಪತ್ತನ್ನುಂಟುಮಾಡುತ್ತದೆ. ತಾಂಬೂಲವು ಶ್ರೀರಾಮನಿಗೆ ಪ್ರೀತಿಯನ್ನುಂಟುಮಾಡುತ್ತದೆ.

೯೧-೯೨. ಆದ್ದರಿಂದ ಪ್ರಯತ್ನಪಟ್ಟಾದರೂ ತಾಂಬೂಲವನ್ನು ಕೊಡುವುದು ಉತ್ತಮವು. ಯಾವನ ಬಾಯಲ್ಲಿ ರಾಮನಾಮಗಳೇ ಉಚ್ಚಾರವಾಗುತ್ತವೆಯೋ ಯಾವನ ಕೈಗಳು ರಾಮನನ್ನೇ ಪೂಜಿಸುತ್ತಿರುವುವೋ ಅವನೇ ಧನ್ಯನು.

೯೩-೯೪. ಯಾವನ ಕಿವಿಗಳು ಶ್ರೀರಾಮ ಚರಿತ್ರೆಯನ್ನು ಕೇಳುತ್ತಿರುವುವೋ ಯಾವನ ಕಾಲುಗಳು ರಾಮತೀರ್ಥಗಳಿಗೂ ರಾಮೇಶ್ವರಕ್ಕೂ ರಾಮಕ್ಷೇತ್ರಕ್ಕೂ ಹೋಗುವುವೋ ಯಾವನ ಕಣ್ಣುಗಳು ಯಾವ ರಾಮನನ್ನೇ ನೋಡುವುದರಲ್ಲಿ ಆಸಕ್ತವಾಗಿರುವುವೋ ಅವನೇ ಧನ್ಯನು.

ರಾಮರಾಮೇತಿ ರಾಮೇತಿ ಯೇ ವದಂತಿ ಜನಾ ಭುವಿ ।
ಮಹಾಪಾತಕಿನಸ್ತೇತ್ರ ಮುಕ್ತಿಂ ಯಾಂತಿ ನ ಸಂಶಯಃ ॥ ೯೫ ॥

ರಾಮಚಂದ್ರೇತಿ ಮಂತ್ರೋಽಸ್ತಿ ವಾಗಸ್ತಿ ವಶವರ್ತಿನೀ ।
ತಥಾಪಿ ನಿರಯೇ ಘೋರೇ ಪತಂತೀತ್ಯದ್ಭುತಂ ಮಹತ್ ॥ ೯೬ ॥

ಶ್ರೀರಾಮನಾಮಾಮೃತಮಂತ್ರಬೀಜ। ಸಂಜೀವನೀ
ಚೇನ್ಮನಸಿ ಪ್ರವಿಷ್ಟಾ ॥ ಹಾಲಾಹಲಂ
ವಾ ಪ್ರಳಯಾನಲಂ ವಾ । ಮೃತ್ಯೋರ್ಮುಖಂ
ವಾ ವಿಶತಾಂ ಕುತೋಭೀಃ ॥ ೯೭ ॥

ಆಸನೇ ಚ ತಥಾ ನಿದ್ರಾಕಾಲೇ ಭೋಜನಕರ್ಮಣಿ ।
ಕ್ರೀಡನೇ ಗಮನೇ ನಿತ್ಯಂ ರಾಮಮೇವ ವಿಚಿಂತಯೇತ್ ॥ ೯೮ ॥

---

೯೫. ರಾಮ ರಾಮ ರಾಮ ಎಂಬದಾಗಿ ಯಾರು ಭೂಮಿಯಲ್ಲಿ ಹೇಳುತ್ತಾರೆಯೋ ಅವರು ಮಹಾಪಾತಕಿಗಳಾಗಿದ್ದರೂ ಮುಕ್ತಿಯನ್ನು ಹೊಂದುತ್ತಾರೆ. ಸಂಶಯವಿಲ್ಲ.

೯೬. ರಾಮಚಂದ್ರ ಎಂಬ ಮಂತ್ರವು ಯಥೇಚ್ಛವಾಗಿರುವುದು. ನಮಗೆ ಮಾತು ಸ್ವಾಧೀನದಲ್ಲಿರುವುದು. ಆದರೂ ಕೂಡ ಅದನ್ನು ಧ್ಯಾನಿಸದೆ ಜನರು ನರಕದಲ್ಲಿ ಬೀಳುತ್ತಾರೆ ಎಂಬುದು ಆಶ್ಚರ್ಯಕರವು.

೯೭. ಶ್ರೀರಾಮನಾಮವೆಂಬ ಅಮೃತಸಂಜೀವಿನೀ ಬೀಜವು ಮನಸ್ಸಿನಲ್ಲಿ ಹೊಕ್ಕರೆ ಅವನು ಹಾಲಾಹಲವೆಂಬ ವಿಷವನ್ನು ಕುಡಿಯಲಿ ಪ್ರಳಯಾಗ್ನಿಯಲ್ಲಿ ಬೀಳಲಿ ಮೃತ್ಯುವಿನ ಬಾಯೊಳಕ್ಕೆ ನುಗ್ಗಲಿ ಭೀತಿಯೆಂಬುದು ಎಲ್ಲಿರುವುದು? ಇರುವುದೇ ಇಲ್ಲ.

೯೮. ಕುಳಿತಿರುವಾಗಲೂ ನಿದ್ರಾಕಾಲದಲ್ಲಿಯೂ ಭೋಜನಮಾಡುವಾಗಲೂ ಆಟವಾಡುವಾಗಲೂ ನಡೆಯುವಾಗಲೂ ನಿತ್ಯವೂ ಯಾವಾಗಲೂ ಕೂಡ ರಾಮನನ್ನೇ ಧ್ಯಾನಿಸಬೇಕು.

ಶ್ರವಣೀಯಃ ಕೀರ್ತನೀಯಶ್ಚಿಂತನೀಯಸ್ಸದಾ ನರೈಃ ।
ಗೇಯಶ್ಚ ಹ್ಯುಪದೇಶ್ಯಶ್ಚ ರಾಮ ಏವಾವನೀತಲೇ ॥ ೯೯ ॥

ಸ್ವರ್ಗೇ ಸುರಾಣಾಮಮೃತಂ ಯಥಾಸ್ತಿ ಪರಮಂ ಶುಭಂ ।
ರಾಮನಾಮಾಮೃತಂ ಭೂಮ್ಯಾಂ ಕ್ಷಯಂ ನಾಪ್ನೋತಿ ವೈ ಕದಾ ॥ ೧೦೦ ॥

ಗೋಪೀಚಂದನಲಿಪ್ತಾಂಗೋ ರಾಮಚಂದ್ರಾಂಕಿತೋ ನರಃ ।
ರಾಮನಾಮೋಚ್ಚಾರಕಶ್ಚ ತುಲಸೀಕಾಷ್ಠಮಾಲಿಕಃ ॥ ೧೦೧ ॥

ಶಂಖಚಕ್ರಗದಾಪದ್ಮಧಾರಕೋ ರಾಮಮಾನಸಃ ।
ಯಸ್ತ್ವತ್ರ ಸ ನರೋ ಧನ್ಯೋ ನೇತರಶ್ಚ ಕದಾಚನ ॥ ೧೦೨ ॥

---

೯೯. ರಾಮನ ಕಥೆಯನ್ನೇ ಕೇಳಬೇಕು. ರಾಮನಾಮವನ್ನೇ ಹೇಳುತ್ತಿರಬೇಕು. ಆ ರಾಮನನ್ನೇ ಚಿಂತಿಸುತ್ತಿರಬೇಕು. ಆ ರಾಮನನ್ನೇ ಧ್ಯಾನಮಾಡುತ್ತಿರಬೇಕು. ಆ ರಾಮನ ವಿಷಯವನ್ನೇ ಪರರಿಗೆ ಉಪದೇಶಿಸಬೇಕು. ಈ ರೀತಿಯಾಗಿ ಯಾವಾಗಲೂ ಮಾಡುತ್ತಿರಬೇಕು.

೧೦೦. ಸ್ವರ್ಗದಲ್ಲಿ ಸುರರಿಗೆ ಅಮೃತವು ಕ್ಷಯವನ್ನು ಹೊಂದದೆ ಸುಖವನ್ನು ಕೊಡುವಂತೆ ಭೂಮಿಯಲ್ಲಿ ರಾಮನಾಮವೆಂಬ ಅಮೃತವು ಕಡಿಮೆಯಾಗದೆ ಸುಖವನ್ನು ಕೊಡತಕ್ಕದ್ದಾಗಿರುವುದು.

೧೦೧–೧೦೨. ಮನುಷ್ಯನು ಗೋಪಿಚಂದನವನ್ನು ಧರಿಸಿಕೊಳ್ಳಬೇಕು. ರಾಮನಾಮದ ಮುದ್ರೆಯನ್ನು ಧರಿಸಬೇಕು. ರಾಮನಾಮವನ್ನು ಉಚ್ಚರಿಸಬೇಕು. ತುಲಸಿಯ ಮಣಿಯನ್ನು ಹಾಕಿಕೊಂಡಿರಬೇಕು. ಶಂಖ, ಚಕ್ರ, ಗದಾ ಪದ್ಮಗಳನ್ನು ಧರಿಸಿಕೊಳ್ಳಬೇಕು. ರಾಮನನ್ನೇ ಮನಸ್ಸಿನಲ್ಲಿ ಸ್ಮರಿಸುತ್ತಿರಬೇಕು. ಅಂತಹವನೇ ಈ ಲೋಕ ಪರಲೋಕಗಳಲ್ಲಿ ಧನ್ಯನು. ಮತ್ತೊಬ್ಬನು ಧನ್ಯನಾಗುವುದಿಲ್ಲ.

ಸ ಏವ ಪುರುಷೋ ಗೇಯೋ ಯೋ ರಾಮೇತಿ ಸದಾ ವದೇತ್ ।
ಸ ಏವ ಪುರುಷೋ ನಿಂದ್ಯಸ್ತ್ವತ್ರ ರಾಮಂ ಸ್ಮರೇನ್ನ ಯಃ ॥ ೧೦೩ ॥

ಯೇ ನರಾಶ್ಶಿವಸದ್ಭಕ್ತಿಂ ಕೃತ್ವಾ ನಿಂದಂತಿ ರಾಘವಂ ।
ಪೂರ್ವವಚ್ಚ ಖರಾಸ್ತೇಪಿ ನರಾ ಜ್ಞೇಯಾವನೀತಲೇ ॥ ೧೦೪ ॥

ರಾಮ ಏವ ಹರೋ ಜ್ಞೇಯಶ್ಶಿವ ಏವ ರಘೂತ್ತಮಃ ।
ಉಭಯೋರ್ನಾಂತರಂ ಜ್ಞೇಯಂ ಭೇದದೃಙ್ನಾರಕೀ ನರಃ ॥ ೧೦೫ ॥

ರಾಮಶಂಕರಯೋರತ್ರ ಭಿನ್ನತ್ವಂ ಯೇನ ಮಾನಿತಂ ।
ಅಜಾಗಳಸ್ತನವಚ್ಚ ತಸ್ಯ ಜನ್ಮ ವೃಥಾ ಗತಂ ॥ ೧೦೬ ॥

---

೧೦೩. ಯಾವನು ಯಾವಾಗಲೂ ರಾಮ ರಾಮ ಎನ್ನುತ್ತಿರುವನೋ ಅವನ ಹೆಸರನ್ನು ಯಾವಾಗಲೂ ಹೇಳುತ್ತಿರಬೇಕು. ಯಾವನು ಯಾವಾಗಲೂ ರಾಮನನ್ನೇ ಸ್ಮರಿಸುತ್ತಿರುವನೋ ಅವನನ್ನೇ ನಮಸ್ಕರಿಸಬೇಕು. ಯಾವನು ರಾಮನಾಮವನ್ನು ಸ್ಮರಿಸುವುದಿಲ್ಲವೊ ಅವನೇ ಲೋಕದಲ್ಲಿ ನಿಂದ್ಯನು.

೧೦೪. ಯಾರು ಶಿವನಲ್ಲಿ ಭಕ್ತಿಯನ್ನು ಇಟ್ಟುಕೊಂಡು ರಾಮನನ್ನು ನಿಂದಿಸುವರೋ ಅವರು ಭೂಮಿಯಲ್ಲಿರುವ ನರರೂಪದ ಕತ್ತೆಗಳೆಂದು ತಿಳಿಯಬೇಕು.

೧೦೫. ರಾಮನೇ ಶಿವನೆಂದೂ ಶಿವನೇ ರಾಮನೆಂದೂ ತಿಳಿಯಬೇಕು. ಇವರಿಬ್ಬರಿಗೂ ಭೇದವೇ ಇರುವುದಿಲ್ಲ. ಇವರಿಬ್ಬರಿಗೂ ಭೇದವನ್ನು ತಿಳಿಯುವವನು ನರಕಭಾಗಿಯಾಗುತ್ತಾನೆ.

೧೦೬. ರಾಮನಿಗೂ ಶಂಕರನಿಗೂ ಭೇದವಿದೆಯೆಂದು ಯಾವನು ತಿಳಿಯುವನೋ ಅವನ ಜನ್ಮವು ಆಡಿನ ಕತ್ತಿನಲ್ಲಿರುವ ಮೊಲೆಗಳಂತೆ ವ್ಯರ್ಥವಾಗುವುದು.

ಶಂಭೋಶ್ಚ ಹೃದಯಂ ರಾಮೋ ರಾಮಸ್ಯ ಹೃದಯಂ ಶಿವಃ।
ನೈವಾಂತರಂ ಕಲ್ಪನೀಯಂ ಕುತರ್ಕೈರ್ವಿವಿಧೈರ್ನರೈಃ ॥ ೧೦೭ ॥

ರಾಮೇತಿ ದ್ವ್ಯಕ್ಷರಂ ನಾಮ ಯೇ ವದಂತಿ ತ್ವಹರ್ನಿಶಂ ।
ನ ಕಸ್ಮಾಪಿ ಭಯಂ ತೇಷಾಂ ಜೀವನ್ಮುಕ್ತಾಶ್ಚ ತೇ ನರಾಃ ॥ ೧೦೮ ॥

ರಾಮಮುದ್ರಾಂಕಿತಂ ದೃಷ್ಟ್ವಾ ನರಂ ತೇ ಯಮಕಿಂಕರಾಃ।
ಪಲಾಯನ್ತೇ ದಶದಿಶೋ ಸಿಂಹಂ ದೃಷ್ಟ್ವಾ ಗಜಾ ಯಥಾ ॥ ೧೦೯ ॥

ಲಲಾಟೇ ಪೃಷ್ಠದೇಶೇ ಚ ಕುಕ್ಷ್ಯೋರ್ದ್ವೇ ಜಠರೇ ತಥಾ।
ಹೃದಯೇ ಭುಜಯೋರ್ದ್ವೇ ಹಿ ಮಸ್ತಕೇ ತ್ವಿತಿ ವೈ ನವ ॥ ೧೧೦ ॥

ರಾಮಮುದ್ರಾ ಧಾರಣೀಯಾ ಗೋಪೀಚಂದನಚಿಹ್ನಿತಾಃ ।
ರಾಮಮುದ್ರಾ ಮಹಾಶ್ರೇಷ್ಠಾ ಸರ್ವದೋಷನಿಕೃಂತನೀ ॥ ೧೧೧ ॥

---

೧೦೭. ಶಂಭುವಿನ ಹೃದಯವೇ ರಾಮನು. ರಾಮನ ಹೃದಯವೇ ಶಂಭುವು. ನಾನಾ ಬಗೆಯಾದ ಕುತರ್ಕಗಳನ್ನು ಕಲ್ಪಿಸಿಕೊಂಡು ಇವರಿಬ್ಬರಿಗೂ ಭೇದವನ್ನು ಕಲ್ಪಿಸಲೇಬಾರದು.

೧೦೮. ರಾಮ ಎಂಬುವ ಎರಡು ಅಕ್ಷರಗಳನ್ನು ಯಾರು ಹಗಲೂ ರಾತ್ರಿಯೂ ಹೇಳುತ್ತಿರುವರೋ ಅವರಿಗೆ ಯಾವುದರಿಂದಲೂ ಭಯವೇ ಇರುವುದಿಲ್ಲ. ಅವರನ್ನು ಜೀವನ್ಮುಕ್ತರೆಂದು ತಿಳಿಯಬೇಕು.

೧೦೯. ರಾಮಮುದ್ರೆಯಿಂದ ಅಂಕಿತವಾದುದನ್ನು ನೋಡಿ ಯಮಕಿಂಕರರು ಸಿಂಹವನ್ನು ನೋಡಿ ಆನೆಗಳು ಸಿಕ್ಕಿದ ಕಡೆಗೆ ಓಡುವಂತೆ ಓಡುತ್ತಾರೆ.

೧೧೦-೧೧೧. ಹಣೆಯಲ್ಲಿ ಒಂದು, ಬೆನ್ನಿನಲ್ಲಿ ಒಂದು, ಪಕ್ಷಗಳಲ್ಲಿ ಎರಡು, ಭುಜಗಳಲ್ಲಿ ಎರಡು, ತಲೆಯಲ್ಲಿ ಒಂದು, ಈ ರೀತಿಯಾಗಿ ಗೋಪಿಚಂದನದಿಂದ ರಾಮಮುದ್ರೆಯನ್ನು ಧರಿಸಬೇಕು. ಈ ರಾಮಮುದ್ರೆಯು ಮಹಾಶ್ರೇಷ್ಠವಾದುದು. ಎಲ್ಲಾ ದೋಷಗಳನ್ನೂ ನಾಶಮಾಡುತ್ತದೆ.

ಸದಾ ದೇಹೇ ನರೈರ್ಧಾರ್ಯಾ ಗೋಪಿಚಂದನಚಿಹ್ನಿತಾ ।
ರಾಮಮುದ್ರಾಸ್ತಿ ಯದ್ದೇಹೇ ತಂ ಪಾಪಂ ಸ್ಪೃಶತೇ ನ ಹಿ ॥ ೧೧೨ ॥

ಸ್ತುತಿಸ್ಸದೈವ ರಾಮಸ್ಯ ಸ್ತೋತ್ರೈಃ ಕಾರ್ಯಾ ತ್ವಹರ್ನಿಶಂ ।
ಪ್ರಾಚೀನೈರ್ವಾ ನವೀನೈಶ್ಚ ಸ್ವಬುದ್ಧ್ಯಾ ರಚಿತೈರಪಿ ॥ ೧೧೩ ॥

ಸ ವಾಗ್ವಿಸರ್ಗೋ ಜನತಾಘವಿಪ್ಲವೋ
ಯಸ್ಮಿನ್ ಪ್ರತಿಶ್ಲೋಕ ಮಬದ್ಧವತ್ಯಪಿ ।
ನಾಮಾನ್ಯನಂತಸ್ಯ ಯಶೋಂಕಿತಾನಿ
ಯಚ್ಛೃಣ್ವಂತಿ ಗಾಯಂತಿ ಗೃಣಂತಿ ಸಾಧವಃ ॥ ೧೧೪ ॥

ಕವಿತ್ವಮತ್ಯಶುದ್ಧಂ ಚ ರಾಮನಾಮಾಂಕಿತಂ ಚ ಯತ್ ॥
ತತ್ ಜ್ಞೇಯಮತಿಶುದ್ಧಂ ಚ ಶ್ರವಣಾತ್ಪಾತಕಾಪಹಂ ॥ ೧೧೫ ॥

---

೧೧೨. ಮನುಷ್ಯನು ಗೋಪಿಚಂದನದಲ್ಲಿ ರಾಮಮುದ್ರೆಯನ್ನು ದೇಹದಲ್ಲಿ ಯಾವಾಗಲೂ ಧರಿಸಲೇಬೇಕು. ರಾಮಮುದ್ರೆಯು ದೇಹದಲ್ಲಿ ಇದ್ದರೆ ಅವನನ್ನು ಪಾಪಗಳು ಮುಟ್ಟುವುದಿಲ್ಲ.

೧೧೩. ಮನುಷ್ಯನು ಹಗಲೂ ರಾತ್ರಿಯೂ ರಾಮನ ಸ್ತುತಿಯನ್ನು ಮಾಡಬೇಕು. ಆ ಸ್ತೋತ್ರಗಳು ಪ್ರಾಚೀನಸ್ತೋತ್ರಗಳಾಗಿರಲಿ ಹೊಸಬರು ಮಾಡಿದ ಸ್ತೋತ್ರಗಳಾಗಿರಲಿ ಅಥವಾ ತಾನು ತನ್ನ ಬುದ್ಧಿಯಿಂದ ಕಲ್ಪಿಸಿಕೊಂಡವುಗಳೇ ಆಗಲಿ ಆಗಿರಬಹುದು.

೧೧೪. ಶ್ಲೋಕವು ಅಬದ್ಧವಾಗಿದ್ದರೂ ಯಾವ ಶ್ಲೋಕವನ್ನು ಹೇಳುತ್ತ ಸಾಧುಗಳು ಅದರಲ್ಲಿರುವ ಶ್ರೀರಾಮನಾಮಗಳನ್ನೇ ಹೇಳುತ್ತ ಕೇಳುತ್ತ ಗಾನಮಾಡುತ್ತಿರುವರೋ ಜನಗಳ ಪಾಪವನ್ನು ನಾಶಮಾಡುವ ಅಂತಹ ಶ್ಲೋಕವೇ ಉತ್ತಮವಾದುದು. ಅದೇ ಲೋಕಪಾಪಪರಿಹಾರಕರವಾದುದು.

೧೧೫. ಕವಿತ್ವವು ಬಹು ಅಶುದ್ಧವಾಗಿದ್ದರೂ ಅದರಲ್ಲಿ ರಾಮನಾಮವು ಹೇಳಲ್ಪಟ್ಟಿದ್ದರೆ ಅದನ್ನು ಅತಿಶುದ್ಧವೆಂದು ತಿಳಿಯಬೇಕು. ಅದನ್ನು ಕೇಳುವುದರಿಂದಲೇ ಪಾಪವು ನಾಶವಾಗುವುದು.

ಯಸ್ಮಿನ್ ರಾಮಸ್ಯ ಕೃಷ್ಣಸ್ಯ ಚರಿತ್ರಾಣಿ ಮಹಾಂತಿ ಚ ।
ಕವಿತ್ವೇ ತತ್ಪುಣ್ಯತಮಂ ಸದಾ ಗೇಯಂ ಮಹತ್ತಮೈಃ ॥ ೧೧೬ ॥

ಶೃಣು ಶಿಷ್ಯ ತವಾಗ್ರೇನ್ಯದ್ಗುಹ್ಯಂ ಕಿಂಚಿದ್ಬ್ರವೀಮ್ಯಹಂ ।
ಕವಿತಾವಿಷಯಂ ಯಚ್ಚ ಸರ್ವಸಂದೇಹನಾಶಕಂ ॥ ೧೧೭ ॥

ಅಶ್ವತ್ಥಾಮಾ ಬಲಿರ್ವ್ಯಾಸೋ ಹನೂಮಾಂಶ್ಚ ವಿಭೀಷಣಃ ।
ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ॥ ೧೧೮ ॥

ಏವಂ ಯದ್ವಚನಂ ಶಿಷ್ಯ ಪ್ರೋಚ್ಯತೇ ಸರ್ವದಾ ಬುಧೈಃ ।
ತದಗ್ರೇ ಸರ್ವದಾ ಸತ್ಯಂ ಜ್ಞೇಯಂ ಕಲಿಯುಗೇಪಿ ಚ ॥ ೧೧೯ ॥

ಯೇಷು ಮಂತ್ರಬಲಂ ಭೂಮ್ಯಾಂ ವರ್ತತೇತ್ರ ನರೇಷು ಹಿ ।
ಅಶ್ವತ್ಥಾಮಾಂಶಭೂತಾಸ್ತೇ ಜ್ಞೇಯಾಶ್ಚ ಪುರುಷಾ ಬುಧೈಃ ॥ ೧೨೦ ॥

---

೧೧೬. ಯಾವ ಗ್ರಂಥದಲ್ಲಿ ರಾಮನ ಮತ್ತು ಕೃಷ್ಣನ ಅಥವಾ ಒಬ್ಬೊಬ್ಬರ ಚರಿತ್ರೆಗಳೂ ಹೆಚ್ಚಾಗಿವೆಯೋ ಆ ಕವಿತ್ವವೇ ಪುಣ್ಯತಮವಾದುದು. ಅದನ್ನೇ ಯಾವಾಗಲೂ ಜನಗಳು ಹೇಳುತ್ತಿರಬೇಕು.

೧೧೭. ಎಲೈ ಶಿಷ್ಯನೇ ! ಕೇಳು. ನಿನ್ನ ಎದುರಿನಲ್ಲಿ ಗುಹ್ಯತಮವಾದ ವಿಷಯವನ್ನು ಹೇಳುತ್ತೇನೆ. ಅದು ಕವಿತ್ವದ ವಿಷಯವು. ಎಲ್ಲಾ ಸಂದೇಹಗಳನ್ನೂ ನಾಶಮಾಡುತ್ತದೆ.

೧೧೮-೧೧೯ ಅಶ್ವಥಾಮ, ಬಲಿ, ವ್ಯಾಸ, ಹನುಮಂತ, ವಿಭೀಷಣ, ಕೃಪ, ಪರಶುರಾಮ ಇವರು ಏಳುಜನರೂ ಚಿರಂಜೀವಿಗಳು· ಎಂಬತಕ್ಕ ಯಾವ ಮಾತನ್ನು ತಿಳಿದವರು ಹೇಳುತ್ತಾರೆಯೋ ಆದು ಖಂಡಿತವಾಗಿಯೂ ಸತ್ಯವಾದುದು. ಅದು ಕಲಿಯುಗದಲ್ಲಿ ಬಹು ಸತ್ಯವಾದುದು ಎಂಬುದಾಗಿ ತಿಳಿ.

೧೨೦-೧೨೬. ಈ ಪ್ರಪಂಚದಲ್ಲಿ ಯಾವ ಜನರಲ್ಲಿ ಮಂತ್ರಬಲವಿರುವುದೋ ಅವರೆಲ್ಲರೂ ಅಶ್ವತ್ಥಾಮಾಂಶಸಂಭೂತರಾದವರೆಂದು ತಿಳಿ. ನ್ಯಾಯದಿಂದ

ನ್ಯಾಯಾರ್ಜಿತೇನ ದ್ರವ್ಯೇಣ ರಾಜ್ಯಂ ಕುರ್ವಂತಿ ಧರ್ಮತಃ ।
ಬಲ್ಯಂಶಭೂತಾಸ್ತೇ ಜ್ಞೇಯಾ ಮಾನವಾ ಜಗತೀತಲೇ ॥ ೧೨೧ ॥

ರಾಮಸ್ತುತಿಂ ಕವಿತ್ವೇ ಯೇ ಚರಿತ್ರಂ ವರ್ಣಯಂತಿ ಚ ।
ವ್ಯಾಸಾಂಶಭೂತಾಸ್ತೇ ಜ್ಞೇಯಾ ಮಾನವಾ ಜಗತೀತಲೇ ॥ ೧೨೨ ॥

ಯೇ ಯೇ ವೀರಾಸ್ತ್ವತ್ರ ಭೂಮ್ಯಾಂ ವಾಯುಪುತ್ರಾಂಶರೂಪಿಣಃ ।
ತೇ ತೇ ಜ್ಞೇಯಾ ನರಾಸ್ತಸ್ಯ ಚಿರಂಜೀವಿತ್ವಸೂಚಕಾಃ ॥ ೧೨೩ ॥

ಯೇ ಯೇ ಶಾಂತಾ ರಾಮಭಕ್ತಾಸ್ಸಂತ್ಯತ್ರ ಮಾನವಾ ಭುವಿ ।
ವಿಭೀಷಣಾಂಶಭೂತಾಸ್ತೇ ಜ್ಞೇಯಾಶ್ಚ ಸಕಲೈರ್ಜನೈಃ ॥ ೧೨೪ ॥

ಯೇ ಧೈರ್ಯವಂತೋ ಯೋದ್ಧಾರಸ್ಸಂತ್ಯತ್ರ ಮಾನವಾ ಭುವಿ ।
ಕೃಪಾಚಾರ್ಯಾಂಶಭೂತಾಸ್ತೇ ಜ್ಞೇಯಾಸ್ಸರ್ವೇ ಬುಧೈಸ್ಸದಾ ॥ ೧೨೫ ॥

ಯೇ ವೀರಾಃ ಕ್ರೋಧಸಂಯುಕ್ತಾಸ್ತೇತ್ರ ಸರ್ವೇವನೀತಲೇ ।
ಜಾಮದಗ್ನ್ಯಂಶಭೂತಾಶ್ಚ ಸದಾ ಜ್ಞೇಯಾ ನರೋತ್ತಮೈಃ ॥ ೧೨೬ ॥

ಹಣವನ್ನು ಸಂಪಾದನೆಮಾಡುತ್ತ ಯಾವ ರಾಜರು ರಾಜ್ಯಭಾರವನ್ನು ಧರ್ಮದಿಂದ ಮಾಡುತ್ತಾರೆಯೋ ಅವರು ಬಲಿಯ ಅಂಶದಿಂದ ಹುಟ್ಟಿದವರೆಂದು ತಿಳಿ. ರಾಮಚರಿತ್ರೆಯನ್ನು ವರ್ಣಿಸುತ್ತ ಯಾರು ರಾಮಸ್ತುತಿಯನ್ನೇ ಮಾಡುತ್ತಾರೆಯೋ ಅವರು ಈ ಪ್ರಪಂಚದಲ್ಲಿ ವ್ಯಾಸನ ಅಂಶದಿಂದ ಹುಟ್ಟಿದವರೆಂದು ತಿಳಿ. ಈ ಭೂಮಿಯಲ್ಲಿ ಯಾರು ವಾಯುಪುತ್ರನ ಅಂಶದವರೋ ಅವರೆಲ್ಲರೂ ಚಿರಂಜೀವಿಗಳೆಂದು ತಿಳಿ. ಎಂದರೆ ಚಿರಂಜೀವಿಗಳೆಲ್ಲರೂ ವಾಯುಪುತ್ರಾಂಶ ಸೂಚಕರು. ಯಾರು ಶಾಂತರಾಗಿ ರಾಮಭಕ್ತರಾಗಿ ಭೂಮಿಯಲ್ಲಿರುವರೋ ಅವರೆಲ್ಲರೂ ವಿಭೀಷಣಾಂಶದಿಂದ ಹುಟ್ಟಿದವರೆಂದು ತಿಳಿ. ಯಾರು ಧೈರ್ಯವಂತರಾಗಿ ಯುದ್ಧಮಾಡುತ್ತಾರೆಯೋ ಅವರೆಲ್ಲರೂ ಕೂಡ ಕೃಪಾಚಾರ್ಯರ ಅಂಶದಿಂದ ಹುಟ್ಟಿದವರೆಂದು ತಿಳಿಯಬೇಕು. ಯಾರು ವೀರರಾಗಿ ಕೋಪವುಳ್ಳವರಾಗಿರುವರೋ ಅವರೆಲ್ಲರೂ ಈ ಭೂಮಿಯಲ್ಲಿ ಜಾಮದಗ್ನ್ಯ ರಾಮನ ಅಂಶದಿಂದ ಹುಟ್ಟಿದವರೆಂದು ತಿಳಿ.

ಚಿರಂಜೀವೀತಿ ವ್ಯಾಸಃ ಕಃ ಕಥಂ ಜ್ಞೇಯೋ ಜನೈರ್ಭುವಿ ।
ತಸ್ಯ ಸ್ವರೂಪಂ ವಕ್ಷ್ಯಾಮಿ ಸಾವಧಾನಮನಾಶ್ಶೃಣು ॥ ೧೨೭ ॥

ಯೇ ಗೀರ್ವಾಣ್ಯಾ ಕವಿತ್ವಾನಿ ಕರಿಷ್ಯಂತ್ಯವನೀತಲೇ ।
ವ್ಯಾಸಸ್ಯಾಂಶಭೂತಾಸ್ತೇ ಜ್ಞೇಯಾ ಪಂಡಿತಾ ಮಾನವಾಸ್ತ್ವಿಹ ॥ ೧೨೮ ॥

ಯೇ ರಾಮಚಂದ್ರಂ ಕೃಷ್ಣಂ ಚ ಶಿವಂ ಸ್ತುತ್ವಾ ಸ್ತುವಂತಿ ಹಿ ।
ವರ್ಣಯಂತಿ ಚರಿತ್ರಾಣಿ ತೇ ಜ್ಞೇಯಾ ವ್ಯಾಸಮೂರ್ತಯಃ ॥ ೧೨೯ ॥

ಯೇ ರಾಜಾನಂ ಚ ಗಣಿಕಾಂ ನಾರೀಂ ರಾಜ್ಞಸ್ಸಭಾಂ ತಥಾ ।
ನರಂ ಸ್ತುವಂತಿ ಸ್ತುತ್ಯಾ ತೇ ನ ಜ್ಞೇಯಾ ವ್ಯಾಸಮೂರ್ತಯಃ ॥ ೧೩೦ ॥

ಯಾವದ್ಭೂಮ್ಯಾಂ ತು ರಾಮಸ್ಯ ಚರಿತ್ರಾಣಿ ಸ್ತುವಂತಿ ಹಿ ।
ತಾವದತ್ರ ಸ್ಮೃತೋ ವ್ಯಾಸಸ್ತತೋ ಮುಕ್ತಿಂ ಗಮಿಷ್ಯತಿ ॥ ೧೩೧ ॥

---

೧೨೭. ವ್ಯಾಸನು ಚಿರಂಜೀವಿಯೆಂದೂ ಅವನಾರೆಂದೂ ಹ್ಯಾಗೆ ತಿಳಿಯಬೇಕು. ಎಂಬುದನ್ನು ಹೇಳುತ್ತೇನೆ. ನಾನು ಹೇಳುವ ಅವನ ಸ್ವರೂಪವನ್ನು ಮನಸ್ಸಿಟ್ಟು ಕೇಳು.

೧೨೮-೧೨೯. ಯಾರು ಸಂಸ್ಕೃತದಲ್ಲಿ ಕವಿತ್ವವನ್ನು ಭೂಮಿಯಲ್ಲಿ ಮಾಡುತ್ತಾರೆಯೋ ಆ ಪಂಡಿತರೆಲ್ಲರೂ ವ್ಯಾಸಾಂಶಸಂಭೂತರೆಂದು ತಿಳಿ. ಯಾರು ರಾಮನನ್ನೂ ಕೃಷ್ಣನನ್ನೂ ಶಿವನನ್ನೂ ಸ್ತುತಿಯ ಕವಿತ್ವದಿಂದ ಸ್ತುತಿಸುವರೋ ಅವರು ವ್ಯಾಸಾಂಶರೆಂದು ತಿಳಿ.

೧೩೦. ಯಾರು ರಾಜರನ್ನೂ ಸೂಳೆಯರನ್ನೂ ಸಭೆಯನ್ನೂ ಮನುಷ್ಯನನ್ನೂ ತನ್ನ ಕವನದಲ್ಲಿ ಸ್ತುತಿಸುವರೋ ಅವರನ್ನು ವ್ಯಾಸಮೂರ್ತಿಗಳೆಂದು ತಿಳಿ.

೧೩೧-೧೩೨. ಭೂಮಿಯಲ್ಲಿರುವವರೆಗೂ ಯಾವ ಮನುಷ್ಯನು ರಾಮಚರಿತ್ರೆಯನ್ನು ಸ್ತುತಿಸುತ್ತಾ ಇರುವನೋ ಅವನು ವ್ಯಾಸನೆಂದೇ ತಿಳಿ.

ಕಿಂ ಫಲಂ ಕಸ್ಯ ಪಾಠಾಚ್ಚ ತದ್ಬ್ರವೀಮಿ ತವಾಧುನಾ ।
ಶೃಣು ಸ್ವಸ್ಥಮನಾ ಶಿಷ್ಯ ವಿಸ್ತರೇಣೋಚ್ಯತೇ ಚ ಯತ್ ॥ ೧೩೨ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಮನೋಹರಕಾಂಡೇ ಲಕ್ಷೋದ್ಯಾಪನಾದಿವರ್ಣನಂ ನಾಮ ಸಪ್ತಮಸ್ಸರ್ಗಃ ಸಮಾಪ್ತಃ

ಆನಂತರ ಅವನು ಮುಕ್ತಿಯನ್ನು ಹೊಂದುತ್ತಾನೆ. ಯಾವುದನ್ನು ಪಠಿಸಿದರೆ ಯಾವ ಫಲವು ಬರುತ್ತದೆಂಬುದನ್ನು ನಿನಗೆ ಈಗ ಹೇಳುತ್ತೇನೆ. ವಿಸ್ತಾರವಾಗಿಯೂ ಹೇಳುತ್ತೇನೆ. ಅದನ್ನು ಸರಿಯಾದ ಮನಸ್ಸಿನಿಂದ ಕೇಳು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀ ಆನಂದರಾಮಾಯಣದ ಮನೋಹರಕಾಂಡದಲ್ಲಿ ರಾಮನಾಮ ಲಕ್ಷೋದ್ಯಾಪನವೆಂಬ ಏಳನೆಯ ಸರ್ಗವು ಮುಗಿದುದು.

—o—o—o—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಏಳನೆಯ ಸರ್ಗದ ಸಾರಾಂಶವು

ಶ್ರೀರಾಮ ಪ್ರೀತ್ಯರ್ಥವಾಗಿ ಪ್ರತಿದಿನವೂ ಒಂಭೈನೂರು ರಾಮ ನಾಮಗಳನ್ನು ಕಾಗದಮೇಲೆ ಬರೆಯಬೇಕು. ಆದಾಗದಿದ್ದರೆ ಒಂದುನೂರು ಎಂಟನ್ನು ಬರೆಯಬೇಕು. ಈ ರೀತಿಯಾಗಿ ಒಂದು ಕೋಟಿ ರಾಮನಾಮ ಗಳಾಗುವವರೆಗೂ ಬರೆಯಬೇಕು. ಅಥವಾ ಒಂದು ಲಕ್ಷದವರೆಗಾದರೂ ಬರೆಯಬಹುದು. ಅದರ ಹತ್ತನೇ ಒಂದು ಭಾಗದಷ್ಟು ಹೋಮವನ್ನು ಮಾಡ ಬೇಕು. ರಾಮನನ್ನು ಪೂಜಿಸಲು ರಾಮತೋಭದ್ರಾಸನಗಳಲ್ಲಿ ಯಾವುದಾದರೂ ಒಂದನ್ನು ಇಡಬೇಕು.

ರಾಮನಾಮವೆಂಬುದು ಬಹು ಉತ್ತಮವಾದ ಮಂತ್ರವು. ಶ್ರೀರಾಮನು ಹನುಮಂತನಿಗೆ ಇದನ್ನು ಉಪದೇಶಮಾಡಿದುದರಿಂದಲೇ ಅವನಿಗೆ ಸಮುದ್ರವನ್ನು ದಾಟುವ ಶಕ್ತಿಯೂ ರಾಕ್ಷಸರನ್ನು ಸಂಹರಿಸುವ ಶಕ್ತಿಯೂ ಬಂದುವು. ಇದರಿಂದ ಸೀತೆಯ ಸಮಾಚಾರವನ್ನು ತಂದನು.

ಶ್ರೀರಾಮನ ಮಂತ್ರಗಳು ಅನೇಕವಾಗಿದ್ದರೂ ಶ್ರೀರಾಮ ಎಂಬುದೇ ಉತ್ತಮವಾದುದು. ಇದನ್ನು ಲಕ್ಷದಷ್ಟು ಜಪಿಸಿ ಹೋಮವನ್ನು ಮಾಡಬೇಕು. ಹೆಚ್ಚು ಜಪಿಸುವುದಾದರೆ ಲಕ್ಷ ಲಕ್ಷಕ್ಕೂ ಉದ್ಯಾಪನೆಯನ್ನು ಮಾಡಬೇಕು. ಆ ಸಮಯಗಳಲ್ಲಿ ರಾಮ ಸೀತೆ ಲಕ್ಷ್ಮಣರ ಪ್ರತಿಮೆಗಳನ್ನಿಟ್ಟು ಪೂಜಿಸಬೇಕು. ತ್ರದಂಗವಾಗಿ ಬ್ರಾಹ್ಮಣಭೋಜನವನ್ನು ಮಾಡಿಸಬೇಕು. ಇದರಿಂದ ಇಷ್ಟಾರ್ಥಗಳು ಕೈಗೂಡುತ್ತವೆ. ಸರ್ವವಿಧಗಳಲ್ಲಿಯೂ ರಾಮನಾಮವನ್ನು ಸ್ಮರಿಸುತ್ತಿದ್ದರೆ ಅವನು ಪೂತನೂ ಧನ್ಯನೂ ಆಗುವನು.

ರಾಮನ ವಿಷಯದಲ್ಲಿ ಕವಿತ್ವವನ್ನು ಮಾಡುತ್ತಾ ಹಾಡುತ್ತಿರಬೇಕು.

॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ಅಷ್ಟಮಸ್ಸರ್ಗಃ

॥ ಶ್ರೀರಾಮ ಉವಾಚ ॥

ಶಿರೋವ್ಯಾಹೃತಿಸಂಯುಕ್ತಾ ಗಾಯತ್ರೀ ಪರಿಕೀರ್ತಿತಾ ।
ವೇದಾಕ್ಷರಾಣಾಂ ತುಲ್ಯಾ ಸಾ ಶತೇನ ಮುನಿಭಿಃ ಸ್ಮೃತಾ ॥ ೧ ॥

ಚತುಶ್ಶತೇನ ಗಾಯತ್ರ್ಯಸ್ಸಂಮಿತಂ ಪರಿಕೀರ್ತಿತಂ ।
ಪಾವಮಾನಂ ಮಹಾಸೂಕ್ತಂ ಷಟ್ಶತರ್ಚಂ ಸುಪುಣ್ಯದಂ ॥ ೨ ॥

ತತೋಪನಿಷದಃ ಪುಣ್ಯಾ ಗಾಯತ್ರ್ಯಕ್ಷರಸಂಖ್ಯಯಾ ।
ಪ್ರೋಚ್ಯಂತೇ ಪುಣ್ಯದಾ ಲೋಕೇ ಪುಣ್ಯ ಸೂಕ್ತಾನಿ ಯಾನ್ಯಪಿ ॥ ೩ ॥

ಶ್ರೀಮದಾನಂದರಾಮಾಯಣದಲ್ಲಿ ಮನೋಹರಕಾಂಡದ ಎಂಟನೆಯ ಸರ್ಗವು

೧. ಶ್ರೀರಾಮನು ಹೇಳಿದನು-ಬ್ರಹ್ಮಶಿರಸ್ಸು ವ್ಯಾಹೃತಿಗಳಿಂದ ಕೂಡಿಸಿ ಗಾಯತ್ರಿಯನ್ನು ಒಂದುನೂರು ಬಾರಿ ಜಪಿಸಿದರೆ ಅದು ವೇದಾಕ್ಷರಗಳಿಗೆ ಸಮಾನವೆಂದು ಮುನಿಗಳು ಹೇಳುತ್ತಾರೆ.

೨. ಗಾಯತ್ರಿಯನ್ನು ನಾನೂರುಬಾರಿ ಜಪಿಸುವಿಕೆಯು ನೂರಾರು ಋಕ್ಕುಗಳಿಂದ ಕೂಡಿದ ಪವಮಾನಮಹಾಸೂಕ್ತಕ್ಕೆ ಸಮಾನವು.

೩. ಉಪನಷತ್ತುಗಳೂ ಪುಣ್ಯಸೂಕ್ತಗಳೂ ಎಷ್ಟಿರುವುವೋ ಅಷ್ಟೂ ಕೂಡ ಗಾಯತ್ರಿಯ ಅಕ್ಷರಗಳೆಷ್ಟಿವೆಯೋ ಅಷ್ಟುಬಾರಿ ಗಾಯತ್ರಿಯನ್ನು ಜಪಮಾಡುದುದಕ್ಕೆ ಸಮಾನವು.

ಸಂಹಿತಾಪಾಠತಃ ಪ್ರೋಕ್ತಂ ದ್ವಿಗುಣಂ ಪದಪಾಠತಃ ।
ತ್ರಿಗುಣಂ ಕ್ರಮಪಾಠೇ ಸ್ಯಾಜ್ಜಟಾಪಾಠೇ ತು ಷಡ್ಗುಣಂ ॥ ೪ ॥

ಮಹಾಭಾರತಪಾಠಸ್ತು ವೇದತುಲ್ಯಃ ಪ್ರಕೀರ್ತಿತಃ ।
ಪುರಾಣಾನಾಂ ತದರ್ಧೇನ ಸ್ಮೃತೀನಾಂ ಚ ತಥೋಚ್ಯತೇ ॥ ೫ ॥

ಭಾರತೇ ಭಗವದ್ಗೀತಾ ತಥಾ ನಾಮಸಹಸ್ರಕಂ ।
ಗಾಯತ್ರ್ಯಾಶ್ಚ ಸಮಂ ಪ್ರೋಕ್ತಂ ಪುಣ್ಯೇ ಪಾಪಕ್ಷಯೇಽಪಿ ಚ ॥ ೬ ॥

ಪಾಠೇನ ಯತ್ಫಲಂ ಪ್ರೋಕ್ತಮರ್ಥಜ್ಞಾನಾಚ್ಚತುರ್ಗುಣಂ ।
ಸದ್ಭಕ್ತೇಭ್ಯಃ ಶ್ರಾವಣಾಚ್ಚ ಪುಣ್ಯಂ ದಶಗುಣಂ ಸ್ಮೃತಂ ॥ ೭ ॥

---

೪. ವೇದದ ಸಂಹಿತಾಪಾಠಕ್ಕಿಂತ ಸಂಹಿತಾಪದ ಪಾಠವು ಎರಡರಷ್ಟು ಫಲವನ್ನು ಕೊಡುತ್ತದೆ. ಕ್ರಮಪಾಠವು ಮೂರರಷ್ಟು ಫಲವನ್ನೂ ಜಟಾಪಾಠವು ಆರರಷ್ಟು ಫಲವನ್ನೂ ಕೊಡುತ್ತದೆ.

೫. ಮಹಾಭಾರತವನ್ನು ಒಂದುಬಾರಿ ಓದಿದರೆ ಅದು ವೇದವನ್ನು ಒಂದು ಬಾರಿ ಓದಿದ ಫಲವನ್ನು ಕೊಡುತ್ತದೆ. ಪುರಾಣಗಳೂ ಸ್ಮೃತಿಗಳೂ ಆ ಮಹಾ ಭಾರತದ ಪಾಠದ ಅರ್ಧಫಲವನ್ನು ಕೊಡುತ್ತವೆ.

೬. ಭಾರತದಲ್ಲಿರುವ ಭಗವದ್ಗೀತೆಯೂ ಅಂತೆಯೇ ಸಹಸ್ರನಾಮವೂ ಪುಣ್ಯವನ್ನುಂಟುಮಾಡುವುದರಲ್ಲಿಯೂ ಪಾಪವನ್ನು ನಾಶಮಾಡುವುದರಲ್ಲಿಯೂ ಗಾಯತ್ರಿಗೆ ಸಮವಾದುವು.

೭. ಅರ್ಥ ತಿಳಿಯದೆ ಅನುಪೂರ್ವಿಯಾನ್ನು ಓದುವುದರಿಂದ ಯಾವ ಫಲವು ಬರುತ್ತದೆಯೋ ಆದಕ್ಕಿಂತಲೂ ಅರ್ಥವನ್ನು ತಿಳಿದುಕೊಂಡು ಅನುಪೂರ್ವಿಯನ್ನು ಓದಿದರೆ ನಾಲ್ಕರಷ್ಟು ಹೆಚ್ಚು ಫಲವು ಬರುವುದು. ಭಕ್ತರಿಂದೆಸೆಯಿಂದ ಕೇಳಿದರೆ ಆ ಪುಣ್ಯವು ಹತ್ತರಷ್ಟು ಹೆಚ್ಚು ಬರುತ್ತದೆ.

ಭೂಮಿದಾನಂ ಯಥಾ ಲೋಕೇ ಮಹಾದಾನಮಿತೀರಿತಂ ।
ವಿದ್ಯಾದಾನಂ ದಶಗುಣಂ ತತೋಽಪಿ ಸ್ಯಾತ್ಫಲಪ್ರದಂ ॥ ೮ ॥

॥ ವಿಷ್ಣುದಾಸ ಉವಾಚ ॥

ಕಸ್ಮೈ ದಾನಂ ಪ್ರಕರ್ತವ್ಯಂ ಸುವರ್ಣಸ್ಯೇತರಸ್ಯ ವಾ ।
ಕಥಂ ವಾ ಪಾತ್ರತಾಮೇತಿ ಬ್ರಾಹ್ಮಣಶ್ಚೇತರೋಽಥವಾ ॥ ೯ ॥

॥ ರಾಮದಾಸ ಉವಾಚ ॥

ವಸೇದ್ಗುರುಕುಲೇ ಯಸ್ತು ಭಿಕ್ಷಾನ್ನಾಶೀ ಶ್ರುತಿಂ ಪಠೇ ।
ಅಧೀತ್ಯ ಶಾಖಾಂ ಪೂರ್ಣಂ ಸ ಯಥೋಕ್ತಂ ಲಭತೇ ಫಲಂ ॥ ೧೦ ॥

ಶಿಷ್ಯಸ್ಯಾಧ್ಯಾಪಕಸ್ಯಾಪಿ ಸಂಹಿತಾಂ ಪಠತಃ ಫಲಂ ।
ಪ್ರತ್ಯಕ್ಷರಂ ತು ಗಾಯತ್ರೀ ಸಕೃಜ್ಜಪ್ತಸಮಂ ಭವೇತ್ ॥ ೧೧ ॥

---

೮. ಲೋಕದಲ್ಲಿ ಭೂಮಿದಾನವು ಮಹಾದಾನವೆಂದು ಹೇಳಲ್ಪಟ್ಟಿದೆ. ಆ ಭೂಮಿದಾನಕ್ಕಿಂತಲೂ ವಿದ್ಯಾದಾನವು ಹತ್ತರಷ್ಟು ಹೆಚ್ಚು ಫಲವನ್ನು ಕೊಡುತ್ತದೆ.

೯. ವಿಷ್ಣುದಾಸನು ಹೇಳಿದನು--ಎಲೈ ಗುರುವೇ ! ಸುವರ್ಣದಾನವನ್ನೇ ಆಗಲೀ ಇತರ ದಾನವನ್ನೇ ಆಗಲಿ ಯಾರಿಗೆ ದಾನಮಾಡಬೇಕು ? ಬ್ರಾಹ್ಮಣನಾಗಲಿ ಇತರನಾಗಲಿ ಆ ದಾನವನ್ನು ತೆಗೆದುಕೊಳ್ಳಲು ಹೇಗೆ ಅರ್ಹನಾಗುವನು.

೧೦. ರಾಮದಾಸನು ಹೇಳಿದನು-ಯಾವನು ಗುರುಕುಲದಲ್ಲಿದ್ದುಕೊಂಡು ಭಿಕ್ಷಾನ್ನವನ್ನೂಟಮಾಡುತ್ತಾ ವೇದವನ್ನು ಓದಿಕೊಂಡು ತನ್ನ ಶಾಖೆಯನ್ನು ಪೂರ್ತಿಮಾಡಿಕೊಂಡು ಇರುವನೋ ಅವನಿಗೆ ದಾನವನ್ನು ಕೊಟ್ಟರೆ ಆ ದಾನಕ್ಕೆ ಹೇಳಿರುವ ಫಲವು ಲಭಿಸುತ್ತದೆ.

೧೧. ಶಿಷ್ಯನಾಗಲಿ ಗುರುವಾಗಲಿ ಗಾಯಿತ್ರಿಯನ್ನು ಅದರ ಅಕ್ಷರದಷ್ಟು ಬಾರಿ ಪುನಶ್ಚರಣ ಮಾಡಿದರೆ ಅವನಿಗೆ ಸಹಿಂತೆಯನ್ನು ಒಂದುಬಾರಿ ಓದಿದ ಫಲವು ಬರುತ್ತದೆ.

ಪದಪಾಠೇ ತದರ್ಧಂಸ್ಯಾತ್ತದರ್ಧಂ ಕ್ರಮಪಾಠತಃ ।
ಸಂಹಿತಾಪಾಠತೋ ದ್ವಿಘ್ನಂ ಗಾಥಾಪಾಠಫಲಂ ಸ್ಮೃತಂ ॥ ೧೨ ॥

ತತೋಽಪ್ಯುಪನಿಷತ್ಪಾಠೈಃ ದ್ವಿಗುಣಂ ಫಲಮೀರಿತಂ ।
ಪಾಠೇ ಚ ಪಾಠನೇ ತುಲ್ಯಂ ಫಲಂ ವೈ ಗುರುಶಿಷ್ಯಯೋಃ ॥ ೧೩ ॥

ಅಧಿತಾತ್ತ್ರಿಗುಣಂ ತು ಸ್ಯಾತ್ಫಲಂ ವೈ ಕಂಠಪಾಠತಃ ।
ತದರ್ಧಂ ಲೇಖ್ಯಪಾಠಸ್ತು ಫಲಮುಕ್ತಂ ಮನೀಷಿಭಿಃ ॥ ೧೪ ॥

ಅಧಿತ್ಯಾಪಿ ನ ಯಸ್ಯ ಸ್ಯಾತ್ಕಂಠಪಾಠಸಮಂ ಸ ವತಃ ।
ಕೃತೇ ಯತ್ನೇಽಪಿ ದೈವೇನ ಸ ಲಭೇತ್ಪಾಠಮಾತ್ರಜಂ ॥ ೧೫ ॥

---

೧೨. ಪದಪಾಠವು ಸಂಹಿತಾ ಪಾಠದ ಅರ್ಧದಷ್ಟು ಫಲವನ್ನೂ ಕ್ರಮ ಪಾಠವು ಅದರಲ್ಲಿಯೂ ಅರ್ದ ಫಲವನ್ನೂ ಕೊಡುತ್ತದೆ. ಸಂಹಿತಾ ಪಾಠಕ್ಕಿಂತಲೂ ಗಾಥಾ ಪಾಠವು ಎರಡರಷ್ಟು ಫಲವನ್ನು ಕೊಡುತ್ತದೆ.

೧೩. ಆ ಗಾಥಾಪಾಠದ ಅಧ್ಯಯನಕ್ಕಿಂತಲೂ ಉಪನಿಷತ್ಪಾಠವು ಆ ಗಾಥ ಪಾಠದ ಎರಡರಷ್ಟು ಫಲವನ್ನು ಕೊಡುತ್ತದೆ. ಈ ವಿದ್ಯೆಗಳನ್ನು ಹೇಳುವವನಿಗೂ ಹೇಳಿಸಿಕೊಳ್ಳುವವನಿಗೂ ಎಂದರೆ ಗುರುಶಿಷ್ಯರಿಬ್ಬರಿಗೂ ಈ ಫಲವು ಸಮವು.

೧೪. ಅಧ್ಯಯನ ಮಾಡಿದರೆ ಬರುವ ಫಲಕ್ಕಿಂತಲೂ ಅದನ್ನು ಕಂಡಪಾಠ ಮಾಡಿದರೆ ಮೂರರಷ್ಟು ಫಲವು ಬರುತ್ತದೆ. ಕಂಡಪಾಠಮಾಡಿದರೆ ಬರುವ ಫಲದಲ್ಲಿ ಅರ್ಧಫಲವು ಅದನ್ನು ಬರೆದರೆ ಬರುತ್ತದೆ.

೧೫. ಅಧ್ಯಯನ ಮಾಡಿದರೂ ಯಾವನು ಪ್ರಯತ್ನಪಟ್ಟರೂ ಕೂಡ ಕಂಠಪಾಠವನ್ನು ದೈವಯತ್ನದಿಂದ ಮಾಡಲಾರದೆ ಹೋಗುವನೋ ಅವನು ಪಾಠವನ್ನು ಮಾಡಿದ ಫಲವನ್ನು ಮಾತ್ರ ಹೊಂದುವನು.

ಪ್ರಜ್ಞಾಯಾಮಪಿ ಸತ್ಯಾಂ ತು ವಿಸ್ಮರೇತ್ಪಠಿತಾಂ ಶ್ರುತಿಂ ।
ಅನಾಸ್ಥಯಾ ಪ್ರಮಾದೇನ ಮೃತೋ ಗರ್ದಭತಾಂ ವ್ರಜೇತ್ ॥ ೧೬ ॥

ಯಾವದ್ವೇದೋತ್ಥವರ್ಣಾನಾಂ ಪಠಿತಾನಾಂ ಚ ವಿಸ್ಮೃತಿಃ ।
ತಾವದ್ವರ್ಷಾಣಿ ಭುಕ್ತ್ವಾ ಸ ಖರಯೋನಿಂ ತತಃ ಪರಂ ॥ ೧೭ ॥

ಪಾಠಪುಣ್ಯಾರ್ಜಿತಂ ಲೋಕಂ ಲಭತೇ ನಾತ್ರ ಸಂಶಯಃ ।
ಸ್ವಶಾಖಾಂ ಪ್ರಥಮಂ ಯಸ್ತು ಪಠಿತ್ವಾನ್ಯಾಂ ಪಠೇದ್ಯದಿ ॥ ೧೮ ॥

ಪ್ರತ್ಯಕ್ಷರಂ ತು ಲಭತೇ ಗಾಯತ್ರ್ಯಾ ದ್ವಿಗುಣಂ ಫಲಂ ।
ಪಠಿತ್ವಾಪಿ ಸ್ವಕಾಂ ಶಾಖಾಂ ರಾಮೋತ್ಕರ್ಷಂ ನ ವೇತ್ತಿ ಯಃ ॥ ೧೯ ॥

---

೧೬. ಬುದ್ಧಿಯಿಲ್ಲದಿದ್ದರೂ ಕೂಡ ಯಾವನು ಓದಿದುದನ್ನು ಅಶ್ರದ್ಧೆಯಿಂದಲೋ ಪ್ರಮಾದದಿಂದಲೋ ಮರೆತುಬಿಡುವನೋ ಅವನು ಸತ್ತಮೇಲೆ ಮತ್ತೊಂದು ಜನ್ಮದಲ್ಲಿ ಕತ್ತೆಯಾಗಿ ಹುಟ್ಟುವನು.

೧೭—೧೮. ತಾನು ಅಧ್ಯಯನವನ್ನು ಮಾಡಿರುವುದನ್ನು ಮರೆತರೆ ತಾನು ಮರೆತಿರುವುದರಲ್ಲಿಎಷ್ಟು ಅಕ್ಷರಗಳಿವೆಯೋ ಅಷ್ಟು ವರ್ಷಗಳವರೆಗೂ ಕತ್ತೆಯಾಗಿ ಜನ್ಮವನ್ನು ಅನುಭವಿಸಿ ಅನಂತರ ಪಾಠಮಾಡಿದುದರಿಂದ ಬಂದ ಪುಣ್ಯದ ಲೋಕವನ್ನು ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ. ಯಾವನು ತನ್ನ ಶಾಖೆಯನ್ನು ಮೊದಲು ಅಧ್ಯಯನವನ್ನು ಮಾಡಿ ಅನಂತರ ಇತರ ಶಾಖೆಯನ್ನು ಅಧ್ಯಯನ ಮಾಡುತ್ತಾನೆಯೋ ಅವನು ತಾನು ಓದಿದ ಪ್ರತಿಯೊಂದು ಅಕ್ಷರಕ್ಕೂ ಗಾಯತ್ರಿಯ ಫಲದ ಎರಡರಷ್ಟು ಫಲವನ್ನು ಹೊಂದುತ್ತಾನೆ.

೧೯-೨೦. ಯಾವನು ತನ್ನ ಶಾಖೆಯನ್ನು ಅಧ್ಯಯನ ಮಾಡಿದರೂ ರಾಮನ ಶ್ರೇಷ್ಠತೆಯನ್ನು ತಿಳಿದುಕೊಳ್ಳುವುದಿಲ್ಲವೋ ಅವನು ರಾಮನ ಪೂಜೆಯನ್ನು ಮಾಡುತ್ತಿದ್ದರೂ ಅವನು ಅವನ ಶಾಖೆಗೆ ಹೇಳಿರುವ ಫಲದಲ್ಲಿ ಅರ್ಧಭಾಗ ಫಲವನ್ನು ಹೊಂದುವನು. ಯಾವನಿಗಾದರೂ ರಾಮಭಕ್ತಿಯಿಲ್ಲದೆ

ರಾಮಪೂಜಾಯುತಶ್ಚಾಪಿ ಸೋರ್ಧಂ ಫಲಮವಾಪ್ನುಯಾತ್ ।
ವರ್ಜಿತೋ ರಾಮಭಕ್ತ್ಯಾ ಯಃ ಕೇವಲಂ ಪಾಠಕೋ ಭವೇತ್ ॥ ೨೦ ॥

ಲಭೇತ್ಫಲಸ್ಯ ತುರ್ಯಾಂಶಂ ತದ್ದ್ವೇಷಾನ್ನಿಷ್ಫಲಂ ಭವೇತ್ ।
ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ ॥ ೨೧ ॥

ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ ।
ಆಯುರ್ವೇದೋ ಧನುರ್ವೇದೋ ಗಾಂಧರ್ವಂ ಚಾರ್ಥಶಾಸ್ತ್ರಕಂ ॥ ೨೨ ॥

ಉಪವಿದ್ಯಾಶ್ಚತಸ್ರಸ್ಸ್ಯುರೇವಮಷ್ಟಾದಶ ಸ್ಮೃತಾಃ ।
ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಂ ॥ ೨೩ ॥

ಇತ್ಯಂಗಾನಿ ತು ವೇದಸ್ಯ ಯೋಧೀತೇ ತತ್ಫಲಂ ಶೃಣು ।
ಸಂಹಿತಾಪಾಠತೋಽಪ್ಯರ್ಧಂ ಲಭತೇ ಪಾಠತಃ ಫಲಂ ॥ ೨೪ ॥

ಸ್ವಶಾಖೆಯನ್ನು ಅಧ್ಯಯನ ಮಾಡಿದರೆ ಅವನಿಗೆ ಪಾಠದ ಫಲದಲ್ಲಿ ನಾಲ್ಕನೆಯ ಒಂದುಭಾಗ ಫಲವು ಬರುತ್ತದೆ. ಒಂದುವೇಳೆ ಅವನು ಶಾಖೆಯನ್ನು ಅಧ್ಯಯನ ಮಾಡಿದ್ದರೂ ರಾಮನನ್ನು ದ್ವೇಷಿಸಿದರೆ ಆ ಶಾಖೆಯ ಫಲವು ಲಭಿಸುವುದಿಲ್ಲ.

೨೧–೨೨. ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ, ಎಂಬವು ಆರು ವೇದಾಂಗಗಳು. ಋಕ್, ಯಜಸ್ಸು, ಸಾಮ, ಅಥರ್ವಣಗಳೆಂಬವು ನಾಲ್ಕು ವೇದಗಳು. ಮೀಮಾಂಸ, ನ್ಯಾಯ, ಪುರಾಣ, ಧರ್ಮಶಾಸ್ತ್ರ, ಇವು ನಾಲ್ಕು ವಿದ್ಯೆಗಳು. ಆಯುರ್ವೇದ, ಧನುರ್ವೇದ, ಗಂಧರ್ವ, ಅರ್ಥಶಾಸ್ತ್ರ, ಇವು ನಾಲ್ಕು ಉಪವಿದ್ಯೆಗಳು, ಇವೆಲ್ಲವೂ ಸೇರಿದರೆ ಹದಿನೆಂಟು ವಿದ್ಯೆಗಳಾಗುವುವು.

೨೩–೨೪. ಶಿಕ್ಷೆ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ. ಇವು ಆರು ವೇದಾಂಗವಾದ ವಿದ್ಯೆಗಳು. ಇದನ್ನು ಓದುವವನಿಗೆ ಬರುವ ಫಲವನ್ನು ಕೇಳು. ಇವನ್ನು ಪಾಠಮಾಡಿದರೆ ಸಂಹಿತಾಪಾಠದ ಫಲದಲ್ಲಿ ಅರ್ಧಫಲವು ಬರುತ್ತದೆ.

ಶಿಕ್ಷಾ ಘ್ರಾಣಂ ತು ವೇದಸ್ಯ ಕಲ್ಪಃ ಪಾಣೀ ಪ್ರಕೀರ್ತಿತೌ ।
ಮುಖಂ ವ್ಯಾಕರಣಂ ಪ್ರೋಕ್ತಂ ನಿರುಕ್ತಂ ಶ್ರೋತ್ರಮುಚ್ಯತೇ ॥ ೨೫ ॥

ಜ್ಯೋತಿಷಂ ನಯನಂ ಪ್ರಾಹುಶ್ಛಂದಃ ಪಾದಾವಿತಿ ಸ್ಮೃತೌ ।
ಶಿಕ್ಷಾಕಲ್ಪನಿರುಕ್ತಾನಾಂ ಛಂದಸೋರ್ಥವಿದಶ್ಚ ಯೇ ॥ ೨೬ ॥

ಸಕೃದ್ಯೋಗಂ ಪ್ರಕುರ್ವಂತಿ ಫಲಂ ತೇಷಾಂ ಚತುರ್ಗುಣಂ ।
ಭವೇತ್ಪಾಠಾತ್ತತೋ ಜ್ಯೋತಿಶ್ಶಾಸ್ತ್ರಾರ್ಥಜ್ಞಾನತಃ ಫಲಂ ॥ ೨೭ ॥

ಸಂಹಿತಾಪಾಠಜಂ ಪುಣ್ಯಂ ಗಣಿತಜ್ಞೋ ಲಭೇತ್ಫಲಂ ।
ಜ್ಯೋತಿಷಾಂ ಸಂಹಿತಾಜ್ಞಾನಾದರ್ಧಂ ತು ಲಭತೇ ಫಲಂ ॥ ೨೮ ॥

ಜಾತಕಪ್ರಶ್ನಯೋರ್ಗೇನ ನ ಕಿಂಚಿತ್ಪುಣ್ಯಮೀರಿತಂ ।
ವೇದಾಧ್ಯಯನಹೀನೋ ಯೋ ಜಾತಕಪ್ರಶ್ನಮಾತ್ರವಿತ್ ॥ ೨೯ ॥

೨೫-೨೭. ವೇದಪುರುಷನಿಗೆ ಶಿಕ್ಷೆಯು ಮೂಗು, ಕಲ್ಪವು, ಎರಡು ಕೈಗಳು. ವ್ಯಾಕರಣವು ಮುಖವು. ನಿರುಕ್ತವು. ಕಿವಿಗಳು, ಶಿಕ್ಷೆ. ಜ್ಯೋತಿಷವು ಕಣ್ಣುಗಳು. ಛಂದಸ್ಸು ಕಾಲುಗಳು. ಶಿಕ್ಷೆ, ಕಲ್ಪ, ನಿರುಕ್ತ ಛಂದಸ್ಸುಗಳ ಅರ್ಥವನ್ನು ತಿಳಿದವರು ಯೋಗಾಭ್ಯಾಸವನ್ನು ಒಂದುಬಾರಿ ಮಾಡಿದರೆ ಬರುವ ಫಲವನ್ನು ಹೊಂದುತ್ತಾರೆ. ಅವರಿಗೆ ಜ್ಯೋತಿಷದ ಜ್ಞಾನವಿದ್ದರೆ ಆಗ ನಾಲ್ಕರಷ್ಟು ಫಲವು ಬರುತ್ತದೆ.

೨೮. ಗಣಿತವನ್ನು ತಿಳಿದಿರುವವನು. ಸಂಹಿತಾಪಾಠದ ಪುಣ್ಯವನ್ನು ಹೊಂದುವನು. ಜ್ಯೋತಿಷದ ಸಂಹಿತೆಯ ಜ್ಞಾನವನ್ನು ಹೊಂದಿದ್ದರೆ ಅವನಿಗೆ ಅರ್ಧಫಲವು ಬರುತ್ತದೆ.

೨೯. ಜಾತಕವನ್ನು ಬರೆಯುವುದು ನೋಡುವುದು ಪ್ರಶ್ನೆಯನ್ನು ಹೇಳುವುದು. ಎಂದರೆ ಆ ಭಾಗಗಳನ್ನು ತಿಳಿದುಕೊಳ್ಳುವುದು ಇದರಿಂದ ಪುಣ್ಯನೇನೂ ಬರುವುದಿಲ್ಲ. ವೇದಾಧ್ಯಯನವನ್ನು ಮಾಡದೆ ಜಾತಕಪ್ರಶ್ನೆಗಳನ್ನು ಮಾತ್ರ ತಿಳಿದಿದ್ದರೆ ಅವನಿಗೂ ಯಾವ ಫಲವೂ ಇಲ್ಲ.

ನ ವೇತ್ತಿ ಗಣಿತಂ ಯಸ್ತು ಜ್ಞೇಯೋ ನಕ್ಷತ್ರಸೂಚಕಃ ॥
ದಾನಂ ನಾರ್ಹತಿ ವಿಪ್ರಸ್ತು ಸರ್ವಕರ್ಮಸು ಗರ್ಹಿತಃ । ॥ ೩೦ ॥

ಸ್ವಲ್ಪಾಮಪಿ ಚ ಸ್ವಾಂ ಶಾಖಾಂ ಯೋನಧೀತ್ಯ ದ್ವಿಜಾಧಮಃ ।
ಅಂಗಾದಿಷ್ವನ್ಯಶಾಸ್ತ್ರೇಷು ಸಕ್ತಸ್ಸ ತು ವಿಗರ್ಹಿತಃ ॥ ೩೧ ॥

ಕಿಂಚಿಚ್ಛಾಖಾಮಧೀತ್ಯಾಪಿ ಯಶ್ಚೋಪನಿಷದಃ ಪಠೇತ್ ।
ಜ್ಞಾನಾಧಿಕ್ಯಾಯ ಶಾಸ್ತ್ರಾಣಿ ವೇದಜ್ಞಾನಾರ್ಥಮೇವ ವಾ ॥ ೩೨ ॥

ಅಧಿತೇ ಜ್ಞಾನಪಾತ್ರಂ ಸ್ಯಾತ್ಪುಣ್ಯಾಧಿಕ್ಯೇನ ಯುಜ್ಯತೇ ।
ಯತೋ ವಿಪ್ರೇಷು ವೃದ್ಧತ್ವಂ ಪೂಜ್ಯತ್ವಂ ಜ್ಞಾನತಃ ಸ್ಮೃತಂ ॥ ೩೩ ॥

---

೩೦. ಲೆಕ್ಕವನ್ನು ತಿಳಿಯದೆ ಜ್ಯೋತಿಷವನ್ನು ಓದಿದವನು ಫಲವನ್ನು ಹೊಂದುವುದಿಲ್ಲ. ಅಲ್ಲದೆ ಅವನನ್ನು ನಕ್ಷತ್ರಸೂಚಕನೆಂದು ಕರೆಯುತ್ತಾರೆ. ಅವನು ದಾನತೆಗೆದುಕೊಳ್ಳಲು ಅರ್ಹನಲ್ಲ. ಎಲ್ಲಾ ಕರ್ಮಗಳಲ್ಲಿಯೂ ನಿಂದಿತನಾಗುವನು.

೩೧. ಯಾವ ದ್ವಿಜನು ತನ್ನ ಶಾಖೆಯನ್ನು ಸ್ವಲ್ಪವನ್ನಾದರೂ ಅಧ್ಯಯನ ಮಾಡದೆ ವೇದಾಂಗಗಳನ್ನೂ ಬೇರೆ ಶಾಸ್ತ್ರಗಳನ್ನೂ ಓದುವುದರಲ್ಲಿ ಆಸಕ್ತನಾಗುವನೋ ಆವನು ಎಲ್ಲಾ ಕೆಲಸಗಳಲ್ಲಿಯೂ ನಿಂದಿತನು.

೩೨-೩೩. ತನ್ನ ಶಾಖೆಯನ್ನು ಸ್ವಲ್ಪವನ್ನಾದರೂ ಅಧ್ಯಯನಮಾಡಿ ಯಾವನು ಉಪನಿಷತ್ತುಗಳನ್ನು ಅಧ್ಯಯನ ಮಾಡುವನೋ ಮತ್ತು ಅನಂತರ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಶಾಸ್ತ್ರಗಳನ್ನು ಓದಿ ತಿಳಿದುಕೊಂಡರಾಗಲಿ ವೇದಾರ್ಥವನ್ನು ತಿಳದುಕೊಂಡವರಾಗಲಿ ಅವನು ಓದಿದ ಪಾತ್ರನೂ ಜ್ಞಾನ ಪಾತ್ರನೂ ಆಗುವನು. ಬಹುವಾದ ಪುಣ್ಯವೂ ಬರುವುದು. ವಿಪ್ರರಲ್ಲಿ ವೃದ್ಧರಾಗಿರುವವರು ಎಂಬುದೂ ಪೂಜ್ಯರು ಎಂಬುದೂ ಜ್ಞಾನದಿಂದ ಬರುತ್ತದೆ.

ಜ್ಞಾನಾಧಿಕ್ಯೇಷು ತೇಷು ಸ್ಯಾತ್ಪಾತ್ರಾಪಾತ್ರವಿಚಾರಣಾ ।
ಪುಣ್ಯಾಧಿಕ್ಯೇನ ವಾ ಜ್ಞೇಯಾ ಪಾತಕಾನಾಂ ಚ ಪಾತ್ರತಾ ॥ ೩೪ ॥

ಜ್ಞಾನಿಪಾತಕಯೋರ್ಮಧ್ಯೇ ಜ್ಞಾನೀ ಪುಣ್ಯಾಧಿಕೋ ಯತಃ ।
ತತಃ ಪೂಜ್ಯತ್ವಮಸ್ಯ ಸ್ಯಾತ್ ಜ್ಞಾನಿನಸ್ತ್ವಿತಿ ಮೇ ಮತಂ ॥ ೩೫ ॥

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ವಿಪ್ರೋ ಹಿ ಜ್ಞಾನಿನೋತ್ಯರ್ಥಂ ರಾಮಸ್ಸೋಽಪಿ ಚ ತತ್ಪ್ರಿಯಃ ॥ ೩೬ ॥

ಪರಂ ವಾದಿಜಯೇ ಶಕ್ತಿರ್ಯಸ್ಯ ಸ್ಯಾ ತ್ತದ್ಗತಿಂ ಪುನಃ ।
ಸ ಏವ ಶ್ರೇಷ್ಠತಾಂ ಯಾತಿ ಪಾತಕಾನಾಂ ಶತಾದಪಿ ॥ ೩೭ ॥

---

೩೪. ಅಂತಹವರಲ್ಲಿ ಅವರವರ ಜ್ಞಾನವನ್ನು ನೋಡಿ ಅವರು ಯೋಗ್ಯರು ಅಯೋಗ್ಯರು, ಪಾತ್ರರು. ಅಪಾತ್ರರು ಎಂದು ವಿವೇಚಿಸಿಕೊಳ್ಳಬೇಕು. ಪುಣ್ಯದ ಆಧಿಕ್ಯದಿಂದ ಈ ಪಾತಕರಲ್ಲಿ ಪಾತ್ರತೆಯನ್ನು ಗೊತ್ತು ಮಾಡಿಕೊಳ್ಳಬೇಕು.

೩೫. ಜ್ಞಾನಿಯಾದವನೂ, ಪಾತಕನೂ ಇದ್ದರೆ ಅವರಿಬ್ಬರಲ್ಲಿ ಜ್ಞಾನಿಯೇ ಪುಣ್ಯದಿಂದ ಹೆಚ್ಚಿನವನು. ಆದ್ದರಿಂದ ಜ್ಞಾನಿಯೇ ಪಾತಕನಿಗಿಂತ ಪೂಜ್ಯನೆಂಬುದಾಗಿ ನನಗೆ ತಿಳಿದಿರುವುದು.

೩೬. ಜ್ಞಾನಕ್ಕಿಂತಲೂ ಪವಿತ್ರವಾದುದು ಈ ಲೋಕದಲ್ಲಿ ಮತ್ತೊಂದು ಇಲ್ಲವೇ ಇಲ್ಲ. ರಾಮನಿಗೆ ಜ್ಞಾನಿಯು ಪ್ರೀತಿಪಾತ್ರನು. ಜ್ಞಾನಿಗೆ ರಾಮನು ಪ್ರೀತಿಪಾತ್ರನು.

೩೭. ವಾದಿಗಳನ್ನು ಜಯಿಸುವುದರಲ್ಲಿ ಯಾವನಿಗೆ ಶಕ್ತಿ ಇದೆಯೋ ಅವನು ರಾಮನಿಗೆ ಬಹು ಪ್ರಿಯನು. ಆ ವಾದಿಯನ್ನು ಜಯಿಸುವ ಜ್ಞಾನಿಯು ನೂರುಜನ ಪಾತಕರಿಗಿಂತಲೂ ಶ್ರೇಷ್ಠನು.

ವೇದಾದಿಸರ್ವವಿದ್ಯಾನಾಮರ್ಥಜ್ಞಾನಾಯ ಯಃ ಪಠೇತ್ ।
ಶಾಸ್ತ್ರಂ ವ್ಯಾಕರಣಂ ನಾಮ ಲಭೇದ್ವೇದಸಮಂ ಫಲಂ ॥ ೩೮ ॥

ಜ್ಞಾನಾಧಿಕ್ಯೇನ ಲಭತೇ ವೇದಾರ್ಥಜ್ಞಾನಜಂ ಫಲಂ।
ಮೀಮಾಂಸಾ ದ್ವಿವಿಧಾ ಪ್ರೋಕ್ತಾ ಕರ್ಮಣೋ ಬ್ರಹ್ಮಣ ಸ್ತಥಾ ॥ ೩೯ ॥

ವೇದಾರ್ಥಜ್ಞಾನತುಲ್ಯಾದ್ಯಾ ದ್ವಿತೀಯಾಯಾಃ ಫಲಂ ಶೃಣು ।
ಪ್ರತ್ಯಕ್ಷರಂ ತು ಲಭತೇ ಗಾಯತ್ರೀಶತಜಂ ಫಲಂ ॥ ೪೦ ॥

ಯೇ ತೂಪಯೋಗಿನಸ್ಸಾಕ್ಷಾದ್ರಂಥಾಸ್ತೇಭ್ಯೋ ಭವಂತಿ ಹಿ ।
ತೇಪ್ಯರ್ಥಫಲದಾ ಜ್ಞೇಯಾ ವ್ಯವಧಾನಾತ್ತು ಪಾದಶಃ ॥ ೪೧ ॥

---

೩೮. ವೇದಗಳ ಅರ್ಥವನ್ನೂ, ಶಾಸ್ತ್ರಗಳ ಅರ್ಥವನ್ನೂ, ತಿಳಿದುಕೊಳ್ಳಲು, ವ್ಯಾಕರಣವೆಂಬ ಶಾಸ್ತ್ರವನ್ನು ಯಾವನು ಓದುತ್ತಾನೆಯೋ ಅವನಿಗೆ ವೇದಾಧ್ಯಯನ ಫಲವು ಬರುತ್ತದೆ.

೩೯. ಜ್ಞಾನವು ಹೆಚ್ಚಿರುವುದರಿಂದ ವೇದಾರ್ಥದ ಜ್ಞಾನದಿಂದ ಉಂಟಾಗುವ ಫಲವನ್ನು ಹೊಂದುತ್ತಾನೆ. ಮೀಮಾಂಸಾ ಶಾಸ್ತ್ರವು ಎರಡು ಬಗೆಯಾಗಿರುವುದು. ಒಂದು ಕರ್ಮ ಮೀಮಾಂಸೆಯು. ಮತ್ತೊಂದು ಬ್ರಂಹ್ಮ ಮೀಮಾಂಸೆಯು.

೪೦. ಎರಡನೆಯದಾದ ಬ್ರಹ್ಮಮೀಮಾಂಸೆಯು ವೇದಾರ್ಥಕ್ಕೆ ಸಮವಾದ ಜ್ಞಾನವನ್ನುಕೊಡುವುದರಿಂದ ಅದರ ಫಲವನ್ನು ಕೇಳು. ಹೇಳುತ್ತೇನೆ. ಅವನು ಒಂದೊಂದಕ್ಷರಕ್ಕೂ ನೂರುಬಾರಿ ಗಾಯತ್ರಿಯನ್ನು ಜಪಿಸಿದ ಫಲವನ್ನು ಹೊಂದುತ್ತಾನೆ.

೪೧. ಯಾವ ಗ್ರಂಥಗಳು ವೇದಾರ್ಥವನ್ನು ತಿಳಿಯಲು ಪ್ರತ್ಯಕ್ಷವಾಗಿ ಉಪಯೋಗವಾಗುವುವೋ ಅವುಗಳಿಗೆ ಆ ಫಲವೆಂದು ತಿಳಿಯಬೇಕು. ಪ್ರತ್ಯಕ್ಷವಾಗಿ ಉಪಯೋಗವಾಗದೆ ಪರೋಕ್ಷವಾಗಿ ಉಪಯೋಗವಾಗುವುವುಗಳಿಗೆ ಅವುಗಳ ಸಂಬಂಧವಿರುವಂತೆ ಅರ್ಧಫಲವೂ, ಕಾಲುಭಾಗ ಫಲವೂ ಬರುತ್ತವೆ.

ವೇದಾರ್ಥಜ್ಞಾನತುಲ್ಯಂ ತು ಫಲಂ ತಸ್ಯ ಪ್ರಕೀರ್ತಿತಂ |
ಸ ಸೃಗಾಲೋ ಭವೇದೇವ ಪಠಿತಾಕ್ಷರಸಂಖ್ಯಯಾ || ೪೨ ||

ಹೇತುವಾದರತೋ ಬ್ರಹ್ಮಜಿಜ್ಞಾಸಾಂ ನೈವ ಯಃ ಪಠೇತ್ |
ಕೇವಲಂ ಜೀವಿಕಾರ್ಥಂ ತು ಯಃ ಪಡೇನ್ನ್ಯಾಯವಿಸ್ತರಂ || ೪೩ ||

ವೇದೋಪನಿಷದಾಮರ್ಥೇ ಜ್ಞಾನಾಧಿಕ್ಯಾಯ ಚೇತ್ಪಠೇತ್ |
ಪ್ರದೀಪಂ ಸರ್ವವಿದ್ಯಾನಾಂ ಯೋ ವಿದ್ವಾನ್ನ್ಯಾಯವಿಸ್ತರಂ || ೪೪ ||

ವರ್ಷಾಣಿ ನಾತ್ರ ಸಂದೇಹೋ ವೃಥಾಭಾಷಣತತ್ಪರಃ |
ಪುರಾಣಂ ವೈಷ್ಣವಂ ಮಾತ್ಸ್ಯಂ ಕೌರ್ಮಂ ಭಾಗವತಂ ತಥಾ || ೪೫ ||

ಆದಿತ್ಯಂ ಗಾರುಡಂ ಸ್ಕಾಂದಂ ಮಾರ್ಕಂಡೇಯಮಥಾಷ್ಟಮಂ |
ಬ್ರಹ್ಮಬ್ರಹ್ಮಾಂಡಲೈಂಗ್ಯಾನಿ ಬ್ರಹ್ಮವೈವರ್ತಮೇವ ಚ || ೪೬ ||

೪೨-೪೩. ಯಾವನು ವೇದ ಉಪನಿಷತ್ತುಗಳ ಜ್ಞಾನವನ್ನು ಹೊಂದಲು ತರ್ಕ ಮೊದಲಾದ ಶಾಸ್ತ್ರಗಳನ್ನು ಓದುವನೋ ಅವನಿಗೆ ಹಿಂದೆ ಹೇಳಿದ ಫಲವು ಬರುತ್ತದೆ. ತರ್ಕಶಾಸ್ತ್ರವು ಎಲ್ಲಾ ಶಾಸ್ತ್ರಗಳಿಗೂ ದೀಪದಂತಿರುವುದು ವೇದಾರ್ಥವನ್ನು ತಿಳಿದರೆ ಎಷ್ಟು ಫಲವುಂಟೋ ಅಷ್ಟು ಫಲವೂ ಆದಕ್ಕೆ ಬರುತ್ತದೆ.

೪೪. ವೇದಜ್ಞಾನವನ್ನು ಹೊಂದಲು ಆ ತರ್ಕಾಧ್ಯಯನವನ್ನು ಉಪಯೋಗಿಸಿಕೊಳ್ಳದೆ ಅಥವಾ ಬ್ರಹ್ಮಜಿಜ್ಞಾಸೆಯನ್ನು ಮಾಡಲು ಉಪಯೋಗಿಸಿಕೊಳ್ಳದೆ ಇತರರನ್ನು ನಿಗ್ರಹಿಸುವುದಕ್ಕೇ ಆಗಲಿ ಅಥವಾ ಜೀವಿಕೆಗೇ ಆಗಲಿ ಆ ತರ್ಕವನ್ನು ಉಪಯೋಗಿಸಿಕೊಳ್ಳುವನೋ ಅವನು ತಾನು ಓದಿರುವ ಗ್ರಂಥಗಳ ಅಕ್ಷರಗಳ ಲೆಕ್ಕದಷ್ಟು ವರ್ಷಗಳವರೆಗೂ ನರಿಯಾಗಿ ಹುಟ್ಟುತ್ತಿರುತ್ತಾನೆ.

೪೫. ಅವನು ವ್ಯರ್ಥವಾದ ಮಾತುಗಳಲ್ಲೇ ಆಸಕ್ತನಾಗಿರುವುದರಿಂದ ಆ ರೀತಿಯಾಗಿ ನರಿಯಾಗಿ ಹುಟ್ಟುವುದರಲ್ಲಿ ಸಂದೇಹವೇ ಇರುವುದಿಲ್ಲ. ಇನ್ನು ಪುರಾಣಗಳನ್ನು ಹೇಳುತ್ತೇನೆ. ಅವು ರಾಮಾಯಣದಿಂದಲೇ ಉತ್ಪನ್ನವಾದುವು.

೪೬-೪೮. ವೈಷ್ಣವ (ವಿಷ್ಣುಪುರಾಣ) ಮತ್ಸ್ಯಪುರಾಣ, ಕೂರ್ಮಪುರಾಣ, ಭಾಗವತ, ಆದಿತ್ಯಪುರಾಣ, ಗಾರುಡ, ಸ್ಕಾಂದ, ಮಾರ್ಕಂಡೇಯ, ಬ್ರಾಂಹ್ಮ

ಭವಿಷ್ಯೋತ್ತರಮಾಗ್ನೇಯಂ ಪಾದ್ಮಂ ವಾಮನಮೇವ ಚ ।
ವಾರಾಹಂ ಚೈವ ವಾಯವ್ಯಂ ಹ್ಯಷ್ಟಾದಶಾನಿ ವೈ ತ್ವಿತಿ ॥ ೪೭ ॥

ಮಹಾಪುರಾಣಾನ್ಯೇತಾನಿ ರಾಮಾಯಣಭವಾನಿ ಹಿ ।
ರಾಮಾಯಣಾತ್ಪುರಾಣಾಚ್ಚ ವ್ಯಾಸೇನ ಖಂಡಿತಾನಿ ಹಿ ॥ ೪೮ ॥

ಅತಃ ಪುರಾಣಂ ನಾಮಾಭೂದೇತೇಷಾಂ ಜಗತೀತಲೇ ।
ಆದೌ ಕೃತಾನಿ ಯಾನ್ಯತ್ರ ತೇಷಾಂ ಜ್ಯೇಷ್ಠತ್ವಸೂಚಕಃ ॥ ೪೯ ॥

ಮಹಾಶಬ್ದಃ ಪ್ರೋಚ್ಯತೇ ಹಿ ವೈಷ್ಣವಾದಿಷು ಷಟ್‌ತ್ರಿಷು ।
ಪುರಾಣಾನಾಂ ತು ಸರ್ವೇಷಾಂ ಫಲಂ ಶಿಷ್ಯ ಬ್ರವೀಮ್ಯಹಂ ॥ ೫೦ ॥

ವೇದತುಲ್ಯಫಲಂ ಪಾಠೇ ಶ್ರವಣೇ ಚ ತದರ್ಧಕಂ ।
ಅರ್ಥಶ್ರವಣತಶ್ಚಾಸ್ಯ ಪುಣ್ಯಂ ದಶಗುಣಂ ಸ್ಮೃತಂ ॥ ೫೧ ॥

ಪುರಾಣ, ಬ್ರಹ್ಮಾಂಡ ಪುರಾಣ, ಲಿಂಗ ಪುರಾಣ, ಬ್ರಂಹ್ಮವೈವರ್ತ, ಭವಿಷ್ಯೋತ್ತರ ಪುರಾಣ, ಅಗ್ನಿಪುರಾಣ, ಪಾದ್ಮಪುರಾಣ, ವಾಮನ, ವರಾಹ, ವಾಯವ್ಯ, ಎಂಬದಾಗಿ ಹದಿನೆಂಟು ಬಗೆಯಾಗಿವೆ.

೪೯- ಈ ಹದಿನೆಂಟುಪುರಾಣಗಳಿಗೂ ಮಹಾ ಪುರಾಣಗಳೆಂದು ಹೆಸರು. ಇವಿಷ್ಟು ರಾಮಾಯಣದಿಂದಲೇ ಹುಟ್ಟಿದವು. ಈ ಪುರಾಣಗಳನ್ನು ವ್ಯಾಸರು ರಾಮಾಯಣದಿಂದ ಬೇರೆಯಾಗಿ ತೆಗದು ಬರೆದಿದ್ದಾರೆ.

೫೦ ಹಿಂದಿನಕಾಲದಲ್ಲಿ ರಾಮಾಯಣದಿಂದ ತೆಗೆದುದಾದುದರಿಂದ ಇವಕೆ ಪುರಾಣಗಳೆಂದು ಹೆಸರು ಬಂದಿತು. ಎಷ್ಟನ್ನು ಮೊದಲು ಮಾಡಿದರೋ ಅವಕ್ಕೆಲ್ಲಾ ಮೊದಲಿನದು. ದೊಡ್ಡದು. ಎಂಬರ್ಥವನ್ನು ಸೂಚಿಸಲು ಮಹಾ ಎಂಬ ಪದವನ್ನು ಆದಿಯಲ್ಲಿ ಸೇರಿಸಿದೆ.

೫೧. ಆದ್ದರಿಂದಲೇ ವಿಷ್ಣು ಪುರಂಣವೇ ಮುಂತಾದ ಹದಿನೆಂಟು ಪುರಾಣಗಳಿಗೂ ಮಹಾಪುರಾಣಗಳೆಂದು ಹೆಸರು ಬಂದಿರುವುದು. ಪುರಾಣಗಳಿಗೆ ಯಾವಯಾವ ಫಲವುಂಟೆಂಬುದನ್ನು ಹೇಳುತ್ತೇನೆ. ಕೇಳು. ವೇದಾಧ್ಯಯನವನ್ನು ಮಾಡಿದರೆ ಯಾವ ಫಲವು ಬರುವುದೋ ಆ ಫಲವು ಆ ಪುರಾಣಗಳನ್ನು ಓದುವುದರಿಂದ ಬರುತ್ತದೆ. ಅವುಗಳನ್ನು ಕೇಳಿದರೆ ಅದರಲ್ಲಿ ಅರ್ಧ ಫಲವು ಬರುತ್ತದೆ. ಇದರ ಅರ್ಥವನ್ನು ಕೇಳಿದರೆ ಹತ್ತರಷ್ಟು ಫಲವು ಬರುತ್ತದೆ.

ನಕ್ತುಃ ಸ್ಯಾದ್ದ್ವಿಗುಣಂ ಪುಣ್ಯಂ ವ್ಯಾಖ್ಯಾತುಶ್ಚ ಶತಾಧಿಕಂ ।
ಅನ್ಯಾನ್ಯುಪಪುರಾಣಾನಿ ಸಂತಿ ತೇಷಾಂ ಫಲಂ ಶೃಣು ॥ ೫೨ ॥

ವಿಷ್ಣುಧರ್ಮೋತ್ತರಂ ಶೈವಂ ಬೃಹನ್ನಾರದಮೇವ ಚ ।
ಭಗವತೀಪುರಾಣಂ ಚ ಲಘುನಾರದಮೇವ ಚ ॥ ೫೩ ॥

ಭವಿಷ್ಯತ್ಪರ್ವಷಷ್ಠಂ ಸ್ಯಾತ್ತಂತ್ರಂ ಭಾಗವತಂ ತಥಾ ।
ಅಷ್ಟಮಂ ನಾರಸಿಂಹಂ ಸ್ಯಾತ್ಪುರಾಣಂ ರೇಣುಕಾಭಿದಂ ॥ ೫೪ ॥

ದಶಮಂ ತತ್ತ್ವಸಾರಂ ಸ್ಯಾತ್ ವಾಯುಪ್ರೋಕ್ತಂ ತಥೈವ ಚ
ನಂದಿಪ್ರೋಕ್ತಂ ದ್ವಾದಶಂ ಸ್ಯಾತ್ತಥಾ ಪಾಶುಪತಾಭಿದಂ ॥ ೫೫ ॥

ಯಮನಾರದಸಂವಾದೈಸ್ತಥಾ ಹಂಸಪುರಾಣಕಂ ।
ವಿನಾಯಕಪುರಾಣಂ ಚ ಬೃಹದ್ಬ್ರಹ್ಮಾಂಡಮೇವ ಚ ॥ ೫೬ ॥

ಪುಣ್ಯಂ ವಿಷ್ಣುರಹಸ್ಯಂ ಸ್ಯಾದಿತ್ಯಷ್ಟಾದಶಾನಿ ವೈ ।
ಏತಾನ್ಯುಪಪುರಾಣಾನಿ ಪುರಾಣಾರ್ಧಫಲಾನಿ ಚ ॥ ೫೭ ॥

---

೫೨. ಪುರಾಣವನ್ನು ಓದತಕ್ಕವನಿಗೆ ಎರಡರಷ್ಟು ಪುಣ್ಯವು ಬರುತ್ತದೆ. ಅರ್ಥ ಹೇಳುವವನಿಗೆ ನೂರರಷ್ಟು ಪುಣ್ಯವು ಬರುತ್ತದೆ. ಈ ಮಹಾಪುರಾಣಗಳಲ್ಲದೆ ಉಪ ಪುರಾಣಗಳು ಬೇರೆ ಇವೆ. ಅವುಗಳನ್ನೂ, ಅವುಗಳ ಫಲವನ್ನೂ ಕೇಳು.

೫೩-೫೬. ವಿಷ್ಣು ಧರ್ಮೋತ್ತರ, ಶೈವ, ಬೃಹನ್ನಾರದ, ಭಗವತಿ, ಲಘು ನಾರದ, ಭವಿಷ್ಯತ್ಪರ್ವ, ತಂತ್ರಭಾಗವತ, ನಾರಸಿಂಹ, ರೇಣುಕಪುರಾಣ, ತತ್ವಸಾರ, ವಾಯು, ನಂದಿ, ಪಾಶುಪತ್ತ, ಯಮ ನಾರದ ಸಂವಾದ, ಹಂಸ, ವಿನಾಯಕ, ಬ್ರಹದ್ಬ್ರಹ್ಮಾಂಡ, ವಿಷ್ಣುರಹಸ್ಯ, ಎಂಬುದಾಗಿ ಹದಿನೆಂಟು ಉಪ ಪುರಾಣಗಳು ಇವೆ. ಈ ಉಪಪುರಾಣಗಳನ್ನೋದಿದರೆ ಪುರಾಣದ ಅರ್ಧಫಲವನ್ನು ಕೊಡುತ್ತದೆ.

೫೭-೫೮. ಭಾರತವು ವೇದಕ್ಕೆ ಸಮವಾದುದು. ಅರ್ಥಮಾಡಿಕೊಂಡು ಅದನ್ನು ಓದಿದರೆ ಮತ್ತಷ್ಟು ಫಲವು ಹೆಚ್ಚುಂಟು. ಅದರಲ್ಲಿರುವ ಭಗವದ್ಗೀ

ಭಾರತಂ ವೇದತುಲ್ಯಂ ಸ್ಯಾದರ್ಥತೋಧಿಕಮುಚ್ಯತೇ ।
ತಥಾಪಿ ಭಗವದ್ಗೀತಾ ವಿಷ್ಣುನಾಮಸಹಸ್ರಕಂ ॥ ೫೮ ॥

ದಶಾಧಿಕಫಲಂ ಪ್ರೋಕ್ತಂ ಭಾರತಾದಪಿಸರ್ವಶಃ ।
ಶ್ರೋತಾರ್ಧಂ ಫಲಮಾಪ್ನೋತಿ ಭಕ್ತಿತಃ ಶೃಣುಯಾತ್ತು ಯಃ ॥ ೫೯ ॥

ಭಾರತಂ ತ್ವಿತಿಹಾಸಶ್ಚ ರಾಮಾಯಣಸಮುದ್ಭವಃ ॥
ಯದ್ವೇದಪಾಠಪುಣ್ಯಂ ತತ್ ಜ್ಞೇಯಂ ರಾಮಾಯಣಸ್ಯ ಚ ॥ ೬೦ ॥

ಪಾಠಾತ್ತದರ್ಧಂ ಶ್ರವಣೇ ವ್ಯಾಖ್ಯಾತುಶ್ಚ ದಶಾಧಿಕಂ ।
ವಾಲ್ಮೀಕಿನಾ ಕೃತಂ ಯಚ್ಚ ಶತಕೋಟಿಪ್ರವಿಸ್ತರಂ ॥ ೬೧ ॥

ತೆಯೂ, ವಿಷ್ಣು ಸಹಸ್ರನಾಮವೂ ಆ ಭಾರತದ ಫಲಕ್ಕಿಂತಲೂ ಹತ್ತರಷ್ಟು ಹೆಚ್ಚು ಫಲವನ್ನು ಕೊಡುತ್ತವೆ. ಇವನ್ನು ಭಕ್ತಿಯಿಂದ ಕೇಳಿದರೆ ಅವನಿಗೆ ಅರ್ಧ ಫಲವು ಬರುತ್ತದೆ.

೫೯-೬೦. ಭಾರತವೆಂಬ ಇತಿಹಾಸವು ರಾಮಾಯಣದಿಂದ ಹುಟ್ಟಿದುದು ರಾಮಾಯಣವನ್ನು ಪಠಿಸಿದರೆ ವೇದ ಪಾಠದ ಪುಣ್ಯವು ಬರುತ್ತದೆ. ಅದನ್ನು ಕೇಳಿದರೆ ಅರ್ಧಫಲವು ಬರುತ್ತದೆ. ವಿವರಿಸಿದರೆ ಹತ್ತರಷ್ಟು ಹೆಚ್ಚು ಫಲವೂ ಬರುವುದು. ವಾಲ್ಮೀಕಿಯು ಶತಕೋಟಿ ಸಂಖ್ಯೆಯುಳ್ಳ ಗ್ರಂಥವನ್ನು ರಚಿಸಿರುವನು.

೬೧. ಆ ರಾಮಾಯಣವೇ ಎಲ್ಲಕ್ಕೂ ಆದಿ ಭೂತವಾದುದು ಮಹಾ ಮಂಗಳಕರವು. ಆ ರಾಮಾಯಣದಿಂದಲೇ ಅನೇಕ ವಿಧವಾದ ರಾಮಾಯಣ ಗಳು ಹುಟ್ಟಿವೆ.

೬೨-೬೯. ಇದರಲ್ಲಿ ಶೇಷರಾಮಾಯಣವು ಮೊದಲನೆಯದು. ಇದು ಇಪ್ಪತ್ತನಾಲ್ಕುಸಾವಿರ ಗ್ರಂಥಗಳಿಂದ ಕೂಡಿದೆ. ಯೋಗವಾಸಿಷ್ಠ ಆಧ್ಯಾತ್ಮ

ತತ್ಸರ್ವೇಷಾಮಾದಿಭೂತಂ ಮಹಾಮಂಗಳಕಾರಕಂ ।
ರಾಮಾಯಣಾದೇವ ನಾನಾ ಸಂತಿ ರಾಮಾಯಣಾನಿ ಹಿ ॥ ೬೨ ॥

ಶೇಷಭೂತಂ ಚತುರ್ವಿಂಶಸಹಸ್ರಂ ಪ್ರಥಮಂ ಸ್ಮೃತಂ ।
ತಥಾ ಚ ಯೋಗವಾಸಿಷ್ಠಮಧ್ಯಾತ್ಮಾಖ್ಯಂ ತಥಾ ಸ್ಮೃತಂ ॥ ೬೩ ॥

ನಾಯುಪುತ್ರಕೃತಂ ಚಾಪಿ ನಾರದೋಕ್ತಂತಥಾ ಪುನಃ ।
ಲಘುರಾಮಾಯಣಂ ಚೈವ ಬೃಹದ್ರಾಮಾಯಣಂ ತಥಾ ॥ ೬೪ ॥

ಅಗಸ್ತ್ಯೋಕ್ತಂ ಮಹಾಶ್ರೇಷ್ಠಂ ಸಾರರಾಮಾಯಣಂ ತಥಾ ।
ದೇಹರಾಮಾಯಣಂ ಚಾಪಿ ವೃತ್ತರಾಮಾಯಣಂ ಪುನಃ ॥ ೬೫ ॥

ಬ್ರಹ್ಮರಾಮಾಯಣಂ ರಮ್ಯಂ ಭಾರದ್ವಾಜಂ ತಥೈವ ಚ ।
ಶಿವರಾಮಾಯಣಂ ಕ್ರೌಂಚಂ ಭರತಸ್ಯ ಚ ಜೈಮಿನೇಃ ॥ ೬೬ ॥

ಆತ್ಮಧರ್ಮಂ ಶ್ವೇತಕೇತು ಋಷೇಶ್ಚೈವ ಜಟಾಯುಷಃ ॥ ೬೭ ॥

ರವೇಃ ಪುಲಸ್ತ್ಯೇರ್ದೇವ್ಯಾಶ್ಚ ಗುಹ್ಯಕಂ ಮಂಗಳಂ ತಥಾ ।
ಗಾಧಿಜಂ ಚ ಸುತೀಕ್ಷ್ಣಂ ಚ ಸುಗ್ರೀವಂ ಚ ವಿಭೀಷಣಂ ॥ ೬೮ ॥

ರಾಮಾಯಣ, ಹನುಮದ್ರಾಮಾಯಣ, ನಾರದ ರಾಮಾಯಣ, ಲಘು ರಾಮಾಯಣ, ಬೃಹದ್ರಾಮಾಯಣ, ಆಗಸ್ತ್ಯ ರಾಮಾಯಣ, ಸಾರರಾಮಾಯಣ ದೇಹ ರಾಮಾಯಣ, ವೃತ್ತ ರಾಮಾಯಣ, ಬ್ರಹ್ಮ ರಾಮಾಯಣ, ಭಾರಧ್ವಾಜ ರಾಮಾಯಣ, ಶಿವರಾಮಾಯಣ, ಕ್ರೌಂಚರಾಮಾಯಣ, ಭರತರಾಮಾಯಣ, ಜೈಮುನಿ ರಾಮಾಯಣ, ಆತ್ಮ ಧರ್ಮ ರಾಮಾಯಣ, ಶ್ವೇತಕೇತು ರಾಮಾಯಣ, ಜಟಾಯು ರಾಮಾಯಣ, ರವಿ ರಾಮಾಯಣ, ಪುಲಸ್ತ್ಯ ರಾಮಾಯಣ, ದೇವೀ ರಾಮಾಯಣ, ಗುಹ್ಯಕ ರಾಮಾಯಣ, ಮಂಗಳ ರಾಮಾಯಣ, ವಿಶ್ವಾಮಿತ್ರ ರಾಮಾಯಣ, ಸುತೀಕ್ಷ್ಣ ರಾಮಾಯಣ,

ತಥಾನಂದರಾಮಾಯಣಮೇತನ್ಮಂಗಳಕಾರಕಂ ।
ಏವಂ ಸಹಸ್ರಶಃ ಸಂತಿ ಶ್ರೀರಾಮಚರಿತಾನಿ ಹಿ ॥ ೬೯ ॥

ಕಸ್ಸಮರ್ಥೋಽಸ್ತಿ ತೇಷಾಂ ಹಿ ಸಂಖ್ಯಾಂ ವಕ್ತುಂ ಸವಿಸ್ತರಾತ್ ।
ಶತಕೋಟಿಮಿತಾದೇವ ವಿಭಕ್ತಾನಿ ಪೃಥಕ್ ಪೃಥಕ್ ॥ ೭೦ ॥

ಸರ್ವೇಷ್ವಪ್ಯಾನಂದಸಂಜ್ಞಂ ವರಿಷ್ಠಂ ಪ್ರೋಚ್ಯತೇ ತ್ವಿದಂ ।
ಅಸ್ಯ ಪಾಠೇನ ಯತ್ಪುಣ್ಯಂ ತತ್ತೇ ಶಿಷ್ಯ ವದಾಮ್ಯಹಂ ॥ ೭೧ ॥

ಶತಕೋಟಿಮಿತಂ ಶ್ರುತ್ವಾ ಯತ್ಫಲಂ ಲಭ್ಯತೇ ನರೈಃ ।
ಫಲಮಸ್ಯ ತದರ್ಧಂ ಹಿ ಜ್ಞೇಯಂ ಶಿಷ್ಯ ಶುಭಪ್ರದಂ ॥ ೭೨ ॥

ಸುಗ್ರೀವ ರಾಮಾಯಣ, ವಿಭೀಷಣ ರಾಮಾಯಣ, ಆನಂದರಾಮಾಯಣ, ಈ ಆನಂದರಾಮಾಯಣವು ಮಹಾ ಮಂಗಳಕರವು. ಈ ರೀತಿಯಾಗಿ ರಾಮನ ಚರಿತ್ರೆಯನ್ನು ವಿವರಿಸುವ ರಾಮಾಯಣಗಳು ಸಾವಿರಾರಿವೆ.

೭೦. ಆ ರಾಮಾಯಣಗಳ ಸಂಖ್ಯೆಯನ್ನು ವಿಸ್ತಾರವಾಗಿ ಹೇಳಲು ಯಾವನಿಗೆ ತಾನೇ ಶಕ್ತಿಯಿರುವುದು? ಈ ರಾಮಾಯಣಗಳೆಲ್ಲವೂ ಶತಕೋಟಿ ರಾಮಾಯಣದಿಂದಲೇ ಬೇರೆ ಬೇರೆಯಾಗಿ ತೆಗೆದು ಬರೆದುದು.

೭೧. ಈ ರಾಮಾಯಣಗಳಲ್ಲೆಲ್ಲಾ ಆನಂದ ರಾಮಾಯಣವೆಂದೆನಿಸಿಕೊಳ್ಳುವ ಈ ರಾಮಾಯಣವು ಶ್ರೇಷ್ಠವಾದುದು. ಎಲೈ ಶಿಷ್ಯನೇ! ಇದನ್ನು ಓದುವುದರಿಂದ ಯಾವ ಪುಣ್ಯವು ಬರುವುದೋ ಅದನ್ನು ಹೇಳುತ್ತೇನೆ. ಕೇಳು.

೭೨. ಶತಕೋಟಿ ರಾಮಾಯಣವನ್ನು ಕೇಳಿದರೆ ಮನುಷ್ಯನಿಗೆ ಯಾವ ಪುಣ್ಯವು ಬರುತ್ತದೆಯೋ ಈ ಆನಂದ ರಾಮಾಯಣವನ್ನು ಕೇಳಿದರೆ ಅದರಲ್ಲಿ ಅರ್ಧ ಫಲವು ಬರುತ್ತದೆಂದು ತಿಳಿ.

ಶ್ರವಣಾದ್ದ್ವಿಗುಣಂ ಪಾಠೇ ವ್ಯಾಖ್ಯಾತುಶ್ಚ ದಶಾಧಿಕಂ ।
ತಸ್ಮಾದೇತತ್ಸದಾನಂದಸಂಜ್ಞಂ ಶ್ರಾವ್ಯಂ ನರೋತ್ತಮೈಃ ॥ ೭೩ ॥

ನಾನೇನ ಸದೃಶಂ ಕಿಚಿದ್ಭೂತಂ ಚಾಗ್ರೇ ಭವಿಷ್ಯತಿ ।
ಸರ್ವೇಷ್ವಪಿ ಚ ಶಾಸ್ತ್ರೇಷು ಪಾಂಚರಾತ್ರಾಗಮೋಧಿಕಃ ॥ ೭೪ ॥

ಭಗವದ್ಗೀತಯಾ ತುಲ್ಯಂ ಫಲಂ ತಸ್ಯಾಖಿಲಸ್ಯ ಚ ।
ಭಾರತೀಯಕಥಾಬಂಧಂ ಸದ್ಭಕ್ತೈರೇವ ನಿರ್ಮಿತಂ ॥ ೭೫ ॥

ತತ್ಕಾವ್ಯಂ ಯಃ ಪಠೇತ್ಪ್ರಾಜ್ಞಃ ದಶಾಂಶಂ ಫಲಮಾಪ್ನುಯಾತ್ ।
ಸದ್ಭಕ್ತೈರ್ನಿರ್ಮಿತಂ ಯತ್ತು ಶತಾಂಶಫಲದಂ ಸ್ಮೃತಂ ॥ ೭೬ ॥

---

೭೩. ಓದಿದರೆ ಎರಡರಷ್ಟು ಪುಣ್ಯವೂ, ವಿವರಿಸಿ ಅರ್ಥ ಹೇಳಿದರೆ ಹತ್ತರಷ್ಟು ಪುಣ್ಯವೂ ಬರುತ್ತದೆ. ಆದ್ದರಿಂದ ಯಾವಾಗಲೂ ಈ ಆನಂದ ರಾಮಾಯಣವನ್ನು ಕೇಳಬೇಕು.

೭೪. ಈ ಆನಂದ ರಾಮಾಯಣಕ್ಕೆ ಸಮಾನವಾದ ಗ್ರಂಥವು ಹಿಂದೆಯೂ ಇರಲಿಲ್ಲ. ಮುಂದೆಯೂ ಉಂಟಾಗುವುದಿಲ್ಲ. ಎಲ್ಲಾ ಶಾಸ್ತ್ರಗಳಿಗಿಂತಲೂ ಪಂಚರಾತ್ರಾಗಮವು ಶ್ರೇಷ್ಠವಾದುದು.

೭೫. ಭಗವದ್ಗೀತೆಯನ್ನು ಓದಿದರೆ ಬರುವ ಪುಣ್ಯವು ಆ ಪಂಚರಾತ್ರಾಗಮವನ್ನು ಓದಿದರೆ ಬರುತ್ತದೆ. ಭಾರತದ ಕಥೆಯನ್ನು ಬಹು ಭಕ್ತರೇ ನಿರ್ಮಿಸಿರುವರು.

೭೬. ಆ ಭಾರತದಿಂದ ತೆಗೆದು ಮಾಡಿರುವ ಕಾವ್ಯಗಳನ್ನು ಓದಿದರೆ ಹತ್ತನೆಯ ಒಂದು ಭಾಗ ಫಲವು ಬರುವುದು. ಸದ್ಭಕ್ತರಾದವರು ಬರೆದಿರುವ ಗ್ರಂಥಗಳನ್ನು ಓದಿದರೆ ನೂರರಲ್ಲಿ ಒಂದುಪಾಲು ಪುಣ್ಯವು ಬರುತ್ತದೆ.

ಯಃ ಕರೋತಿ ಸ್ವಯಂ ಕಾವ್ಯಂ ಕಲ್ಪಯಿತ್ವಾ ಸ್ವಯಂ ಕಥಾಂ ।
ತಚ್ಛ್ರಮೋ ವ್ಯರ್ಥತಾಮೇತಿ ತದಧ್ಯೇತಾ ಚ ದೋಷಭಾಕ್ ॥ ೭೭ ॥

ಪೌರಾಣೀಂ ಭಾರತೀಂ ವಾಪಿ ತಥಾ ರಾಮಾಯಣಸ್ಥಿತಾಂ ।
ತಥಾ ಹ್ಯುಪಪುರಾಣಸ್ಥಾಂ ಕಥಾಂ ಗ್ರಂಥತಿ ಯಃ ಸ್ವಯಂ ॥ ೭೮ ॥

ರಾಮಭಕ್ತೋಽಪಿ ಲಭತೇ ಶಕ್ರಲೋಕಾಧಿವಾಸತಾಂ ।
ಪ್ರತ್ಯಕ್ಷರಂ ವರ್ಷಮೇಕಂ ವಾಸಸ್ತಸ್ಯ ಭವೇದ್ಧ್ರುವಂ ॥ ೭೯ ॥

ರಾಮಭಕ್ತಃ ಪುರಾಣೇಭ್ಯಃ ಕಥಾಂ ಗ್ರಥತಿ ಯಃ ಪುನಃ ।
ವ್ಯಾಸಮೂರ್ತಿಃ ಸ ಲಭತೇ ಬೃಹಸ್ಪತಿಸಲೋಕತಾಂ ॥ ೮೦ ॥

---

೭೭. ಯಾವನು ತಾನೇ ಕಥೆಯನ್ನು ಕಲ್ಪಿಸಿಕೊಂಡು ಕಾವ್ಯವನ್ನು ರಚಿಸುವನೋ ಅದಕ್ಕೆ ಫಲವಿಲ್ಲ. ಅವನ ಶ್ರಮವು ವ್ಯರ್ಥವಾಗುತ್ತದೆ. ಅದನ್ನು ಓದುವವನೂ ದೋಷಿಯಾಗುತ್ತಾನೆ.

೭೮. ಪುರಾಣದ ಕಥೆಗಳನ್ನಾಗಲೀ, ಭಾರತದ ಕಥೆಗಳನ್ನಾಗಲೀ, ರಾಮಾಯಣದ ಕಥೆಗಳನ್ನಾಗಲಿ, ಉಪಪುರಾಣದಲ್ಲಿರುವ ಕಥೆಗಳನ್ನಾಗಲೀ, ತೆಗೆದು ಕವಿಯಾದವನು ಬರೆಯಬೇಕು.

೭೯. ಹಾಗೆ ಬರೆದು ಅವನು ರಾಮಭಕ್ತನೂ ಆಗಿದ್ದರೆ ಸ್ವರ್ಗದಲ್ಲಿ ವಾಸವನ್ನು ಹೊಂದುತ್ತಾನೆ. ತಾನು ಬರೆದಿರುವ ಗ್ರಂಥಗಳಲ್ಲಿರುವ ಅಕ್ಷರಗಳೊಂದೊಂದಕ್ಕೂ ಒಂದೊಂದು ವರ್ಷದಂತೆ ಸ್ವರ್ಗದಲ್ಲಿ ವಾಸಿಸುತ್ತಾನೆ.

೮೦. ರಾಮಭಕ್ತನಾದವನು ಪುರಾಣಗಳಿಂದ ತೆಗೆದು ಕಥೆಯನ್ನು ಬರೆದರೆ ವ್ಯಾಸಮೂರ್ತಿಯ ಸ್ವರೂಪನಾದ ಆತನು ಬೃಹಸ್ಪತಿಯ ಲೋಕವನ್ನು ಹೊಂದುವನು.

ದೌಹಿತ್ರಃ ಪೋಷಿತಃ ಶಿಷ್ಯ ಆರಾಮಶ್ಚ ಜಲಾಶಯಃ ।
ಸದ್ಗ್ರಂಥಕರಣಂ ಪುತ್ರಃ ಸತ್ಪುತ್ರಾ ವೈ ಪ್ರಕೀರ್ತಿತಾಃ ॥ ೮೧ ॥

ಏವಂ ಭೂಮ್ಯಾಮಂಶಭೂತೈರ್ನರೈಸ್ತೇ ವಿಚರಂತಿ ಹಿ ।
ಅಶ್ವತ್ಥಾಮಾದಯಸ್ಸಪ್ತ ಯೇ ಚಿರಂಜೀವಿನಃ ಸದಾ ॥ ೮೨ ॥

ಅತಃ ಶ್ರೀರಾಮಭಕ್ತೈಶ್ಚ ಕವಿತ್ವೈಸ್ತತ್ಕೃತಿಃ ಕೃತಾ ।
ಸಾಪಿ ಮಾನ್ಯಾ ಸದಾ ಶ್ರಾವ್ಯಾ ಪಠನೀಯಾ ಬುಧೈರ್ಮುಹುಃ ॥ ೮೩ ॥

ಭಾರತಾಚ್ಚ ಶತಾಂಶೇನ ಫಲಧಾತ್ರೀ ಸ್ಮೃತಾತ್ರ ಹಿ ।
ನಿಂದಂತಿ ಯೇ ಭಕ್ತಕೃತಾಂ ಕವಿತಾಂ ತೇ ಖರಾಃ ಸ್ಮೃತಾಃ ॥ ೮೪ ॥

---

೮೧. ದೌಹಿತ್ರ (ಮಗಳ ಮಗ), ತಾನು ಕಾಪಾಡಿದ ಮನುಷ್ಯ, ಶಿಷ್ಯ, ತೋಪು, ಕೆರೆ, ಕೊಳಗಳನ್ನು ಕಟ್ಟಿಸುವುದು ಒಳ್ಳೆಯ ಗ್ರಂಥವನ್ನು ಬರೆಯುವುದು, ಮಗ, ಇವರೆಲ್ಲರೂ ಸತ್ಪುತ್ರರು ಎಂದೆನಿಸಿಕೊಳ್ಳುತ್ತಾರೆ.

೮೨. ಕಾವ್ಯವನ್ನು ಬರೆದವರು ಈ ರೀತಿಯಾಗಿ ಭೂಮಿಯಲ್ಲಿ ಅಂಶಭೂತದಿಂದ ಸಂಚರಿಸುತ್ತಿವರು. ಅಶ್ವತ್ಥಾಮಾದಿಗಳನ್ನು ಚಿರಂಜೀವಿಗಳೆಂದು ಹೇಳಿವೆನಷ್ಟೆ! ಅವರೇ ಈ ಅಂಶ ಸಂಭೂತರಾಗಿ ಸಂಚರಿಸುವರೆಂದರೆ ಆಶ್ಚರ್ಯವೇನಿದೆ?

೮೩. ಆದ್ದರಿಂದ ರಾಮಭಕ್ತರಾದವರು ತಮ್ಮ ಕವಿತ್ವಗಳಿಂದ ಇಂತಹ ಒಳ್ಳೆಯ ಗ್ರಂಥಗಳನ್ನು ನಿರ್ಮಿಸಬೇಕು. ಅದನ್ನು ಕೂಡ ಜ್ಞಾನಿಗಳು ಗೌರವಿಸಬೇಕು. ಕೇಳಬೇಕು, ಓದುತ್ತಿರಬೇಕು.

೮೪. ಭಕ್ತರು ಮಾಡಿದ ಆ ಗ್ರಂಥಗಳನ್ನು ಪುರಸ್ಕರಿಸಿ ಓದಿದರೆ ಬರುವ ಪುಣ್ಯದಲ್ಲಿ ನೂರರಲ್ಲಿ ಒಂದಂಶವು ಬರುವುದು. ಭಕ್ತರು ಮಾಡಿದ ಈ ಕಾವ್ಯಗಳನ್ನು ನಿಂದಿಸಿದರೆ ಅವರು ಕತ್ತೆಗಳೆಂಬುದಾಗಿ ಎನಿಸಿಕೊಳ್ಳುತ್ತಾರೆ.

ತತ್ತದ್ಭಾಷಾಕೃತಂ ಕಾವ್ಯಂ ರಾಮವರ್ಣನಸಂಯುತಂ ।
ಭಾರತಸ್ಯ ಸಹಸ್ರಾಂಶಂ ಶ್ರೋತುರ್ವಕ್ತುಃ ಫಲಂ ಸ್ಮೃತಂ ॥ ೮೫ ॥

ನಿರ್ಮಾತುಸ್ತು ಭವೇತ್ಪುಣ್ಯಂ ಸಾಧುಶಬ್ದ ಶತಾಂಶತಃ ।
ಗೀರ್ವಾಣೀ ಕವಿತಾ ಕರ್ತಾ ಏವಂ ವ್ಯಾಸಾಂಶ ಈರಿತಃ ॥ ೮೬ ॥

ಸ್ವಸ್ವಭಾಷಾಕವಿತ್ವಾನಾಂ ಕರ್ತಾರಸ್ತೇ ಕವೀಶ್ವರಾಃ ।
ಗೀರ್ವಾಣೀಕವಿತಾ ಚಾಪಿ ಪದಾನ್ವಯಸಮನ್ವಿತಾ ॥ ೮೭ ॥

ಅರ್ಥಪ್ರಮಾಣಸಹಿತಾ ಸೈವ ಮಾನ್ಯಾ ನ ಚೇತರಾ ।
ನರಸ್ತುತಿಂ ತು ಯಃ ಕುರ್ಯಾಜ್ಜೀವಿಕಾರ್ಥಂ ಕವಿಃ ಕ್ವಚಿತ್ ॥ ೮೮ ॥

---

೮೫. ಜಗತ್ತಿನಲ್ಲಿ ಸಂಸ್ಕೃತವಲ್ಲದೆ ಅನೇಕವಾಗಿ ದೇಶಭಾಷೆಗಳಿರುವುವು ಆಯಾ ಭಾಷೆಗಳಲ್ಲಿ ರಾಮಚರಿತ್ರೆಯನ್ನು ವರ್ಣಿಸಿ ಕಾವ್ಯವನ್ನು ಬರೆದರೆ ಆದಕ್ಕೆ ಭಾರತವನ್ನು ಓದುವುದರಿಂದ ಬರುವ ಪುಣ್ಯದಲ್ಲಿ ಸಾವಿರಪಾಲಿನಲ್ಲಿ ಒಂದುಪಾಲು ಪುಣ್ಯವು ಓದುವವನಿಗೂ, ಕೇಳುವವನಿಗೂ ಬರುವುದು.

೮೬. ಅದನ್ನು ಬರೆದ ಕವಿಗೆ ಸಚ್ಛಬ್ದ (ಸರಿಯಾದ ಸಾಧುಶಬ್ಧ) ವನ್ನು ಪ್ರಯೋಗಮಾಡಿದುದರಿಂದ ಎಂದರೆ ಸಂಸ್ಕೃತ ಶಬ್ದದಿಂದ ಬರೆಯುವುದರಲ್ಲಿ ಬರುವ ಪುಣ್ಯದಲ್ಲಿ ನೂರರಲ್ಲಿ ಒಂದಂಶವು ಬರವುದು. ಸಂಸ್ಕೃತದಲ್ಲಿ ಕವಿತೆಯನ್ನು ಮಾಡತಕ್ಕವನು ವ್ಯಾಸನ ಅಂಶವೆಂದೇ ಈ ರೀತಿಯಾಗಿ ತಿಳಿಯಬೇಕು.

೮೭. ಆಯಾ ಭಾಷೆಯಲ್ಲಿ ಕವಿತ್ವವನ್ನು ಮಾಡಿದವರು ಕವೀಶ್ವರರೇ ಆಗಿರುವರು. ಸಂಸ್ಕೃತಭಾಷೆಯ ಕವಿತ್ವದಂತೆಯೇ ಪದ, ಅನ್ವಯ ಅರ್ಥಗಳಿಂದ ಕೂಡಿರುವಂತೆಯೇ ಈ ದೇಶಭಾಷೆಯ ಕವಿತ್ವವೂ ಕೂಡಿಕೊಂಡಿರುವುದು.

೮೮. ಗೀರ್ವಾಣ ಭಾಷೆಯಲ್ಲಿ ಕವಿತೆಯನ್ನು ಮಾಡಿ ಕಾವ್ಯವನ್ನು ಬರೆದಿದ್ದರೂ ಅದೂಕೂಡ ಪದ, ಅನ್ವಯ ಅರ್ಥಗಳಿಂದ ಕೂಡಿದ್ದರೆ ಅದು ಗೌರವಾರ್ಹವಿಲ್ಲ. ಕವಿಗಳು ಜೀವನಕ್ಕೋಸ್ಕರ ನರಸ್ತುತಿಯನ್ನು ತನ್ನಕಾವ್ಯದಲ್ಲಿ ಮಾಡಬಾರದು.

ನಿಷ್ಫಲಸ್ತಚ್ಛ್ರಮಃ ಪ್ರೋಕ್ತಃ ತದಧ್ಯೇತಾ ಚ ದೋಷಭಾಕ್ ।
ಉನ್ಮಾದೇನ ತು ಯಃ ಕುರ್ಯಾತ್ಕಾಮಿನೀನಾಂ ತು ವರ್ಣನಂ ॥ ೮೯ ॥

ಸ ಹಿ ಶ್ವಯೋನಿಂ ಪ್ರಾಪ್ನೋತಿ ವರ್ಷಾಣ್ಯಕ್ಷರಸಂಖ್ಯಯಾ ।
ವೇದೋಕ್ತಾರ್ಥಾನುಸಾರೇಣ ಮನ್ವಾದ್ಯಾಃ ಸ್ಮಾರಕಾಃ ಸ್ಮೃತಾಃ ॥ ೯೦ ॥

ತೇಷಾಂ ವೈ ಸ್ಮೃತಯೋ ನಾಮ ನಾನಾಧರ್ಮಪ್ರವರ್ತಕಾಃ ।
ತತ್ರ ಕೇಚಿದ್ವೈದಿಕೇಷು ಕರ್ಮಸ್ವಧಿಕೃತಾಃ ಪರೇ ॥ ೯೧ ॥

ಅವೈದಿಕೇಷು ಮಂತ್ರೇಷು ಕೇಚಿತ್ಪಶುಸಮಾಃ ಸ್ಮೃತಾಃ ।
ಅವೈದಿಕೇಷ್ವಪಿ ಪ್ರೋಕ್ತೋ ನಾಧಿಕಾರೋ ನೃಣಾಮಿಹ ॥ ೯೨ ॥

---

೮೯. ಒಂದುವೇಳೆ ಜೀವನಕ್ಕೋಸ್ಕರ ನರಸ್ತುತಿಯನ್ನು ಮಾಡಿದ್ದರೆ ಅವದ ಆ ಕಾವ್ಯದ ಶ್ರಮವು ನಿಷ್ಫಲವಾಗುವುದು. ಅದನ್ನು ಓದುವವನೂ ದೋಷವನ್ನು ಹೊಂದುವನು. ಬುದ್ಧಿ ಭ್ರಮಣೆಯಿಂದಲಾದರೂ ಆ ಕಾವ್ಯಗಳಲ್ಲಿ ಸ್ತ್ರೀಯರನ್ನು ವರ್ಣಿಸಿರಬಾರದು.

೯೦. ಆರೀತಿಯೇನಾದರೂ ಬುದ್ಧಿಪೂರ್ವಕವಾಗಿಯೋ, ಬುದ್ಧಿಯಿಲ್ಲದೆಯೋ, ವರ್ಣಿಸಿದ್ದರೆ ಅವನು ನಾಯಿಯ ಜನ್ಮದಲ್ಲಿ ಹುಟ್ಟುತ್ತಾನೆ. ಮತ್ತು ತಾನು ಆ ವರ್ಣನೆಯನ್ನು ಮಾಡಿರುವ ಅಕ್ಷರ ಸಂಖ್ಯೆಗಳಷ್ಟು ವರ್ಷಗಳಕಾಲದವರೆಗೂ ಜನ್ಮವೆತ್ತುತ್ತ ನಾಯಿಯಾಗಿಯೇ ಇರುತ್ತಾನೆ. ಇನ್ನು ವೇದೋಕ್ತ ಅರ್ಥವನ್ನು ಸುಲಭರೀತಿಯಿಂದ ಅನುವಾದಮಾಡಿರುವ ಕೆಲವು ಗ್ರಂಥಗಳಿರುವುವು. ಅವು ಮನುಸ್ಮೃತಿಯೇ ಮೊದಲಾದ ಸ್ಮೃತಿಗಳೆಂದು ಎನ್ನಿಸಿಕೊಳ್ಳುವುವು.

೯೧. ಅವುಗಳು ಸ್ಮೃತಿಗಳೆಂಬ ಹೆಸರನ್ನು ಹೊಂದಿ ಜನರನ್ನು ನಾನಾ ಧರ್ಮಗಳಲ್ಲಿ ಪ್ರವರ್ತಿಸುವಂತೆ ಮಾಡುತ್ತವೆ. ಅವುಗಳಲ್ಲಿ ಕೆಲವು ವೈದಿಕ ಕರ್ಮಗಳನ್ನು ಅನುಸರಿಸಿ ಹೇಳುತ್ತವೆ.

೯೨ ಮತ್ತೆ ಕೆಲವು ವೇದೋಕ್ತವಲ್ಲದ ಮಂತ್ರಗಳಲ್ಲಿ ಪ್ರವರ್ತಿಸುವಂತೆ ಮಾಡುತ್ತವೆ ಇದನ್ನು ಮಾಡಿದವರು ಪಶು ಸಮಾನರಾದ ಬುದ್ಧಿಹೀನರು. ಎಂದೆನಿಸಿಕೊಳ್ಳುತ್ತಾರೆ. ಇಂತಹ ವೇದಬಾಹ್ಯವಾದುವುಗಳನ್ನು ಆಚರಿಸುವ ವಿಷಯದಲ್ಲಿ ಮನುಷ್ಯರಿಗೆ ಅಧಿಕಾರವಿಲ್ಲ.

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತಥಾ ।
ಪ್ರೋಕ್ತಾ ಆಶ್ರಮಿಣಸ್ತ್ವೇತೇ ಭಿನ್ನಧರ್ಮಾಣ ಏವ ಚ ॥ ೯೩ ॥

ಕದಾ ಕುತ್ರ ಕಥಂ ಕರ್ಮ ಕೇನ ಕಾರ್ಯಮಿತಿ ಸ್ಫುಟಂ ।
ಧರ್ಮಶಾಸ್ತ್ರಂ ತು ನಿರ್ಣೇಯಮನ್ಯಥಾ ದೋಷಭಾಗ್ಭವೇತ್ ॥ ೯೪ ॥

ಅದೇಶೇ ಯತ್ಕೃತಂ ವ್ಯಂಗಮಕಾಲೇ ನಾಧಿಕಾರಿಣಾ ।
ಪ್ರತ್ಯೇಕಂ ತದ್ಭವೇದ್ವ್ಯರ್ಥಂ ಪ್ರತ್ಯವಾಯೋಽಧಿಕೋ ಭವೇತ್ ॥ ೯೫ ॥

ತಸ್ಮಾದಾವಶ್ಯಕಂ ಯಚ್ಚ ಕಾರ್ಯಂ ತತ್ತು ವಿಶೇಷತಃ ।
ಸ್ಮೃತ್ಯರ್ಥಂ ಜ್ಞಾನತೋ ವಾಪಿ ವೇದಾರ್ಥಜ್ಞಾನತೋಽಧಿಕಂ ॥ ೯೬ ॥

---

೯೩. ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಯತಿಯೆಂಬದಾಗಿ ನಾಲ್ಕು ಜನ ಆಶ್ರಮಿಗಳಿರುವರು. ಇವರಿಗೆ ಅವರವರಿಗೆ ತಕ್ಕಂತೆ ಧರ್ಮಗಳಿವೆ. ಅವರೆಲ್ಲರೂ ಬೇರೆ ಬೇರೆಯಾದ ಧರ್ಮವನ್ನು ಆಚರಿಸತಕ್ಕವರು.

೯೪. ಧರ್ಮವನ್ನು ಹೇಗೆ ಆಚರಿಸಬೇಕು ?, ಯಾವಾಗ ? ಎಲ್ಲಿ ಆಚರಿಸಬೇಕು ? ಯಾವನು ಯಾವ ಧರ್ಮವನ್ನು ಮಾಡಬೇಕು ? ಈ ವಿಷಯಗಳಲ್ಲಿ ಧರ್ಮಶಾಸ್ತ್ರವು ನಿಯಾಮಕ ಗ್ರಂಥವಾಗಿರುವುದು. ಅದರಂತೆ ನಡೆಯಬೇಕು. ಹಾಗೆನಡೆಯದಿದ್ದರೂ ಬೇರೆ ರೀತಿಯಾಗಿ ನಡೆದರೂ ಅವನು ದೋಷವನ್ನು ಹೊಂದುತ್ತಾನೆ.

೯೫. ಅಧಿಕಾರಿಯಲ್ಲದವನು ಮಾಡಿದ ಕರ್ಮಗಳೂ, ಅಧಿಕಾರಿಯಾಗಿದ್ದರೂ ಅಕಾಲದಲ್ಲಿ ಮಾಡಿದ ಕರ್ಮಗಳೂ ಸಾಂಗವಾಗಿ ಮಾಡದ ಕೆಲಸಗಳೂ ಅವೆಲ್ಲವೂ ಕೂಡ ವ್ಯರ್ಥವಾಗುತ್ತವೆ. ಅಲ್ಲದೆ ಅವುಗಳಿಂದ ದೋಷವೂ ಬಹುವಾಗಿ ಬರುತ್ತದೆ.

೯೬. ಆದ್ದರಿಂದ ಈ ಅಧಿಕಾರಿಯಾದವನು ಅವಶ್ಯಕವಾದ ಕರ್ಮಗಳನ್ನು ಮಾಡಬೇಕು. ಅದನ್ನುಕೂಡ ಸ್ಮೃತಿಯಲ್ಲಿ ಹೇಳಿರುವಂತೆಯೂ, ಜ್ಞಾನದಿಂದ ನೋಡಿಕೊಂಡು ಮಾಡಿದರೆ ವಿಶೇಷ ಫಲವು. ವೇದದ ಅರ್ಥಜ್ಞಾನದಿಂದ ಆ ಕರ್ಮಗಳನ್ನು ಆಚರಿಸಿದರೆ ಇನ್ನೂ ಹೆಚ್ಚು ಫಲವು ಬರುತ್ತದೆ.

ಋಗ್ವೇದಸ್ಯೋಪವೇದಸ್ಸ್ಯಾದಾಯುರ್ವೇದೋ ಹಿ ವೈದಿಕಃ ।
ಪರೇಷಾಮುಪಕಾರಾಯ ಸ್ವಸ್ಯಾರೋಗ್ಯಾರ್ಥಮೇವ ವಾ ॥ ೯೭ ॥

ಜೀವಿಕಾರ್ಥಮಸೌ ಹಿ ಪಠಿತವ್ಯೋ ದ್ವಿಜಾತಿಭಿಃ ।
ಬ್ರಾಹ್ಮಣಂ ರೋಗಿಣಂ ಕ್ಷೀಣಮುಪಚಾರೇಣ ಜೀವಯೇತ್ ॥ ೯೮ ॥

ಬ್ರಹ್ಮಹತ್ಯಾಭವಂ ಪಾಪಂ ತಸ್ಯ ನಶ್ಯತಿ ವೈ ಧ್ರುವಂ ।
ಯತಸ್ಸ ಲಭತೇ ಪುಣ್ಯಂ ಚತುಃಕೃಚ್ಛ್ರಸಮುದ್ಭವಂ ॥ ೯೯ ॥

ಏವಂ ಪುಣ್ಯಂ ಭವೇತ್ತಸ್ಯ ತತ್ತದ್ವರ್ಣಾನುಸಾರತಃ ।
ಯತ್ನೇ ಕೃತೇಽಪಿ ಯೋ ರೋಗೀ ನ ಜಿವತ್ಯಾಯುಷಃ ಕ್ಷಯಾತ್ ॥ ೧೦೦ ॥

---

೯೭. ಆಯುರ್ವೇದವು (ವೈದ್ಯಶಾಸ್ತ್ರವು) ಋಗ್ವೇದಕ್ಕೆ ಉಪವೇದವಾಗಿರುವುದು. ಆದ್ದರಿಂದ ಆ ಉಪವೇದವೂ ಕೂಡ ವೈದಿಕವಾದುದೇ ಆಗಿರುವುದು. ಅದನ್ನು ಪರೋಪಕಾರಕ್ಕೋಸ್ಕರ ಅಭ್ಯಾಸ ಮಾಡಬೇಕು. ಇಲ್ಲವೆ ತನಗಾದರೂ ಅನುಕೂಲಕ್ಕೋಸ್ಕರ ಕಲಿಯಬೇಕು.

೯೮. ಕೊನೆಗೆ ಜೀವನದ ಸೌಕರ್ಯಕ್ಕೋಸ್ಕರವಾದರೂ ಈ ಆಯುರ್ವೇದವನ್ನು ಕಲಿಯಬೇಕು. ಬ್ರಾಹ್ಮಣನು ರೋಗಿಯಾಗಿ ಕ್ಷೀಣಿಸುತ್ತ ಬಂದಲ್ಲಿ ಅವನನ್ನು ವೈದ್ಯೋಪಚಾರಗಳಿಂದ ಬದುಕಿಸಬೇಕು.

೯೯. ಆ ರೀತಿಯಾಗಿ ಬ್ರಾಹ್ಮಣನನ್ನು ಬದುಕಿಸಿದರೆ ಅವನು ಬ್ರಹ್ಮಹತ್ಯೆಯನ್ನು ಮಾಡಿದರೂ ಕೂಡ ಅದರ ಪಾಪವೂ ಹೋಗುವುದು. ಇವನನ್ನು ಬದುಕಿಸಿದರೆ ಆ ವೈದ್ಯನಿಗೆ ನಾಲ್ಕು ಕೃಚ್ಛ್ರಗಳನ್ನು ಮಾಡಿದ ಪುಣ್ಯವು ಬರುವುದು. ಆದರಿಂದ ಆ ಬ್ರಹ್ಮಹತ್ಯೆಯು ಹೋಗುವುದು.

೧೦೦. ರೋಗಿಯು ಯಾವ ಯಾವ ವರ್ಣದವನಾಗಿರುವನೋ ಅವನನ್ನು ಬದುಕಿಸಿದರೆ ಆಯಾ ವರ್ಣಕ್ಕೆ ಅನುಗುಣವಾಗಿ ಪುಣ್ಯವು ಬರುವುದು. ಒಂದುವೇಳೆ ವೈದ್ಯನು ರೋಗಿಗೆ ಸರಿಯಾದ ಉಪಚಾರ ಮಾಡುತ್ತಿದ್ದರೂ ಅವನು ಆಯುಸ್ಸಿನ ಕ್ಷಯದಿಂದ ಸತ್ತು ಹೋಗುವನು.

ಸೋಪ್ಯರ್ಥಾತ್ಫಲಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ
ಜೀವಿತಾರ್ಥಂ ತು ಯಃ ಕುರ್ಯಾದುಪವಿದ್ಯಾಚತುಷ್ಟಯಂ ॥ ೧೦೧ ॥

ಇಹ ಲೋಕೇ ಫಲಂ ತಸ್ಯ ಪರಲೋಕೇ ನ ಕಿಂಚನ ।
ನರಂ ರೋಗಾರ್ಣವೇ ಮಗ್ನಂ ಯೋಭ್ಯುದ್ಧರತಿ ಮಾನವಃ ॥ ೧೦೨ ॥

ಕಸ್ತೇನ ನ ಕೃತೋ ಧರ್ಮಃ ಕಾಂ ವಾ ಪೂಜಾಂ ನ ಸೋಽರ್ಹತಿ ।
ಗತಶ್ರೀರ್ಗಣಕಾನ್ ದ್ವೇಷ್ಟಿ ಗತಾಯುಶ್ಚ ಚಿಕಿತ್ಸಕಾನ್ ॥ ೧೦೩ ॥

ಗತಶ್ರೀಶ್ಚ ಗತಾಯುಶ್ಚ ಬ್ರಾಹ್ಮಣಾನ್ ದ್ವೇಷ್ಟಿ ಮೂಢಧೀಃ ।
ಗಾಂಧರ್ವಮಪ್ಯಧೀಯೀತ ರಾಮಾಗ್ರೇ ಯಶ್ಚ ಗಾಯತಿ ॥ ೧೦೪ ॥

---

೧೦೧. ಅವನು ಸತ್ತರೂ ಕೂಡ ಈ ವೈದ್ಯನಿಗೆ ಆ ವರ್ಣಕ್ಕೆ ಯುಕ್ತವಾದ ಫಲವು ಬರುವುದೇ ಹೊರತು ಪಾಪವು ಬರುವುದಿಲ್ಲ. ಈ ವಿಷಯದಲ್ಲಿ ವಿಚಾರಮಾಡಬೇಕಾಗಿಲ್ಲ. ಯಾವನಾದರೂ ತನ್ನ ಜೀವಿಕೆಗೋಸ್ಕರವಾಗಿ ನಾಲ್ಕು ಉಪವಿದ್ಯೆಗಳನ್ನು ಅಭ್ಯಾಸಮಾಡಿ ಅದರಿಂದ ಜೀವನ ಮಾಡಿಕೊಳ್ಳುತ್ತಾನೆ.

೧೦೨. ಅವನಿಗೆ ಈ ಲೋಕದಲ್ಲಿ ಜೀವನರೂಪವಾದ ಫಲವು ಬರುವುದು. ಆದರೆ ಪರಲೋಕದ ಫಲವು ಬರುವುದೇ ಇಲ್ಲ. ರೋಗವೆಂಬ ಸಮುದ್ರದಲ್ಲಿ ಮುಳುಗುತ್ತಿರುವ ಮನುಷ್ಯನನ್ನು ವೈದ್ಯನು ಮೇಲಕ್ಕೆತ್ತಿ ಕಾಪಾಡಬೇಕು.

೧೦೩. ಅಂಥವನು ಯಾವ ಧರ್ಮವನ್ನು ತಾನೇ ಮಾಡಿದಂತಾಗುವುದಿಲ್ಲ? ಎಲ್ಲಾ ಧರ್ಮವನ್ನೂ ಮಾಡಿದಂತಾಗುತ್ತದೆ. ಅವನು ಯಾವ ಗೌರವಕ್ಕೆ ತಾನೇ ಅರ್ಹನಲ್ಲ? ಎಲ್ಲಾ ಗೌರವಕ್ಕೂ ಅರ್ಹನಾಗಿರುತ್ತಾನೆ. ಸಂಪತ್ತು ಹೋದವನು ಗಣಿತಜ್ಞನನ್ನು ಎಂದರೆ ಜೋಯಿಸನನ್ನೂ ಆಯುಸ್ಸು ಕಳೆದವನು ವೈದ್ಯನನ್ನೂ ದ್ವೇಷಿಸುತ್ತಾರೆ.

೧೦೪. ಸಂಪತ್ತು, ಆಯುಸ್ಸುಗಳು ಎರಡೂ ಕಳೆದ ದಡ್ಡನು ಬ್ರಾಹ್ಮಣರನ್ನು ದ್ವೇಷಿಸುವನು. ಶ್ರೀರಾಮನ ಮುಂದೆ ಗಾನಮಾಡುವುದಕ್ಕೋಸ್ಕರ ಗಾಂಧರ್ವ ವಿದ್ಯೆಯಾದ ಸಂಗೀತವನ್ನು ಕಲಿಯಬೇಕು.

ತದ್ಭಕ್ತಿಯುಕ್ತೋ ಲಭತೇ ಗಾಂಧರ್ವಂ ಲೋಕಮುತ್ತಮಂ ।
ಧನುರ್ವೇದೋ ದಂಡನೀತಿರ್ಬ್ರಾಹ್ಮಣಾನಾಂ ತು ಜೀವಿಕಾ ॥ ೧೦೫ ॥

ಕ್ಷತ್ರಿಯಾಣಾಂ ತು ಸಾ ಪ್ರೋಕ್ತಾ ವೇದಾದರ್ಧಫಲಪ್ರದಾ ।
ಜ್ಞಾತ್ವೈತೇಷು ಸರ್ವೇಷು ಪುಣ್ಯಂ ಜ್ಞಾನಾನುಸಾರತಃ ॥ ೧೦೬ ॥

ವಿವೇಕಸ್ತಸ್ಯ ಕರ್ತವ್ಯೋ ದ್ರವ್ಯದಾನೇ ವಿಶೇಷತಃ ।
ಅನ್ನಸ್ಯ ಕ್ಷುಧಿತಃ ಪಾತ್ರಂ ಪಾನೀಯಸ್ಯ ಪಿಪಾಸಿತಃ ॥ ೧೦೭ ॥

ದ್ರವ್ಯದಾನೇ ತು ಕರ್ತವ್ಯಂ ವಿಶೇಷಾತ್ಪಾತ್ರವೀಕ್ಷಣಂ ॥
ಖಲಾಯಾಂ ಗವಿ ದುಗ್ಧಂ ಸ್ಯಾದ್ದುಗ್ಧಮಪ್ಯುರಗೇ ವಿಷಂ ॥ ೧೦೮ ॥

---

೧೦೫. ಭಕ್ತಿಯಿಂದ ಶ್ರೀರಾಮನ ಮುಂದೆ ಗಾನವನ್ನು ಮಾಡಿದರೆ ಅವನು ಉತ್ತಮವಾದ ಗಂಧರ್ವಲೋಕವನ್ನು ಹೊಂದುತ್ತಾನೆ. ಧನುರ್ವೇದ, ದಂಡನೀತಿಗಳೆರಡೂ ಬ್ರಾಹ್ಮಣನಿಗೆ ಜೀವನಕ್ಕೋಸ್ಕರವಾಗಿ ಹೇಳಿರುವ ವಿದ್ಯೆಗಳಾಗಿವೆ.

೧೦೬. ಇವೆರಡನ್ನೂ ಕ್ಷತ್ರಿಯರು ಅಭ್ಯಾಸ ಮಾಡಿದರೆ ವೇದವನ್ನು ಓದಿದ ಫಲದಲ್ಲಿ ಅರ್ಧ ಫಲವನ್ನು ಅವು ಅವರಿಗೆ ಕೊಡುತ್ತವೆ. ಇವೆಲ್ಲವನ್ನೂ ತಿಳಿದು ಜ್ಞಾನಸಂಪಾದನೆಯನ್ನು ಮಾಡಿಕೊಂಡಿರುವವರಿಗೆ ಆಯಾ ಜ್ಞಾನಕ್ಕೆ ಅನುಸಾರವಾಗಿ ಪುಣ್ಯವು ಬರುವುದು.

೧೦೭. ಅಂತಹವರನ್ನು ನೋಡಿ ವಿವೇಕದಿಂದ ದ್ರವ್ಯದಾನವನ್ನು ಮಾಡಬೇಕು. ಅನ್ನವನ್ನು ಹಾಕಿದ ಪುಣ್ಯವು ಬರಬೇಕಾದರೆ ಯಾವ ವರ್ಣದವನೇ ಆಗಿರಲಿ ಹಸಿದವನೇ ಪಾತ್ರನು. ಪಾನೀಯಗಳನ್ನು ಕೊಡಬೇಕಾದರೆ ಅವನು ಯಾವವರ್ಣವೇ ಆಗಿರಲಿ ಬಾಯಾರಿದವನೇ ಪಾತ್ರನು.

೧೦೮. ದ್ರವ್ಯದಾನವನ್ನು ಮಾಡಬೇಕಾದರೆ ಮಾತ್ರ ಎಚ್ಚರಿಕೆಯಿಂದ ಪಾತ್ರವನ್ನು ನೋಡಬೇಕು. ಹಸುವು ದುಷ್ಟವಾಗಿದ್ದರೂ ಅದಕ್ಕೆ ಹಾಕಿದ ಪದಾರ್ಥವು ಹಾಲೇ ಆಗುತ್ತದೆ, ಹಾವು ಒಳ್ಳೆಯದಾಗಿದ್ದರೂ ಅದಕ್ಕೆ ಹಾಕಿದ ಹಾಲು ವಿಷವಾಗುತ್ತದೆ. ಅದರಿಂದ ನೋಡಿ ದಾನ ಮಾಡಬೇಕು.

ಪಾತ್ರಾಪಾತ್ರವಿಚಾರೇಣ ಸತ್ಪಾತ್ರೇ ದಾನಮುತ್ತಮಂ ॥
ಯಥಾ ಪುಣ್ಯಾಧಿಕಂ ಪಾತ್ರಂ ತಥಾ ದಾನಂ ಫಲಾಧಿಕಂ ॥ ೧೦೯ ॥

ಜ್ಞಾನಾಧಿಕ್ಯಾದ್ಭವೇತ್ಪುಣ್ಯಾಧಿಕ್ಯಾತ್ಪಾತ್ರಂ ಕ್ರಮೇಣ ವಾ ॥
ರಾಮಭಕ್ತಶ್ಚ ಪಾತ್ರಂ ಸ್ಯಾದ್ರಾಮಾಭಕ್ತೋ ನ ಸರ್ವಥಾ ॥ ೧೧೦ ॥

ರಾಮದ್ವೇಷೀ ವರ್ಜನೀಯೋ ದರ್ಶನಾಲಾಪನಾದಿಷು ।
ಸಂಗತೇಶ್ಚ ಭವೇತ್ಪೂತಃ ಸದ್ಭಕ್ತಾನಾಂ ತು ನಾನ್ಯಥಾ ॥ ೧೧೧ ॥

ಯಚ್ಛಕ್ತೇರಧಿಕಂ ದದ್ಯಾತ್ತದ್ದಾನಂ ಪರಿಕೀರ್ತಿತಂ ।
ವಿತ್ತಶಾಠ್ಯೇನ ಯದ್ದಾನಂ ನ ತದ್ದಾನಂ ಸ್ಮೃತಂ ಬುಧೈಃ ॥ ೧೧೨ ॥

---

೧೦೯. ಪಾತ್ರ ಅಪಾತ್ರಗಳನ್ನು ವಿಚಾರಿಸಿಕೊಂಡು ಸತ್ಪಾತ್ರನಲ್ಲಿ ದಾನವನ್ನು ಮಾಡಬೇಕು. ಅದು ಉತ್ತಮವಾದುದು. ಪಾತ್ರನಾದವನು ಎಷ್ಟು, ಎಷ್ಟು ಪುಣ್ಯಾಧಿಕ್ಯದಿಂದ ಕೂಡಿರುವನೋ ಅಷ್ಟು ಅಷ್ಟು ಫಲವೂ ಹೆಚ್ಚಾಗಿ ಬರುವುದು.

೧೧೦. ಜ್ಞಾನವು ಹೆಚ್ಚಿದಂತೆಲ್ಲಾ ಪುಣ್ಯವು ಹೆಚ್ಚುವುದು. ಪುಣ್ಯವು ಹೆಚ್ಚಿದಂತೆಲ್ಲಾ ಪಾತ್ರನಾಗಿ ಫಲವನ್ನು ಹೆಚ್ಚು ಕೊಡುವನು. ಅಜ್ಞಾನಾಧಿಕ್ಯದಿಂದ ಪುಣ್ಯವನ್ನು ಹೊಂದಿರುವವನಿಗಿಂತಲೂ ರಾಮ ಭಕ್ತನು ಉತ್ತಮಪಾತ್ರನು. ಅವನು ಜ್ಞಾನಿಯಾದರೂ ರಾಮನಲ್ಲಿ ಭಕ್ತಿಯಿಲ್ಲದಿದ್ದರೆ ಪಾತ್ರನೇನೋ ಆಗುತ್ತಾನೆ. ಆದರೆ ಉತ್ತಮ ಪಾತ್ರನಲ್ಲ.

೧೧೧. ರಾಮನಲ್ಲಿ ಭಕ್ತಿಯನ್ನಿಡದೆ. ರಾಮನನ್ನು ದ್ವೇಷಿಸುವವನ ಸಂಗಡ ಮಾತನಾಡಬಾರದು. ಅವರನ್ನು ನೋಡಲೂ ಬಾರದು. ಅವನು ರಾಮಭಕ್ತರೊಡನೆ ಸೇರುತ್ತ ಬಂದರೆ ಪವಿತ್ರನಾಗುವನು. ಇಲ್ಲದಿದ್ದರೆ ಇಲ್ಲ.

೧೧೨. ಶಕ್ತಿಗೆ ಮೀರಿದಂತೆ ಪದಾರ್ಥವನ್ನು ಕೊಟ್ಟರೆ ಅದೇ ದಾನವೆನಿಸಿಕೊಳ್ಳುವುದು. ಹಣದಲ್ಲಿ ಜಿಪುಣತನ ಮಾಡಿಕೊಂಡು ದಾನಮಾಡಿದರೆ ಅದನ್ನು ದಾನವೆಂದು ಹೇಳುವುದಿಲ್ಲ.

ದೇಶಕಾಲವಿಶೇಷೇಣ ತತ್ತತ್ಪಾತ್ರ ವಿಶೇಷತಃ ||
ದಾನಸ್ಯ ಫಲಮುದ್ದಿಷ್ಟಮಧಿಕಂ ನ್ಯೂನಮೇವ ಚ || ೧೧೩ ||

ವಿಪ್ರಶಾಠ್ಯತಯಾ ಮೂಢಃ ನ ದದ್ಯಾಚ್ಛಕ್ತಿಸಂಭವಂ |
ವಿಷ್ಠಾಕ್ರಿಮಿರ್ಭವೇದೇವ ಸುವರ್ಣೈಕೇನ ಸಂಖ್ಯಯಾ || ೧೧೪ ||

ದಿವ್ಯವರ್ಷಾಣಿ ನೈವಾತ್ರ ತ್ವಯಾ ಕಾರ್ಯಸ್ತು ಸಂಶಯಃ |
ಯತ್ತು ಜ್ಞಾನವತಾ ಕರ್ಮ ಕ್ರಿಯತೇ ಪುಣ್ಯದಾಯಕಂ || ೧೧೫ ||

ಅಧಿಕಂ ತತ್ಫಲಂ ಪ್ರೋಕ್ತಮಜ್ಞಾನಿಕೃತಕರ್ಮಣಃ ||
ಯಥಾ ಯಥಾಧಿಕಂ ಜ್ಞಾನಂ ಪಾಪಹಾನಿಸ್ತಥಾ ತಥಾ || ೧೧೬ ||

---

೧೧೩. ದೇಶವನ್ನೂ, ಕಾಲವನ್ನೂ ನೋಡಿಕೊಂಡು ಆಯಾ ಪಾತ್ರಗಳ ಯೋಗ್ಯತೆಯನ್ನು ವಿಚಾರಮಾಡಿ ದಾನಕ್ಕೆ ಫಲವು ಹೆಚ್ಚೆಂದೂ ಕಡಿಮೆಯೆಂದೂ ಹೇಳಬೇಕು.

೧೧೪. ಬುದ್ಧಿಯಿಲ್ಲದವನು ಹಣದಲ್ಲಿ ಜಿಪುಣತನವನ್ನು ಮಾಡಿಕೊಂಡು ಶಕ್ತಿಗಿಂತಲೂ ಕಡಿಮೆಯಾಗಿ ದಾನ ಮಾಡಿದರೆ ಅವನು ಮಲದಲ್ಲಿ ಹುಳುವಾಗಿ ಹುಟ್ಟುವನು. ಮತ್ತು ತಾನು ಕೊಡದ ಹಣದ ಸಂಖ್ಯೆಯಷ್ಟು ಕಾಲ ಆ ಕ್ರಿಮಿಯಾಗಿಯೇ ಇರುತ್ತಾನೆ.

೧೧೫. ಆ ಹಣದ ಸಂಖ್ಯೆಯಷ್ಟು ದೇವತೆಗಳ ವರ್ಷಗಳವರೆಗೂ ಮಲದಲ್ಲಿ ಇರುವರು. ಈ ವಿಷಯದಲ್ಲಿ ಸಂಶಯವನ್ನು ಪಡಬೇಡ. ಯಾವನು ಜ್ಞಾನದಿಂದ ಯೋಚಿಸಿಕೊಂಡು ಕರ್ಮಗಳನ್ನು ಮಾಡುವನೋ ಆ ಕರ್ಮವು ಪುಣ್ಯವನ್ನು ಕೊಡುತ್ತದೆ.

೧೧೬. ಹಾಗೆಯೇ ಜ್ಞಾನದಿಂದ ಮಾಡಿದ ಕರ್ಮವು ಫಲವನ್ನು ಅಧಿಕವಾಗಿ ಕೊಡುತ್ತದೆ. ಅಜ್ಞಾನಿಯಾದವನು ಮಾಡತಕ್ಕ ಕರ್ಮದಲ್ಲಿ ಅವನ ಜ್ಞಾನವು ಆ ಕರ್ಮದಲ್ಲಿ ಎಷ್ಟು ಎಷ್ಟು ಹೆಚ್ಚಾಗಿರುವುದೋ ಅಷ್ಟಷ್ಟು ಹೆಚ್ಚಾಗಿ ಪಾಪ ಹಾನಿಯಾಗುತ್ತದೆ.

ಯತ್ತು ಜ್ಞಾನವತಾ ಕರ್ಮ ಕ್ರಿಯತೇ ಪಾಪಕಾರಕಂ ।
ತನ್ನ್ಯೂನಫಲಕಂ ಪ್ರೋಕ್ತಮಜ್ಞಾನಿಕೃತಪಾತಕಾತ್ ॥ ೧೧೭ ॥

ಯಥಾ ಯಥಾಧಿಕಂ ಜ್ಞಾನಂ ಪಾಪಹಾನಿಸ್ತಥಾತಥಾ ।
ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇ ಕ್ಷಣಾತ್ ॥ ೧೧೮ ॥

ಜ್ಞಾನಾಗ್ನಿರ್ದುಷ್ಟಕರ್ಮಾಣಿ ಭಸ್ಮಸಾತ್ಕುರುತೇ ತಥಾ ।
ವರ್ಣಾಧಿಕ್ಯಂ ಯಥಾ ಹೇಮ್ನಾ ವಹ್ನಿಸಂಗೇನ ಜಾಯತೇ ॥ ೧೧೯ ॥

ಪುಣ್ಯಾಧಿಕ್ಯಂ ತಥಾ ಶಿಷ್ಯ ಜ್ಞಾನಿಸಂಗೇನ ಜಾಯತೇ ॥
ಪುಣ್ಯೇನ ವರ್ಧತೇ ಪುಣ್ಯಂ ಪಾಪಂ ಸ್ವಲ್ಪಂ ಚ ಜಾಯತೇ । ॥ ೧೨೦ ॥

ಪಾಪೇನ ಪಾಪವೃದ್ಧಿಶ್ಚ ಪುಣ್ಯಂ ಸ್ವಲ್ಪಂ ಚ ಜಾಯತೇ ।
ಅತಿಸೂಕ್ಷ್ಮೋಽವಿಚಾರೋಽಯಂ ದುರ್ಜ್ಞೇಯೋ ಸ್ಥೂಲದೃಷ್ಟಿಭಿಃ ॥೧೨೧॥

---

೧೧೭. ಜ್ಞಾನಿಯಾದವನು ಪಾಪಕಾರಕವಾದ ಕರ್ಮವನ್ನು ಮಾಡಿದರೆ ಆ ಕರ್ಮವು ಅಜ್ಞಾನಿಯು ಮಾಡಿದ ಪಾಪಕರ್ಮಕ್ಕಿಂತಲೂ ಕಡಿಮೆ ಫಲವನ್ನು ಕೊಡುತ್ತದೆ.

೧೧೮. ಜ್ಞಾನವು ಹೆಚ್ಚಾದಂತೆಲ್ಲ ಪಾಪವು ಅಷ್ಟಷ್ಟು ನಾಶವಾಗುತ್ತದೆ. ಹತ್ತಿ ಉರಿಯುತ್ತಿರುವ ಬೆಂಕಿಯು ಸೌದೆಯನ್ನು ಕ್ಷಣಕಾಲದಲ್ಲಿ ಒಂದೂ ಇಲ್ಲದಂತೆ ಸುಟ್ಟು ಹಾಕುತ್ತದೆ.

೧೧೯-೧೨೦. ಅದೇ ರೀತಿಯಲ್ಲಿ ಜ್ಞಾನವೆಂಬ ಅಗ್ನಿಯು ದುಷ್ಟವಾದ ಕರ್ಮಗಳನ್ನು ಕ್ಷಣಕಾಲದಲ್ಲಿ ಭಸ್ಮವನ್ನಾಗಿ ಮಾಡುತ್ತದೆ. ಎಲೈ ಶಿಷ್ಯನೆ! ಚಿನ್ನಕ್ಕೆ ಬೆಂಕಿಯ ಸಹವಾಸದಿಂದ ಬಣ್ಣವು ಹೆಚ್ಚುವಂತೆ ಕರ್ಮಕ್ಕೆ ಜ್ಞಾನಿಗಳ ಸಂಗವುಂಟಾದಂತೆಲ್ಲಾ ಪುಣ್ಯಾಧಿಕ್ಯವು ಉಂಟಾಗುತ್ತದೆ. ಪುಣ್ಯದಿಂದ ಪುಣ್ಯವು ಹೆಚ್ಚುತ್ತದೆ. ಪಾಪವು ಸ್ವಲ್ಪವಾಗಿ ಆಗುತ್ತದೆ.

೧೨೧. ಪಾಪದಿಂದ ಪಾಪವು ಹೆಚ್ಚುತ್ತದೆ. ಪುಣ್ಯವು ಸ್ವಲ್ಪವಾಗಿಯೇ ಉಂಟಾಗುತ್ತದೆ. ಈ ವಿಚಾರವು ಬಹು ಸೂಕ್ಷ್ಮವಾದುದರಿಂದ ಸ್ಥೂಲದೃಷ್ಟಿಯುವರಿಗೆ ಇದು ತಿಳಿಯುವುದಿಲ್ಲ.

ತಥಾಪ್ಯೇವಂ ವಿಚಾರ್ಯಂ ಸ್ಯಾತ್ ಸ್ವಸ್ವಜ್ಞಾನಾನುಸಾರತಃ ।
ಯಸ್ತು ಸತ್ಯಧಿಕಾರೇಪಿ ಜ್ಞಾನೇ ವಾ ಪಠನೇಪಿ ವಾ ॥ ೧೨೨ ॥

ಪ್ರಯತ್ನಂ ನೈವ ಕುರ್ವೀತ ಸ ನರೋ ಜಾಯತೇ ಪಶುಃ ।
ಜ್ಞಾನಾದ್ವಾಧ್ಯಯನಾದ್ವಾಪಿ ಪುಣ್ಯಂ ವಿಪ್ರಸ್ಯ ವರ್ಧತೇ ॥ ೧೨೩ ॥

ಇತಿ ಸಂಕ್ಷೇಪತಃ ಪ್ರೋಕ್ತಮೇತತ್ಪೃಷ್ಟಂ ತ್ವಯಾನಘ ।
ಉನ್ನೇಯಮನ್ಯನೇನೈವ ಪುಣ್ಯಂ ಪಾಪಮಥಾಪಿ ವಾ ॥ ೧೨೪ ॥

ಧರ್ಮಾಸ್ತು ಬಹವಸ್ಸಂತಿ ತಥಾ ಪಾಪಾನ್ಯನೇಕಶಃ ।
ತತ್ರ ತತ್ರೋದಿತಾನ್ಯೇವ ಪ್ರಾಯಶ್ಚಿತ್ತಾನಿ ವೈ ಬುಧೈಃ ॥ ೧೨೫ ॥

ಕರ್ತವ್ಯಾನಿ ಜನೈಸ್ತಾನಿ ಸಮ್ಯಕ್ ಧ್ಯಾತ್ವಾ ವಿವಿಚ್ಯ ಚ
ಸರ್ವಸಾರಮಿದಂ ಪ್ರೋಕ್ತಂ ರಹಸ್ಯಂ ಪುರತಸ್ತವ ॥ ೧೨೬ ॥

೧೨೨-೧೨೩. ಆದರೂ ಕೂಡ ಅವರವರಜ್ಞಾನಕ್ಕೆ ಅನುಗುಣವಾಗಿ ಇದನ್ನು ವಿಚಾರಿಸಬೇಕು. ಯಾವನಿಗೆ ಅಧಿಕಾರವಿದ್ದರೂ ಜ್ಞಾನವನ್ನು ಹೊಂದುವುದಕ್ಕಾಗಲಿ. ಓದುವುದಕ್ಕಾಗಲಿ ಪ್ರಯತ್ನವನ್ನು ಪಡದೇಲೇ ಇದ್ದರೆ ಅವನು ಪಶುವಾಗಿ ಹುಟ್ಟುತ್ತಾನೆ. ಜ್ಞಾನದಿಂದಲಾಗಲಿ ಅಧ್ಯಯನದಿಂದಲಾಗಲಿ ವಿಪ್ರನಿಗೆ ಪುಣ್ಯವು ಹೆಚ್ಚುತ್ತದೆ.

೧೨೪. ಎಲೈ ಶಿಷ್ಯನೇ! ನೀನು ಕೇಳಿದುದನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಈ ರೀತಿಯಾಗಿ ಪುಣ್ಯವನ್ನಾಗಲಿ, ಪಾಪವನ್ನಾಗಲಿ ನೋಡಿ ಸರಿಪಡಿಸಿ ತಿಳಿದುಕೊಳ್ಳಬೇಕು.

೧೨೫. ಧರ್ಮಗಳು ಬಹುವಾಗಿವೆ. ಅಂತೆಯೇ ಪಾಪಗಳೂ ಬಹುವಾಗಿವೆ. ಅವುಗಳಿಗೆ ಅಲ್ಲಿಯೇ ಪ್ರಾಯಶ್ಚಿತ್ತಗಳನ್ನು ತಿಳಿದವರು ವಿಧಿಸಿರುವರು.

೧೨೬. ಅವುಗಳನ್ನು ಜನರು ಚೆನ್ನಾಗಿ ಬೇರ್ಪಡಿಸಿ ತಿಳಿದುಕೊಂಡು ಅದರಂತೆ ಮಾಡಬೇಕು. ಸರ್ವಸಾರವಾಗಿರುವ ಇದನ್ನು ನಿನ್ನೆದುರಿಗೆ ಹೇಳಿದ್ದೇನೆ.

ಗೃಹಣೀಯಂ ಪ್ರಯತ್ನೇನ ನ ಹ್ಯಭಕ್ತಾಯ ದೀಯತಾಂ।
ಶುಶ್ರೂಷವೇ ಸಾಧವೇ ಚ ರಾಮಭಕ್ತಾಯ ದೀಯತಾಂ ॥ ೧೨೭ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ
ವಾಲ್ಮೀಕೀಯೇ ಮನೋಹರಕಾಂಡೇ ಸರ್ವೇಷಾಂ ವೇದಾದೀನಾಂ
ಫಲಶ್ರುತಿರ್ನಾಮಾಷ್ಟಮಸ್ಸರ್ಗಃ ಸಮಾಪ್ತಃ

---

೧೨೭. ಇದನ್ನು ಪ್ರಯತ್ನಪಟ್ಟು ತಿಳಿದುಕೊ. ಭಕ್ತನಲ್ಲದವನಿಗೆ ದಾನವನ್ನು ಕೊಡಬೇಡ. ಈ ವಿಷಯವನ್ನು ಹೇಳಬೇಡ. ಕೇಳಬೇಕೆಂದು ಇಚ್ಛಿಸುವ ಸಾಧುವಾದ ರಾಮಭಕ್ತನಿಗೆ ಇದನ್ನು ಹೇಳಿಕೊಡು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ
ಶ್ರೀ ಆನಂದರಾಮಾಯಣದ ಮನೋಹರಕಾಂಡದಲ್ಲಿ ವೇದವೇ ಮೊದ
ಲಾದುವುಗಳಿಗೆ ಫಲಶ್ರುತಿಯೆಂಬ ಎಂಟನೆಯ ಸರ್ಗವು ಮುಗಿದುದು.

—೦—೦—೦—

॥ ಶ್ರೀರಸ್ತು ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಎಂಟನೆಯ ಸರ್ಗದ ಸಾರಾಂಶವು

—o—o—

ಶ್ರೀ ರಾಮನಾಮಕ್ಕಿರುವ ಫಲವನ್ನೂ ಅಂತೆಯೇ ಇತರ ಗ್ರಂಥಗಳನ್ನು ಓದುವುದರ ಫಲವನ್ನೂ ಹೇಳುತ್ತೇನೆ. ಶ್ರೀ ರಾಮನಾಮವನ್ನು ಸರಿಯಾದ ರೀತಿಯಲ್ಲಿ ಉಚ್ಚರಿಸಿದರೆ ವೇದಗಳನ್ನು ಓದಿದಷ್ಟು ಪುಣ್ಯವು ಬರುತ್ತದೆ, ಗಾಯತ್ರಿಯ ನಾಲ್ಕು ನೂರರಷ್ಟು ಫಲವನ್ನೂ ಪವಮಾನ ಸೂಕ್ತದ ಆರನೂರರಷ್ಟು ಫಲವನ್ನೂ ಉಪನಿಷತ್ತು ಗಾಯತ್ರಿಗಳಿಗೆ ಸಮನಾದ ಫಲವನ್ನೂ ಸಂಹಿತಾಪಾಠದ ಎರಡರಷ್ಟು ಫಲವನ್ನೂ ಕ್ರಮಪಾಠದ ಮೂರರಷ್ಟು ಜಟಾಪಾಠದ ಆರರಷ್ಟು ಫಲವನ್ನೂ ಕೊಡುತ್ತದೆ.

ರಾಮನಾಮವನ್ನು ಬರೆದು ಅದಕ್ಕೆ ಹೋಮವನ್ನೂ ಅರ್ಘ್ಯವನ್ನೂ ಕೊಟ್ಟರೆ ಬಹು ಹೆಚ್ಚಾದ ಫಲವುಂಟು. ಜ್ಞಾನಿಯಾಗಿ ಇದನ್ನು ಓದಿದರೂ ಬಹು ಹೆಚ್ಚಾದ ಫಲವುಂಟು. ವೇದವನ್ನೇ ಆಗಲಿ ರಾಮಾಯಣವನ್ನೇ ಆಗಲಿ ಡಂಭಾಚಾರಕ್ಕಾಗಲಿ ಜೀವಿಕೆಗಾಗಲಿ ಓದಿದರೆ ಫಲವಿಲ್ಲ. ಓದಿದ ವೇದವನ್ನು ಮರೆಯಬಾರದು. ಹಾಗೆ ಮರೆತರೆ ನರಿಯಾಗಿ ಹುಟ್ಟುತ್ತಾನೆ. ರಾಮಾಯಣವನ್ನು ತಾನು ಓದುವುದಕ್ಕಿಂತಲೂ ಇತರರಿಗೆ ಅರ್ಥವನ್ನು ಹೇಳಿದರೆ ಹೆಚ್ಚು ಫಲವುಂಟು. ರಾಮನ ಸಂಬಂಧವಾದ ಕವಿತೆಗಳನ್ನು ಮಾಡಿ ಹೇಳಬಹುದು. ಅದು ಪ್ರಾಚೀನ ನವೀನಗಳೆಂಬ ಭೇದಗಳನ್ನು ಹೊಂದುವುದಿಲ್ಲ. ಉಪವಿದ್ಯೆಗಳನು ಜೀವಿಕೆಗೋಸ್ಕರ ಹೊಂದಿದರೆ ಅವಕ್ಕೆ ಪರದಲ್ಲಿ ಫಲವಿಲ್ಲ. ದಾನ ಮಾಡುವುದರಲ್ಲಿ ಯೋಗ್ಯತೆಯನ್ನು ನೋಡಿ ದಾನ ಮಾಡಬೇಕು. ದುಷ್ಟ ಹಸುವಿನಲ್ಲಿ ಹಾಲಿದ್ದರೂ ಅದು ಉಪಯೋಗವಿಲ್ಲದಂತಾಗುತ್ತದೆ. ಹಾವಿಗೆ ಹಾಲೆರೆದರೆ ಅದು ವಿಷವಾಗುತ್ತದೆ. ಹಾಗೆ ಅಯೋಗ್ಯರಿಗೆ ಕೊಟ್ಟದಾನ ಕೆಟ್ಟದ್ದಾಗಿ ಪರಿಣಮಿಸುವುದು.

ರಾಮನನ್ನು ದ್ವೇಷಮಾಡುವವನೊಡನೆ ಮಾತನಾಡಬಾರದು. ಜ್ಞಾನವು ಹೆಚ್ಚಿದಂತೆಲ್ಲಾ ಪಾಪಹಾನಿಯಾಗುವುದು. ಜ್ಞಾನವು ಜ್ಞಾನಿಯಾಗಲು

ಯೋಗ್ಯತೆಯಿದ್ದರೂ ಅವನು ಜ್ಞಾನಿಯಾಗಲು ಪ್ರಯತ್ನಪಡದಿದ್ದರೆ ಅವನು ಪಶುವಾಗಿ ಹುಟ್ಟುವನು.

ಈ ರಾಮಮಂತ್ರವನ್ನು ಭಕ್ತರಲ್ಲದವರಿಗೆ ಕೊಡಬಾರದು. ಹೇಳಿದಂತೆ ಕೇಳುವ ಸಾಧುವಾಗಿರುವ ರಾಮ ಭಕ್ತನಿಗೆ ಕೊಡಬೇಕು.



॥ ಶ್ರೀರಸ್ತು ॥

ಅಥ ಶ್ರೀಮದಾನಂದರಾಮಾಯಣೇ ಮನೋಹರಕಾಂಡೇ ನವಮಸ್ಸರ್ಗಃ

॥ ವಿಷ್ಣುದಾಸ ಉವಾಚ ॥

ಗುರೋನ್ಯದ್ರಾಮಚಂದ್ರಸ್ಯ ವಿಶೇಷೇಣ ಚ ಪೂಜನಂ ।
ಯಸ್ಮಿನ್ ಕಾಲೇ ಪ್ರಕರ್ತವ್ಯಂ ತಂ ಕಾಲಂ ಕಥಯಸ್ವ ಮಾಂ ॥ ೧ ॥

॥ ರಾಮದಾಸ ಉವಾಚ ॥

ಶೃಣು ಶಿಷ್ಯ ಪ್ರವಕ್ಷ್ಯಾಮಿ ಕಾಲಂ ಪುಣ್ಯತಮಂ ಶುಭಂ ।
ಪದಾಮಿ ರಾಮಚಂದ್ರಸ್ಯ ಪೂಜನಾರ್ಥಂ ವಿಶೇಷತಃ ॥ ೨ ॥

ಮಾಘಸ್ಯ ಶುಕ್ಲಪಕ್ಷಸ್ಯ ಯಾ ಪುಣ್ಯಾ ಪಂಚಮೀ ತಿಥಿಃ ।
ಪುಣ್ಯಾ ಶ್ರೀಪಂಚಮೀ ನಾಮ್ನೀ ಸಾ ಖ್ಯಾತಾ ಸ್ತಿ ಜಗತ್ತ್ರಯೇ ॥ ೩ ॥

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಒಂಭತ್ತನೆಯ ಸರ್ಗವು

೧. ವಿಷ್ಣುದಾಸನು ಹೇಳಿದನು– ಎಲೈ ಗುರುವೇ! ರಾಮಚಂದ್ರನಿಗೆ ಮಾಡಬೇಕಾದ ಮತ್ತೊಂದು ವಿಶೇಷ ಪೂಜೆಯನ್ನು ಹೇಳು. ಅದನ್ನು ಯಾವಾಗ ಮಾಡಬೇಕೋ ಆ ಕಾಲವನ್ನೂ ಹೇಳು.

೨. ರಾಮದಾಸನು ಹೇಳಿದನು–ಎಲೈ ಶಿಷ್ಯನೇ! ರಾಮಚಂದ್ರನ ವಿಶೇಷ ಪೂಜೆಗೆ ಪುಣ್ಯತಮವಾದ ಕಾಲವನ್ನು ಹೇಳುತ್ತೇನೆ. ಅದನ್ನು ಕೇಳು.

೩. ಮಾಘಮಾಸದ ಶುಕ್ಲ ಪಂಚಮಿಯು ಪುಣ್ಯಕರವಾದ ದಿವಸವು. ಈ ದಿನವನ್ನು ಎಲ್ಲರೂ ಮೂರುಲೋಕದಲ್ಲಿಯೂ ಶ್ರೀ ಪಂಚಮೀ ಎಂದು ಕರೆಯುತ್ತಾರೆ.

ತದಾರಭ್ಯ ಸಾರ್ಧಮಾಸದ್ವಯಂ ರಾಮಂ ಮಹೋತ್ಸವೈಃ ।
ಪೂಜಯೇತ್ಪಂಚಮೀಯಾವದ್ವೈಶಾಖೇ ಕೃಷ್ಣಪಕ್ಷಜಾ ॥ ೪ ॥

ಮಾಘಕೃಷ್ಣಚತುರ್ಥ್ಯಾಶ್ಚ ನವಮೀ ಮಧುಶುಕ್ಲಜಾ ।
ಯಾವತ್ತಾವತ್ಫಲಾಹಾರೀ ಚೈಕಾಶೀತಿ ದಿನಾನಿ ಹಿ ॥ ೫ ॥

ಸೀತಾರಾಮಸ್ಯ ನಿತ್ಯಂ ಹಿ ಕೇಚಿತ್ಕುರ್ಯಂತಿ ಪೂಜನಂ ।
ಪೌರ್ಣಿಮಾಂತಾಃ ಸ್ಮೃತಾಶ್ಚಾತ್ರ ಮಾಸಾಸ್ಸರ್ವತ್ರ ಭೋ ದ್ವಿಜ ॥ ೬ ॥

ಪ್ರತ್ಯಹಂ ವಾಹನಾರೂಢಂ ಕೃತ್ವಾ ರಾಮಂ ಮಹೋತ್ಸವೈಃ ।
ಭೇರೀದುಂದುಭಿನಿರ್ಘೋಷೈರ್ಮಹಾವಾದ್ಯಪುರಸ್ಸರೈಃ ॥ ೭ ॥

ವಾರಸ್ತ್ರೀಣಾಂ ನೃತ್ಯಗೀತೈಶ್ಛತ್ರಚಾಮರತೋರಣೈಃ ।
ನಾನಾಕುಸುಮವರ್ಷಾರ್ಘ್ಯೈರ್ನಾನಾಸ್ತೋತ್ರಾದಿಪಾಠನೈಃ ॥ ೮ ॥

---

೪. ಆ ಮಾಘಮಾಸದ ಶುಕ್ಲಪಕ್ಷದ ಪಂಚಮಿಯನ್ನು ಮೊದಲು ಮಾಡಿಕೊಂಡು ವೈಶಾಖ ಬಹುಳ ಪಂಚಮಿಯವರೆಗೆ ಎರಡೂವರೆ ತಿಂಗಳವರೆಗೂ ಕೂಡ ರಾಮನನ್ನು ಮಹೋತ್ಸವಗಳಿಂದ ಪೂಜಿಸಬಹುದು.

೫. ಮಾಘ ಕೃಷ್ಣ ಚತುರ್ಥಿಯ ಮೊದಲುಗೊಂಡು ವೈಶಾಖ ಶುದ್ಧ ನವಮಿಯವರೆಗೆ ಅಂದರೆ ಎಂಭತ್ತೊಂದು ದಿನಗಳು ಮನುಷ್ಯನು ಫಲಾಹಾರ ಮಾಡಿಕೊಂಡು ಇರಬೇಕು.

೬-೧೦. ಹಾಗಿದ್ದುಕೊಂಡು ಕೆಲವರು ಸೀತಾರಾಮರ ಪೂಜೆಯನ್ನು ಪ್ರತಿದಿನವೂ ಮಾಡುತ್ತಾರೆ. ಈ ರಾಮಪೂಜೆಯನ್ನು ಮಾಡುವಾಗ ಪೂರ್ಣಿಮೆಯಿಂದ ಪೂರ್ಣಿಮೆಯವರಿಗೂ ತಿಂಗಳೆಂದು ತಿಳಿಯಬೇಕು. ಈ ದಿನಗಳಲ್ಲಿ ಸೀತಾರಾಮರನ್ನು ವಾಹನಗಳಮೇಲೆ ಕೂರಿಸಿ ತಮಟೆ, ರಮಡೋಲು, ವೋಲಗ ಮುಂತಾದುವುಗಳ ಶಬ್ದ ಮಾಡಿಸಿಕೊಂಡು ಭಜನೆ ಮಾಡುತ್ತ ನರ್ತಕಿಯರ ನರ್ತನವನ್ನು ಮಾಡಿಸುತ್ತ ಛತ್ರಿ ಚಾಮರಗಳನ್ನು ಹಿಡಿದುಕೊಂಡು ಉತ್ಸವದ ಮೇಲೆ ಹೂಗಳನ್ನು ಎರಚುತ್ತ ಸ್ತೋತ್ರಗಳನ್ನು ಮಾಡುತ್ತ ಅನೇಕವಾದ

ನಾನಾಪರಿಮಳದ್ರವ್ಯಾಂಜಲೀನಾಂ ಮೋಚನಾದಿಭಿಃ ।
ನಾನಾಮಾಂಗಲ್ಯವಸ್ತೂನಾಮಂಜಲೀಭಿಃ ಸುಮೋಚನೈಃ ॥ ೯ ॥

ನಾನಾಕುಸುಮರಂಗನಾಂ ತೈಲಾನಾಂ ಚ ಪರಸ್ಪರಂ ।
ರಾಮಂ ಚ ವಾರನಾರ್ಯಶ್ಚ ಜಲಯಂತ್ರೈಃ ಕರೇ ಧೃತೈಃ ॥ ೧೦ ॥

ಮುಹುರ್ಮುಹುಸ್ಸಿಂಚನಾದ್ಯೈಸ್ತಥಾ ಸ್ತ್ರೀಣಾಂ ಸುಗಾಯನೈಃ ।
ದ್ವಿಜಾನಾಂ ವೇದಘೋಷೈಶ್ಚ ಧೂಪೈರ್ನೀರಾಜನಾದಿಭಿಃ ॥ ೧೧ ॥

ಸಹಕಾರಾರಾಮಮಧ್ಯೇ ನೀತ್ವೈವಂ ಪರಮೋತ್ಸವೈಃ ।
ಸಹಕಾರವೃಕ್ಷಬದ್ಧದೋಲಕೇ ತಂ ನಿವೇಶಯೇತ್ ॥ ೧೨ ॥

ನಾಗೇನ ವಾ ಪುಷ್ಪಕೇಣ ಶೇಷಯಾನೇನ ವಾಜಿನಾ ।
ರಥೇನ ಗರುಡೇನಾಪಿ ತಥಾ ಸಿಂಹಾಸನೇನ ಚ ॥ ೧೩ ॥

ತಥಾ ಶಿಬಿಕಯಾ ವಾಪಿ ವಾಯುಪುತ್ರೇಣ ವಾ ತಥಾ ।
ಯಾನೈರ್ನವಭಿರೇತೈಶ್ಚ ಸದಾ ನೇಯೋ ರಘೂತ್ತಮಃ ॥ ೧೪ ॥

ಪರಿಮಳ ದ್ರವ್ಯಗಳನ್ನು ಕೈಯಿಂದ ಎರಚುತ್ತ ಮಂಗಳವಸ್ತುಗಳನ್ನು ದೇವರ ಮೇಲೆ ಎರಚುತ್ತಾ ಅನೇಕ ಬಗೆಯಾದ ರಂಗುಗಳನ್ನು ಒಬ್ಬರಿಗೊಬ್ಬರು ಎರಚಿಕೊಳ್ಳುತ್ತಾ ವಾಸನೆಯಾದ ಎಣ್ಣೆಗಳನ್ನು ಎರಚಿಕೊಳ್ಳುತ್ತಾ ಹೋಗಬೇಕು. ನರ್ತಕಿಯರು ತಮ್ಮ ಕೈಯಲ್ಲಿ ಪಿಚಕಾರಿಗಳನ್ನು ಹಿಡಿದುಕೊಂಡು ಒಬ್ಬರಮೇಲೆ ಒಬ್ಬರು ಎರಚಿಕೊಳ್ಳುತ್ತಿರಬೇಕು.

೧೧–೧೨. ಈ ರೀತಿಯಾಗಿ ಆ ವಾರಸ್ತ್ರೀಯರು ಎರಚಿಕೊಳ್ಳುತ್ತಾ ದಾರಿಯಲ್ಲಿ ಗಾನಮಾಡುತ್ತ ಇರಬೇಕು. ಬ್ರಾಹ್ಮಣರು ವೇದಘೋಷವನ್ನು ಮಾಡುತ್ತ ಇರಬೇಕು. ಸ್ವಾಮಿಗೆ ಧೂಪವನ್ನು ಹಾಕುತ್ತ ಆರತಿಗಳನ್ನು ಎತ್ತುತ್ತ ಯಾವುದಾದರೂ ಒಂದು ಮಾವಿನ ತೋಪಿಗೆ ಹೋಗಬೇಕು. ಅಲ್ಲಿರುವ ಒಂದು ಮಾವಿನ ಮರಕ್ಕೆ ಒಂದು ಉಯ್ಯಾಲೆಯನ್ನು ಕಟ್ಟಿರಬೇಕು. ಅದರಲ್ಲಿ ಸೀತಾರಾಮರನ್ನು ಕೂರಿಸಬೇಕು.

೧೩–೧೪. ಆನೆ, ರಥ, ಶೇಷ, ಕುದುರೆ, ಪುಷ್ಪಕ, ಗರುಡ, ಸಿಂಹಾಸನ, ಪಲ್ಲಕ್ಕಿ, ಹನುಮಂತ, ಈ ಒಂಭತ್ತು ಬಗೆಯಾದ ಯಾನಗಳಲ್ಲಿ ಆ ಸೀತಾರಾಮರನ್ನು ಯಾವಾಗಲೂ ಮೆರವಣಿಗೆ ಮಾಡಬೇಕು

ಆಮ್ರವೃಕ್ಷಾರಾಮಮಧ್ಯೇ ವಲ್ಲೀಪುಷ್ಪನಗಾನ್ವಿತೇ ।
ಅವನಿಂ ಚಂದನೈರ್ಲಿಪ್ತ್ವಾ ವಿಕೀರ್ಯ ಕುಸುಮಾನಿ ಚ ॥ ೧೫ ॥

ಆಚ್ಛಾದ್ಯ ನಾನಾವಸ್ತ್ರೈಶ್ಚ ಶೋಭನೀಯಾವನಿಶ್ಶುಭಾ ।
ಹೇಮಸಿಂಹಾಸನಸ್ಯೈವ ಕೃತ್ವಾ ದೋಲಕಮುತ್ತಮಂ ॥ ೧೬ ॥

ಚೂತವೃಕ್ಷಸ್ಯ ಶಾಖಾಯಾಂ ತಂ ಬಧ್ವಾ ಶೃಂಖಲಾದಿಭಿಃ ।
ತತ್ರ ಶ್ರೀರಾಮತೋಭದ್ರೇ ರಾಮಚಂದ್ರಂ ಪ್ರಪೂಜಯೇತ್ ॥ ೧೭ ॥

ನಾನಾ ನವವಿಧೈಃ ಪುಷ್ಪೈಃ ಷೋಡಶೈರುಪಚಾರಕೈಃ ।
ಸಂಪೂಜ್ಯ ಸಿತಯಾ ಬಂಧುಸುಗ್ರೀವಾದ್ಯೈಸ್ಸಮನ್ವಿತಂ ॥ ೧೮ ॥

---

೧೫. ಆ ಸ್ವಾಮಿಯನ್ನು ಕೂರಿಸುವ ಮಾವಿನ ತೋಪುಗಳ ಮಧ್ಯದಲ್ಲಿ ಬೆಟ್ಟ ಗುಡ್ಡಗಳಿರಬೇಕು. ಅನೇಕ ಬಳ್ಳಿಗಳಿರಬೇಕು. ಹೂವಿನ ಗಿಡಗಳಿರಬೇಕು. ಆ ಜಾಗದಲ್ಲಿ ಭೂಮಿಯನ್ನು ಚಂದನದಿಂದ ಚುಮುಕಿಸಿ ಸಾರಿಸಿರಬೇಕು. ಅಲ್ಲಿ ಹೂವನ್ನು ಎರಚಿರಬೇಕು.

೧೬. ಅಲ್ಲಿ ನೆಲಕ್ಕೆ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಸಿ ಅಲಂಕರಿಸಬೇಕು. ಅಲ್ಲಿ ಚಿನ್ನದ ಸಿಂಹಾಸನವನ್ನು ಮಾಡಿ ಆ ಸಿಂಹಾಸನವನ್ನು ಉಯ್ಯಾಲೆಯನ್ನಾಗಿ ಮಾಡಬೇಕು.

೧೭. ಆ ಉಯ್ಯಾಲೆಯನ್ನು ಸರಪಣಿ ಮುಂತಾದುವುಗಳಿಂದ ಮಾವಿನ ಮರದ ಕೊಂಬೆಗೆ ಕಟ್ಟಬೇಕು. ಆ ಉಯ್ಯಾಲೆಯಲ್ಲಿರುವ ಸಿಂಹಾಸನದಲ್ಲಿ ಶ್ರೀ ರಾಮತೋಭದ್ರವನ್ನು ರಚಿಸಿ ಅದರ ಮೇಲೆ ರಾಮಚಂದ್ರನನ್ನು ಕೂರಿಸಿ ಪೂಜಿಸಬೇಕು.

೧೮. ಆಗ ಬಗೆ ಬಗೆಯಾದ ಒಂಭತ್ತು ಬಗೆಯ ಹೂವುಗಳನ್ನು ತಂದಿರಬೇಕು ಅವುಗಳಿಂದ ಪೂಜೆ ಮಾಡಬೇಕು. ಮತ್ತು ಷೋಡಶೋಪಚಾರಗಳಿಂದಲೂ ಪೂಜಿಸಬೇಕು. ಈ ರಾಮ ದೇವರ ಜೊತೆಯಲ್ಲಿ ಸೀತೆ, ಆ ರಾಮನ ತಮ್ಮಂದಿರು, ಸುಗ್ರೀವಾದಿಗಳೂ ಇರಬೇಕು.

ಆಂದೋಳಯೇದ್ದೋಳಕಂ ತಂ ಶಿಶುಪಾಲಕವಚ್ಛನೈಃ ।
ನರ್ತಿತವ್ಯಾಃ ಪರಂ ವೇಶ್ಯಾಸ್ತದಗ್ರೇ ಶತಶೋ ಮುದಾ ॥ ೧೯ ॥

ಗಾಯನೀಯಾ ಗಾಯಕಾಶ್ಚ ನರ್ತಿತವ್ಯಾ ನಟಾದಯಃ ।
ವಾದನೀಯಾ ನಿ ವಾದ್ಯಾನಿ ಜ್ವಾಲನೀಯಾಸ್ಸುಧೂಪಕಾಃ ॥ ೨೦ ॥

ವೀಜನೀಯಶ್ಚಾಮರಾದ್ಯೈಃ ಸೀತಯಾ ರಘುನಂದನಃ ।
ತದ್ಧ್ಯಾನೈಃ ಕೀರ್ತನಾನ್ಯೇವ ಕಾರಯಿತ್ವಾ ಮಹೋತ್ಸವೈಃ ॥ ೨೧ ॥

ಪುನಃ ಪೂಜ್ಯ ಪೂರ್ವವಚ್ಚ ಸಮಾನೇಯೋ ಗೃಹಂ ಪ್ರತಿ ।
ಸಂಪೂಜನೀಯಃ ಶ್ರೀರಾಮಃ ಕುಂಭದೀಪಾರ್ತಿಕಾದಿಭಿಃ ॥ ೨೨ ॥

---

೧೯. ಅನಂತರ ಆ ಉಯ್ಯಾಲೆಯನ್ನು ತಾಯಿಯು ಮಕ್ಕಳ ತೊಟ್ಟಿಲನ್ನು ತೂಗುವಂತೆ ನಿಧಾನವಾಗಿ ತೂಗಬೇಕು. ಆಗ ಆ ಸ್ವಾಮಿಯ ಮುಂದೆ ವೇಶ್ಯೆಯರು ಸಂತೋಷದಿಂದ ಗುಂಪು ಗುಂಪಾಗಿ ನರ್ತನವನ್ನು ಮಾಡುತ್ತಿರಬೇಕು.

೨೦. ಗಾಯಕರು ಗಾನವನ್ನು ಮಾಡಬೇಕು. ನಟರು ನರ್ತನವನ್ನು ಮಾಡುತ್ತಿರಬೇಕು. ವಾದ್ಯಗಾರರು ವಾದ್ಯಗಳನ್ನು ಮೊಳಗಿಸುತ್ತಿರಬೇಕು. ಧೂಪಗಳನ್ನು ಹಾಕಿ ಸುವಾಸನೆಯನ್ನು ಮಾಡುತ್ತಿರಬೇಕು.

೨೧. ಚಾಮರಗಳನ್ನು ಬೀಸುತ್ತಿರಬೇಕು. ಸೀತೆಯನ್ನೂ, ರಾಮನನ್ನೂ ಧ್ಯಾನ ಮಾಡಬೇಕು. ಇನ್ನೂ ಯಾವ ಯಾವ ಉಪಚಾರಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಬೇಕು. ಈ ರೀತಿಯಾಗಿ ಮಹೋತ್ಸವವನ್ನು ಮಾಡಬೇಕು.

೨೨. ಮತ್ತೆ ಪುನಃ ಪೂಜೆಯನ್ನು ಮಾಡಿ ಉತ್ಸವದಿಂದ ಮನೆಗೆ ಕರೆತರಬೇಕು. ಮನೆಯಲ್ಲಿ ಗುಂಭಾರತಿ, ದೀಪಾರತಿಗಳನ್ನು ಎತ್ತಿ ಪೂಜಿಸಬೇಕು.

ಏವಂ ನಿತ್ಯಂ ಸಾರ್ಧಮಾಸದ್ವಯಂ ರಾಮಂ ಪ್ರಪೂಜಯೇತ್ ।
ಚೂತವೃಕ್ಷತಲೇ ನೀತ್ವಾ ಪೂಜಯೇಚ್ಚ ಸವಿಸ್ತರಂ ॥ ೨೩ ॥

ಯದಾ ರಾಮಶ್ಚ ಸೀತಾ ಚ ಬಹಿರ್ನೇಯಾ ನಿಜಾತ್ ಗೃಹಾತ್ ।
ತದಾ ತಯೋರ್ನಯನಾಧಃ ಕಸ್ತೂರ್ಯಾಂಗುಳಿನಾಸಿತಾಃ ॥ ೨೪ ॥

ದೇಯಾಶ್ಚ ಬಿಂದವೋ ಯತ್ನಾತ್ಪರದುರ್ದೃಷ್ಟಿನಾಶನಾಃ ।
ಏವಂ ದೋಳಾಪೂಜನಂ ಚ ಶಿಷ್ಯ ತೇ ಕಥಿತಂ ಮಯಾ ॥ ೨೫ ॥

ವಿಶೇಷಂ ಶೃಣು ತತ್ರಾಪಿ ಕಥ್ಯತೇ ಯೋ ಮಯಾಧುನಾ ।
ವಸಂತ ಪೂಜನಾತ್ಪೂರ್ವದಿವಸೇ ಗಣನಾಯಕಂ ॥ ೨೬ ॥

ಮಾಘ ಶುಕ್ಲ ಚತುರ್ಥ್ಯಾಂ ತು ಪೂಜಯೇದ್ವಿಘ್ನನಾಶನಂ ।
ಮಾಘಶುಕ್ಲಚತುರ್ಥ್ಯಾಂ ತು ನಕ್ತವ್ರತಪರಾಯಣಃ ॥ ೨೭ ॥

---

೨೩. ಈ ರೀತಿಯಾಗಿ ರಾಮನನ್ನು ಎರಡೂವರೆ ತಿಂಗಳವರೆಗೂ ಪೂಜಿಸಬೇಕು. ಈ ರೀತಿಯಾಗಿ ಮಾವಿನ ಮರದ ಕೆಳಗೆ ಸ್ವಾಮಿಯನ್ನು ಕರೆದುಕೊಂಡು ಹೋಗಿ ವಿಶೇಷವಾಗಿ ಪೂಜಿಸಬೇಕು.

೨೪-೨೫. ರಾಮನನ್ನೂ ಸೀತೆಯನ್ನೂ ಮನೆಯಿಂದ ಹೊರಕ್ಕೆ ಕರೆದುಕೊಂಡು ಹೋಗುವಾಗ ಅವರ ಕಣ್ಣಿನ ಕೆಳಗೆ ಬೆರಳಿನಿಂದ ಕಸ್ತೂರಿಯ ಚುಕ್ಕೆಗಳನ್ನು ಇಡಬೇಕು. ಇದು ಪರರ ಕೆಟ್ಟ ದೃಷ್ಟಿಗಳನ್ನು ನಾಶ ಮಾಡುತ್ತದೆ. ಎಲೈ ಶಿಷ್ಯನೇ! ಈ ರೀತಿಯಾಗಿ ಡೋಲು ಪೂಜೆಯನ್ನು ನಿನಗೆ ವಿವರಿಸಿ ಹೇಳಿದ್ದೇನೆ.

೨೬. ಇದರ ವಿಷಯದಲ್ಲಿಯೂ ಇನ್ನೂ ವಿಶೇಷವನ್ನು ಹೇಳುತ್ತೇನೆ ಕೇಳು. ಈ ಸೀತಾ ರಾಮರ ಉತ್ಸವವು ಸರಿಯಾಗಿ ನಡೆಯುವುದಕ್ಕೂ ಪೂರ್ತಿಯಾಗಿ ನಡೆಯುವುದಕ್ಕೋಸ್ಕರವಾಗಿಯೂ ಗಣಪತಿಯನ್ನು ಮೊದಲನೆಯದಿನ ಪೂಜೆ ಮಾಡಬೇಕು.

೨೭. ಮಾಘಶುದ್ಧ ಚತುರ್ಥಿಯ ದಿವಸ ಆ ಗಣನಾಥನನ್ನು ಮೊದಲ ಪೂಜೆ ಮಾಡಬೇಕು. ಅವನು ಆ ಪೂಜೆಗೆ ಬರತಕ್ಕ ವಿಘ್ನಗಳೆಲ್ಲವನ್ನೂ ನಾಶ ಮಾಡುತ್ತಾನೆ. ಆ ಮಾಘ ಶುದ್ಧ ಚತುರ್ಥಿಯ ದಿವಸ ನಕ್ತವ್ರತವನ್ನು ಆಚರಿಸಿ ಆ ಗಣಪನನ್ನು ಪೂಜಿಸಬೇಕು.

ಯೇ ಢುಂಢಿಂ ಪೂಜಯಿಷ್ಯಂತಿ ತೇರ್ಚ್ಯಾಸ್ಸ್ಯುರಸುರದ್ರುಹಾಂ ।
ಮಾಘಮಾಸೇ ಚತುರ್ಥ್ಯಾಂ ತು ತಸ್ಮಿನ್ಕಾಲೇ ಉಪೋಷಿತಃ ॥ ೨೮ ॥

ಅರ್ಚಯಿತ್ವಾ ವಿಘ್ನರಾಜಂ ಜಾಗರಂ ತತ್ರ ಕಾರಯೇತ್ ।
ಚತುರ್ಥೀ ಕುಂದನಾಮ್ನೀಯಂ ಕುಂದಪುಷ್ಪೈಃ ಪ್ರಪೂಜಯೇತ್ ॥ ೨೯ ॥

ಮಾಘಶುಕ್ಲಪಂಚಮೀ ಸಾ ಜ್ಞೇಯಾ ಶ್ರೀಪಂಚಮೀ ಶುಭಾ ।
ತಸ್ಯಾಂ ತಿಥೌ ರಮಾನಾಥಂ ರಾಮಚಂದ್ರಂ ಶ್ರಿಯಾರ್ಚಯೇತ್ ॥ ೩೦ ॥

ಮಾಘಶುಕ್ಲಚತುರ್ಥ್ಯಾಂ ತು ವರಮಾರಾಧ್ಯ ಚ ಶ್ರಿಯಃ ।
ಪಂಚಮ್ಯಾಂ ಕುಂದಕುಸುಮೈಃ ಪೂಜಾಂ ಕುರ್ಯಾತ್ಸಮೃದ್ಧಯೇ ॥ ೩೧ ॥

---

೨೮. ಆ ಸ್ವಾಮಿಯನ್ನು ಯಾರು ಪೂಜಿಸುವರೋ ಅವರು ಈ ಸೀತಾರಾಮರ ಪೂಜೆಗೆ ಅರ್ಹರಾಗುತ್ತಾರೆ. ಅಲ್ಲದೆ ದೇವತೆಗಳಿಗೇ ಪೂಜ್ಯರಾಗುತ್ತಾರೆ. ಮೊದಲು ಆ ಮಾಘ ಚತುರ್ಥಿಯ ದಿವಸ ಉಪವಾಸವಿರಬೇಕು.

೨೯. ಆಗ ಗಣನಾಥನನ್ನು ಪೂಜಿಸಿ ಆ ದಿನ ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು. ಆ ಮಾಘ ಶುದ್ಧ ಚತುರ್ಥಿಯ ದಿನ ಉಪವಾಸವಿದ್ದು ಗಣಪತಿಯನ್ನು ಕುಂದ (ಮೊಲ್ಲೆ) ಹೂವಿನಿಂದ ಪೂಜಿಸುವುದರಿಂದ ಆ ಚತುರ್ಥಿಗೆ ಕುಂದ ಚತುರ್ಥಿ ಎಂಬ ಹೆಸರು ಬಂದಿರುವುದು.

೩೦. ಅದರ ಮುಂದಿನದಾದ ಮಾಘ ಶುಕ್ಲ ಪಂಚಮಿಯು ಶ್ರೀ ಪಂಚಮೀ ಎಂದು ಪ್ರಸಿದ್ಧವಾಗಿದೆ. ಆ ದಿನ ರಾಮನನ್ನು ಸೀತೆಯೊಡನೆ ಪೂಜಿಸಬೇಕು.

೩೧. ಮಾಘ ಶುದ್ಧ ಚತುರ್ಥಿಯ ದಿವಸ ಲಕ್ಷ್ಮೀಪೂಜೆಯನ್ನು ಮಾಡಿ ಪಂಚಮಿಯದಿನ ಮಲ್ಲೆಯ ಹೂಗಳಿಂದ ಆ ಲಕ್ಷ್ಮಿಯನ್ನು ಮತ್ತೆ ಪೂಜಿಸಬೇಕು. ಹೀಗೆ ಪೂಜಿಸಿದರೆ ಸಂಪತ್ತು ಹೆಚ್ಚುವುದು.

ನೀತ್ವಾ ರಾಮಂ ಚೂತವೃಕ್ಷತಲೇ ದೋಲಕಸಂಸ್ಥಿತಂ ।
ಸೀತಾರಾಮಂ ಪೂಜಯೇಚ್ಚ ಗೇಹೇ ವಾಥ ಪ್ರಪೂಜಯೇತ್ ॥ ೩೨ ॥

ಪ್ರವೃತ್ತೇ ಮಧುಮಾಸೇ ತು ಪ್ರತಿಪದ್ಯುದಿತೇ ರವೌ ।
ಕೃತ್ವಾ ಚಾವಶ್ಯಕಾರ್ಯಾಣಿ ಸಂತರ್ಪ್ಯ ಪಿತೃದೇವತಾಃ ॥ ೩೩ ॥

ವಂದಯೇದ್ದೋಳಿಕಾಭೂಮಿಂ ಸರ್ವದುಃಖೋಪಶಾಂತಯೇ ।
ವಂದಿತಾಸಿ ಸುರೇಂದ್ರೇಣ ಬ್ರಹ್ಮಣಾ ಶಂಕರೇಣ ಚ ॥ ೩೪ ॥

---

೩೨. ಆ ಪಂಚಮಿಯ ದಿವಸ ಉದ್ಯಾನಕ್ಕೆ ಆ ಲಕ್ಷ್ಮೀರೂಪಳಾದ ಸೀತೆಯೊಡನೆ ರಾಮನನ್ನು ಕರೆದುಕೊಂಡು ಹೋಗಿ ಅಲ್ಲಿ ಮಾವಿನ ಮರದ ಕೆಳಗೆ ಉಯ್ಯಾಲೆಯನ್ನು ಕಟ್ಟಿ ಪೂಜಿಸಬೇಕು. ಅದು ಸಾಧ್ಯವಾಗದಿದ್ದರೆ ಮನೆಯಲ್ಲಿಯೇ ಆದರೂ ಪೂಜಿಸಬಹುದು.

೩೩. ಚೈತ್ರಮಾಸವು ಹುಟ್ಟಿದ ಕೂಡಲೇ ಪಾಡ್ಯದ ದಿನ ಸೂರ್ಯೋದಯದಲ್ಲಿ (ಬೆಳಗ್ಗೆ) ಶೌಚಾದಿಗಳನ್ನು ಮಾಡಿಕೊಂಡು ಸ್ನಾನಮಾಡಿ ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನು ಮಾಡಿ ಕೊಳ್ಳಬೇಕು. ಅನಂತರ ಪಿತೃದೇವತೆಗಳಿಗೆ ತರ್ಪಣದಿಂದ ತೃಪ್ತಿಯನ್ನು ಹೊಂದಿಸಬೇಕು. ಹಿಂದೆ ಹೇಳಿದ ರೀತಿಯಲ್ಲಿ ಹುಣ್ಣಿಮೆಯಿಂದ ಹುಣ್ಣಿಮೆಗೆ ತಿಂಗಳಿನ ಪ್ರಕಾರ ಫಾಲ್ಗುನ ಬಹುಳ ಪಾಡ್ಯಮಿಯು ಚೈತ್ರ ಶುದ್ಧ ಪಾಡ್ಯಮಿಯಾಗುತ್ತದೆ,

೩೪. ಅನಂತರ ನಾವು ಉಯ್ಯಾಲೆಯನ್ನು ಕಟ್ಟುವ ಜಾಗಕ್ಕೆ ಹೋಗಿ ಆ ಭೂಮಿಯನ್ನು ನಮಸ್ಕರಿಸಬೇಕು. ಇದರಿಂದ ದುಃಖವು ಶಾಂತವಾಗುತ್ತದೆ. ಎಲೈ ಭೂಮಿಯೇ ! ನೀನು ದೇವೇಂದ್ರನಿಂದ ನಮಸ್ಕೃತಳಾಗಿದ್ದೀಯೆ ಬ್ರಹ್ಮನೂ ಶಂಕರನೂ, ನಿನ್ನನ್ನು ವಂದಿಸಿರುವರು. ಆದ್ದರಿಂದ ನೀನು ನನ್ನ ಈ ನಮಸ್ಕಾರವನ್ನು ಸ್ವೀಕರಿಸಿ ನನಗೆ ಐಶ್ವರ್ಯವನ್ನು ಕೊಡತಕ್ಕವಳಾಗು. ಈ ಮಂತ್ರವನ್ನು ಹೇಳಿ ನಮಸ್ಕರಿಸಬೇಕು.

ಅತಸ್ತ್ವಂ ಪಾಹಿ ಮಾಂ ದೇವಿ ಭೂತೇ ಭೂತಿ ಪ್ರದಾ ಭವ।
ಚೈತ್ರೇ ಮಾಸಿ ಮಹಾಪುಣ್ಯೇ ಪುಣ್ಯೇ ತು ಪ್ರತಿಪದ್ದಿನೇ ॥ ೩೫ ॥

ಯಸ್ತತ್ರ ಶ್ವಪಚಂ ಸ್ಪೃಷ್ಟ್ವಾ ಸ್ನಾನಂ ಕುರ್ಯಾನ್ನರೋತ್ತಮಃ।
ನ ತಸ್ಯ ದುರಿತಂ ಕಿಂಚಿನ್ನಾಧಯೋ ವ್ಯಾಧಯೋ ನೃಪ ॥ ೩೬ ॥

ವೃತ್ತೇ ತುಷಾರಸಮಯೇ ಸಿತಪಂಚದಶ್ಯಾಂ
ಪ್ರಾತರ್ವಸಂತಸಮಯೇ ಸಮುಪಸ್ಥಿತೇ ಚ।
ಸಂಪ್ರಾಶ್ಯ ಚೂತಕುಸುಮಂ ಸಹ ಚಂದನೇನ
ಸತ್ಯಂ ಹಿ ವಿಪ್ರ ಪುರುಷಃ ಪರಮಂ ಸುಖೀಸ್ಯಾತ್ ॥ ೩೭ ॥

ಚೂತಮಗ್ರ್ಯಂ ವಸಂತಸ್ಯ ಮಾಕಂದಕುಸುಮಂ ತವ।
ಸಚಂದನಂ ಪಿಬಾಮ್ಯದ್ಯ ಸರ್ವಕಾಮಾರ್ಥಸಿದ್ಧಯೇ ॥ ೩೮ ॥

೩೫-೩೬. ಚೈತ್ರಮಾಸವೇ ಮಹಾ ಪುಣ್ಯಕರವಾದುದು. ಅದರಲ್ಲಿಯೂ ಈ ಚೈತ್ರಮಾಸದ ಪಾಡ್ಯವು ಬಹು ಪುಣ್ಯಪ್ರದವಾದುದು. ಶ್ವಪಚನನ್ನು ಮುಟ್ಟಿದರೂ ಕೂಡ ಈ ದಿನದಲ್ಲಿ ಸ್ನಾನಮಾಡಿದರೆ ಅವನು ಆ ಪಾಪದಿಂದ ಮುಕ್ತನಾಗುವನು. ಮತ್ತು ದೇಹಕ್ಕೆ ಬರುವ ವ್ಯಾಧಿಗಳೂ ಮನಸ್ಸಿಗೆ ಬರುವ ವ್ಯಥೆಗಳೂ ಬರುವುದೇ ಇಲ್ಲ.

೩೭. ಹಿಮಕಾಲವು ಕಳೆದು ವಸಂತಕಾಲವು ಬಂದಮೇಲೆ ಹದಿನೈದು ದಿನಗಳವರೆಗೆ ಬೆಳಗ್ಗೆ ಮಾವಿನ ಹೂವಿನ್ನು ಚಂದನದೊಡನೆ ಕುಡಿದರೆ ಅವನು ವರ್ಷದವರೆವಿಗೂ ಸುಖಿಯಾಗುವನು. ಸತ್ಯವು.

೩೮-೩೯. ಎಲೈ ಮಾವಿನ ಮರವೇ! ವಸಂತಋತುವಿನಲ್ಲಿ ನಿನ್ನಲ್ಲಿ ಮೊದಲು ಕಾಣಿಸಿಕೊಳ್ಳುವ ಚಿಗುರಿನ ಮುಂದಿರುವ ಹೂವನ್ನು ಚಂದನ ರಸದೊಡನೆ ಕುಡಿಯುತ್ತೇನೆ. ಇದರಿಂದ ಎಲ್ಲಾ ಕಾಮಗಳೂ, ಇಷ್ಟಾರ್ಥಗಳೂ

ಪಂಚಮ್ಯಾಂ ಮಾಘಮಾಸೇಪಿ ಚೂತಪುಷ್ಪಂ ಸಚಂದನಂ।
ಪ್ರಾಶನೀಯಂ ನರೈರ್ಭಕ್ತ್ಯಾ ಕಲಕಂಠೋ ಭವಿಷ್ಯತಿ ॥ ೩೯ ॥

ಚೂತಪುಷ್ಪಪ್ರಾಶನೇನ ಕೋಕಿಲಾಸ್ವರವತ್ಸ್ವರಃ।
ಭವಿಷ್ಯತಿ ಮಾನವಾನಾಂ ಕಲಕಂಠೋ ಮನೋರಮಃ ॥ ೪೦ ॥

ಸೀತಾರಾಮಂ ಚೂತಪುಷ್ಪೈಸ್ತಥಾ ಕೋಮಲಪಲ್ಲವೈಃ।
ಪೂಜಯೇತ್ಪ್ರತ್ಯಹಂ ಭಕ್ತ್ಯಾ ದೋಳಕಸ್ಥಂ ಮಹೋತ್ಸವೈಃ ॥ ೪೧ ॥

ಚೈತ್ರಕೃಷ್ಣಪ್ರತಿಪದಿ ಚೂತಪುಷ್ಪಂ ಸಚಂದನಂ।
ಪೀತ್ವಾ ಮಹೋತ್ಸವೇನೈವ ಸೀತಾರಾಮಂ ಪ್ರಪೂಜಯೇತ್ ॥ ೪೨ ॥

ಏವಂ ತಚ್ಚ ದಿನಂ ನೀತ್ವಾ ತತಶ್ಚಾಗ್ರೇ ದಿನತ್ರಯಂ।
ನಾನೋತ್ಸವಸುಗೀತಾದ್ಯೈರ್ನಿತ್ವಾ ಚೈವ ತತಃ ಪರಂ ॥ ೪೩ ॥

ಸಿದ್ಧಿಸಲಿ. ಈ ರೀತಿಯಾಗಿ ಮಂತ್ರವನ್ನು ಹೇಳಿಕೊಂಡು ಮಾಘಮಾಸದ ಪಂಚಮಿಯ ದಿವಸ ಮಾವಿನ ಹೂವನ್ನೂ, ಚಂದನವನ್ನೂ ಭಕ್ತಿಯಿಂದ ನರರು ತಿನ್ನಬೇಕು. ಇದರಿಂದ ಧ್ವನಿಯು ಕೋಗಿಲೆಯ ಕಂಠದಂತೆ ಆಗುತ್ತವೆ.

೪೦. ಮಾವಿನ ಹೂವನ್ನು ತಿನ್ನುವುದರಿಂದ ಕೋಗಿಲೆಯ ಸ್ವರದಂತೆ ಸ್ವರವು ಮನುಷ್ಯರಿಗೆ ಉಂಟಾಗುತ್ತದೆ. ಇದರಿಂದ ಸ್ವರವು ಮನೋಹರವಾಗಿ ಮೃದುಮಧುರವಾಗಿರುತ್ತದೆ.

೪೧. ಆಗ ಸೀತಾರಾಮರನ್ನು ಮಾವಿನ ಹೂವುಗಳಿಂದಲೂ, ಅಂತೆಯೇ ಮೃದುವಾದ ಚಿಗುರುಗಳಿಂದಲೂ ಉಯ್ಯಾಲೆಯಲ್ಲಿ ಕೂರಿಸಿ ಭಕ್ತಿಯಿಂದ ಪೂಜಿಸಬೇಕು. ಅಂತೆಯೇ ಮಹೋತ್ಸವವನ್ನು ಆಚರಿಸಬೇಕು.

೪೨. ಚೈತ್ರ ಬಹುಳ ಪ್ರತಿಪತ್ತಿನ ದಿವಸ ಮಾವಿನ ಹೂವನ್ನು ಚಂದನದಲ್ಲಿ ಸೇರಿಸಿ ಕುಡಿಯಬೇಕು. ಕುಡಿದು ಸೀತಾರಾಮರನ್ನು ಪೂಜಿಸಬೇಕು.

೪೩. ಈ ರೀತಿಯಾಗಿ ಉತ್ಸವದಿಂದ ಆ ಸ್ವಾಮಿಯನ್ನು ಪೂಜಿಸುತ್ತ ಆ ದಿನವನ್ನು ಕಳೆಯಬೇಕು. ಅನಂತರ ಮುಂದಿನ ಮೂರುದಿನಗಳೂ ಅನೇಕ ಉತ್ಸವಗಳಿಂದ ಪೂಜೆಯನ್ನು ಮಾಡಬೇಕು.

ಪಂಚಮ್ಯಾಂ ಚೈತ್ರಕೃಷ್ಣೇಽಪಿ ಸೌಭಾಗ್ಯದ್ರವ್ಯಮಂಗಳೈಃ ।
ಸ್ನಾತ್ವಾ ಕೇಸರಪಾಲಾಶಕೃತರಾಗೈಶ್ಶುಭಾವಹೈಃ ॥ ೪೪ ॥

ಚಿತ್ರಿತಾನಿ ಹಿ ವಾಸಾಂಸಿ ಪರಿಧಾಯ ನರೋತ್ತಮೈಃ ।
ನಾನಾಸುಗಂಧತೈಲಾದ್ಯೈರಭ್ಯಂಗಂ ತೂರ್ಯನಿಸ್ವನೈಃ ॥ ೪೫ ॥

ಜಾನಕ್ಯೈ ರಾಮಚಂದ್ರಾಯ ಕೃತ್ವಾ ತೀರ್ಥೋದಕೈಶ್ಶುಭೈಃ ।
ಕೇಶರಾದಿಭಿ ರಾಗೈಶ್ಚ ವಾಸಾಂಸಿ ಚಿತ್ರಿತಾನಿ ಹಿ ॥ ೪೬ ॥

ದತ್ವಾ ರಾಮಾಯ ಸೀತಾಯೈ ತತೋ ಭಕ್ತ್ಯಾ ಪ್ರಪೂಜಯೇತ್ ।
ವಸಂತೋದ್ಭವಪುಷ್ಪೈಶ್ಚ ನಾನಾಮಂಗಳಪೂರ್ವಕಂ ॥ ೪೭ ॥

ನಾನಾದಾನಾನಿ ದೇಯಾನಿ ನಿಜಮಾಂಗಳ್ಯಹೇತವೇ ।
ನಾನಾಸುಗಂಧದ್ರವ್ಯಾಣಿ ಗೃಹೀತ್ವಾ ಚ ಪರಸ್ಪರಂ ॥ ೪೮ ॥

---

೪೪ ಅನಂತರ ಚೈತ್ರ ಬಹುಳ ಪಂಚಮಿಯ ದಿನ ಸೌಭಾಗ್ಯಕರವಾದ ಮಂಗಳ ದ್ರವ್ಯಗಳಿಂದ ಸ್ನಾನಮಾಡಿ ಕೇಸರಿಬಣ್ಣ ಮುತ್ತುಗದ ರಂಗು ಇವುಗಳಿಂದ ಬಣ್ಣಬಣ್ಣವಾಗಿ ಮಾಡಲ್ಪಟ್ಟ ಬಟ್ಟೆಗಳನ್ನು ಧರಿಸಬೇಕು.

೪೫-೪೬ ಅನಂತರ ವಾದ್ಯ ಧ್ವನಿಗಳೊಡನೆ ರಾಮಚಂದ್ರನಿಗೆ ಗಂಧತೈಲವನ್ನು ಪೂಸಿ ಅಭ್ಯಂಜನವನ್ನು ಮಾಡಿಸಬೇಕು. ಅದಕ್ಕೋಸ್ಕರ ಜಾನಕಿಯನ್ನೂ, ರಾಮಚಂದ್ರನನ್ನೂ ಉತ್ತಮವಾದ ತೀರ್ಥಗಳಿಗೆ ಕರೆದುಕೊಂಡು ಹೋಗಬೇಕು. ಅಲ್ಲಿ ಸ್ನಾನಮಾಡಿಸಿ ಕೇಸರವೇ ಮುಂತಾದ ಬಣ್ಣಗಳಿಂದ ಚಿತ್ರಿತವಾದ ಬಟ್ಟೆಯನ್ನು ಆ ಸೀತಾರಾಮರಿಗೆ ಉಡಿಸಬೇಕು.

೪೭. ಆ ಚಿತ್ರವಾದ ಬಟ್ಟೆಗಳನ್ನು ಉಡಿಸಿದಮೇಲೆ ಭಕ್ತಿಯಿಂದ ಅವರನ್ನು ಪೂಜಿಸಬೇಕು. ಆಗ ವಸಂತಋತುವಿನಲ್ಲಿ ಸಿಕ್ಕುವ ಹೂವುಗಳನ್ನು ಸಾಧ್ಯವಾದಮಟ್ಟಿಗೂ ತರಬೇಕು. ಪೂಜಿಸುವಾಗ ನೃತ್ಯವಾದ್ಯಗಳು ಆಗುತ್ತಿರಬೇಕು.

೪೮-೪೯. ಆಗ ಅನೇಕವಿಧವಾದ ದಾನಗಳನ್ನು ಮಾಡಬೇಕು ಅದರಿಂದ ಮಾಂಗಲ್ಯವು ವೃದ್ಧಿಯಾಗುತ್ತದೆ ಅನಂತರ ಸುಗಂಧ ದ್ರವ್ಯಗಳನ್ನು

ಏಕೈಕೋಪರಿ ಸಿಂಚೇಚ್ಚ ಮಹಾಮಾಂಗಲ್ಯದಾಯಕಂ ।
ಮಿಷ್ಟಾನ್ನೈರ್ಭೋಜಯೇದ್ವಿಪ್ರಾನ್ ಸ್ವಯಂ ಚಾಪಿ ಸುಹೃಜ್ಜನೈಃ ॥

ಭೋಕ್ತವ್ಯಂ ತು ವಸಂತರ್ತೌ ಪಂಚಮ್ಯಾಂ ಮಾನವೈಸ್ಸುಖಂ ।
ವಸಂತಪಂಚಮೀ ನಾಮ್ನಾ ಮಹಾಪುಣ್ಯಾತ್ಮಿಕಾ ಸಿತಾ ॥ ೫೦ ॥

ಪಕ್ಷೇ ಪಕ್ಷೇ ತು ಪಂಚಮ್ಯಾಮಾರಭ್ಯ ಮಾಘಪಂಚಮೀಂ ।
ಏವಂ ರಾಮಂ ಪೂಜಯೇಚ್ಚ ಯಾವದ್ವೈಶಾಖಪಂಚಮೀ ॥ ೫೧ ॥

ವಿಶೇಷೇಣ ನವಮ್ಯಾಂ ಹಿ ಪಕ್ಷೇ ಪಕ್ಷೇ ಪ್ರಪೂಜಯೇತ್ ।
ಅಥವಾ ಮಾಘಶುಕ್ಲಾಯಾಂ ಕೃಷ್ಣಾಯಾಂ ಚೈತ್ರಮಾಸಿ ವೈ ॥ ೫೨ ॥

ತೆಗೆದುಕೊಂಡು ಒಬ್ಬರಮೇಲೊಬ್ಬರು ಚುಮುಕಿಸಿ ಕೊಳ್ಳಬೇಕು. ಅದು ಬಹು ಮಂಗಳವನ್ನು ಉಂಟು ಮಾಡುತ್ತದೆ. ಅನಂತರ ಬ್ರಾಹ್ಮಣರಿಗೆ ಮೃಷ್ಟಾನ್ನ ಭೋಜನ ಮಾಡಿಸಬೇಕು. ಅನಂತರ ತಾನೂ ಕೂಡ ಮಿತ್ರರೊಡನೆಯೂ ಬಂಧುಗಳೊಡನೆಯೂ ಭೋಜನವನ್ನು ಮಾಡಬೇಕು.

೫೦. ಇವಿಷ್ಟು ವಸಂತಋತುವಿನ ಪಂಚಮಿಯಲ್ಲಿ ಮಾಡುವ ಉತ್ಸವಗಳು. ಈ ಪಂಚಮಿಗೆ ವಸಂತ ಶುಕ್ಲಪಂಚಮೀ ಎಂದು ಹೆಸರು. ಇದು ಬಹಳ ಪುಣ್ಯಕರವಾದುದು.

೫೧. ಮಾಘ ಪಂಚಮಿಯನ್ನು ಮೊದಲು ಮಾಡಿಕೊಂಡು ಪ್ರತಿಪಕ್ಷದ ಪಂಚಮಿಯ ದಿನವೂ ಈ ರೀತಿಯಾಗಿ ರಾಮನನ್ನು ವೈಶಾಖ ಪಂಚಮಿಯ ವರೆವಿಗೂ ಪೂಜಿಸಬೇಕು.

೫೨-೫೩. ನವಮಿಯ ದಿವಸ ವಿಶೇಷ ಪೂಜೆಯನ್ನು ಪಕ್ಷ ಪಕ್ಷಗಳಲ್ಲಿಯೂ ಮಾಡಬೇಕು ಅದಿಲ್ಲದಿದ್ದರೆ ಮಾಘಶುಕ್ಲದ ಅಥವಾ ಚೈತ್ರಕೃಷ್ಣದ ಅಥವಾ ವೈಶಾಖ ಕೃಷ್ಣದ ಪಂಚಮಿಯದಿನ ಸೀತಾರಾಮರಿಗೆ ವಿಶೇಷ

ಕೃಷ್ಣಾಯಾಂ ಮಾಧವೇ ಚಾಪಿ ಪಂಚಮ್ಯಾಂ ಪೂಜಯೇನ್ನರೈಃ ।
ಮಹೋತ್ಸಾಹೇನ ಶ್ರೀರಾಮೋ ದೋಲಕಸ್ಥೋಽತಿಯತ್ನತಃ ॥ ೫೩ ॥

ತತಶ್ಚೈತ್ರಶುಕ್ಲಪಕ್ಷೇ ಪ್ರತಿಪದಿ ನರೋತ್ತಮೈಃ ।
ತೈಲಾಭ್ಯಂಗಂ ಸ್ವಯಂ ಕೃತ್ವಾ ರಾಮಾಯಾಭ್ಯಂಗಮಾಚರೇತ್ ॥ ೫೪ ॥

ಪೂಜಯೇನ್ನವರಾತ್ರಂ ತಂ ಯಾವತ್ಸಾ ನವಮೀತಿಥಿಃ ।
ವತ್ಸರಾದೌ ವಸಂತಾದೌ ಬಲಿರಾಜ್ಯೇ ತಥೈವ ಚ ॥ ೫೫ ॥

ತೈಲಾಭ್ಯಂಗ ಮಕುರ್ವಾಣೋ ನರಕಂ ಪ್ರತಿಪದ್ಯತೇ ।
ಅತೀತೇ ಫಾಲ್ಗುನೇ ಮಾಸಿ ಪ್ರಾಪ್ತೇ ಚೈತ್ರೇ ಮಹೋತ್ಸವೇ ॥ ೫೬ ॥

ಪುಣ್ಯೇಽಹ್ನಿ ವಿಪ್ರಕಥಿತೇ ಪ್ರಪಾದಾನಂ ಸಮಾರಭೇತ್ ।
ಪ್ರಪಾಮುತ್ಸರ್ಜಯೇದ್ವಿಪ್ರಾನ್ ಮಂತ್ರೇಣಾನೇನ ಮಾನವಃ ॥ ೫೭ ॥

ಪೂಜೆಯನ್ನು ಮಾಡಬೇಕು. ಆ ದಿನಗಳಲ್ಲಿ ಮಹೋತ್ಸವವನ್ನು ಮಾಡುತ್ತ ಡೋಲೋತ್ಸವವನ್ನು ಮಾಡಬೇಕು. ಇದು ಉತ್ತಮವಾದುದು.

೫೪. ಚೈತ್ರಮಾಸದ ಶುಕ್ಲ ಪಕ್ಷದ ಪ್ರಥಮೆಯದಿನ ವ್ರತ ಮಾಡ ತಕ್ಕವರು ಅಭ್ಯಂಜನವನ್ನು ಮಾಡಿಕೊಂಡು ರಾಮನಿಗೆ ಅಭ್ಯಂಜನವನ್ನು ಮಾಡಿಸಬೇಕು.

೫೫. ಆ ಪಾಡ್ಯದಿಂದ ಮೊದಲು ಮಾಡಿಕೊಂಡು ಆ ಶುದ್ಧ ನವಮಿಯ ವರೆಗೂ ಒಂಭತ್ತು ದಿನವೂ ಪೂಜಿಸಬೇಕು. ವರ್ಷದ ಆದಿ, ವಸಂತದ ಆದಿ, ಬಲಿರಾಜ್ಯದ ಆದಿ (ಬಲಿಪಾಡ್ಯಮಿ) ಇವುಗಳಲ್ಲಿ ತೈಲಾಭ್ಯಂಜನಗಳನ್ನು ಮಾಡಬೇಕು.

೫೬-೫೭. ಆ ದಿನಗಳಲ್ಲಿ ತೈಲಾಭ್ಯಂಗನವನ್ನು ಮಾಡದವನು ನರಕವನ್ನು ಹೊಂದುತ್ತಾನೆ. ಫಾಲ್ಗುನ ಮಾಸವು ಕಳೆದು ಚೈತ್ರಮಾಸವು ಪ್ರಾಪ್ತನಾದಾಗ ಜೋಯಿಸರು ಹೇಳುವ ಪುಣ್ಯ ದಿನದಲ್ಲಿ ಅರವಟ್ಟಿಗೆಯಲ್ಲಿ ಪಾನೀಯ ದಾನವನ್ನು ಮಾಡಬೇಕು. ಬ್ರಾಹ್ಮಣರನ್ನು ಆ ಅರವಟ್ಟಿಗೆಗೆ ಕರೆದು ಅವರಿಗೆ ಪಾನೀಯಗಳನ್ನು ಕೊಟ್ಟು ಮುಂದೆ ಹೇಳುವ ಮಂತ್ರವನ್ನು ಹೇಳಿ ಕಳುಹಿಸಬೇಕು.

ಅರಣ್ಯೇ ನಿರ್ಜಲೇ ದೇಶೇ ಪಥಿ ಗ್ರಾಮೇಥ ವಾ ಶುಭಾ ।
ಪ್ರಪೇಯಂ ಸರ್ವಸಾಮಾನ್ಯಾತ್ ಭೂತೇಭ್ಯಃ ಪ್ರತಿಪಾದಿತಾ ॥ ೫೮ ॥

ಅಸ್ಯಾಃ ಪ್ರದಾನಾತ್ಪಿತರಸ್ತೃಪ್ಯಂತಿ ಹಿ ಪಿತಾಮಹಾಃ ।
ಅನಿವಾರ್ಯ ತತೋ ದೇಯಂ ಜಲಂ ಮಾಸಚತುಷ್ಟಯಂ ॥ ೫೯ ॥

ದೇವಾಲಯೇಷು ಲಿಂಗಾನಾಂ ದೇಯಾಸ್ತೋಯಗಲಂತಿಕಾಃ
ಪ್ರಪಾಂ ದಾತುಮಶಕ್ತೇನ ವಿಶೇಷಾದ್ಧರ್ಮಮೀಪ್ಸುನಾ ॥ ೬೦ ॥

ಪ್ರತ್ಯಹಂ ಧರ್ಮಘಟಕೋ ವಸ್ತ್ರಸಂವೇಷ್ಟಿತಾನನಃ ।
ಬ್ರಾಹ್ಮಣಸ್ಯ ಗೃಹೇ ದೇಯಶ್ಶೀತಾಮಲಜಲಶ್ಶುಚಿಃ ॥ ೬೧ ॥

ತಾಂಬೂಲಫಲದಾನ್ಯೈಶ್ಚ ದಕ್ಷಿಣಾಭಿಸ್ಸಮನ್ವಿತಃ ।
ಏಷ ಧರ್ಮಘಟೋ ದತ್ತೋ ಬ್ರಹ್ಮವಿಷ್ಣುಶಿವಾತ್ಮಕಃ ॥ ೬೨ ॥

೫೮-೫೯. ಕಾಡಿನಲ್ಲಿ ನೀರಿಲ್ಲದ ಜಾಗದಲ್ಲಿಯೂ ದಾರಿಯಲ್ಲಿಯೂ, ಅಥವಾ ಗ್ರಾಮದಲ್ಲಿಯೂ, ಮಂಗಳಕರವಾದ ಈ ಅರವಟ್ಟಿಗೆಯನ್ನು ಭೇಧವಿಲ್ಲದೆ ಎಲ್ಲರಿಗೂ ಕೊಡುತ್ತಿರುವೆನು. ಇದರ ದಾನದಿಂದ ಪಿತೃಗಳೂ ಮತ್ತು ಪಿತಾಮಹರೂ ತೃಪ್ತಿಯನ್ನು ಹೊಂದಲಿ, ಎಂದು ಹೇಳಬೇಕು. ಅಂದಿನಿಂದ ಮೊದಲುಗೊಂಡು ನಾಲ್ಕು ತಿಂಗಳವರೆಗೂ ಬಿಡದೆ ಪಾನೀಯಗಳನ್ನು ಅರವಟ್ಟಿಗೆಯಲ್ಲಿ ಕೊಡುತ್ತಿರಬೇಕು.

೬೦. ಅರವಟ್ಟಿಗೆಯನ್ನು ಇಡಲು ಸಾಮರ್ಥ್ಯವಿಲ್ಲದವನು ವಿಶೇಷ ರೀತಿಯಿಂದ ಧರ್ಮವನ್ನು ಅಪೇಕ್ಷಿಸುವವನೂ, ಕೂಡ ಈಶ್ವರನ ಲಿಂಗಕ್ಕೆ ಅಭಿಷೇಕವನ್ನು ಮಾಡಲು ದೇವಸ್ಥಾನಗಳಿಗೆ ಉದಕ ಕುಂಭವನ್ನು ಕೊಡಬೇಕು.

೬೧. ಅಥವಾ ಪ್ರತಿನಿತ್ಯವೂ ನೀರಿನಿಂದ ತುಂಬಿದ ಧರ್ಮಘಟವನ್ನು ಶುದ್ಧವಾಗಿ ತಂದು ಅದರ ಬಾಯಿಗೆ ಬಟ್ಟೆಯನ್ನು ಕಟ್ಟಿ ಬ್ರಾಹ್ಮಣನಮನೆಗೆ ಕೊಡಬೇಕು.

೬೨-೬೩. ಜೊತೆಯಲ್ಲಿ ತಾಂಬೂಲ, ಫಲ, ಧಾನ್ಯ, ದಕ್ಷಿಣೆಗಳನ್ನು ಕೊಡಬೇಕು. ಬ್ರಹ್ಮ ವಿಷ್ಣು ಶಿವಾತ್ಮಕವಾದ ಈ ಧರ್ಮಘಟವನ್ನು

ಅಸ್ಯ ಪ್ರದಾನಾತ್ಸಕಲಾಸ್ಸರ್ವೇ ಸಂತು ಮನೋರಥಾಃ ।
ಅನೇನ ವಿಧಿನಾ ಯಸ್ತು ಧರ್ಮಕುಂಭಂ ಪ್ರಯಚ್ಛತಿ ॥ ೬೩ ॥

ಪ್ರಪಾದಾನಫಲಂ ಸೋಽಪಿ ಪ್ರಾಪ್ನೋತೀಹ ನ ಸಂಶಯಃ ।
ತೃತೀಯಾಯಾಂ ಚೈತ್ರಶುಕ್ಲೇ ಸೀತಾರಾಮೌ ಪ್ರಪೂಜಯೇತ್ ॥ ೬೪ ॥

ಕುಂಕುಮಾಗರುಕರ್ಪೂರ ಮಣಿವಸ್ತ್ರ ಸುಗಂಧಕೈಃ ।
ಸ್ರಗ್ಗಂಧಧೂಪದೀಪೈಶ್ಚ ದಮನೇನ ವಿಶೇಷತಃ ॥ ೬೫ ॥

ಆಂದೋಳಯೇತ್ತತಸ್ಸೀತಾರಾಮೌ ಚ ದೋಳಕಸ್ಥಿತೌ ।
ವಸಂತಮಾಸಮಾಸಾದ್ಯ ತೃತೀಯಾಯಾಂ ದ್ವಿಜೋತ್ತಮ ॥ ೬೬ ॥

ಸೌಭಾಗ್ಯಾಯ ಸದಾ ಸ್ತ್ರೀಭಿಃ ಸೌಭಾಗ್ಯಶಯನಂ ಶುಭಂ ।
ಕಾರ್ಯಂ ಮಹೋತ್ಸವೇನೈವ ಸುಖಂ ಪುತ್ರಸುಖೇಪ್ಸುಭಿಃ ॥ ೬೭ ॥

ದಾನಮಾಡಿದ್ದೇನೆ ಈ ದಾನದಿಂದ ನನ್ನ ಎಲ್ಲಾ ಮನೋರಥಗಳೂ ಫಲಿಸಲಿ ಈ ರೀತಿಯ ವಿಧಿಯಿಂದ ಈ ಧರ್ಮಘಟವನ್ನು ದಾನ ಮಾಡಬೇಕು.

೬೪. ಹೀಗೆ ದಾನಮಾಡಿದವನಿಗೂ ಕೂಡ ಅರವಟ್ಟಿಗೆಯನ್ನಿಟ್ಟು ದಾನಮಾಡಿದ ಫಲವು ಬರುತ್ತದೆ. ಸಂಶಯವಿಲ್ಲ. ಚೈತ್ರ ಶುಕ್ಲ ತೃತೀಯೆಯ ದಿವಸ ಸೀತಾರಾಮರನ್ನು ಪೂಜಿಸಬೇಕು.

೬೫. ಕುಂಕುಮ, ಅಗುರು, ಕರ್ಪೂರ, ಮಣಿ, ವಸ್ತ್ರ, ಸುಗಂಧ, ಹೂವು, ಗಂಧ, ಧೂಪ, ದೀಪ, ಇವುಗಳಿಂದ ಪೂಜಿಸಬೇಕು. ದವನದಿಂದ ಪೂಜಿಸುವುದು ಉತ್ತಮವು. ಮತ್ತು ಪುಣ್ಯಕರವು.

೬೬-೬೭. ಅನಂತರ ಆ ಸೀತಾರಾಮರನ್ನು ಉಯ್ಯಾಲೆಯಲ್ಲಿಟ್ಟು ತೂಗಬೇಕು. ಚೈತ್ರಮಾಸದ ತದಿಗೆಯದಿವಸ ಹೆಂಗಸರು ಸೌಭಾಗ್ಯಶಯನ ವೆಂಬ ವ್ರತವನ್ನು ಮಾಡಬೇಕು. ಅದು ಹೆಂಗಸರಿಗೆ ಸೌಭಾಗ್ಯವನ್ನು ಕೊಡುತ್ತದೆ. ಪುತ್ರರಾಗಬೇಕೆಂದೂ, ಪುತ್ರಸುಖವು ಯಾವಾಗಲೂ ಇರಬೇಕೆಂದೂ ಎನ್ನುವವರು ಈ ವ್ರತವನ್ನು ಮಹೋತ್ಸವದಿಂದ ಆಚರಿಸಬೇಕು.

ವಿಶೇಷಂ ಚ ಪ್ರವಕ್ಷ್ಯಾಮಿ ತೃತೀಯಾಯಾಂ ದ್ವಿಜೋತ್ತಮ।
ತೃತೀಯಾಯಾಂ ತು ನಾರೀಷು ಶುಕ್ಲಪಕ್ಷೇ ಮಧೌ ಶುಭೇ ॥ ೬೮ ॥

ಸ್ನಾತ್ವಾ ಮೃಣ್ಮಯದುರ್ಗಂ ಹಿ ಕಾರ್ಯಂ ಚಿತ್ರವಿಚಿತ್ರಿತಂ।
ತತ್ರಾಷ್ಟಾದಶ ಧಾನ್ಯಾನಿ ವಾಪಯೇತ್ತದನಂತರಂ ॥ ೬೯ ॥

ಪುಷ್ಪವೃಕ್ಷಾಂಚ್ಛುಭಾಂಸ್ತತ್ರ ಪಾಪಯೇತ್ಸರ್ವತಸ್ತತಃ।
ಜಲಯಂತ್ರಾಣಿ ಕಾರ್ಯಾಣಿ ಚಿತ್ರಾಣ್ಯಪಿ ವಿಲೇಖಯೇತ್ ॥ ೭೦ ॥

ತುರ್ಯದ್ವಾರಾಣಿ ಕಾರ್ಯಾಣಿ ಪೂರ್ವವನ್ಮಂಡಪಾದಿಕಂ।
ಯಥಾ ಶ್ರೀರಾಮಪೂಜಾಯಾಮುಕ್ತಂ ತದ್ವತ್ಪ್ರಕಾರಯೇತ್ ॥ ೭೧ ॥

ದುರ್ಗೋಪರಿ ಘಟಂ ಸ್ಥಾಪ್ಯ ಸಜಲಂ ಪುಷ್ಪಗುಂಭಿತಂ।
ದೋಳಕಂ ಚ ತತೋ ನ್ಯಸ್ಯ ಘಟಪೃಷ್ಠೇ ಮಹಚ್ಛುಭಂ ॥ ೭೨ ॥

---

೬೮. ಎಲೈ ಶಿಷ್ಯನೇ! ಆ ತೃತೀಯೆಯ ದಿವಸ ಮಾಡಬೇಕಾದ ವಿಶೇಷ ವಿಷಯಗಳನ್ನು ಹೇಳುತ್ತೇನೆ. ಚೈತ್ರ ಶುಕ್ಲ ತದಿಗೆಯ ದಿವಸ ನಾರಿಯರು ಒಳ್ಳೆಯ ನೀರಿನಲ್ಲಿ ಸ್ನಾನಮಾಡಬೇಕು-

೬೯. ಅನಂತರ ಒಂದು ಚಿಕ್ಕದಾದ ಕೋಟೆಯನ್ನು ಮಣ್ಣಿನಲ್ಲಿ ರಚಿಸಬೇಕು. ಅದನ್ನು ಸಾಧ್ಯವಾದಷ್ಟು ಚಿತ್ರವಿಚಿತ್ರವಾಗಿ ಮಾಡಬೇಕು. ಅದರೊಳಕ್ಕೆ ಹದಿನೆಂಟು ಬಗೆಯ ಧಾನ್ಯಗಳನ್ನು ಬಿತ್ತಬೇಕು.

೭೦. ಅದರಸುತ್ತಲೂ ಒಳ್ಳೆಯ ಹೂವಿನ ಗಿಡಗಳು ಏಳುವಂತೆ ಹೂವಿನ ಬಿತ್ತಗಳನ್ನು ಬಿತ್ತಬೇಕು. ಅದಕ್ಕೆ ನೀರು ಹೋಗುವಂತೆ ಜಲಯಂತ್ರಗಳನ್ನು ಮಾಡಬೇಕು. ಅದರ ಸುತ್ತಲೂ ಚಿತ್ರಗಳನ್ನು ಬರೆಯಬೇಕು.

೭೧.-೭೨- ಶ್ರೀರಾಮಪೂಜೆಯಲ್ಲಿ ಹೇಳಿದಂತೆ ಮಂಟಪವನ್ನು ರಚಿಸಿ ಅದಕ್ಕೆ ನಾಲ್ಕು ಬಾಗಿಲುಗಳನ್ನು ಮಾಡಿರಬೇಕು. ಆ ದುರ್ಗದಮೇಲೆ ಒಂದು ನೀರುತುಂಬಿದ ಕಲಶವನ್ನಿಡಬೇಕು. ಅದಕ್ಕೆ ಹೂವನ್ನು ಸುತ್ತಿ

ಕಾಂಚನೀಂ ರಾಜತೀಂ ಮೂರ್ತಿಂ ಸೀತಾಯಾಃ ಪರಿಕಲ್ಪ್ಯ ಚ ।
ರಾಮಸ್ಯಾಪಿ ಶುಭಾಂ ಮೂರ್ತಿಂ ಕೃತ್ವಾ ತೌ ಪೂಜಯೇತ್ತತಃ ॥ ೭೩ ॥

ದೋಳಕೋಪರಿ ಸಂಸ್ಥಾಪ್ಯ ಮಾಸಮೇಕಂ ಪ್ರಪೂಜಯೇತ್ ।
ಕೇಚಿಚ್ಛಿಷ್ಯಾತ್ರ ಪಾರ್ವತ್ಯಾಃ ಶಿವೇನ ಚ ಪ್ರಪೂಜನಂ ॥ ೭೪ ॥

ವದಂತಿ ಮುನಯಸ್ತತ್ರ ನಿರ್ಣಯಂ ಶ್ರುಣು ವಕ್ಷ್ಯತೇ ।
ರಾಮಸ್ಯ ಹೃದಯಂ ಶಂಭುಃ ಶ್ರೀರಾಮೋ ಹೃದಯಂ ಸ್ಮೃತಃ ॥ ೭೫ ॥

ಶಂಕರಸ್ಯ ತಥಾ ಗೌರೀ ಹೃದಯಂ ಜಾನಕೀ ಸ್ಮೃತಾ ।
ಜಾನಕ್ಯಾ ಹೃದಯಂ ಗೌರೀ ತೇಭ್ಯೋ ನೈವಾಂತರಂ ಕದಾ ॥ ೭೬ ॥

ರಾಮಸ್ಯ ಚ ಶಿವಸ್ಯಾಪಿ ಸೀತಾಗಿರಿಜಯೋಸ್ತಥಾ ।
ಯೇ ಮಾನಯಂತಿ ವೈ ಭೇದಂ ತೇಷಾಂ ವಾಸಸ್ತು ರೌರವೇ ॥ ೭೭ ॥

ಅಲಂಕರಿಸಬೇಕು. ಡೋಲಿಯುನ್ನು (ತೊಟ್ಟಿಲನ್ನು) ಅದರ ಮೇಲಿಡಬೇಕು. ಆ ಕಲಶದಮೇಲಿರುವ ಡೋಲಿಯಲ್ಲಿ ಚಿನ್ನದ್ದಾಗಲಿ, ಬೆಳ್ಳಿಯದಾಗಲಿ ಸೀತಾರಾಮ ಮೂರ್ತಿಗಳನ್ನು ಮಾಡಿಸಿಡಬೇಕು. ಅವನ್ನು ಅಲ್ಲಿಟ್ಟು ಪೂಜಿಸಬೇಕು.

೭೪. ಈ ರೀತಿಯಾಗಿ ಒಂದು ತಿಂಗಳಕಾಲದವರೆಗೂ ಪೂಜಿಸಬೇಕು. ಎಲೈ ಶಿಷ್ಯನೇ! ಕೆಲವರು ಸೀತಾರಾಮರ ಮೂರ್ತಿಗೆ ಬದಲಾಗಿ ಪಾರ್ವತಿ ಪರಮೇಶ್ವರರ ಮೂರ್ತಿಯನ್ನು ಇಟ್ಟು ಪೂಜಿಸುತ್ತಾರೆಂದು ಹೇಳುತ್ತಾರೆ.

೭೫ ೭೬. ಅಲ್ಲದೆ ಮುನಿಗಳೂ ಕೂಡ ಈ ರೀತಿ ಹೇಳುತ್ತಾರೆ. ಈ ವಿಷಯದಲ್ಲಿ ನಿರ್ಣಯವನ್ನು ಕೇಳು ರಾಮನ ಹೃದಯವೇ ಶಂಭುವು. ಶಂಭುವಿನ ಹೃದಯವೇ ರಾಮನು. ಅಂತೆಯೇ ಜಾನಕಿಯು ಗೌರಿಯ ಹೃದಯುವು. ಗೌರಿಯು ಜಾನಕಿಯ ಹೃದಯುವು ಎಂದು ತಿಳಿ ಈ ರೀತಿಯಾಗಿ ಇವರುಗಳಲ್ಲಿ ಒಬ್ಬೊಬ್ಬರಿಗೆ ಭೇದವಿರುವುದಿಲ್ಲ.

೭೭. ರಾಮನಿಗೂ ಶಿವನಿಗೂ, ಜಾನಕಿಗೂ ಪಾರ್ವತಿಗೂ ಯಾರು ಭೇದವನ್ನು ಹೇಳುವರೋ ಯಾರು ಅದನ್ನು ಪುರಸ್ಕರಿಸುವರೋ ಅವರಿಗೆ ರೌರವ ನರಕದಲ್ಲಿ ವಾಸವು ತಪ್ಪುವುದೇ ಇಲ್ಲ.

ಅತಶ್ಚೈತ್ರತೃತೀಯಾಯಾಂ ಸೀತಾರಾಮೌ ಪ್ರಪೂಜಯೇತ್ ।
ಅಶಕ್ತೌ ತಾಮ್ರಜೇ ಮೂರ್ತೀ ಕಾರ್ಯೇ ವಾ ಕಾಷ್ಠನಿರ್ಮಿತೇ ॥ ೭೮ ॥

ಪಾಷಾಣನಿರ್ಮಿತೇ ಚಾಪಿ ಮೂರ್ತೀ ಕಾರ್ಯೇ ಯಥಾಸುಖಂ ।
ಪ್ರತ್ಯಹಂ ಮಂಗಳದ್ರವ್ಯೈಸ್ಸರ್ವಸ್ತ್ರೀಭಿಃ ಪ್ರಪೂಜಯೇತ್ ॥ ೭೯ ॥

ಮಾಸಮೇಕಂ ಶಂ ನಾರೀಭಿಃ ಸ್ನಾನಂ ಹಿ ಸೀತಲಾಭಿಧಂ ।
ಅವಶ್ಯಮೇವ ಕರ್ತವ್ಯಂ ಸೀತಾತೀರ್ಥೆ ವಿಶೇಷತಃ ॥ ೮೦ ॥

ಯತ್ರ ಯತ್ರ ರಾಮತೀರ್ಥಸ್ತಸ್ಯ ವಾಮೇವನೀತಲೇ ।
ಸೀತಾತೀರ್ಥಂ ತತ್ರ ತತ್ರ ಜ್ಞೇಯಂ ಸೀತಾಕೃತಂ ಶುಭಂ ॥ ೮೧ ॥

---

೭೮. ಚೈತ್ರಮಾಸದ ತೃತೀಯೆಯ ದಿವಸ ಸೀತಾರಾಮರನ್ನು ಪೂಜಿಸಬೇಕು. ಚಿನ್ನ ಬೆಳ್ಳಿಯ ಪ್ರತಿಮೆಗಳನ್ನು ಮಾಡಿಸಲು ಶಕ್ತಿಯಿಲ್ಲದವರು ತಾಮ್ರದಲ್ಲಿ ಪ್ರತಿಮೆಗಳನ್ನು ಮಾಡಿಸಬಹುದು ಅದರಲ್ಲಿಯೂ ಆಗದಿದ್ದರೆ ಮರದಲ್ಲಿ ಪ್ರತಿಮೆಯನ್ನು ಮಾಡಿಸಬಹುದು.

೭೯. ಅದೂ ಸೌಕರ್ಯವಿಲ್ಲದಿದ್ದರೆ ಕಲ್ಲಿನಲ್ಲಿ ಪ್ರತಿಮೆಯನ್ನು ಮಾಡಿಸಬೇಕು. ಯಾವರೀತಿಯಲ್ಲಿ ತನಗೆ ಸೌಕರ್ಯವೋ ಆ ರೀತಿಯಲ್ಲಿ ಮಾಡಿಸಕೊಳ್ಳಬೇಕು. ಪ್ರತಿದಿವಸವೂ ಕೂಡ ಮಂಗಳ ದ್ರವ್ಯಗಳಿಂದ ಹೆಂಗಸರು ಪೂಜಿಸಬೇಕು.

೮೦. ಒಂದು ತಿಂಗಳ ವರೆಗೆ ಹೆಂಗಸರು ತಣ್ಣೀರಿನಲ್ಲಿ ಅವಶ್ಯಕವಾಗಿ ಸ್ನಾನಮಾಡಿ ಪೂಜಿಸಬೇಕು. ಈ ಸ್ನಾನವನ್ನು ಸೀತಾತೀರ್ಥದಲ್ಲಿ ಮಾಡಿದರೆ ಬಹು ವಿಶೇಷವು. ಈ ಸ್ನಾನಕ್ಕೆ ಸೀತಳಾಸ್ನಾನವೆಂದು ಹೆಸರು.

೮೧. ಪ್ರಪಂಚದಲ್ಲಿ ರಾಮತೀರ್ಥವು ಎಲ್ಲೆಲ್ಲಿರುವುದೋ ಅದರ ಎಡಗಡೆಯಲ್ಲಿ ಎಲ್ಲಾ ಜಾಗದಲ್ಲಿಯೂ ಸೀತಾ ತೀರ್ಥವಿದೆಯೆಂದು ತಿಳಿಯಬೇಕು.

ಚೈತ್ರಶುಕ್ಲತೃತೀಯಾಯಾಮಾರಭ್ಯಾಕ್ಷಯ್ಯಸಂಜ್ಞಿತಾ ।
ಯಾವತ್ತೃತೀಯಾ ವೈಶಾಖಶುಕ್ಲಾ ತಾವನ್ನಿರಂತರಂ ॥ ೮೨ ॥

ಸೀತಲಾಸಂಜ್ಞಕಂ ಸ್ನಾನಂ ಸ್ತ್ರೀಭಿಸ್ಸೀತಾರ್ಥಮಾಚರೇತ್ ।
ಚೈತ್ರಶುದ್ಧತೃತೀಯಾಯಾಮಕ್ಷಯ್ಯಾಯಾಂ ತಥಾಪಿ ಚ ॥ ೮೩ ॥

ತೃತೀಯಾಯಾಂ ತು ನಾರಿಭಿಸ್ತೈಲಾಭ್ಯಂಗಂ ಪ್ರಕಾರಯೇತ್ ।
ಅನ್ಯತ್ರ ದಿನಸೇ ಸ್ತ್ರೀಭಿಸ್ತೈಲಾಭ್ಯಂಗಂ ನ ಕಾರಯೇತ್ ॥ ೮೪ ॥

ಪ್ರತ್ಯಹಂ ಚೋತ್ಸವಾಃ ಕಾರ್ಯಾಸ್ಸೀತಾಯಾಃ ಪುರತಃ ಶುಭಾಃ ।
ಸುವಾಸಿನೀಪೂಜನಂ ಚ ಕಾರ್ಯಂ ಭಕ್ತ್ಯಾ ದಿನೇ ದಿನೇ ॥ ೮೫ ॥

ಸುವಾಸಿನೀನಾಂ ದೇಯಾನಿ ವಾಯನಾನಿ ಶುಭಾನಿ ಚ ।
ನಿರಂತರಂ ಪೂಜನಾರ್ಥಂ ಯದಿ ಶಕ್ತಿರ್ನ ವರ್ತತೇ ॥ ೮೬ ॥

೮೨-೮೪. ವೈಶಾಖ ಶುದ್ದತೃತೀಯೆಯು ಅಕ್ಷ ತೃತಿಯಾ, ಎನಿಸಿಕೊಳ್ಳುವುದು. ಚೈತ್ರಶುದ್ದ ತೃತೀಯೆಯು ಮೊದಲುಗೊಂಡು ವೈಶಾಖ ಶುದ್ದ ತೃತೀಯಾ ಪೂರ್ತಿಯಾಗಿ ನಿತ್ಯವೂ ಪೂಜೆಗೋಸ್ಕರ ಮಾಡುವ ಸ್ನಾನವು ಸೀತಳಾ ಸ್ನಾನವೆನಿಸಿಕೊಳ್ಳುತ್ತದೆ. ಇದನ್ನು ಹೆಂಗಸರು ಸೀತಳಾಸ್ನಾನವೆಂದೆನ್ನುತ್ತಾರೆ. ಇದು ಸೀತೆಗೋಸ್ಕರ ಮಾಡತಕ್ಕದ್ದಾಗಿರುವುದು. ಚೈತ್ರ ಶುದ್ಧ ತೃತೀಯೆಯ ದಿನ ಆದರಲ್ಲಿಯೂ ಅಕ್ಷಯ ತೃತೀಯೆಯ ದಿವಸ ಹೆಂಗಸರು ತೈಲಾಭ್ಯಂಗನವನ್ನು ಮಾಡಿಕೊಳ್ಳಲೇಬೇಕು. ಆ ದಿನ ಹೊರತಾಗಿ ಆ ಒಂದು ತಿಂಗಳವರೆಗೂ ತೈಲಾಭ್ಯಂಗನನ್ನು ಮಾಡಿಕೊಳ್ಳಕೂಡದು.

೮೫. ಪ್ರತಿದಿನವೂ ಸೀತೆಯ ಮುಂದೆ ಉತ್ಸವಗಳನ್ನು ಆಚರಿಸಬೇಕು ಪ್ರತಿದಿನದಲ್ಲಿಯೂ ಸುವಾಸಿನಿಯರ ಪೂಜೆಯನ್ನು ಭಕ್ತಿಯಿಂದ ಮಾಡುತ್ತಿರಬೇಕು.

೮೬-೮೭ ಸುವಾಸಿನಿಯರಿಗೆ ಅನೇಕವಾಗಿ ಬಾಗಿನಗಳನ್ನು ಕೊಡುತ್ತಿರಬೇಕು. ಪ್ರತಿಪೂಜೆಯಲ್ಲಿಯೂ, ಪ್ರತಿದಿನವೂ ಕೊಡಬೇಕು. ಒಂದುವೇಳೆ

ತದಾ ಕಾರ್ಯಂ ಚೈಕದಿನೇ ಸುಭಗಾನಾಂ ಪ್ರಪೂಜನಂ ।
ಸುವಾಸಿನೀನಾಂ ದೇಯಂ ಹಿ ಪ್ರತ್ಯಹಂ ಭೋಜನಂ ವರಂ ॥ ೮೭ ॥

ನಾನಾಪಕ್ವಾನ್ನಸಂಯುಕ್ತಂ ಘೃತಪಾಯಸಸಂಯುತಂ ।
ಅಲಂಕಾರಾಶ್ಚ ವಸ್ತ್ರಾಣಿ ಕಂಚುಕ್ಯಾದಿ ಚ ಯಚ್ಛುಭಂ ॥ ೮೮ ॥

ಭರ್ತುರಾಯುಷ್ಯವೃದ್ಧ್ಯರ್ಥಂ ನಾರೀಭಿರ್ದೇಯಮುತ್ತಮಂ ।
ಏವಂ ಸ್ನಾತ್ವಾ ಮಾಸಮಾತ್ರಂ ಸೀತಲಾಸ್ನಾನಮುತ್ತಮಂ ॥ ೮೯ ॥

ಅಕ್ಷಯ್ಯಾಯಾಂ ತೃತೀಯಾಯಾಂ ಪೂಜಯಿತ್ವಾ ವಿಶೇಷತಃ ।
ತ್ರಿಂಶತ್ಸುವಾಸಿನೀಭ್ಯಶ್ಚ ದಾತವ್ಯಂ ಭೋಜನಾದಿಕಂ ॥ ೯೦ ॥

ಪ್ರತಿದಿನವೂ ಬಾಗಿನವನ್ನು ಕೊಡಲು ಶಕ್ತಿಯಿಲ್ಲದಿದ್ದರೆ ಯಾವುದಾದರೂ ಒಂದು ದಿವಸ ಸುವಾಸಿನಿಯರನ್ನು ಕರೆದು ಪೂಜಿಸಬೇಕು. ಆದರೆ ಸುವಾಸಿನಿಯರಿಗೆ ನಿತ್ಯವೂ ಭೋಜನವನ್ನು ಮಾಡಿಸಬೇಕು.

೮೮. ಅನೇಕ ಬಗೆಯ ಪಕ್ವಾನ್ನಗಳನ್ನು ಮಾಡಿಸಿ ಪಾಯಸ ಮುಂತಾದುವುಗಳನ್ನು ಮಾಡಿಸಿ ಭೋಜನ ಮಾಡಿಸಬೇಕು. ಅಲಂಕಾರಗಳನ್ನೂ ಕುಪ್ಪಸ ಮುಂತಾದ ಸೌಭಾಗ್ಯದ್ರವ್ಯಗಳನ್ನೂ ಕೊಡಬೇಕು.

೮೯. ಈ ರೀತಿಯಾಗಿ ಅಲಂಕಾರಗಳನ್ನೂ, ಮಂಗಳ ದ್ರವ್ಯಗಳನ್ನೂ, ಕುಪ್ಪಸಗಳನ್ನೂ ಕೊಟ್ಟರೆ ಗಂಡನಿಗೆ ಆಯುಸ್ಸು ಹೆಚ್ಚುತ್ತದೆ. ಹೀಗೆ ತಿಂಗಳ ದಿನವೂ ಮಾಡುವ ಸ್ನಾನವು ಸೀತಳಾ ಸ್ನಾನವು ಎಂದೆನಿಸಿ ಕೊಳ್ಳುತ್ತದೆ. ಇದು ಉತ್ತಮವು.

೯೦. ಅಕ್ಷಯ ತೃತೀಯೆಯ ದಿವಸ ಸೀತೆಯನ್ನು ವಿಶೇಷ ರೀತಿಯಿಂದ ಪೂಜಿಸಿ ಮೂವತ್ತು ಜನ ಮುತ್ತೈದೆಯರಿಗೆ ಮೃಷ್ಟಾನ್ನವನ್ನು ಭೋಜನ ಮಾಡಿಸಬೇಕು.

ಗುರುಪತ್ನೀಂ ನಿಜಾಂ ಪೂಜ್ಯ ತಸ್ಯೈ ಸರ್ವಂ ವಿಸರ್ಜಯೇತ್ ।
ಏವಂ ಸ್ತ್ರೀಣಾಂ ವ್ರತಂ ಪ್ರೋಕ್ತಂ ಮಾಸಮಾತ್ರಂ ದ್ವಿಜೋತ್ತಮ ॥ ೯೧ ॥

ಅನ್ಯದ್ವಿಶೇಷಂ ವಕ್ಷ್ಯಾಮಿ ತವಾಗ್ರೇ ಶೃಣು ಚೋತ್ತಮಂ ।
ಅಶೋಕಕಲಿಕಾಭಿಸ್ತು ಚೈತ್ರಶುಕ್ಲಾಷ್ಟಮೀದಿನೇ ॥ ೯೨ ॥

ಸೀತಾರಾಮೌ ಪೂಜಯಿತ್ವಾ ಮಹಾಮಂಗಳಪೂರ್ವಕಂ ।
ಅಶೋಕಕಲಿಕಾಶ್ಚಾಷ್ಟೌ ಯೇ ಪಿಬಂತಿ ಪುನರ್ವಸೌ ॥ ೯೩ ॥

ಚೈತ್ರೇಮಾಸಿ ಸಿತಾಷ್ಟಮ್ಯಾಂ ನತೇ ಶೋಕಮವಾಪ್ನುಯುಃ ।
ತ್ವಾಮಶೋಕಕರಾಭೀಷ್ಟಂ ಮಧುಮಾಸಸಮುದ್ಭವಂ ॥ ೯೪ ॥

ಪಿಬಾಮಿ ಶೋಕಸಂತಪ್ತಾ ಮಾಮಶೋಕಂ ಸದಾ ಕುರು ।
ಪುನರ್ವಸುಬುಧೋಪೇತಾಂ ಚೈತ್ರೇ ಮಾಸಿ ಸಿತಾಷ್ಟಮೀಂ ॥ ೯೫ ॥

---

೯೧. ಪುರೋಹಿತನ ಹೆಂಡತಿಯನ್ನು ವಿಶೇಷರೀತಿಯಿಂದ ಪೂಜಿಸಿ ಆಕೆಗೆ ಎಲ್ಲವನ್ನೂ ಕೊಡಬೇಕು. ಈ ರೀತಿಯಾಗಿ ಹೆಂಗಸರು ಒಂದು ತಿಂಗಳ ಕಾಲ ವ್ರತವನ್ನು ಮಾಡಬೇಕೆಂದು ಹೇಳಲ್ಪಟ್ಟದೆ.

೯೨-೯೩, ಮತ್ತೊಂದು ವಿಶೇಷವನ್ನು ಹೇಳುತ್ತೇನೆ. ಮನಸ್ಸಿಟ್ಟು ಕೇಳು. ಅದು ಉತ್ತಮವಾದುದು. ಚೈತ್ರಶುದ್ಧ ಅಷ್ಟಮಿಯದಿವಸ ಅಶೋಕದ ಮೊಗ್ಗುಗಳಿಂದ ಸೀತಾರಾಮರನ್ನು ಮಂಗಳಕರವಾದ ಉತ್ಸವಗಳಿಂದ ಪೂಜಿಸಬೇಕು, ಮತ್ತು ಎಂಟು ಅಶೋಕದ ಮೊಗ್ಗುಗಳನ್ನು ತಿನ್ನಬೇಕು. ಆ ಅಷ್ಟಮಿಯ ದಿನ ಪುನರ್ವಸು ನಕ್ಷತ್ರವಿರಬೇಕು.

೯೪-೯೫. ಪುನರ್ವಸು ನಕ್ಷತ್ರದಿಂದ ಕೂಡಿದ ಚೈತ್ರಮಾಸದ ಶುಧ್ಧ ಅಷ್ಟಮಿಯದಿನ ಈ ಅಶೋಕದ ಎಂಟು ಮೊಗ್ಗುಗಳನ್ನು ತಿಂದವರು ಶೋಕವನ್ನು ಹೊಂದುವುದಿಲ್ಲ. ಮಧುಮಾಸದಲ್ಲಿ ಹುಟ್ಟಿದ ಎಲ್ಲರನ್ನೂ, ದುಃಖವಿಲ್ಲದವರನ್ನಾಗಿ ಮಾಡುವ ಎಲೈ ಅಶೋಕವೇ ! ಶೋಕಸಂತಪ್ತಳಾದ ನಾನು ನಿನ್ನನ್ನು ತಿನ್ನುತ್ತೇನೆ. ನನಗೆ ಶೋಕವಿಲ್ಲದೆ, ಯಾವಾಗಲೂ ಇರುವಂತೆ ಮಾಡು ಎಂದು ಹೇಳುತ್ತ ತಿನ್ನಬೇಕು, ಚೈತ್ರಶುದ್ಧ ಅಷ್ಟಮಿಯು ಬುಧವಾರ ಬಂದಿದ್ದು ಆ ದಿನ ಪುನರ್ವಸು ನಕ್ಷತ್ರವಿದ್ದರೆ ಆ ದಿನ ಪ್ರಾತಃಕಾಲದಲ್ಲಿ ವಿಧಿಯಂತೆ ಸ್ನಾನಮಾಡಿದರೆ ವಾಜಪೇಯಯಾಗದ ಫಲವು ಬರುತ್ತದೆ.

ಪ್ರಾತಸ್ತು ವಿಧಿವತ್ಸ್ನಾತ್ವಾ ವಾಜಪೇಯಫಲಂ ಲಭೇತ್ ।
ಚೈತ್ರೇ ನವಮ್ಯಾಂ ಪ್ರಾಕ್ಪಕ್ಷೇ ದಿವಾ ಪುಣ್ಯೇ ಪುನರ್ವಸೌ ॥ ೯೬ ॥

ಉದಯೇ ಗುರುಗೌರಾಂಶ್ವೋಃ ಸ್ವೋಚ್ಚಸ್ಥೇ ಗ್ರಹಪಂಚಕೇ ।
ಮೇಷೇ ಪೂಷಣಿ ಸಂಪ್ರಾಪ್ತೇ ಲಗ್ನೇ ಕರ್ಕಟಕಾಹ್ವಯೇ ॥ ೯೭ ॥

ಆವಿರಾಸೀನ್ಮಹಾವಿಷ್ಣುಃ ಕೌಸಲ್ಯಾಯಾಂ ಪರಃ ಪುಮಾನ್ ।
ತಸ್ಮಿನ್ ದಿನೇ ತು ಕರ್ತವ್ಯಮುಪವಾಸ ವ್ರತಂ ನರೈಃ ॥ ೯೮ ॥

ತತ್ರ ಜಾಗರಣಂ ಕುರ್ಯಾದ್ರಘುನಾಥಪುರೇ ಜನೈಃ ।
ಚೈತ್ರ ಶುದ್ಧಾ ತು ನವಮೀ ಪುನರ್ವಸುಯುತಾ ಯದಿ ॥ ೯೯ ॥

೯೬-೯೮. ಚೈತ್ರಶುಕ್ಲನವಮಿಯು, ಪುನರ್ವಸು ನಕ್ಷತ್ರದಿಂದಕೂಡಿ ಲಗ್ನದಲ್ಲಿ ಗುರು ಚಂದ್ರರು ಇದ್ದುಕೊಂಡು ಉಳಿದ ಐದುಗ್ರಹಗಳು ಉಚ್ಚಸ್ಥಾನದಲ್ಲಿದ್ದು ಮೇಷದಲ್ಲಿ ಸೂರ್ಯನಿರುವಾಗ ಕರ್ಕಾಟಕ ಲಗ್ನದಲ್ಲಿ ಆ ಮಹಾವಿಷ್ಣುವು ಕೌಸಲ್ಯೆಯಲ್ಲಿ ವರಪುತ್ರನಾಗಿ ಹುಟ್ಟಿದನು. ಆದ್ದರಿಂದ ಆ ದಿವಸ ಜನರು ಉಪವಾಸ ಮಾಡಬೇಕು.

ಶು.	ರ. ಬು.		ಕೇ.
	ಶ್ರೀ ರಾಮ ಜಾತಕಂ.		ಲ. ಚ. ಗ.
ಕು.			
ರಾ.		ಶ.	

೯೯-೧೦೦. ಆ ದಿನ ಜನರು ರಾಮುನನ್ನು ಪೂಜಿಸುತ್ತ ಜಾಗರಣೆಯನ್ನು ಮಾಡಬೇಕು. ಚೈತ್ರ ಶುದ್ಧ ನವಮಿಯು ಪುನರ್ವಸುವಿನಿಂದ ಕೂಡಿಕೊಂಡು

ಸ್ಯೈವ ಮಧ್ಯಾಹ್ನಯೋಗೇನ ಮಹಾಪುಣ್ಯತಮಾ ಭವೇತ್ ।
ಕೇವಲಾಪಿ ಸದೋಪೋಷ್ಯಾ ನವಮೀ ಶಬ್ದಸಂಗ್ರಹಾತ್ ॥ ೧೦೦ ॥

ತಸ್ಮಾತ್ಸರ್ವಾತ್ಮನಾ ಸರ್ವೈಃ ಕಾರ್ಯಂ ವೈ ನವಮೀವ್ರತಂ ।
ಶ್ರೀರಾಮನವಮೀ ಪ್ರೋಕ್ತಾ ಕೋಟಿಸೂರ್ಯಗ್ರಹಾಧಿಕಾ ॥ ೧೦೧ ॥

ಉಪೋಷಣಂ ಜಾಗರಣಂ ಪಿತೃನುದ್ದಿಶ್ಯ ತರ್ಪಣಂ ।
ತಸ್ಮಿನ್ ದಿನೇ ತು ಕರ್ತವ್ಯಂ ಬ್ರಹ್ಮಪ್ರಾಪ್ತಿಮಭೀಪ್ಸುಭಿಃ ॥ ೧೦೨ ॥

ಸರ್ವೇಷಾಮಪ್ಯಯಂ ಧರ್ಮೋ ಭುಕ್ತಿಮುಕ್ತ್ಯೈಕಸಾಧನಃ ।
ಅಶುಚಿರ್ವಾಪಿ ಪಾಪಿಷ್ಠಃ ಕೃತ್ವೇದಂ ವ್ರತಮುತ್ತಮಂ ॥ ೧೦೩ ॥

ಪೂಜ್ಯಸ್ಸ್ಯಾತ್ಸರ್ವಭೂತಾನಾಂ ಯಥಾ ರಾಮಸ್ತಥೈವ ಸಃ ।
ಯಸ್ತು ರಾಮನವಮ್ಯಾಂ ತು ಭುಂಕ್ತೇ ಮೋಹಾತ್ತು ಮೂಢಧೀಃ ॥

ಅವುಗಳೆರಡೂ ಮಧ್ಯಾಹ್ನಕ್ಕೆ ಸಂಬಂಧಪಟ್ಟದ್ದರೆ ಬಹು ಪುಣ್ಯತಮವಾದ ದಿನವಾಗಿರುತ್ತದೆ. ನವಮಿಯೆಂದು ಹೆಸರು ಬಂದಿದ್ದರೆ ಆ ದಿನದಲ್ಲಿ ಆ ಹೆಸರಿನ ಕಾರಣದಿಂದ ಉಪವಾಸ ಮಾಡಬೇಕು.

೧೦೧. ಆದ್ದರಿಂದ ಎಲ್ಲರೂ ಕೂಡ ಶ್ರೀರಾಮನವಮೀ ವ್ರತವನ್ನು ಮಾಡಬೇಕು. ಶ್ರೀರಾಮನವಮಿಯು ಕೋಟಿ ಸೂರ್ಯ ಗ್ರಹಣಗಳಿಗಿಂತಲೂ ಹೆಚ್ಚಿನದು.

೧೦೨. ಈ ದಿನದಲ್ಲಿ ಉಪವಾಸವಿದ್ದು ಪಿತೃಗಳಿಗೆ ತರ್ಪಣವನ್ನು ಮಾಡಿ ಜಾಗರಣೆಯನ್ನು ಮಾಡಬೇಕು. ಆದಿನ ಈ ರೀತಿಯಲ್ಲಿ ಮಾಡಿದರೆ ಅವನು ಪರಬ್ರಹ್ಮನನ್ನು ಹೊಂದುತ್ತಾನೆ.

೧೦೩-೧೦೪. ಈ ವ್ರತವನ್ನು ಎಲ್ಲರೂ ಮಾಡಬೇಕು. ಎಲ್ಲರಿಗೂ ಇದು ಧರ್ಮವು. ಇದು ಭಕ್ತಿಯನ್ನೂ, ಮುಕ್ತಿಯನ್ನೂ ಕೊಡುತ್ತದೆ. ಅಶುಚಿಯಾದವನೂ, ಪಾಪಿಯೂ ಕೂಡ ಈ ಉತ್ತಮವಾದ ವ್ರತವನ್ನು ಮಾಡಿದರೆ ಅವನು ತನ್ನ ಪಾಪಗಳನ್ನು ಕಳೆದುಕೊಂಡು ಎಲ್ಲಾ ಪ್ರಾಣಿಗಳಿಗೂ ಪೂಜ್ಯನಾಗುತ್ತಾನೆ. ಅವನು ರಾಮನಂತೆಯೇ ಎಲ್ಲರಿಗೂ ಗೌರವಾರ್ಹನಾಗುತ್ತಾನೆ. ರಾಮನವಮಿಯ ದಿವಸ ಭೋಜನವನ್ನು ಮಾಡಬಾರದು.

ಕುಂಭೀಪಾಕೇಷು ಘೋರೇಷು ಪಚ್ಯತೇ ನಾತ್ರ ಸಂಶಯಃ ।
ಅಕೃತ್ವಾ ರಾಮನವಮೀವ್ರತಂ ಸರ್ವವ್ರತೋತ್ತಮಂ ॥ ೧೦೫ ॥

ವ್ರತಾನ್ಯನ್ಯಾನಿ ಕುರುತೇ ನ ತೇಷಾಂ ಫಲಭಾಗ್ಭವೇತ್ ।
ಆಚಾರ್ಯಂ ಚೈವ ಸಂಪೂಜ್ಯ ಶೃಣು ಯಾತ್ಪ್ರಾರ್ಥಯೇನ್ನಿಶಿ ॥ ೧೦೬ ॥

ಶ್ರೀರಾಮ ಪ್ರತಿಮಾದಾನಂ ಕರಿಷ್ಯೇಹಂ ದ್ವಿಜೋತ್ತಮ ।
ಭಕ್ತ್ಯಾಚಾರ್ಯ ಭವ ಪ್ರೀತಶ್ಶ್ರೀರಾಮೋಸಿ ತ್ವಮೇವ ಚ ॥ ೧೦೭ ॥

ಸ್ವಗೃಹೇ ಚೋತ್ತಮೇ ದೇಶೇ ದಾನಸ್ಯೋಜ್ಜ್ವಲಮಂಡಪಂ ।
ಶಂಖಚಕ್ರಹನೂಮದ್ಭಿಃ ಪ್ರಾಗ್ದ್ವಾರೇ ಸಮಲಂಕೃತಂ ॥ ೧೦೮ ॥

ಗರುತ್ಮಚ್ಛಾರ್ಙ್ಗಬಾಣೈಶ್ಚ ದಕ್ಷಿಣೇ ಸಮಲಂಕೃತಂ ।
ಗದಾಖಡ್ಗಾಂಗದೈಶ್ಚೈವ ಪಶ್ಚಿಮೇಸು ವಿಭೂಷಿತಂ ॥ ೧೦೯ ॥

---

೧೦೫. ಒಂದುವೇಳೆ ಬುದ್ಧಿ ಇಲ್ಲದೆ ಊಟಮಾಡಿದರೆ ಘೋರವಾದ ಕುಂಭೀ ಪಾಕನರಕದಲ್ಲಿ ತೊಂದರೆ ಪಡಿಸಲ್ಪಡುತ್ತಾನೆ. ಇದರಲ್ಲಿ ಸಂಶಯವಿಲ್ಲ. ಯಾವ ರೀತಿಯಿಂದಲಾದರೂ ಈ ರಾಮನವಮೀ ವ್ರತವನ್ನು ಮಾಡಬೇಕು.

೧೦೬. ಈ ವ್ರತವನ್ನು ಮಾಡದೆ ಬೇರೆ ಯಾವ ವ್ರತಗಳನ್ನು ಮಾಡಿದರೂ ಅವನಿಗೆ ಆ ವ್ರತಗಳ ಫಲವು ಬರುವುದಿಲ್ಲ. ಹಿಂದಿನ ದಿನದ ರಾತ್ರಿಯಲ್ಲಿ ಆಚಾರ್ಯನನ್ನು ಪೂಜಿಸಿ ಪ್ರಾರ್ಥಿಸಿಕೊಳ್ಳಬೇಕು.

೧೦೭. ಎಲೈ ದ್ವಿಜೋತ್ತಮನೇ ! ಈ ಶ್ರೀರಾಮನ ಪ್ರತಿಮೆಯನ್ನು ನಿನಗೆ ದಾನಮಾಡುತ್ತೇನೆ. ಎಲೈ ಆಚಾರ್ಯನೇ ! ಇದರಿಂದ ಪ್ರೀತನಾಗಿ ಆಗು. ನೀನೇ ಶ್ರೀರಾಮನಾಗಿದ್ದೀಯೆ. ಎಂದು ಹೇಳಿ ಆ ರಾತ್ರಿಯಲ್ಲಿ ಸಂಕಲ್ಪಿಸಬೇಕು.

೧೦೮ ಅನಂತರ ತನ್ನ ಮನೆಯಲ್ಲಿ ಉತ್ತಮವಾದ ಪ್ರದೇಶದಲ್ಲಿ ಮಂಡಪವನ್ನು ಮಾಡಿ ಅಲಂಕರಿಸಬೇಕು. ಪೂರ್ವದ ಬಾಗಿಲಿನಲ್ಲಿ ಶಂಖ, ಚಕ್ರ, ಹನುಮಂತರನ್ನಿಟ್ಟು ಅಲಂಕರಿಸಬೇಕು.

೧೦೯, ಶಾರ್ಙ್ಗವೆಂಬ ಧನಸ್ಸು, ಬಾಣ, ಗರುಡರನ್ನು ದಕ್ಷಿಣದ ಬಾಗಿಲಿನಲ್ಲಿಟ್ಟು ಅಲಂಕರಿಸಬೇಕು. ಗದೆ, ಖಡ್ಗ ಅಂಗದಗಳನ್ನು ಪಶ್ಚಿಮದಲ್ಲಿಟ್ಟು ಅಲಂಕರಿಸಬೇಕು.

ಪದ್ಮಸ್ವಸ್ತಿಕನಾಳೈಶ್ಚ ಕೌಬೇರೇ ಸಮಲಂಕೃತಂ ।
ಮಧ್ಯೇ ಹಸ್ತಚತುಷ್ಕಾಢ್ಯಂ ವೇದಿಕಾಯುಕ್ತಮಾಯತಂ ॥ ೧೧೦ ॥

ಅಷ್ಟೋತ್ತರಸಹಸ್ರೈಶ್ಚ ರಾಮಲಿಂಗಾತ್ಮಕಂ ಶುಭಂ ।
ಆಸ್ತೀರ್ಯ ರಾಮತೋಭದ್ರಂ ವೇದಿಕಾಯಾಮನುತ್ತಮಂ ॥ ೧೧೧ ॥

ತತಸ್ಸಂಕಲ್ಪಯೇದೇವಂ ರಾಮಮೇವ ಸ್ಮರನ್ ದ್ವಿಜ ।
ಅಸ್ಯಾಂ ರಾಮನವಮ್ಯಾಂ ಚ ರಾಮಾರಾಧನತತ್ಪರಃ ॥ ೧೧೨ ॥

ಉಪೋಷ್ಯಾಷ್ಟಸು ಯಾಮೇಷು ಪೂಜಯಿತ್ವಾ ಯಥಾವಿಧಿ ।
ಇಮಾಂ ಸ್ವರ್ಣಮಯೀಂ ರಾಮಪ್ರತಿಮಾಂ ಚ ಪ್ರಯತ್ನತಃ ॥ ೧೧೩ ॥

ಶ್ರೀರಾಮಪ್ರೀತಯೇ ದಾಸ್ಯೇ ರಾಮಭಕ್ತಾಯ ಧೀಮತೇ ।
ಪ್ರೀತೋ ರಾಮೋ ಹರತ್ವಾಶು ಪಾಪಾನಿ ಸುಬಹೂನಿ ಮೇ ॥ ೧೧೪ ॥

ಅನೇಕಜನ್ಮಸಂಸಿದ್ಧಾನ್ಯಭ್ಯಸ್ತಾನಿ ಮಹಂತಿ ಚ ।
ತತಸ್ಸ್ವರ್ಣಮಯೀಂ ರಾಮಪ್ರತಿಮಾಂ ಪಲಮಾನತಃ ॥ ೧೧೫ ॥

---

೧೧೦. ಪದ್ಮ, ಸ್ವಸ್ತಿಕ, ನೀಲಳಿಂದ ಉತ್ತರದಿಕ್ಕಿನಲ್ಲಿ ಅಲಂಕರಿಸಬೇಕು. ಇವುಗಳ ಮಧ್ಯದಲ್ಲಿ ನಾಲ್ಕು ನಾಲ್ಕು ಮೊಳಗಳು ಉದ್ದ, ಮತ್ತು ಅಗಲವಿರುವಂತೆ ವೇದಿಕೆಯನ್ನು ಮಾಡಬೇಕು.

೧೧೧ ಅದರಮೇಲೆ ಸಾವಿರದ ಎಂಟು ರಾಮಲಿಂಗಾತ್ಮಕವಾದ ರಾಮತೋ ಭದ್ರವನ್ನು ಹರವಿಡಬೇಕು.

೧೧೨-೧೧೪. ಅನಂತರ ಹಿಂದೆ ಹೇಳಿದ ರೀತಿಯಲ್ಲಿ ಸಂಕಲ್ಪಮಾಡಬೇಕು. ಆ ಬ್ರಾಹ್ಮಣನನ್ನು ರಾಮನೆಂದು ತಿಳಿದುಕೊಳ್ಳಬೇಕು. ಈ ರಾಮನ ಆರಾಧನೆಯಲ್ಲಿಯೇ ಆಸಕ್ತನಾಗಿ ಎಂಟು ಯಾಮಗಳಲ್ಲಿಯೂ ಉಪವಾಸವಿರುತ್ತ ಅಗಲೆಲ್ಲಾ ಕ್ರಮವಾಗಿ ಪೂಜಿಸಿ ಚಿನ್ನದಿಂದ ಮಾಡಿರುವ ರಾಮಪ್ರತಿಮೆಯನ್ನು ರಾಮಭಕ್ತನೂ, ಜ್ಞಾನಿಯೂ ಆದ ನಿನಗೆ ಪ್ರೀತಿಯಿಂದ ದಾನಮಾಡುತ್ತೇನೆ. ಇದರಿಂದ ರಾಮನು ಪ್ರೀತನಾಗಿ ನನ್ನ ಅನೇಕವಾದ ಪಾಪಗಳನ್ನು ಬೇಗನೆ ನಾಶಮಾಡಲಿ.

೧೧೫-೧೧೭. ಅನೇಕಜನ್ಮಗಳಿಂದ ಮಾಡಿದ, ನನ್ನನ್ನು ಅನುಸರಿಸಿಕೊಂಡು ಬಂದಿರುವ ಪಾಪಗಳೆಲ್ಲವನ್ನೂ ರಾಮನು ನಾಶಮಾಡಲಿ ಎಂದು

ನಿರ್ಮಿತಾಂ ದ್ವಿಭುಜಾಂ ದಿವ್ಯಾಂ ವಾಮಾಂಕಸ್ಥಿತಜಾನಕೀಂ ।
ಬಿಭ್ರತೀಂ ದಕ್ಷಿಣಕರೇ ಜ್ಞಾನಮುದ್ರಾಂ ಮನೋರಮಾಂ ॥ ೧೧೬ ॥

ವಾಮೇನಾಧಃಕರೇಣಾರಾದ್ದೇವೀಮಾಲಿಂಗ್ಯ ಸಂಸ್ಥಿತಾಂ
ಸಿಂಹಾಸನೇ ರಾಜತೇ ಚ ಪಲದ್ವಯ ವಿನಿರ್ಮಿತೇ ॥ ೧೧೭ ॥

ಅಶಕ್ತೋ ಯೋ ಮಹಾನತ್ರ ಸ ತು ವಿತ್ತಾನುಸಾರತಃ ।
ಪಲೇನ ವಾ ತದರ್ಧೇನ ತದರ್ಧಾರ್ಧೇನ ವಾ ಪುನಃ ॥ ೧೧೮ ॥

ಸೌವರ್ಣಂ ರಾಜತಂ ವಾಪಿ ಕಾರಯೇದ್ರಘುನಂದನಂ ।
ಪಾರ್ಶ್ವೇ ಭರತಶತ್ರುಘ್ನೌ ಧೃತಶಸ್ತ್ರಕರಾವುಭೌ ॥ ೧೧೯ ॥

ಚಾಪದ್ವಯಸಮಾಯುಕ್ತಂ ಲಕ್ಷ್ಮಣಂ ಚಾಪಿ ಕಾರಯೇತ್ ।
ಮಾತುರಂಕಗತಂ ರಾಮಂ ಇಂದ್ರ ನೀಲಸಮಪ್ರಭಂ ॥ ೧೨೦ ॥

ಹೇಳಬೇಕು. ಆನಂತರ ಒಂದು ಪಲದಿಂದ ಮಾಡಿರುವ ಚಿನ್ನದಿಂದ ಮಾಡಿವ ದಿವ್ಯವಾದ ಎರಡು ಕೈಗಳುಳ್ಳ, ಎಡಗಡೆಯಲ್ಲಿ ಜಾನಕಿಯು ಕುಳಿತಿರುವ, ಬಲಗೈಯ್ಯಲ್ಲಿ ಜ್ಞಾನಮುದ್ರೆಯನ್ನು ಹಿಡಿದಿರುವ, ಎಡಗೈಯಿಂದ ಸೀತೆಯನ್ನು ಆಲಂಗಿಸಿಕೊಂಡು ಕುಳಿತಿರುವ, ರಾಮ ಪ್ರತಿಮೆಯನ್ನು ಎರಡು ಫಲಗಳಿಂದ ಮಾಡಿರುವ ಬೆಳ್ಳಿಯ ಸಿಂಹಾಸನದಲ್ಲಿ ಕೂರಿಸಿರಬೇಕು.

೧೧೮. ಇಷ್ಟನ್ನು ಮಾಡಲು ಅಶಕ್ತನಾಗಿದ್ದರೆ ಅವನ ಯೋಗ್ಯತೆಗೆ ತಕ್ಕಂತೆ ಮಾಡಿಸಿಕೊಳ್ಳಬೇಕು. ಪಲದಿಂದ ಮಾಡಿಸಲಾಗದಿದ್ದರೆ, ಅರ್ಧ ಪಲವಾಗಬಹುದು. ಆದೂ ಆಗದಿದ್ದರೆ ಅದರಲ್ಲಿ ಅರ್ಧಎಂದರೆ ಕಾಲು ಪಲವಾಗಬಹುದು.

೧೧೯–೧೨೦. ಚಿನ್ನದಲ್ಲಿ ಮಾಡಿಸಲು ಆಗದಿದ್ದರೆ. ಬೆಳ್ಳಿಯಲ್ಲಿ ರಾಮ ಪ್ರತಿಮೆಯನ್ನು ಮಾಡಿಸಬಹುದು. ಪಾರ್ಶ್ವಗಳಲ್ಲಿ ಭರತಶತ್ರುಘ್ನರಿರಬೇಕು. ಅವರು ಕೈಗಳಲ್ಲಿ ಛತ್ರಿಗಳನ್ನು ಹಿಡಿದಿರಬೇಕು. ಲಕ್ಷ್ಮಣನ ಪ್ರತಿಮೆಯನ್ನು ಎರಡು ಧನುಸ್ಸನ್ನು ಹಿಡಿದಿರುವಂತೆ ಮಾಡಿಸಬೇಕು. ಆ ರಾಮನು ಇಂದ್ರನೀಲ ಪ್ರಭನಾಗಿ ತಾಯಿಯ ತೊಡೆಯಮೇಲೆ ಮಲಗಿರಬೇಕು.

ಪಂಚಾಮೃತಸ್ನಾನಪೂರ್ವಂ ಸಂಪೂಜ್ಯ ವಿಧಿವತ್ತತಃ ।
ಅಶೋಕಕುಸುಮೈರ್ಯುಕ್ತಮರ್ಘ್ಯಂ ದದ್ಯಾದ್ವಿಚಕ್ಷಣಃ ॥ ೧೨೧ ॥

ದಶಾನನವಧಾರ್ಥಾಯ ಧರ್ಮಸಂಸ್ಥಾಪನಾಯ ಚ ।
ರಾಕ್ಷಸಾನಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ॥ ೧೨೨ ॥

ಪರಿತ್ರಾಣಾಯ ಸಾಧೂನಾಂ ಜಾತೋ ರಾಮಸ್ಸ್ವಯಂ ಹರಿಃ ।
ಗೃಹಾಣಾರ್ಘ್ಯಂ ಮಯಾ ದತ್ತಂ ಭ್ರಾತೃಭಿಸ್ಸಹಿತೋಽನಘ ॥ ೧೨೩ ॥

ದಿನ್ಯೇವಂ ವಿಧಿವತ್ಕೃತ್ವಾ ರಾತ್ರೌ ಜಾಗರಣಂ ತತಃ ।
ತತಃ ಪ್ರಾತಸ್ಸಮುತ್ಥಾಯ ಸ್ನಾನಸಂಧ್ಯಾದಿಕಾಃ ಕ್ರಿಯಾಃ ॥ ೧೨೪ ॥

ಸಮಾಪ್ಯ ವಿಧಿವದ್ರಾಮಂ ಪೂಜಯೇದ್ವಿಧಿವನ್ಮುನೇ ।
ತತೋ ಹೋಮಂ ಪ್ರಕುರ್ವೀತ ಮೂಲಮಂತ್ರೇಣ ಮಂತ್ರವಿತ್ ॥

---

೧೨೧. ಇಂತಹ ರಾಮನನ್ನು ವಿಧಿಪೂರ್ವಕವಾಗಿ ಪಂಚಾಮೃತಗಳಿಂದ ಸ್ನಾನಮಾಡಿಸಬೇಕು. ಅಶೋಕದ ಹೂವನ್ನು ಹಾಕಿಕೊಂಡು ಅರ್ಘ್ಯವನ್ನು ಕೊಡಬೇಕು.

೧೨೨-೧೨೩ ದಶಾನನನನ್ನು ಕೊಲ್ಲುವುದಕ್ಕೂ, ಧರ್ಮವನ್ನು ಸ್ಥಾಪಿಸುವುದಕ್ಕೂ, ರಾಕ್ಷಸರನ್ನು ವಿನಾಶಮಾಡುವುದಕ್ಕೂ, ದೈತ್ಯರನ್ನು ಹನನಮಾಡುವುದಕ್ಕೂ, ಸಾಧುಗಳನ್ನು ಕಾಪಾಡುವುದಕ್ಕೂ, ಹರಿಯು ಸ್ವತಃ ರಾಮನಾಗಿ ಹುಟ್ಟಿದನು. ಅಂತಹ ರಾಮನೇ ! ನಾನು ಕೊಡತಕ್ಕ ಅರ್ಘ್ಯವನ್ನು ತಮ್ಮಂದಿರೊಡನೆ ಸ್ವೀಕರಿಸು.

೧೨೪ ಹಗಲಿನಲ್ಲಿ ಈ ರೀತಿಯಾಗಿ ಮಾಡಿ ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು. ಮಾರನೆಯದಿವಸ ಬೆಳಗ್ಗೆ ಎದ್ದು ಸ್ನಾನ ಸಂಧ್ಯಾವಂದನೆಗಳನ್ನು ಮಾಡಿಕೊಳ್ಳಬೇಕು.

೧೨೫. ನಿತ್ಯಕರ್ಮಗಳೆಲ್ಲವನ್ನೂ ಮುಗಿಸಿಕೊಂಡು, ವಿಧಿಯಲ್ಲಿ ಹೇಳಿರುವಂತೆ ರಾಮನನ್ನು ಮತ್ತೆ ಪೂಜಿಸಬೇಕು. ಅನಂತರ ಮೂಲಮಂತ್ರದಿಂದ ಹೋಮವನ್ನು ಮಾಡಬೇಕು.

ಪೂರ್ವೋಕ್ತಮಂಡಪೇ ಕುಂಡೇ ಸ್ಥಂಡಿಲೇ ವಾ ಸಮಾಹಿತಃ ।
ಲೌಕಿಕಾಗ್ನೌ ವಿಧಾನೇನ ಶತಮಷ್ಟೋತ್ತರಂ ಶನ್ತ್ರೈಃ ॥ ೧೨೬ ॥

ಸಾಜ್ಯೇನ ಪಾಯಸೇನೈವ ಸ್ಮರನ್ ರಾಮಮನನ್ಯಧೀಃ ।
ತತೋ ಭಕ್ತ್ಯಾ ಸುಸಂತೋಷ್ಯ ಆಚಾರ್ಯಂ ಪೂಜಯೇದ್ವಿಜ ॥ ೧೨೭ ॥

ತತೋ ರಾಮಂ ಸ್ಮರನ್ ದದ್ಯಾದೇವಂ ಮಂತ್ರಮುದೀರಯನ್ ।
ಇಮಾಂ ಸ್ವರ್ಣಮಯೀಂ ರಾಮಪ್ರತಿಮಾಂ ಸಮಲಂಕೃತಾಂ ॥ ೧೨೮ ॥

ಚಿತ್ರವಸ್ತ್ರಯುಗಚ್ಛನ್ನಾಂ ರಾಮೋಽಹಂ ರಾಘವಾಯ ತೇ ।
ಶ್ರೀರಾಮಪ್ರೀತಯೇ ದಾಸ್ಯೇ ತುಷ್ಟೋ ಭವತು ರಾಘವಃ ॥ ೧೨೯ ॥

ಇತಿ ದತ್ವಾ ವಿಧಾನೇನ ದದ್ಯಾದ್ವೈ ದಕ್ಷಿಣಾಂ ಭುವಂ ।
ಬ್ರಹ್ಮಹತ್ಯಾದಿಪಾಪೇಭ್ಯೋ ಮುಚ್ಯತೇ ನಾತ್ರ ಸಂಶಯಃ ॥ ೧೩೦ ॥

---

೧೨೬. ಹಿಂದೆ ಹೇಳಿದ ರಾಮಮಂಟಪದಲ್ಲಿ ಒಂದು ಅಗ್ನಿಕುಂಡವನ್ನು ಮಾಡಬೇಕು. ಅದಿಲ್ಲದಿದ್ದರೆ ಸ್ಥಂಡಿಲವನ್ನು (ಜಗಲಿಯನ್ನು) ಮಾಡಬೇಕು. ಆ ಅಗ್ನಿಯು ಲೌಕಿಕಾಗ್ನಿಯಾಗಿರಬೇಕು. ಅದರಲ್ಲಿ ನೂರೆಂಟುಬಾರಿ ಮೂಲ ಮಂತ್ರದಿಂದ ಹೋಮವನ್ನು ಮಾಡಬೇಕು.

೧೨೭. ರಾಮನನ್ನೇ ಸ್ಮರಿಸುತ್ತ ಅವನಲ್ಲಿಯೇ ಮನಸ್ಸನ್ನಿಟ್ಟುಕೊಂಡಿದ್ದು ತುಪ್ಪದಿಂದ ಕೂಡಿದ ಪಾಯಸದಿಂದ ಹೋಮ ಮಾಡಬೇಕು. ಅನಂತರ ಆಚಾರ್ಯನನ್ನು ಭಕ್ತಿಯಿಂದ ಪೂಜಿಸಿ ಸಂತೋಷಪಡಿಸಬೇಕು.

೧೨೮-೧೨೯. ಅನಂತರ ರಾಮನನ್ನು ಸ್ಮರಿಸುತ್ತ ಈ ಮಂತ್ರವನ್ನು ಹೇಳುತ್ತ ದಾನಮಾಡಬೇಕು. ಎಲೈ ಗುರುವೇ! ಚಿನ್ನದಲ್ಲಿ ಪ್ರತಿಮೆಯನ್ನು ಮಾಡಿರುವೆನು. ಅದಕ್ಕೆ ಅಲಂಕರಿಸಿರುವೆನು. ಚಿತ್ರವಾದ ವಸ್ತ್ರಗಳನ್ನು ಧರಿಸಿರುವೆನು. ಇದನ್ನು ರಾಘವರೂಪನಾದ ನಿನಗೆ ಕೊಡುತ್ತೇನೆ. ರಾಮ ಪ್ರೀತಿಗೋಸ್ಕರ ಕೊಡತಕ್ಕ ಇದನ್ನು ತೆಗೆದುಕೊಂಡು ಎಲೈ ರಾಘವನೇ ಸಂತೋಷವನ್ನು ಹೊಂದು. ಎಂದು ಮಂತ್ರವನ್ನು ಹೇಳಬೇಕು.

೧೩೦. ಈ ರೀತಿಯಾಗಿ ವಿಧಿಯಂತೆ ಪ್ರತಿಮಾ ದಾನವನ್ನು ಮಾಡಿ ದಕ್ಷಿಣೆಯನ್ನು ಕೊಡಬೇಕು. ಅನಂತರ ಶಕ್ತಿಯನ್ನತಿಕ್ರಮಿಸದಂತೆ ಭೂದಾನವನ್ನು ಮಾಡಬೇಕು. ಹೀಗೆಮಾಡಿದರೆ ಬ್ರಹ್ಮಹತ್ಯವೇ ಮುಂತಾದ ಪಾಪಗಳು ಹೋಗುತ್ತವೆ. ಸಂಶಯವಿಲ್ಲವು.

ಏವಂ ಶಿಷ್ಯ ಚೈತ್ರಮಾಸೇ ನವಮ್ಯಾಂ ಭೂಸುರಾಯ ಹಿ ।
ದಾನಂ ದೇಯಂ ರಾಘವಸ್ಯ ರಾಮಸಂತುಷ್ಟಿಹೇತವೇ ॥ ೧೩೧ ॥

ಅನ್ಯದ್ವಿಶೇಷಂ ವಕ್ಷ್ಯಾಮಿ ಚೈತ್ರೇ ಮಾಸಿ ಶೃಣುಷ್ವ ತಂ ।
ಚೈತ್ರಸ್ಯ ಶುಕ್ಲೈಕಾದಶ್ಯಾಂ ದೋಲಕಸ್ಥಂ ರಘೂತ್ತಮಂ ॥ ೧೩೨ ॥

ಪೂಜಯೇನ್ಮಾನವೋ ಭಕ್ತ್ಯಾ ಚೂತವೃಕ್ಷತಲಸ್ಥಿತಂ ।
ಚೈತ್ರಮಾಸಸ್ಯ ಶುಕ್ಲಾಯಾಮೇಕಾದಶ್ಯಾಂ ತು ವೈಷ್ಣವೈಃ ॥ ೧೩೩ ॥

ಆಂದೋಲನೀಯೋ ದೇವೇಶಸ್ಸಲಕ್ಷ್ಮೀಕೋ ಮಹೋತ್ಸವೈಃ ।
ದ್ವಾದಶ್ಯಾಂ ಚೈತ್ರಮಾಸಸ್ಯ ಶುಕ್ಲಾಯಾಂ ದಮನೋತ್ಸವಃ ॥ ೧೩೪ ॥

ಬೋಧಾಯನಾದಿಭಿಃ ಪ್ರೋಕ್ತಃ ಕರ್ತವ್ಯಃ ಪ್ರತಿವತ್ಸರಂ ।
ಊರ್ಜೇ ವ್ರತಂ ಮಧೌ ದೋಳಾ ಶ್ರಾವಣೇ ತಂತು ಪೂಜನಂ ।
ಚೈತ್ರೇ ಚ ದಮನಾರೋಪಮಕುರ್ವಾಣೋ ವ್ರಜತ್ಯಧಃ ॥ ೧೩೫ ॥

---

೧೩೧. ಎಲೈ ಶಿಷ್ಯನೇ ! ಚೈತ್ರಮಾಸದ ಶುದ್ಧ ನವಮಿಯ ದಿವಸ ಪ್ರತಿಮಾದಾನವನ್ನು ಪೂಜಿಸಿ ಮಾಡಬೇಕು. ಹಾಗೆ ಕೊಟ್ಟರೆ ರಾಮನು ಸಂತೋಷಗೊಳ್ಳುತ್ತಾನೆ.

೧೩೨. ಎಲೈ ಶಿಷ್ಯನೇ ! ಚೈತ್ರಮಾಸದಲ್ಲಿ ಮತ್ತೊಂದು ವಿಶೇಷವನ್ನು ಹೇಳುತ್ತೇನೆ. ಅದನ್ನು ಕೇಳು. ಚೈತ್ರ ಶುಕ್ಲ ಏಕಾದಶಿಯ ದಿವಸ ರಾಮನನ್ನು ಉಯ್ಯಾಲೆಯಲ್ಲಿಟ್ಟು ಮಾವಿನ ಮರದ ಕೆಳಗೆ ಪೂಜಿಸಬೇಕು.

೧೩೩-೧೩೪. ಚೈತ್ರ ಶುದ್ಧ ಏಕಾದಶಿಯ ದಿವಸ ವೈಷ್ಣವರಾದವರು ಮಾವಿನಮರದ ಕೆಳಗೆ ಉಯ್ಯಾಲೆಯನ್ನು ಕಟ್ಟಿ ಅದರಲ್ಲಿ ಸೀತೆಯನ್ನೂ, ರಾಮನನ್ನೂ ಇಟ್ಟು ಪೂಜಿಸಬೇಕು. ಚೈತ್ರಮಾಸದ ದ್ವಾದಶಿಯ ದಿವಸ ಆ ಸ್ವಾಮಿಗೆ ದಮನೋತ್ಸವವನ್ನು ಮಾಡಬೇಕು.

೧೩೫. ಹಾಗೆ ಮಾಡಬೇಕೆಂದು ಬೋಧಾಯನರು ಹೇಳಿರುವರು. ಪ್ರತಿವರ್ಷವೂ ಆ ರೀತಿಯಾಗಿ ಮಾಡಬೇಕು. ಕಾರ್ತಿಕದಲ್ಲಿ ವ್ರತವನ್ನೂ, ಚೈತ್ರದಲ್ಲಿ ಡೋಲೋತ್ಸವವನ್ನೂ, ಶ್ರಾವಣದಲ್ಲಿ ತಂತು ಪೂಜೆಯೆಂಬ ವಸ್ತ್ರಪೂಜೆಯನ್ನೂ, ಚೈತ್ರದಲ್ಲಿ ದಮನಾರೋಪಣೆಯನ್ನೂ ಮಾಡದಿರೆ ತಕ್ಕವನು ನರಕಭಾಗಿಯಾಗುತ್ತಾನೆ.

ವಹ್ನಿರ್ವಿರಿಂಚೋ ಗಿರಿಜಾ ಗಣೇಶಃ ।
ಫಣೀರ್ವಿಶಾಖೋ ದಿನಕೃನ್ಮಹೇಶಃ ।
ದುರ್ಗಾಂತಕೋ ವಿಶ್ವಹರಿಸ್ಸ್ಮರಶ್ಚ ।
ಶರ್ವಶ್ಶಶೀ ವೈ ತಿಥಿಷು ಪ್ರಪೂಜ್ಯಾಃ ॥ ೧೩೬ ॥

ಅಥ ಚೈತ್ರೇ ಪೌರ್ಣಿಮಾಯಾಂ ಭಕ್ತ್ಯಾ ರಾಮಂ ಪ್ರಪೂಜಯೇತ್ ।
ಸೀತಯಾ ದೋಳಕಸ್ಥಂ ವೈ ದಮನೇನ ಮಹೋತ್ಸವೈಃ ॥ ೧೩೭ ॥

ಚೈತ್ರೀ ಚಿತ್ರಾಯುತಾ ಚೇತ್ಸ್ಯಾತ್ ತದಾ ಪುಣ್ಯಾ ಮಹಾತಿಥಿಃ ।
ಜ್ಞೇಯಾ ಸರ್ವಾರ್ಥಿಕಾ ಸಾ ಹಿ ಸ್ನಾನದಾನಜಪಾದಿಷು ॥ ೧೩೮ ॥

ಸ್ತ್ರೀಭಿರ್ದೇಯಂ ಚಿತ್ರವಸ್ತ್ರಂ ತಸ್ಯಾಂ ಸೌಭಾಗ್ಯದಾಯಕಂ ।
ಸೀತಾರಾಮೌ ಚಿತ್ರವಸ್ತ್ರೈಃ ಪೂಜನೀಯೌ ಮಹೋತ್ಸವೈಃ ॥ ೧೩೯ ॥

---

೧೩೬. ಅಗ್ನಿ, ಬ್ರಹ್ಮ, ಗೌರಿ, ಗಣೇಶ, ನಾಗ, ಕುಮಾರಸ್ವಾಮಿ, ಸೂರ್ಯ, ಶಿವ, ದುರ್ಗೆ, ಯಮ, ವಿಶ್ವೇದೇವರು, ಹರಿ, ಸ್ಮರ, ಶರ್ವ, ಚಂದ್ರ ಇವರನ್ನು ಆವರವರ ತಿಥಿಗಳಿಗೆ ಅನುಸಾರವಾಗಿ ನೋಡಿಕೊಂಡು ಪೂಜಿಸಬೇಕು.

೧೩೭. ಚೈತ್ರ ಮಾಸದ ಪೂರ್ಣಿಮೆಯ ದಿವಸವೂ ಸೀತಾರಾಮರನ್ನು ಉಯ್ಯಾಲೆಯಲ್ಲಿಟ್ಟು ಡೋಲೋತ್ಸವವನ್ನು ಮಾಡಬೇಕು. ದಮನಾರೋಪಣವನ್ನೂ ಮಾಡಬೇಕು.

೧೩೮ ಚೈತ್ರಮಾಸದ ಹುಣ್ಣಿಮೆಯು ದಿವಸ ಚಿತ್ರಾನಕ್ಷತ್ರವಿದ್ದರೆ ಆ ತಿಥಿಯು ಬಹು ಪುಣ್ಯಕರವಾದುದು. ಆ ದಿನ ಸ್ನಾನ, ದಾನ, ಜಪಗಳನ್ನು ಮಾಡಿದರೆ ಬಹುವಾದ ಫಲವು ಬರುತ್ತದೆ. ಎಲ್ಲಾ ಇಷ್ಟಾರ್ಥಗಳೂ ಈಡೇರುತ್ತವೆ.

೧೩೯. ಹೆಂಗಸರು ಆ ಚಿತ್ರಾ ಪೂರ್ಣಿಮೆಯ ದಿವಸ ಚಿತ್ರವಸ್ತ್ರಗಳನ್ನು ದಾನಮಾಡಬೇಕು. ಅದು ಸೌಭಾಗ್ಯವನ್ನು ಹೆಚ್ಚಿಸುತ್ತದೆ. ಆ ದಿನ ಸೀತಾರಾಮರಿಗೆ ಚಿತ್ರವಸ್ತ್ರಗಳನ್ನುಡಿಸಿ ಮಹೋತ್ಸವದಿಂದ ಪೂಜಿಸಬೇಕು.

ಮಂದೇ ವಾರ್ಕೇ ಗುರೌ ವಾಪಿ ವಾರೇಷ್ವೇತೇಷು ಚಿತ್ರಿಕಾ ।
ತತ್ರಾಶ್ವಮೇಧಜಂ ಪುಣ್ಯಂ ಸ್ನಾನಶ್ರಾದ್ಧಾದಿಭಿರ್ಲಭೇತ್ ॥ ೧೪೦ ॥

ಸಂವತ್ಸರಕೃತಾರ್ಚಾಯಾಸ್ಸಾಫಲ್ಯಾ ಯಾಖಿಲಾಃ ಸುರಾಃ ।
ದಮನೇನಾರ್ಚಯೇಚ್ಚೈತ್ರ್ಯಾಂ ವಿಶೇಷೇಣ ರಘೂತ್ತಮಂ ॥ ೧೪೧ ॥

ಚೈತ್ರಸ್ನಾನೋದ್ಯಾಪನಂ ಚ ತಿಥೌ ತಸ್ಯಾಂ ಸ್ಮೃತಂ ಬುಧೈಃ ॥ ೧೪೨ ॥

ಅಥ ವೈಶಾಖಕೃಷ್ಣಾಯಾಂ ಪಂಚಮ್ಯಾಂ ಪರಮೋತ್ಸವೈಃ ।
ಸೀತಾರಾಮೌ ಪ್ರಪೂಜ್ಯಾಥ ದೋಳಕಸ್ಥಂ ತು ಬಂಧುಭಿಃ ॥ ೧೪೩ ॥

ಉದ್ಯಾಪನಂ ತತ್ರ ಕಾರ್ಯಂ ಮಹಾಫಲಮಭೀಪ್ಸುನಾ ।
ವೈಶಾಖೇ ಕೃಷ್ಣಪಕ್ಷೇ ತು ಚತುರ್ಥ್ಯಾಂ ಸಮುಪೋಷ್ಯ ಚ ॥ ೧೪೪ ॥

---

೧೪೦. ಈ ಚಿತ್ರಾ ಪೂರ್ಣಿಮೆಯು ಶನಿವಾರ, ಭಾನುವಾರ, ಗುರುವಾರಗಳಲ್ಲಿ ಬಂದರೆ ಆದಿನ ಸ್ನಾನಮಾಡಿ ಶ್ರಾದ್ಧಾದಿಗಳನ್ನು ಮಾಡಿದರೆ ಅಶ್ವಮೇಧ ಯಾಗವನ್ನು ಮಾಡಿದ ಪುಣ್ಯವು ಬರುವುದು.

೧೪೧. ಒಂದು ವರ್ಷಕಾಲವೂ ಮಾಡಿದ ಪೂಜೆಯು ಫಲಕ್ಕೋಸ್ಕರ ಚೈತ್ರಮಾಸದ ಹುಣ್ಣಿಮೆಯ ದಿವಸ ಎಲ್ಲಾ ದೇವತೆಗಳನ್ನೂ ವನದಿಂದ ಪೂಜಿಸಬೇಕು. ವಿಶೇಷವಾಗಿ ಶ್ರೀರಾಮನನ್ನು ಪೂಜಿಸಬೇಕು. ಹಾಗೆಮಾಡಿದರೆ ವರ್ಷದ ಫಲವೂ ಪೂರ್ತಿಯಾಗಿ ಸಿಕ್ಕುತ್ತದೆ.

೧೪೨. ಚೈತ್ರಸ್ನಾನದ ವ್ರತಪೂರ್ತಿಗೋಸ್ಕರವಾಗಿ ಆ ಚೈತ್ರ ಪೂರ್ಣಿಮೆಯ ದಿವಸ ಉದ್ಯಾಪನೆಯನ್ನು ಮಾಡಬೇಕು. ಅನಂತರ ಆ ವ್ರತವನ್ನು ಪೂರ್ತಿಮಾಡಬೇಕು.

೧೪೩. ವೈಶಾಖ ಬಹುಳ ಪಂಚಮಿಯ ದಿವಸ ಬಹುವಾದ ಉತ್ಸವದಿಂದ ಸೀತಾರಾಮನನ್ನು ಉಯ್ಯಾಲೆಯಲ್ಲಿಟ್ಟು ಬಂಧುಗಳೊಡನೆ ಕೂಡಿಕೊಂಡು ಪೂಜಿಸಬೇಕು.

೧೪೪. ಮಹಾ ಫಲವು ಬರಬೇಕಾದರೆ ಆ ವೈಶಾಖಕೃಷ್ಣ ಪಂಚಮಿಯ ದಿನ ಉದ್ಯಾಪನೆಯನ್ನು ಮಾಡಬೇಕು. ಆಗ ವೈಶಾಖ ಬಹುಳ ಚತುರ್ಥಿಯ ದಿವಸ ಉಪವಾಸವಿರಬೇಕು.

ನಿಶಾಯಾಂ ಚ ಪ್ರಕರ್ತವ್ಯಮಧಿವಾಸನಮುತ್ತಮಂ ।
ಶುಚೌ ದೇಶೇ ಮಂಡಪಾದಿ ಕೃತ್ವಾ ಪೂರ್ವೋಕ್ತವಚ್ಛುಭಂ ॥ ೧೪೫ ॥

ರಾಮಲಿಂಗಾತ್ಮಕೇ ಭದ್ರೇ ಧಾನ್ಯರಾಶೌ ಮಹತ್ತಮಂ ।
ಸಜಲಂ ಕಲಶಂ ಸ್ಥಾಪ್ಯ ತಾಮ್ರಪಾತ್ರಂ ತು ತನ್ಮುಖೇ ॥ ೧೪೬ ॥

ಸ್ಥಾಪ್ಯ ವಸ್ತ್ರೇ ದೋಳಕಸ್ಥಂ ರಾಮಚಂದ್ರಂ ಪ್ರಪೂಜಯೇತ್ ।
ಹೈಮೋ ವಾ ರಾಜತೋ ವಾಪಿ ದೋಳಕಸ್ತ್ರಿಪಲೈಃ ಸ್ಮೃತಃ ॥ ೧೪೭ ॥

ಹೈಮೀ ಪಲಮಿತಾ ರಾಮಮೂರ್ತಿಃ ಕಾರ್ಯಾ ಮನೋರಮಾ ।
ತಾವನ್ಮಿತಾ ರುಕ್ಮಮೂರ್ತಿಃ ಸೀತಾಯಾಶ್ಚಾಪಿ ಕಾರಯೇತ್ ॥ ೧೪೮ ॥

---

೧೪೫. ಆ ದಿನ ರಾತ್ರಿಯಲ್ಲಿ ಅಧಿವಾಸನವನ್ನು ಮಾಡುವುದು ಉತ್ತಮವು. ಶುಚಿಯಾದ ಪ್ರದೇಶದಲ್ಲಿ ಮಂಟಪವನ್ನು ಹಿಂದೆ ಹೇಳಿದಂತೆ ಚೆನ್ನಾಗಿ ಮಾಡಬೇಕು.

೧೪೬. ತಳಗಡೆಯಲ್ಲಿ ರಾಮಲಿಂಗಾತ್ಮಕ ಭದ್ರವನ್ನು ಇಟ್ಟು ಅದರಮೇಲೆ ಬಹುದೊಡ್ಡದಾಗಿ ಧಾನ್ಯದ ರಾಶಿಯನ್ನು ಹಾಕಿ ಅದರಮೇಲೆ ನೀರನ್ನು ತುಂಬಿದ ತಾಮ್ರದ ಕಲಶವನ್ನು ಇಟ್ಟು ಅದರಮೇಲೆ ಎದುರಿನಲ್ಲಿ ಒಂದು ತಾಮ್ರ ಪಾತ್ರೆಯನ್ನು ಇಡಬೇಕು.

೧೪೭. ಆ ಕಲಶಕ್ಕೆ ವಸ್ತ್ರವನ್ನು ಹೊದ್ದಿಸಬೇಕು. ಅದರೆದುರಿಗೆ ದೋಳಿಯಲ್ಲಿ ರಾಮಚಂದ್ರನನ್ನು ಇಟ್ಟು ಪೂಜಿಸಬೇಕು. ಆ ಡೋಲಿ (ತೊಟ್ಟಿಲನ್ನು) ಮೂರು ಪಲಗಳಷ್ಟು ತೂಕದಲ್ಲಿ ಚಿನ್ನದಿಂದಾಗಲಿ ಬೆಳ್ಳಿಯಿಂದಾಗಲಿ ಮಾಡಿಸಬೇಕು.

೧೪೮. ಅದರಲ್ಲಿಡುವ ರಾಮಮೂರ್ತಿಯನ್ನು ಒಂದು ಪಲ ತೂಕದ ಚಿನ್ನ ಅಥವಾ ಬೆಳ್ಳಿಯಲ್ಲಿ ಮಾಡಿಸಿರಬೇಕು. ಒಂದು ಪಲದಷ್ಟೆ ತೂಕವಿರುವ ಸೀತಾ ಪ್ರತಿಮೆಯನ್ನು ಮಾಡಿಸಬೇಕು.

ನಾನೋಪಚಾರೈಸ್ಸಂಪೂಜ್ಯ ರಾತ್ರೌ ಜಾಗರಣಂ ಚರೇತ್ ।
ನೃತ್ಯಗೀತಮಂಗಳಾದ್ಯೈಃ ಪುರಾಣಶ್ರವಣಾದಿಭಿಃ ॥ ೧೪೯ ॥

ಪ್ರಭಾತೇ ತಂ ಪುನಃ ಪೂಜ್ಯ ರಾಮಂ ಸೀತಾಸಮನ್ವಿತಂ ।
ಸಹಸ್ರಂ ಹವನಂ ಕಾರ್ಯಂ ತಿಲಾಜ್ಯಪಾಯಸಾದಿನಾ ॥ ೧೫೦ ॥

ಅರ್ಘ್ಯಣಂ ರಾಮಮಂತ್ರೇಣ ಕ್ಷೀರೇಣೈವ ಪ್ರಕಾರಯೇತ್ ।
ತತೋ ಗುರುಂ ಸಪತ್ನೀಕಂ ಸಂಪೂಜ್ಯ ವಸನಾದಿಭಿಃ ॥ ೧೫೧ ॥

ರಾಮಾಯ ಪ್ರಾರ್ಥಯೇದ್ಭಕ್ತ್ಯಾ ಪ್ರಬದ್ಧಕರಸಂಪುಟಃ ।
ಸಾರ್ಧಮಾಸದ್ವಯಂ ರಾಮ ವಸಂತೇ ತವ ಪೂಜನಂ ॥ ೧೫೨ ॥

೧೪೯, ಅನೇಕ ಬಗೆಯಾದ ಉಪಚಾರಗಳಿಂದ ಪೂಜಿಸಿ ರಾತ್ರಿಯಲ್ಲಿ ಜಾಗರಣೆಯನ್ನು ಮಾಡಬೇಕು. ಆಗ ನೃತ್ಯಗಳನ್ನು ಮಾಡುತ್ತ ಗೀತಗಳನ್ನು ಹಾಡುತ್ತ ಮಂಗಳವಾದ್ಯಗಳನ್ನು ಬಾರಿಸುತ್ತಲಿರಬೇಕು. ಪುರಾಣಶ್ರವಣವನ್ನು ಮಾಡುತ್ತಿರಬೇಕು.

೧೫೦. ಬೆಳಗಾದಮೇಲೆ ಎದ್ದು ಸ್ನಾನವನ್ನೂ, ನಿತ್ಯಕರ್ಮಗಳನ್ನೂ, ಮಾಡಿಕೊಂಡು ಸೀತಾಸಮನ್ವಿತರಾದ ರಾಮನನ್ನು ಮತ್ತೆ ಪೂಜಿಸಬೇಕು. ತುಪ್ಪ ಪಾಯಸಗಳಿಂದ ಸಾವಿರಬಾರಿ ಹೋಮಗಳನ್ನು ಮಾಡಬೇಕು.

೧೫೧. ರಾಮನ ಮೂಲಮಂತ್ರವನ್ನು ಹೇಳಿಕೊಂಡು ಹಾಲಿನಿಂದ ಅರ್ಘ್ಯವನ್ನು ಬಿಡಬೇಕು. ಅನಂತರ ಗುರುವನ್ನೂ ಅವನ ಹೆಂಡತಿಯನ್ನೂ ಬಟ್ಟೆ ಅಲಂಕಾರಗಳನ್ನು ಕೊಟ್ಟು ಪೂಜಿಸಬೇಕು.

೧೫೨. ಅನಂತರ ರಾಮನ ಎದುರಿಗೆ ನಿಂತುಕೊಂಡು ಕೈಗಳನ್ನು ಮುಗಿದುಕೊಂಡು ಇಂತೆಂದು ಪ್ರಾರ್ಥಿಸಿಕೊಳ್ಳಬೇಕು. ಎಲೈ ರಾಮನೇ! ವಸಂತ ಋತುವಿನಲ್ಲಿ ಒಂದೂವರೆ ತಿಂಗಳವರೆಗೆ ನಿಮ್ಮ ಪೂಜೆಯನ್ನು ಮಾಡಿದೆನು.

ದೋಳಿಕಸ್ಥಸ್ಯ ಜಾನಕ್ಯಾ ಯಥಾಶಕ್ತ್ಯಾ ಮಯಾಕೃತಂ ।
ಪ್ರಸೀದಾನೇನ ಶ್ರೀರಾಮ ಮಾಮುದ್ಧರ ಭವಾರ್ಣವಾತ್ ॥ ೧೫೩ ॥

ಏವಂ ಸಂಪ್ರಾರ್ಥ್ಯ ಶ್ರೀರಾಮಂ ತಾಮರ್ಚಾಂ ಮೂರ್ತಿಸಂಯುತಾಂ ।
ದದ್ಯಾತ್ಸ್ವಗುರವೇ ಭಕ್ತ್ಯಾ ತಂ ಪ್ರಣಮ್ಯ ಪುನಃ ಪುನಃ ॥ ೧೫೪ ॥

ಪಂಚಸಪ್ತತಿಯುಗ್ಮಾನಿ ಹ್ಯಷ್ಟತ್ರಿಂಶನ್ಮಿತಾನಿ ವಾ ।
ತದರ್ಧಾನ್ಯಥವಾ ಶಕ್ತ್ಯಾ ಭೋಜಯೇದ್ಗುರುಣಾ ಸುಖಂ ॥ ೧೫೫ ॥

ತತಸ್ಸ್ವಯಂ ಸುಹೃನ್ಮಿತ್ರೈಃ ಕಾರ್ಯಂ ವೈ ಭೋಜನಂ ಸುಖಂ ।
ಅಶಕ್ತೋಽಪಿ ಯಥಾಶಕ್ತ್ಯಾ ವ್ರತಮೇತಸ್ತು ಸರ್ವದಾ ॥ ೧೫೬ ॥

---

೧೫೩. ಅಂತೆಯೇ ಉಯ್ಯಾಲೆಯಲ್ಲಿ ನಿನ್ನನ್ನೂ, ಸೀತೆಯನ್ನೂ ಕೂರಿಸಿ ತೂಗುತ್ತ ನಿಮ್ಮನ್ನು ಶಕ್ತಿಯಿದ್ದ ಮಟ್ಟಿಗೆ ಪೂಜಿಸಿರುವೆನು. ಎಲೈ ರಾಮನೇ! ಇದರಿಂದ ನೀನು ಪ್ರಸನ್ನನಾಗಿ ನನ್ನನ್ನು ಈ ಸಂಸಾರ ಸಮುದ್ರದಿಂದ ಮೇಲಕ್ಕೆತ್ತು.

೧೫೪. ಆ ಶ್ರೀರಾಮನನ್ನು ಇಂತೆಂದು ಪ್ರಾರ್ಥಿಸಿಕೊಂಡು ಆ ಪೂಜೆ ಮಾಡಿರುವಂತೆಯೇ ಮೂರ್ತಿಯನ್ನು ತನ್ನ ಗುರುವಿಗೆ ಭಕ್ತಿಯಿಂದ ದಾನ ಮಾಡಬೇಕು. ಅನಂತರ ಆ ಗುರುವಿಗೆ ಸುಖವಾಗಿ ಭೋಜನವನ್ನು ಮಾಡಿಸಬೇಕು.

೧೫೫-೧೫೬. ಆ ಕಾಲದಲ್ಲಿ ಎಪ್ಪತ್ತೈದು ದಂಪತಿಗಳನ್ನಾಗಲಿ, ಮೂವತ್ತೆಂಟು ದಂಪತಿಗಳನ್ನಾಗಲಿ ಅಥವಾ ಹತ್ತೊಂಬತ್ತು ದಂಪತಿಗಳನ್ನಾಗಲಿ ಭೋಜನಕ್ಕೆ ಹೇಳಿ ತೃಪ್ತಿಪಡಿಸಬೇಕು. ಅನಂತರ ತಾನು ಸ್ನೇಹಿತರೊಡನೆಯೂ, ಬಂಧುಗಳೊಡನೆಯೂ ಊಟ ಮಾಡಬೇಕು. ಈ ವ್ರತವನ್ನು ಮಾಡಲು ಅಶಕ್ತನಾಗಿದ್ದರೂ ಸಾಧ್ಯವಾದ ಮಟ್ಟಿಗೆ ಯಾವಾಗಲೂ ಮಾಡಬೇಕು.

ಕರೋತು ರಾಮತುಷ್ಟ್ಯರ್ಥಂ ವಸಂತೇ ಪೂಜನಂ ವರಂ ।
ಏವಂ ಶಿಷ್ಯ ತ್ವಯಾ ಪೃಷ್ಟಂ ವಿಶೇಷಣ ಚ ಪೂಜನಂ ॥ ೧೫೭ ॥

ಸೀತಾರಾಮಸ್ಯ ತತ್ಪ್ರೋಕ್ತಂ ದೋಳಕಸ್ಥಸ್ಯ ತೇ ಮಯಾ ।

॥ ವಿಷ್ಣುದಾಸ ಉವಾಚ ॥

ಗುರೋ ತೇ ಪ್ರಷ್ಟುಮಿಚ್ಛಾಮಿ ಯತ್ತತ್ತ್ವಂ ವದವಿಸ್ತರಾತ್ ॥ ೧೫೮ ॥

ಕಯಾ ಕಾಮನಯಾ ಕಸ್ಯ ಕಾರ್ಯಂ ಪೂಜನಮುತ್ತಮಂ ।
ತತ್ಸರ್ವಂ ಕಥಯಸ್ವಾದ್ಯ ಮಯಿ ಕೃತ್ವಾ ಪರಾಂ ಕೃಪಾಂ ॥ ೧೫೯ ॥

॥ ರಾಮದಾಸ ಉವಾಚ ॥

ಸಮ್ಯಕ್ ಪೃಷ್ಟಂ ತ್ವಯಾ ವತ್ಸ ಸಾವಧಾನಮನಾಃ ಶೃಣು ।
ಬ್ರಹ್ಮವರ್ಚಸಕಾಮಸ್ತು ಯಜೇತ ಬ್ರಹ್ಮಣಸ್ಪತಿಂ ॥ ೧೬೦ ॥

---

೧೫೭. ರಾಮನ ತುಷ್ಟಿಗೋಸ್ಕರ ಈ ವಸಂತ ಪೂಜನವು ಬಹು ಶ್ರೇಷ್ಠವಾದುದು. ಎಲೈ ಶಿಷ್ಯನೇ! ಈ ರೀತಿಯಾಗಿ ನೀನು ಕೇಳಿದ ವಿಶೇಷ ಪೂಜೆಯನ್ನು ಹೇಳಿದ್ದೇನೆ. ಡೋಲಕದಲ್ಲಿ ಕೂರಿಸಿ ಸೀತಾರಾಮರನ್ನು ಪೂಜಿಸುವ ವಿಷಯವನ್ನು ಹೀಗೆ ವರ್ಣಿಸಿದ್ದೇನೆ.

೧೫೮-೧೫೯. ವಿಷ್ಣುದಾಸನು ಹೇಳಿದನು–ಎಲೈ ಗುರುವೇ! ಮತ್ತೊಂದು ವಿಷಯವನ್ನು ಕೇಳಬೇಕೆಂದಿದ್ದೇನೆ. ಅದನ್ನು ವಿಸ್ತಾರವಾಗಿ ಹೇಳು. ಯಾವ ಯಾವ ಇಷ್ಟಕ್ಕೋಸ್ಕರವಾಗಿ ಯಾವ ಯಾವ ದೇವರನ್ನು ಪೂಜಿಸಬೇಕು? ನನ್ನ ಮೇಲೆ ಹೆಚ್ಚಾದ ಕೃಪೆಯನ್ನಿಟ್ಟು ಅದೆಲ್ಲವನ್ನೂ ಕೂಡ ನನಗೆ ಹೇಳು.

೧೬೦. ರಾಮದಾಸನು ಹೇಳಿದನು—ಎಲೈ ವತ್ಸನೇ! ನೀನು ಕೇಳಿದುದು ಸರಿ. ಸಾವಧಾನವಾಗಿ ಕೇಳು. ಬ್ರಹ್ಮವರ್ಚಸ್ಸು ಬೇಕೆಂದು ಅಪೇಕ್ಷಿಸುವವನು ಬೃಹಸ್ಪತಿಯ ಯಜ್ಞವನ್ನು ಮಾಡಿ ತೃಪ್ತಿಪಡಿಸಬೇಕು.

ಇಂದ್ರಮಿಂದ್ರಿಯಕಾಮಸ್ತು ಪ್ರಜಾಕಾಮಃ ಪ್ರಜಾಪತೀನ್ ।
ದೇವೀಂ ಮಾಯಾಂ ತು ಶ್ರೀಕಾಮಸ್ತೇಜಸ್ಕಾಮೋ ವಿಭಾವಸುಂ ॥

ವಸುಕಾಮೋ ವಸೂನ್ ರುದ್ರಾನ್ ವೀರ್ಯಕಾಮೋಥ ವೀರ್ಯವಾನ್ ।
ಅನ್ನಾದಿಕಾಮಸ್ತ್ವದಿತಿಂ ಸ್ವರ್ಗಕಾಮೋದಿತೇಃ ಸುತಾನ್ ॥ ೧೬೨ ॥

ವಿಶ್ವಾನ್ ದೇವಾನ್ ರಾಜ್ಯಕಾಮಸ್ಸಾಧ್ಯಾನ್ ಸಂಸಾಧಕೋ ವಿಶಾಂ ।
ಆಯುಷ್ಕಾಮೋಶ್ವಿನೌ ದೇವೌ ಪುಷ್ಟಿಕಾಮ ಇಲಾಂ ಯಜೇತ್ ॥ ೧೬೩ ॥

ಪ್ರತಿಷ್ಠಾಕಾಮಃ ಪುರುಷೋ ರೋದಸೀ ಲೋಕಮಾತರೌ ।
ರೂಪಾಭಿಕಾಮೋ ಗಂಧರ್ವಾನ್ ಸ್ತ್ರೀಕಾಮೋಪ್ಸರಸೋರ್ವಶೀಂ ॥ ೧೬೪ ॥

ಆಧಿಪತ್ಯಕಾಮಃ ಸರ್ವೇಷಾಂ ಯಜೇತ ಪರಮೇಷ್ಠಿನಂ ।
ಯಜ್ಞಂ ಯಜೇದ್ಯಶಸ್ಕಾಮಃ ಕೋಶಕಾಮಃ ಪ್ರಚೇತಸಂ ॥ ೧೬೫ ॥

೧೬೧-೧೬೨. ಇಂದ್ರಿಯ ಕಾಮನು ಇಂದ್ರನನ್ನೂ, ಪ್ರಜಾಕಾಮನು ಪ್ರಜಾಪತಿಯನ್ನೂ, ಶ್ರೀಕಾಮನು ಮಾಯಾದೇವಿಯನ್ನೂ, ತೇಜಸ್ಕಾಮನು ಆದಿತ್ಯನನ್ನೂ, ವಸುಕಾಮನು ವಸುಗಳನ್ನೂ, ವೀರ್ಯಕಾಮನು ಏಕಾದಶ ರುದ್ರರನ್ನೂ, ಅನ್ನ ಕಾಮನು ಅದಿತಿಯನ್ನೂ, ಸ್ವರ್ಗಕಾಮನು ದೇವತೆಗಳನ್ನೂ ಯಜ್ಞಮಾಡಿ ತೃಪ್ತಿಪಡಿಸಬೇಕು.

೧೬೩-೧೬೫. ರಾಜ್ಯಕಾಮನು ವಿಶ್ವೇದೇವರನ್ನೂ, ಜನವಶ್ಯಕಾಮನು ಸಾಧ್ಯರನ್ನೂ, ಆಯುಷ್ಕಾಮನು ಅಶ್ವಿನೀ ದೇವತೆಗಳನ್ನೂ, ಪುಷ್ಟಿಕಾಮನು ಇಲಾ ದೇವತೆಯನ್ನೂ, ಪ್ರತಿಷ್ಟಾಕಾಮನು ದ್ಯಾವಾಭೂಮಿಗಳನ್ನೂ, ಸೌಂದರ್ಯ ಕಾಮನು ಗಂಧರ್ವರನ್ನೂ, ಸ್ತ್ರೀಕಾಮನು ಅಪ್ಸರಸ್ತ್ರೀಯಾದ ಊರ್ವಶಿಯನ್ನೂ, ಸರ್ವಾಧಿಪತ್ಯವನ್ನು ಬಯಸುವವನು ಪರಮೇಷ್ಠಿಯನ್ನೂ, ಯಶಸ್ಕಾಮನು ಯಜ್ಞಪುರುಷನನ್ನೂ, ಕೀರ್ತಿಕೋಶಗಳನ್ನು ಅಪೇಕ್ಷಿಸುವವನು ಪ್ರಚೇತಸ (ವರುಣ)ನನ್ನೂ ಯಜ್ಞದಿಂದ ಪೂಜಿಸಬೇಕು.

ವಿದ್ಯಾಕಾಮಸ್ತು ಗಿರಿಶಂ ದಾಂಪತ್ಯಾರ್ಥಮುಮಾಂ ಸತೀಂ ।
ಧರ್ಮಾರ್ಥಮುತ್ತಮಶ್ಲೋಕಂ ತಂತುಂ ತನ್ವನ್ ಪಿತೄನ್ ಯಜೇತ್ ॥೧೬೬॥

ರಕ್ಷಾಕಾಮಃ ಪುಣ್ಯಜನಾನೋಜಸ್ಕಾಮೋ ಮರುದ್ಗಣಾನ್ ।
ರಾಜ್ಯಕಾಮೋ ಮನೂನ್ ದೇವಾನ್ ನಿರೃತಿಂ ತ್ವಭಿಚರನ್ ಯಜೇತ್ ॥೧೬೭॥

ಕಾಮಕಾಮೋ ಯಜೇತ್ಸೋಮಮಕಾಮಃ ಪುರುಷಂ ಪರಂ ।
ಅಕಾಮಸ್ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ ॥ ೧೬೮ ॥

ತೀವ್ರೇಣ ಭಕ್ತಿಯೋಗೇನ ಯಜೇತ ರಘುನಂದನಂ ।
ರಾಮೇಣ ಸದೃಶೋ ದೇವೋ ನ ಭೂತೋ ನ ಭವಿಷ್ಯತಿ ॥ ೧೬೯ ॥

ತಸ್ಮಾತ್ಸರ್ವಪ್ರಯತ್ನೇನ ರಾಮಚಂದ್ರಂ ಪ್ರಪೂಜಯೇತ್ ।
ತಸ್ಯಾದ್ಯ ವರ್ಣಸಾಮರ್ಥ್ಯಾದ್ಯದ್ಯದ್ವಸ್ತ್ವತ್ರ ರಾದಿಕಂ ॥ ೧೭೦ ॥

೧೬೬-೧೬೮. ವಿದ್ಯಾಕಾಮನು ಗಿರೀಶನನ್ನೂ, ದಾಂಪತ್ಯ ಸುಖವನ್ನು ಅಪೇಕ್ಷಿಸುವವನು ಉಮಾದೇವಿಯನ್ನೂ, ಧರ್ಮಾರ್ಥಗಳನ್ನು ಅಪೇಕ್ಷಿಸುವವನು ಪಿತೃದೇವತೆಗಳನ್ನೂ, ರಕ್ಷಾಕಾಮನು ಪುಣ್ಯ ಜನಗಳನ್ನೂ, ಓಜಸ್ಕಾಮನು ಮರುದ್ಗಣಗಳನ್ನೂ, ರಾಜ್ಯಕಾಮನು ಮನುದೇವತೆಗಳನ್ನೂ, ಆಭಿಚಾರಿಕ ಕಾಮನು ನಿರಋತಿಯನ್ನೂ, ಕಾಮಾಭಿಲಾಷೆಯುಳ್ಳವನು ಸೋಮನನ್ನೂ, ನಿಷ್ಕಾಮಾಭಿಲಾಷಿಯು ಪರಮಾತ್ಮನನ್ನೂ ಯಜ್ಞದಿಂದ ಆರಾಧಿಸಬೇಕು.

೧೬೯. ನಿಷ್ಕಾಮನಾಗಲೀ, ಮೋಕ್ಷಕಾಮನಾಗಲಿ, ಸರ್ವಕಾಮನಾಗಲಿ ಉದಾರ ಮನಸ್ಸುಳ್ಳವನು ತೀವ್ರವಾದ ಭಕ್ತಿಯೋಗದಿಂದ ಶ್ರೀರಾಮನನ್ನು ಪೂಜಿಸಬೇಕು. ರಾಮನಿಗೆ ಸಮಾನವಾದ ದೇವರು ಹಿಂದೆ ಇರಲೂ ಇಲ್ಲ. ಮುಂದೆ ಇರುವುದೂ ಇಲ್ಲ.

೧೭೦. ಆದ್ದರಿಂದ ಸರ್ವ ಪ್ರಯತ್ನದಿಂದಲೂ ಕೂಡ ರಾಮಚಂದ್ರನನ್ನು ಪೂಜಿಸಬೇಕು. ಆ ರಾಮನ ಆ ದಿವರ್ಣವಾದ ರೇಫದ ಸಾಮರ್ಥ್ಯದಿಂದ ಯಾವ ಯಾವ ವಸ್ತುಗಳು ಶ್ರೇಷ್ಠ ವಸ್ತುಗಳಾದುವೆಂಬುದನ್ನು ಹೇಳುತ್ತೇನೆ ಕೇಳು.

ಪರಂ ಶ್ರೇಷ್ಠತ್ವಮಾಪನ್ನಂ ವಿಸ್ತರೇಣ ವದಾಮ್ಯಹಂ ।
ರುಕ್ಮಂ ರತ್ನಂ ರಥೋ ರಾಮಾ ರಾಕ್ಷಸೋ ರಜತಂ ರಜಃ ॥ ೧೭೧ ॥

ರಕ್ಷಾ ರಣೋ ರಮಾ ರಕ್ತಂ ರಜಕೋ ರಾಗರಾಮಠೌ ।
ರಾಜ್ಯಂ ರಜಸ್ವಲಾ ರಾತ್ರೀ ರವೀ ರಾಜೀವಮೇವ ಚ ॥ ೧೭೨ ॥

ಏವಮಾದೀನ್ಯನೇಕಾನಿ ಶ್ರೇಷ್ಠಾನ್ಯೇವಾತ್ರ ಭೋ ದ್ವಿಜ ।
ರುಕ್ಮಂ ಪೀತಂ ಮಹಾರ್ಘಂ ಚ ರತ್ನಂ ರಮ್ಯಂ ಸುದುರ್ಲಭಂ ॥ ೧೭೩ ॥

ರಥೋ ಯಾನಂ ವರಿಷ್ಠಸ್ಯ ರಾಮಾ ಯಸ್ಯಾ ಇದಂ ಜಗತ್ ।
ರಾಕ್ಷಸೋ ದೇವಭಯದೋ ರಜತಂ ತತ್ಸುದುರ್ಲಭಂ ॥ ೧೭೪ ॥

ರಜಸ್ಸಾಕ್ಷಾತ್ಪ್ರಮಾಣಂ ನಿತ್ಯಸ್ತೋತ್ರ ಪ್ರಕೀರ್ತ್ಯತೇ ।
ರಕ್ಷಾ ರಕ್ಷಾಕರೀ ಜ್ಞೇಯಾ ರಣೋ ಜಯಕರಃ ಸ್ಮೃತಃ ॥ ೧೭೫ ॥

೧೭೧-೧೭೨. ರುಕ್ಮ (ಚಿನ್ನ) ರತ್ನ, ರಥ, ರಾಮಾ, ರಾಕ್ಷಸ, ರಜತ (ಬೆಳ್ಳಿ) ರಜ (ರಜೋಗುಣ) ರಕ್ಷೆ, ರಮಾ (ಲಕ್ಷ್ಮಿಯು) ರಕ್ತ, ರಜಕ, ರಾಗ, ರಾಮಠ (ಇಂಗು) ರಾಜ್ಯ, ರಜಸ್ವಲಾ, ರಾತ್ರಿ, ರವಿ, ರಾಜೀವ.

೧೭೩. ಎಲೈ ದ್ವಿಜನೇ! ಇವೇ ಮುಂತಾದುವು ಬಹು ಶ್ರೇಷ್ಠತೆಯನ್ನು ಹೊಂದಿವೆ. ರುಕ್ಮವೆಂಬುದು ಚಿನ್ನವು, ಶ್ರೇಷ್ಠವಾದುದು. ಹಳದಿಯ ಬಣ್ಣಕ್ಕಿರುವುದು. ರತ್ನವು ಬಹು ರಮ್ಯವಾಗಿರುವುದು. ಸುಲಭವಾಗಿ ಸಿಕ್ಕುವುದೇ ಇಲ್ಲ.

೧೭೪. ರಥವೆಂಬುದು ಯಾನವು, ಉತ್ತಮವಾದುದು. ರಾಮಾ ಎಂದರೆ ಸುಂದರಿಯಾದ ಹೆಂಗಸು, ಇವಳು ಯಾರಿಗಿರುವಳೋ ಅವನಿಗೆ ಈ ಪ್ರಪಂಚದಲ್ಲಿ ಸುಖವಿರುವುದು. ರಾಕ್ಷಸರು ದೇವತೆಗಳಿಗೂ ಕೂಡ ಭಯವನ್ನುಂಟು ಮಾಡುವವರು. ರಜತವೆಂದರೆ ಬೆಳ್ಳಿಯು. ಅದು ಬಹು ಬೆಲೆಯುಳ್ಳದ್ದು. ಅದು ಸಿಕ್ಕುವುದು ಕಷ್ಟವು.

೧೭೫. ರಜಸ್ಸು ಎಂದರೆ ಸಾಕ್ಷಾತ್ಪ್ರಮಾಣವು. ಅದು ಯಾವಾಗಲೂ ಇರತಕ್ಕದ್ದು. ನಿತ್ಯ ಪದಾರ್ಥವು. ರಕ್ಷೆಯೆಂಬುದು ಎಲ್ಲರಿಗೂ ರಕ್ಷೆಯನ್ನುಂಟು ಮಾಡತಕ್ಕದ್ದು. ರಣವೆಂದರೆ ಯುದ್ಧವು, ಅದು ಜಯಕರವಾದುದು.

ರಾಮಾ ಸಾ ದುರ್ಲಭಾ ತ್ವತ್ರ ರಕ್ತೇಽಸ್ತಿ ರಕ್ತೈತಾ ವರಾ ।
ರಜಕೋ ನಿರ್ಮಲಕರೋ ರಾಗಃ ಪ್ರೀತಿಸ್ಸುಖಪ್ರದಾ ॥ ೧೭೬ ॥

ರಾಮಠಶ್ಶುದ್ಧಿದೋಽನ್ನಸ್ಯ ರುಚಿದಶ್ಚ ಪ್ರಕೀರ್ತಿತಃ ।
ರಾಜ್ಯಂ ಸೌಖ್ಯಕರಂ ಶ್ರೇಷ್ಠಂ ಪುತ್ರದಾ ಸಾ ರಜಸ್ವಲಾ ॥ ೧೭೭ ॥

ವಿಶ್ರಾಂತಿದಾಯಿನೀ ರಾತ್ರಿರ್ಲೋಕಚಕ್ಷೂ ರವಿಃ ಸ್ಮೃತಃ ।
ರಾಜೀವಂ ತತ್ಪ್ರಿಯಂ ಲಕ್ಷ್ಮೀಮಂದಿರಂ ಮಂಗಳಪ್ರದಂ ॥ ೧೭೮ ॥

ಏವಂ ಯದ್ಯದ್ರವರ್ಣಾದ್ಯಂ ತತ್ತಚ್ಛ್ರೇಷ್ಠಂ ಭುವಿ ಸ್ಮೃತಂ ।
ರಾಮಾದ್ಯವರ್ಣಸಾಮರ್ಥ್ಯಾತ್ ವಿಷ್ಣುದಾಸ ಮಯೇರಿತಂ ॥ ೧೭೯ ॥

ಅನ್ಯಚ್ಛಿಷ್ಯ ಶೃಣುಷ್ವ ತ್ವಂ ಯನ್ಮಯಾ ಕಥ್ಯತೇ ತವ ।
ಯಥಾ ಪ್ರೋಕ್ತಾ ರಾಮನಾಮಮುದ್ರಾ ತವ ಮಯಾ ಶುಭಾ ॥ ೧೮೦ ॥

---

೧೭೬. ರಮಾ ಎಂದರೆ ಲಕ್ಷ್ಮಿಯು, ಐಶ್ವರ್ಯವು. ಅದು ಎಲ್ಲರಿಗೂ ಸಿಕ್ಕುವುದಿಲ್ಲ. ಕಷ್ಟವಾದುದು. ರಕ್ತವೆಂದರೆ ಸಂತೋಷವನ್ನು ಕೊಡತಕ್ಕದ್ದು. ಅದು ಶ್ರೇಷ್ಠವಾದುದು. ರಜಕನೆಂದರೆ ಅಗಸನು. ನಿರ್ಮಲವನ್ನಾಗಿ ಮಾಡುವವನು. ರಾಗವೆಂದರೆ ಪ್ರೀತಿಯನ್ನೂ, ಸುಖವನ್ನೂ ಕೊಡತಕ್ಕದ್ದು.

೧೭೭. ರಾಮಠವೆಂದರೆ ಇಂಗು. ಅದು ಅನ್ನವನ್ನು ಶುದ್ಧವನ್ನಾಗಿ ಮಾಡುತ್ತದೆ. ರುಚಿಯನ್ನೂ ಕೊಡತಕ್ಕದ್ದು. ರಾಜ್ಯವು ಸೌಖ್ಯವನ್ನುಂಟು ಮಾಡುವುದು. ಬಹು ಉತ್ತಮವಾದುದು. ರಜಸ್ವಲೆಯೆಂದರೆ ಪುಷ್ಪಿಣಿಯು. (ಮುಟ್ಟಾದವಳು) ಆಕೆಯು ಮುಕ್ತಿಯನ್ನು ಕೊಡತಕ್ಕ ಮಗನನ್ನು ಕೊಡುತ್ತಾಳೆ.

೧೭೮-೧೮೦. ರಾತ್ರಿಯೆಂದರೆ ವಿಶ್ರಾಂತಿಯನ್ನು ಕೊಡತಕ್ಕದ್ದು ರವಿಯೆಂದರೆ ಲೋಕಕ್ಕೆ ಕಣ್ಣಾಗಿರುವವನು. ರಾಜೀವವೆಂದರೆ ಕಮಲವು. ಅದು ಸೂರ್ಯನಿಗೆ ಪ್ರೀತಿಕರವಾದುದು. ಅಲ್ಲದೆ ಅದು ಲಕ್ಷ್ಮಿಗೆ ಮನೆಯು. ಈ ರೀತಿಯಾಗಿ ಯಾವು ಯಾವುದು ರಾಮನ ಹೆಸರಿನ ವರ್ಣದಲ್ಲಿ ಮೊದಲನೆಯ ವರ್ಣವನ್ನು ತೆಗೆದು ಕೊಂಡಿವೆಯೋ ಅವೆಲ್ಲವೂ ಕೂಡ ಶ್ರೇಷ್ಠವಾದುವು. ಎಲೈ ವಿಷ್ಣುದಾಸನೇ! ರಾಮನ ಆದಿಯ ವರ್ಣವನ್ನು ಹೊಂದಿರುವುದರಿಂದಲೇ ಅದಕ್ಕೆ ಆ ಸಾಮರ್ಥ್ಯ ಬಂದಿರುವುದೆಂದು ತಿಳಿ. ಎಲೈ ಶಿಷ್ಯನೇ! ನಿನಗೆ ನಾನು ರಾಮನಾಮ ಮುದ್ರೆಯನ್ನು ಹೇಳಿದೆನಷ್ಟೆ. ಅದರಲ್ಲಿ ಶ್ರೇಷ್ಠವಾದ ವಿಷಯವನ್ನು ಹೇಳುತ್ತೇನೆ, ಮನಸ್ಸಿಟ್ಟು ಕೇಳು.

ತಥಾ ನಾನ್ಯಸ್ಯ ದೇವಸ್ಯ ನಾಮಮುದ್ರಾ ಪ್ರಜಾಯತೇ ।
ರಾಮನಾಮ ವಿನಾ ನಾಮಮುದ್ರಿಕಾಯಾಂ ಸ್ಫುಟಾಕ್ಷರಂ ॥ ೧೮೧ ॥

ನ ಕದಾ ದೃಶ್ಯತೇ ಸ್ಪಷ್ಟಮೇತಚ್ಚ ಮಹದದ್ಭುತಂ ।
ಅತ್ರ ಪ್ರಭಾವೋ ರಾಮಸ್ಯ ತ್ವಂ ವಿದ್ಧಿ ದ್ವಿಜಪುಂಗವ ॥ ೧೮೨ ॥

ಅತ ಏವ ರಾಮನಾಮ ಕಾಶ್ಯಾಂ ವಿಶ್ವೇಶ್ವರಸ್ಸದಾ ।
ಸ್ವಯಂ ಜಪ್ತ್ವೋಪದಿಶತಿ ಜಂತೂನಾಂ ಮುಕ್ತಿಹೇತವೇ ॥ ೧೮೩ ॥

ಸಂಸಾರಾರ್ಣವಸಂಮಗ್ನಂ ನರಂ ಯಸ್ತಾರಯೇನ್ಮನುಃ ।
ಸ ಏವ ತಾರಕಸ್ತತ್ರ ರಾಮಮಂತ್ರಃ ಪ್ರಕಥ್ಯತೇ ॥ ೧೮೪ ॥

ತಾರಕಾಖ್ಯಸ್ತ್ವಯಂ ರಾಮನಾಮಮಂತ್ರೋ ನ ಚೇತರಃ ।
ಅತ ಏವಾಂತಕಾಲೇಪಿ ಮರ್ತುಕಾಮನರಸ್ಯ ಚ ॥ ೧೮೫ ॥

೧೮೧-೧೮೨. ಈ ರೀತಿಯಾದ ನಾಮ ಮುದ್ರೆಯು ಬೇರೆ ಯಾವ ದೇವರಿಗೂ ಇರುವುದಿಲ್ಲ. ಮುದ್ರಿಕೆಗಳಲ್ಲಿ ರಾಮನಾಮದ ಸ್ಫುಟಾಕ್ಷರವಿಲ್ಲದ ಮುದ್ರೆಯೇ ಇರುವುದಿಲ್ಲ. ಅಂತಹ ಮುದ್ರೆಯು ಎಲ್ಲಿಯೂ, ಯಾವಾಗಲೂ ಕಾಣುವುದೇ ಇಲ್ಲ. ಅದು ಬಹು ಆಶ್ಚರ್ಯಕರವು. ಇದೆಲ್ಲವನ್ನೂ ಕೇಳಿ ಬರೆದ ರಾಮನಾಮ ಪ್ರಭಾವವು ಎಷ್ಟರಮಟ್ಟಿಗೆ ಇದೆಯೆಂಬುದನ್ನು ನೀನು ತಿಳಿದುಕೊ.

೧೮೩. ಆದ್ದರಿಂದಲೇ ಈ ರಾಮನಾಮವನ್ನು ವಿಶ್ವೇಶ್ವರನು ಕಾಶಿಯಲ್ಲಿ ತಾನು ಜಪಿಸಿಕೊಂಡಿರುತ್ತ ಜಂತುಗಳಿಗೆ ಮುಕ್ತಿಯಾಗುವುದಕ್ಕೋಸ್ಕರ ಆ ಕಾಶಿಯಲ್ಲಿ ಉಪದೇಶಮಾಡುತ್ತಿರುವನು.

೧೮೪. ಸಂಸಾರವೆಂಬ ಸಮುದ್ರದಲ್ಲಿ ಮುಳುಗಿರುವ ಮನುಷ್ಯನನ್ನು ಯಾವ ಮಂತ್ರವು ಮೇಲಕ್ಕೆತ್ತಿ ಉದ್ಧಾರ ಮಾಡುವುದೋ ಅದೇ ತಾರಕ ಮಂತ್ರವೆಂಬುದು. ಅದೇ ಆ ರಾಮನಾಮದ ರೂಪವಾಗಿರುವುದು.

೧೮೫-೧೮೬. ರಾಮನಾಮದ ಮಂತ್ರಕ್ಕೆ ತಾರಕ ಮಂತ್ರವೆಂದು ಹೆಸರು ಬಂದಿರುವುದು. ಮತ್ತೊಂದಕ್ಕೆ ಆ ಶಕ್ತಿಯಿಲ್ಲದಿರುವುದರಿಂದ ಆ ಹೆಸರು ಬಂದಿರುವುದಿಲ್ಲ. ಆದ್ದರಿಂದಲೇ ಸಾಯುತ್ತಿರುವ ಮನುಷ್ಯನಿಗೆ ಕೊನೆಯ

ಕರ್ಣೇ ಸರ್ವತ್ರ ದೇವೇಶ ರಾಮನಾಮೋಪದಿಶ್ಯತೇ ।
ಅಂತಕಾಲೇ ನೃಣಾಂ ರಾಮಸ್ಮರಣಂ ಚ ಮುಹುರ್ಮುಹುಃ ॥ ೧೮೬ ॥

ಇತಿ ಕುರ್ವಂತ್ಯುಪದೇಶಂ ಮಾನವಾ ಮುಕ್ತಿಹೇತವೇ ।
ಅನ್ಯೈಶ್ಚಾಪಿ ಶವವಾಹೈಸ್ಸದಾ ಲೋಕೈರ್ಮುಹುರ್ಮುಹುಃ ॥ ೧೮೭ ॥

ರಾಮನಾಮ್ನೈವ ಮುಕ್ತ್ಯರ್ಥಂ ಶವಸ್ಯ ಹರಿಕೀರ್ತನಂ ।
ರಾಮನಾಮಾತ್ಪರೋ ಮಂತ್ರೋ ನ ಭೂತೋ ನ ಭವಿಷ್ಯತಿ ॥ ೧೮೮ ॥

ರಾಮನಾಮ್ನೋ ಜಪೋ ನಿತ್ಯಂ ಕ್ರಿಯತೇ ಶಂಭುನಾಪಿ ಚ ।
ಪಾರ್ವತ್ಯಾ ನಾರದೇನಾಪಿ ವಾಯುಪುತ್ರಾದಿಭಿಸ್ಸದಾ ॥ ೧೮೯ ॥

ರಮಯತಿ ಜನಾನ್ ರಾಮೋ ರಮತೇ ವಾ ಸದಾತ್ಮನಿ ।
ರಾಕ್ಷಸಾನಾಂ ಮಾರಣಾದ್ವಾ ರಾಮನಾಮ ಮಹತ್ತಮಂ ॥ ೧೯೦ ॥

ಕಾಲದಲ್ಲಿ ಕಿವಿಯಲ್ಲಿ ಈ ರಾಮನಾಮವನ್ನು ಎಲ್ಲಾ ದೇಶಗಳಲ್ಲಿಯೂ ಉಪದೇಶ ಮಾಡುತ್ತಾರೆ. ಆದ್ದರಿಂದಲೇ ಸಾಯುವವರ ಸಮೀಪದಲ್ಲಿದ್ದುಕೊಂಡು ಸಾಯುವವರ ಬಂಧುಗಳು ತಾವೂ ಅವನಿಗೆ ಕೇಳುವಂತೆ ರಾಮನಾಮವನ್ನು ಹೇಳುತ್ತ ಅವನ ಬಾಯಿಯಲ್ಲಿಯೂ ಹೇಳಿಸುತ್ತಿರುವರು.

೧೮೭–೧೮೮. ಈ ರೀತಿಯಾಗಿ ಜನರು ಮುಕ್ತಿಗೋಸ್ಕರವಾಗಿ ರಾಮನಾಮವನ್ನು ಹೇಳುತ್ತಿರುವರು. ಇದೂ ಅಲ್ಲದೆ ಶವವನ್ನು ಹೊತ್ತುಕೊಂಡು ಹೋಗುವವರೂ ಕೂಡ ಆಗಾಗ್ಗೆ ರಾಮನಾಮವನ್ನು ಹೇಳುತ್ತ ಹೋಗುತ್ತಿರುವರು. ಅದು ಆ ಶವಕ್ಕೆ ಮುಕ್ತಿಯನ್ನು ಕೊಡುತ್ತದೆ. ರಾಮನಾಮಕ್ಕಿಂತಲೂ ಉತ್ತಮವಾದ ಮಂತ್ರವು ಹಿಂದೆಯೂ ಇರಲಿಲ್ಲ. ಮುಂದೆಯೂ ಹುಟ್ಟುವುದಿಲ್ಲ.

೧೮೯. ಶಂಭುವೂ ಕೂಡ ಯಾವಾಗಲೂ ರಾಮನಾಮದ ಜಪವನ್ನೇ ಮಾಡುತ್ತಿರುವನು. ಪಾರ್ವತಿಯೂ, ನಾರದನೂ ವಾಯುಪುತ್ರನಾದ ಹನುಮಂತನೂ, ಯಾವಾಗಲೂ ರಾಮ ಮಂತ್ರವನ್ನು ಜಪಿಸುತ್ತಿರುವರು.

೧೯೦. ಜನರನ್ನು ರಮಿಸುವಂತೆ, (ಸುಖಿಸುವಂತೆ) ಮಾಡುವುದರಿಂದಲೂ ಆ ರಾಮನು ಆತ್ಮನಲ್ಲಿಯೇ ರಮಿಸುತ್ತಿರುವುದರಿಂದಲೂ ಅವನಿಗೆ ರಾಮನೆಂಬ ಹೆಸರು ಬಂದಿತು. ರಾಕ್ಷಸರನ್ನು ಕೊಲ್ಲುವುದರಿಂದಲೂ ಈ ರಾಮನಾಮವು ಬಹು ಶ್ರೇಷ್ಠವಾದುದು.

ರಸಾತಲಾದ್ರವರ್ಣೋ ಹಿ ಹ್ಯಕಾರೋಽವನಿಸಂಭವಃ ।
ಮಹಲ್ಲೋಕಾನ್ಮಕಾರಶ್ಚ ತ್ರಿವರ್ಣಾತ್ಮಕಮುಚ್ಯತೇ ॥ ೯೯೧ ॥

ರಕಾರೇಣ ನಿಜಂ ಭಕ್ತಂ ಭವಾಬ್ಧೇಃ ಪರಿರಕ್ಷತಿ ।
ಆಕಾರೇಣಾತಿಸೌಖ್ಯಂ ಹಿ ಸ್ವಭಕ್ತಸ್ಯ ಕರೋತಿ ಯತ್ ॥ ೯೯೨ ॥

ಮನೋರಥಾನ್ಮಕಾರೇಣ ದದಾತಿ ಸ್ವಜನಸ್ಯ ಯತ್ ।
ಅಥವಾ ನಿಜಭಕ್ತಸ್ಯ ಮರಣಾದಿ ಮುಹುರ್ಮುಹುಃ ॥ ೯೯೩ ॥

ನಿವಾರಯತಿ ಯಚ್ಛ್ರೇಷ್ಠಂ ರಾಮನಾಮ ಪರಂ ತತಃ ।
ಅಯಮೇವ ಸದಾ ಜಪ್ಯೋ ರಾಮೇತಿ ದ್ವ್ಯಕ್ಷರೋ ಮನುಃ ॥ ೯೯೪ ॥

ಇತಿ ಶ್ರೀ ಶತಕೋಟಿರಾಮಚರಿತಾಂತರ್ಗತ ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಮನೋಹರಕಾಂಡೇ ರಘುನಾಥಸ್ಯ ವಿಶೇಷಕಾಲ ಪರತ್ವೇನ ಪೂಜಾವಿಸ್ತಾರೋ ನಾಮ ನವಮಸ್ಸರ್ಗಃ ಸಮಾಪ್ತಃ

---

೯೯೧. 'ರ' ಎಂಬ ವರ್ಣವು ರಸಾತಲದಲ್ಲಿರುವುದು. 'ಆ' ವರ್ಣವು ಅವನಿಯಲ್ಲಿರುವುದು. ಮಹೋ ಲೋಕದಲ್ಲಿ 'ಮ' ಕಾರವು ಇರುವುದು. ಈ ಮೂರು ಲೋಕಗಳಿಂದಲೂ ಕೂಡಿದ ಅಕ್ಷರಗಳು "ರಾಮ" ಎಂದಾಗಿದೆ.

೯೯೨-೯೯೩. 'ರ' ಕಾರವು ತನ್ನ ಭಕ್ತನಾದವನನ್ನು ಸಂಸಾರ ಸಮುದ್ರದಿಂದ ಪಾರುಗಾಣಿಸುತ್ತದೆ. 'ಆ' ಕಾರವು ಅತಿ ಸೌಖ್ಯವನ್ನು ಭಕ್ತನಿಗೆ ಕೊಡುತ್ತದೆ. 'ಮ' ಕಾರವು ಭಕ್ತರ ಮನೋರಥಗಳನ್ನು ಪೂರ್ತಿಗೊಳಿಸುತ್ತದೆ. ಅಲ್ಲದೆ ಭಕ್ತನು ಆಗಾಗ್ಗೆ ಹೊಂದಬಹುದಾದ ಮರಣವನ್ನು ತಪ್ಪಿಸಿ ಆ ಮಕಾರವು ಕಾಪಾಡುತ್ತದೆ.

೯೯೪. ಆದ್ದರಿಂದಲೇ ಈ ರಾಮನಾಮವು ಬಹು ಶ್ರೇಷ್ಠವು ಎನಿಸಿಕೊಂಡಿರುವುದು. ಆದ್ದರಿಂದಲೇ ಈ ರಾಮ ಎಂಬುವ ಎರಡಕ್ಷರದ ಮಂತ್ರವನ್ನು ಯಾವಾಗಲೂ ಜಪಮಾಡುತ್ತಿರಬೇಕು.

ಇಂತು ಶ್ರೀ ವಾಲ್ಮೀಕಿ ವಿರಚಿತವಾದ ಶತಕೋಟಿರಾಮಾಯಣಾಂತರ್ಗತವಾದ ಶ್ರೀ ಆನಂದರಾಮಾಯಣದ ಮನೋಹರಕಾಂಡದಲ್ಲಿ ರಾಮನ ವಿಶೇಷ ಕಾಲದ ಪೂಜೆಗಳ ವಿಸ್ತಾರಕಥನವೆಂಬ ಒಂಭತ್ತನೆಯ ಸರ್ಗವು ಮುಗಿದುದು.

|| ಶ್ರೀರಸ್ತು ||

ಶ್ರೀಮದಾನಂದರಾಮಾಯಣದ ಮನೋಹರಕಾಂಡದಲ್ಲಿ ಒಂಭತ್ತನೆಯ ಸರ್ಗದ ಸಾರಾಂಶವು

ಶ್ರೀರಾಮಚಂದ್ರನ ವಿಶೇಷ ಪೂಜೆಯನ್ನು ಮಾಘ ಮಾಸದ ಶುಕ್ಲಪಕ್ಷದ ಪಂಚಮಿಯಿಂದ ಮೊದಲು ಮಾಡಿಕೊಂಡು ಎರಡೂವರೆ ತಿಂಗಳುವರೆಗೆ ಮಾಡ ಬಹುದು. ಆ ಸಮಯದಲ್ಲಿ ಡೋಲೋತ್ಸವದ ಮಹೋತ್ಸವಗಳನ್ನು ಉದ್ಯಾನ ಗಳಲ್ಲಿ ಮಾಡಬೇಕು. ಆ ಸಮಯದಲ್ಲಿ ವಸಂತವನ್ನು ಮಾಡಿ ಎಲ್ಲರೂ ಓಕುಳಿ ಯನ್ನು ಎರಚಿಕೊಳ್ಳಬೇಕು.

ಇದೂ ಅಲ್ಲದೆ ಚೈತ್ರ ಶುದ್ಧ ನವಮಿಯಿಂದ ಮೊದಲು ಮಾಡಿಕೊಂಡು ವೈಶಾಖ ಶುದ್ಧ ಪಂಚಮಿಯವರೆಗೆ ವಿಶೇಷ ಪೂಜೆಯನ್ನೂ ಮಾಡಬೇಕು. ಆ ಕಾಲದಲ್ಲಿ ಅನೇಕವಾದ ದಾನಗಳನ್ನು ಮಾಡಬೇಕು. ಈ ಸೀತಾರಾಮರ ಪೂಜೆಯನ್ನು ಮಾಡುವಂತೆಯೇ ಪಾರ್ವತೀ ಪರಮೇಶ್ವರರ ಪೂಜೆಯನ್ನೂ ಮಾಡಬಹುದು.

ಈ ಪೂಜೆಯನ್ನು ಮಾಡಲು ಸ್ಥಳ ವಿಶೇಷವನ್ನೂ, ಯಾವ ಯಾವ ಪದಾರ್ಥಗಳನ್ನು ಹೇಗೆ ಹೇಗೆ ಇಡಬೇಕೆಂಬುದನ್ನೂ ವಿವರಿಸುತ್ತಾನೆ. ಮತ್ತು ರಾಮಾದಿ ಪ್ರತಿಮೆಗಳನ್ನು ಹೇಗೆ ಮಾಡಿಸಬೇಕೆಂಬುದನ್ನೂ ವಿವರಿಸುತ್ತಾನೆ. ಯಾವಯಾವ ಅಪೇಕ್ಷೆಯುಳ್ಳವನು ಯಾವ ಯಾವ ದೇವರನ್ನು ಪೂಜೆ ಮಾಡ ಬೇಕೆಂಬುದನ್ನು ಪ್ರಸಂಗವಶಾತ್ ಹೇಳುತ್ತಾನೆ.

ಶ್ರೀರಾಮನ ಮಹಿಮೆಯನ್ನು ವರ್ಣಿಸುತ್ತಾ 'ರಾ' ಎಂಬ ಅಕ್ಷರದ ಮಹಿಮೆಯನ್ನೂ ಅದನ್ನು ಆದಿಯಲ್ಲಿ ಹೊಂದಿದ ಪದಾರ್ಥಗಳ ಗಣ್ಯತೆಯನ್ನೂ ವಿವರಿಸುತ್ತಾನೆ.

ಕಾಶಿಯಲ್ಲಿ ವಿಶ್ವೇಶ್ವರನೂ ಕೂಡ ರಾಮನಾಮವನ್ನು ಅಲ್ಲಿ ಮರಣ ಹೊಂದುವವರ ಕಿವಿಯಲ್ಲಿ ಉಪದೇಶಿಸುತ್ತಿರುವನೆಂದು ಹೊಗಳಿರುವನು.